ಶ್ರೀ ಶಂಕರ ಭಗವತ್ಪಾದರ

ಸೌಂದರ್ಯಲಹರೀ ಸ್ತೋತ್ರದೀಪಿಕೆ

(ಶ್ರೀ ಬಿ. ಎಸ್. ಕಪನೀಪತಯ್ಯನವರ ಟೀಕೆ ಮತ್ತು ಎಂ.ವಿ.ಸೀ ಅವರ ಪದ್ಯಾನುವಾದ ಸಹಿತ)

ಸಂಪಾದಕರು : ಪ್ರೊ. ಜಿ. ಅಶ್ವತ್ಥನಾರಾಯಣ



ಶ್ರೀ ಶಂಕರ ಭಗವತ್ಪಾದರ

ಸೌಂದರ್ಯಲಹರೀ ಸ್ತೋತ್ರದೀಪಿಕೆ

(ಬಿ.ಎಸ್. ಕಪನೀಪತಯ್ಯನವರ ಟೀಕೆ ಮತ್ತು ಎಂವಿಸೀ ಅವರ ಪದ್ಯಾನುವಾದ ಸಹಿತ)

ಸಂಪಾದಕರು ಮತ್ತು ಅನುವಾದಕರು

ಪ್ರೊ. ಜಿ. ಅಶ್ವತ್ಥನಾರಾಯಣ

(ನಿವೃತ್ತ ಕನ್ನಡ ಪ್ರಾಧ್ಯಾಪಕರು)

ಬೆಂಗಳೂರು

ಪ್ರಕಾಶಕರು:

ಹೇಮಂತ ಸಾಹಿತ್ಯ

ನಂ.53/1, ಕಾಟನ್‌ಪೇಟೆ ಮುಖ್ಯರಸ್ತೆ,

ಬೆಂಗಳೂರು-560 053

ದೂರವಾಣಿ : 080-26702010

SOUNDARYALAHARI STOTRADEEPIKE –Edited and Translated by : **Prof. G. Aswathanarayana,** Professor in Kannada (Retired), # 95, 34th 'B' Cross, 16th Main, 4th 'T' Block, Jayanagara, Bengaluru-560 041. Ph. : 080-26637783. *Published by:* **Hemantha Sahitya,** No. 53/1, Cottonpet Main Road, Bengaluru - 560 053. Phone: 080-26702010.

First Impression : 2016 (500 copies) First Revised Impression : 2016

Pages : 607 Size : 1/8 Demmy Paper used : 70 GSM Maplitho

ಸೌಂದರ್ಯಲಹರೀ ಸ್ತೋತ್ರದೀಪಿಕೆ *(ಬಿ.ಎಸ್. ಕಪನೀಪತಯ್ಯನವರ ಟೀಕೆ ಮತ್ತು ಎಂ.ವಿ.ಸೀ. ಅವರ ಪದ್ಯಾನುವಾದ ಸಹಿತ)* – ಸಂಪಾದಕರು ಮತ್ತು ಅನುವಾದಕರು: **ಪ್ರೊ. ಜಿ. ಅಶ್ವತ್ಥನಾರಾಯಣ** (ನಿವೃತ್ತ ಕನ್ನಡ ಪ್ರಾಧ್ಯಾಪಕರು). ನಂ. 95, 34ನೇ 'ಬಿ' ಕ್ರಾಸ್, 16ನೇ ಮೈನ್, 4ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು–560 041. ದೂರವಾಣಿ ಸಂಖ್ಯೆ: 080–26637783. *ಪ್ರಕಾಶಕರು:* **ಹೇಮಂತ ಸಾಹಿತ್ಯ,** ನಂ. 53/1, ಕಾಟನ್‌ಪೇಟೆ ಮುಖ್ಯರಸ್ತೆ, ಬೆಂಗಳೂರು–560053. ದೂರವಾಣಿ: 080–26702010

ಮೊದಲ ಮುದ್ರಣ : 2016 (500 ಪ್ರತಿಗಳು) ಪರಿಷ್ಕೃತ ಮೊದಲ ಮುದ್ರಣ : 2016

ಪುಟಗಳು : 607. ಆಕಾರ: 1/8 ಡೆಮ್ಮಿ. ಬಳಸಿದ ಕಾಗದ : 70 ಜಿ.ಎಸ್.ಎಂ. ಮ್ಯಾಪ್‌ಲಿಥೊ

ಬೆಲೆ : **ರೂ. 400/–**

ಅಕ್ಷರ ಜೋಡಣೆ : **ಹೇಮಂತ ಸಾಹಿತ್ಯ,** ಬೆಂಗಳೂರು

ಮುದ್ರಕರು :

ಪೂರ್ಣಿಮಾ ಪ್ರಿಂಟರ್ಸ್

ನಂ.13/1, 1ನೇ ಕ್ರಾಸ್, ಭಕ್ತ ಮಾರ್ಕೆಂಡೇಯ ಬಡಾವಣೆ,
ಬೆಂಗಳೂರು-560026.
ದೂ : 080–32924462 ಮೊಬೈಲ್ : 9341931668

॥ ಶ್ರೀ ಚತುರ್ಭುಜ ಪಟ್ಟಾಭಿರಾಮೋ ವಿಜಯತೇ ॥

ಯಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತೀ ಮಠ

ಚಂದ್ರಮೌಳಿ ರಸ್ತೆ, ಕೃಷ್ಣರಾಜನಗರ – 571 602 ಮೈಸೂರು ಜಿಲ್ಲೆ.
☎ : 08223–262471, 264371. ಇಮೇಲ್ : ysysmath@yahoo.com
ಶಾಖಾಮಠ : ಕೋಟೆ, ಹೊಳೆನರಸೀಪುರ–573 211, ಹಾಸನ ಜಿಲ್ಲೆ, ☎ : 08175–273464

ಯ.ಶ್ರೀ.ಯೋ.ಸ.ಮ./ಕೃ.ರಾ.ನ./17–58 ಸ್ಥಳ : ಬೆಂಗಳೂರು

"ಸೌಂದರ್ಯಲಹರೀ ಸ್ತೋತ್ರದ ಮೂಲಕ ಜಗನ್ಮಾತೆಯನ್ನು ಭಜಿಸುವವರಿಗೆ 'ಪರಾನಂದಾಭಿಖ್ಯಂ ರಸಯತಿ ರಸಂ ತ್ವದ್ಭಜನವಾನ್' ಎಂಬುದಾಗಿ ಶ್ರೀ ಶಂಕರರು ತಮ್ಮ ಸೌಂದರ್ಯಲಹರೀ ಸ್ತೋತ್ರದಲ್ಲಿ ಸ್ಪಷ್ಟಪಡಿಸಿದ್ದಾರೆ. ಇದರ ಮಹತ್ತ್ವವನ್ನು ಕನ್ನಡ ಜನರಿಗೆ ತಿಳಿಸುವುದಕ್ಕಾಗಿ ಶ್ರೀಮಾನ್ ಅಶ್ವತ್ಥನಾರಾಯಣ ಅವರು ಸೌಂದರ್ಯಲಹರಿಯ ಅರ್ಥದ ಜೊತೆಗೆ ಇನ್ನೂ ಅನೇಕ ಅಂಶಗಳನ್ನು ಜೋಡಿಸಿ ಪುಸ್ತಕರೂಪದಲ್ಲಿ ತಂದಿದ್ದಾರೆ. ಈ ಪುಸ್ತಕವು ಆಸ್ತಿಕಜನರಿಗೆ ವಿಶೇಷ ಉಪಕಾರವನ್ನು ಮಾಡುವುದರಲ್ಲಿ ಸಂದೇಹವಿಲ್ಲ. ಶ್ರೀಮಾನ್ ಅಶ್ವತ್ಥನಾರಾಯಣರವರಿಗೆ ನಮ್ಮ ಆರಾಧ್ಯಮೂರ್ತಿಯು ಸಕಲ ಶ್ರೇಯಸ್ಸನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇವೆ" ಎಂಬುದಾಗಿ ಪರಮಪೂಜ್ಯ ಶ್ರೀಶ್ರೀಗಳವರು ಪ್ರಾರ್ಥಿಸಿ ಆಶೀರ್ವಾದಗಳನ್ನು ತಿಳಿಸಿರುತ್ತಾರೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ಸ್ವಸ್ತಿಶ್ರೀ ಹೇಮಲಂಬ ಸಂ॥ದ ಆಶ್ವಯುಜ ಕೃಷ್ಣ ಚತುರ್ದಶೀ

Sudar…

ಸುದರ್ಶನ ಚಿಪಳೂಣಕರ್
ಶ್ರೀಗಳ ಆಪ್ತಕಾರ್ಯದರ್ಶಿಗಳು

ಪರಿವಿಡಿ

ಅನುಬಂಧಗಳು

ಪ್ರಕಾಶಕರ ಮಾತು

ಸೌಂದರ್ಯಲಹರೀ, ಲಲಿತಾ ಸಹಸ್ರನಾಮ, ವಿಷ್ಣುಸಹಸ್ರನಾಮ, ಭಗವದ್ಗೀತಾ ಆದಿತ್ಯಹೃದಯ ಮೊದಲಾದ ಸಂಸ್ಕೃತದ ಪಾರಾಯಣ ಗ್ರಂಥಗಳು ನಾನಾ ಬಗೆಯ ಅನುವಾದಗಳೊಡನೆ ಕನ್ನಡದಲ್ಲಿ ಪ್ರಕಟವಾಗಿವೆ. ಕೆಲವು ಪದ್ಯವನ್ನಷ್ಟೇ ಒಳಗೊಂಡಿದ್ದರೆ ಮತ್ತೆ ಕೆಲವು ಗದ್ಯಾನುವಾದ, ವಿವರಣೆಗಳೊಂದಿಗೆ ಪ್ರಕಟವಾಗಿವೆ. ಇವುಗಳ ಪೈಕಿ **'ಸೌಂದರ್ಯಲಹರೀ ಸ್ತೋತ್ರ'**ವು ನಾಡಿನಾದ್ಯಂತ ಅನೇಕ ಗೃಹಿಣಿಯರು ತಾವಾಗಿ ಅಥವಾ ಮಂಡಲಿಗಳ ಮೂಲಕ ನಿತ್ಯ ಅಧ್ಯಯನ, ಪಾರಾಯಣ ಮಾಡುತ್ತಿದ್ದಾರೆ. ಇಂಥವರಲ್ಲಿ ಇರುವ ಭಕ್ತಿ, ಶ್ರದ್ಧೆ, ಆಸಕ್ತಿ, ಅಧ್ಯಯನದ ಕುತೂಹಲ, ಯಾರೇ ಆಗಲಿ ಮೆಚ್ಚುವಂಥದ್ದು.

ಈಗ ಸಂಪಾದಕರೂ ಅನುವಾದಕರೂ ಆದ ಹಲವಾರು ಧಾರ್ಮಿಕ ಗ್ರಂಥಗಳನ್ನು ಸಂಪಾದಿಸಿರುವ ವಿದ್ವಾಂಸರಾದ ಪ್ರೊ. ಜಿ. ಅಶ್ವತ್ಥನಾರಾಯಣ ಅವರು 'ಸೌಂದರ್ಯಲಹರೀ ಸ್ತೋತ್ರದೀಪಿಕೆ'ಯನ್ನು ಮೂಲ, ಪಾಠಾಂತರ, ಅನ್ವಯಾರ್ಥ, ತಾತ್ಪರ್ಯ, ಪದ್ಯಾನುವಾದ, ಟಿಪ್ಪಣಿಗಳು, ಯಂತ್ರಾರಾಧನೆ ಪೂಜಾಫಲ ವಿವರಗಳೊಡನೆ ಮೊದಲಬಾರಿಗೆ ಸಮಗ್ರವಿಷಯಗಳೊಂದಿಗೆ ಸಂಪಾದಿಸಿದ್ದಾರೆ. ಇದು **ಹೇಮಂತ ಸಾಹಿತ್ಯ**ದಿಂದ ಪ್ರಕಟವಾಗುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ.

ಈ ಗ್ರಂಥಪ್ರಕಟನೆಯಲ್ಲಿ ಬಿಎಂಶ್ರೀ ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷರಾದ ಪಿ.ವಿ. ನಾರಾಯಣ ಅವರೂ, ಸಂಪಾದಕರಾದ ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಹಲವು ವಿಧಗಳಲ್ಲಿ ನೆರವನ್ನು ನೀಡಿದ್ದಾರೆ. ಅವರಿಗೆ ನಮ್ಮ ಪ್ರಕಾಶನ ಕೃತಜ್ಞತೆಯನ್ನು ಸಲ್ಲಿಸುತ್ತದೆ.

ಸ್ತೋತ್ರಪಠಣ ಮಾಡುವ ಭಕ್ತಾದಿಗಳು, ಪ್ರವಚನಮಾಡುವ ವಿದ್ವಾಂಸರು, ಲೇಖನಗಳನ್ನು ಬರೆಯುವ ಬರಹಗಾರರು ಮೊದಲಾದ ದೇವತಾ ಸ್ತೋತ್ರಪ್ರಿಯರು ಈ ಗ್ರಂಥವನ್ನು ಸ್ವಾಗತಿಸುವರೆಂದು ನಂಬಿದ್ದೇನೆ.

–ಪ್ರಕಾಶಕರು

ಸಂಪಾದಕರ ಮಾತು

ಬಹಳ ವರ್ಷಗಳಿಂದ ಶಂಕರಜಯಂತಿ ಸಂದರ್ಭದಲ್ಲಿ ಉಪನ್ಯಾಸಕ್ಕೆ ಕರೆದಾಗಲೆಲ್ಲ ಶಂಕರರ ಜೀವನ ಮತ್ತು ಸ್ತೋತ್ರಗಳ ಬಗ್ಗೆ ಉಪನ್ಯಾಸ ಮಾಡುತ್ತಿದ್ದೆ. ಅವರ ಸ್ತೋತ್ರಗಳ ಪೈಕಿ ವಿಶೇಷವಾಗಿ ಭಜಗೋವಿಂದಂ ಸ್ತೋತ್ರದ ಬಗ್ಗೆ ಉಪನ್ಯಾಸಗಳನ್ನು ನೀಡುತ್ತಿದ್ದೆ. ನನ್ನ ಕುಟುಂಬಮಿತ್ರ, ಸಹೋದ್ಯೋಗಿ ದಿ. ಎಸ್. ಶ್ರೀನಿವಾಸನ್ ಅವರ ಮಗಳು ರೋಹಿಣಿ ಮಕ್ಕಳಿಗೆ ಗೀತಾ ತರಗತಿಗಳನ್ನು ನಡೆಸುತ್ತಾ ಸೌಂದರ್ಯಲಹರಿಯನ್ನು ನೂರಾರು ಜನರಿಗೆ ಹೇಳಿಕೊಡುತ್ತಿದ್ದಳು. ಆಗಾಗ ಅವಳು ಗೀತಾ ತರಗತಿಗಳನ್ನು ಮಕ್ಕಳಿಗೆ ನಡೆಸುತ್ತಿದ್ದಾಗ ಒಮ್ಮೆ ಗೀತೆಯ ಬಗ್ಗೆ ಉಪನ್ಯಾಸ ನೀಡಲು ಕರೆದಳು. ಆ ಸಂದರ್ಭದಲ್ಲಿ ಸೌಂದರ್ಯಲಹರಿಯನ್ನು ಮತ್ತು ಲಲಿತಾ ಸಹಸ್ರನಾಮವನ್ನು ಅರ್ಥಮಾಡಿಕೊಳ್ಳದೆ ಕೇವಲ ಪಾರಾಯಣ ಮಾಡುತ್ತಾ ಇರುವುದು ಗಮನಕ್ಕೆ ಬಂದಿತು. ಈ ರೀತಿ ಸ್ತೋತ್ರಪಾರಾಯಣ ಮಾಡುತ್ತಿರುವವರಿಗೆ ಸೌಂದರ್ಯಲಹರೀ ಮತ್ತು ಲಲಿತಾ ಸಹಸ್ರನಾಮ ಸ್ತೋತ್ರವನ್ನು ಅರ್ಥಸಹಿತ ಪದವಿಭಾಗ, ತಾತ್ಪರ್ಯ–ಟಿಪ್ಪಣಿಗಳನ್ನು ಒಳಗೊಂಡ ಸರಳ ಟೀಕಾಗ್ರಂಥವನ್ನು ರಚಿಸಬೇಕೆಂದು ಯೋಚಿಸುತ್ತಿದ್ದೆ.

ಹೀಗಿರುವಾಗ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದವರು ಎಂ.ವಿ. ಸೀತಾರಾಮಯ್ಯನವರ ಸಮಗ್ರಕೃತಿಗಳ ಪ್ರಕಟನಾ ಯೋಜನೆಯೊಂದನ್ನು ಸಿದ್ಧಪಡಿಸಿ ಕನ್ನಡ ಸಂಸ್ಕೃತಿ ಇಲಾಖೆಯ ಮೂಲಕ ಹತ್ತಾರು ಸಂಪುಟಗಳನ್ನಾಗಿ ಪ್ರಕಟಿಸಿದರು. ಆ ಸಂಪುಟಗಳಲ್ಲಿ ಒಂದಾದ ಎಂ.ವಿ.ಸೀ. ಅವರ ಜೀವನ ಚರಿತ್ರೆಗಳನ್ನು ಮತ್ತು ಅನುವಾದ ಕೃತಿಗಳು ಸಂಪುಟವನ್ನು ಸಿದ್ಧಪಡಿಸಿಕೊಡುವ ಕಾರ್ಯವನ್ನು ಆಗಿನ ಗೌರವ ಕಾರ್ಯದರ್ಶಿಗಳಾಗಿದ್ದ ನಾ. ಗೀತಾಚಾರ್ಯರು ನನಗೆ ವಹಿಸಿಕೊಟ್ಟರು. ಅದನ್ನು ಸಿದ್ಧಪಡಿಸುವಾಗ ಎಂ.ವಿ.ಸೀ. ಅವರು ಕನ್ನಡ ವಾರ್ಧಕಷಟ್ಪದಿಯಲ್ಲಿ ರಚಿಸಿರುವ ಸೌಂದರ್ಯಲಹರೀ ಸ್ತೋತ್ರ ಪ್ರಕಟವಾಗಿಲ್ಲದಿರುವುದನ್ನು ಕಂಡು ಅದನ್ನು ಆ ಅನುವಾದ ಸಂಪುಟದಲ್ಲಿ ಸೇರಿಸಿದೆ.

ಆ ಸಂದರ್ಭದಲ್ಲಿ ಎಂ.ವಿ.ಸೀ. ಅವರ ಬಂಧುಗಳಾದ ಬಿ.ಎಸ್. ಕಪನೀಪತಯ್ಯ ಅವರು ನಾಲ್ವಡಿ ಕೃಷ್ಣರಾಜಒಡೆಯರ ಕಾಲದಲ್ಲಿ ಅರಮನೆಯ ಕಚೇರಿಯಲ್ಲಿ ಉದ್ಯೋಗಿಗಳಾಗಿದ್ದು, ಆದಿಶಂಕರರ ಸೌಂದರ್ಯಲಹರೀ ಸ್ತೋತ್ರಕ್ಕೆ ಟೀಕೆಯನ್ನು ಪ್ರತಿಪದದ ಅರ್ಥವನ್ನು ಸುಂದರವಾದ ಸ್ಫುಟವಾದ ಅಕ್ಷರಗಳಲ್ಲಿ ಬರೆದಿಟ್ಟಿದ್ದ

ದಫ್ತರಾಕಾರದ ಕಾಗದಪ್ರತಿ ಪ್ರತಿಷ್ಠಾನದಲ್ಲಿ ಇರುವುದು ನನ್ನ ಗಮನಕ್ಕೆ ಬಂದಿತು. ಇದು ಅಪ್ರಕಟಿತ ಹಸ್ತಪ್ರತಿಯಾಗಿತ್ತು. ಎಂ.ವಿ.ಸೀ. ಅವರ ಮಕ್ಕಳು ಇವುಗಳನ್ನು ಪರಿಷ್ಕರಿಸಿ ಅಚ್ಚಿಗೆ ಸಿದ್ಧಪಡಿಸಿಕೊಡಬೇಕೆಂದು ಕೋರಿದರು. ಸಂಸ್ಥೆಯ ಅಧ್ಯಕ್ಷರಾದ ಪಿ.ವಿ. ನಾರಾಯಣರು ಮತ್ತು ಪ್ರಕಟಣ ಸಮಿತಿ ಇದನ್ನು ಪ್ರಕಟಿಸಲು ಒಪ್ಪಿದರು. ಇವೆರಡರ ಹಸ್ತಪ್ರತಿಗಳನ್ನು ಅಧ್ಯಯನ ಮಾಡುವಾಗ ಸೌಂದರ್ಯಲಹರೀ ಮತ್ತು ಲಲಿತಾ ಸಹಸ್ರನಾಮದ ಬಗ್ಗೆ ಪ್ರಕಟವಾದ ಹತ್ತಾರು ಗ್ರಂಥಗಳನ್ನು ಪರಿಶೀಲಿಸಬೇಕಾದ ಅಗತ್ಯ ಒದಗಿತು. ಕನ್ನಡದಲ್ಲಿ ಇತರರ ಪದ್ಯಾನುವಾದಗಳನ್ನೂ ಟೀಕಾಗ್ರಂಥಗಳನ್ನೂ ಇಂಗ್ಲಿಷ್, ತೆಲುಗು, ಸಂಸ್ಕೃತ ಅನುವಾದ ಗ್ರಂಥಗಳನ್ನೂ ಹುಡುಕಿದಾಗ ಸಿಕ್ಕಿದ್ದಷ್ಟನ್ನು ಅಭ್ಯಾಸ ಮಾಡಿದೆ. (ಆ ಗ್ರಂಥಗಳ ಪಟ್ಟಿಯನ್ನು ಗ್ರಂಥಸಂಕೇತಸೂಚಿಯಲ್ಲಿ ಕೊಟ್ಟಿದ್ದೇನೆ) ಆ ಗ್ರಂಥಗಳನ್ನೆಲ್ಲಾ ಪರಿಶೀಲಿಸುತ್ತಿರುವಾಗ ಸಮಗ್ರವಾಗಿ ಕನ್ನಡದಲ್ಲಿ ಸೌಂದರ್ಯಲಹರಿಯ ಗ್ರಂಥದ ಬಗ್ಗೆ ಮೂಲ-ಪದವಿಭಾಗ ಪಾಠಾಂತರ-ತಾತ್ಪರ್ಯ-ಟಿಪ್ಪಣಿಗಳು-ಪದ್ಯಾನುವಾದ-ಯಂತ್ರರಚನೆ-ಆರಾಧನಾ ವಿಧಾನ ಇರುವ ಸಮಗ್ರ ಗ್ರಂಥ ಕನ್ನಡದಲ್ಲಿ ನನಗೆ ಕಂಡುಬರಲಿಲ್ಲ. ಎಂ.ವಿ.ಸೀ. ಅವರು ರಚಿಸಿದ ಪದ್ಯಾನುವಾದ ಮತ್ತು ಬಿ.ಎಸ್. ಕಪನೀಪತಯ್ಯನವರ ಕನ್ನಡ ಟೀಕೆಯನ್ನು ಸಂಪಾದಿಸುವ ಸಂದರ್ಭದಲ್ಲಿ ಅದಕ್ಕೆ ಪೂರಕವಾಗಿ ಪಾಠಾಂತರ, ಪದವಿಭಾಗ, ತಾತ್ಪರ್ಯ, ಟಿಪ್ಪಣಿಗಳು, ಯಂತ್ರರಚನೆ, ಪೂಜಾ ವಿಧಾನಗಳನ್ನು ನೀಡಿದರೆ ಸೌಂದರ್ಯಲಹರೀ ಕನ್ನಡ ಓದುಗರಿಗೆ ಅತ್ಯುಪಯುಕ್ತ ಗ್ರಂಥವೊಂದನ್ನು ನೀಡಿದಂತಾಗುತ್ತದೆ ಎಂದು ನಿರ್ಧರಿಸಿದೆ ಮತ್ತು ಇದರೊಂದಿಗೆ ಉಪಯುಕ್ತ ಅನುಬಂಧಗಳನ್ನು, ಶ್ಲೋಕಗಳ ವಿಷಯಾನುಕ್ರಮಣಿಕೆ, ಶ್ಲೋಕಗಳ ಅಕಾರಾದಿ, ಸೌಂದರ್ಯಲಹರೀ ಮತ್ತು ಲಲಿತಾಸಹಸ್ರನಾಮಗಳ ಸಾದೃಶ್ಯಶ್ಲೋಕಗಳ ಸೂಚಿ, ಕನ್ನಡದಲ್ಲಿರುವ ಸೌಂದರ್ಯಲಹರೀ ಸಾಹಿತ್ಯ ಇತ್ಯಾದಿ ಅನುಬಂಧಗಳನ್ನು ಸೇರಿಸಲು ನಿರ್ಧರಿಸಿದೆ.

ಹೀಗಾಗಿ ಅಪ್ರಕಟಿತ ಎರಡು ಹಸ್ತಪ್ರತಿಗಳನ್ನು ಪ್ರಕಟಿಸಲು ಹೊರಟು ಸೌಂದರ್ಯ ಲಹರಿಯ ಸಮಗ್ರ ನಿರೂಪಣಾಗ್ರಂಥವೊಂದನ್ನು ಸಿದ್ಧಪಡಿಸಿ ಹೊರತಂದಿದೆ.

ಈ ಗ್ರಂಥವನ್ನು ಸಿದ್ಧಪಡಿಸುವಲ್ಲಿ ಹತ್ತಾರು ಮಂದಿ ನೆರವಾಗಿದ್ದಾರೆ. ಹತ್ತಾರು ಲೇಖಕರ ಭಾಷಾಂತರ ಗ್ರಂಥಗಳು (ಪಟ್ಟಿ ನೋಡಿ) ಆಧಾರವಾಗಿವೆ. ಅವರೆಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸುವುದು ನನ್ನ ಕರ್ತವ್ಯವಾಗಿದೆ.

೧. ಈ ಗ್ರಂಥವನ್ನು ರಚಿಸಲು ಮತ್ತು ಪ್ರಕಟಿಸಲು ಬೇಕಾದ ಪದ್ಯಾನುವಾದ ಮತ್ತು ಟೀಕಾಗ್ರಂಥದ ಹಸ್ತಪ್ರತಿಗಳನ್ನು ಒದಗಿಸಿಕೊಟ್ಟು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಪ್ರಕಟನಾ ಸಮಿತಿ ಗೌರವ ಕಾರ್ಯದರ್ಶಿ ಅಬ್ದುಲ್ ಬಷೀರ್ ಹಾಗೂ ಸಂಸ್ಥೆಯ ಅಧ್ಯಕ್ಷರಾದ ಪಿ.ವಿ. ನಾರಾಯಣ ಅವರು ಗ್ರಂಥ ಸಂಪಾದನೆಗೆ ನೆರವು ನೀಡಿದ್ದಾರೆ.

೨. ಬಿ.ಎಸ್. ಕಪನೀಪತಯ್ಯ ಅವರ ಟೀಕಾಗ್ರಂಥದ ಹಸ್ತಪ್ರತಿಯನ್ನು ಬಿ.ಎಂ.ಶ್ರೀ. ಸಂಸ್ಥೆಗೆ ಕೊಟ್ಟ ಮತ್ತು ಟೀಕಾಕಾರರಾದ ಬಿ.ಎಸ್. ಕಪನೀಪತಯ್ಯನವರ ಜೀವನ ಮತ್ತು ಕೃತಿಗಳ ಬಗ್ಗೆ ವಿವರಗಳನ್ನು ತಿಳಿಸಿ ಗ್ರಂಥಗಳನ್ನು ನೀಡಿ ಉಪಕರಿಸಿರುವುದಲ್ಲದೆ ವಿವರಗಳನ್ನು ಪಡೆಯಲು ಹೋದಾಗಲೆಲ್ಲ ಅವರ ಪುತ್ರರಾದ ಬಿ.ಕೆ. ಶ್ರೀಕಂಠಯ್ಯ ಮತ್ತು ಇಂದಿರಾ ದಂಪತಿಗಳು ಹಾಗೂ ಅವರ ಕುಟುಂಬ ವರ್ಗದವರು ಆತ್ಮೀಯವಾಗಿ ಉಪಚರಿಸಿದ್ದಾರೆ.

೩. ಎಂ.ವೀ.ಸೀ. ಮಕ್ಕಳಾದ ಎಂ.ಎಸ್. ರಾಮಪ್ರಸಾದ್ ಮತ್ತು ಭಾಸ್ಕರ್ ಅವರು ಕಾಲಕಾಲಕ್ಕೆ ಗ್ರಂಥಸಂಪಾದನೆಯ ಬಗ್ಗೆ ವಿಚಾರಿಸುತ್ತಾ ಅನೇಕ ಬಗೆಗಳಲ್ಲಿ ಸೂಕ್ತನೆರವನ್ನು ನೀಡಿದ್ದಾರೆ. ಅವರ ತಂದೆಯವರ ಬಗ್ಗೆ ಸೌಂದರ್ಯಲಹರಿಯ ಪದ್ಯಾನುವಾದದ ಬಗ್ಗೆ ಉಪಯುಕ್ತ ಮಾಹಿತಿಗಳನ್ನು ನೀಡಿದ್ದಾರೆ.

೪. ಈ ಗ್ರಂಥರಚನೆಗೆ ಬೇಕಾದ ಸೌಂದರ್ಯಲಹರಿಯ ಗದ್ಯಾನುವಾದ, ಪದ್ಯಾನುವಾದ, ವಿಮರ್ಶಾ ಕೃತಿಗಳನ್ನು ದೊರಕಿಸುವಲ್ಲಿ ಮಿತ್ರರಾದ ಹರಿಹರಪ್ರಿಯ, ಬಿಳಿಗಿರಿ ವಾಸನ್, ಶ್ರೀನಾಥ ಶಾಸ್ತ್ರಿ, ನಾ. ಗೀತಾಚಾರ್ಯ, ಬಿ.ಕೆ. ಶ್ರೀಕಂಠಯ್ಯ, ದೇವುಡು ಪುತ್ರರಾದ ಸದಾಶಿವ ಮೊದಲಾದವರು ನೆರವಾಗಿದ್ದಾರೆ.

೫. ಗ್ರಂಥದ ಹಸ್ತಪ್ರತಿಯನ್ನು ಸಿದ್ಧಪಡಿಸಿದ ಮೇಲೆ ಅದನ್ನು ಆಮೂಲಾಗ್ರವಾಗಿ ಪರಿಶೀಲಿಸಿ ಸಂಸ್ಕೃತ ಭಾಗವತವನ್ನು ಸಮಗ್ರವಾಗಿ ಪದ್ಯಾನುವಾದ ಮಾಡಿದ ಸಂಸ್ಕೃತ ವಿದ್ವಾಂಸರಾದ ಭಕ್ತಕವಿ ಕೆ.ವಿ. ವರದರಾಜಯ್ಯಂಗಾರ್ ಅವರು ನನ್ನ ಹಸ್ತಪ್ರತಿಯ ಲೋಪದೋಷಗಳನ್ನು ತಿದ್ದಿದ್ದಾರೆ. ವಿದ್ವಾಂಸರಾದ ಎಸ್. ಕಾರ್ತಿಕ್ ಅವರು ಹಸ್ತಪ್ರತಿಯ ಕನ್ನಡ ಭಾಗವನ್ನು ಆದ್ಯಂತವಾಗಿ ಪರಿಶೀಲಿಸಿ ಅರ್ಥದೋಷಗಳನ್ನು ತಿದ್ದಿಕೊಟ್ಟಿದ್ದಾರೆ.

೬. ಗ್ರಂಥದ ಅಚ್ಚಿನ ಕರಡನ್ನು ತಿದ್ದುವಲ್ಲಿ ಪತ್ನಿ ಲಕ್ಷ್ಮೀದೇವಿ, ಮಿತ್ರ ದಿ. ಎಂ.ಕೆ. ಗೋಪೀನಾಥ್ ನೆರವಾಗಿದ್ದಾರೆ.

೭. ಆಪ್ತಮಿತ್ರರಾದ ದಿ. ರಾಮಮೋಹನ್ ಹಸ್ತಪ್ರತಿಯನ್ನು ಓದಿ ಮೆಚ್ಚುಗೆ ಸೂಚಿಸಿ ಕೆಲವಾರು ಸಲಹೆಗಳನ್ನು ನೀಡಿದ್ದರು.

೮. ಕನ್ನಡ, ಇಂಗ್ಲಿಷ್, ಸಂಸ್ಕೃತ, ಹಿಂದಿ, ತೆಲುಗು ಭಾಷೆಗಳಲ್ಲಿ ಅನೇಕ ವಿದ್ವಾಂಸರು, ಟೀಕೆ ಬರೆದಿದ್ದಾರೆ, ಅನುವಾದ ಮಾಡಿದ್ದಾರೆ, ವಿಮರ್ಶೆ ಮಾಡಿದ್ದಾರೆ. (ಅವರೆಲ್ಲರ ಗ್ರಂಥಗಳ ಪಟ್ಟಿಯನ್ನು ಗ್ರಂಥ ಸಂಕೇತ ಸೂಚಿಯಲ್ಲಿ ಕೊಟ್ಟಿದೆ) ಅವರೆಲ್ಲರ ಗ್ರಂಥಗಳ ನೆರವನ್ನು ಪಡೆದಿದ್ದೇನೆ ಅವರೆಲ್ಲರಿಗೆ ವಿಶೇಷ ಕೃತಜ್ಞತೆಗಳು.

ಮೇಲ್ಕಂಡ ಎಲ್ಲ ಮಿತ್ರರಿಗೆ, ಗ್ರಂಥ ಸಂಪಾದಕರಿಗೆ, ಲೇಖಕರಿಗೆ, ವಿದ್ವಾಂಸರಿಗೆ, ನಾನು ಆಭಾರಿಯಾಗಿದ್ದೇನೆ. ಅವರಿಗೆಲ್ಲಾ ನನ್ನ ಕೃತಜ್ಞತೆಗಳು.

ಗ್ರಂಥ ರಚನೆ ಮತ್ತು ಸಂಪಾದನೆ, ಪರಿಷ್ಕರಣೆ ಬಗ್ಗೆ ಪ್ರಸ್ತಾವನೆಯಲ್ಲಿ ವಿವರವಾಗಿ ಪ್ರಸ್ತಾಪಿಸಿದ್ದೇನೆ.

ಕನ್ನಡದಲ್ಲಿ ಮೊದಲಬಾರಿಗೆ ಸೌಂದರ್ಯಲಹರೀ ಸ್ತೋತ್ರದ ಬಗ್ಗೆ ಸಮಗ್ರ ಸ್ವರೂಪದ ವಿವರಗಳನ್ನೊಳಗೊಂಡು ಪ್ರಕಟವಾಗುತ್ತಿರುವ ಈ ಗ್ರಂಥವನ್ನು ಭಕ್ತಾದಿಗಳು, ಮಹಾಜನರು ಕೊಂಡು ಪ್ರೋತ್ಸಾಹಿಸುತ್ತಾರೆಂದು ನಂಬಿದ್ದೇನೆ. ಇದರಲ್ಲಿ ಕಂಡುಬರುವ ಲೋಪದೋಷಗಳನ್ನು ತಿಳಿಸಿದ್ದಲ್ಲಿ ಮುಂದಿನ ಮುದ್ರಣದಲ್ಲಿ ಸರಿಪಡಿಸಿಕೊಳ್ಳುತ್ತೇನೆ.

–ಸಂಪಾದಕ

ಪ್ರಸ್ತಾವನೆ

ಶ್ರೀ ಶಂಕರ ಭಗವತ್ಪಾದರ ವೃತ್ತಾಂತ

ವೈದಿಕ ಧರ್ಮವನ್ನು ಪ್ರತಿನಿಧಿಸುವ ಆಚಾರ್ಯತ್ರಯರಲ್ಲಿ ಮೊದಲನೆಯವರು ಆದಿಶಂಕರಾಚಾರ್ಯರು. ಇವರ ಕಾಲ ಬಹುಜನರ ಸಮ್ಮತದಂತೆ ಕ್ರಿ.ಶ. ೭-೮ನೆಯ ಶತಮಾನವೆಂದು ನಿರ್ಣಯಿಸಲಾಗಿದೆ. ಇವರ ಜನ್ಮಸ್ಥಳ ಪೂರ್ಣಾನದಿ ಹರಿಯುವ ಕೇರಳದ ಕಾಲಟಿ ಗ್ರಾಮ. ಶಂಕರ ಭಗವತ್ಪಾದರ ಜನನ, ಸಂಪ್ರದಾಯಾನುಸಾರ ವೈಶಾಖ ಶುದ್ಧ ಪಂಚಮಿ. ಇವರು ಕೇರಳದ ನಂಬೂದರಿ ಬ್ರಾಹ್ಮಣ ವರ್ಗಕ್ಕೆ ಸೇರಿದವರು. ಕೇವಲ ೩೨ ವರುಷ ಬದುಕಿ ಬಾಳಿದ ಆದಿಶಂಕರರ ಜೀವನವೇ ಪವಾಡ ಸದೃಶವಾಗಿದೆ. ಅವರ ಜೀವನವನ್ನು ಕುರಿತ ಈ ಶ್ಲೋಕ ಪ್ರಸಿದ್ಧವಾದುದು.

ಅಷ್ಟವರ್ಷೇ ಚತುರ್ವೇದೀ ದ್ವಾದಶೇ ಸರ್ವಶಾಸ್ತ್ರವಿತ್
ಷೋಡಶೇಕೃತವಾನ್ ಭಾಷ್ಯಂ ದ್ವಾತ್ರಿಂಶೇ ಮುನಿರಭ್ಯಗಾತ್

(ಆದಿಶಂಕರರು ತಮ್ಮ ೮ನೆಯ ವಯಸ್ಸಿಗೆ ಚತುರ್ವೇದ ಪಾರಂಗತರಾದರು. ೧೨ನೆಯ ವಯಸ್ಸಿಗೆ ಸರ್ವಶಾಸ್ತ್ರ ವಿಶಾರದರಾದರು. ೧೬ನೆಯ ವಯಸ್ಸಿಗೆ ಸೂತ್ರಭಾಷ್ಯವನ್ನು ರಚಿಸಿದರು. ೩೨ನೆಯ ವಯಸ್ಸಿನಲ್ಲಿ ನಿರ್ವಾಣ ಹೊಂದಿದರು).

ಆದಿಶಂಕರರ ಕಾಲದಲ್ಲಿ ದ್ವೈತವೇದಾಂತ, ವಿಶಿಷ್ಟಾದ್ವೈತವೇದಾಂತ ಮುಂತಾದ ಭೇದಗಳ ಪ್ರತಿಪಾದಕರು ಇರಲಿಲ್ಲ. ಆದ್ದರಿಂದ ಅವರು ತಮ್ಮ ಗ್ರಂಥಗಳಲ್ಲಿ ಅದ್ವೈತಿಗಳನ್ನು ಮಾತ್ರ ವೇದಾಂತಿಗಳೆಂದು ವ್ಯವಹರಿಸಿದ್ದಾರೆ.

ಲೋಕದಲ್ಲಿ ನಾನಾ ಬಗೆಯ ಗುಣ ಸ್ವಭಾವದವರಿರುತ್ತಾರೆ. ಉತ್ತಮಾಧಿಕಾರಿಗಳು, ಮಧ್ಯಮಾಧಿಕಾರಿಗಳು, ಮಂದಾಧಿಕಾರಿಗಳು ಎಂದು ೩ ಬಗೆಯಾಗಿ ಕಾಣಬಹುದು. ಅವರಲ್ಲಿ ಉತ್ತಮಾಧಿಕಾರಿಗಳಿಗೆ ಅದ್ವೈತವೇ ವೇದೋಕ್ತವಾದ ಸಮ್ಯಕ್ ದರ್ಶನವೆಂದು ತಿಳಿಸಿಕೊಡಲು ಇತರ ದರ್ಶನಗಳನ್ನು ಖಂಡಿಸಿರುವುದನ್ನು ಕಾಣಬಹುದು.

"ದ್ವೈತ-ಅದ್ವೈತಗಳು ಪರಸ್ಪರ ವಿರೋಧೀ ಸಿದ್ಧಾಂತಗಳೆಂದು ಹಲವರು ಭಾವಿಸುತ್ತಾರೆ. ಅದು ಸತ್ಯವಲ್ಲ. ಅದ್ವೈತಕ್ಕೆ ದ್ವೈತ ಸೋಪಾನ. ದ್ವೈತವಿದ್ದಾಗಲೇ ಗುರು ಶಿಷ್ಯೋಪದೇಶಗಳೂ ಸಕಲ ವಿಧಿ ನಿಷೇಧಾತ್ಮಕ ಶಾಸ್ತ್ರಗಳು ಅರ್ಥವತ್ತಾಗುತ್ತವೆ. ಆದಿಶಂಕರರ ಜೀವನವೇ ಇದಕ್ಕೆ ನಿದರ್ಶನ. ವಿದ್ಯಾಭ್ಯಾಸ, ಗ್ರಂಥರಚನೆ ಶಿಷ್ಯೋಪದೇಶ, ಮಠಗಳ ಸ್ಥಾಪನೆ, ದೇವತಾ ಸ್ತುತಿಗಳು ತಾಯಿಗೆ ನಡೆಸಿದ ಉತ್ತರಕ್ರಿಯೆ, ಅನ್ಯಮತ

ಖಂಡನೆ ಮೊದಲಾದ ಕ್ರಿಯೆಗಳು ದ್ವೈತಾವಲಂಬನೆಯಿಂದಲೇ ಸಾಧ್ಯವಾಗತಕ್ಕವು. ಈಶ್ವರಾನುಗ್ರಹದಿಂದ ಚಿತ್ತಶುದ್ಧಿಯನ್ನು ಸದ್ಗುರುವಿನ ಉಪದೇಶ ಪಡೆಯಲು ದ್ವೈತವು ಅತ್ಯವಶ್ಯಕವಾದವು"

ಈ ಪೃಥ್ವಿಯಲ್ಲಿರುವ ಸಕಲರೂ ಅಣ್ಣತಮ್ಮಂದಿರು, ಎಲ್ಲರೂ ಪರಮಾತ್ಮನ ಮಕ್ಕಳೇ. ಪರಮಾತ್ಮನ ಪ್ರತಿಬಿಂಬಗಳು, ವಾಸ್ತವದಲ್ಲಿ ಪರಮಾತ್ಮನ ಸ್ವರೂಪರೇ ಆಗಿದ್ದಾರೆ. ಎಲ್ಲರೂ ಒಂದೇ ಬ್ರಹ್ಮವಾಗಿರುವಾಗ ಪರಸ್ಪರ ಜಗಳವಾಡುವುದು ತನ್ನ ಕೈಕಾಲುಗಳೊಡನೆ ತಾನೇ ಕಲಹವಾಡಿದಂತೆ ಎಂದಿದ್ದಾರೆ.

ಶಂಕರರ ಅದ್ವೈತ ಸಿದ್ಧಾಂತವನ್ನು ಸರಿಯಾಗಿ ಅರ್ಥ ಮಾಡಿಕೊಂಡರೆ ಯಾವ ಕಲಹಕ್ಕೂ ಕಾರಣವಿಲ್ಲ. ವಿಶ್ವವೇ ಒಂದು ಕುಟುಂಬವೆಂಬ ಭಾವನೆ ದೃಢವಾಗುತ್ತದೆ.

ಶಂಕರರು ವೇದಾಧಾರಿತ ಕರ್ಮ, ಉಪಾಸನೆ, ಆತ್ಮಜ್ಞಾನಗಳ ಸತ್ಯಸ್ವರೂಪ ತಿಳಿಸಿ ವೈದಿಕ ಧರ್ಮ ಪುನರುತ್ಥಾನಕ್ಕಾಗಿ ಅಖಿಲ ಭಾರತ ಸಂಚಾರ ಕೈಗೊಂಡರು. ಶಾಶ್ವತ ವ್ಯವಸ್ಥೆಗಾಗಿ, ಧರ್ಮಪ್ರಚಾರ ನಿರಂತರವಾಗಿ ನಡೆಯಲು, ದಕ್ಷಿಣದಲ್ಲಿ ಶೃಂಗೇರಿ, ಪಶ್ಚಿಮದಲ್ಲಿ ದ್ವಾರಕಾ, ಪೂರ್ವದಲ್ಲಿ ಪುರಿ, ಉತ್ತರದಲ್ಲಿ ಬದರಿ ಕ್ಷೇತ್ರಗಳಲ್ಲಿ ಮಠಗಳನ್ನು ಸ್ಥಾಪಿಸಿ ತಮ್ಮ ಪ್ರಧಾನ ಶಿಷ್ಯರಾದ ಹಸ್ತಾಮಲಕ, ಸುರೇಶ್ವರಾಚಾರ್ಯ, ಪದ್ಮಪಾದ, ತೋಟಕಾಚಾರ್ಯರನ್ನು ಕ್ರಮವಾಗಿ ಈ ನಾಲ್ಕು ಮಠಗಳಿಗೆ ನೇಮಿಸಿದರು.

ಪಂಚಾಯತನ ಪೂಜಾ ಪದ್ಧತಿ

ಆದಿಶಂಕರರು ತಮ್ಮ ಕಾಲದಲ್ಲಿ ಮತದ ಕಾರಣದಿಂದ ಅಂತಃಕಲಹಗಳಿಂದ ಭಾರತೀಯ ಸಮಾಜ ಛಿದ್ರಗೊಳ್ಳುತ್ತಿರುವುದು ಕಂಡು ಏಕಾತ್ಮತಾ ಸಿದ್ಧಾಂತದಿಂದ ಸರ್ವಮಠಗಳ ಸಾಮರಸ್ಯಕ್ಕೆ ಪ್ರಯತ್ನಿಸಿದರು. ಆ ಪ್ರಯತ್ನದ ಫಲವಾಗಿ ಅವರ ಪ್ರಸಿದ್ಧವಾದ ಕಾಲದಲ್ಲಿ ಪಂಚ ದೇವತೆಗಳಾದ "ಶಿವ, ವಿಷ್ಣು, ಗಣಪತಿ, ಸೂರ್ಯ, ಅಂಬಿಕಾ ದೇವತೆಗಳನ್ನು ಪರಮಾತ್ಮನ ಸ್ವರೂಪಗಳೇ ಆದ ಇವರಲ್ಲಿ ಆರಿಸಿಕೊಂಡು ಯಾರನ್ನು ಪೂಜಿಸಿದರೂ ಪರಮಾತ್ಮನಿಗೇ ಸಲ್ಲುವುದು. ನಿಮ್ಮ ಇಷ್ಟದೇವತೆಗಳನ್ನು ಪ್ರಧಾನ ಸ್ಥಾನದಲ್ಲಿ ಕೂರಿಸಿಕೊಂಡು ಉಳಿದವನ್ನು ಚತುರ್ಭಾಗಗಳಲ್ಲಿ ಕೂರಿಸಿ ಆರಾಧಿಸಿ ಎಂದು ಪಂಚಾಯತನ ಪೂಜಾ ಪದ್ಧತಿಯನ್ನು ಬಳಕೆಗೆ ತಂದರು. ಎಲ್ಲ ಧರ್ಮಶಾಸ್ತ್ರದವರು ತಮ್ಮ ತಮ್ಮ ಇಷ್ಟ ದೇವತೆಯನ್ನು ಪ್ರಧಾನವಾಗಿ ಪೂಜಿಸುವ ಮತ್ತು ಅನ್ಯದೇವತೆಗಳನ್ನು ಪುರಸ್ಕರಿಸುವ ಮೂಲಕ ಸರ್ವಮತ ಸಾಮರಸ್ಯಕ್ಕೆ ನಾಂದಿ ಹಾಡಿದರು."

ಆಚಾರ್ಯತ್ರಯರೂ ತಮ್ಮ ಭಾಷ್ಯ ಗ್ರಂಥಗಳನ್ನು ಸಿದ್ಧಾಂತ ಪ್ರತಿಪಾದನೆಯನ್ನು ಸಂಸ್ಕೃತ ಭಾಷೆಯಲ್ಲಿ ರಚಿಸಿದ್ದಾರೆ. ಏಕೆಂದರೆ ಪುಷ್ಪಮಾಲೆಯಲ್ಲಿ ನೂಲಿನಂತಿರುವ ಭಾರತೀಯರನ್ನು ಒಟ್ಟುಗೂಡಿಸುವ, ಭಾರತೀಯ ಸಂಸ್ಕೃತಿಯನ್ನು ಪ್ರತಿಪಾದಿಸುವ ಏಕಸೂತ್ರವೇ ಸಂಸ್ಕೃತ ಭಾಷೆ, ಆಗ ಸಾರ್ವತ್ರಿಕ ಸಾಂಸ್ಕೃತಿಕ ಭಾಷೆ ಸಂಸ್ಕೃತ ಆಗಿತ್ತು. ಹಾಗಾಗಿ ಆಚಾರ್ಯತ್ರಯರು ತಮ್ಮ ಮಾತೃಭಾಷೆಯನ್ನಾಗಲಿ ಅಥವಾ ದೇಶಭಾಷೆಯಲ್ಲಾಗಲಿ

ತಮ್ಮ ಸಿದ್ಧಾಂತಗಳನ್ನು ಪ್ರತಿಪಾದಿಸುವ ಭಾಷ್ಯ ಗ್ರಂಥಗಳನ್ನು ರಚಿಸಲಿಲ್ಲ. ಎಲ್ಲರೂ ಸಂಸ್ಕೃತವನ್ನೇ ಗ್ರಂಥ ರಚನೆಗೆ ಬಳಸಿದ್ದಾರೆ.

ಈ ಪರಂಪರೆಯನ್ನು ಪ್ರಾರಂಭಿಸಿದವರು ಆದಿಶಂಕರರು. ಸಂಸ್ಕೃತದ ಹಿರಿಮೆ ವ್ಯಾಪ್ತಿ ಕಂಡು ಜೈನ, ಬೌದ್ಧರೂ ಸಂಸ್ಕೃತದಲ್ಲಿ ರಚಿಸಿದ್ದಾರೆ.

(ಆಧಾರ: ಶ್ರೀ ಶಂಕರ ಚರಿತಾಮೃತಂ
–ವಿದ್ವಾನ್ ಎನ್. ರಂಗನಾಥಶರ್ಮ)

ಆದಿಶಂಕರರ ಸ್ತೋತ್ರ ಸಾಹಿತ್ಯ

ಆದಿಶಂಕರರು ಆಚಾರ್ಯತ್ರಯರಲ್ಲಿ ಅಗ್ರಗಣ್ಯರು. ಶಾಸ್ತ್ರರಚನೆಯಲ್ಲಿ ಹೇಗೋ ಹಾಗೆ ಕಾವ್ಯರಚನೆಯಲ್ಲಿ ಅದ್ವಿತೀಯರು. ಶಾಸ್ತ್ರ ಮತ್ತು ಕಾವ್ಯರಚನೆ ಇವು ಭಿನ್ನ ಸ್ವರೂಪದವುಗಳಾದರೂ ಶ್ರೀ ಶಂಕರ ಭಗವತ್ಪಾದರ ಸೌಂದರ್ಯಲಹರೀ ಸ್ತೋತ್ರದಲ್ಲಿ ಮನೋಹರವಾಗಿ ಹಾಗೂ ಲೋಕೋತ್ತರವಾಗಿ ಶ್ರೀದೇವಿಯ ಶೃಂಗಾರ, ರೌದ್ರ ಶಾಂತ ಮುಂತಾದವನ್ನು ಅದ್ಭುತವಾಗಿ ವರ್ಣಿಸಿದ್ದಾರೆ. ಆಚಾರ್ಯರು ರಚಿಸಿದ ಸ್ತೋತ್ರ ರತ್ನಗಳಲ್ಲಿ ಜನಪ್ರಿಯವೂ ಶ್ರೇಷ್ಠ ಕಾವ್ಯಶಾಸ್ತ್ರ ಸ್ತೋತ್ರವೂ ಆಗಿರುವುದು ಸೌಂದರ್ಯ ಲಹರೀ ಸ್ತೋತ್ರ.

ಶಿವ ಶಕ್ತಿ ಸ್ವರೂಪವಾದ ಶ್ರೀ ಶಿವಾನಂದ ಲಹರೀ ಮತ್ತು ಶ್ರೀ ಸೌಂದರ್ಯ ಲಹರೀ ಸ್ತೋತ್ರಗಳು ಶ್ರೇಷ್ಠತಮ ಸೃಜನಶೀಲ ಕೃತಿಗಳಾಗಿವೆ.

ಈ ಎರಡೂ ಸ್ತೋತ್ರಗಳು ೧೦೦ ಶ್ಲೋಕಗಳನ್ನು ಒಳಗೊಂಡ ಶತಕಗಳಾಗಿವೆ. ಶಬ್ದಾಲಂಕಾರಗಳಿಂದಲೂ ಅರ್ಥಾಲಂಕಾರಗಳಿಂದಲೂ ಕೂಡಿವೆ. ಪುರಾಣೇತಿಹಾಸಾದಿ ನಿದರ್ಶನಗಳಿಂದ ಕೂಡಿದ್ದು ವಿನೂತನ ಕಲ್ಪನಾ ವಿಲಾಸಗಳನ್ನು ಇಲ್ಲಿ ಕಾಣುತ್ತೇವೆ. ಶಿವ ಶಕ್ತಿ ಸ್ವರೂಪವನ್ನು ಸಮಾನವಾಗಿ ಭಾವಿಸುವ ಶಂಕರರು ಅನೇಕ ಶಿವಸ್ತೋತ್ರಗಳನ್ನೂ ದೇವಿ (ಶಕ್ತಿ) ಸ್ತೋತ್ರಗಳನ್ನು ರಚಿಸಿದ್ದಾರೆ ಹಾಗೂ ವಿಷ್ಣು ಮೊದಲಾದವರನ್ನು ಕುರಿತೂ ಸ್ತೋತ್ರಗಳನ್ನು ರಚಿಸಿದ್ದಾರೆ. ಒಂದು ರೀತಿಯಲ್ಲಿ ಸರ್ವದೇವ ನಮಸ್ಕಾರವನ್ನು ಸರ್ವಧರ್ಮ ಪುರಸ್ಕಾರವನ್ನೂ ಅವರ ಸ್ತೋತ್ರಗಳಲ್ಲಿ ಕಾಣಬಹುದು. ಶಿವನನ್ನು ಕುರಿತ ಸ್ತೋತ್ರಗಳಲ್ಲಿ ಶಿವಪಂಚಾಕ್ಷರ ನಕ್ಷತ್ರಮಾಲಾ ಸ್ತೋತ್ರ, ಶಿವಾಪರಾಧ ಕ್ಷಮಾಪನಾ ಸ್ತೋತ್ರ, ಶಿವನಾಮಾವಲ್ಯಷ್ಟಕಮ್ ವೇದಸಾರ ಶಿವಸ್ತೋತ್ರಂ, ಶಿವಭುಜಂಗ ಸ್ತೋತ್ರ, ಶಿವಕೇಶಾದಿಪಾದಾಂತವರ್ಣನ ಸ್ತೋತ್ರಂ, ಶಿವಪಾದಾದಿಕೇಶಾಂತವರ್ಣನ ಸ್ತೋತ್ರಂ ಮುಂತಾದವು ಪ್ರಸಿದ್ಧವಾಗಿವೆ. ದೇವೀಸ್ತೋತ್ರಗಳಲ್ಲಿ ದೇವೀಭುಜಂಗ ಸ್ತೋತ್ರಂ, ಕನಕಧಾರಾ ಸ್ತೋತ್ರಂ, ಮೀನಾಕ್ಷೀ ಸ್ತೋತ್ರಂ, ಭವಾನೀ ಭುಜಂಗಂ, ಮೀನಾಕ್ಷಿಪಂಚರತ್ನಂ, ಅನ್ನಪೂರ್ಣಾ ಸ್ತೋತ್ರಂ, ಲಲಿತಾ ಪಂಚರತ್ನಂ, ತ್ರಿಪುರಸುಂದರಿ ಸ್ತೋತ್ರಂ, ದೇವ್ಯಪರಾಧಕ್ಷಮಾಪಣಾ ಸ್ತೋತ್ರಂ, ತ್ರಿಪುರಸುಂದರೀ ಮಾನಸಪೂಜಾ ಸ್ತೋತ್ರಂ, ಭ್ರಮರಾಷ್ಟಕಂ, ಗೌರೀದಶಕಂ, ಕಾಮಾಕ್ಷೀ ಸ್ತೋತ್ರಂ ಮೊದಲಾದವು ಪ್ರಸಿದ್ಧವಾಗಿವೆ.

ಶಿವಶಕ್ತಿಸಮನ್ವಯದ ಅರ್ಧನಾರೀಶ್ವರ ಸ್ತೋತ್ರವನ್ನೂ ಕಾಣಬಹುದು.

ಷಣ್ಮತಸ್ಥಾಪನಾಚಾರ್ಯರಾದ ಆದಿಶಂಕರರು ಪಂಚಾಯತನ ಪೂಜಾ ವ್ಯವಸ್ಥೆಯನ್ನು ಮಾಡಿದವರು. ಭರತಖಂಡದಲ್ಲಿ ಜನಸಾಮಾನ್ಯರಲ್ಲಿ ಸರ್ವಧರ್ಮ ಸಹಿಷ್ಣುತಾ ಭಾವವನ್ನು ಮೂಡಿಸಲು ಬಗೆ ಬಗೆಯ ದೇವೀಸ್ತುತಿ, ಶಿವಸ್ತುತಿ, ವಿಷ್ಣುಸ್ತುತಿ, ಇತರ ದೇವತಾಸ್ತುತಿಗಳನ್ನು ರಚಿಸಿ ಇಂದಿಗೂ ಆದರ್ಶಪ್ರಾಯರಾಗಿ ಭಾರತೀಯ ಸಂಸ್ಕೃತಿಯನ್ನು ಜ್ವಲಂತವಾಗಿ ಪ್ರತಿನಿಧಿಸಿದ್ದಾರೆ.

ಪಂಡಿತೋತ್ತಮರಿಗಾಗಿ ಅದ್ವೈತಮತದ ಸಿದ್ಧಾಂತವನ್ನು ಪ್ರತಿಪಾದಿಸಲು ಶಂಕರರು ಭಾಷ್ಯಗಳನ್ನು ರಚಿಸಿದ್ದಾರೆ. ಪಾಮರರಿಗೆ (ಜನಸಾಮಾನ್ಯರಿಗೆ) ಸ್ತೋತ್ರ, ಸಾಹಿತ್ಯವನ್ನು, ಸಾಕಷ್ಟು ತಿಳಿದವರಿಗೆ ಭಜಗೋವಿಂದಂ, ಉಪದೇಶ ಸಾಹಸ್ರಿಕಾ, ವಿವೇಕ ಚೂಡಾಮಣಿಯಂಥ ಪ್ರಕರಣ ಗ್ರಂಥಗಳನ್ನು ರಚಿಸಿ ಸರ್ವಜನಮಾನ್ಯರಾಗಿದ್ದಾರೆ.

ಸೌಂದರ್ಯಲಹರೀಸ್ತೋತ್ರದ ಮಹಿಮೆ

ಆದಿಶಂಕರರ ಸೌಂದರ್ಯಲಹರೀಸ್ತೋತ್ರವು ಅವರು ರಚಿಸಿರುವ ಸ್ತೋತ್ರ ಸಾಹಿತ್ಯದಲ್ಲೆಲ್ಲಾ ಅಗ್ರಗಣ್ಯ ಸ್ತೋತ್ರವಾಗಿದೆ. ಈ ಸ್ತೋತ್ರದ ಉದ್ದಕ್ಕೂ ಅದ್ವೈತ ಸಿದ್ಧಾಂತ ಪ್ರತಿಪಾದಿತವಾಗಿದೆ. ಶಾಕ್ತಮತಾನುಯಾಯಿಗಳಲ್ಲಿ ಕೌಲಮತದವರು, ಮಿಶ್ರಮತದವರು, ಸಮಯಮತದವರು ಮೂರು ವಿಧವಾಗಿದ್ದಾರೆ. ಕೌಲಮತಾನುಸಾರ ಪುರುಷಾರ್ಥಗಳಲ್ಲಿ ಅರ್ಥ ಕಾಮಗಳಿಗೆ ಪ್ರಾಧಾನ್ಯವಿದೆ. ಕೌಲವರ್ಗದ ಆಗಮಗಳು ೬೪ಕ್ಕೂ ಮಿಗಿಲಾಗಿವೆ. ಅವುಗಳಿಗೆ ವ್ಯಾಖ್ಯಾನಗಳೂ ಇವೆ. ಮಿಶ್ರಮತದ ಆಗಮಗಳಲ್ಲಿ ಧರ್ಮ-ಕರ್ಮ ಉಪಾಸನೆಗೆ ಪ್ರಾಧಾನ್ಯವಿದೆ. ಈ ವರ್ಗದ ಗ್ರಂಥಗಳಲ್ಲಿ ಕುಂಡಲಿನೀ ಶಕ್ತಿಯ ವಿವರಣೆ ಉತ್ಥಾಪನೆ, ಸಾಧನ ಮಾರ್ಗಗಳ ಬಗ್ಗೆ ವಿವರಗಳಿವೆ. ಈ ವಿವರಗಳನ್ನು ಚಂದ್ರಕಲಾ, ಕಳಾನಿಧಿ ಕುಲಾರ್ಣವ, ಕುಲೇಶ್ವರಿ, ಭುವನೇಶ್ವರಿ, ದೂರ್ವಾಸತಂತ್ರ ಮೊದಲಾದ ವ್ಯಾಖ್ಯಾನಗಳಲ್ಲಿ ಕಾಣಬಹುದು.

ಸಮಯಮತದ ಆಗಮಗಳಲ್ಲಿ ಕೇವಲ ಕೈವಲ್ಯ ಪರಮಾರ್ಥ ದೃಷ್ಟಿ ಮುಖ್ಯವಾಗಿದೆ. ಜೀವಬ್ರಹ್ಮೈಕ್ಯ ಸಿದ್ಧಾಂತ ಇದರಲ್ಲಿದೆ. ಜೀವಬ್ರಹ್ಮೈಕ್ಯ ಸಾಧಿಸಲು ಶಕ್ತಿ ಉಪಾಸನೆಯನ್ನು ಹೇಳಲಾಗಿದೆ. ಸಮಯಮತ ಆಚಾರವನ್ನು ತಿಳಿಯಲು ಸನಕಸನಂದನ, ಸನತ್ಕುಮಾರ, ವಶಿಷ್ಠ, ಶುಕಸಂಹಿತೆಗಳು ಪ್ರಮಾಣಗ್ರಂಥಗಳಾಗಿವೆ. ಆದಿಶಂಕರರು ಸೌಂದರ್ಯ ಲಹರಿಯಲ್ಲಿ ಕುಂಡಲಿನೀ ಶಕ್ತಿಯನ್ನು ಜಾಗೃತಗೊಳಿಸಿ ಷಟ್‌ಚಕ್ರ ಭೇದನವನ್ನು ಮಾಡಿ ಸಹಸ್ರಾರ ಕಮಲವನ್ನು ಸೇರುವ ವಿವರಗಳನ್ನು ತಿಳಿಸಿದ್ದಾರೆ. ಸಮಯಾಚಾರ ಸಾರವೇ ಸೌಂದರ್ಯಲಹರಿಯ ಸಾರವೆನ್ನಬಹುದು.

ಸೌಂದರ್ಯಲಹರೀ ಮತ್ತು ವ್ಯಾಖ್ಯಾನಕಾರರು

ಸಂಸ್ಕೃತದ ವ್ಯಾಖ್ಯಾನಗಳಲ್ಲಿ ಲೊಲ್ಲ ಲಕ್ಷ್ಮೀಧರ ದೇಶಿಕರ ಲಕ್ಷ್ಮೀಧರಾ ವ್ಯಾಖ್ಯಾನ ಬಹುಜನಪ್ರಿಯವಾದುದು. ಕನ್ನಡದಲ್ಲಿ ಸೌಂದರ್ಯಲಹರೀಯನ್ನು ಅನುವಾದಿಸಿದವರು

ಕೆಲವರಾದರೆ ಮತ್ತೆ ಕೆಲವರು ವ್ಯಾಖ್ಯಾನದಲ್ಲಿರುವುದರಲ್ಲಿ ತಮಗೆ ಬೇಕಾದ ಅಂಶಗಳನ್ನು ಟಿಪ್ಪಣಿ ರೂಪದಲ್ಲಿ ತೆಗೆದುಕೊಂಡಿದ್ದಾರೆ. ಇವರೇ ಹೆಚ್ಚು ಮಂದಿ ಎಂದು ತಿಳಿಯಬಹುದು. ಜಕ್ಕಣಾಮಾತ್ಯರು ಹಳಗನ್ನಡದಲ್ಲಿ ತಮ್ಮದೇ ರೀತಿಯಲ್ಲಿ ಲಕ್ಷ್ಮೀಧರನ ವ್ಯಾಖ್ಯಾನವನ್ನು ತಮ್ಮ ಟೀಕೆಯಲ್ಲಿ ಅಳವಡಿಸಿಕೊಂಡಿದ್ದಾರೆ. ಶೇಷಾಚಲಶರ್ಮರು ಮಾತ್ರ ಯಥಾವತ್ತಾಗಿ ಲಕ್ಷ್ಮೀಧರನ ವ್ಯಾಖ್ಯಾನವನ್ನು ಪೂರ್ಣವಾಗಿ ಕನ್ನಡಿಸಿದ್ದಾರೆ. ಅದನ್ನೇ ಇಲ್ಲಿ ಟಿಪ್ಪಣಿಗಳನ್ನು ಕೊಡುವಾಗ ಆಧಾರವಾಗಿ ಇಟ್ಟುಕೊಳ್ಳಲಾಗಿದೆ ಉಳಿದವರ ವಿವರಣೆಗಳಲ್ಲಿ ಸೂಕ್ತವಾದುದನ್ನು ಟಿಪ್ಪಣಿಗಳನ್ನಾಗಿ ಕೊಡಲಾಗಿದೆ. ಲಕ್ಷ್ಮೀಧರನ ವ್ಯಾಖ್ಯಾನದಲ್ಲಿ ಅರ್ಥ, ಅಲಂಕಾರಗಳನ್ನು ವಿವರವಾಗಿ ತಿಳಿಸಿದೆ. ಆಧ್ಯಾತ್ಮಿಕ ವಿವರಣೆಗಳು ಇತ್ಯಾದಿ ಚರ್ಚೆಗಳಿವೆ. ಅವುಗಳನ್ನೆಲ್ಲಾ ಟಿಪ್ಪಣಿಗಳಲ್ಲಿ ಕೊಟ್ಟಿಲ್ಲ. ಅತ್ಯಗತ್ಯ ಅಂಶಗಳನ್ನಷ್ಟೆ ಉಲ್ಲೇಖಿಸಲಾಗಿದೆ.

ಲಕ್ಷ್ಮೀಧರನ ವ್ಯಾಖ್ಯಾನವಲ್ಲದೆ ಸಂಸ್ಕೃತ ಭಾಷೆಯಲ್ಲಿ ೩೫ ವ್ಯಾಖ್ಯಾನಗಳಿವೆ. ಅವುಗಳಲ್ಲಿ ಸುಧಾವಿದ್ಯೋದಿನೀ ವ್ಯಾಖ್ಯಾನಕಾರ ಮಾತ್ರ ಸೌಂದರ್ಯಲಹರೀ ಸ್ತೋತ್ರವನ್ನು ತನ್ನ ತಂದೆ ಪ್ರವರಸೇನ ರಚಿಸಿದನೆಂದು ಹೇಳುತ್ತಾನೆ. ಆದರೆ ಉಳಿದೆಲ್ಲ ವ್ಯಾಖ್ಯಾನಕಾರರು ಶ್ರೀ ಶಂಕರ ಭಗವತ್ಪಾದರ ಕೃತಿಯೆಂದೇ ಪ್ರತಿಪಾದಿಸಿದ್ದಾರೆ. ಶ್ರೀ ಶಂಕರರ ಗುರುಗಳ ಗುರುಗಳಾದ ಗೌಡಪಾದಾಚಾರ್ಯರು ರಚಿಸಿದ ಸುಭಗೋದಯ ಸ್ತೋತ್ರದ ಪ್ರಭಾವದಿಂದ ಸೌಂದರ್ಯಲಹರಿಯನ್ನು ರಚಿಸಿದರೆಂದು ಹೇಳಲಾಗುತ್ತದೆ.

ಸೌಂದರ್ಯಲಹರಿಯಲ್ಲಿ ಬರುವ 'ದ್ರವಿಡ ಶಿಶು ಎಂಬ ಉಲ್ಲೇಖ ಶಂಕರರನ್ನು ಕುರಿತದ್ದು ಎಂದು ಅನೇಕರು ಹೇಳಿದರೆ, ಮತ್ತೆ ಕೆಲವರು ಜ್ಞಾನ ಸಂಬಂಧ ಎಂಬ ಶೈವಸಂತರನ್ನು ಕುರಿತದ್ದೆಂದು ವಾದಿಸುತ್ತಾರೆ. ಈ ಬಗ್ಗೆ ಕೆಲವು ಕಥೆಗಳು ಪ್ರಚಲಿತವಾಗಿವೆ.

ಇನ್ನು ಸೌಂದರ್ಯಲಹರಿಯನ್ನು ಕುರಿತ ವ್ಯಾಖ್ಯಾನಗಳ ಬಗ್ಗೆ ಕೆಲವೊಂದು ಮಾತುಗಳನ್ನು ಹೇಳಬಹುದು:

ಸೌಂದರ್ಯಲಹರೀಯ ವ್ಯಾಖ್ಯಾನಗಳು (ಸಂಸ್ಕೃತದಲ್ಲಿ)

ಸಂಸ್ಕೃತ ಸ್ತೋತ್ರಸಾಹಿತ್ಯದಲ್ಲಿ ಸೌಂದರ್ಯಲಹರಿಯ ಜನಪ್ರಿಯತೆ ಅಪಾರವಾದುದು. ಇದಕ್ಕೆ ಸಾಕ್ಷಿ ಎಂದರೆ ಈ ಸ್ತೋತ್ರಕ್ಕೆ ಇರುವಷ್ಟು ವ್ಯಾಖ್ಯಾನ ಸಂಪತ್ತು (೩೫) ಸಂಸ್ಕೃತ ಸಾಹಿತ್ಯದಲ್ಲಿ ಬೇರಾವ ಸ್ತೋತ್ರಕ್ಕೂ ಇಲ್ಲದಿರುವುದು. ಈ ಎಲ್ಲ ವ್ಯಾಖ್ಯಾನಗಳೂ ಅಚ್ಚಾಗಿಲ್ಲ. ೧೦-೧೨ ವ್ಯಾಖ್ಯಾನಗಳು ಅಚ್ಚಾಗಿರಬಹುದಷ್ಟೆ. ಎ. ಕುಪ್ಪುಸ್ವಾಮಿ ಎಂಬ ವಿದ್ವಾಂಸರು ೧೦ ವ್ಯಾಖ್ಯಾನಗಳನ್ನು ಪ್ರಕಟಿಸಿದ್ದಾರೆ. ಅವುಗಳೆಂದರೆ: ೧. ಲಕ್ಷ್ಮೀಧರಾ ೨. ಸೌಭಾಗ್ಯವರ್ಧಿನೀ ೩. ಅರುಣಾಮೋದಿನೀ ೪. ಆನಂದಗಿರೀಯ ೫. ತಾತ್ಪರ್ಯ ದೀಪಿನೀ ೬. ಪದಾರ್ಥ ಚಂದ್ರಿಕಾ ೭. ಡಿಂಡಿಮ ಭಾಷ್ಯ ೮. ಗೋಪಾಲ ಸುಂದರೀ ೯. ಆನಂದಲಹರೀ ೧೦. ಕೈವಲ್ಯ ವರ್ಧಿನೀ ಇವುಗಳನ್ನು ಮೂಲಾನುವಾದದೊಡನೆ ಟಿಪ್ಪಣಿ, ಯಂತ್ರ ಪ್ರಯೋಗ ಸಹಿತ ಇಂಗ್ಲಿಷಿನಲ್ಲಿ ಕೊಟ್ಟಿದ್ದಾರೆ.

ಇದುವರೆಗೆ ಸುಮಾರು ೩೫ ಸಂಸ್ಕೃತ ವ್ಯಾಖ್ಯಾನಗಳು ವಿದ್ವಾಂಸರ ಗಮನಕ್ಕೆ ಬಂದಿವೆ. ಅವುಗಳ ವಿವರ ಹೀಗಿದೆ :

೧. ಅಚ್ಯುತಾನಂದ ವ್ಯಾಖ್ಯಾನ

೨. ಆನಂದಗಿರಿ ವ್ಯಾಖ್ಯಾನ

೩. ಅರುಣಾಮೋದಿನೀ ವ್ಯಾಖ್ಯಾನ

೪. ಆನಂದಲಹರೀ ಟೀಕಾ

೫. ಕವಿರಾಜಶರ್ಮ ವ್ಯಾಖ್ಯಾನ

೬. ಕೇಶವಭಟ್ಟ ವ್ಯಾಖ್ಯಾನ

೭. ಗಂಗಾಧರ ವ್ಯಾಖ್ಯಾನ

೮. ಗೋಪಾಲಸುಂದರೀ ವ್ಯಾಖ್ಯಾನ

೯. ಗೋವಿಂದ ತರ್ಕವಾಗೀಶ ವ್ಯಾಖ್ಯಾನ

೧೦. ಗೋಪೀರಮಣ ತರ್ಕಪ್ರವಚನ ವ್ಯಾಖ್ಯಾನ

೧೧. ಚಂದ್ರಿಕಾ ವ್ಯಾಖ್ಯಾನ (ಅಪ್ಪಯ್ಯ ದೀಕ್ಷಿತ)

೧೨. ಡಿಂಡಿಮ ಭಾಷ್ಯ

೧೩. ತಾತ್ಪರ್ಯ ದೀಪಿನೀ ವ್ಯಾಖ್ಯಾನ

೧೪. ತತ್ತ್ವದೀಪಿಕಾ ವ್ಯಾಖ್ಯಾನ

೧೫. ಪದಾರ್ಥಚಂದ್ರಿಕಾ ವ್ಯಾಖ್ಯಾನ

೧೬. ಭಾವಾರ್ಥದೀಪ ವ್ಯಾಖ್ಯಾನ

೧೭. ಮಹಾದೇವ ವಿದ್ಯಾವಾಗೀಶ ವ್ಯಾಖ್ಯಾನ

೧೮. ಮಲ್ಲಭಟ್ಟ ವ್ಯಾಖ್ಯಾನ

೧೯. ಮಂಜುಭಾಷಿಣೀ ವ್ಯಾಖ್ಯಾನ (ಕೃಷ್ಣಾಚಾರ್ಯ)

೨೦. ಮನೋರಮಾ (ವಿದ್ಯಾಮನೋರಮಾ) ವ್ಯಾಖ್ಯಾನ

೨೧. ರಾಮಚಂದ್ರ ವ್ಯಾಖ್ಯಾನ

೨೨. ರಾಮಚಂದ್ರ ಮಿಶ್ರವ್ಯಾಖ್ಯಾನ

೨೩. ರಮಾನಂದ ತೀರ್ಥ ವ್ಯಾಖ್ಯಾನ

೨೪. ರಾಮಸೂರಿ ವ್ಯಾಖ್ಯಾನ

೨೫. ಲಕ್ಷ್ಮೀಧರಾ ವ್ಯಾಖ್ಯಾನ

೨೬. ವಿಷ್ಣುಪಕ್ಷಿ ವ್ಯಾಖ್ಯಾನ

೨೭. ವಿಶ್ವಂಧರ ವ್ಯಾಖ್ಯಾನ

೨೮. ಶ್ರೀಕಂಠಭಟ್ಟ ವ್ಯಾಖ್ಯಾನ

೨೯. ಶ್ರೀರಂಗದಾಸ ವ್ಯಾಖ್ಯಾನ

೩೦. ಸದಾಶಿವ ವ್ಯಾಖ್ಯಾನ

೩೧. ಸೌಭಾಗ್ಯವರ್ಧಿನೀ ವ್ಯಾಖ್ಯಾನ

೩೨. ಸುಧಾವಿದ್ಯೋತಿನೀ ವ್ಯಾಖ್ಯಾನ

೩೩. ಜಗದೀಶ ವ್ಯಾಖ್ಯಾನ

೩೪. ಜಗನ್ನಾಥ ಪಂಚಾನನ ವ್ಯಾಖ್ಯಾನ

೩೫. ಅಜ್ಞಾತಕರ್ತೃಕ ವ್ಯಾಖ್ಯಾನ (ಮದ್ರಾಸ್ ವಿವಿ ಹಸ್ತಪ್ರತಿ ಭಂಡಾರ)

ಸೌಂದರ್ಯಲಹರಿಯ ಪದ್ಯಾನುವಾದಗಳು

ಸೌಂದರ್ಯಲಹರಿಯು ಶಂಕರಾಚಾರ್ಯರ ರಚನೆ ಎಂದು ಪ್ರಚಲಿತವಾಗಿದೆ. ಇದರ ಜನಪ್ರಿಯತೆ ಎಷ್ಟಿದೆ ಎಂದರೆ ಇದಕ್ಕೆ ಸಂಸ್ಕೃತದಲ್ಲಿ ೩೫ ಟೀಕೆಗಳಿವೆ. ಈ ಪೈಕಿ ಲಕ್ಷ್ಮೀಧರಾವ್ಯಾಖ್ಯೆ ಅತ್ಯಂತ ಜನಪ್ರಿಯವಾಗಿದೆ. ಅದನ್ನು ಅನುಸರಿಸಿ ಕನ್ನಡದಲ್ಲಿ ಅನೇಕರು ಟೀಕೆಯನ್ನು ರಚಿಸಿದ್ದಾರೆ. ಉದಾಹರಣೆಗೆ ಬಿ. ಪುಟ್ಟಸ್ವಾಮಯ್ಯನವರು ಇಲ್ಲಿರುವ ಪದ್ಯಗಳನ್ನು ಅನುವಾದಿಸಿ ಪ್ರತಿ ಪದ್ಯದ ಕೆಳಗೆ ವಿಮರ್ಶಾಯುಕ್ತ ಟಿಪ್ಪಣಿಗಳನ್ನು ಕೊಟ್ಟಿದ್ದಾರೆ. ಎಂವಿಸೀ ಅವರು ಪುಟ್ಟಸ್ವಾಮಯ್ಯನವರ ಕೃತಿಯನ್ನು ಕುರಿತು 'ಇವರ ಕನ್ನಡ ಸೌಂದರ್ಯಲಹರೀ ಸ್ವತಂತ್ರ ಕೃತಿ ಎನ್ನುವ ಮಟ್ಟಿಗೆ ಸಮರ್ಥವಾದ ಸುಂದರವಾದ ಅನುವಾದವಾಗಿದೆ' ಎಂದಿದ್ದಾರೆ. ಎಂವಿಸೀ ಅವರೇ ಸ್ವತಃ ೧೯೮೦ರಲ್ಲಿ ಷಟ್ಪದಿ ರೂಪದಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಇದನ್ನು ಅನುವಾದಿಸುವಾಗ ಜಕ್ಕಣಾಮಾತ್ಯನ ಟೀಕಿನ ನೆರವನ್ನು ಪಡೆದಿದ್ದಾರೆ. ವಾರ್ಧಕ ಷಟ್ಪದಿಯಲ್ಲಿ ಗಮಕಿ ಶಂಕರನಾರಾಯಣ ಅವರು ಅನುವಾದಿಸಿದ್ದಾರೆ. ಸಿಪಿಕೆ ಅವರು ೧೯೬೯ರಲ್ಲಿ, ಎಂ.ವಿ. ನಾರಾಯಣರಾವ್ ಅವರು (ನಾಣಿ) ೧೯೮೮೪ರಲ್ಲಿ ಪದ್ಯರೂಪದಲ್ಲಿ ಅನುವಾದಿಸಿದ್ದಾರೆ.

ತಾತ್ಪರ್ಯ ಸಹಿತವಾದ ಆವೃತ್ತಿಗಳು

ಬಿ.ವಿ. ಶ್ರೀನಿವಾಸಯ್ಯನವರ ಮೂಲ ತಾತ್ಪರ್ಯ ಯಂತ್ರಗಳ ಚಿತ್ರ ಮತ್ತು ಯಂತ್ರಾರಾಧನೆ, ಟೀಕಾ ವಿಧಾನ ಸಹಿತವಾದ ಆವೃತ್ತಿ {೨೦೦೩}(?), ವಿದ್ವಾನ್

ಶ್ರೀನಿಧಿಶರ್ಮರ (೧೯೯೧) ಅನುವಾದ, ಮೂಲ ಪದಗಳ ತಾತ್ಪರ್ಯ ಸಹಿತವಾದ ಆವೃತ್ತಿ, ಟಿ.ಎಸ್. ಪದ್ಮನಾಭಶರ್ಮರು (೨೦೦೦) ತಾತ್ಪರ್ಯ ಸಹಿತ ಹೊರತಂದ ಆವೃತ್ತಿಗಳು ಜನಪ್ರಿಯವಾಗಿದೆ.

ಸೌಂದರ್ಯಲಹರೀ ವಿವರಣ ಗ್ರಂಥಗಳು

೧. ಸೌಂದರ್ಯಲಹರೀ (ಜಕ್ಕಣಾಮಾತ್ಯ) (ಸಂ–ಕ) (ಮೂಲ–ಅನ್ವಯಾರ್ಥ–ಟೀಕೆ–ಯಂತ್ರವಿವರಣೆ) ೨೦೦೩.

೨. ಸೌಂದರ್ಯಲಹರೀ (ಲಕ್ಷ್ಮೀಧರಾ ವ್ಯಾಖ್ಯಾನದ ಕನ್ನಡಾನುವಾದ) ಸಂ–ಕ) (ಮೂಲ–ಅನ್ವಯಾರ್ಥ–ತಾತ್ಪರ್ಯ–ಲಕ್ಷ್ಮೀಧರನ ಟೀಕೆ–ಯಂತ್ರ ವಿವರಣೆ–ವಿವಿಧ ಮುದ್ರೆಗಳು), ವಿದ್ವಾನ್ ಶೇಷಾಚಲಶರ್ಮ, ೨೦೦೪.

೩. ಸೌಂದರ್ಯಲಹರೀ (ವಿದ್ವಾನ್ ಗಣೇಶಭಟ್ಟ ಹೋಬಳಿ) (ಮೂಲ–ಅನ್ವಯಾರ್ಥ–ತಾತ್ಪರ್ಯ–ಟಿಪ್ಪಣಿ) ಸಂ–ಕ., ೨೦೦೬.

೪. ಸೌಂದರ್ಯಲಹರೀ (ಬಿ.ವಿ. ಶ್ರೀನಿವಾಸಯ್ಯ) (ಮೂಲ–ಪದವಿಭಾಗ–ಅನ್ವಯಾರ್ಥ–ವ್ಯಾಖ್ಯಾನ–ಯಂತ್ರ ವಿವರಣೆ–ಭಾವನೋಪನಿಷತ್ ಟೀಕೆ), ೨೦೦೩ (?).

೫. ವಿಶ್ವಶಾಂತಿಗಾಗಿ ಸೌಂದರ್ಯಲಹರೀ (ಯೋಗಾನರಸಿಂಹ, ಮೈಸೂರು–(ಮೂಲ–ತಾತ್ಪರ್ಯ–ಯಂತ್ರವಿವರಣೆ), ೨೦೦೧.

ಅಲಂಕಾರಗಳು: ಸೌಂದರ್ಯಲಹರಿಯಲ್ಲಿ ಶಬ್ದಾರ್ಥಾಲಂಕಾರಗಳು ವಿಪುಲವಾಗಿವೆ. ಒಂದೊಂದು ಶ್ಲೋಕದಲ್ಲೂ ಅಲಂಕಾರಿಕ ಪದಗಳು ಕಂಡುಬರುತ್ತವೆ. ಒಂದೇ ಶ್ಲೋಕದಲ್ಲಿ ದೇವೀ ವರ್ಣನೆಯಲ್ಲಿ ಹಲವು ಅಲಂಕಾರಗಳು ಕಂಡುಬರುವುದುಂಟು. ಅಂಥ ಅಲಂಕಾರಗಳನ್ನು ಸಂಕ್ಷಿಪ್ತವಾಗಿ ಟಿಪ್ಪಣಿಗಳಲ್ಲಿ ವಿವರಿಸಲಾಗಿದೆ. ಮುಖ್ಯ ಅಲಂಕಾರಗಳು ಯಾವ ಯಾವ ಶ್ಲೋಕಗಳಲ್ಲಿ ಬಂದಿದೆ ಎಂಬುದನ್ನು ಇಲ್ಲಿ ಕೊಟ್ಟಿದೆ (ಶ್ಲೋಕದ ಸಂಖ್ಯೆಗಳನ್ನು ಸೂಚಿಸಿದೆ).

೧. **ಅತಿಶಯೋಕ್ತಿ ಅಲಂಕಾರ:** ೪೨, ೪೬, ೪೭, ೫೦, ೫೬, ೫೯, ೬೦, ೬೨, ೬೩, ೬೬, ೭೧, ೭೨, ೭೬, ೮೦, ೮೧, ೮೩, ೮೫, ೮೬, ೯೦, ೯೧, ೯೩, ೯೪, ೯೮.

೨. **ಅನನ್ವಯಾಲಾಂಕಾರ :** ೧೨, ೬೭, ೮೮.

೩. **ಅಪಹ್ನುವಾಲಂಕಾರ:** ೪೨, ೫೦, ೮೩, ೯೪.

೪. **ಅರ್ಥಾಂತರನ್ಯಾಸಾಲಂಕಾರ:** ೫೯.

೫. ಉತ್ಪ್ರೇಕ್ಷಾಲಂಕಾರ: ೪೨, ೪೩, ೪೪, ೪೬, ೪೭, ೫೩, ೫೪, ೫೫, ೫೬, ೫೯, ೬೦, ೬೯, ೭೪, ೭೫, ೭೬, ೭೭, ೮೦, ೮೩, ೯೧, ೯೨, ೯೪, ೯೮.

೬. ಉದಾತ್ತಾಲಂಕಾರ: ೨೯.

೭. ಉಪಮಾಲಂಕಾರ: ೪೩, ೪೪, ೪೫, ೭೧, ೭೯, ೮೨, ೯೦.

೮. ಉಪಮೇಯೋಪಮಾಲಂಕಾರ: ೭೨.

೯. ಉಲ್ಲೇಖಾಲಂಕಾರ: ೩, ೭೮.

೧೦. ಕಾವ್ಯಲಿಂಗಾಲಂಕಾರ: ೪, ೫೬, ೫೯, ೭೦, ೭೩.

೧೧. ತದ್ಗುಣಾಲಂಕಾರ: ೬೪, ೭೧, ೯೨.

೧೨. ದೃಷ್ಟಾಂತಾಲಂಕಾರ: ೧೦೦.

೧೩. ನಿದರ್ಶನಾಲಂಕಾರ: ೬೮, ೭೭.

೧೪. ಪರಿಣಾಮಾಲಂಕಾರ: ೩, ೯೦

೧೭. ಪ್ರತಿವಸ್ತೂಪಮಾಲಂಕಾರ: ೧೦೦

೧೮. ಭ್ರಾಂತಿಮದಾಲಂಕಾರ: ೫೮, ೭೬.

೧೯. ರೂಪಕಾಲಂಕಾರ: ೩, ೧೬, ೪೪, ೪೫, ೪೭, ೫೦, ೬೧, ೬೮, ೮೪, ೯೦.

೨೦. ವಿಭಾವಲಂಕಾರ: ೬.

೨೧. ವಿರೋಧಾಲಂಕಾರ: ೫೧.

೨೨. ವ್ಯತಿರೇಕಾಲಂಕಾರ: ೪, ೮೭, ೮೯.

೨೩. ಸಂದೇಹಾಲಂಕಾರ: ೪೨, ೪೫, ೫೮, ೭೩, ೭೬.

ಲಕ್ಷ್ಮೀಧರನ ವ್ಯಾಖ್ಯಾನದಲ್ಲಿ ಅಲಂಕಾರಗಳನ್ನು ಲಕ್ಷ್ಯ-ಲಕ್ಷಣ ವಿಧಾನದಲ್ಲಿ ವಿವರಿಸಲಾಗಿದೆ. ಹೀಗಾಗಿ ಆತನ ವ್ಯಾಖ್ಯಾನ ಅಲಂಕಾರಗಳ ಕೈಪಿಡಿಯಾಗಿದೆ. ಆದಿಶಂಕರರ ಅಲಂಕಾರ ಪರಿಣಿತಿ, ಶಾಸ್ತ್ರಕಾವ್ಯ ರಚನಾ ಪ್ರತಿಭೆ ಎಷ್ಟು ಅದ್ಭುತ ಎಂಬುದು ಇಲ್ಲಿ ವ್ಯಕ್ತವಾಗಿದೆ. ಅಲ್ಲದೆ ಛಂದಸ್ಸು, ಅಲಂಕಾರ, ವ್ಯಾಕರಣ, ಶೈಲಿ, ಪದ ಸಂಪತ್ತುಗಳಲ್ಲಿ ವಿಶೇಷಗುಣಗಳನ್ನು ಹೊಂದಿರುವ ಸ್ತೋತ್ರವಾಗಿದೆ.

ಸೌಂದರ್ಯಲಹರಿಯ ಛಂದಸ್ಸು

ಆದಿಶಂಕರರ ಸ್ತೋತ್ರ ಸಾಹಿತ್ಯವನ್ನು ಗಮನಿಸಿದಾಗ ಛಂದೋವೈವಿಧ್ಯವನ್ನು ಪ್ರಾಸಬದ್ಧ, ಲಯ ಬದ್ಧ ಅರ್ಥಪೂರ್ಣ ಆಕರ್ಷಕ ಧಾಟಿಗಳ ರಚನೆಗಳನ್ನು ಕಾಣುತ್ತೇವೆ.

ಒಮ್ಮೆ ಕೇಳಿದರೆ ಹಾಡಿದರೆ ಮೆಲುಕು ಹಾಕುವಂಥ ಸೊಗಸಾದ ಪದಪುಂಜಗಳ ರಚನಾವೈಶಿಷ್ಟ್ಯಗಳಿಂದ ಕೂಡಿದ ಸ್ತೋತ್ರಗಳಾಗಿರುತ್ತವೆ. ಭಜಗೋವಿಂದಂ, ಅನ್ನಪೂರ್ಣಾಷ್ಟಕ, ಕಾಲಭೈರವಾಷ್ಟಕ, ಲಲಿತಾಪಂಚಕ ಮೊದಲಾದ ಅನೇಕ ಸ್ತೋತ್ರಗಳನ್ನು ಉದಾಹರಿಸಬಹುದು. ಆದಿಶಂಕರರು ಶ್ರೇಷ್ಠ ದಾರ್ಶನಿಕರೂ, ಸಿದ್ಧಾಂತಿಗಳೂ ಹೇಗೋ ಹಾಗೆಯೇ ಅದ್ಭುತ ಕಲ್ಪನಾವಿಲಾಸದ, ವಿಶಿಷ್ಟ ಭಾಷಾವೈಖರಿಯ ಸ್ತೋತ್ರಗಳು ಸಾಮಾನ್ಯರ ಮನಸೆಳೆವ, ಪಂಡಿತಮಾನ್ಯರು ಮೆಚ್ಚುವ ಸ್ತೋತ್ರಗಳೆನಿಸಿವೆ. ಇದಕ್ಕೆ ಕಾರಣವೆಂದರೆ ಆಯಾ ಸ್ತೋತ್ರದ ವಸ್ತುವಿಗೆ ತಕ್ಕಂತೆ ಛಂದಸ್ಸನ್ನು ಬಳಸಿದ್ದಾರೆ.

ಸೌಂದರ್ಯಲಹರಿಯನ್ನು ಶಿಖರಿಣೀ ವೃತ್ತದ ಛಂದಸ್ಸಿನಲ್ಲಿ ರಚಿಸಿದ್ದಾರೆ.

ಶಿಖರಿಣೀ ಛಂದಸ್ಸನ್ನು ಕುರಿತು ಡಾ. ಡಿ.ಎಸ್. ಕರ್ಕಿ ಅವರು ತಮ್ಮ ಕನ್ನಡ ಛಂದೋವಿಕಾಸದಲ್ಲಿ (ಪುಟ ೧೨೦) ಹೇಳಿರುವ ಮಾತುಗಳಿವು:

"ಹರಿಣಿಗಿಂತ ಶಿಖರಿಣೀ ಹೆಚ್ಚು ಸೊಗಸಾದ ವೃತ್ತ. ಅದರ ಲಯದಲ್ಲಿ ಬೆಡಗು ಬಿನ್ನಾಣಗಳು ಮೈದೋರುತ್ತವೆ. ವರ್ಣಗಣ ವೃತ್ತವಾದರೂ ಒಂದಿಷ್ಟು ಗೇಯವಾಗಿದೆ. ಶಿಖರಿಣಿಯ ಯತಿ ೬ನೇ ಸ್ಥಾನದಲ್ಲಿ ಮತ್ತು ೧೧ನೇ ಸ್ಥಾನದಲ್ಲಿ ಲಯಕ್ಕೆ ನಿಜವಾಗಿಯೂ ಒಂದು ಶೋಭೆಯನ್ನು ಉಂಟುಮಾಡುತ್ತದೆ. ಅದರ ಕೊನೆಯ ಅಕ್ಷರದ ಯತಿಸ್ಥಾನದಲ್ಲಿ ಕಂಠದಿಂದ ಸೊಗಸಾದ ಸ್ವರತರಂಗ ಹೊರಡುತ್ತದೆ. ಅದಕ್ಕಾಗಿಯೇ ನಾಗವರ್ಮನು ಶಿಖರಿಣೀ ಛಂದಸ್ಸನ್ನು "ಜನಾನಂದಂ ಛಂದಂ' ಎಂದು ಹೊಗಳಿದ್ದಾನೆ.

ನಾಗವರ್ಮನು ತನ್ನ ಛಂದೋಂಬುಧಿ ಗ್ರಂಥದಲ್ಲಿ (ಅ. ೨, ಪುಟ ೧೧೨) ಶಿಖರಿಣೀ ವೃತ್ತವನ್ನು ಹೀಗೆ ವಿವರಿಸಿದ್ದಾನೆ.

ವನಂ ಧಾತ್ರೀ ಚಕ್ರಂ – ಸುರಪ ಪವನಂ ಶೀತಕರನ
ಬ್ಜನಾಭಂ ಭೂತೇಶಂ ನೆಲಸಿನಿಲೆ ವಿಶ್ರಾಂತಿಯವರೊಳ್
ಮನಗೊಂಡಾರೆಂಬಲ್ಲಿ ನೆಲಸಿರೆ ಕರ್ಣಾಮೃತರಸಂ
ಜನಾನಂದಂ ಛಂದಂ ಶಿಖರಿಣಿ ಮದೇಭೇಂದ್ರಗಮನೇ ॥

[ಮದೇಭೇಂದ್ರ ಗಮನೇ (ಮದ್ದಾನೆಯ ನಡೆಯವಳೇ) ಜಲ (ಯಗಣ) ಭೂಮಿ (ಮಗಣ) ಇಂದ್ರ (ನಗಣ) ವಾಯು (ಸಗಣ) ಚಂದ್ರ (ಭಗಣ) ಹರಿ (ಲಘು) ಹರ (ಗುರು) ಇವು ಸ್ಥಿರವಾಗಿ ನಿಲ್ಲಲು, ಅವುಗಳಲ್ಲಿ ಯತಿ ಒಪ್ಪಿಗೆಯಾಗಿ ೬ನೇ ಅಕ್ಷರ ಸ್ಥಾನದಲ್ಲಿ ಸ್ಥಿರಪಡಲು, ಕಿವಿಗೆ ಅಮೃತರಸವಾದ ಜನರಿಗೆ ಆನಂದಕರವಾದ ಛಂದಸ್ಸು ಶಿಖರಿಣೀ ವೃತ್ತವಾಗುತ್ತದೆ.]

ಅನುವಾದಕರು : ಟಿ.ವಿ. ವೆಂಕಟಾಚಲಶಾಸ್ತ್ರೀ, ಪುಟ ೭೬

ಕನ್ನಡ ಛಂದಸ್ಸಿನ ಚರಿತ್ರೆ ಸಂಪುಟ ೧ರಲ್ಲಿ (ಪುಟ ೪೦೦) ೧೭ ಅಕ್ಷರಗಳ ಸಮಚತುಷ್ಪದಿ ಛಂದಸ್ಸನ್ನು ವಿವರಿಸಲಾಗಿದೆ. ಇದನ್ನು ಅತ್ಯಷ್ಟಿ ಛಂದಸ್ಸು ಎಂದು

ಕರೆಯುತ್ತಾರೆ. ಇದರಲ್ಲಿ ಹುಟ್ಟುವ ವೃತ್ತಗಳಲ್ಲಿ ಪ್ರಮುಖವಾದವು ೧. ಕನಕಾಬ್ಜಿನಿ ೨. ಪೃಥ್ವಿ ೩. ಮತ್ತಕೋಕಿಲ ೪. ಮಂದಾಕ್ರಾಂತ ೫. ಹರಿಣೀಪ್ಲುತ ೬. ಶಿಖರಿಣೀ.

ಇವುಗಳಲ್ಲಿ ಶಿಖರಿಣೀ ಛಂದಸ್ಸನ್ನು ಕನ್ನಡ ಕವಿಗಳು ವಿರಳವಾಗಿ ಬಳಸಿದ್ದಾರೆ. ಆದರೆ ಸಂಸ್ಕೃತದಲ್ಲಿ ಸಾಕಷ್ಟು ಕೃತಿಗಳಿವೆ. ಶಿಖರಿಣೀ ವೃತ್ತದ ಛಂದಸ್ಸಿನ ಲಕ್ಷಣವನ್ನು ಕನ್ನಡ ಕೈಪಿಡಿಯಲ್ಲಿ "ಯಮಂನಂಸಂ ತೋರಲ್ ಶಿಖರಿಣಿಯದೊಂದಲ್ ಭಲಗಮು (ಯಮನಸಭಗಣಗಳು ಒಂದು ಲಘು ಮತ್ತು ಒಂದು ಗುರು ಪ್ರತಿಚರಣದಲ್ಲಿ ಕ್ರಮವಾಗಿ ಬಂದರೆ ಶಿಖರಿಣೀ ವೃತ್ತವಾಗುತ್ತದೆ.) ೬ನೇ ಮತ್ತು ೧೧ನೇ ಅಕ್ಷರಗಳಲ್ಲಿ ಯತಿ ಬರುತ್ತದೆ.

ಸೌಂದರ್ಯಲಹರಿಯ ಒಂದನೇ ಶ್ಲೋಕವನ್ನು ಉದಾಹರಣೆಯಾಗಿ ವಿವರಿಸಬಹುದು.

*　　　　　　　*

ಶಿವಶ್ಶಕ್ತ್ಯಾಯುಕ್ತೋ । ಯದಿಭ । ವತಿಶ । ಕ್ತಃ ಪ್ರಭ । ವಿತ

(೬ ಮತ್ತು ೧೨ನೇ ಸ್ಥಾನದ ಕ್ತೋ, ತಿ, ಅಕ್ಷರಗಳಲ್ಲಿ ಯತಿ ಬಂದಿದೆ.

ಹಳಗನ್ನಡದಲ್ಲಿ ಶಿಖರಿಣೀ ವೃತ್ತದ ಬಳಕೆ ವಿರಳವಾದರೆ ಹೊಸಗನ್ನಡದಲ್ಲಿ ಅತಿವಿರಳ ಎನ್ನಬಹುದು. ಅ.ರಾ. ಮಿತ್ರ ಅವರು ತಮ್ಮ ಛಂದೋಮಿತ್ರದಲ್ಲಿ (ಪುಟ ೪೮) ೧೭ ಅಕ್ಷರಗಳ ಶಿಖರಿಣೀ ವೃತ್ತವನ್ನು ಹೊಸಗನ್ನಡದ ಲಕ್ಷ್ಯ-ಲಕ್ಷಣ ಪದ್ಯದಲ್ಲಿ ವಿವರಿಸಿದ್ದಾರೆ. ಇದೊಂದು ನೂತನ ಯತ್ನ.

ಲಕ್ಷಣ : ಲಗಂ ಮೇಣ್ ನಾಲ್ಕಾಗಲುರು ಶಿಖರಿಣೀ ವೃತ್ತವದುವೇ

ಲಕ್ಷ್ಯ : ಇವಳ್ ಶ್ವೇತಾತ್ಮಳ್ ಮಂಜಿನುಡುಗೆಯ ತೊಟ್ಟಳ್ ಶಿಖರಿಣೀ

ಯ	ಮ	ನ	ಸ	ಭ	ಲ ಗ
∪ – –	– – –	∪ ∪ ∪	∪ ∪ –	– ∪ ∪	∪ –

ಉದಾಹರಣೆ:

ಫಲಂ ಪುಷ್ಪಂ ತೋಯಂಗಳಲಿ ಶಿವ ಸಂತೃಪ್ತನಹನ್ಯೆ
ಬಲುಗರ್ವಂ ಸ್ವಾರ್ಥಂಗಳನು ತಿವಿವಂ ಶೂಲಿಯವನ್ಯೆ
ಕಲಾಲೋಲಂ ನಿಷ್ಠಂ ಚಪಲರುಗಳಂ ಸ್ಯೆರಿಪನೆ ಕೇಳ್
ಶಿಲಾರೂಪಂ ಬಾಹ್ಯಂ ಒಳಗೆ ಸರಳಂ ಭಾವುಕನವಂ

ಸೌಂದರ್ಯಲಹರಿಯ ಕನ್ನಡ ಟೀಕಾಕಾರ ಬಿ.ಎಸ್. ಕಪನೀಪತಯ್ಯನವರ ಜೀವನ-ವ್ಯಕ್ತಿತ್ವ

ಶ್ರೀ ಶಂಕರ ಭಗವತ್ಪಾದರ ಸಂಸ್ಕೃತ ಸಾಹಿತ್ಯದ ಕೆಲವು ಸ್ತೋತ್ರಗಳನ್ನು ಕನ್ನಡದಲ್ಲಿ

ಟೀಕಾರೂಪವಾಗಿ ಅನುವಾದಿಸಿರುವವರೂ ವೈದಿಕ ಶಾಸ್ತ್ರ ಗ್ರಂಥಗಳನ್ನು ಕನ್ನಡಕ್ಕೆ ತಂದಿರುವ ಕವಿಗಳೂ ಸಂಶೋಧಕರೂ ಆದ ಧಾರ್ಮಿಕ ವ್ಯಕ್ತಿಗಳೆನಿಸಿದ **ಶ್ರೀರಾಮ ತತ್ತ್ವ ಪರಾಯಣ ಬಿರುದಾಂಕಿತ ಬಿ.ಎಸ್. ಕಪನೀಪತಯ್ಯನವರು** (೧೯೦೨-೧೯೯೫) ಕನ್ನಡದ ತೆರೆಮರೆಯ ವಿದ್ವಾಂಸರಲ್ಲಿ ಒಬ್ಬರಾಗಿದ್ದಾರೆ.

ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿರುವ ಬೂಕನಕೆರೆ ಹೋಬಳಿಯ ಬುಕ್ಕನಕೆರೆ, ಪಾದದಬೆಟ್ಟ, ಬೋಳಾರೆ ರಂಗನಬೆಟ್ಟ, ಮನಮಂದಿ ತಿಟ್ಟು ಸ್ಥಾಣ್ವದ್ರಿ ಮೊದಲಾದ ಪ್ರದೇಶಗಳು ಪ್ರಸಿದ್ಧವಾಗಿದ್ದು ಮೈಸೂರಿನಿಂದ ೩೦ ಮೈಲಿ ದೂರದಲ್ಲಿವೆ.

ಪೂರ್ವಿಕರು

ವಿಜಯನಗರ ಸ್ಥಾಪನೆ ಆದ ಮೇಲೆ ೧೪೦೪-೧೪೦೫ರಲ್ಲಿ ಪಟ್ಟಕ್ಕೆ ಬಂದ ಎರಡನೆಯ ಬುಕ್ಕರಾಜ ತನ್ನ ಪೂರ್ವಿಕರ ಜನ್ಮಸ್ಥಳವಾದ ಬಾಳಗಂಚಿಯಲ್ಲಿ ಪ್ರತಿಷ್ಠೆ ಮಾಡಿದ ರಂಗನಾಥ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದನು. ದೊರೆಯ ಸಾಮಂತನಾದ ಬೊಮ್ಮನಾಯಕನು ಸ್ಥಾಣುತೀರ್ಥಕ್ಕೆ ಅಡ್ಡಗಟ್ಟೆ ಕಟ್ಟಿಸಿ ಬುಕ್ಕನಕೆರೆ (ಬೂಕನಕೆರೆ) ನಿರ್ಮಿಸಿದನು. ಇಮ್ಮಡಿ ಬುಕ್ಕರಾಜನ ಆಜ್ಞಾನುಸಾರ ಸ್ಥಾಣುಪುರಿ ಬುಕ್ಕರಾಜಪುರವೆಂಬ ಅಗ್ರಹಾರವನ್ನು ನಿರ್ಮಿಸಿದನು. ಬುಕ್ಕರಾಜಪುರ ನಿರ್ಮಿಸಿದ ಸಂದರ್ಭದಲ್ಲಿ ಬೊಬ್ಬೂರುಕಮ್ಮೆ ಸ್ಮಾರ್ತ ಬ್ರಾಹ್ಮಣ ಕುಟುಂಬಗಳು ೭೦, ಒಕ್ಕಲಶೆಟ್ಟಿ ಮನೆತನದವರು ೬೦, ಗಂಗಡಿಕಾರ ಒಕ್ಕಲಿಗೆ ಪಂಗಡದವರು ೧೦೦ ಕುಟುಂಬಗಳಿಗೆ ಭೂಮಿ ಕಾಣಿಗಳನ್ನು ನೀಡಿ ಅಲ್ಲಿಯೇ ನೆಲಸುವಂತೆ ಮಾಡಿದನು.

ಹೀಗೆ ನೆಲೆಗೊಳಿಸಿದ ಕುಟುಂಬಗಳ ಪೈಕಿ ರಂಗನಾಥ ದೇವಾಲಯದ ಪೂಜಾ ಕೈಂಕರ್ಯಗಳನ್ನು ನಿರ್ವಹಿಸಲು ಕರೆಸಿದ ಸ್ಮಾರ್ತ ಬ್ರಾಹ್ಮಣರ ಕುಟುಂಬಗಳ ಪೈಕಿ ಕಪನೀಪತಯ್ಯನವರ ಕುಟುಂಬವೂ ಒಂದಾಗಿತ್ತು. ಒಂದು ಕಾಲದಲ್ಲಿ ಆಂಧ್ರ ಪ್ರದೇಶದಲ್ಲಿ ಕ್ಷಾಮದ ಕಾರಣದಿಂದಲೋ ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಕಾರಣಗಳಿಂದಲೋ (ನಿರ್ದಿಷ್ಟ ಕಾರಣ ತಿಳಿಯದು) ಅನೇಕ ಆಂಧ್ರದ ಬ್ರಾಹ್ಮಣ ಕುಟುಂಬಗಳು ವಲಸೆ ಹೊರಟು ಕರ್ನಾಟಕದ ವಿವಿಧ ಭಾಗಗಳಲ್ಲಿ ನೆಲಸಿದವು. ಹಾಗೆ ಬಂದವರಲ್ಲಿ ಬಬ್ಬೂರು ಕಮ್ಮೆ ಸ್ಮಾರ್ತ ಬ್ರಾಹ್ಮಣರ ಪಂಗಡವು ಹೊಳೆನರಸೀಪುರ, ಅರಸೀಕೆರೆ, ಮಿರ್ಲೆ, ತರೀಕೆರೆ, ಬೆಳವಾಡಿ, ಕಣಕಟ್ಟೆ, ಬೆಟ್ಟದಪುರ ಮುಂತಾದ ಕಡೆಗಳಲ್ಲಿ ನೆಲಸಿದರು. ಆ ಪೈಕಿ ಕೆಲವರು ಬುಕ್ಕರಾಜಪುರದಲ್ಲಿ ಬಂದು ನೆಲೆಸಿ ರಂಗನಾಥನ ಪೂಜಾದಿಗಳನ್ನು ಊರಿನ ಧಾರ್ಮಿಕ ಕಾರ್ಯಗಳನ್ನು ನೆರವೇರಿಸುತ್ತಿದ್ದರು. ಈ ಪೈಕಿ ಕಪನೀಪತಯ್ಯನವರ ಪೂರ್ವಿಕರ ಕುಟುಂಬವೂ ಒಂದಾಗಿತ್ತು. ಬೂಕನಕೆರೆಯ ರಂಗನಾಥನನ್ನು ವಿಜಯನಗರದ ವಿದ್ಯಾರಣ್ಯರು ಬಾಳಗಂಚಿಗೆ ಬಂದು ಸ್ಥಾಪಿಸಿದರು ಎಂಬ ಪ್ರತೀತಿಯಿದೆ. ಅಷ್ಟೇ ಅಲ್ಲದೆ ಮಹಾತಪಸ್ವಿಗಳು, ವಿದ್ಯಾರಣ್ಯರ ಗುರುಗಳೂ ಆದ ವಿದ್ಯಾತೀರ್ಥರ ಜನ್ಮಸ್ಥಳವೂ ಬಾಳಗಂಚಿಯೇ ಎಂಬ ಐತಿಹ್ಯವಿದೆ. ಇಲ್ಲಿ

ಕಪನೀಪತಯ್ಯನವರ ಪೂರ್ವಜರು ಸಂಧ್ಯಾಮಂಟಪವೊಂದನ್ನು ಕಟ್ಟಿಸಿದ್ದರು. ಇದರ ಜ್ಞಾಪಕಾರ್ಥ ಬೂಕನಕೆರೆಯಲ್ಲಿ ಮದುವೆ, ಉಪನಯನ ಮುಂತಾದ ಶುಭಕಾರ್ಯಗಳಲ್ಲಿ 'ಸಂಧ್ಯಾಮಂಟಪದ ಅಗ್ರತಾಂಬೂಲ'ವನ್ನು ಕಪನೀಪತಯ್ಯನವರ ವಂಶಸ್ಥರಿಗೆ ನೀಡುತ್ತಿದ್ದರು.

ಪ್ರಾರಂಭಕಾಲದಲ್ಲಿ ಬೂಕನಕೆರೆಯ ಊರಲ್ಲಿ ಇದ್ದ ಮನೆತನಗಳು ಕಾರಣಾಂತರಗಳಿಂದ ಬೇರೆಬೇರೆ ಕಡೆಗೆ ಚೆದುರಿಹೋಗಿದ್ದರೂ ಆ ಜನರು ಊರಿನ ಅಭಿಮಾನವನ್ನು ತೊರೆದಿಲ್ಲ. ಊರಿನಲ್ಲಿರುವ ವೆಂಕಟರಮಣಸ್ವಾಮಿ, ರಂಗನಾಥ ಮುಂತಾದ ದೇವಸ್ಥಾನಗಳಿಗೆ ಬಂದು ಪೂಜಾದಿ ಸೇವಾ ಕೈಂಕರ್ಯಗಳನ್ನು ನಡೆಸುತ್ತಾರೆ.

ಬಿ.ಎಸ್. ಕಪನೀಪತಯ್ಯನವರು ೧೯೬೫ರಲ್ಲಿ ಆದಿಶೇಷ ಪರ್ಯಂಕಶಾಯಿಯಾದ ರಂಗನಾಥಮೂರ್ತಿಯನ್ನು ಮೈಸೂರು ಮಹಾರಾಜರಿಂದ ಪಡೆದು ಬೂಕನಕೆರೆಯ ರಂಗನಾಥ ದೇವಾಲಯದಲ್ಲಿ ಸ್ಥಾಪಿಸಿದ್ದಾರೆ. ೧೯೬೭ರಲ್ಲಿ ಅದಕ್ಕೆ ಸುಂದರ ಪ್ರಭಾವಳಿ ಮಾಡಿಸಿದ್ದಾರೆ.

ಇಂಥ ಭವ್ಯಪರಂಪರೆಯ ಮನೆತನಕ್ಕೆ ಸೇರಿದ ಬೂಕನಕೆರೆಯಲ್ಲಿ ಶಾಲಾ ಅಧ್ಯಾಪಕರಾಗಿ ಪ್ರಸಿದ್ಧರಾಗಿದ್ದ ಶ್ರೀಕಂಠಯ್ಯ-ಸುಬ್ಬಮ್ಮ ದಂಪತಿಗಳಿಗೆ ೫ ಜನ ಸಹೋದರರು, ೬ ಜನ ತಂಗಿಯರಿದ್ದ ಕುಟುಂಬದಲ್ಲಿ ೧೯೦೨ರಲ್ಲಿ ಜನಿಸಿದರು.

ಕಪನೀಪತಯ್ಯನವರು ಜನಿಸಿದ ಕಾಲದಲ್ಲಿ ಬೂಕನಕೆರೆ ಪ್ರಶಾಂತಬದುಕಿಗೆ ಹೆಸರಾಗಿತ್ತು. ಅಲ್ಲಿಯ ಜನರು ಕಷ್ಟಸಹಿಷ್ಣುಗಳಾಗಿದ್ದರು ಕಾರ್ಯತತ್ಪರರೂ ಶಾಂತಮನಸ್ಕರೂ ಆಗಿದ್ದರು. ಧಾರ್ಮಿಕರು ಬೆಳಗಿನ ವೇಳೆಯಲ್ಲಿ ಉಷಃಕಾಲಕ್ಕೆ ಮುಂಚೆ ಎದ್ದು ಸ್ನಾನಾದಿಗಳನ್ನು ಮಾಡಿ ದೇವತಾರ್ಚನೆ ಮಾಡುತ್ತಿದ್ದರು. ತೋಟ ಹೊಲಗಳಲ್ಲಿ ಜನರು ಕೆಲಸ ಮಾಡಿ ಮಧ್ಯಾಹ್ನ ಸುಖವಾಗಿ ಆರೋಗಣೆ ಮಾಡಿ ಸಂಜೆ ವೇಳೆಯಲ್ಲಿ ಜಗಲಿಗಳ ಮೇಲೆ ಒಟ್ಟಾಗಿ ಸೇರಿ ಭಾರತ, ರಾಮಾಯಣ ಮುಂತಾದ ಉದ್ಗ್ರಂಥಗಳನ್ನು ಓದಿಸಿ ಕೇಳುತ್ತಾ ಆನಂದದಿಂದ ಕಾಲ ಕಳೆಯುತ್ತಿದ್ದರು.

ಬಾಲ್ಯ-ಶಿಕ್ಷಣ-ಉದ್ಯೋಗ

ಕಪನೀಪತಯ್ಯನವರು ಬಾಲ್ಯದ ಶಾಲಾ ವಿದ್ಯಾಭ್ಯಾಸವನ್ನು ಬೂಕನಕೆರೆಯಲ್ಲಿ ಪೂರೈಸಿದರು. ಅನಂತರ ಹೈಸ್ಕೂಲ್ ವಿದ್ಯಾಭ್ಯಾಸಕ್ಕೆ ಮೈಸೂರಿಗೆ ಬಂದು ಎಂ.ವಿ. ಸೀತಾರಾಮಯ್ಯನವರ ತಂದೆಯವರ ಮನೆಯಲ್ಲಿ ಆಶ್ರಯ ಪಡೆದರು. ಮೈಸೂರಿನ ವೆಸ್ಲಿಯನ್ ಶಾಲೆಯಲ್ಲಿ ಹೈಸ್ಕೂಲ್ ವಿದ್ಯಾಭ್ಯಾಸ ಮುಗಿಸಿ ಮೈಸೂರು ಮಹಾರಾಜ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ೧೯೨೬ರಲ್ಲಿ ಬಿ.ಎ. ಪದವಿಯನ್ನು ಗಳಿಸಿದರು.

ಕಾಲೇಜು ವಿದ್ಯಾಭ್ಯಾಸ ಕಾಲದಲ್ಲಿ ಅವರಿಗೆ ಎಸ್. ರಾಧಾಕೃಷ್ಣನ್, ಬಿ.ಪಿ. ವಾಡಿಯಾ, ಬಿ.ಎಂ.ಶ್ರೀ., ಎನ್.ಎಸ್. ಸುಬ್ಬರಾವ್ ಮೊದಲಾದ ಅತಿರಥ ಮಹಾರಥ ವಿದ್ವಾಂಸರು

ಅಧ್ಯಾಪಕರಾಗಿದ್ದರು. ರಾಲೋ ಅವರು ಪ್ರಿನ್ಸಿಪಾಲರಾಗಿದ್ದರು. ಮಹಾರಾಜ ಕಾಲೇಜಿನ ಇತಿಹಾಸದಲ್ಲಿ ಸುವರ್ಣ ಕಾಲ ಅದು. ಅಂಥ ಕಾಲದಲ್ಲಿ ವಿದ್ಯಾರ್ಥಿ ಆಗಿ ಶಿಕ್ಷಣ ಪಡೆದವರು ಕಪನೀಪತಯ್ಯನವರು. ಕಾಲೇಜಿನ ವಿದ್ಯಾಭ್ಯಾಸ ಕಾಲದಲ್ಲಿ ವಿ.ಟಿ. ತಿರುನಾರಾಯಣ ಅಯ್ಯಂಗಾರ್, ತೀನಂಶ್ರೀ, ಪುತಿನ, ಪ್ರಖ್ಯಾತ ಮನೋರೋಗದ ವೈದ್ಯರಾದ ಗೋಪಾಲಸ್ವಾಮಿ, ನಿಕ್ಕಂ, ಅಗರಂ ರಂಗಯ್ಯ, ಚಿನ್ನಸ್ವಾಮಿ ಮುಂತಾದವರು ಕಪನೀಪತಯ್ಯನವರ ಸಹಪಾಠಿಗಳಾಗಿದ್ದರು. ವಿದ್ಯಾರ್ಥಿಗಳಾಗಿದ್ದಾಗಲೇ ಎಲ್‌ಎಸ್, ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಮನೆ ಪಾಠ ಹೇಳಿ ಖರ್ಚಿಗೆ ಹಣ ಒದಗಿಸಿ ಕೊಳ್ಳುತ್ತಿದ್ದರು. ೧೦-೧೫ ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಿದ್ದರು. ತಿಂಗಳಿಗೆ ೨ ರೂ. ಬರುತ್ತಿತ್ತು.

ಮಹಾರಾಜ ಕೊಲೆಜಿಯೆಟ್ ಶಾಲಾ ವಿದ್ಯಾರ್ಥಿ ಆಗಿದ್ದಾಗಲೇ ಶಾಲೆಯಿಂದ ಪ್ರಕಟವಾಗುತ್ತಿದ್ದ ಪತ್ರಿಕೆಯಲ್ಲಿ ಪದ್ಯಗಳನ್ನು ಬರೆಯುತ್ತಿದ್ದರು. ಮೊದಲಿನಿಂದಲೂ ಅವರಲ್ಲಿ ಕವಿತಾಶಕ್ತಿ ಮೂಡಿತ್ತು. ೧೯೨೦ರ ಶಾಲಾಪತ್ರಿಕೆಯ ಸಂಚಿಕೆಯಲ್ಲಿ ೫ ಷಟ್ಪದಿಗಳ 'ದೇವತಾ ಸ್ತುತಿ ಪಂಚಕ'ವೆಂಬ ಕವಿತೆಯೊಂದು ಪ್ರಕಟವಾಗಿತ್ತು. ಅವರ ಕಾವ್ಯರಚನಾಶಕ್ತಿ ಆ ಕಾಲಕ್ಕೇ ಹೇಗಿತ್ತು ಎಂಬುದಕ್ಕೆ ಈ ಪದ್ಯ ನಿದರ್ಶನವಾಗಿದೆ.

ವಾರಿಜಾಲಯೆ ದಿವಿಜವಂದಿತೆ
ಮಾರಜನಕನರಾಣಿ ಇಂದಿರೆ
ಕ್ಷೀರಸಾಗರ ಪುತ್ರಿ ಭಾಗ್ಯವನೀವ ಭಾರ್ಗವಿಯೆ
ಹೀರಮಣಿಗಳ ಜಾಲದಿಂದಲಿ
ಸಾರಗೊಂಡಿಹ ಗೃಹದೆ ವಾಸಿಪ
ನೀರೆ ಕರುಣಿಸು ಸತತ ಧನವನು ಭಕ್ತಜನಗಳಿಗೆ

ಬಿಎ ಡಿಗ್ರಿ ಪಡೆದ ನಂತರ ಕೃಷ್ಣರಾಜೇಂದ್ರ ಕೋ ಆಪರೇಟಿವ್ ಸೊಸೈಟಿಯ ಸ್ಥಾಪಕರಲ್ಲಿ ಒಬ್ಬರಾದ ಎಂ.ವಿ.ಸೀ. ಅವರ ತಂದೆಯವರಾದ ವೆಂಕಟದಾಸಪ್ಪನವರು ಅರಮನೆ ಕಚೇರಿಯಲ್ಲಿ ಕೆಲಸಕ್ಕೆ ಸೇರಿಸಿದರು. ೭-೧೦-೧೯೩೩ರಲ್ಲಿ ನೇಮಕಗೊಂಡ ಅವರು ಅಲ್ಲಿ ૩૫ ವರುಷಗಳ ಕಾಲ ಕಾರ್ಯನಿರ್ವಾಹಕರಾಗಿ ಸೇರಿ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಜಯಚಾಮರಾಜ ಒಡೆಯರ್ ಅವರ ಆಡಳಿತಾವಧಿಯಲ್ಲಿ ಸೇವೆ ಸಲ್ಲಿಸಿದರು.

ಶ್ರೀಯುತರಿಗೆ ನಾಟಕ ರಂಗದಲ್ಲೂ ಆಸಕ್ತಿ ಇತ್ತು. ವಿ. ಸುಬ್ಬಯ್ಯನಾಯ್ಡು ಅವರ ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿಯವರು ೧೯೪೯ರಲ್ಲಿ ಆಡಿದ ನಾಟಕಕ್ಕೆ ಕಂದಪದ್ಯಗಳನ್ನು ರಚಿಸಿಕೊಟ್ಟಿದ್ದರು. ಇದಕ್ಕಾಗಿ ಸುಬ್ಬಯ್ಯನಾಯ್ಡು ಅವರು ೨೯-೧೧-೧೯೪೯ರಲ್ಲಿ ಪತ್ರ ಬರೆದು ಕೃತಜ್ಞತೆಗಳನ್ನು ಸಮರ್ಪಿಸಿದ್ದಾರೆ.

ಕಪನೀಪತಯ್ಯನವರು ಕಾಲೇಜು ವಿದ್ಯಾಭ್ಯಾಸದ ಕಾಲದಲ್ಲಿ ಚಟುವಟಿಕೆಗಳಿಂದ ಕೂಡಿದ ವಿದ್ಯಾರ್ಥಿ ಆಗಿದ್ದರು. ಇದಕ್ಕೆ ಸಾಕ್ಷಿಯೆಂದರೆ ೨-೪-೧೯೨೬ರಲ್ಲಿ

ಪ್ರಿನ್ಸಿಪಾಲರಾಗಿದ್ದ ರಾಲೋ ಅವರ ಪತ್ರ. ಆ ಪತ್ರದಲ್ಲಿ ಇವರ ಬಗ್ಗೆ ಹೇಳಿರುವ ಮಾತುಗಳಿವು:

"ಹಿ ಡಿಡ್ ಗುಡ್‌ವರ್ಕ್ ಅಂಡ್ ಪ್ಲೆಯ್ಡ್ ಹೀಸ್ ಪಾರ್ಟ್ ಇನ್ ದಿ ವೇರಿಯಸ್ ಕಾಲೇಜ್ ಆಕ್ಟಿವಿಟೀಸ್, ಹಿ ಈಸ್ ಎ ಸ್ಟ್ರೈಟ್ ಫಾರ್‌ವರ್ಡ್, ರಿಲಯಬಲ್, ಅಂಡ್ ಲಯಬಲ್ ಮ್ಯಾನ್ ಅಂಡ್ ವಿಲ್ ಡು ವೆಲ್ ದಿ ವರ್ಕ್ ಎಂಟ್ರಸ್ಟ್ ಟು ಹಿಂ..." ಎಂದಿದ್ದಾರೆ.

ಶ್ರೀರಾಮಚಂದ್ರನ ಭಕ್ತರಾಗಿದ್ದ ಅವರು ಮಳವಳ್ಳಿಯಲ್ಲಿ ಮಗನ ಮನೆಯಲ್ಲಿದ್ದಾಗ ಸಂಸ್ಕೃತದ ಪ್ರಸಿದ್ಧ ಗ್ರಂಥಗಳಲ್ಲಿ ಒಂದಾದ ರಾಮಕರ್ಣಾಮೃತ ಕಾವ್ಯವನ್ನು ಕನ್ನಡಿಸಿದರು ಅವರಿಗೆ ಸಿಕ್ಕ ಪ್ರತಿ ಸಂಸ್ಕೃತ-ತೆಲುಗು ಪ್ರತಿ. ಅದನ್ನು ಆ ಮನೆಯಲ್ಲಿ ಶ್ರೀರಾಮಚಂದ್ರನ ಭಾರೀ ತೈಲಚಿತ್ರದ ಕೆಳಗೆ ಕುಳಿತು ರಚಿಸಿದರು. ಶೃಂಗೇರಿಯ ಜಗದ್ಗುರುಗಳಾದ ಶ್ರೀ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರ ದಿವ್ಯಾನುಗ್ರಹಕ್ಕೆ ಪಾತ್ರರಾಗಿದ್ದ ಕಪನೀಪತಯ್ಯನವರು ಅವರಿಂದ ಶಿವಪಂಚಾಕ್ಷರೀ ಮಂತ್ರದೀಕ್ಷೆ ಪಡೆದಿದ್ದರು. ಶಿವಾರಾಧಕರಾದ ಅವರು ಸೌಂದರ್ಯ ಲಹರೀ, ಶಿವಾನಂದಲಹರೀ ದಕ್ಷಿಣಾಮೂರ್ತಿ ಸ್ತೋತ್ರ ಮೊದಲಾದ ಸ್ತೋತ್ರಗಳನ್ನು ಕನ್ನಡಕ್ಕೆ ಟೀಕಾಸಹಿತ ಅನುವಾದಿಸಿದ್ದಾರೆ.

ಅರಮನೆಯ ಕಚೇರಿಯ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸಿದ ಮೇಲೆ ೧೯೫೩ರಲ್ಲಿ ಉದ್ಯೋಗದಿಂದ ನಿವೃತ್ತರಾದರು. ಜಯಚಾಮರಾಜೇಂದ್ರ ಒಡೆಯರ್ ಅವರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದ ಕಪನೀಪತಯ್ಯನವರು ಒಡೆಯರ ಪಟ್ಟಾಭಿಷೇಕದ ವಾರ್ಷಿಕ ಉತ್ಸವದಲ್ಲಿ ಪ್ರತಿವರ್ಷವೂ ಅಭಿನಂದನಾ ಸ್ತೋತ್ರವನ್ನು ರಚಿಸುತ್ತಿದ್ದರು. ಅದನ್ನು ಸಂಗೀತ ವಿದ್ವಾಂಸರು ಹಾಡುತ್ತಿದ್ದರು.

ಅರಮನೆಯ ಕಚೇರಿಯಲ್ಲಿ ಮಿಲಿಟೆರಿ ಭಕ್ಷಿಯವರ ಆಫೀಸಿನಲ್ಲಿ ಮೊಖ್ತೇಸರ ರಾಗಿಯೂ ಅನಂತರ ಅರಮನೆ ಕಚೇರಿಯಲ್ಲಿ ಮ್ಯಾನೇಜರ್ ಆಗಿ ಅವರು ಕಾರ್ಯನಿರ್ವಹಿಸಿ ನಿವೃತ್ತರಾದ ಮೇಲೆ ಹಲವಾರು ಸಂಘ ಸಂಸ್ಥೆಗಳಲ್ಲಿ ಸೇವೆ ಸ್ಲಲ್ಲಿಸಿದರು. ಮೈಸೂರು ಹಳೇ ಅಗ್ರಹಾರದ ಶ್ರೀಕೃಷ್ಣರಾಜೇಂದ್ರ ಕೋ ಆಪರೇಟಿವ್ ಬ್ಯಾಂಕಿನಲ್ಲಿ ಡೈರಕ್ಟರ್ ಆಗಿಯೂ ಗೌರವ ಕಾರ್ಯದರ್ಶಿಗಳಾಗಿಯೂ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಅಭಿನವ ಶಂಕರಾಲಯದ ಶಂಕರ ಜಯಂತಿ ಮಂಡಳಿಯಲ್ಲಿಯೂ ಕಾರ್ಯನಿರ್ವಹಿಸಿದ್ದಾರೆ.

ಇವರು ಸಂಘ ಸಂಸ್ಥೆಗಳಿಗೆ ಸಲ್ಲಿಸಿದ ಸಾರ್ವಜನಿಕ ಸೇವೆ ಹಾಗೂ ಸಾಹಿತ್ಯ ಸೇವೆಗೆ ಮೆಚ್ಚಿ ಅನೇಕ ಗಣ್ಯರೂ ಸಂಸ್ಥೆಗಳೂ ಪ್ರಶಸ್ತಿಗಳನ್ನು ನೀಡಿ ಸನ್ಮಾನಿಸಿದ್ದಾರೆ. ಇವರಿಗೆ ಸಂದ ಪ್ರಶಸ್ತಿಗಳಲ್ಲಿ ಶ್ರೀರಾಮತತ್ತ್ವ ಪರಾಯಣ, ಗುರುಭಕ್ತಿ ಪ್ರಿಯ, ಪುಣ್ಯಕ್ಷೇತ್ರ ಪೂರ್ವಮಹಿಮಾ ನಿರೂಪಣಾ ಚತುರ ಮುಂತಾದ ಪ್ರಶಸ್ತಿಗಳು ವಿಶಿಷ್ಟವಾದವು.

ಸಂಸ್ಕೃತ ವೈದಿಕ ಸಾಹಿತ್ಯದಲ್ಲಷ್ಟೇ ಅಲ್ಲದೆ ಕನ್ನಡ ಸಾಹಿತ್ಯದಲ್ಲೂ ವಿಶೇಷ ಆಸಕ್ತಿ ಹೊಂದಿದ್ದು ಹಳಗನ್ನಡ ಗ್ರಂಥಗಳ ಅಭ್ಯಾಸ ಮಾಡಿದ್ದರು. ಉಪನ್ಯಾಸಗಳನ್ನು

ನೀಡುತ್ತಿದ್ದರು. ರನ್ನನ ದುರ್ಯೋಧನನನ್ನು ಕುರಿತು ಗುಂಡಪ್ಪನವರು ತಪ್ಪದೆ ನಡೆಸುತ್ತಿದ್ದ ಚಿಂತಾಮಣಿಯ ಸಾಹಿತ್ಯಕೂಟದಲ್ಲಿ ವಿಶೇಷ ಉಪನ್ಯಾಸ ನೀಡಿದ್ದಾರೆ. ಪಂಡಿತೋತ್ತಮರಾದ ವೈದಿಕ ಧರ್ಮಾನುಷ್ಠಾನಿಗಳಾದ ಮಲ್ಲಿಕೆರೆ ಸುಬ್ರಹ್ಮಣ್ಯ ಶಾಸ್ತ್ರಿ, ಪಂಡಿತರಾಜ ನವೀನಂ ವೆಂಕಟೇಶ ಶಾಸ್ತ್ರಿ, ಅರಮನೆ ವೇದಾಂತರತ್ನಂ ರಾಮಚಂದ್ರ ಸೋಮಯಾಜಿ ವಿಠಲಶಾಸ್ತ್ರಿಗಳು ಇವರುಗಳಲ್ಲಿ ಅದ್ವೈತ ಅಧ್ಯಯನ ಮಾಡಿದರು. ಈ ಘನವಿದ್ವಾಂಸರೆಲ್ಲ ಇವರ ವೈದಿಕ ಧರ್ಮಾನುಷ್ಠಾನ, ಗ್ರಂಥರಚನೆ, ಸಾಹಿತ್ಯ ಮೆಚ್ಚಿ ಪ್ರಶಂಸಿದ್ದಾರೆ, ಪ್ರಶಂಸಾ ಪತ್ರಗಳನ್ನು ನೀಡಿದ್ದಾರೆ.

ವ್ಯಕ್ತಿತ್ವ

ದೈವಭಕ್ತರಾದ ಕಪನೀಪತಯ್ಯನವರು ಪ್ರತಿನಿತ್ಯವೂ ದೇವತಾರ್ಚನೆ, ಧರ್ಮ ಗ್ರಂಥಗಳ ಪಾರಾಯಣ ಮಾಡುತ್ತಿದ್ದರು. ಭಗವದ್ಗೀತೆ, ಲಲಿತಾ ಸಹಸ್ರನಾಮ, ವಿಷ್ಣು ಸಹಸ್ರನಾಮ, ರಾಮಾಯಣ, ಪಾರಾಯಣ ಮಾಡುತ್ತಿದ್ದರು. ನವರಾತ್ರಿ, ರಾಮನವಮಿ ಶಂಕರ ಜಯಂತಿಗಳನ್ನು ಆಪ್ತಮಿತ್ರರನ್ನು ಬಂಧು ಬಾಂಧವರನ್ನು ಕರೆದು ಆಚರಿಸುತ್ತಿದ್ದರು.

ಶಂಕರ ಮಠದಲ್ಲಿ ನಡೆಯುತ್ತಿದ್ದ ಪ್ರವಚನ, ವಿದ್ವತ್‌ಗೋಷ್ಠಿಗಳಿಗೆ ತಪ್ಪದೆ ವರ್ಷಗಟ್ಟಲೆ ಹಾಜರಾಗುತ್ತಿದ್ದರು. ವೇದಾಂತ ಪ್ರವಚನಗಳನ್ನಂತೂ ಒಂದನ್ನೂ ಬಿಡದೆ ಕೇಳುತ್ತಿದ್ದರು. ಸುಮಾರು ೩೦ ವರುಷಗಳಿಗಿಂತ ಮಿಗಿಲಾಗಿ ವೇದಾಂತ ಶ್ರವಣ ಮಾಡಿದ ಹಿರಿಮೆ ಅವರದು.

ನಿವೃತ್ತರಾದ ಮೇಲೂ ಅವರ ವ್ಯಾಸಂಗ ನಿಲ್ಲಲಿಲ್ಲ. ಸದಾ ಅಧ್ಯಯನ ನಿರತರಾಗಿದ್ದರು. ಅರಮನೆ ಲೈಬ್ರರಿ, ಓರಿಯಂಟಲ್ ಲೈಬ್ರರಿಗಳಲ್ಲಿ ಬೆಳಗಿನಿಂದ ಸಂಜೆಯವರೆಗೆ ಗ್ರಂಥಾಭ್ಯಾಸ ಮಾಡುತ್ತಿದ್ದರು. ಎಷ್ಟೋ ಸಲ ಕಚೇರಿ ಸಿಬ್ಬಂದಿಯವರು 'ಬಾಗಿಲು ಹಾಕುವ ಹೊತ್ತಾಯಿತು ಸ್ವಾಮಿ' ಎಂದು ತಿಳಿಸಬೇಕಾಗಿತ್ತು, ಅಷ್ಟರಮಟ್ಟಿಗೆ ಅಧ್ಯಯನ ನಿರತರಾಗುತ್ತಿದ್ದರು. ಕೇವಲ ಧಾರ್ಮಿಕ ಗ್ರಂಥಗಳನ್ನಷ್ಟೇ ಅಲ್ಲದೆ ಇತಿಹಾಸದ ಗ್ರಂಥಗಳ ಅಧ್ಯಯನದಲ್ಲಿ ಅವರಿಗೆ ವಿಶೇಷ ಆಸಕ್ತಿ ಇತ್ತು. ಇದಕ್ಕೆ ಸಾಕ್ಷಿಯೆಂದರೆ ಅವರು ಬರೆದಿರುವ ಮೈಸೂರು ರಾಜಸಿಂಹಾಸನ, ಕಳಲೆ ಅರಸರ ಹಾಗೂ ದಳವಾಯಿಗಳ ಸಂಕ್ಷಿಪ್ತ ಚರಿತ್ರೆ, ಸ್ಥಾಣುಪುರಿ ವೆಂಕಟೇಶ ವೈಭವಂ, ಸ್ಥಾಣ್ವದ್ರಿ ರಂಗನಾಥನ ಮಹಿಮೆ, ಬಬ್ಬೂರುಕಮ್ಮೆ ಯಶೋಡಿಂಡಿಮ ಮುಂತಾದ ಗ್ರಂಥಗಳಲ್ಲಿ ಇವರ ಸಂಶೋಧನಾ ಶಕ್ತಿಯನ್ನು ಗುರುತಿಸಬಹುದಾಗಿದೆ.

ಜ್ಯೋತಿಷ್ಯ ಅವರ ಆಸಕ್ತಿಯ ಇನ್ನೊಂದು ಕ್ಷೇತ್ರವಾಗಿತ್ತು. ಚೆನ್ನಿಗರಾಯ ಪುರಾಣಿಕರು ಎಂಬುವರಲ್ಲಿ ಜ್ಯೋತಿಷ್ಯ ಕಲಿತರು. ನಿವೃತ್ತರಾದ ಮೇಲೆ ಆ ಬಗ್ಗೆ ವಿಶೇಷ ಅಧ್ಯಯನ ಮಾಡಿದರು. ಆದರೆ ಅದನ್ನು ವೃತ್ತಿಯಾಗಿ ಮಾಡಿಕೊಳ್ಳಲಿಲ್ಲ. ಕೇವಲ ಹವ್ಯಾಸವಾಗಿಟ್ಟುಕೊಂಡಿದ್ದರು ಆಸಕ್ತರಿಗೆ ಜಾತಕ ರಚಿಸಿಕೊಡುತ್ತಿದ್ದರು. ಲಗ್ನ ನಿರ್ಣಯ ಮಾಡಿಕೊಡುತ್ತಿದ್ದರು.

ಕೇವಲ ವೇದಾಂತದ ಅಧ್ಯಯನದಲ್ಲಷ್ಟೇ ಅಲ್ಲದೆ ವೈದಿಕ ಧರ್ಮದ ಅನುಷ್ಠಾನದಲ್ಲೂ ನಿಷ್ಣಾತರಾಗಿದ್ದರು. ಅವರು ಸದಾ ಹೇಳುತ್ತಿದ್ದ ಮಾತಿದು:

ಪುಸ್ತಕಾನಾಂ ಸಹಸ್ರೇಣ ಶ್ಲೋಕನಾಮಾಯುತೇನ ವಾ
ಅನುಷ್ಠಾನವಿಹೀನಸ್ಯ ತಸ್ಯಾ ಲಾಭೋ ನರಸ್ಯ ಹೀ ॥

[ಸಾವಿರ ಪುಸ್ತಕಗಳನ್ನು ಓದಿದರೂ ಹತ್ತು ಸಾವಿರ ಶ್ಲೋಕ (ಆಯುತ) ತಿಳಿದಿದ್ದರೂ ಅನುಷ್ಠಾನವಿಲ್ಲದವನಿಗೆ ಗ್ರಂಥಾಭ್ಯಾಸದಿಂದ ಲಾಭವಿಲ್ಲ.]

ಅನುಷ್ಠಾನದಲ್ಲಿ ಅವರಿಗಿದ್ದ ಆಸಕ್ತಿ ಮತ್ತು ಇತರರು ಅನುಷ್ಠಾನ ಮಾಡಲು ನೆರವಾಗಬೇಕೆಂಬ ಅವರ ಪ್ರಯತ್ನ ಸೇವೆಗಳಿಗೆ ಯಾಜುಷ-ಶ್ರಾದ್ಧ ಮಂತ್ರ ಅನುಷ್ಠಾನ, ಅದ್ವೈತ ಮತ್ತು ಯೋಗಶಾಸ್ತ್ರ, ಮಗನ ಷಷ್ಟ್ಯಬ್ಧ ಸಂದರ್ಭದಲ್ಲಿ ರಚಿಸಿಕೊಟ್ಟ ಉಗ್ರರಥಶಾಂತಿ ಪ್ರಯೋಗದ ನಕ್ಷೆಸಹಿತವಾದ ಮಂತ್ರಗಳ ಗ್ರಂಥ ಸಾಕ್ಷಿಯಾಗಿವೆ. ಎಡಗಡೆ ಸಂಸ್ಕೃತ ಮಂತ್ರ ಬಲಗಡೆ ಕನ್ನಡದಲ್ಲಿ ಆಚರಿಸುವ ಬಗ್ಗೆ ವಿವರಣೆ ನೀಡಿರುವ ಈ ಶ್ರಾದ್ಧ ಗ್ರಂಥದಂಥ ಸ್ವಯಂಬೋಧೆ ಗ್ರಂಥ ಇನ್ನೊಂದು ಕನ್ನಡದಲ್ಲಿಲ್ಲ. ಧಾರ್ಮಿಕ ಪೂಜಾವಿಧಾನಗಳ ಬಗ್ಗೆ ಜನಸಾಮಾನ್ಯರಿಗೆ ಮಾರ್ಗದರ್ಶನ ಮಾಡುತ್ತಿದ್ದರು.

ಇಷ್ಟು ದೊಡ್ಡ ವಿದ್ವಾಂಸರಾದ ಅವರು ಪುಸ್ತಕದ ಓದಿಗಿಂತ ಪ್ರವಚನಗಳ ಶ್ರವಣ, ವಿದ್ವಾಂಸರೊಂದಿಗೆ ಸಂವಾದ ಮಾಡಿ ಕಲಿತದ್ದೇ ಹೆಚ್ಚು. ಕನ್ನಡದಲ್ಲಿದ್ದ ಸಂಸ್ಕೃತ ಗ್ರಂಥಗಳನ್ನು ವಿಶೇಷವಾಗಿ ಅಭ್ಯಾಸ ಮಾಡಿದ ಅವರಿಗೆ ದೇವನಾಗರೀ ಲಿಪಿಯ ಪರಿಚಯ ಇರಲಿಲ್ಲ ಎಂಬುದು ಸೋಜಿಗದ ಸಂಗತಿಯೇ ಆದರೂ ನಿಜದ ಸಂಗತಿ.

ಹುಟ್ಟೂರಿನಲ್ಲಿ ಸೇವೆ

ನಮ್ಮಲ್ಲಿ ಅನೇಕರು ತಮ್ಮ ಹಾಗೂ ಪೂರ್ವಜರ ಹುಟ್ಟೂರನ್ನು ಕುಲದೇವರನ್ನು ಮರೆತೇ ಬಿಡುತ್ತಾರೆ ಅಥವಾ ಆಸಕ್ತಿ ಹೊಂದಿರುವುದಿಲ್ಲ ನಿಮ್ಮ ಮನೆದೇವರು ಯಾರು? ಹುಟ್ಟೂರು ಯಾವುದು? ಎಂದು ಕೇಳಿದಾಗ ಹೇಳಿಕೊಳ್ಳುವುದಷ್ಟೆ ಅವರ ಕೆಲಸ, ಆ ಬಗ್ಗೆ ಏನನ್ನೂ ಮಾಡುವುದಿಲ್ಲ. ಆದರೆ ಕಪನೀಪತಯ್ಯನವರು ತಮ್ಮ ಪೂರ್ವಜರನ್ನಾಗಲೀ ಹುಟ್ಟೂರನ್ನಾಗಲೀ ಮರೆತವರಲ್ಲ. ಸಾಕಷ್ಟು ಸೇವೆಯನ್ನು ಅವರ ಪೂರ್ವಜರ ಹಾಗೆ ಸಲ್ಲಿಸಿದ್ದಾರೆ.

ಬೂಕನಕೆರೆ ಬೋಳಾರ ರಂಗನಬೆಟ್ಟದಲ್ಲಿ ಇರುವ ಉದ್ಭವ ರಂಗನಾಥನ ಲಿಂಗಮೂರ್ತಿ ಹಿಂದುಗಡೆ ಶ್ರೀರಂಗನಾಥನ ಆದಿಶೇಷ ಪರ್ಯಂಕಶಾಯಿ ಶಿಲಾಮೂರ್ತಿಯನ್ನು ಅರಮನೆಯಿಂದ ಪಡೆದು ತಂದು ಪ್ರತಿಷ್ಠೆ ಮಾಡಿದ್ದಾರೆ. ಅದಕ್ಕೆ ಸುಂದರವಾದ ಪ್ರಭಾವಳಿ ಮಾಡಿಸಿದ್ದಾರೆ. ಆ ಸ್ಥಳದ ಮಹಾತ್ಮೆಯ ಬಗೆಗೆ ಸ್ಥಾಣ್ವದ್ರಿ ಕ್ಷೇತ್ರ ಮಹಿಮೆ ಎಂಬ ಗ್ರಂಥವನ್ನು ಬರೆದು ಅಚ್ಚಿಸಿ ಉಚಿತವಾಗಿ ಹಂಚಿದ್ದಾರೆ. ಬೂಕನಕೆರೆ ಸ್ಥಳದ ಇತಿಹಾಸ ಬಗ್ಗೆ ಹಾಗೂ ಬಬ್ಬೂರುಕಮ್ಮೆ ಜನಾಂಗದ ಚರಿತ್ರೆಯ ಗ್ರಂಥವನ್ನು ಬರೆದಿದ್ದಾರೆ. ಹೀಗೆ ಹಲವಾರು ರೀತಿಯಲ್ಲಿ ಹುಟ್ಟೂರಿನ ಸೇವೆ ಮಾಡಿದ್ದಾರೆ.

ಎಂ.ವಿ. ಸೀತಾರಾಮಯ್ಯನವರ ಭಾವಂದಿರೇ ಬಿ.ಎಸ್. ಕಪನೀಪತಯ್ಯನವರು. ಇಬ್ಬರೂ ವಿದ್ವಾಂಸರೂ ಸಾಹಿತಿಗಳೂ ಆಗಿದ್ದರಿಂದ ಇಬ್ಬರಲ್ಲೂ ನಿಕಟ ಸ್ನೇಹವಿತ್ತು. ಎಂವಿಸೀ ಅವರು ತಾವು ಬರೆದ ಗ್ರಂಥಗಳನ್ನು ಮೊದಲು ಕಪನೀಪತಯ್ಯನವರಿಗೆ ಕೊಡುತ್ತಿದ್ದರು. ಕಪನೀಪತಯ್ಯನವರ ಬಗ್ಗೆ ವಿಶೇಷವಾದ ಶ್ರದ್ಧಾಭಕ್ತಿ ಗೌರವಗಳು ಎಂವಿಸೀ ಅವರಿಗಿತ್ತು. ತಮ್ಮ ಗ್ರಂಥರಚನೆಗೆ ಹಲವಾರು ವಿಧದಲ್ಲಿ ನೆರವನ್ನು ತಮ್ಮ ಭಾವನವರಿಂದ ಎಂವಿಸೀ ಪಡೆದಿದ್ದಾರೆ. ಉದಾಹರಣೆಗೆ, ಎಂವಿಸೀ ಅವರು ಸಂಪಾದಿಸಿದ **'ನಾರಾಯಣದಾಸರ ಕೀರ್ತನ ಕುಸುಮಾಂಜಲಿ'** ಗ್ರಂಥದಲ್ಲಿ "ಕಪನೀಪತಯ್ಯನವರು ಶ್ರೀ ಶೃಂಗೇರಿ ಜಗದ್ಗುರು ಪರಂಪರೆಯ ವಿವರಗಳನ್ನು ಅರಮನೆಯ ಸರಸ್ವತೀ ಭಂಡಾರದ ದಾಖಲೆಗಳಿಂದ ದೊರಕಿಸಿಕೊಟ್ಟಿದ್ದಾರೆ" ಎಂದಿದ್ದಾರೆ.

ಎಂವಿಸೀ ಅವರು ತಾವು ಸಂಪಾದಿಸಿದ ಅರ್ಚನಾ ಗ್ರಂಥದಲ್ಲಿ "ಕೀರ್ತನೆಗಳಿಗೆ ಟಿಪ್ಪಣಿಗಳನ್ನು ಬರೆಯುವುದರಲ್ಲಿ ಅವರಿಂದ ನನಗೆ ದೊರೆತಿರುವ ಸಹಾಯ ಅಪಾರವಾದುದು. ಇವರ ಉಪಕಾರವನ್ನು ಕೃತಜ್ಞತೆಯಿಂದ ಸ್ಮರಿಸಿ ಅವರಿಗೆ ಭಕ್ತಿಪೂರ್ವಕ ನಮಸ್ಕಾರಗಳನ್ನು ಸಮರ್ಪಿಸುತ್ತೇನೆ" ಎಂದು ಹೇಳಿದ್ದಾರೆ. ವೇದಬ್ರಹ್ಮಶ್ರೀ ಎಂದು ಅವರನ್ನು ಸಂಬೋಧಿಸಿದ್ದಾರೆ.

ಇಬ್ಬರೂ ಸೇರಿದಾಗಲೆಲ್ಲ ಸಾಹಿತ್ಯ, ವೇದಾಂತದ ಬಗ್ಗೆ ಚರ್ಚಿಸುತ್ತಿದ್ದರು, ಇದು ಒಂದು ವಿದ್ವತ್‌ಗೋಷ್ಠಿಯೇ ಆಗುತ್ತಿತ್ತು. ಇವರಿಬ್ಬರ ಅಪ್ರಕಟಿತ ಗ್ರಂಥಗಳಾದ ಬಿ.ಎಸ್. ಕಪನೀಪತಯ್ಯನವರ ಸೌಂದರ್ಯಲಹರೀ ಟೀಕೆ, ಎಂವಿಸೀ ಅವರ ಸೌಂದರ್ಯ ಲಹರಿಯ ಪದ್ಯಾನುವಾದ ಒಟ್ಟಿಗೆ ಪ್ರಕಟವಾಗುತ್ತಿರುವುದು ಕನ್ನಡಕ್ಕೆ ಔಚಿತ್ಯಪೂರ್ಣ ಕೊಡುಗೆ ಆಗಿದೆ.

೧೯೦೨ರಲ್ಲಿ ಜನಿಸಿ ೯೩ ವರ್ಷಗಳ ಸಾರ್ಥಕ ಜೀವನ ನಡೆಸಿದ ಕಪನೀಪತಯ್ಯನವರು ಅಲ್ಪಕಾಲದ ಅನಾರೋಗ್ಯದಿಂದ ೧೪.೩.೧೯೯೫ರಲ್ಲಿ ದಿವಂಗತರಾದರು.

ವೈದಿಕ ಧರ್ಮದಲ್ಲಿ ಶ್ರದ್ಧಾವಂತರಾದ ಅವರು ಅಂತ್ಯಕಾಲದಲ್ಲಿ ಗಂಗಾಜಲ ಸೇವಿಸಬೇಕೆಂದು ಆಶಿಸಿದ್ದರು. ಅದಕ್ಕಾಗಿ ಆ ಸಮಯಕ್ಕೆ ಗಂಗಾಜಲ ಲಭ್ಯವಾಗುತ್ತದೋ ಇಲ್ಲವೋ ಎಂದು ಭಾವಿಸಿ ತಮ್ಮ ಬಳಿಯಲ್ಲಿಯೇ ಒಂದು ಗಂಗಾಸ್ಥಾಲಿಯನ್ನು, ಸೀಲ್ ಮಾಡಿದ ಸ್ಥಾಲಿಯ ಮುಚ್ಚಳವನ್ನು ಒಡೆಯಲು ಒಂದು ಮೊಳೆ ಮತ್ತು ಕಲ್ಲನ್ನು ಹತ್ತಿರದಲ್ಲಿಟ್ಟುಕೊಂಡಿದ್ದರು.

[ಕಪನೀಪತಯ್ಯನವರು ಬರೆದ ಗ್ರಂಥಗಳನ್ನು ಒದಗಿಸಿ ಅವರ ಜೀವನವೃತ್ತಾಂತದ ಬಗ್ಗೆ ಅವರ ಜ್ಯೇಷ್ಠಪುತ್ರರಾದ ಬಿ. ಶ್ರೀಕಂಠಯ್ಯ ಮತ್ತು ಅವರ ಧರ್ಮಪತ್ನಿ ಇಂದಿರಾ ಅವರು ಅನೇಕ ಸಂಗತಿಗಳನ್ನು ತಿಳಿಸಿ ಉಪಕರಿಸಿದ್ದಾರೆ. ಅವರಿಗೆ ಸಂಪಾದಕನು ಕೃತಜ್ಞನಾಗಿದ್ದಾನೆ]

ಬಿ.ಎಸ್. ಕಪನೀಪತಯ್ಯನವರು ಒಳ್ಳೆಯ ಬರಹಗಾರರು. ಧಾರ್ಮಿಕ ಸಾಹಿತ್ಯ ಮತ್ತು ಇತಿಹಾಸ ಗ್ರಂಥಗಳ ರಚನೆ ಅವರ ಆಸಕ್ತಿ ಕ್ಷೇತ್ರ, ಅವರು ರಚಿಸಿದ ಗ್ರಂಥಗಳೆಲ್ಲ ಪ್ರಕಟವಾಗಿಲ್ಲ. ಪ್ರಕಟವಾಗಿರುವ ಗ್ರಂಥಗಳ ವಿವರ ಹೀಗಿದೆ :

೧. ಅದ್ವೈತ ವೇದಾಂತ ಅದರಲ್ಲಿ ಯೋಗಶಾಸ್ತ್ರದ ನಿಲುವು (೨ ಭಾಗಗಳು)

ಪ್ರ : ಸೇವಾಸದನ ಶ್ರೀ ಚಿದಂಬರಾಶ್ರಮ ಗುಬ್ಬಿ, ತುಮಕೂರು ಜಿಲ್ಲೆ. ಇ ೧೯೯೭, ಭಾಗ-೧, ೯೬ ಪುಟಗಳು, ಭಾಗ-೨, ೧೨೪ ಪುಟಗಳು, ಒಟ್ಟು ೨೨೦ ಪುಟಗಳು.

ವಿಷಯ: ಭಾಗ-೧ರಲ್ಲಿ ಸಂಗ್ರಹವಾಗಿ ಅದ್ವೈತ ತತ್ತ್ವಸಾರವನ್ನು ತಿಳಿಸಿದೆ ಜಗತ್ತಿನ ಸೃಷ್ಟಿ, ಪಂಚಭೂತಗಳು, ಪಂಚೀಕರಣ ಅವಸ್ಥಾತ್ರಯ, ಜೀವೇಶ್ವರ ನಿರೂಪಣೆ, ಸಾಧನ ಚತುಷ್ಟಯ, ಷಡ್ವಿಧಲಿಂಗ, ಜೀವನ್ಮುಕ್ತಸ್ಥಿತಿ, ಪ್ರಾರಬ್ಧಕರ್ಮ, ಚಕ್ರಾನುಭವ ಮತ್ತು ಕುಂಡಲಿನೀ ಶಕ್ತಿ, ಸಗುಣೋಪಾಸನೆ ಮುಂತಾದ ವಿಷಯಗಳನ್ನು ನಿರೂಪಿಸಿದೆ.

ಭಾಗ-೨ರಲ್ಲಿ ಯೋಗಶಾಸ್ತ್ರದ ಹಿರಿಮೆಯನ್ನು ಅದರಲ್ಲೂ ಮುಖ್ಯವಾಗಿ ಅಷ್ಟಾಂಗ ಯೋಗಗಳ ಅಗತ್ಯವು ಅದ್ವೈತ ವೇದಾಂತಕ್ಕೆ ಎಷ್ಟರಮಟ್ಟಿಗೆ ಇದೆಯೆಂದು ತಿಳಿಸಿ, ತತ್ತ್ವಜ್ಞಾನ, ಮನೋನಾಶ, ವಾಸನಾಕ್ಷಯ, ಸಮಕಾಲ ಅನುಷ್ಠಾನ, ಗೀತಾ ಶಾಸ್ತ್ರದಲ್ಲಿ ಯೋಗಕ್ಕೆ ಇರುವ ಮನ್ನಣೆ, ಅಷ್ಟಾಂಗಯೋಗಕ್ಕೆ ಯೋಗವಾಶಿಷ್ಠ, ಸೂತಸಂಹಿತೆ ಮುಂತಾದ ಅನೇಕ ಸ್ಮೃತಿ ಪುರಾಣೇತಿಹಾಸಗಳು ಕೊಟ್ಟ ಪ್ರಾಶಸ್ತ್ಯವನ್ನು ವಿವರಿಸಲಾಗಿದೆ.

೨. ಶ್ರೀವಿದ್ಯಾರಣ್ಯರ ಅಧ್ಯಾತ್ಮಚರಿತ್ರೆ ಮತ್ತು ಬ್ರಹ್ಮವಿದಾಶೀರ್ವಾದ ಪದ್ಧತಿ (ಸಂಸ್ಕೃತ ಗ್ರಂಥಾನುವಾದ, ೫೩ ಶ್ಲೋಕಗಳು).

ಪ್ರ: ಲೇಖಕರು, ಮೈಸೂರು, ಪುಟಗಳು ೨೮, ಇಸವಿ ೧೯೭೦?

ವಿದ್ಯಾರಣ್ಯರ ಸಂಕ್ಷಿಪ್ತ ಚರಿತ್ರೆಯನ್ನು, ವಿದೇಹ ಕೈವಲ್ಯವನ್ನು ಕುರಿತು ಬರೆಯಲಾಗಿದೆ. ವಿದ್ಯಾರಣ್ಯರು ರಚಿಸಿದ ಮೂಲ ಶ್ಲೋಕಗಳು ಮತ್ತು ಅನುವಾದವಿದೆ. ಪುಟ್ಟ ಗ್ರಂಥವಾದರೂ ಮಹತ್ವದ ಗ್ರಂಥ.

೩. ಶಿವಶಕ್ತ್ಯಾಧಿಕಂ

ಪ್ರ: ನಂದಿನಿ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಸಂಸ್ಥೆ, ಮೈಸೂರು, ೧೯೯೩, ಪುಟಗಳು ೧೪೮.

ಈ ಗ್ರಂಥದಲ್ಲಿ ರುದ್ರಮಂತ್ರಾತ್ಮಕ ರುದ್ರ, ಶಿವಪಂಚಾಕ್ಷರೀ, ಶ್ರೀ ಚಮಕ ಪ್ರಶ್ನಃ, ಪರಾಶಕ್ತಿ ಎಂಬ ೪ ಲೇಖನಗಳಿವೆ. ಶ್ರೀ ರುದ್ರ ಪ್ರಶ್ನಃ, ಸಸ್ವರ ಚಮಕಃ, ಉತ್ತರನ್ಯಾಸ, ದುರ್ಗಾಸೂಕ್ತಂ ಎಂಬ ೪ ಸ್ತೋತ್ರಗಳಿವೆ. ಬಾಲ್ಯಸ್ನೇಹಿತರಾಗಿದ್ದು ಸಹೋದ್ಯೋಗಿಗಳಾಗಿದ್ದು ಸದಾ ಒಡನಾಡಿಗಳಾಗಿದ್ದ ಶ್ರೀ ಎಂ. ಗಂಗಾಧರಶಾಸ್ತ್ರಿ ಅವರಿಗೆ ಈ ಗ್ರಂಥವನ್ನು ಅರ್ಪಿಸಿದ್ದಾರೆ.

೪. ಸಿರಿನಾಡ ಸಿರಿವಂತಿಗೆ

ಪ್ರ: ನಂದಿನಿ ಆಧ್ಯಾತ್ಮಿಕ ಸಂಸ್ಥೆ ಮತ್ತು ಉಚಿತ ವಾಚನಾಲಯ, ಅಂಬಾಸದನ, ಮೈಸೂರು, ೧೯೮೫, ಪುಟಗಳು ೩೨.

ತಲಕಾಡಿನ ಶ್ರೀ ಬಾಲಕೃಷ್ಣಾನಂದ ಮಠದ ಸಂಕ್ಷಿಪ್ತ ಚರಿತ್ರೆಯನ್ನೂ ಸಿರಿನಾಡು ಬ್ರಾಹ್ಮಣ ಜನಾಂಗದ ಇತಿಹಾಸವನ್ನು ವಿಮರ್ಶಾತ್ಮಕವಾಗಿ ನಿರೂಪಿಸಲಾಗಿದೆ. ಸಾಕಷ್ಟು ಸಂಶೋಧನಾಂಶಗಳನ್ನು ಈ ಗ್ರಂಥ ಒಳಗೊಂಡಿದೆ.

೫. ಬಬ್ಬೂರುಕಮ್ಮೆ ಯಶೋಡಿಂಡಿಮ

ಪ್ರ: ಬಿ.ಕೆ. ಶ್ರೀಕಂಠಯ್ಯ ಮತ್ತು ಎಂ.ಎಸ್. ಶಿವರಾಂ ಮೈಸೂರು, ಇಸವಿ ೧೯೭೬ (ಮೊದಲ ಮುದ್ರಣ) ಅನಂತರ ೨೦೦೨ ಮತ್ತು ೨೦೧೦ರಲ್ಲಿ ಮರುಮುದ್ರಣಗಳಾಗಿವೆ. ಪುಟಗಳು ೪೨, ಬೆಲೆ ಉಚಿತ.

ಬಬ್ಬೂರುಕಮ್ಮೆ ಜನಾಂಗದ ಇತಿಹಾಸವನ್ನು ತಿಳಿಸುವ ಸಂಕ್ಷಿಪ್ತ ಗ್ರಂಥ. ಈ ಪುಸ್ತಕದಲ್ಲಿ ಬಬ್ಬೂರುಕಮ್ಮೆ ಜನಾಂಗವನ್ನು ಕುರಿತು, ಬಬ್ಬೂರು ಯಾವುದು ಆ ಜನಾಂಗದ ಸಂಸ್ಕೃತಿ ಪರಂಪರೆ, ತತ್ವಜ್ಞಾನ, ಜೀವನಾದರ್ಶ, ಹಿರಿಮೆಗಳು ಹೇಗಿದ್ದವು? ಕರ್ನಾಟಕಕ್ಕೆ ಆಂಧ್ರಭಾಗದಿಂದ ಯಾವಾಗ ಬಂದರು ಮೊದಲಾದ ವಿಷಯಗಳನ್ನು ಕುರಿತು ಐತಿಹಾಸಿಕವಾಗಿ ಅಧ್ಯಯನ ಮಾಡಿ ಹಲವಾರು ವರುಷಗಳ ಪರಿಶ್ರಮದಿಂದ ಗ್ರಂಥ ರಚಿಸಿದ್ದಾರೆ. ಮರುಮುದ್ರಣಗಳಾಗಿರುವುದು ಇದರ ಜನಪ್ರಿಯತೆಗೆ ಸಾಕ್ಷಿಯಾಗಿದೆ.

೬. ಸ್ಥಾಣುಪುರಿ ಶ್ರೀ ವೆಂಕಟೇಶ ವೈಭವಂ

ಪ್ರ: ಲೇಖಕರೇ ಪ್ರಕಾಶಕರು, ಪುಟಗಳು ೨೪, ಇಸವಿ ೧೯೯೨.

(ಸ್ಥಾಣುಪುರಿ) ಬುಕ್ಕನಕೆರೆ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನದ ಇತಿಹಾಸವನ್ನು ಪೌರಾಣಿಕವಾಗಿ ಹಾಗೂ ಐತಿಹಾಸಿಕವಾಗಿ ಸಂಗ್ರಹವಾಗಿ ವಿವರಿಸಲಾಗಿದೆ. ತುಳಸೀ ಲಕ್ಷ್ಮೀ ಅಷ್ಟಕಂ, ವೆಂಕಟೇಶ ಅಷ್ಟೋತ್ತರ ಶತನಾಮ ರಾಜಾಶೀರ್ವಾದ, ಸ್ಥಾಣುಪುರಿ ಶ್ರೀರಾಮ ಸುಪ್ರಭಾತ ಮುಂತಾದ ಸ್ತೋತ್ರಗಳನ್ನು ಕೊಡಲಾಗಿದೆ.

೭. ಸ್ಥಾಣ್ವದ್ರಿ ಶ್ರೀರಂಗನಾಥ ಕ್ಷೇತ್ರ ಮಹಿಮೆ

ಪ್ರ: ಲೇಖಕರು, ಮೈಸೂರು, ೧೯೭೨.

ಈ ಗ್ರಂಥದಲ್ಲಿ ಬೂಕನಕೆರೆ ಗ್ರಾಮದ ಇತಿಹಾಸ, ಸ್ಥಾಣ್ವದ್ರಿನಾಥ ಕ್ಷೇತ್ರಮಹಿಮೆ, ಸ್ಥಾಣ್ವದ್ರಿನಾಥ ಸುಪ್ರಭಾತ ಸ್ತೋತ್ರ (ಲೇಖಕರ ರಚನೆ) ಇವು ಅಡಕವಾಗಿವೆ.

೮. ಶ್ರೀ ಸದಾಶಿವ ಬ್ರಹ್ಮೇಂದ್ರರ ಜೀವನಚರಿತ್ರೆ

ಪ್ರಕಾಶಕರು: ಸಿ. ವೆಂಕಟರಮಣಶಾಸ್ತ್ರಿ, ಚಾಮರಾಜನಗರ, ಕಾದಂಬರೀ ಸಂಗ್ರಹ ಗ್ರಂಥಮಾಲಾ ಸಂಖ್ಯೆ ೯೦, ಪುಟಗಳು ೧೨, ಇಸವಿ ೧೯೩೨.

ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಿಸಿದ ಲೇಖನ ಇದಾಗಿದ್ದು ಸದಾಶಿವ ಬ್ರಹ್ಮೇಂದ್ರರ ಜೀವನಚರಿತ್ರೆ ಮಾತ್ರ ಇದೆ. ಕೀರ್ತನೆಗಳಿಲ್ಲ.

೯. ಶ್ರೀ ರಾಮಕರ್ಣಾಮೃತ (ಮೂಲ, ತಾತ್ಪರ್ಯ ಟಿಪ್ಪಣಿಗಳೊಡನೆ)

ಪ್ರಕಾಶಕರು: ಎಂ.ಎಸ್. ಶ್ರೀನಿವಾಸಯ್ಯ, ಕಾಫಿಪುಡಿ ವ್ಯಾಪಾರಿಗಳು, ಕೋಟೆ, ಮಳವಳ್ಳಿ, ಪುಟಗಳು ೧೯೨, ಇಸವಿ ೧೯೬೮.

ಸುಮಾರು ೪೦೦ ಶ್ಲೋಕಗಳಿಗೂ ಅಧಿಕ ಸಂಖ್ಯೆಯ ಸ್ತೋತ್ರಗಳಿರುವ ಲಲಿತವಾದ ಸ್ತೋತ್ರ ಗ್ರಂಥವಿದು.

ಉತ್ತಮವಾದ ಕಾಗದದಲ್ಲಿ ಸುಂದರವಾದ ಮುದ್ರಾಕ್ಷರಗಳಿಂದ ಅಚ್ಚು ಮಾಡಿರುವ ಈ ಪುಸ್ತಕದಲ್ಲಿ ಕನ್ನಡ ಲಿಪಿಯಲ್ಲಿ ಶ್ಲೋಕಗಳನ್ನು ಕೊಟ್ಟು ಸರಳಾನುವಾದ ನೀಡಿದೆ. ರಾಮತತ್ತ್ವ ಎಂಬ ಪ್ರಕರಣದಲ್ಲಿ ಅದ್ವೈತಸಾರವನ್ನು ವಿವರವಾಗಿ ತಿಳಿಸಿದ್ದಾರೆ. ಈ ವಿವೇಚನೆ ಜಿಜ್ಞಾಸುಗಳಿಗೆ ಉಪಯುಕ್ತ. ಆತ್ಮಾರಾಮಪೂಜಾ ದ್ವಾದಶಮಂಜರಿ, ಯೋಗ ಚಕ್ರಾತ್ಮಕ ನಿರ್ಗುಣಧ್ಯಾನ ಎಂಬ, ಲೇಖಕರು ರಚಿಸಿದ ಎರಡು ಕನ್ನಡ ಕವಿತೆಗಳಿವೆ. ಇದು ಶ್ರೀರಾಮಭಕ್ತರಿಗೆ ಉಪಯುಕ್ತ ಗ್ರಂಥ. ೧೯೬೮ರಲ್ಲಿ ಪರಿಷ್ಕರಣೆ, ಅನುವಾದ, ಟಿಪ್ಪಣಿಗಳೊಂದಿಗೆ ಮೊದಲ ಬಾರಿ ಪ್ರಕಟವಾದ ಈ ಗ್ರಂಥದ ರಚನೆಗಾಗಿ **ಶ್ರೀರಾಮತತ್ತ್ವ ಪರಾಯಣ** ಎಂಬ ಪ್ರಶಸ್ತಿ ಲೇಖಕರಿಗೆ ದೊರೆತಿದೆ.

೧೦. ಯಾಜುಷ–ಶ್ರಾದ್ಧ–ಮಂತ್ರ ಅನುಷ್ಠಾನ ಕ್ರಮ

ಪ್ರಕಾಶಕರು: ಬಿ.ಕೆ. ಶ್ರೀಕಂಠಯ್ಯ, ಕಿಲ್ಲೆ ಮೊಹಲ್ಲಾ, ಮೈಸೂರು, ೫ನೇ ಮುದ್ರಣ ೨೦೧೦, ೨೪೦ ಪುಟಗಳು.

ಪುರೋಹಿತರು ಸಿಗುವುದು ಕಷ್ಟವಾಗಿರುವ ಕಾಲದಲ್ಲಿ ಶ್ರಾದ್ಧ ಕಾರ್ಯ ಮಾಡಲು ಮಂತ್ರ ಕಲಿತುಕೊಳ್ಳುವವರಿಗೂ ಶ್ರಾದ್ಧ ಮಾಡುವವರಿಗೂ, ಶ್ರಾದ್ಧ ಮಾಡಿಸುವ ಪುರೋಹಿತರಿಗೂ ಇರುವ ಉಪಯುಕ್ತವಾದ ಗ್ರಂಥ. ಎಡಭಾಗದಲ್ಲಿ ಶ್ರಾದ್ಧ ಮಂತ್ರಗಳನ್ನು ಕೊಟ್ಟು ಬಲಭಾಗದಲ್ಲಿ ಅದರ ಅರ್ಥವನ್ನೂ ಆಚರಣೆಯ ಪ್ರಯೋಗದ ವಿವರಗಳನ್ನು ವಿವರಿಸಿರುವ ಈ ಬಗೆಯ ಗ್ರಂಥ ಕನ್ನಡದಲ್ಲಿ ಇದೇ ಮೊದಲನೆಯದು. ಕೆಲವೇ ವರ್ಷಗಳಲ್ಲಿ ಹಲವಾರು ಮುದ್ರಣ ಕಂಡಿರುವುದೇ ಇದರ ಜನಪ್ರಿಯತೆಗೆ ಸಾಕ್ಷಿ.

ಋಗ್ವೇದದ ಶ್ರಾದ್ಧ ಪ್ರಯೋಗ ಸೂಚಿಯನ್ನೂ ಕೊಡಲಾಗಿದೆ. ಲೇಖಕರಿಗೆ ಹೆಸರು ತಂದುಕೊಟ್ಟಿರುವ ಗ್ರಂಥಗಳಲ್ಲಿ ಇದೊಂದು.

ಅಪ್ರಕಟಿತ ಕೃತಿಗಳು

ಬಿ.ಎಸ್. ಕಪನೀಪತಯ್ಯನವರ ಸೌಂದರ್ಯಲಹರೀ ಹಸ್ತಪ್ರತಿಯಲ್ಲಿ ಶಂಕರಾಚಾರ್ಯರ ಎರಡು ಸ್ತೋತ್ರಗಳ ಅನುವಾದವಿದೆ. ಒಂದು ದಕ್ಷಿಣಾಮೂರ್ತಿ ಸ್ತೋತ್ರ, ಇನ್ನೊಂದು ಶಿವಾನಂದಲಹರೀ ಸ್ತೋತ್ರ.

ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ

ಇದೊಂದು ಪ್ರಕರಣ ಗ್ರಂಥ. ಸ್ತೋತ್ರ ವರ್ಗಕ್ಕೆ ಸೇರುವುದಾದರೂ ವೇದಾಂತ ತತ್ತ್ವಗಳನ್ನು ಭಾಷ್ಯಗಳಲ್ಲಿ ವಿವರಿಸಿರುವ ಹಾಗೆ ಪ್ರೌಢ ರೀತಿಯಲ್ಲಿ ಇರದೆ ಸಾಮಾನ್ಯರಿಗೆ ತಿಳಿಯುವಂತೆ ವೇದಾಂತ ತತ್ತ್ವಗಳನ್ನು ಇದರಲ್ಲಿ ತಿಳಿಸಿರುತ್ತಾರೆ. ಇದಕ್ಕೆ ಪ್ರಕರಣ ಗ್ರಂಥಗಳೆನ್ನುತ್ತಾರೆ. ಈ ಬಗೆಯ ಗ್ರಂಥಗಳು ಎರಡು ಬಗೆ.

೧. ಲಘು ಪ್ರಕರಣ ಗ್ರಂಥಗಳು, ೨. ಗುರು ಪ್ರಕರಣ ಗ್ರಂಥಗಳು. ದಕ್ಷಿಣಾಮೂರ್ತಿ ಸ್ತೋತ್ರ ಒಂದು ಲಘು ಪ್ರಕರಣ ಗ್ರಂಥ. ಕೇವಲ ೧೦ ಶ್ಲೋಕಗಳನ್ನು ಒಳಕೊಂಡ ಸ್ತೋತ್ರರೂಪದ ದಶಶ್ಲೋಕೀ ಗ್ರಂಥ.

ಕಪನೀಪತಯ್ಯನವರು ೧೦ ಶ್ಲೋಕಗಳಿಗೂ ಶ್ಲೋಕ, ಶ್ಲೋಕದ ಸಾರಾಂಶ ಅನ್ವಯಾರ್ಥ, ತಾತ್ಪರ್ಯಗಳನ್ನು ಕೊಟ್ಟಿದ್ದಾರೆ. ಪ್ರಾರಂಭದಲ್ಲಿ ಉಪೋದ್ಘಾತ ಪ್ರಕರಣವೆಂದು ಅದ್ವೈತ ತತ್ತ್ವದ ಸಾರಾಂಶವನ್ನು ದೀರ್ಘವಾಗಿ ೧೦ ಪುಟಗಳಲ್ಲಿ ಸೊಗಸಾಗಿ ಬರೆದಿದ್ದಾರೆ.

ದಕ್ಷಿಣಾಮೂರ್ತಿ ಸ್ತೋತ್ರದಲ್ಲಿ ಅದ್ವೈತ ತತ್ತ್ವವು ಅಡಕವಾಗಿರುವುದರಿಂದ "ಸ್ತೋತ್ರವು ಸುಲಭವಾಗಿ ಅವಗಾಹನೆಗೆ ಬರುವುದಕ್ಕಾಗಿ ಕೆಲವು ಅದ್ವೈತ ಸಿದ್ಧಾಂತ ಸಾರಾಂಶಗಳನ್ನು ಸೂಚಿಸುತ್ತೇನೆ" ಎಂದು ತಿಳಿಸಿದ್ದಾರೆ.

ದಕ್ಷಿಣಾಮೂರ್ತಿ ಸ್ತೋತ್ರವೆಂದು ಕರೆಯಲು ಕಾರಣವನ್ನು ಬಿ.ಎಸ್. ಕಪನೀಪತಯ್ಯನವರು ಈ ಟಿಪ್ಪಣಿಯಲ್ಲಿ ಹೀಗೆ ತಿಳಿಸಿದ್ದಾರೆ.

"ಮುಖ್ಯವಾಗಿ ಅದ್ವೈತ ಮತದಲ್ಲಿ ಮೋಕ್ಷವೆಂಬುದು ಸ್ವರೂಪ ಸುಖವಾಗಿರುವುದೇ ಹೊರತು ಬೇರೆ ಇಲ್ಲ. ಅಜ್ಞಾನನಾಶವೆಂದರೆ ಅಜ್ಞಾನವೆಂಬ ಮುಸುಕನ್ನು ತೆಗೆದು ಹಾಕುವುದು ಎಂದು ತಾತ್ಪರ್ಯವು. ಇದರಿಂದ ಮೋಕ್ಷವು ಹುಟ್ಟಲಿಲ್ಲವು. ಈ ವಿಷಯಗಳನ್ನೆಲ್ಲ ಲೋಕಾನುಗ್ರಹಾರ್ಥವಾಗಿ ಶ್ರೀಶಂಕರ ಭಗವತ್ಪಾದರು ಸೂತ್ರ ಭಾಷ್ಯದಲ್ಲಿ ವಿಚಾರ ಪುರಸ್ಸರವಾಗಿ ಇತರ ಮತ ನಿರಾಸಪೂರ್ವಕವಾಗಿ ಸ್ಪಷ್ಟಪಡಿಸಿದ್ದಾರೆ. ಆದರೂ ಸರ್ವರಿಗೂ ಸುಲಭವಾಗಿ ತಿಳಿಯುವುದಕ್ಕಾಗಿ ಪ್ರಕರಣ ರೂಪವಾಗಿ ದಕ್ಷಿಣಾಮೂರ್ತಿ ಸ್ತೋತ್ರದಲ್ಲಿ ಸ್ಪಷ್ಟಪಡಿಸಿದ್ದಾರೆ.

ಈ ಸ್ತೋತ್ರದಲ್ಲಿ ದಕ್ಷಿಣಾಮೂರ್ತಯೇ ಎಂಬುದಾಗಿ ಪ್ರತಿ ಶ್ಲೋಕದಲ್ಲೂ ಇರುವುದು. ಅದಕ್ಕಾಗಿ ಈ ಅವತಾರ ಕಥೆಯನ್ನು ಸ್ವಲ್ಪಮಟ್ಟಿಗೆ ಸೂಚಿಸುತ್ತೇನೆ. (ಪುಟ ೩೦೩ ಹಸ್ತಪ್ರತಿ) ಎಂದು ಹೇಳಿ ದಕ್ಷಬ್ರಹ್ಮನ ಯಜ್ಞದ ಕಥೆಯನ್ನು ಸಂಕ್ಷಿಪ್ತವಾಗಿ ತಿಳಿಸಿ ವೀರಭದ್ರನಿಂದ ದಕ್ಷಯಾಗ ಧ್ವಂಸ ಮಾಡಿಸಿ ದೇವತೆಗಳ ಪ್ರಾರ್ಥನೆಯಿಂದ ಪುನಶ್ಚ ದಕ್ಷನನ್ನು ಬದುಕಿಸಿ ತಾನು ಆಲದಮರದ ಕೆಳಗೆ ದಕ್ಷಿಣ ದಿಕ್ಕಿಗೆ ಮುಖವನ್ನು ಮಾಡಿಕೊಂಡು ಯೋಗಾರೂಢನಾಗಿ ಕುಳಿತುಕೊಂಡನು. ಅನಂತರದ ವಿವರ ಹೀಗಿದೆ. ಹಿಮವತ್ಪರ್ವತದಲ್ಲಿ ತಪೋನಿರತನಾದಾಗ ಸನಕಸನಂದನಾದಿ ಮುನಿವರ್ಯರು

ಪರಮೇಶ್ವರನನ್ನು ಸೇವಿಸುತ್ತಾ ಮೋಕ್ಷಸಾಧನವಾದ ತತ್ತ್ವೋಪದೇಶ ನೀಡಲು ಪ್ರಾರ್ಥಿಸಿದರು. ಆಗ ವಟಮೂಲದಲ್ಲಿ ಪರಮೇಶ್ವರನು ದಕ್ಷಿಣ ದಿಕ್ಕಿಗೆ ಎದುರಾಗಿ ಕುಳಿತಿದ್ದು ಉತ್ತರಾಭಿಮುಖವಾಗಿ ಕುಳಿತಿದ್ದ ಸನಕಾದಿಮುನಿಗಳಿಗೆ ಪರಮತತ್ತ್ವೋಪದೇಶ ಮಾಡಿ ದಕ್ಷಿಣಾಮೂರ್ತಿಯೆಂದು ಪ್ರಸಿದ್ಧನಾದನು. ಅವನು ಬೋಧಿಸಿದ ತತ್ತ್ವಸಾರವೇ ಶ್ರೀ ದಕ್ಷಿಣಾಮೂರ್ತಿ ಸ್ತೋತ್ರವು.

೨. ಶಿವಾನಂದ ಲಹರೀ (ಅಪೂರ್ಣ): ಶಂಕರರ ಶಿವಾನಂದ ಲಹರೀ ಸ್ತೋತ್ರವು ಒಂದು ಶತಕ. ಶಿವಶಕ್ತಿಗಳಲ್ಲಿ ಶಕ್ತಿಯನ್ನು ಕುರಿತ ಶತಕ ಸೌಂದರ್ಯ ಲಹರೀ ಆದರೆ, ಶಿವಾನಂದ ಲಹರೀ ಶತಕವು ಹೆಸರೇ ಹೇಳುವಂತೆ ಶಿವನನ್ನು, ಕುರಿತದ್ದು. ಬಿ.ಎಸ್. ಕಪನೀಪತಯ್ಯನವರು ಸೌಂದರ್ಯಲಹರಿಯ ಹಿನ್ನೆಲೆಯಲ್ಲಿ ಶಿವಾನಂದ ಲಹರಿಯಿಂದ ೪೧ ಶ್ಲೋಕಗಳನ್ನು ಆಯ್ಕೆ ಮಾಡಿಕೊಂಡು ಅವುಗಳಿಗೆ ಶ್ಲೋಕ-ಪ್ರತಿಪದಾರ್ಥ ಮಾತ್ರ ಬರೆದಿದ್ದಾರೆ ಟಿಪ್ಪಣಿ ತಾತ್ಪರ್ಯಗಳಲ್ಲಿ ಈ ೪೧ ಶ್ಲೋಕಗಳನ್ನು ಯಾವ ರೀತಿ ಆರಿಸಿದರು ಎಂಬ ವಿವರಗಳು ತಿಳಿಸಿಲ್ಲ.

೩. ಷಷ್ಟಿಪೂರ್ತಿ ಉಗ್ರರಥ ಶಾಂತಿ ಪ್ರಯೋಗ: ೨೮-೨-೧೯೯೪ರಲ್ಲಿ ಕಪನೀಪತಯ್ಯನವರು ತಮ್ಮ ಮಗ ಶ್ರೀಕಂಠಯ್ಯನವರ ಷಷ್ಟ್ಯಬ್ಧ ಕಾರ್ಯಕ್ರಮವನ್ನು ನಡೆಸಿದ ಸಂದರ್ಭದಲ್ಲಿ ಉಗ್ರರಥ ಶಾಂತಿ (೬೦ನೇ ವರ್ಷ ತುಂಬುವ ಸಂದರ್ಭದಲ್ಲಿ) ಆಚರಿಸುವ ವಿಧಾನವನ್ನು ಪ್ರಾರಂಭದಿಂದ ಮುಕ್ತಾಯದವರೆಗೆ ಬಳಸುವ ಮಂತ್ರಗಳನ್ನು, ಪೂಜಾ ವಿಧಾನವನ್ನು, ಅದಕ್ಕೆ ಬೇಕಾಗುವ ಸಾಮಗ್ರಿಗಳ ಪಟ್ಟಿಯನ್ನು ಎಲ್ಲವನ್ನೂ ನಕ್ಷಾರೂಪದಲ್ಲಿ (ದಿನಪತ್ರಿಕೆಗಳ ಆಕಾರದ ಕಾಗದದಲ್ಲಿ) ಸ್ವಯಂಬೋಧೆ ಆಗುವಂತೆ ಬರೆದಿಟ್ಟಿದ್ದಾರೆ. ಅಂತೆಯೇ ಉಗ್ರರಥ ಶಾಂತಿಯನ್ನು ಆಚರಿಸುವ ರೀತಿಯನ್ನು (೭೦ನೇ ವರ್ಷದಲ್ಲಿ ಆಚರಿಸುವ ಶಾಂತಿ ಕಾರ್ಯಕ್ರಮವನ್ನು ಪ್ರತ್ಯೇಕವಾಗಿ ಬರೆದಿಟ್ಟಿದ್ದಾರೆ. ಇದು ಪ್ರಕಟವಾದಲ್ಲಿ ಪುರೋಹಿತರಿಗೆ ಕೈಪಿಡಿ ಆಗುತ್ತದೆ. ಇಷ್ಟು ವಿವರವಾದ ಗ್ರಂಥ ಕನ್ನಡದಲ್ಲಿ ವಿರಳ.

೪. ಕಳಲೆ ದಳವಾಯಿ ಮನೆತನದ ಸಂಕ್ಷಿಪ್ತ ಚರಿತ್ರೆ (೨೨ ಪುಟಗಳು)

ಈ ಲೇಖನವು "ಕಳಲೆ ಮನೆತನದ ವೀರಶೈವ ದಳವಾಯಿಗಳ ಗ್ರಂಥದಲ್ಲಿ ಪ್ರಕಟವಾಗಿದೆ. ಸಂಪಾದಕರು: ಡಾ. ಕೆ.ಎಸ್. ಶಿವಣ್ಣ ಪ್ರಕಾಶಕರು : ಜಗದ್ಗುರು ಶ್ರೀ ಶಿವರಾತ್ರಿ, ಪುಟಗಳು ೨೮೦, ಗ್ರಂಥಮಾಲೆ ಮೈಸೂರು, ೧೯೯೪.

ಕಳಲೆ ಮನೆತನದ ವೀರಶೈವ ದಳವಾಯಿಗಳ ಬಗೆಗೆ ೧೯೯೧ ನವೆಂಬರ್ ೨ ಮತ್ತು ೩ರಂದು ೨ ದಿನಗಳ ವಿಚಾರ ಸಂಕೀರ್ಣ ಮೈಸೂರಿನಲ್ಲಿ ನಡೆಯಿತು. ಈ ವಿಚಾರ ಸಂಕೀರ್ಣ ನಡೆಯುವ ಮೊದಲೇ ಕಪನೀಪತಯ್ಯನವರು ಕಳಲೆ ದಳವಾಯಿಗಳನ್ನು, ಕುರಿತು ಆಳವಾಗಿ ಅಭ್ಯಸಿಸಿ ಸುದೀರ್ಘವೂ ವಿಚಾರಪೂರ್ಣವೂ ಆದ ಉತ್ತಮ ಲೇಖನವನ್ನು ಸಿದ್ಧಪಡಿಸಿದ್ದರು. ಆದರೆ ವಿಚಾರ ಸಂಕೀರ್ಣದ ವ್ಯವಸ್ಥಾಪಕರಿಗೆ ಈ ವಿಷಯ ತಿಳಿಯದೆ ಕಪನೀಪತಯ್ಯನವರನ್ನು ಆಹ್ವಾನಿಸಿರಲಿಲ್ಲ.

ಪತ್ರಿಕೆಗಳಲ್ಲಿ ವಿಚಾರಗೋಷ್ಠಿಯ ವರದಿ ಬಂದಾಗ ಆ ಬರಹಗಳನ್ನು ಪುಸ್ತಕ ರೂಪದಲ್ಲಿ ತರುತ್ತಾರೆಂದು ತಿಳಿದಾಗ ಕಪನೀಪತಯ್ಯನವರು ಸ್ವಾಮಿಗಳಿಗೆ ಲೇಖನ ತೋರಿಸಿದರು. ಸ್ವಾಮಿಗಳು ಲೇಖನವನ್ನು ಪರಿಶೀಲಿಸಿ ತುಂಬಾ ಮೆಚ್ಚಿಕೊಂಡು ಪುಸ್ತಕದಲ್ಲಿ ಗೋಷ್ಠಿಯ ಪ್ರಬಂಧಗಳೊಡನೆ ಸೇರ್ಪಡೆ ಮಾಡಿದರು. ಈ ಸಂದರ್ಭದಲ್ಲಿ ಕಳಲೆ ಅರಸು ಮನೆತನದವರ ವಂಶವೃಕ್ಷವನ್ನು ೨ ದೊಡ್ಡ ಹಾಳೆಗಳಲ್ಲಿ ಸಿದ್ಧಪಡಿಸಿದ್ದರು, ಆದರೆ ಅದು ಲೇಖನದ ಜತೆಗೆ ಪ್ರಕಟವಾಗಿಲ್ಲ.

ಪತ್ರಿಕಾ ಲೇಖನಗಳು

೧. ಏಕಪಾದೇಶ್ವರ (೮ ಪುಟಗಳು) ಶಂಕರ ಕೃಪಾ ಪತ್ರಿಕೆ.

೨. ಪುರಾಣಗಳಲ್ಲಿ ಸಮಸ್ಯೆ (೧೨ ಪುಟಗಳು) ಶಂಕರಕೃಪಾ (೧೨–೮)

೩. ಮನೋನಿಯಮನಂ (ಸದಾಶಿವ ಬ್ರಹ್ಮೇಂದ್ರರ ಕೃತಿ ಪರಿಚಯ) (೬ ಪುಟಗಳು) ಶಂಕರಕೃಪಾ ಪತ್ರಿಕೆಯಲ್ಲಿ ಪ್ರಕಟಿತ.

೪. ರುದ್ರಮಂತ್ರಾತ್ಮಕ ರುದ್ರ (೩೫ ಪುಟಗಳು) ಶಂಕರಕೃಪಾ (೧೩–೧ ೧೩–೨ ೧೩–೩.

೫. ಶಿವ ಪಂಚಾಕ್ಷರಿ (೯ ಪುಟಗಳು) ಶಂಕರಕೃಪಾ ೧೩–೬.

೬ ಶ್ರೀ ಚಮಕಪ್ರಶ್ನ: (ಶಿವಶಕ್ತ್ಯಾದಿಕಂ((೧೫ ಪುಟಗಳು).

೭ ಪರಾಶಕ್ತಿ (೧೨ ಪುಟಗಳು)

೮. ಬ್ರಹ್ಮವಿದ್ಯಾಶೀರ್ವಾದ ಪದ್ಧತಿ (ಮಂತ್ರಗಳಿಗೆ ತಾತ್ಪರ್ಯ) (ಮೈಸೂರು ಶಂಕರಮಠದ ಶಂಕರಕೃಪಾ ಮಾಸಪತ್ರಿಕೆಯಲ್ಲಿ ಪ್ರಕಟವಾಗಿದೆ (೧೯೭೬).

ಕವಿತೆ–ಸ್ತೋತ್ರಗಳು

೧. ಭವರೋಗ ವೈದ್ಯಾಲಯಂ (ಕನ್ನಡ) (೨ ಪುಟ) ಶಂಕರಕೃಪಾ ಪತ್ರಿಕೆ.

೨. ತುಲಸೀ ಲಕ್ಷ್ಮೀ ಅಷ್ಟಕಂ (ಸಂಸ್ಕೃತ) (೧ ಪುಟ) ಸ್ಥಾಣುಪುರಿ ವೆಂಕಟೇಶ ದೇವರು ಗ್ರಂಥದಲ್ಲಿ ಪ್ರಕಟಿತ)

೩. ಸ್ಥಾಣುಪುರಿ ಶ್ರೀರಾಮ ಸುಪ್ರಭಾತಂ (ಕನ್ನಡ) ೨ ಪುಟ (ಸ್ಥಾಣುಪುರಿ ವೆಂಕಟೇಶ ದೇವರು ಗ್ರಂಥದಲ್ಲಿ ಪ್ರಕಟಿತ)

೪. ೧೯೫೫ರಲ್ಲಿ ಜಯಚಾಮರಾಜೇಂದ್ರ ಒಡೆಯರ್ ಅವರ ೧೫ನೇ ಪಟ್ಟಾಭಿಷೇಕದ ವಾರ್ಷಿಕೋತ್ಸವದ ಶುಭಾಶಂಸನ ಪದ್ಯಮಾಲಿಕಾ. ಕನ್ನಡ (೨ ಪುಟ)

೫. ೧೯೫೦ರಲ್ಲಿ ೧೦ನೇ ವಾರ್ಷಿಕೋತ್ಸವದ ಮಂಗಳ ಪದ್ಯಮಾಲಿಕಾ.

೭. ೧೯೪೪ರಲ್ಲಿ ೮ನೇ ವಾರ್ಷಿಕೋತ್ಸವದ ಪಂಚರತ್ನ ಮಾಲಿಕಾ

೭ ೧೯೪೧ರಲ್ಲಿ ರಾಜ್ಯಾಭಿಷೇಕದ ವಾರ್ಷಿಕೋತ್ಸವ (ಮಂಗಳ ಪದ್ಯಮಾಲಿಕಾ)

೮. ಬೂಕನಕೆರೆ (ಸ್ಥಾಣ್ವದ್ರೀಶ) ಶ್ರೀರಂಗನಾಥ ಸುಪ್ರಭಾತ, ೨ ಪುಟ (ಸಂಸ್ಕೃತ).

೯. ಬೂಕನಕೆರೆ ರಂಗನಾಥ ಪೂಜಾ ದ್ವಾದಶಮಂಜರೀ, ೨ ಪುಟ (ಕನ್ನಡ).

೧೦. ಪಾಳ್ಯದ ಜನಾರ್ದನ ಸುಪ್ರಭಾತ, ೨ ಪುಟ (ಸಂಸ್ಕೃತ).

೧೧. ಆತ್ಮಾರಾಮಪೂಜಾ ದ್ವಾದಶಮಂಜರಿ, ೧ ಪುಟ (ಸಂಸ್ಕೃತ).

೧೨. ಯೋಗಚಕ್ರಾತ್ಮಕ ನಿರ್ಗುಣಧ್ಯಾನ, ೨ ಪುಟ, (ಕನ್ನಡ).

೧೩. ಗಣಪತಿ ಸಚ್ಚಿದಾನಂದ ಗುರುಸ್ತುತಿ (ರಾಮಕರ್ಣಾಮೃತದಲ್ಲಿ).

೧೪. ನಾಲ್ಕು ವೃತ್ತಗಳು, (ಸಂಸ್ಕೃತ), ಭಕ್ತಿಮಾಲಾ ಪತ್ರಿಕೆ, ಮೇ ೧೯೭೮.

ಕಪನೀಪತಯ್ಯನವರ ಸೌಂದರ್ಯಲಹರೀ ಟೀಕಾ ಗ್ರಂಥದ ಹಸ್ತಪ್ರತಿಯ ಸ್ವರೂಪ

೧. **ಪ್ರಾರಂಭ:** ಹಸ್ತಪ್ರತಿಯ ಪ್ರಾರಂಭದಲ್ಲಿ ಲೇಖಕ ಬಿ.ಎ. ಕಪನೀಪತಯ್ಯ, ಮೈಸೂರು ೪ ಎಂದು ಬರೆದಿದ್ದಾರೆ. ಅನಂತರ ಪಠ್ಯಭಾಗವನ್ನು ಪ್ರಾರಂಭ ಮಾಡುವ ಮೊದಲು

ಶ್ರೀ ಚಾಮುಂಡೇಶ್ವರೀ ಪ್ರಸಾದ ಸಿದ್ಧಿರಸ್ತು

ಶ್ರೀ ಪರದೇವತಾ ಪ್ರಸಾದ ಸಿದ್ಧಿರಸ್ತು

ಶ್ರೀ ಲಲಿತಾಂಬಾಯೈನಮಃ

ಸೌಂದರ್ಯಲಹರೀ ಎಂದು ಬರೆದ ನಂತರ ಸೌಂದರ್ಯಲಹರಿಯ ಸಂಸ್ಕೃತ ಪದ್ಯವನ್ನು ಅನ್ವಯ ಕ್ರಮದಲ್ಲಿ ಶಬ್ದಾರ್ಥಗಳನ್ನು ಸ್ತಂಭಾಕಾರದಲ್ಲಿ ೨ ಅಂಕಣಗಳಲ್ಲಿ ಒಂದರ ಕೆಳಗೆ ಒಂದು ಪದ ಮತ್ತು ಅದರರ್ಥ ಬರುವಂತೆ ಬರೆದಿದ್ದಾರೆ.

೨. **ಮುಕ್ತಾಯ:** ೧೦೦ನೇ ಶ್ಲೋಕಕ್ಕೆ ಅನ್ವಯಾರ್ಥ ಬರೆದ ಮೇಲೆ ಈ ವಾಕ್ಯಗಳನ್ನು ಮುಕ್ತಾಯದ ನುಡಿಗಳನ್ನಾಗಿ ಬರೆದಿದ್ದಾರೆ.

"ಎಲೈ ದೇವಿಯೇ, ಸಕಲ ಶಬ್ದರೂಪಗಳೂ ನೀನೇ ಆಗಿರುವುದರಿಂದ ನನ್ನ ಸ್ತೋತ್ರವು ಉಪಚಾರೋಕ್ತಿಯಾಗಿದೆಯೇ ಹೊರತು ನನ್ನ ಸಾಮರ್ಥ್ಯ ಯಾವುದೂ ಇಲ್ಲ. ಅಂದರೆ ನಿನ್ನದನ್ನು ನಿನಗೇ ಒಪ್ಪಿಸಿದ್ದೇನೆಂದು ಹೇಳಿದಂತಾಯಿತು."

ಸೌಂದರ್ಯ ಲಹರೀ ಅನಂತರ ಹಲವು ಹಾಳೆಗಳು ಖಾಲಿ ಇದ್ದು ಶಿವಾನಂದ ಲಹರಿಯ ೪೦ ಪದ್ಯಗಳಿಗೆ ಮತ್ತು ದಕ್ಷಿಣಾಮೂರ್ತಿ ಸ್ತೋತ್ರಗಳಿಗೆ ಟೀಕೆ ಬರೆದಿದ್ದಾರೆ.

೩. ಪುಟ ಕ್ರಮ ವಿವರ: ಪದ್ಯದ ಅರ್ಥ ಬರೆಯಲು ಪುಟ ಸಾಲದಾಗ ಎಡಭಾಗದ ಖಾಲಿ ಪುಟದಲ್ಲಿ ಮುಂದುವರೆಸಿದ್ದಾರೆ ಮುಂದಿನ ಪುಟಕ್ಕೆ ಬರೆದಿಲ್ಲ. ಎಡಗಡೆ ಪುಟ ಮುಗಿದರೆ ಮುಂದಿನ ಪುಟದ ಹಿಂಭಾಗಕ್ಕೆ ಮುಂದುವರೆಸಿದ್ದಾರೆ. ಸಾಮಾನ್ಯವಾಗಿ ಒಂದು ಕಡೆಯಿಂದ ಬರೆದುಕೊಂಡು ಹೋಗುವ ಕ್ರಮವನ್ನು ಅನುಸರಿಸಿಲ್ಲ.

೪. ಕನ್ನಡದ ಅಂಕಿಗಳ ಬಳಕೆ: ಹಸ್ತಪ್ರತಿ ಪುಟಸಂಖ್ಯೆ ರೋಮನ್ ಅಂಕಿಗಳಲ್ಲಿವೆ. ಕಪನೀಪತಯ್ಯನವರು ಶ್ಲೋಕಗಳ ಸಂಖ್ಯೆಯನ್ನು ಮತ್ತು ಇತರ ಕಡೆಗಳಲ್ಲಿ ಕನ್ನಡ ಅಂಕಿಗಳನ್ನು ಬಳಸಿದ್ದಾರೆ.

ದುಂಡುಬರಹ: ಸುಂದರವಾದ ಅಂದವಾದ ಬರಹವಿದಾಗಿದ್ದು ತಪ್ಪಿಲ್ಲದೆ (ಅಲ್ಲಲ್ಲಿ ಕೆಲವು ಅಕ್ಷರ ಸ್ಖಾಲಿತ್ಯಗಳಿವೆ ಅಷ್ಟೆ) ಕಪ್ಪು ಮಸಿಯಲ್ಲಿ ಬರೆದಿದ್ದಾರೆ. ಸಾಕಷ್ಟು ಲೇಖನ ಚಿಹ್ನೆಗಳನ್ನು ಬಳಸಿದ್ದಾರೆ.

೫. ಸ್ತಂಭಾಕಾರ ಅನ್ವಯಾರ್ಥ: ಟೀಕಾ ಗ್ರಂಥಗಳಲ್ಲಿ ಸಾಮಾನ್ಯವಾಗಿ ಎಡದಿಂದ ಬಲಕ್ಕೆ (=) ಸಮಾನ ಚಿಹ್ನೆ ಬಳಸಿ ಉದ್ದಕ್ಕೂ ಅನ್ವಯಾರ್ಥ ಬರೆದುಕೊಂಡು ಹೋಗುತ್ತಾರೆ. ಆದರೆ ಬಿ.ಎಸ್. ಕಪನೀಪತಯ್ಯನವರು ಎರಡು ಕಾಲಂ ಮಾಡಿ ಮೇಲಿಂದ ಕೆಳಕ್ಕೆ ಒಂದರ ಕೆಳಗೆ ಒಂದು ಪದ ಬರುವಂತೆ ಸ್ತಂಭಾಕಾರದಲ್ಲಿ ಅನ್ವಯಾರ್ಥ ಬರೆದಿದ್ದಾರೆ.

ಉದಾ :

ಹೇ ಮಹಾದೇವ	ಮಹಾಪ್ರಕಾಶಮಾನವಾದ ಸ್ವಾಮಿಯೇ,
ಪಶುಪತೇ	ಸಮಸ್ತ ಪ್ರಾಣಿಗಳಿಗೂ ಅಧಿಪತಿ ಆದವನೇ
ಜಡಜನಃ	ಮೂಢಜನರು
ಈಶಂ	ಸರ್ವನಿಯಾಮಕನನ್ನು
ತ್ವಾಂ	ನಿನ್ನನ್ನು
ಮನಸಿಚ	ಮನಸ್ಸಿನಲ್ಲೂ
ನತ್ವಾ	ನಮಿಸುತ್ತಾ.....

ಪದಕ್ರಮ ವ್ಯತ್ಯಾಸ: ಅನ್ವಯಾರ್ಥ ಬರೆಯುವಾಗ ಪದಕ್ರಮಗಳು ವ್ಯತ್ಯಾಸವಾದರೆ ಅದನ್ನು ಹೊಡೆದು ಹಾಕಿ ಬರೆಯುವುದಿಲ್ಲ ಅಥವಾ ಚಿತ್ತು ಮಾಡುವುದಿಲ್ಲ. ಬದಲಾಗಿ ಸಂಖ್ಯೆ ಹಾಕಿ ಕ್ರಮ ಸೂಚಿಸುತ್ತಾರೆ. ಬರೆದುದನ್ನು ಅಳಿಸದೊಂದು ಅಗ್ಗಳಿಕೆ ಇವರದು.

೩. ಪರಂ – ಪರತತ್ತ್ವ ಸ್ವರೂಪನಾದ

೪. ಶಂಭುಂ – ಈಶ್ವರನನ್ನು

೧. ಪರಚಿತಾ – ಶ್ರೇಷ್ಠಳಾದ ಚಿಚ್ಛಕ್ತಿಯಿಂದ

೭. ಪರಿಮಿಲಿತ ಪಾರ್ಶ್ವಂ – ಯುಕ್ತವಾದ ಎಡಬಲವುಳ್ಳ (ಶ್ಲೋಕ ೩೬)

೭. ಸಂಧಿ ಮಾಡಿದ ಪದಗಳು: ಸೌಂದರ್ಯ ಲಹರಿಯ ಮೂಲ ಶ್ಲೋಕಗಳನ್ನು ಕನ್ನಡ ಲಿಪಿಯಲ್ಲಿ ಕೊಟ್ಟಿರುವ ಅನುವಾದಕರಲ್ಲಿ ಕೆಲವರು ಪದಗಳನ್ನು ಬಿಡಿಸಿಕೊಟ್ಟಿದ್ದರೆ ಮತ್ತೆ ಕೆಲವರು ಸಂಧಿ ಮಾಡಿಕೊಟ್ಟಿದ್ದಾರೆ. ಬಿ.ಎಸ್. ಕಪನೀಪತಯ್ಯನವರು ಕೆಲವು ಕಡೆಗಳಲ್ಲಿ ಪದಗಳನ್ನು ಬಿಡಿಸಿ ಬರೆದಿದ್ದಾರೆ. ಅಂಥ ಕಡೆಗಳಲ್ಲಿ ಓರಿಯಂಟಲ್ ಲೈಬ್ರರಿಯ ಸಂಸ್ಕೃತ ಮುದ್ರಣವನ್ನು ಅನುಸರಿಸಿ ಪದಗಳನ್ನು ಸಂಧಿ ಮಾಡಿ ಬರೆದಿದೆ.

ಉದಾ: ಚತುರ್ಭಿಃ ಶ್ರೀಕಂಠೈಃ ಶಿವಯುವತಿಭಿಃ (ಶ್ಲೋಕ ೧೧)

= ಚತುರ್ಭಿಶ್ರೀಕಂಠೈಶ್ಶಿವಯುವತಿಭಿಃ....

೮. ಸಾರಾಂಶ ಮತ್ತು ವಿವರಣೆ: ಕೆಲವು ಶ್ಲೋಕಗಳಿಗೆ ಸಾರಾಂಶವನ್ನು ಕೆಲವು ಶ್ಲೋಕಗಳಿಗೆ ವಿವರಣೆಗಳನ್ನು ಅಲ್ಲಲ್ಲಿ ಬರೆದಿದ್ದಾರೆ. ಅವುಗಳನ್ನು K ಎಂದು ಗುರುತಿಸಿ ಟಿಪ್ಪಣಿಗಳಲ್ಲಿ ಕೊಟ್ಟಿದೆ.

೯. ಲ–ಳಕಾರ ವಿಚಾರ: ಕಪನೀಪತಯ್ಯನವರು ಹಸ್ತಪ್ರತಿಯಲ್ಲಿ ಸಂಸ್ಕೃತದ ಶ್ಲೋಕದ ಲಕಾರ ಪದಗಳಲ್ಲಿ ಲಗೆ ಬದಲು ಳಕಾರ ಬಳಸಿದ್ದಾರೆ. ತೆಲುಗು ಅನುವಾದಕಾರರಲ್ಲೂ ಸೌಂದರ್ಯಲಹರಿಯ ಶ್ಲೋಕಗಳಲ್ಲಿ ಲಕಾರಕ್ಕೆ ಬದಲು ಳಕಾರ ಬಳಸಿದ್ದಾರೆ. ಸಂಸ್ಕೃತದ ಶ್ಲೋಕಗಳ ಮೂಲರೂಪದಲ್ಲಿ ಲಕಾರವೇ ಇರುವುದರಿಂದ ಹಸ್ತಪ್ರತಿಯಲ್ಲಿ ಳಕಾರವಿರುವೆಡೆಗಳಲ್ಲಿ ಮೂಲರೂಪದ 'ಲ' ಕಾರವನ್ನೇ ಬಳಸಿದೆ.

ಉದಾ : ಚತುಶ್ಚತ್ವಾರಿಂಶದ್ವಸುದಳ ಕಲಾಶ್ರತ್ರಿವಳಯ K= ಚತುಶ್ಚತ್ವಾರಿಂಶದ್ವಸ್ತುದಲ ಕಲಾಶ್ರತ್ರಿವಲಯ K.

೧೦. ಎ ಬದಲು ಏಕಾರ: ಸಂಸ್ಕೃತ ಪದಗಳಲ್ಲಿ ಏಕಾರ ಬರುವೆಡೆಗಳಲ್ಲಿ ಅನೇಕ ಕಡೆ ಎಕಾರ ಬಳಸಿದ್ದಾರೆ. ಅಂಥವನ್ನೆಲ್ಲಾ ತಿದ್ದಿದೆ. ಭ್ರೂಮಧ್ಯೆ (ಹಸ್ತಪ್ರತಿ) ಎನ್ನುವುದನ್ನು ಭ್ರೂಮಧ್ಯೇ ತಿದ್ದಿದೆ, ವಿಹರಸೆ=ವಿರಹಸೇ ಸಹಸ್ರಾರಪದ್ಮೆ = ಸಹಸ್ರಾರ ಪದ್ಮೇ ಇತ್ಯಾದಿ.

೧೧. ಸವರ್ಣದೀರ್ಘ ಸಂಧಿ ಪದಗಳು: ಸವರ್ಣ ದೀರ್ಘ ಸಂಧಿ ಮತ್ತು ಇತರ ಸಂಧಿಗಳಾದ ಪದಗಳಲ್ಲಿ ಉತ್ತರಪದದ ಸಂಧಿಯ ಅದ್ಯ ಸ್ವರವನ್ನು ಪದದ ಮೇಲ್ಭಾಗದಲ್ಲಿ ಹಸ್ತಪ್ರತಿಯಲ್ಲಿ ಗುರುತಿಸಿದ್ದಾರೆ.

ಆಕರ್ಣಾಆಕೃಷ್ಟಸ್ಮರಶರವಿಲಾಸಂ (ಶ್ಲೋಕ ೫೨)

ಇಂಥ ಕಡೆ ಅರ್ಥ ಕೊಡುವಲ್ಲಿ ಸಂಧಿಪದದ ವಿಭಾಗ ಮಾಡಿಕೊಟ್ಟಿದೆ.

(ಆಕರ್ಣ + ಆಕೃಷ್ಟಸ್ಮರ ಶರ ವಿಲಾಸಂ)

೧೨. ಅವಗ್ರಹ ಚಿಹ್ನೆ ಬಳಕೆ: ಹಸ್ತಪ್ರತಿಯಲ್ಲಿ ಅನೇಕ ಕಡೆ ಸಂಸ್ಕೃತ ಮೂಲದಲ್ಲಿರುವಂತೆ ಅವಗ್ರಹ ಚಿಹ್ನೆ (S) ಬಳಸಿಲ್ಲ. ಅಂಥ ಕಡೆಗಳಲ್ಲಿ ಸೂಕ್ತವಾಗಿ ಬಳಸಿದೆ.

ಮನೋಪಿ ಭ್ರೂಮಧ್ಯೇ (ಶ್ಲೋಕ ೯) (ಹಸ್ತಪ್ರತಿ)

ಮನೋಽಪಿ ಭ್ರೂಮಧ್ಯೆ (ಶ್ಲೋಕ ೯) (ಸಂಸ್ಕೃತ ಮೂಲ ಪ್ರತಿ)

೧೩. ಗೆರೆ ಚಿಹ್ನೆಗಳ ಬಳಕೆ: ಕಪನೀಪತಯ್ಯನವರು ಸಮಾಸ ಪದಗಳು ಬಂದಿರುವ ಕಡೆ ವಿಗ್ರಹ ವಾಕ್ಯ ಮಾಡದೆ ವಿನೂತನ ವಿಧಾನವೊಂದನ್ನು ಹಸ್ತಪ್ರತಿಯಲ್ಲಿ ಬಳಸಿದ್ದಾರೆ. ಸಮಾಸ ಪದದಲ್ಲಿರುವ ಪದಗಳನ್ನು ಪದಗಳ ಕೆಳಗೆ ದೊಡ್ಡಗೆರೆ ಎಳೆದು ಗುರುತಿಸಿದ್ದಾರೆ ಅವುಗಳಿಗೆ ಅರ್ಥೈಸುವಲ್ಲಿ ಸಣ್ಣ ಅಡ್ಡಗೆರೆ ಬಳಸಿ ಗುರುತಿಸಿದ್ದಾರೆ.

ಸಂಸ್ಕೃತ ಪದಗಳಿಗೆ ಅರ್ಥ ಕೊಡುವ ಮೊದಲು = (ಸಮಾಸ ಚಿಹ್ನೆ) ಬಳಸಿದ್ದಾರೆ.

ಉದಾ: **ಸುಧಾಧಾರಾಸಾರೈಃ** = ಅಮೃತದ – ಧಾರೆಗಳ – ನಿರಂತರವಾದ ಸಂಪಾತಗಳಿಂದ (ಶ್ಲೋಕ ೧೦)

೧೪. ಧನಚಿಹ್ನೆ ಬಳಕೆ: ಕೆಲವು ಕಡೆಗಳಲ್ಲಿ – ಸಣ್ಣ ಅಡ್ಡಗೆರೆ ಬದಲಾಗಿ ಸಮಾಸ ಪದಗಳಿಗೆ ಅರ್ಥ ಕೊಡುವಾಗ ಧನಚಿಹ್ನೆ ಬಳಸಿದ್ದಾರೆ.

ಉದಾ : ಸುಧಾಲೇಪಸ್ಯೂತಿ = ಅಮೃತರಸದ + ಲೇಪನದ + ಸಂಬಂಧವುಳ್ಳ (ಶ್ಲೋಕ ೪೬)

೧೫. ಆವರಣಚಿಹ್ನೆ ( ) ಬಳಕೆ: ಶಬ್ದಕ್ಕೆ ಸಂಬಂಧಿಸಿದ ಸಮಾನಾರ್ಥದ ಪದ ಅಥವಾ ಸ್ಪಷ್ಟೀಕರಣದ ಪದವನ್ನು ಕೊಡುವಾಗ ದುಂಡು ಆವರಣ ಚಿಹ್ನೆ ಬಳಸಿದ್ದಾರೆ.

ಉದಾ: **ಕಮಲ ಮಕರಂದ:** = ಕಮಲದ – ಪುಷ್ಪರಸದಲ್ಲಿ (ಅನಾಹತ ಚಕ್ರ) (ಶ್ಲೋಕ ೩೮)

೧೬. ಪುಷ್ಪಾವರಣ ಚಿಹ್ನೆ { } ಬಳಕೆ: ಶ್ಲೇಷಾರ್ಥವಿರುವ ಪದಗಳಿಗೆ ಅರ್ಥ ಕೊಡುವಾಗ ಎರಡು ಅರ್ಥಗಳನ್ನು ಪ್ರತ್ಯೇಕವಾಗಿ ಕೊಡುವುದು ಪದ್ಧತಿ (ದೊಡ್ಡಬೆಲೆ ನಾರಾಯಣಶಾಸ್ತ್ರಿ ಅವರ ಜೈಮಿನಿ ಭಾರತದ ಟೀಕೆ ನೋಡಿ) ಆದರೆ ಕಪನೀಪತಯ್ಯನವರು ಪುಷ್ಪಾವರಣ ಬಳಸಿ ಎರಡೂ ಅರ್ಥಗಳನ್ನು ಕೊಟ್ಟಿದ್ದಾರೆ.

ಉದಾ: ಅಲಂಕಾರಯುಕ್ತಾಂ {ಉಪಮಾದ್ಯಲಂಕಾರಗಳಿಂದ ಯುಕ್ತವಾದ, ಆಭರಣಗಳಿಂದ ಯುಕ್ತವಾದ}

ಸರಳ ಪದ {ಸುಲಭವಾಗಿ ಅರ್ಥವಾಗುವ ಪದಗಳಿಂದ ಮೆಲ್ಲಗೆ ಕಾಲಹಾಕುವ ನಿಧಾನವಾದ ಪಾದನ್ಯಾಸಗಳಿಂದ}

೧೭. ಸಂಖ್ಯಾ ಬಳಕೆ: ಸಮಾಸ ಪದಗಳಿಗೆ ಅರ್ಥೈಸುವಾಗ ಸಮಾಸದ ವಿಗ್ರಹ ಪದಗಳ ಕೆಳಗೆ ಗೆರೆ ಎಳೆದು ಅರ್ಥದ ಪದಗಳಿಗೆ ಸಣ್ಣ ಅಡ್ಡಗೆರೆ ಎಳೆಯುವ ವಿಧಾನವನ್ನು ಬಹುತೇಕ ಬಳಸಿದ್ದಾರೆ. ಆದರೆ ಕೆಲವು ಕಡೆ ಇನ್ನೊಂದು ವಿಧಾನವನ್ನು (ಗೆರೆ ಚಿಹ್ನೆ ಬಳಕೆ ನೋಡಿ) ಬಳಸಿದ್ದಾರೆ : ಅದೇನೆಂದರೆ.

ಅನ್ವಯಾರ್ಥವನ್ನು ಬರೆಯುವಾಗ ಸಮಾಸದ ಪದಗಳಲ್ಲಿ ಇರುವ ಪದಗಳಿಗೆ ಸಂಖ್ಯೆ ಕೊಟ್ಟು ಅರ್ಥ ಬರೆದಿದ್ದಾರೆ ಸಣ್ಣ ಅಡ್ಡಗೆರೆ ಬಳಸಿಲ್ಲ.

೧ ೨ ೩

ಉದಾ: ಬಲಮಥನವಾಟೀವಿಟಪಿನಾಂ = ೧. ಬಲಾಸುರನನ್ನು ಕೊಂದ ಇಂದ್ರನ ೨. ಉದ್ಯಾನವನದ (ನಂದನವನದ) ೩. ಕಲ್ಪವೃಕ್ಷಗಳ (ಶ್ಲೋಕ ೪೦)

೧೮. ಲಘು ಟಿಪ್ಪಣಿಗಳು : ಶ್ಲೋಕಗಳಿಗೆ ಅನ್ವಯಾರ್ಥ ಬರೆದ ಮೇಲೆ ಅಲ್ಲಲ್ಲಿ ಅಗತ್ಯವೆನಿಸಿದ ಲಘು ಟಿಪ್ಪಣಿಗಳನ್ನು ಬರೆದಿದ್ದಾರೆ (ಶ್ಲೋಕ ೫೧ ನೋಡಿ).

ಲಿಪಿ ವಿನ್ಯಾಸ: ದುಂಡಾದ ಸೊಗಸಾದ ಅಕ್ಷರ ಸಾಲುಗಳಿಂದ ಹಸ್ತಪ್ರತಿ ಬರೆದಿರುವ ಕಪನೀಪತಯ್ಯನವರ ಕನ್ನಡ ಬರಹದಲ್ಲಿ ಅಕ್ಷರ ವಿನ್ಯಾಸಗಳು ಕೆಲವೆಡೆ ಭಿನ್ನವಾಗಿದೆ.

ತೆಲುಗಿನಲ್ಲಿರುವಂತೆ ಕೆಲವು ಕಡೆ ಓರೆಗೆರೆ ತಲೆಕಟ್ಟು ಬರೆಯುತ್ತಾರೆ.

ಬ್ರಹ್ಮ = ಬ್ರಹ್ಮೇಂದ್ರ (ಶ್ಲೋಕ ೨೨)

ತಾತ್ಪರ್ಯ – ಟಿಪ್ಪಣಿ: ಹಸ್ತಪ್ರತಿಯಲ್ಲಿ ೧೦೦ ಪದ್ಯಗಳಿಗೆ ಟೀಕೆ ಬರೆದಿರುವ ಕಪನೀಪತಯ್ಯನವರು ೬೪ರಿಂದ ೯೯ರವರೆಗಿನ ಪದ್ಯಗಳಿಗೆ ಮಾತ್ರ ತಾತ್ಪರ್ಯ ಬರೆದಿದ್ದಾರೆ. ಉಳಿದ ಕಡೆ ಪ್ರಕೃತ ಸಂಪಾದಕರು (ಪದ್ಯ ೭೦ರಲ್ಲಿ ಮಾತ್ರ ಕಪನೀಪತಯ್ಯನವರು ಪೂರ್ವ ಕಥೆ ತಿಳಿಸಿದ್ದಾರೆ) ತಾತ್ಪರ್ಯ ಬರೆದಿದ್ದಾರೆ.

ಪಾರಿಭಾಷಿಕ ಪದ ವಿವರಣೆ: ಸೌಂದರ್ಯಲಹರಿ ಯಂತ್ರ, ಮಂತ್ರ ಶಾಸ್ತ್ರದ ಗ್ರಂಥ ಹೇಗೋ ಹಾಗೇ ತಂತ್ರಶಾಸ್ತ್ರದ ಗ್ರಂಥವೂ ಹಾಗಿದೆ. ಅನೇಕ ಕಡೆ ಪಾರಿಭಾಷಿಕ ಪದವಿವರಣೆಗಳ ಅಗತ್ಯವಿದೆ. ಕೆಲವು ಕಡೆ ಕಪನೀಪತಯ್ಯನವರು ಪಾರಿಭಾಷಿಕ ವಿವರಣೆ ನೀಡಿದ್ದಾರೆ.

ಉದಾಹರಣೆಗೆ ಶ್ಲೋಕ ೩೨ರ ಟಿಪ್ಪಣಿ ನೋಡಿ.

ಅಧಿಕ ಶ್ಲೋಕಗಳ ವಿಚಾರ: ಕೆಲವು ಸೌಂದರ್ಯ ಲಹರಿ ಗ್ರಂಥಗಳಲ್ಲಿ ೧೦೩ ಶ್ಲೋಕಗಳ ವಿವರಣೆ ಇದೆ. ಕಪನೀಪತಯ್ಯನವರು ೧೦೦ ಶ್ಲೋಕಗಳಿಗೆ ವ್ಯಾಖ್ಯಾನಿಸಿದ್ದಾರೆ. ಓದುಗರ ಕುತೂಹಲಕ್ಕಾಗಿ (೧೦೧ ೧೦೨ ೧೦೩) ೩ ಅಧಿಕ ಶ್ಲೋಕಗಳನ್ನು ಇಲ್ಲಿ ಸೇರ್ಪಡೆ ಮಾಡಿದೆ.

ಸೌಂದರ್ಯಲಹರಿಯ ಕನ್ನಡ ಪದ್ಯಾನುವಾದಕಾರ ಎಂ.ವಿ.ಸೀ.

ಎಂ.ವಿ. ಸೀತಾರಾಮಯ್ಯನವರು (೧೯೧೦-೧೯೯೦) ಕನ್ನಡದ ನವೋದಯ ಕವಿಗಳಲ್ಲಿ ಒಬ್ಬರು. ಬಹುಮುಖ ಪ್ರತಿಭೆಯುಳ್ಳ ಇವರು ಹೊಸಗನ್ನಡದ ಆಚಾರ್ಯ ಪುರುಷರಾದ ಬಿ.ಎಂ.ಶ್ರೀ, ತೀ.ನಂ.ಶ್ರೀ, ಕುವೆಂಪು, ಟಿ.ಎಸ್. ವೆಂಕಣ್ಣಯ್ಯ, ಎ.ಆರ್.ಕೃ., ಮಾಸ್ತಿ, ಡಿವಿಜಿ ಮೊದಲಾದವರ ಮಾರ್ಗದರ್ಶನದಲ್ಲಿ ತಮ್ಮ ಸಾಹಿತ್ಯ ಪಥ ಮತ್ತು ಜೀವನ ಪಥವನ್ನು ರೂಪಿಸಿಕೊಂಡವರು. ಕನ್ನಡ ಸಾಹಿತ್ಯ ಲೋಕಕ್ಕೆ ಅರ್ಧ ಶತಮಾನಕ್ಕೂ ಮಿಗಿಲಾಗಿ ಕಥೆ, ಕವನ, ಕಾದಂಬರಿ, ನಾಟಕ, ಅನುವಾದ, ಗ್ರಂಥಸಂಪಾದನೆ, ಕಾವ್ಯ ಮೀಮಾಂಸೆ, ಸಂಶೋಧನೆ, ಶಾಸ್ತ್ರ ಸಾಹಿತ್ಯ, ಮಕ್ಕಳ ಸಾಹಿತ್ಯ ಮೊದಲಾದ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯಲೋಕಕ್ಕೆ ಶ್ರೇಷ್ಠ ಕೊಡುಗೆಗಳನ್ನಿತ್ತಿದ್ದಾರೆ. ಚಿತ್ರಕಾರರೂ ಸಂಗೀತಜ್ಞರೂ ಆದ ಅವರು ಹಸ್ತಪ್ರತಿ ಶಾಸ್ತ್ರ, ಗ್ರಂಥ ಸಂಪಾದನ ಶಾಸ್ತ್ರ, ಸಂಶೋಧನರಂಗಗಳಲ್ಲಿ ಕನ್ನಡಕ್ಕೆ ವಿಶಿಷ್ಟ ಕೊಡುಗೆಗಳನ್ನು ನೀಡಿದ್ದಾರೆ. ಮಣಿಹ (ಸಂಪಾದಿತ ಕೃತಿ) ಶ್ರೀ ವಿಜಯಕೃತ ಕವಿರಾಜಮಾರ್ಗ, ಉದಯಾದಿತ್ಯಾಲಂಕಾರ, ಪ್ರಾಚೀನ ಕನ್ನಡ ವ್ಯಾಕರಣಗಳು ಮೊದಲಾದ ಶಾಸ್ತ್ರಗ್ರಂಥಗಳು ಕನ್ನಡಕ್ಕೆ ಎಂ.ವಿ.ಸೀ. ಕೊಟ್ಟ ಅನರ್ಘ್ಯ ಕೊಡುಗೆಗಳಾಗಿವೆ. ತಮ್ಮ ಗುರುಗಳಾದ ಬಿ.ಎಂ.ಶ್ರೀ. ಅವರ ಹೆಸರಿನಲ್ಲಿ "ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ"ವೆಂಬ ಸಂಶೋಧನ ಸಂಸ್ಥೆಯನ್ನು ಪ್ರಾರಂಭಿಸಿ, ಸಂಶೋಧನ ಗ್ರಂಥಗಳನ್ನು ಹೊರತಂದಿದ್ದಾರೆ, ವಿದ್ವದ್‌ಗೋಷ್ಠಿಗಳನ್ನು ನಡೆಸಿದ್ದಾರೆ. ವಿದ್ವಾಂಸರನ್ನು ಸನ್ಮಾನಿಸಿದ್ದಾರೆ. ಅಪೂರ್ವ ಹಸ್ತಪ್ರತಿ ಪುಸ್ತಕ ಭಂಡಾರ ಸ್ಥಾಪಿಸಿದ್ದಾರೆ. ಅಚ್ಚಿನ ಪುಸ್ತಕಗಳ ಪುಸ್ತಕ ಭಂಡಾರದಲ್ಲಿ ಅಪೂರ್ವಗ್ರಂಥಗಳನ್ನು ಸಂಗ್ರಹಿಸಿದ್ದಾರೆ. ಕರ್ನಾಟಕ ಲೋಚನವೆಂಬ ವಿದ್ವತ್ ಪತ್ರಿಕೆಯನ್ನು ಪ್ರಕಟಿಸಿದ್ದಾರೆ. ಯುವ ಸಾಹಿತಿಗಳಿಗೆ ಪ್ರೋತ್ಸಾಹ, ಸ್ಫೂರ್ತಿನೀಡಿ ಮಾರ್ಗದರ್ಶಕರಾಗಿದ್ದಾರೆ. ಕನ್ನಡದಲ್ಲಷ್ಟೇ ಅಲ್ಲದೆ ಇಂಗ್ಲಿಷಿನಲ್ಲೂ ಪರಿಣಿತರಾದ ಅವರು, ಇಂಗ್ಲಿಷಿನಿಂದ ಕನ್ನಡಕ್ಕೆ, ಕನ್ನಡದಿಂದ ಇಂಗ್ಲಿಷಿಗೆ ಹತ್ತಾರು ಕೃತಿಗಳನ್ನು ಅನುವಾದಿಸಿದ ಶ್ರೇಷ್ಠ ಅನುವಾದಕರಾಗಿದ್ದಾರೆ.

ಇಂಗ್ಲಿಷಿನಿಂದ ಕನ್ನಡಕ್ಕೆ ಕವನ, ಕಾದಂಬರಿ ಜೀವನ ಚರಿತ್ರೆ ಕಥೆಗಳನ್ನು ಅನುವಾದಿಸಿರುವ ಎಂ.ವಿ.ಸೀ. ಅವರು ಸಂಸ್ಕೃತವನ್ನು ಬಲ್ಲವರಾಗಿದ್ದರು. ಧಾರ್ಮಿಕ ಗ್ರಂಥಗಳಲ್ಲಿ ಆಸಕ್ತರಾಗಿದ್ದರು. ದಾಸಸಾಹಿತ್ಯದಲ್ಲಿ, ಭಕ್ತಿ ಸಾಹಿತ್ಯದಲ್ಲಿ ಅನೇಕ ಕೃತಿಗಳನ್ನು ಸಂಪಾದಿಸಿದ್ದಾರೆ. ಕೀರ್ತನ ಕುಸುಮಾಂಜಲಿ, ಕವಿ ವೆಂಕಣ್ಣನ ಕೃತಿಗಳು, ಧ್ರುವಚರಿತ್ರೆ, ಶ್ರೀ ಕೃಷ್ಣ ಬಾಲಲೀಲೆ, ತಿಮ್ಮಪ್ಪ ದಾಸರ ಕೃತಿಗಳು, ಅರ್ಚನ ಮುಂತಾದ ಕೀರ್ತನ ಸಾಹಿತ್ಯವನ್ನು ಆದರ್ಶ ರೀತಿಯಲ್ಲಿ ಸಂಪಾದಿಸಿದ್ದಾರೆ. ಹೀಗೆ ಕಾವ್ಯ, ಸಂಶೋಧನೆ ಅನುವಾದ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ವೈವಿಧ್ಯಮಯ ಮೊದಲಾದ ಕೃತಿಗಳನ್ನು ರಚಿಸಿದ ಕನ್ನಡ ಸಾಹಿತ್ಯದ ಕೆಲವೇ ಶ್ರೇಷ್ಠ ಸಾಹಿತಿಗಳಲ್ಲಿ ಇವರು ಒಬ್ಬರಾಗಿದ್ದಾರೆ. ಕನ್ನಡ ಸಾಹಿತ್ಯ ಸಂಶೋಧನಾ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಯಾರೇ ಆಗಲಿ

ಎಂವಿಸೀ ಅವರ ಕೃತಿಗಳನ್ನು ಗಮನಿಸಿದೇ, ಅಧ್ಯಯನ ಮಾಡದೇ ಮುಂದುವರೆಯು ವಂತಿಲ್ಲ. ಅಂಥ ಗಣ್ಯಸೇವೆ ಎಂವಿಸೀ ಅವರದು.

ಎಂ.ವಿ.ಸೀ. ಅವರು ಬರೆದ ಗ್ರಂಥಗಳು ಹಾಗೂ ಲೇಖನಗಳಲ್ಲಿ ಬಹುಪಾಲು ಪ್ರಕಟವಾಗಿದ್ದರೂ ಹಲವಾರು ಕೃತಿಗಳು ಹಸ್ತಪ್ರತಿಯಲ್ಲೇ ಉಳಿದಿವೆ. ಆ ಪೈಕಿ ಆದಿಶಂಕರ ರಚಿತ ಸೌಂದರ್ಯಲಹರೀ ಶತಕದ ಅನುವಾದವು ಒಂದು. ೧೯೮೦ರಲ್ಲಿ ಅವರು ವಾರ್ಧಕ ಷಟ್ಪದಿಯಲ್ಲಿ ರಚಿಸಿದ ಸೌಂದರ್ಯಲಹರಿಯ ಬಗ್ಗೆ ಹೀಗೆ ಹೇಳಿದ್ದಾರೆ.

"ಕೆಲವು ವರ್ಷಗಳ ಹಿಂದೆ ನನ್ನ ಲೇಖನವೊಂದರಲ್ಲಿ ಉದಾಹರಣಾರ್ಥ ಸೌಂದರ್ಯಲಹರಿಯಲ್ಲಿ ನವರಸ ಪ್ರಸಕ್ತಿಯುಳ್ಳ ಎರಡು ಶ್ಲೋಕಗಳನ್ನು ವಾರ್ಧಕ ಷಟ್ಪದಿಯಲ್ಲಿ ಅನುವಾದ ಮಾಡಿದ್ದೆ. ಅವುಗಳನ್ನು ಗಮನಿಸಿದ ನನ್ನ ಮಿತ್ರರೊಬ್ಬರು ಸೌಂದರ್ಯಲಹರಿಯನ್ನು ಪೂರ್ತಿಯಾಗಿ ಅನುವಾದ ಮಾಡಬೇಕೆಂದು ಪ್ರೋತ್ಸಾಹಿಸಿದರು. ೧೯೮೦ರ ಮಾರ್ಚಿ ತಿಂಗಳಲ್ಲಿ ನನ್ನ ಅನುವಾದ ಕಾರ್ಯ ಮುಗಿಯಿತು. ಅಲ್ಲಿಯವರೆಗೂ ಇತರರು ಈ ಉದ್ಧ ಕೃತಿಯನ್ನು ಅನುವಾದ ಮಾಡಿರುವರೆಂಬ ಕಡೆಗೆ ನನ್ನ ಲಕ್ಷ್ಯ ಹೋಗಿರಲಿಲ್ಲ. ಸೌಂದರ್ಯಲಹರಿಗೆ ಜಕ್ಕಣಾಮಾತ್ಯನು ಸಂಸ್ಕೃತ ವ್ಯಾಖ್ಯಾನಗಳನ್ನು ಆಧರಿಸಿ ಕನ್ನಡದಲ್ಲಿ ಒಂದು ಟೀಕನ್ನು ಬರೆದಿದ್ದಾನೆ. ಈ ಟೀಕನ್ನುಳ್ಳ ಸೌಂದರ್ಯಲಹರಿ ಮೈಸೂರು ಪ್ರಾಚ್ಯ ಸಂಶೋಧನಾಲಯದಿಂದ ಪ್ರಕಟವಾಗಿದೆ. ಅನುವಾದ ಕಾರ್ಯದಲ್ಲಿ ಈ ಟೀಕಿನಿಂದ ನಾನು ನೆರವು ಪಡೆದಿದ್ದೇನೆ."

ಎಂ.ವಿ.ಸೀ. ಅವರು ತಾವು ಅನುವಾದ ಮಾಡಿದ ಮೇಲೆ ಕನ್ನಡದಲ್ಲಿ ಸೌಂದರ್ಯ ಲಹರಿಯನ್ನು ಇತರರು ಮಾಡಿದ ಅನುವಾದಗಳನ್ನು ಗಮನಿಸಿ ಅಧ್ಯಯನ ಮಾಡಿದ್ದಾರೆ. ಆ ಬಗ್ಗೆ ಕುರಿತು ಹೇಳಿದ ಮಾತುಗಳಿವು.

"ಅನುವಾದ ಕಾರ್ಯ ಮುಗಿದ ಮೇಲೆ ಇತರರ ಸೌಂದರ್ಯ ಲಹರಿಯ ಅನುವಾದಗಳನ್ನು ನೋಡುವ ಕುತೂಹಲ ಉಂಟಾಯಿತು. ಮೂರು, ನಾಲ್ಕು ಅನುವಾದಗಳು ದೊರೆತವು. ಒಂದೊಂದರಲ್ಲಿ ಒಂದೊಂದು ಬಗೆಯ ವೈಶಿಷ್ಟ್ಯವಿದೆ. ಬೇಂದ್ರೆಯವರೂ ಕೆಲವು ಶ್ಲೋಕಗಳನ್ನು ಮಾತ್ರ ಅನುವಾದ ಮಾಡಿರುವರಂತೆ. ಈ ಹಿನ್ನೆಲೆಯಲ್ಲಿ ಬಿ. ಪುಟ್ಟಸ್ವಾಮಯ್ಯನವರ ಅನುವಾದ ನನ್ನ ಕೈಗೆ ಬಂತು." ಎಂದು ಹೇಳಿ ಆ ಕೃತಿ ಬಗ್ಗೆ ಆಳವಾದ ವಿಮರ್ಶೆ ಮಾಡಿದರು.

ಬಿ. ಪುಟ್ಟಸ್ವಾಮಯ್ಯನವರ ಅನುವಾದವನ್ನು ಮತ್ಸರವಿಲ್ಲದೆ ಪ್ರಶಂಸಿದ್ದಾರೆ: **"ಶ್ರೀ ಪುಟ್ಟಸ್ವಾಮಯ್ಯನವರ ಅನುವಾದಿತ ಪದ್ಯಗಳಲ್ಲಿ ಎದ್ದು ಕಾಣುವ ಲಕ್ಷಣ ಎಂದರೆ ಆದಿಪ್ರಾಸ, ಅಂತ್ಯಪ್ರಾಸಗಳ ಪಾಲನೆ; ಇನ್ನೊಂದು ಸ್ಪಷ್ಟ ಗುಣವೆಂದರೆ ಹಾಡುಗಬ್ಬಕ್ಕೆ ಹೊಂದುವಂತಹ ಹೃದ್ಯವಾದ ಭಾಷಾಶೈಲಿ, ಸಾಂಗತ್ಯದ ಬಂಧುರ ಛಂದೋಬಂಧದಲ್ಲಿ ಮೂಲದ ಪದ್ಯಗಳ ಆಶಯುಕ್ಕೆ ಭಂಗಬಾರದಂತೆ ಅವುಗಳನ್ನು ಕನ್ನಡಿಸಿದ್ದಾರೆ"** ಎಂಬುದಾಗಿ ಸಮಗ್ರಾನುವಾದವನ್ನು ಕುರಿತು ಹೇಳಿದ ಎಂವಿಸೀ ಅವರು, ಅವರು ಮೆಚ್ಚಿದ

ಪದ್ಯಾನುವಾದವೊಂದನ್ನು ಉದಾಹರಿಸಿ ಅದರ ಆಳವಾದ ವಿಮರ್ಶೆ ಮಾಡಿದ್ದಾರೆ. ಇದನ್ನು ಉದಾಹರಿಸುತ್ತಿರುವುದು ಏಕೆಂದರೆ, ಎಂವಿಸೀ ಅವರು ಸೌಂದರ್ಯ ಲಹರಿಯ ಭಾಷಾನುವಾದವಷ್ಟೇ ಮಾಡಿಲ್ಲ, ಮೂಲ ಸಂಸ್ಕೃತದ ಸೌಂದರ್ಯಲಹರಿಯನ್ನು ತುಂಬ ಆಳವಾಗಿ ಅಧ್ಯಯನ ಮಾಡಿದ್ದಾರೆ. ಬಿ. ಪುಟ್ಟಸ್ವಾಮಯ್ಯನವರೂ ಅವರಷ್ಟೇ ಆಳವಾಗಿ ಅರಿತು ಅನುವಾದ ಮಾಡಿದ್ದಾರೆ. ಇಬ್ಬರು ವಿದ್ವಾಂಸರ ವಿದ್ವತ್ ವಿನಯ ವಿಮರ್ಶೆಗೆ ಇದೊಂದು ಮಾದರಿಯಾಗಿದೆ. ಅದಕ್ಕೆ ನಿದರ್ಶನವಾಗಿ ಅದರ ವಿವರವನ್ನು ಇಲ್ಲಿ ಕೊಟ್ಟಿದೆ.

ಎಂವಿಸೀ ಅವರು ಹೇಳಿದ ಮಾತು **"ಸೌಂದರ್ಯಲಹರಿಯಂಥ ಅರ್ಥ ನಿಬಿಡ, ನಿಗೂಢ ಸಂಕೇತಪರ, ತಂತ್ರಶಾಸ್ತ್ರ ಪರಿಭಾಷಾಯುಕ್ತ ಅಧ್ಯಾತ್ಮ ಶ್ರವಣ ಆದರೂ ಕಾವ್ಯಶೋಭೆಯಿಂದ ಕಾವ್ಯ ರಸಿಕರ ಮನಸ್ಸನ್ನೂ ಸೆಳೆಯುವ ಕೃತಿಯನ್ನು ಭಾಷಾಂತರ ಮಾಡುವವನು ವ್ಯುತ್ಪನ್ನಮತಿಯಾಗಿರಬೇಕು ಎಂಬ ಮಾತು ಬಿ. ಪುಟ್ಟಸ್ವಾಮಯಯ್ಯ ಮತ್ತು ಎಂವಿಸೀ ಇಬ್ಬರಿಗೂ ಅನ್ವಯಿಸುತ್ತದೆ."**

ಎಂ.ವಿ.ಸೀ. ಅವರು ಬಿ. ಪುಟ್ಟಸ್ವಾಮಯ್ಯನವರ ಅನುವಾದವನ್ನು ಮೂಲದ ಹಿನ್ನೆಲೆಯಲ್ಲಿ ವಿಮರ್ಶಿಸುತ್ತಾ ಸೌಂದರ್ಯಲಹರಿಯ ೨೧ನೇ ಶ್ಲೋಕವನ್ನು ಉದಾಹರಿಸುತ್ತಾ ಹೇಳುತ್ತಾರೆ.

"ನನ್ನ ಮನಸ್ಸನ್ನು ಒಲಿಸಿಕೊಂಡಿರುವ ಬಿ. ಪುಟ್ಟಸ್ವಾಮಯ್ಯನವರ ಅನುವಾದದ ಅನೇಕ ಪದ್ಯಗಳಲ್ಲಿ ಒಂದನ್ನು ಮಾತ್ರ ಇಲ್ಲಿ ಉದಾಹರಿಸಿ ತೃಪ್ತಿಪಟ್ಟುಕೊಳ್ಳುತ್ತೇನೆ.

"ಸೆಳೆ ಮಿಂಚಿನಂತೆ ತೆಳ್ಳನೆ ತನು ಬೆಳಗಿರೆ
ಶಶಿಸೂರ್ಯವಹ್ನಿ ತತ್ತ್ವಗಳ
ತಳೆದು ತನ್ನಲ್ಲಿ ತಾವರೆಗಳಾರರ ಮೇಲೆ
ಕುಳಿತು ಶೋಭಿಸುವ ನಿನ್ನತುಳ
ಶಕ್ತಿರೂಪದ ಕುಂಡಲಾಕೃತಿ ಕಲೆಯನು
ಕಾಣುವ ಮಹಿತರಿಗಹುದು
ಮುಕ್ತಿಸಾಧನೆಗನುವಹ ಪರಮಾಹ್ಲಾದ
ಲಹರಿಯೋಳ್ ಆತ್ಮಾನುಭವವು (ಪದ್ಯ ೨೧)

ಮೇಲಿನ ಪದ್ಯದಲ್ಲಿ ಎದ್ದು ಕಾಣುವ ಆದಿಪ್ರಾಸ, ಅಡಗಿಕೊಂಡು ಅಭಿವ್ಯಕ್ತವಾಗುವ ಅಂತ್ಯಪ್ರಾಸ, ಇವುಗಳ ಜತೆಗೆ ಕಕಾರ, ತಕಾರ ಮಕಾರಗಳ ಅನುಪ್ರಾಸ ಇವು ಅನುಗೂಡಿ ಪರಿಣಾಮರಮಣೀಯವಾದ ಕಾವ್ಯ ಶರೀರದ ಸೊಬಗು ಶ್ರವ್ಯಕಾವ್ಯಕ್ಕೆ ಉಚಿತವಾದುದು. ಇಂಥ ಹಲವು ನಿದರ್ಶನಗಳು ಈ ಕೃತಿಯಲ್ಲಿ ದೊರಕುತ್ತವೆ. ಈ ಕಾರಣದಿಂದಾಗಿ ಈ ಕನ್ನಡ ಸೌಂದರ್ಯಲಹರಿ ಗೇಯಕ್ಕೆ ಚೆನ್ನಾಗಿ ಒದಗಿಬರುತ್ತದೆ. (ಪುಟ ೩೧, ಸೌಂದರ್ಯ ಲಹರೀ, ಅನು: ಬಿ. ಪುಟ್ಟಸ್ವಾಮಯ್ಯ)"

ಈ ರೀತಿ ಪ್ರಶಂಸೆ ಮಾಡಿದ ಎಂವಿಸೀ ಅವರು ಮೂಲಶ್ಲೋಕಕ್ಕೆ ಪದ ಪದಕ್ಕೆ ಅನುವಾದವನ್ನು ವಿಮರ್ಶಾತ್ಮಕವಾಗಿ ಹೋಲಿಸಿ ಹೋಲಿಸಿ ಈ ಕೆಳಗಿನ ಅಂಶವನ್ನು ಅನುವಾದಕರ ಗಮನಕ್ಕೆ ತರುತ್ತಾರೆ:

''ಮೇಲಿನ ಪದ್ಯದಲ್ಲಿ ಮಹಿತರಿಗೆ' ಎನ್ನುವುದಕ್ಕೆ ಮೂಲದಲ್ಲಿ "ಮೃದಿತಮಲಮಾಯೇನ ಮನಸಾ ಮಹಾನ್ತಃ" ಎಂದು ಮಾತುಗಳಿವೆ. ಮಹಾನ್ತರ ಮಹತ್ವವನ್ನು ವರ್ಣಿಸುವ ವಿಶೇಷಣ (ಮೂಲ ರೂಪದ ಮಾಯೆಯನ್ನು ಎಂದರೆ ಅವಿದ್ಯೆಯನ್ನು-ಅಜ್ಞಾನವನ್ನು ನಿಗ್ರಹಿಸಿದ) ಬಿಟ್ಟುಹೋಗಿದೆ. ಇಂಥ ಸಂದರ್ಭಗಳು ಅನುವಾದದಲ್ಲಿ ಹಲವು ಉಂಟು.

ಹಾಗೆಯೇ ಮದವತಿ ರತಿ (ಪದ್ಯ ೫) "ಸೋಗಿನ ಸಚಿವ ವಸಂತ" (ಪದ್ಯ ೬) ಎಂಬಂತಹ ಕಡೆಗಳಲ್ಲಿ ಮೂಲಾರ್ಥವನ್ನು ವ್ಯತ್ಯಾಸಗೊಳಿಸುವ ಸಂದರ್ಭಗಳು ಕೆಲವು ಉಂಟು. ಮುಖ್ಯವಾದ ಕೆಲವು ಅರ್ಥಪೂರ್ಣ ಪದಗಳು, ಪದಪುಂಜಗಳು ಬಿಟ್ಟುಹೋಗಿರುವ ನಿದರ್ಶನಗಳೂ ಕೆಲವು ಉಂಟು. ಇವೆಲ್ಲಾ ತೀರ ಗೌಣವಾದ ಸಂದರ್ಭಗಳು. ಇಷ್ಟಾದರೂ ಇವರ ಕನ್ನಡ ಸೌಂದರ್ಯಲಹರೀ ಸ್ವತಂತ್ರ ಕೃತಿ ಎನ್ನುವ ಮಟ್ಟಿಗೆ ಸಮರ್ಥವಾದ ಸುಂದರವಾದ ಅನುವಾದವಾಗಿದೆ". (ಪುಟ ೩೧, ಬಿ. ಪುಟ್ಟಸ್ವಾಮಯ್ಯ ಅನುವಾದ)

ಎಂ.ವಿ. ಸೀತಾರಾಮಯ್ಯನವರು ಪ್ರಸ್ತಾಪಿಸಿದ ಮೇಲ್ಕಂಡ ವಿಮರ್ಶೆಯನ್ನು ಕುರಿತು ಬಿ. ಪುಟ್ಟಸ್ವಾಮಯ್ಯನವರು ಹೀಗೆ ಪ್ರತಿಕ್ರಿಯಿಸಿದ್ದಾರೆ:

"ಕನ್ನಡ ಪ್ರಾಧ್ಯಾಪಕ ಎಂ.ವಿ. ಸೀತಾರಾಮಯ್ಯನವರ ಸುದೀರ್ಘ ಅಭಿಪ್ರಾಯ ವೈಶಿಷ್ಟ್ಯಗಳಿಂದ ಕೂಡಿದೆ. ಹತ್ತನೆಯ ಶತಮಾನದಲ್ಲಿ ಪ್ರಾರಂಭವಾಗಿ ಪ್ರಸ್ತುತ ಶತಮಾನದ ಪ್ರಾರಂಭದವರೆಗೆ ಪಂಡಿತ ಪ್ರಿಯವಾಗಿ ಈಗ ಕಾಣೆಯಾಗಿರುವ (ಅಪರೂಪವಾಗಿರುವ) ಅಕ್ಷರ ವೃತ್ತಗಳನ್ನು ಮತ್ತೆ ಪ್ರಚಾರಕ್ಕೆ ತರುವ ಪ್ರಯತ್ನವನ್ನು ಸ್ವಾಗತಿಸಿ ಸೌಂದರ್ಯ ಲಹರಿಯ ಅನುವಾದದಲ್ಲಿ ಕಾಣುವ ಲೋಪದೋಷಗಳನ್ನು ಗುರುತಿಸಿ ಮೂಲ ಅನುವಾದಗಳನ್ನು ವಿಮರ್ಶೆಯ ಅಗ್ನಿಪರೀಕ್ಷೆಗೆ ಒಳಪಡಿಸಿದ್ದಾರೆ. ಇದಕ್ಕಾಗಿ ಅವರು ಆರಿಸಿಕೊಂಡ ೨೧ನೇ ಮೂಲ ಶ್ಲೋಕ ಹೀಗಿದೆ :

ತಟಿಲ್ಲೇಖಾತನ್ವೀ ತಪನ ಶಶಿ ವೈಶ್ವಾನರಮಯೀಂ
ನಿಷಣ್ಣಾಂ ಷಣ್ಣಾಮಪ್ಯುಪರಿ ಕಮಲಾನಾಂ ತವ ಕಲಾಮ್ ।
ಮಹಾ ಪದ್ಮಾಟವ್ಯಾಂ ಮೃದಿತಮಲಮಾಯೇನ ಮನಸಾ
ಮಹಾಂತಃ ಪಶ್ಯಂತೋ ದಧತಿ ಪರಮಾಹ್ಲಾದಲಹರೀಮ್ (ಶ್ಲೋಕ ೨೧)

ನನ್ನ ಅನುವಾದವನ್ನು (ಶ್ಲೋಕ ೨೧) ಮೂಲದೊಡನೆ ತುಲನಾತ್ಮಕ ದೃಷ್ಟಿಯಿಂದ ನೋಡಿದಾಗ ಎಂ.ವಿ.ಸೀ. ಅವರು ಮಹಾಂತ ಶಬ್ದದ ವಿಶೇಷಣವಾದ "ಮೃದಿತಮಲ ಮಾಯೇನ ಮನಸಾ" ಎಂಬುದಲ್ಲದೆ ನೋಡಬೇಕಾದ ಸ್ಥಾನವನ್ನು ನಿರ್ದೇಶಿಸುವ

'ಮಹಾ ಪದ್ಮಾಟವ್ಯಾ' ಎಂಬ ನುಡಿಯೂ ಅನುವಾದದಲ್ಲಿ ಇಲ್ಲವೆಂದೂ, ಮೂಲದಲ್ಲಿರುವ ಶಕ್ತಿರೂಪದ ಕುಂಡಲಾಕೃತಿ ಎಂಬ ಕಲೆಯ ವಿಶೇಷಣವೂ ಸಾಧಕನ ಪರಮಾಹ್ಲಾದ ಲಹರಿಯ ಮುಕ್ತಿ ಸಾಧನೆಯಗನುವಾಗುವುದು ಆತ್ಮಾನುಭಾವವೇ ಎಂಬ ವಿವರಣೆಯು ಕಂಡುಬರುತ್ತದೆ. ಮೂಲದ ಅರ್ಥವನ್ನು ಸ್ಫುಟಗೊಳಿಸುವುದೇ ವಿವರಣೆಯ ಉದ್ದೇಶವೆಂಬುದರ ಅರಿವಾಗದಿರದು."

ಈ ಪರಿಸ್ಥಿತಿಯಲ್ಲಿ ನಾನು ಅನುವಾದವನ್ನು ಮೂಲದೊಡನೆ ವಿಮರ್ಶೆಗೆ ತೊಡಗಿದಾಗ ಸುಮಾರು ೧೦-೨೦ ಪದ್ಯಗಳಲ್ಲಿ ಈ ಅಧ್ಯಾಹಾರ, ಅನುದಾನಗಳು ಐಚ್ಛಿಕವಾಗಿಯೋ, ಪ್ರಾಸಂಗಿಕವಾಗಿಯೋ ನಡೆದಿರುವುದು ಕಂಡುಬಂದಿತು. (ನೋಡಿ ೪, ೬, ೭, ೧೦, ೧೨) ಈ ವ್ಯತಿಕ್ರಮ ಹೇಗಾಯಿತು ನಾನು ಎಡವಿದನೆ? ಎಂದು ಉದ್ವಿಗ್ನನಾದಾಗ ಅದೇ ಸ್ತೋತ್ರದ ಪದ್ಯ (೯೧) ನನಗೆ ಮಾರ್ಗದರ್ಶನ ನೀಡಿ ಮನಃಶಾಂತಿಯನ್ನು ತಂದಿತು.

ಪದನ್ಯಾಸಕ್ರೀಡಾಪರಿಚಯವಾರಬ್ಧುಮನಸಃ
ಸ್ಖಲಂತಸ್ತೇ ಖೇಲಂ ಭವನಕಲಹಂಸಾ ನ ಜಹತಿ
ಅತಸ್ತೇಷಾಂ ಶಿಕ್ಷಾಂ ಸುಭಗಮಣಿಮಂಜೀರರಣಿತ
ಚ್ಛಲದಾಚಕ್ಷಾಣಂ ಚರಣಕಮಲಂ ಚಾರುಚರಿತೇ

ಈ ಪದ್ಯದಲ್ಲಿ ಶಂಕರ ಭಗವತ್ಪಾದರು, ಪದನ್ಯಾಸ ಕ್ರೀಡಾ, ಕವಿ ಪರಿಚಯ ವಿಧಾನದಲ್ಲಿ ಭವನಕಲಹಂಸಾ = ಭಕ್ತಕವಿಗಳು ಸ್ಖಲಂತಃ = ಎಡವಿದಾಗ ಸುಭಗಮಣಿಮಂಜೀರ = ಸೌಭಾಗ್ಯ ಸೂಚಿತವಾದ ಕಾಲ್ಗೆಜ್ಜೆಗಳ ರಣಿತದಿಂದ, ಶಿಕ್ಷಾ = ವಿದ್ಯಾಪ್ರದಾನವನ್ನು ಅನುಗ್ರಹಿಸುವ ಚಾರು = ಉದಾರರಮ್ಯವಾದ ಚರಿತೆ = ಕಾರ್ಯವಿಧಾನ ಇದು. ಸಮರ್ಪಕ ಎಂದು ಸಂಕೇತ ದ್ವಂದ್ವಾರ್ಥಗಳಿಂದ ಕೂಡಿದ ಈ ಪದ್ಯದಲ್ಲಿ ಧ್ವನಿಸಿರುವರೆಂದು ತಿಳಿದೆ. ಎಂದರೆ ಭಕ್ತಕವಿಗಳು ರಚನೆಯಲ್ಲಿ ಎಡವಿದರೂ ಪ್ರಯತ್ನವನ್ನು ಬಿಡದಿರುವುದನ್ನು ಕಂಡಾಗ ದೇವಿಯ ಚರಣಗಳು ಆಚಾರ್ಯ ಸ್ಥಾನದಿಂದ ಮಾರ್ಗದರ್ಶನ ನೀಡುತ್ತದೆ ಎಂದು ಬಿ. ಪುಟ್ಟಸ್ವಾಮಯ್ಯನವರು ಎಂ.ವಿ. ಸೀತಾರಾಮಯ್ಯನವರು ಹೇಳಿದ ಮಾತನ್ನು ಒಪ್ಪಿಕೊಂಡು ಅದಕ್ಕೆ ಕಾರಣ ತಿಳಿಸಿದ್ದಾರೆ. (ಪುಟ ೩೮-೩೯, ಬಿ. ಪುಟ್ಟಸ್ವಾಮಯ್ಯ)

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಎಂ.ವಿ. ಸೀತಾರಾಮಯ್ಯನವರು ಸೌಂದರ್ಯಲಹರೀ ಮೂಲವನ್ನು ಆಳವಾಗಿ ಅಭ್ಯಾಸ ಮಾಡಿದ್ದರು. ಅದರ ಕನ್ನಡ ಟೀಕೆಯನ್ನು ಗಮನಿಸಿದ್ದರು. ಹೀಗಾಗಿ ಅವರು ಸೌಂದರ್ಯಲಹರೀಯನ್ನು ಅನುವಾದಿಸಿದ್ದಾರೆ ಎಂಬುದನ್ನು ಗಮನಿಸಬೇಕು.

ಎಂ.ವಿ.ಸೀ. ಅವರು ಮಾಡಿರುವ ಕನ್ನಡ ಸೌಂದರ್ಯಲಹರೀ ಅನುವಾದವನ್ನು ಕುರಿತು ಕೆಲವು ಮಾತುಗಳನ್ನು ಹೇಳಬೇಕಾಗಿದೆ.

ವಾರ್ಧಿಕ ಷಟ್ಪದಿಯಲ್ಲಿ ಮೂಲಕ್ಕೆ ನೇರಾನುವಾದ ಎಂಬಂತೆ ಅನುವಾದಿಸಿದ್ದಾರೆ. ಉದಾಹರಣೆಗೆ ೧೫ನೇ ಪದ್ಯವನ್ನು ನೋಡಬಹುದು.

ಶರಜ್ಜ್ಯೋತ್ಸ್ನಾಶುದ್ಧಾಂ ಶಶಿಯುತ ಜಟಾಜೂಟ ಮಕುಟಾಂ
ವರತ್ರಾಸತ್ರಾಣ ಸ್ಫಟಿಕ ಘಟಿಕಾ ಪುಸ್ತಕ ಕರಾಮ್
ಸಕೃನ್ನತ್ವಾ ನತ್ವಾ ಕಥಮಿವ ಸತಾಂ ಸನ್ನಿದಧತೇ
ಮಧುಕ್ಷೀರ ದ್ರಾಕ್ಷಾಮಧುರಿಮಧುರೀಣಾಃ ಫಣಿತಯಃ (ಶ್ಲೋಕ ೧೫)

ಶಾರದದ ಬೆಳ್ದಿಂಗಳಂತೆ ಶುಭ್ರಳು, ಚಂದ್ರ
ನನು ಮುಡಿದ ಜಡೆ ಮುಡಿಯ ಮುಡಿಯವಳು, ವರವೀವ
ಅಭಯದೋರುವ ಪಳಿಕುಗಳಸ ಹೊತ್ತಿಗೆಗಳನು ಪಿಡಿದ ನಾಲ್ಕೈಗಳವಳು
ಇಂಥಳಹ ನಿನಗೊಮ್ಮೆಯಾದರೂ ನಮಿಸದಿರೆ
ಎಂತೊದಗುವುದು ತಾಯೆ, ಹಾಲುಜೇನುದ್ರಾಕ್ಷೆ
ಗಳ ಮಧುರಗುಣವುಳ್ಳ ಕವಿತೆಯದು. ಕಾವ್ಯಕರ್ಮಾಸಕ್ತಸಜ್ಜನರಿಗೆ
(ಪದ್ಯ ೧೫)

ಇಲ್ಲಿ ಮೂಲದ "ಶಶಿಯುತ ಜಟಾಜೂಟ ಮಕುಟಾಂ ವರತ್ರಾಸತ್ರಾಣ ಸ್ಫಟಿಕ ಘಟಿಕಾ ಪುಸ್ತಕಕರಾಂ" ಎಂಬ ಮಾತನ್ನು ಚಂದ್ರನನು ಮುಡಿದ ಜಡೆಮುಡಿಯ ಮುಡಿಯವಳು, ವರವೀವ ಅಭಯದೋರುವ ಪಳಕುಗಳ ಹೊತ್ತಿಗೆಗಳನು ಪಿಡಿದ ನಾಲ್ಕೈಗಳವಳು ಎಂಬುದಾಗಿ ಸೊಗಸಾಗಿ ಅನುವಾದಿಸಿದ್ದಾರೆ.

ಇಷ್ಟು ಸೊಗಸಾದ ಪದ್ಯಗಳಿರುವ ಸೌಂದರ್ಯಲಹರಿಯ ವಾರ್ಧಿಕ ಷಟ್ಪದಿಯ ಈ ಪದ್ಯಗಳಲ್ಲಿ ಆದಿಪ್ರಾಸವಿಲ್ಲದಿರುವುದು ಒಂದು ಕೊರತೆ ಆಗಿದೆ. ಅವರ ಕವನ ಸಂಕಲನಗಳನ್ನು ಕಂಡಾಗ ಪ್ರಾಸಯುಕ್ತವಾದ ನೂರಾರು ಕವಿತೆಗಳನ್ನು ರಚಿಸಿರುವುದನ್ನು ಕಾಣುತ್ತೇವೆ. ಆದರೂ ಇಲ್ಲಿ ಆದಿಪ್ರಾಸ ಪದ್ಯಗಳಲ್ಲಿ ಕಾಣದಿರಲು ಕಾರಣವೆಂದರೆ ಸೌಂದರ್ಯಲಹರಿಯ ಮೂಲವೃತ್ತಗಳಲ್ಲಿ ಆದಿಪ್ರಾಸವಿಲ್ಲದಿರುವುದರಿಂದ ಅನುವಾದದಲ್ಲಿ ತರುವ ಅಗತ್ಯವಿಲ್ಲವೆಂದು ಭಾವಿಸಿರಬೇಕು.

ಇನ್ನು ಇವರ ಅನುವಾದದಲ್ಲಿ ಜಕ್ಕಣಾಮಾತ್ಯನ ಸೌಂದರ್ಯಲಹರಿಯ ಅನುವಾದದ ಪ್ರಭಾವ ನಿಚ್ಚಳವಾಗಿ ಕಾಣಿಸಿಕೊಂಡಿದೆ. ಇದಕ್ಕೆ ಕಾರಣ ಅನುವಾದದ ಕಾಲದಲ್ಲಿ ಜಕ್ಕಣಾಮಾತ್ಯನ ಕನ್ನಡ ಟೀಕೆಯನ್ನು ಕಣ್ಣಮುಂದಿಟ್ಟುಕೊಂಡಿದ್ದಾರೆ. ಹಾಗಾಗಿ ಜಕ್ಕಣಾಮಾತ್ಯನು ತನ್ನ ಟೀಕೆಯಲ್ಲಿ ಸೇರಿಸಿರುವ ಮಾತುಗಳನ್ನು ಇವರೂ ತಮ್ಮ ಅನುವಾದದಲ್ಲಿ ತಂದಿದ್ದಾರೆ. ಈ ಮಾತಿಗೆ ಒಂದು ಪದ್ಯವನ್ನು ಉದಾಹರಣಾರ್ಥ ಗಮನಿಸಬಹುದು.

ಮೂಲಪದ್ಯ (೧೪)

ಕ್ಷಿತೌ ಷಟ್ಪಂಚಾಶದ್ ದ್ವಿಸಮಧಿಕಪಂಚಾಶದುದಕೇ
ಹುತಾಶೇ ದ್ವಾಷಷ್ಟಿಶ್ಚತುರಧಿಕ ಪಂಚಾಶದನಿಲೇ
ದ್ವಿವಿ ದ್ವಿಷಟ್ ತ್ರಿಂಶನ್ಮನಸಿ ಚ ಚತುಷ್ಷಷ್ಟಿರಿತಿ ಯೇ
ಮಯೂಖಾಸ್ತೇಷಾಮಪ್ಯುಪರಿ ತವ ಪಾದಾಂಬುಜಯುಗಮ್ ॥

[ಓ ದೇವಿ! ಪೃಥ್ವೀ ತತ್ತ್ವದಿಂದ ಕೂಡಿದ ಮೂಲಾಧಾರದಲ್ಲಿ
೫೬ ಕಿರಣಗಳಿವೆ. ಆಪ್‌ತತ್ತ್ವದಿಂದ ಕೂಡಿದ ಮಣಿಪೂರದಲ್ಲಿ
೫೨ ಕಿರಣಗಳಿವೆ ತೇಜಸ್ತತ್ವದಿಂದ ಕೂಡಿದ ಸ್ವಾಧಿಷ್ಠಾನದಲ್ಲಿ
೬೨ ಕಿರಣಗಳಿವೆ ವಾಯುತತ್ತ್ವದಿಂದ ಕೂಡಿದ ಅನಾಹತ ಚಕ್ರದಲ್ಲಿ
೫೪ ಕಿರಣಗಳಿವೆ ಆಕಾಶತತ್ತ್ವದಿಂದ ಕೂಡಿದ ವಿಶುದ್ಧ ಚಕ್ರದಲ್ಲಿ
೭೨ ಕರಿಣಗಳಿವೆ ಮನಸ್ತತ್ವದಿಂಧ ಕೂಡಿದ ಆಜ್ಞಾಚಕ್ರದಲ್ಲಿ
೬೪ ಕಿರಣಗಳಿವೆ ಹೀಗೆ ಷಟ್‌ಚಕ್ರಗಳಲ್ಲೂ ಇರುವ
೩೬೦ ಕಿರಣಗಳ ಪುಂಜದ ಮೇಲೆ ನಿನ್ನ ಪಾದಾರವಿಂದಗಳೆರಡೂ ಬೆಳಗುತ್ತಿರುವುವು (ಪದ್ಯ ೧೪)

(–ಎನ್.ಎಸ್. ವೆಂಕಟನಾಥಾಚಾರ್ಯರ ಅನುವಾದ)

ಎಂ.ವಿ.ಸೀ. ಅವರ ಅನುವಾದ

ಐವತ್ತು ಮೇಲಾರು ಭೂನಿಷ್ಠಚಕ್ರದಲಿ
ಐವತ್ತು ಮೇಲೆರಡು ಜಲಯುಕ್ತ ಚಕ್ರದಲಿ
ಅಗ್ನಿಚಕ್ರದಲಾರು ಹತ್ತು ಮೇಲೆರಡನಿಲದಲ್ಲಿ ಐವತ್ತುನಾಲ್ಕು
ಆಕಾಶ ಚಕ್ರದಲ್ಲೆಪ್ಪತ್ತು ಮೇಲೆರಡು
ಮಾನಸದ ಚಕ್ರದಲ್ಲರುವತ್ತು ನಾಲ್ಕಂತು
ಮುನ್ನೂರರುವತ್ತು ಕಿರಣಗಳ ಮೇಲ್ನಿನ್ನಡಿದಾವರೆಗಳ ಜೋಡಿ (ಪುಟ ೧೪)

ಷಟ್ಚಕ್ರಗಳಲ್ಲಿ ಇರುವಂಥಾ ಕಿರಣಗಳ ಮೊತ್ತವನ್ನು ೩೬೦ ಎಂದು ಜಕ್ಕಣಾಮಾತ್ಯ ಕೂಡಿದ್ದಾನೆ. ಮೂಲ ಶ್ಲೋಕದಲ್ಲಿ ಕೂಡಿಲ್ಲ ಜಕ್ಕಣಾಮಾತ್ಯನು ತನ್ನ ಟೀಕೆಯಲ್ಲಿ "ಹೀಗೆ ವೇದಶಾಸ್ತ್ರಗಳಲ್ಲಿ ಪ್ರಸಿದ್ಧವಾದ ಚಕ್ರಗಳಲ್ಲಿ ಇರುವಂಥಾ ಮುನ್ನೂರ ಅರವತ್ತು ಕಿರಣಗಳ ಮೇಲೆ ಸಹಸ್ರ ಕಮಲಮಧ್ಯ ಚಂದ್ರಬಿಂಬಸ್ವರೂಪವಾದ ಬಿಂದುಸ್ಥಾನವೆಂಬ ಹೆಸರುಂಟಾದ ಅಮೃತಸಮುದ್ರ ಮಧ್ಯದಲ್ಲಿ ನಿನ್ನ ಪಾದಪದ್ಮಂಗಳು ಇದ್ದಾವೆ" (ಜಕ್ಕಣಾಮಾತ್ಯ, ಪು. ೨೨)

ಈ ಮಾತನ್ನು ಎಂ.ವಿ.ಸೀ. ಅವರು "ಇಂತು ಮುನ್ನೂರ ಅರವತ್ತು ಕಿರಣಗಳ ಮೇಲ್ನಿನ್ನಡಿದಾವರೆಗಳ ಜೋಡಿ" ಎಂದು ಅನುವಾದಿಸಿದ್ದಾರೆ.

ಇನ್ನು ಎಂ.ವಿ.ಸೀ. ಅವರು ಬಳಸಿರುವ ವಾರ್ಧಿಕ ಷಟ್ಪದಿ ಬಗ್ಗೆ ಎರಡು ಮಾತು ಹೇಳಬೇಕಾಗಿದೆ. ಕನ್ನಡದಲ್ಲಿ ವಾರ್ಧಿಕಷಟ್ಪದಿ ಬಳಸಿ ಸೌಂದರ್ಯಲಹರಿಯನ್ನು

ಅನುವಾದಿಸಿರುವವರಲ್ಲಿ ಗಮಕಿ ಶಂಕರನಾರಾಯಣ ಅವರೊಬ್ಬರು. ಇವರು ಪ್ರತಿ ಪದ್ಯಕ್ಕೂ ೬ ಸಾಲುಗಳಿರುವಂತೆ ಆದಿಪ್ರಾಸ ಇರುವಂತೆ ಮೂಲ ಪದ್ಯಗಳನ್ನು ಅನುವಾದಿಸಿದ್ದಾರೆ.

ಎಂ.ವಿ.ಸೀ. ಅವರು ಇಡೀ ಸೌಂದರ್ಯಲಹರೀಯನ್ನು ವಾರ್ಧಕ ಷಟ್ಪದಿಯಲ್ಲಿ ಅನುವಾದಿಸಲು ಹೊರಟವರು ಯಾಕೋ ಏನೋ ಒಂದೆಡೆ ೭ ಸಾಲುಗಳಲ್ಲಿ ಪದ್ಯ ರಚಿಸಿದ್ದಾರೆ.

ಆ ಪದ್ಯ ಹೀಗಿದೆ:

ಅದೆ ತಾನೆ ಬುಡದಲ್ಲಿ ಬೆವರಿಟ್ಟು, ಬಿಗಿ ಕಟ್ಟು
ವಡೆದ ಕುಪ್ಪುಸಪೊಟ್ಟನೊಡೆದು ಹರಿವಂತಿರಲು
ತೋಳತಳಕುಜ್ಜುತಿಹ ಚಿನ್ನಕಲಶದ ತೆರನ ಚೆನ್ನ ಮೊಲೆ ಜೋಡಿಯನ್ನ
ನಿನ್ನ ನಡು ಮುರಿದು ಬೀಳದೆ ಧರಿಸಿಲಾರ್ಪಂತೆ
ಮನ್ಮಥನು ಯೇಲಕಿಯ ಬಳ್ಳಿಯಿಂದವನು ಮೂ-
ವಳಸಾಗಿ ಬಳಸಿ ಬಲುಬಿಗಿಯಾಗಿ ಬಂಧಿಸಿಹ
ನೆನುವಂತೆ, ಎಲೆದೇವಿ, ನಿನ್ನ ನಡುವಿನ ಬಳಿಯ ಶೋಭಿಸಿಹುದು

ಹೀಗೆ ೭ ಸಾಲುಗಳನ್ನು ರಚಿಸಲು ಕಾರಣವನ್ನು ಅವರ ಹಸ್ತಪ್ರತಿಯಲ್ಲಿ ಟಿಪ್ಪಣಿ ಬರೆದಿದ್ದಾರೆ "ಮೂಲದ ಭಾವವೆಲ್ಲವೂ ೬ ಸಾಲುಗಳಲ್ಲಿ ಮೂಡಲು ಅಶಕ್ಯವೆನಿಸಿ ಷಟ್ಪದಿ ಆಗಿರಬೇಕಾದದ್ದು ಸಪ್ತಪದಿಯಾಗಿ ಪರಿಣಮಿಸಿದೆ"

ಇದೇ ರೀತಿಯಾಗಿ ಪದ್ಯ ೩೧ ಮತ್ತು ಪದ್ಯ ೯೨ಗಳನ್ನು ಚೌಪದಿಯನ್ನಾಗಿ ಅನುವಾದಿಸಿದ್ದಾರೆ. ಈ ಬಗ್ಗೆ ಅವರು ಟಿಪ್ಪಣಿ ಬರೆದಿಲ್ಲ ಕಾರಣ ತಿಳಿಸಿಲ್ಲ.

ಇವುಗಳನ್ನು ಕಂಡಾಗ ಸಾಮಾನ್ಯವಾಗಿ ಮೂಲದ ಭಾವವನ್ನು ತರಲು ಷಟ್ಪದಿ ಕಾವ್ಯರಚಕರು ಒಂದೇ ರೀತಿಯ ಛಂದಸ್ಸನ್ನು ಬಳಸುವ ಸಂಪ್ರದಾಯವನ್ನು ಎಂವಿಸೀ ಅವರು ಇಲ್ಲಿ ಪಾಲಿಸಿಲ್ಲವೆಂದು ತಿಳಿಯುತ್ತದೆ. ಯಾವ ಬಗೆಯ ಛಂದಸ್ಸಿನಲ್ಲಾದರು ಕಾವ್ಯ ರಚನೆ ಮಾಡಬಲ್ಲ ಶಕ್ತಿಯಿರುವ ಎಂವಿಸೀ ಅವರು ಹೀಗೇಕೆ ಮಾಡಿದರು ಎಂಬುದು ಅರ್ಥವಾಗುತ್ತಿಲ್ಲ. ಎಂವಿಸೀ ಅವರು ಹಳಗನ್ನಡ ವಿದ್ವಾಂಸರಾಗಿರುವ ಕಾರಣ ಈ ಕಾವ್ಯಾನುವಾದದಲ್ಲಿ ಶಿಥಿಲ ದ್ವಿತ್ವಗಳನ್ನು ಬಳಸಿದ್ದಾರೆ (ಪದ್ಯ ೩ ನೋಡಿ).

ಮತ್ತೊಂದು ಸಂಗತಿ ಎಂದರೆ ನಮ್ಮಲ್ಲಿ ನವೋದಯ ಕಾಲದ ಕೆಲವು ವಿದ್ವಾಂಸ ಕವಿಗಳಲ್ಲಿ ಒಂದು ಪ್ರವೃತ್ತಿ ಕಾಣುತ್ತದೆ. ಅದೇಂದರೆ ಕವಿಯ ಪಾಠಾಂತರಗಳು ಎಂದರೆ ಕವಿಯೇ ತಾನು ಬರೆದ ಕಾವ್ಯವನ್ನು ಮರು ಪರಿಶೀಲಿಸಿದಾಗ ಅಥವಾ ಮರುಮುದ್ರಣದ ಕಾಲದಲ್ಲಿ ಪದ್ಯಗಳನ್ನು ಪರಿಷ್ಕರಿಸಿ ಪಾಠಾಂತರಗಳನ್ನು ಸೂಚಿಸುವ ಪರಿಪಾಟವನ್ನು ಡಿವಿಜಿ, ಪುತಿನ, ವಿಸೀ, ಕುವೆಂಪು ಮೊದಲಾದವರಲ್ಲಿ ಕಾಣುತ್ತೇವೆ. ಡಿವಿಜಿ ಅವರ

ವಸಂತ ಕುಸುಮಾಂಜಲಿ, ಪುತಿನ ಅವರ ಭಗವದ್ಗೀತೆ ವಿಸೀ ಅವರ ಅರಳು ಬರಲು ಕುವೆಂಪು ಅವರ ರಾಮಾಯಣ ದರ್ಶನಂಗಳಲ್ಲಿ ಕವಿಯ ಪಾಠಾಂತರಗಳನ್ನು ಗುರುತಿಸಬಹುದು. ಎಂವಿಸೀ ಅವರೂ ಈ ಗುಂಪಿಗೇ ಸೇರಿದವರು. ಉದಾಹರಣೆಗೆ ಸೌಂದರ್ಯಲಹರಿಯ ೬೮ನೇ ಪದ್ಯಕ್ಕೆ ಹಸ್ತಪ್ರತಿಯಲ್ಲಿ ತಾವೇ ಪಾಠಾಂತರ ಸೂಚಿಸಿದ್ದಾರೆ.

ಗತಿಗಮಕಯುಕ್ತ ಸಂಗೀತ ನಿಪುಣೇ ಶಿವೇ
ವೈವಾಹ ಸಮಯದಲಿ ನಿನ್ನ ಕೊರಳಿಗೆ ಶಿವನು
ತಾನೆ ಕಟ್ಟಿಹ ಮೂರು ಎಳೆಯ ಮಂಗಳಸೂತ್ರವೋ...
ವಿವಿಧ ರೀತಿಯೊಳಿಹ....

ಇಲ್ಲಿ "ಮೂರು ಎಳೆಯ ಮಂಗಳ ಸೂತ್ರವೋ ಎಂಬ ಪಾಠ ಸೂಚಿಸಿದ್ದಾರೆ. ೧/೪ ಚತುರ್ಥಾಕಾರದ ೨೫ ಹಾಳೆಗಳಲ್ಲಿ ಮುದ್ದಾದ ದುಂಡನೆಯ ಅಕ್ಷರಗಳಲ್ಲಿ ಬರೆದಿರುವ ಕಾಗದ ಪ್ರತಿ. ಶ್ರೀ ಶಂಕರಾಚಾರ್ಯ ವಿರಚಿತಾ ಸೌಂದರ್ಯಲಹರೀ" ಎಂದು ಶೀರ್ಷಿಕೆ ಇದೆ. ೧೦೦ನೇ ಪದ್ಯದ ನಂತರ "ಹರಿಃ ಓಂ ತತ್ಸತ್" ಎಂದು ಮುಕ್ತಾಯ ಮಾಡಿದ್ದಾರೆ. ಪ್ರತಿ ಪದ್ಯವನ್ನೂ ೬ ಸಾಲುಗಳಲ್ಲಿ ಷಟ್ಪದೀ ರೂಪದಲ್ಲಿ ಬರೆದಿದ್ದಾರೆ. ಪದ್ಯಗಳಿಗೆ ಕನ್ನಡ ಅಂಕಿಗಳಲ್ಲಿ ಸಂಖ್ಯೆ ಕೊಟ್ಟಿದ್ದಾರೆ.

ಬಿ. ಪುಟ್ಟಸ್ವಾಮಯ್ಯನವರ ಸೌಂದರ್ಯಲಹರೀ ಕನ್ನಡಾನುವಾದದ ಬಗ್ಗೆ ಬರೆಯುವಾಗ ಎಂ.ವಿ.ಸೀ. ಅವರು ೧೯೭೦ ಮಾರ್ಚಿಯಲ್ಲಿ ರಚಿಸಿದೆ ಎಂದು ಹೇಳಿದ್ದಾರೆ. ಆನಂತರ ೧೪-೫-೧೯೭೫ರಲ್ಲಿ ಅವರ ಪುತ್ರ ರಾಮಪ್ರಸಾದ್ ಬರೋಡೆಯಲ್ಲಿ ಉದ್ಯೋಗದಲ್ಲಿದ್ದಾಗ ಅವರ ಮನೆಗೆ ಹೋಗಿದ್ದ ಎಂ.ವಿ.ಸೀ. ಅವರು ಅಲ್ಲಿ ಮುದ್ರಣಕ್ಕೆ ಕರಡು ಪ್ರತಿಯನ್ನು ತಿದ್ದಿ ಸಿದ್ಧಪಡಿಸಿದರು (ರಾಮಪ್ರಸಾದರು ತಿಳಿಸಿದ ಸಂಗತಿ). ಆಗ ಪರಿಶೀಲಿಸಿದಾಗ ಹಸ್ತಪ್ರತಿಯಲ್ಲಿ ಕಂಡುಬಂದ ಅಕ್ಷರ ಸ್ಖಾಲಿತ್ಯಗಳನ್ನು ತಿದ್ದಿದಂತೆ ಕಾಣುತ್ತದೆ. ಏಕೆಂದರೆ ಹಸ್ತಪ್ರತಿಯಲ್ಲಿ ಅಲ್ಲಲ್ಲಿ ಅಕ್ಷರಗಳನ್ನು ತಿದ್ದಿದ್ದಾರೆ. ಪದ್ಯ ೧೯ ಹರವರ್ಧವನ್ನಲ್ಲಿ ಎಂಬ ಕಡೆ....ರ್ಧ ಕೆಳಗೆ ಸಾಲು ಚುಕ್ಕೆ ಇನ್ನು ರ್ಧ ಎಂಬ ಅಕ್ಷರವನ್ನು ಸೂಚಿಸಿದ್ದಾರೆ. ಪದ್ಯ ೭೫ರಲ್ಲಿ ಎಲೆದೇವಿ ಪದವನ್ನು ಓ ದೇವಿ ಎಂದು ಬದಲಿಸಿದ್ದಾರೆ.

ಪದ್ಯ ೬೫ರಲ್ಲಿ ತನ್ನ ವೀಣೆಯನ್ನು ಮುಚ್ಚಿದಳು ಹೊದಿಕೆ ತೊಡಿಸಿ ಎಂಬಲ್ಲಿ ತನ್ನ ಎಂಬ ಪದವನ್ನು ವೀಣೆಯನು ಪದದ ಮೊದಲಿಗೆ ತಂದಿದ್ದಾರೆ.

ಪದ್ಯ ೯೩ರಲ್ಲಿ ಕುರುಳೆಲ್ಲ ಗುಂಗುರು ಪದ ಹೊಡೆದು ಹಾಕಿ ಉಂಗುರುಂಗುರ ಗುರುಳು ಇನ್ನು ಶಿಥಿಲ ದ್ವಿತ್ವಗಳನ್ನು * ನಕ್ಷತ್ರ ಚಿಹ್ನೆಯಿಂದ ಗುರುತಿಸಿದ್ದಾರೆ. ಪದ್ಯ ೧೧ರಲ್ಲಿ ನಾಲ್ಕು ಶ್ರೀಕಂಠ ಚಕ್ರಗಳಿಂದೆ ಶ್ರೀ ಎಂಬಲ್ಲಿ * ನಕ್ಷತ್ರ ಚಿಹ್ನೆ ಹಾಕಿದ್ದಾರೆ.

ಹೀಗೆ ಅಲ್ಲೊಂದು ಇಲ್ಲೊಂದು ಕಂಡುಬಂದ ದೋಷಗಳನ್ನು ತಿದ್ದಿದ್ದಾರೆ. ಮಗನ ಮನೆಯಲ್ಲಿದ್ದಾಗ ಈಗ ಲಭ್ಯವಿರುವ ಶುದ್ಧ ಪ್ರತಿಗೆ ಆಧಾರವಾದ ಮೂಲಪ್ರತಿ ಲಭ್ಯವಿಲ್ಲದಿರುವುದರಿಂದ ಅದರ ಸ್ವರೂಪ ತಿಳಿದುಬರುವುದಿಲ್ಲ.

ಪದ್ಯ ೭೩ರಲ್ಲಿ ೩ನೇ ಸಾಲಿನಲ್ಲಿ "ಲತಿಕೆಯನು ಶಿವನ ಪ್ರತಾಪ ಮಿಶ್ರಿತವಾದ ಕೀರ್ತಿಯನು ತನು ತಳೆದಿರುವುದೋ ಎನುವಂತೆ" ಎಂಬ ಪದಗಳನ್ನು ಹೊಡೆದುಹಾಕಿ "ಲತಿಕೆಯನು ಬಿಂಬಾಧರದ ಕಾಂತಿಯಿಂದೊಳಗೆ ಕೆಂಪಾಗಿ ಶೋಭಿಸುವುದು" ಎಂದು ತಿದ್ದಿದ್ದಾರೆ.

ಅಕ್ಷರ ವಿನ್ಯಾಸವನ್ನು ಕುರಿತಾದ ಒಂದಂಶ ಗಮನಿಸಬಹುದು ಬಾಲ್ಯದೊಳು ಕಲಿಸಿದ ಅಕ್ಕರಗಳನ್ನು ಬದಲಿಸಿಕೊಳ್ಳುವುದು ಕಷ್ಟ. ಗೋವಿಂದ ಪೈ ಅವರು ಈ ಎಂಬ ಅಕ್ಷರವನ್ನು ವಿಚಿತ್ರವಾಗಿ ಬರೆಯುತ್ತಿದ್ದರು. ಕಾರಣ ಅವರು ಚಿಕ್ಕಂದಿನಲ್ಲಿ ಅಕ್ಷರ ಕಲಿತ ರೀತಿ ಅಥವಾ ಅವರ ಗುರುಗಳು ಕಲಿಸಿದ ರೀತಿ (ನೋಡಿ ಜಿ.ಪಿ. ರಾಜರತ್ನಂ ಸಂಪಾದಿಸಿದ ಗೋವಿಂದ ಪೈ ಪತ್ರಗಳು ಪುಸ್ತಕ.) ಎಂ.ವಿ.ಸೀ. ಅವರು ಜು ಅಕ್ಷರವನ್ನು ಮತ್ತು ವೀ ಅಕ್ಷರವನ್ನು ತೆಲುಗು ರೀತಿಯಲ್ಲಿ ಬರೆದಿದ್ದಾರೆ. ಬಹುಶಃ ತೆಲುಗು ಪ್ರಭಾವದಿಂದ ಅನ್ನಿಸುತ್ತದೆ.

ಹಸ್ತಪ್ರತಿಯ ಅಕ್ಷರಸ್ಖಾಲಿತ್ಯ ಲಿಪಿಸ್ಖಾಲಿತ್ಯವನ್ನಷ್ಟೇ ತಿದ್ದಿ ಹಸ್ತಪ್ರತಿಯನ್ನು ಅಚ್ಚಿಗೆ ಸಿದ್ಧಗೊಳಿಸಲಾಗಿದೆ.

ಗ್ರಂಥ ಪರಿಷ್ಕರಣ ವಿಚಾರ

ಬಿ.ಎಂ.ಶ್ರೀ ಪ್ರತಿಷ್ಠಾನದವರು ಬಿ.ಎಸ್. ಕಪನೀಪತಯ್ಯನವರ ಸೌಂದರ್ಯಲಹರೀ ಟೀಕೆ (ಕಾಗದದ ಹಸ್ತಪ್ರತಿ) ಎಂ.ವಿ. ಸೀತಾರಾಮಯ್ಯನವರ ಪದ್ಯಾನುವಾದ ಹಸ್ತಪ್ರತಿ ಕಾಗದ ಕೊಟ್ಟಾಗ ಮೂಲ ಶ್ಲೋಕಗಳೊಡನೆ ಇಷ್ಟನ್ನೇ ಪ್ರಕಟಿಸಿದರೆ ಓದುಗರಿಗೆ ಹೆಚ್ಚು ಉಪಯುಕ್ತವಾಗಲಾರದೆಂದು ಭಾವಿಸಿದೆ ಮತ್ತು ಕನ್ನಡದಲ್ಲಿ ಪ್ರಕಟವಾದ ಸೌಂದರ್ಯ ಲಹರಿಯ ಅನುವಾದಗಳನ್ನು ಪರಿಶೀಲಿಸಿದಾಗ ಅವುಗಳನ್ನು ತಮ್ಮದೇ ಆದ ದೃಷ್ಟಿಯಿಂದ ಅನುವಾದಕರು ಕನ್ನಡಕ್ಕೆ ತಂದಿದ್ದಾರೆ. ಆದರೆ ಸಮಗ್ರ ದೃಷ್ಟಿಯಿಂದ ಕನ್ನಡದಲ್ಲಿ ಸೌಂದರ್ಯಲಹರೀ ಸ್ತೋತ್ರ ಪ್ರಕಟವಾಗಿಲ್ಲ ಎನ್ನಿಸಿತು.

ಕನ್ನಡದಲ್ಲಿ ಇದುವರೆಗೆ ಪ್ರಕಟವಾಗಿರುವ ಸೌಂದರ್ಯಲಹರೀ ಸ್ತೋತ್ರ ಗ್ರಂಥಗಳನ್ನು ಹೀಗೆ ವರ್ಗೀಕರಿಸಬಹುದು.

೧. ಮೂಲಸ್ತೋತ್ರಪಾಠ ಗ್ರಂಥಗಳು (ಪಾರಾಯಣಕ್ಕೆ)
೨. ಮೂಲ ಮತ್ತು ತಾತ್ಪರ್ಯ ಗ್ರಂಥಗಳು
೩. ಮೂಲ ಅನ್ವಯಾರ್ಥ ತಾತ್ಪರ್ಯ ಗ್ರಂಥಗಳು
೪. ಮೂಲ ಪದ್ಯಾನುವಾದಗಳು
೫. ಮೂಲ ಟಿಪ್ಪಣಿಗಳು

೬. ಮೂಲ ಸಂಸ್ಕೃತ ಟೀಕೆಗಳು
೭. ಮೂಲ ಕನ್ನಡ ಟೀಕೆಗಳು

ಇವುಗಳ ಪಟ್ಟಿಯನ್ನು ಅನುಬಂಧದಲ್ಲಿ ಕಾಣಬಹುದು. ಇವೆಲ್ಲವನ್ನು ಆಧಾರವಾಗಿಟ್ಟುಕೊಂಡು ಮತ್ತು ಸಂಸ್ಕೃತ, ತೆಲುಗು, ಇಂಗ್ಲಿಷ್ ಅನುವಾದಗಳನ್ನು ಗಮನಿಸಿ ಪ್ರಸ್ತುತ ಗ್ರಂಥವನ್ನು ಸಂಪಾದಿಸಲಾಗಿದೆ. ಮೂಲ–ಪಾಠಾಂತರ–ಪದವಿಭಾಗ–ಅನ್ವಯಾರ್ಥ–ತಾತ್ಪರ್ಯ–ಪದ್ಯಾನುವಾದ–ಟಿಪ್ಪಣಿಗಳು–ಯಂತ್ರ ರಚನೆ–ಪೂಜಾ ವಿಭಾಗ–ಫಲಸಿದ್ಧಿ ಈ ಕ್ರಮದಲ್ಲಿ ಗ್ರಂಥವನ್ನು ಸಿದ್ಧಪಡಿಸಿದೆ.

೧. ಮೂಲ ಶ್ಲೋಕಗಳ ಪಠ್ಯ

ಮೂಲ ಶ್ಲೋಕಗಳನ್ನು ಕನ್ನಡ ಲಿಪಿಯಲ್ಲಿ ಅಚ್ಚು ಮಾಡಿರುವ ಕನ್ನಡಾನುವಾದ ಗ್ರಂಥಗಳಲ್ಲಿ ಶುದ್ಧರೂಪದಲ್ಲಿ ಅಚ್ಚಿನ ದೋಷವಿಲ್ಲದೆ ಪ್ರಕಟವಾಗಿರುವುದು ತೀರಾ ಕಮ್ಮಿ.

ವಿದ್ವಾನ್ ಶೇಷಾಚಲ ಶರ್ಮ, ಲಕ್ಷ್ಮೀಶ ತೋಳ್ಪಾಡಿ, ಜಕ್ಕಣಾಮಾತ್ಯ ಮೊದಲಾದವರ ಪ್ರತಿಗಳು ಸಾಕಷ್ಟು ಶುದ್ಧಪಾಠವನ್ನು ಒಳಗೊಂಡಿವೆ. ಹಲವರು ಓದುಗರ ಅನುಕೂಲಕ್ಕೆಂದು ಸಮಾಸಪದಗಳನ್ನು ಬಿಡಿಸಿ ಅಚ್ಚು ಮಾಡಿದ್ದಾರೆ. ಉದಾಹರಣೆಗೆ ಮೊದಲನೇ ಶ್ಲೋಕವನ್ನು ಗಮನಿಸಬಹುದು.

ಸೌಂದರ್ಯಲಹರೀ ಸ್ತೋತ್ರವು ಶಿಖರಿಣೀ ಛಂದಸ್ಸಿನಲ್ಲಿ ರಚಿತವಾಗಿದೆ. ಈ ಶ್ಲೋಕದಲ್ಲಿ ಪ್ರತಿ ಸಾಲಿನ ೬ ಮತ್ತು ೧೧ನೇ ಸ್ಥಾನದಲ್ಲಿ ಯತಿ ಬರುತ್ತದೆ.

* *

"ಶಿವಃ ಶಕ್ತ್ಯಾಯುಕ್ತೋ ಯದಿಭ । ವತಿ ಶಕ್ತಃ ಪ್ರಭವಿತುಂ" ಎಂಬಲ್ಲಿ ಕ್ತೋ ತಿ ಅಕ್ಷರಗಳನಂತರ ಯತಿ (ವಿಶ್ರಾಮ ಸ್ಥಾನ) ಬರುತ್ತದೆ. ಶಿವಃ ಶಕ್ತ್ಯಾಯುಕ್ತೋ ಎಂದು ಬಿಡಿಸಿದಲ್ಲಿ ಶಿವಃ ಎಂಬಲ್ಲಿಯೂ ಯತಿ ಬರುತ್ತದೆ. ಶಿಖರಿಣೀ ಛಂದಸ್ಸಿನಲ್ಲಿ ೨ನೇ ಅಕ್ಷರದ ನಂತರ ಯತಿ ಇಲ್ಲ. ಆದ್ದರಿಂದ ಶಿವಶ್ಶಕ್ತ್ಯಾಯುಕ್ತೋ ಎಂದು ಅಚ್ಚು ಮಾಡುವುದು ಸೂಕ್ತ. ಆದ್ದರಿಂದ ಲಕ್ಷ್ಮೀಧರನ ವ್ಯಾಖ್ಯಾನ ಸಹಿತ ಸೌಂದರ್ಯಲಹರೀ ಸ್ತೋತ್ರ ಗ್ರಂಥದ (ಸಂಸ್ಕೃತ) ೧೯೫೩ರ ಮೈಸೂರಿನ ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್ ಪ್ರಕಟನೆಯನ್ನು ಅನುಸರಿಸಿ ಶ್ಲೋಕಗಳನ್ನು ಅಚ್ಚು ಮಾಡಿದೆ. ಆದಷ್ಟುಮಟ್ಟಿಗೆ ಅಚ್ಚಿನದೋಷಗಳಿಲ್ಲದಂತೆ ಮೂಲ ಶ್ಲೋಕಗಳನ್ನು ಪ್ರಕಟಿಸಲಾಗಿದೆ.

ಸೌಂದರ್ಯಲಹರೀ ಸ್ತೋತ್ರದ ಶ್ಲೋಕಗಳ ಸಂಖ್ಯೆ ೧೦೦ ಎಂದು ನಿರ್ಧರಿಸಲಾಗಿದೆ. ಆದರೆ ಕೆಲವು ಪ್ರತಿಗಳಲ್ಲಿ ೧೦೩ ಶ್ಲೋಕಗಳನ್ನು ಕೊಡಲಾಗಿದೆ. ೩ ಅಧಿಕ ಶ್ಲೋಕಗಳನ್ನು ಕೆಲವರು ಪಠ್ಯದ ಕೊನೆಗೆ ಸೇರಿಸಿದ್ದಾರೆ. ಕೆಲವರು ಅನುಬಂಧವಾಗಿ ಕೊಟ್ಟಿದ್ದಾರೆ. ಈ ಗ್ರಂಥದಲ್ಲಿ ೧೦೧, ೧೦೨, ೧೦೩ನೇ ಶ್ಲೋಕಗಳನ್ನಾಗಿ ಸೇರಿಸಿ ಅವು ಪಠ್ಯಕ್ಕೆ ಸೇರಿಲ್ಲ ಎಂಬುದನ್ನು ಸೂಚಿಸಲು * ಚಿಹ್ನೆಯನ್ನು ಬಳಸಿದೆ.

ಸಾಮಾನ್ಯವಾಗಿ ಶ್ಲೋಕಗಳ ಅನುಕ್ರಮಣಿಕೆ ಎಲ್ಲಾ ಪ್ರತಿಗಳಲ್ಲಿ ಒಂದೇ ರೀತಿ ಇದೆ. ಆದರೆ ಕೆಲವು ಗ್ರಂಥದಲ್ಲಿ ಕ್ರಮ ವ್ಯತ್ಯಾಸ ಕಂಡುಬರುತ್ತದೆ. ಉದಾಹರಣೆಗೆ ಜಕ್ಕಣಾಮಾತ್ಯನ ಟೀಕಾ ಗ್ರಂಥದಲ್ಲಿ ೩೦ನೇ ಶ್ಲೋಕ ಬೇರೆಡೆ ಬರುತ್ತದೆ.

ಈ ಗ್ರಂಥದಲ್ಲಿ ಲಕ್ಷ್ಮೀಧರನ ಟೀಕಾಗ್ರಂಥದಲ್ಲಿ ಇರುವ ಕ್ರಮವನ್ನು ಅನುಸರಿಸಿ ಶ್ಲೋಕಗಳನ್ನು ಕೊಡಲಾಗಿದೆ.

ಶ್ಲೋಕಗಳ ಪಠ್ಯದಲ್ಲಿ ಪಾಠಾಂತರಗಳಿದ್ದಲ್ಲಿ ಅವುಗಳನ್ನು ಪಾಠಾಂತರವಿರುವ ಪದಗಳ ಪ್ರಾರಂಭದಲ್ಲಿ ಸಂಖ್ಯೆ ಮೂಲಕ ಗುರುತಿಸಿದೆ.

ಪ್ರತಿ ಶ್ಲೋಕದ ವಸ್ತು ತಿಳಿಯಲು ಶ್ಲೋಕದ ಮೇಲ್ಭಾಗದಲ್ಲಿ ಶೀರ್ಷಿಕೆಗಳನ್ನು ಕೊಡಲಾಗಿದೆ. ಉದಾಹರಣೆ: ಶ್ಲೋಕ ೧. ದೇವಿಯ ಮಹಿಮೆ ಇತ್ಯಾದಿ. ಮೂಲ ಶ್ಲೋಕಗಳ ಪಠ್ಯಾನುಸಾರ ಪಟ್ಟಿಯನ್ನು ಪ್ರಾರಂಭದಲ್ಲಿ ಆಯಾ ಶ್ಲೋಕಗಳ ವಿಷಯವನ್ನು ಆವರಣದಲ್ಲಿ ಸೂಚಿಸಿ ಕೊಡಲಾಗಿದೆ. ಪರಿವಿಡಿಯಲ್ಲಿ ಇದನ್ನು ಸೇರಿಸಿದೆ. ಶ್ಲೋಕಗಳ ಅಕಾರಾದಿಯನ್ನು ಅನುಬಂಧದಲ್ಲಿ ಕೊಡಲಾಗಿದೆ.

೨. ಪಾಠಾಂತರಗಳು : ವಿವಿಧ ಮುದ್ರಣ ಪ್ರತಿಗಳು, ನೂರಾರು ತಾಳೆಗರಿಗಳು ೩೬ ವ್ಯಾಖ್ಯಾನಗಳು ಇರುವ ಸೌಂದರ್ಯಲಹರಿಗೆ ಸಾಕಷ್ಟು ಪಾಠಾಂತರಗಳು ಕಂಡುಬಂದರೂ ಸಾಕಷ್ಟು ಶುದ್ಧ ಪಾಠವೇ ಉಳಿದು ಬಂದಿದೆ ಎನ್ನಬಹುದು. ಏಕೆಂದರೆ ಯಂತ್ರ ಮಂತ್ರ ತಂತ್ರಯುಕ್ತ ಶಾಸ್ತ್ರ ಸ್ತೋತ್ರ ಸಾಹಿತ್ಯವಾಗಿ ಶಿಷ್ಟ ಜನರ ಮತ್ತು ವಿದ್ವಾಂಸರ ಬಳಕೆಯಲ್ಲಿದ್ದುದೇ ಕಾರಣವೆನ್ನಬಹುದು. ಆದರೂ ಹತ್ತಾರು ಪಾಠಗಳನ್ನು ದಿ ಥಿಯಾಸಫಿಕಲ್ ಪಬ್ಲಿಷಿಂಗ್ ಹೌಸ್ ಆಡ್ಯಾರ್‌ನವರು ಪ್ರಕಟಿಸಿರುವ ಗ್ರಂಥದಲ್ಲಿ ಲಕ್ಷ್ಮೀಧರಾ, ಕೈವಲ್ಯಾಶ್ರಮ, ಕಾಮೇಶ್ವರಸೂರಿ, ಅರ್ಥರ್ ಅವಿಲಾನ್ ಮೈಸೂರು ಪ್ರಾಚ್ಯ ವಿದ್ಯಾಸಂಶೋಧನಾಲಯದ ಪ್ರಕಟನೆಗಳಲ್ಲಿ ಕಂಡುಬರುವ ಪಾಠಾಂತರಗಳನ್ನು ಗುರುತಿಸಿದ್ದಾರೆ. ಆದರೆ ಪಾಠಾಂತರಗಳನ್ನು ಕೊಡುವಾಗ ಯಾವ ಯಾವ ಪಾಠ ಯಾವ ಯಾವ ಗ್ರಂಥದ್ದು ಎಂಬುದನ್ನು ಉಲ್ಲೇಖಿಸಿಲ್ಲ. ವಿವಿಧ ಹಸ್ತಪ್ರತಿಗಳ, ಮುದ್ರಣಗಳ ಪಾಠಾಂತರಗಳನ್ನು ಕೊಡುವುದರಿಂದ ವಿದ್ವಾಂಸರಿಗೆ ಶುದ್ಧ ಪಾಠ ನಿರ್ಣಯಕ್ಕೆ ಅನುಕೂಲವಾಗುತ್ತದೆ. ಈ ಕಾರಣದಿಂದ ಅವರು ಕೊಟ್ಟ ಪಾಠಾಂತರಗಳನ್ನು ಕಪನೀಪತಯ್ಯನವರ ಪಾಠಗಳನ್ನು ತೌಲನಿಕವಾಗಿ ಇಲ್ಲಿ ಗುರುತಿಸಿದೆ.

ಪಾಠಾಂತರಗಳನ್ನು ಕೊಡುವಾಗ ಸಾಮಾನ್ಯವಾಗಿ ಪಠ್ಯದಲ್ಲಿನ ಪದಗಳಿಗೆ ಸಂಖ್ಯೆ ಕೊಟ್ಟು ಪಾಠವನ್ನು ಸೂಚಿಸುವುದು ಪದ್ಧತಿ. ನಾನು ಇಲ್ಲಿ ಓದುಗರ ಅನುಕೂಲಕ್ಕಾಗಿ ಆವರಣದಲ್ಲಿ ಪಠ್ಯದ ಪದವನ್ನು ಕೊಟ್ಟು, ಅನಂತರ ಸಂಖ್ಯಾನುಸಾರ ಪಾಠಾಂತರವನ್ನು ಕೊಟ್ಟಿದ್ದೇನೆ. ಕಪನೀಪತಯ್ಯನವರ ಪಠ್ಯದಲ್ಲಿರುವ ಉತ್ತಮ ಪಾಠವನ್ನು ಅಳವಡಿಸಿದಾಗ ಅವರ ಪಾಠವನ್ನು, ಪಾಠಾಂತರದಲ್ಲಿ (ಕ) ಅಥವಾ (K) ಎಂದು ಗುರುತಿಸಿದ್ದೇನೆ.

೩. **ಪದವಿಭಾಗ:** ಸೌಂದರ್ಯಲಹರೀ ಸೊಗಸಾದ ಸುಮಧುರ ಪೂರ್ಣವಾದ ಅರ್ಥವತ್ತಾದ ಸ್ತೋತ್ರವಾಗಿದೆ. ಅಷ್ಟೇ ಬಿಗಿಯಾದ ಸಮಾಸಯುಕ್ತ ಪದಗಳಿಂದ ಕೂಡಿದೆ. ಅರ್ಥಪೂರ್ಣವಾಗಿ ಪದವಿಭಾಗ ಮಾಡಿಕೊಂಡು ಓದಲು ಸಾಮಾನ್ಯ ಭಕ್ತ ಜನರಿಗೆ ಸುಲಭವಿಲ್ಲ. ಸೌಂದರ್ಯಲಹರೀ ಪಠಣಕಾರರೆಲ್ಲ ಪದವಿಭಾಗ ಮಾಡಿ ಓದಿಕೊಳ್ಳಲು ಅನುಕೂಲವಾಗಲಿ ಎಂದು ಪದವಿಭಾಗವನ್ನು ಪ್ರತ್ಯೇಕವಾಗಿ ಕೊಡಲಾಗಿದೆ. ಉಳಿದ ಪ್ರಕಟನೆಗಳಲ್ಲಿ ಅನ್ವಯಾರ್ಥ ಕೊಟ್ಟಿರುವ ಕಡೆ ಪದವಿಭಾಗವನ್ನು ಹುಡುಕಿಕೊಳ್ಳಬೇಕು. ಈ ಕಷ್ಟವನ್ನು ಈ ಗ್ರಂಥದಲ್ಲಿ ಗಮನಿಸಿ ಪ್ರತ್ಯೇಕವಾಗಿ ಸಂಧಿ ಸಮಾಸ ಪದಗಳನ್ನು ಬಿಡಿಸಿಕೊಟ್ಟಿದೆ. ಹೀಗೆ ಕೊಡುವಾಗ ಮೂಲಪದವನ್ನು ಆವರಣದಲ್ಲಿ ಕೊಟ್ಟು ಪದ ಬಿಡಿಸಿ ತೋರಿಸಿದೆ.

ಉದಾ : (ಶಿವಶ್ಶಕ್ತ್ಯಾ) = ಶಿವಃ ಶಕ್ತ್ಯಾ, (ಯುಕ್ತೋ) = ಯುಕ್ತಃ

(ಅತಸ್ತ್ವಾಮಾರಾಧ್ಯಾಂ) = ಅತಃ + ತ್ವಾಂ + ಆರಾಧ್ಯಾಂ, ಇತ್ಯಾದಿ.

೪. **ತಾತ್ಪರ್ಯ:** ಮೂಲ ಮತ್ತು ತಾತ್ಪರ್ಯಗಳನ್ನು ಕನ್ನಡದಲ್ಲಿ ಕೆಲವರು ಕೊಟ್ಟಿದ್ದಾರೆ. ಕೆಲವರು ತಾತ್ಪರ್ಯವನ್ನು ಸಾರಾಂಶರೂಪದಲ್ಲಿ ಕೊಟ್ಟಿದ್ದಾರೆ. ಕೆಲವರು ವಿವರಣಾತ್ಮಕವಾಗಿ ನೀಡಿದ್ದಾರೆ. ಮೂಲಶ್ಲೋಕಗಳಿಗೆ ಪದಾನುಸಾರ ತಾತ್ಪರ್ಯವನ್ನು ಬರೆದವರು ಕಡಿಮೆ. ಈ ಗ್ರಂಥದಲ್ಲಿ ಅನ್ವಯಾನುಸಾರ ಮೂಲ ಪದ್ಯದ ಪದಗಳಿಗೆಲ್ಲಾ ಅರ್ಥ ದೊರಕುವ ಹಾಗೆ ತಾತ್ಪರ್ಯವನ್ನು ಕೊಡಲು ಯತ್ನಿಸಲಾಗಿದೆ. ಪಾರಿಭಾಷಿಕ ಪದಗಳು ಬಂದ ಕಡೆ ಅವುಗಳನ್ನು ಟಿಪ್ಪಣಿಗಳಲ್ಲಿ ವಿವರಿಸಲಾಗಿದೆ.

ಕಪನೀಪತಯ್ಯನವರು ಸೌಂದರ್ಯಲಹರಿಯ ಎಲ್ಲ ಶ್ಲೋಕಗಳಿಗೆ ತಾತ್ಪರ್ಯ ಬರೆದಿಲ್ಲ. ಬಹುಶಃ ಅವುಗಳ ತಾತ್ಪರ್ಯವನ್ನು ಸುಲಭವಾಗಿ ಓದುಗರು ತಿಳಿಯಬಹುದು ಎಂದು ಬಿಟ್ಟಿರಬಹುದು. ಅವರು ಸೌಂದರ್ಯಲಹರಿಯಲ್ಲಿ ಈ ಕೆಳಕಂಡ ಶ್ಲೋಕಗಳಿಗೆ ಮಾತ್ರ ತಾತ್ಪರ್ಯವನ್ನು ಬರೆದಿದ್ದಾರೆ.

೮, ೧೨, ೧೩, ೧೫, ೧೬, ೧೭, ೪೪, ೬೧, ೬೨, ೬೩, ೬೪, ೬೫, ೬೬, ೬೭, ೬೮, ೬೯, ೭೦, ೭೧, ೭೨, ೭೩, ೭೪, ೭೫, ೭೬, ೭೭, ೭೮, ೭೯, ೮೦, ೮೧, ೮೨, ೮೩, ೮೪, ೮೫, ೮೬, ೮೭, ೮೮, ೮೯, ೯೦, ೯೧, ೯೨, ೯೩, ೯೪, ೯೫, ೯೬, ೯೭, ೯೮, ೯೯, ೧೦೦.

ಕಪನೀಪತಯ್ಯನವರೇ ಬರೆದ ತಾತ್ಪರ್ಯಗಳನ್ನು ಕೊಟ್ಟು ಅವರ ಹಸ್ತಪ್ರತಿಯ ಪುಟಗಳನ್ನು K ಸಂಕೇತದಲ್ಲಿ ನಮೂದಿಸಿದೆ. ಒಂದೆರಡು ಕಡೆ ತಾತ್ಪರ್ಯ ಅತಿ ಸಂಕ್ಷಿಪ್ತವಾಗಿರುವುದನ್ನು ಟಿಪ್ಪಣಿಗಳಲ್ಲಿ ಸೇರಿಸಲಾಗಿದೆ. ಕಪನೀಪತಯ್ಯನವರು ತಾತ್ಪರ್ಯ ಬರೆಯದಿರುವ ಶ್ಲೋಕಗಳಿಗೆಲ್ಲಾ ತಾತ್ಪರ್ಯ ಬರೆಯಲಾಗಿದೆ. ಅಧಿಕ ಶ್ಲೋಕಗಳನ್ನು * ಚಿಹ್ನೆಯಿಂದ ಗುರುತಿಸಿ ಅವುಗಳಿಗೂ ಪದವಿಭಾಗ, ತಾತ್ಪರ್ಯ ಬರೆಯಲಾಗಿದೆ.

೫. **ಪದ್ಯಾನುವಾದ:** ಕನ್ನಡದಲ್ಲಿ ಸೌಂದರ್ಯಲಹರಿಯ ಗ್ರಂಥಗಳು ೩೦ಕ್ಕೂ ಹೆಚ್ಚಾಗಿವೆ. ಅವುಗಳಲ್ಲಿ ಮೂಲ, ತಾತ್ಪರ್ಯ, ವಿವರಣೆಗಳನ್ನು ಒಳಗೊಂಡ ಗ್ರಂಥಗಳಲ್ಲದೆ, ಕನ್ನಡ ಪದ್ಯಾನುವಾದದ ಗ್ರಂಥಗಳಿದ್ದು ಹಲವು ಪ್ರಕಟವಾಗಿವೆ. ಸೌಂದರ್ಯಲಹರಿಯ ಕನ್ನಡ ಪದ್ಯಾನುವಾದವನ್ನು ಮಾಡಿರುವ ಗ್ರಂಥಗಳಿವು.

೧. ಸಿ.ಪಿ.ಕೆ. ಕನ್ನಡ ಸೌಂದರ್ಯಲಹರೀ (ಚೌಪದಿ) – ೧೯೬೪.

೨. ಎಂ.ವಿ.ಸೀ – ಸೌಂದರ್ಯಲಹರೀ ಶತಕ (ವಾರ್ಧಕ ಷಟ್ಪದಿ) ೧೯೮೦.

೩. ಬಿ. ಪುಟ್ಟಸ್ವಾಮಯ್ಯ – ಸೌಂದರ್ಯಲಹರೀ (ಸಾಂಗತ್ಯ) – ೧೯೮೨.

೪. ಪುಟ್ಟು ಕುಲಕರ್ಣಿ (ಇಂದ್ರ) – ಸೌಂದರ್ಯಲಹರೀ (ಚೌಪದಿ) – ೧೯೮೮.

೫. ಗಮಕಿ ಆರ್. ಶಂಕರನಾರಾಯಣ್ – ಸೌಂದರ್ಯಲಹರೀ (ವಾರ್ಧಕ ಷಟ್ಪದಿ) – ೧೯೯೭.

೬. ಲಕ್ಷ್ಮೀಶ ತೋಳ್ಪಾಡಿ – ಆನಂದಲಹರೀ (ನವ್ಯ ಕವನ) ೨೦೧೫.

೭. ಲಕ್ಷ್ಮಣ ವಿರೂಪಾಕ್ಷ ಜೋಶಿ – ಆನಂದಲಹರೀ ಮತ್ತು ಇತರೆ ಸ್ತೋತ್ರಗಳು (ಚೌಪದಿ) ೧೯೮೬.

೮. ಡಿ. ನಾರಾಯಣ ಭಟ್ – ಸೌಂದರ್ಯಲಹರೀ ಭಾವಸೋಪಾನ (ಚೌಪದಿ) ೨೦೧೧.

ಇನ್ನು ಕೆಲವು ಪದ್ಯಾನುವಾದಗಳಿರಬಹುದು ನನ್ನ ಗಮನಕ್ಕೆ ಬಂದಿಲ್ಲ. ಇವುಗಳಲ್ಲಿ ಎಂ.ವಿ.ಸೀ. ಅವರ ಪದ್ಯಾನುವಾದ ಅಪ್ರಕಟಿತವಾಗಿದ್ದು ಇದೀಗ ಮೊದಲ ಬಾರಿಗೆ ಇಲ್ಲಿ ಪ್ರಕಟವಾಗಿದೆ. ಇದರ ಪರಿಷ್ಕರಣ ವಿಚಾರವನ್ನು ಬೇರೆ ಕಡೆ ಪ್ರಸ್ತಾಪಿಸಿದೆ.

ಎಂ.ವಿ.ಸೀ. ಅವರ ಪದ್ಯಾನುವಾದ ಸಾಕಷ್ಟು ಮಟ್ಟಿಗೆ ಮೂಲಕ್ಕೆ ಹತ್ತಿರವಾಗಿದೆ. ಅವರು ಮೊದಲು ಬರೆದುದನ್ನು ಅವರೇ ಇನ್ನೊಮ್ಮೆ ಪರಿಷ್ಕರಿಸಿದ ಪ್ರತಿಯ ಪದ್ಯಾನುವಾದವನ್ನು ಕೊಡಲಾಗಿದೆ. ಪದ್ಯಾನುವಾದವನ್ನು ಮಾತ್ರ ಎಂವಿಸೀ ಬರೆದಿದ್ದಾರೆ. ಉಳಿದ ನಾಲ್ಕು ಪದ್ಯಾನುವಾದಕಾರರು ಪದ್ಯಾನುವಾದದ ಜತೆಗೆ ಸಾಕಷ್ಟು ಟಿಪ್ಪಣಿಗಳನ್ನು ಕೊಟ್ಟಿದ್ದಾರೆ. ಪೀಠಿಕೆಗಳನ್ನು ಬರೆದಿದ್ದಾರೆ. ಸಿಪಿಕೆ ಅವರ ಟಿಪ್ಪಣಿ ಸಂಕ್ಷಿಪ್ತವಾಗಿದ್ದರೆ ಉಳಿದವರ ಟಿಪ್ಪಣಿಗಳು ಸಾಕಷ್ಟು ವಿವರಗಳಿಂದ ಕೂಡಿದೆ. ಎಂವಿಸೀ ಅವರ ಪದ್ಯಾನುವಾದ ಪಠ್ಯವನ್ನಷ್ಟೇ ಒಳಗೊಂಡಿದೆ.

೬. **ಟಿಪ್ಪಣಿಗಳು:** ಕನ್ನಡ, ತೆಲುಗು, ಇಂಗ್ಲಿಷ್, ಸಂಸ್ಕೃತ ಮತ್ತು ಇತರ ಭಾಷೆಗಳಲ್ಲಿ ಸೌಂದರ್ಯಲಹರೀ ಬಗ್ಗೆ ವ್ಯಾಖ್ಯಾನಗಳು, ಟಿಪ್ಪಣಿಗಳು, ವಿವರಣೆಗಳು ಮೂಲ ಸಹಿತ ಅಥವಾ ಮೂಲರಹಿತ ಶ್ಲೋಕಗಳೊಡನೆ ಪ್ರಕಟವಾಗಿವೆ. ಸೌಂದರ್ಯಲಹರೀ

ಸ್ತೋತ್ರದ ಶ್ಲೋಕಗಳನ್ನು ಉದಾಹರಿಸಿ ಇತರ ಅನೇಕ ಗ್ರಂಥಗಳಲ್ಲಿ ಪ್ರಸ್ತಾಪಿಸಲಾಗಿದೆ ಚರ್ಚಿಸಲಾಗಿದೆ.

ವಿಶೇಷವಾಗಿ ಹೇಳಬೇಕಾದ ಮಾತೆಂದರೆ ಲಲಿತಾಸಹಸ್ರನಾಮ ಮತ್ತು ಸೌಂದರ್ಯ ಲಹರೀ ಒಂದೇ ನಾಣ್ಯದ ಎರಡು ಮುಖಗಳಾಗಿವೆ. ಎರಡೂ ಸ್ತೋತ್ರಗಳಲ್ಲಿ ಎಷ್ಟೋ ವಿಷಯಗಳು ವರ್ಣನೆಗಳು ಸಮಾನವಾಗಿವೆ. ಸದೃಶವಾಗಿವೆ. ಲಲಿತಾ ಸಹಸ್ರನಾಮದ ಶ್ಲೋಕಗಳ ನಾಮಗಳಲ್ಲಿ ಸೌಂದರ್ಯಲಹರಿಗೆ ಸಂಬಂಧಿಸಿದವುಗಳನ್ನು ಟಿಪ್ಪಣಿಗಳಲ್ಲಿ ಉಲ್ಲೇಖಿಸಲಾಗಿದೆ. ಅವುಗಳನ್ನೆಲ್ಲಾ ಪಟ್ಟಿರೂಪದಲ್ಲಿ ಅನುಬಂಧದಲ್ಲಿ ಕೊಡಲಾಗಿದೆ.

ಕಪನೀಪತಯ್ಯನವರು ಮೂಲ ಶ್ಲೋಕಗಳಿಗೆ ಮಾತ್ರ ಎಲ್ಲದಕ್ಕೂ ಅನ್ವಯಾರ್ಥ ಬರೆದಿದ್ದಾರೆ. ಆದರೆ ತಾತ್ಪರ್ಯ ಟಿಪ್ಪಣಿಗಳನ್ನು ಕೆಲವು ಶ್ಲೋಕಗಳಿಗೆ ಮಾತ್ರ ಕೊಟ್ಟಿದ್ದಾರೆ. ಕಪನೀಪತಯ್ಯನವರು ಕೊಟ್ಟಿರುವ ಟಿಪ್ಪಣಿಗಳನ್ನು K ಸಂಕೇತದಿಂದ ಉಲ್ಲೇಖಿಸಿದೆ.

ಕನ್ನಡದಲ್ಲಿ ವ್ಯಾಖ್ಯಾನ, ವಿವರಣೆಗಳಿರುವ ಗ್ರಂಥಗಳು ಕಡಿಮೆ ಅದರಲ್ಲಿ ಕೆಲವನ್ನು ಉಲ್ಲೇಖಿಸಬೇಕಾಗಿದೆ.

ಕನ್ನಡದಲ್ಲಿ ವಿದ್ವಾನ್ ಶೇಷಾಚಲಶರ್ಮರು ಸಂಸ್ಕೃತದ ಲಕ್ಷ್ಮೀಧರಾ ವ್ಯಾಖ್ಯಾನವನ್ನು ಪದಶಃ ಅನುವಾದಿಸಿ ಕನ್ನಡಿಗರಿಗೆ ಉಪಕಾರ ಮಾಡಿದ್ದಾರೆ. ಅವರ ಅನುವಾದವನ್ನು ಆಧರಿಸಿ ಲಕ್ಷ್ಮೀಧರನ ವ್ಯಾಖ್ಯಾನದ ಟಿಪ್ಪಣಿಗಳನ್ನು ಇಲ್ಲಿ ಅಳವಡಿಸಿಕೊಂಡಿದ್ದೇನೆ. ಅಂತೆಯೇ ನಾನಾ ವ್ಯಾಖ್ಯಾನಕಾರರು ತುಂಬ ವಿವರಣೆಗಳನ್ನು ಸಂಕ್ಷಿಪ್ತವಾಗಿ ಅಳವಡಿಸಿಕೊಂಡ ಇನ್ನೊಂದು ಕನ್ನಡ ಗ್ರಂಥವೆಂದರೆ ಬಿ.ವಿ. ಶ್ರೀನಿವಾಸಯ್ಯನವರ ಸೌಂದರ್ಯಲಹರೀ ಅನುವಾದ ಗ್ರಂಥ. ಇದನ್ನು ಟಿಪ್ಪಣಿ ಬರೆಯುವಲ್ಲಿ ಗಮನಿಸಿದ್ದೇನೆ.

ಇತ್ತೀಚೆಗೆ ೨೦೦೯ರಲ್ಲಿ ತೆಲುಗಿನಲ್ಲಿ ಶ್ರೀಮತಿ ಪವನಿ ನಿರ್ಮಲ ಪ್ರಭಾವತಿ ಅವರು ಬರೆದ ವ್ಯಾಖ್ಯಾನ ಗ್ರಂಥವನ್ನು ಸದಾಶಿವ ದೇವುಡು ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ.


೨೦೧೫ರಲ್ಲಿ ಸೌಂದರ್ಯಲಹರಿಯ ಪೂರ್ವ ಭಾಗವನ್ನು ಆನಂದಲಹರೀ ಎಂಬ ಹೆಸರಿನಲ್ಲಿ ಮೂಲ ಮತ್ತು ಪದ್ಯಾನುವಾದದ ಜತೆಗೆ ಸ್ವತಂತ್ರ ವ್ಯಾಖ್ಯಾನವನ್ನು ಸೊಗಸಾಗಿ ಬರೆದಿದ್ದಾರೆ. ಈ ವಿವರಣ ಗ್ರಂಥಗಳಿಂದಲೂ ಕೆಲವು ಇಂಗ್ಲಿಷ್ ಮತ್ತು ತೆಲುಗು ಗ್ರಂಥಗಳಿಂದಲೂ (ಗ್ರಂಥ ಸಂಕೇತ ಪಟ್ಟಿಯಲ್ಲಿ ಗ್ರಂಥ ವಿವರಗಳಿವೆ) ಹತ್ತಾರು ಟಿಪ್ಪಣಿಗಳನ್ನು ಉಲ್ಲೇಖಿಸಿದ್ದೇನೆ ಆ ಎಲ್ಲ ಗ್ರಂಥಕರ್ತರಿಗೂ ನನ್ನ ವಂದನೆಗಳು.


ವ್ಯಾಖ್ಯಾನಕಾರರು ತಮ್ಮ ವಿವರಣೆಗಳನ್ನು ನೀಡುವಲ್ಲಿ ಮೂಲ ಗ್ರಂಥದ ಶ್ಲೋಕಗಳನ್ನು ಉಲ್ಲೇಖಿಸಿದ್ದಾರೆ. ಅವರ ಅನುವಾದ ಕೊಟ್ಟು ವಿವರಣೆ ನೀಡಿದ್ದಾರೆ. ಇಲ್ಲಿ ಕೊಟ್ಟಿರುವ ಟಿಪ್ಪಣಿಗಳಲ್ಲಿ ಅವುಗಳ ಸಾರಾಂಶವನ್ನು ಮಾತ್ರ ತೆಗೆದುಕೊಳ್ಳಲಾಗಿದೆ.

ವ್ಯಾಖ್ಯಾನಕಾರರ/ವಿವರಣಕಾರರ ಉಪಯುಕ್ತ ಅಂಶಗಳು ಕನ್ನಡ ಓದುಗರಿಗೆ ಒಂದೆಡೆ ಸಿಕ್ಕರೆ ಸೌಂದರ್ಯ ಲಹರಿಯ ಶ್ಲೋಕಗಳನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಲು ನೆರವಾಗುತ್ತದೆ ಎಂಬ ಆಶಯದಿಂದ ಇತರರ ವಿವರಗಳನ್ನು ಟಿಪ್ಪಣಿಗಳಲ್ಲಿ ಸಂಗ್ರಹಿಸಲಾಗಿದೆ. ಕೇವಲ ಸಂಗ್ರಹ ಕಾರ್ಯ ಅಷ್ಟೆ ನನ್ನದು. ವಿಚಾರಗಳು ಆಯಾ ಸಂಪಾದಕರದು/ಲೇಖಕರದು. ಟಿಪ್ಪಣಿಗಳಿಗೆ ಆಧಾರವಾದ ಗ್ರಂಥಗಳನ್ನು ಸಂಕೇತಾಕ್ಷರಗಳಿಂದ ಸೂಚಿಸಿದ್ದೇನೆ.

ಯಂತ್ರ ರಚನೆ: ಎಲ್ಲ ಗ್ರಂಥಗಳಲ್ಲೂ ಸೌಂದರ್ಯಲಹರಿಯ ಯಂತ್ರ ರಚನೆ ಒಂದೇ ವಿಧವಾಗಿದೆ. ಕೆಲವು ಕಡೆಗಳಲ್ಲಿ ಯಾವ ಯಾವ ಶ್ಲೋಕಕ್ಕೆ ಯಾವುದರ ಮೇಲೆ ಯಂತ್ರವನ್ನು ರಚಿಸಬೇಕು ಎಂಬುದಕ್ಕೆ ೨ ವಿಧಾನಗಳನ್ನು ಕೆಲವೆಡೆ ಕೊಟ್ಟಿದೆ. ಉದಾಹರಣೆಗೆ ಶ್ಲೋಕ ೫೮ರ ಯಂತ್ರವನ್ನು ತಾಮ್ರದ ತಗಡಿನ ಮೇಲೂ ಬರೆಯಬಹುದು, ಅರಶಿನದ ಪುಡಿಯ ಮೇಲೂ ರಚಿಸಬಹುದೆಂದು ಹೇಳಲಾಗಿದೆ (ಶ್ಲೋಕ ೧೦).

ಇನ್ನು ಯಂತ್ರ ನಕ್ಷೆ ಎಲ್ಲೋ ಕೆಲವೆಡೆ ಬಿಟ್ಟರೆ ಉಳಿದ ಎಲ್ಲೆಡೆಯೂ ಒಂದೇ ತೆರದ ವಿನ್ಯಾಸದಲ್ಲಿದೆ. ಕೆಲವು ಗ್ರಂಥಗಳಲ್ಲಿ ಒಂದೆರಡು ಕಡೆ ಬೇರೆ ಯಂತ್ರದ ವಿನ್ಯಾಸ ನೀಡಿದ್ದಾರೆ. ಉದಾಹರಣೆಗೆ ಶ್ಲೋಕ (೬)ರ ಯಂತ್ರವು ಚೌಕಾಕಾರವಾಗಿ ೮ ಮೂಲೆಗಳಲ್ಲಿ ಎರಡೆರಡು ತ್ರಿಶೂಲ ಚಿತ್ರಗಳನ್ನು ಒಳಗೊಂಡಿದ್ದರೂ ಯಂತ್ರದ ನಕ್ಷೆ ಒಳಗಡೆ ಇರುವ ಬೀಜಾಕ್ಷರ ಕ್ರಮ ಸ್ವಲ್ಪ ವ್ಯತ್ಯಾಸ ಹೊಂದಿದೆ (ಪುಟ ೫೪).





ಮೂಲದಲ್ಲಿ ಸಂಸ್ಕೃತದಲ್ಲಿ ಬೀಜಾಕ್ಷರಗಳಿದ್ದರೆ ಕನ್ನಡಾನುವಾದಗಳಲ್ಲಿ ಕನ್ನಡ ಲಿಪಿಯಲ್ಲಿ ಬೀಜಾಕ್ಷರಗಳಿವೆ.

ಪರಿವಿಡಿಯಲ್ಲಿ ಶ್ಲೋಕ ಸೂಚಿ ಕೊಡುವಾಗ ಆವರಣ ಚಿಹ್ನೆ ಕೊಟ್ಟು ಫಲಸಿದ್ಧಿಯನ್ನು ತಿಳಿಸಲಾಗಿದೆ. ಯಾವ ಯಾವ ಶ್ಲೋಕಗಳನ್ನು ತಮ್ಮ ತಮ್ಮ ಅಗತ್ಯಗಳಿಗೆ ತಕ್ಕಂತೆ ಓದಬಹುದು ಎಂದು ತಿಳಿಯುತ್ತದೆ.

ಯಂತ್ರ – ಪೂಜಾವಿಧಾನ: ಸೌಂದರ್ಯಲಹರೀ ಸ್ತೋತ್ರವು ಯಂತ್ರ ಮಂತ್ರ ತಂತ್ರಗಳನ್ನು ಒಳಗೊಂಡ ಸ್ತೋತ್ರವಾಗಿದೆ. ಪ್ರಾಚೀನ ಟೀಕೆಗಳಲ್ಲಿ ಯಂತ್ರ ಚಿತ್ರ (ಬೀಜಾಕ್ಷರ ಸಹಿತ) ಆರಾಧನಾ ವಿಧಾನಗಳನ್ನು ಕೊಟ್ಟಿದೆ. ಪೂಜಾ, ಜಪ, ನೈವೇದ್ಯ, ಫಲ, ವಿಧಾನಗಳಲ್ಲಿ ಒಂದು ಗ್ರಂಥಕ್ಕೂ ಇನ್ನೊಂದು ಗ್ರಂಥಕ್ಕೂ ವಿವರಗಳನ್ನು ಕೊಡುವಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸಗಳಿವೆ. ಜಪದ ಅವಧಿ ಎಷ್ಟು ದಿನ, ದಿನಕ್ಕೆಷ್ಟು ಬಾರಿ, ಪೂಜೆಗೆ ಬಳಸುವ ವಸ್ತು, ನೈವೇದ್ಯಕ್ಕೆ ಅರ್ಪಿಸುವ ಆಹಾರ, ಯಂತ್ರ ನಿರ್ಮಾಣ ಮಾಡುವ ಲೋಹ ಇತ್ಯಾದಿ ವಿವರಗಳ ಬಗ್ಗೆ ಹಲವರು ಹಲವು ಬಗೆಗಳಲ್ಲಿ ಹೇಳಿದ್ದಾರೆ. ಇಲ್ಲಿ ಅವುಗಳನ್ನೆಲ್ಲಾ ತಿಳಿಸಿಲ್ಲ. ಯಂತ್ರ ಚಿತ್ರಗಳನ್ನು ಪ್ರಾಚೀನ ಸಂಸ್ಕೃತ ಟೀಕೆ (ಲಕ್ಷ್ಮೀಧರನ ವ್ಯಾಖ್ಯಾನ) ೧೯೬೯ರ ಮುದ್ರಣ ಮೈಸೂರು ಪ್ರಾಚ್ಯ ಸಂಶೋಧನಾಲಯದ ಸಂಸ್ಕೃತ ಪ್ರಕಟನೆ ಮತ್ತು ಜಕ್ಕಣಾಮಾತ್ಯನ ಟೀಕೆಗಳಲ್ಲಿ ಕೊಟ್ಟಿರುವಂತೆ ಕೊಟ್ಟಿದ್ದೇನೆ. ಏಕರೂಪತೆ ದೃಷ್ಟಿಯಿಂದ ಪೂಜಾ ವಿಧಾನಗಳಲ್ಲಿ ವ್ಯತ್ಯಾಸಗಳು ಕಂಡು ಬರುವ ಕಡೆಗಳೆಲ್ಲೆಡೆ ಲಕ್ಷ್ಮೀಧರನ ವ್ಯಾಖ್ಯಾನದ ಗ್ರಂಥದಲ್ಲಿ ಸೂಚಿಸಿರುವ ವಿವರವನ್ನಷ್ಟೆ ಕೊಟ್ಟಿದ್ದೇನೆ.

ಉದಾ : ಶ್ಲೋಕ ೨೯ರಲ್ಲಿ ಬರುವ ಯಂತ್ರಾರಾಧನೆಯ ಜಪ ವಿಧಾನವನ್ನು ಕುರಿತು ವಿವಿಧ ಆವೃತ್ತಿಗಳು ವಿವಿಧ ರೀತಿಯಲ್ಲಿ ಹೇಳುತ್ತವೆ.

೪೫ ದಿನಗಳು ಜಪಿಸಬೇಕು (ಜಕ್ಕಣಾಮಾತ್ಯರ ಕನ್ನಡ ಟೀಕೆ)

೪೮ ಅಥವಾ ೪೨ ದಿನಗಳು ಜಪಿಸಬೇಕು (ಶೇಷಾಚಲ ಶರ್ಮರ ಅನುವಾದ)

೪೮ ದಿನಗಳು ಜಪಿಸಬೇಕು (ಗುಂಜೂರು ರಾಮಚಂದ್ರಶಾಸ್ತ್ರಿ ಅವರ ಅನುವಾದ)

೧೫ ದಿನಗಳು ಜಪಿಸಬೇಕು (ತುಮ್ಮಲಪಲ್ಲಿ ರಾಮಲಿಂಗೇಶ್ವರರಾವ್ ಅನುವಾದ)

ಯಂತ್ರ ಪೂಜಾ ವಿಧಾನವನ್ನು ವರ್ಗೀಕರಿಸಿ ಯಂತ್ರರಚನೆ, ಪೂಜೆ ನೈವೇದ್ಯ ಜಪ, ಫಲ ಎಂದು ೫ ಶೀರ್ಷಿಕೆಗಳಲ್ಲಿ ಯಂತ್ರದ ನಕ್ಷೆಯೊಡನೆ ಕೊಡಲಾಗಿದೆ.

ಸೌಂದರ್ಯಲಹರೀ ಮತ್ತು ಲಲಿತಾಸಹಸ್ರನಾಮ

ಸೌಂದರ್ಯ ಲಹರೀ ಮತ್ತು ಲಲಿತಾಸಹಸ್ರನಾಮ ಸ್ತೋತ್ರಗಳು ಒಂದೇ ನಾಣ್ಯದ ಎರಡು ಮುಖಗಳು ಎಂದರೆ ತಪ್ಪಾಗದು. ಲಲಿತಾ ಸಹಸ್ರನಾಮವನ್ನು ಮಹಾವಿಷ್ಣು ಹಯಗ್ರೀವ ಅವತಾರವನ್ನೆತ್ತಿದಾಗ ಅಗಸ್ತ್ಯ ಮಹರ್ಷಿಗಳಿಗೆ ಮಾಡಿದ ಉಪದೇಶವಾಗಿದೆ. ಹದಿನೆಂಟು ಪುರಾಣಗಳಲ್ಲಿ ಒಂದಾದ ಬ್ರಹ್ಮಾಂಡ ಪುರಾಣದಲ್ಲಿ ಇದು ಬರುತ್ತದೆ.

ಸೌಂದರ್ಯಲಹರಿಯು ಆದಿಶಂಕರಾಚಾರ್ಯರಿಂದ ರಚಿತವಾದ ೧೦೦ ಶ್ಲೋಕಗಳುಳ್ಳ ಶತಕ ಗ್ರಂಥ. ಈ ಎರಡರಲ್ಲೂ ಜಗನ್ಮಾತೆ ತ್ರಿಪುರಸುಂದರಿಯ ವರ್ಣನೆ ಮತ್ತು ಶ್ರೀಚಕ್ರ ನಿರೂಪಣೆ ಮಹಿಮೆಗಳನ್ನು ಮಾಡಲಾಗಿದೆ. ಈ ಎರಡೂ ಸ್ತೋತ್ರಗಳು ಪಾರಾಯಣ ಗ್ರಂಥಗಳಾಗಿವೆ. ಇವೆರಡೂ ಗ್ರಂಥಗಳು ಯಂತ್ರ–ಮಂತ್ರ–ತಂತ್ರವನ್ನು ಒಳಗೊಂಡ ಕೃತಿಗಳಾಗಿವೆ. ವಿಷಯ ನಿರೂಪಣೆಯಲ್ಲಿ ಹೆಜ್ಜೆ ಹೆಜ್ಜೆಗೂ ಎರಡರಲ್ಲೂ

ಸಮಾನಾರ್ಥಕ ಪದಗಳನ್ನು ಭಾವಗಳನ್ನೂ ಸದೃಶ ರೂಪದಲ್ಲಿ ಕಾಣುತ್ತೇವೆ. ಲಲಿತಾ ಸಹಸ್ರನಾಮದ ರಚನೆ ಸೌಂದರ್ಯಲಹರಿಯ ರಚನೆಗಿಂತ ಮುಂಚಿತವಾಗಿ ರಚಿತವಾಗಿದ್ದು ಆದಿಶಂಕರರ ಸೌಂದರ್ಯಲಹರಿಯಲ್ಲಿ ಲಲಿತಾ ಸಹಸ್ರನಾಮ ಅಂತರ್ಗತವಾಗಿದೆ ಎನ್ನಬಹುದು. ಲಲಿತಾ ಸಹಸ್ರನಾಮಕ್ಕೆ ಭಾಸ್ಕರರಾಯ ಮಖೀಂದ್ರರು ಸೌಭಾಗ್ಯ ಭಾಸ್ಕರವೆಂಬ ಭಾಷ್ಯವನ್ನು ಬರೆದಿದ್ದಾರೆ. ಸೌಂದರ್ಯಲಹರಿಗಂತೂ ೩೪ಕ್ಕೂ ಹೆಚ್ಚು ಟೀಕೆಗಳಿವೆ. ಶ್ರೀ ವಿದ್ಯೋಪಾಸನೆಯನ್ನು ಪ್ರತಿಪಾದಿಸುವ ಈ ಎರಡೂ ಗ್ರಂಥಗಳನ್ನು ಪಾರಾಯಣ ಗ್ರಂಥಗಳನ್ನಾಗಿ ಬಳಸುತ್ತಾರೆ. ಈ ಎರಡೂ ಗ್ರಂಥಗಳ ಸದೃಶಪದ–ಭಾವಗಳ ಪಟ್ಟಿಯನ್ನು ಕನ್ನಡದಲ್ಲಿ ಮೊದಲ ಬಾರಿಗೆ ಅನುಬಂಧದಲ್ಲಿ ಕೊಡಲಾಗಿದೆ.

ಪಾರಾಯಣ ಗ್ರಂಥ – ಇಷ್ಟಾರ್ಥಸಿದ್ಧಿ ಗ್ರಂಥ

ನಮ್ಮಲ್ಲಿ ಪಾಪಶೇಷಗಳನ್ನು ಕಳೆದುಕೊಳ್ಳಲು, ಪುಣ್ಯಾರ್ಜನೆ ಮಾಡಲು, ಮನಶ್ಶಾಂತಿ ಗಳಿಸಲು ಅನೇಕ ಧರ್ಮಗ್ರಂಥಗಳನ್ನು ಅಂತೆಯೇ ಸ್ತೋತ್ರ ಸಾಹಿತ್ಯವನ್ನು ಪ್ರತಿ ದಿನವೂ ಪಠಿಸುತ್ತಾರೆ. ವಿಧಿವತ್ತಾಗಿ ಪಾರಾಯಣ ಮಾಡುತ್ತಾರೆ. ರಾಮಾಯಣ, ಗೀತೆ ದೇವೀಭಾಗವತ, ಮೊದಲಾದ ಗ್ರಂಥಗಳನ್ನು ಪಾರಾಯಣ ಮಾಡುವಂತೆಯೇ ವಿಷ್ಣುಸಹಸ್ರನಾಮ, ಶಿವಸಹಸ್ರನಾಮ, ಲಲಿತಾಸಹಸ್ರನಾಮ ದುರ್ಗಾ ಸಪ್ತಶತಿ ಮೊದಲಾದ ಸ್ತೋತ್ರಗಳನ್ನು ಪಾರಾಯಣ ಮಾಡುವಂತೆಯೇ ಸೌಂದರ್ಯ ಲಹರಿಯನ್ನೂ ಪಾರಾಯಣ ಮಾಡುತ್ತಾರೆ. ಲಲಿತಾ ಸಹಸ್ರನಾಮ ಪಾರಾಯಣದಲ್ಲಿ ಶ್ರೀ ಚಕ್ರವನ್ನು ಆರಾಧಿಸುವಂತೆಯೇ ಸೌಂದರ್ಯಲಹರೀ ಆರಾಧನೆಯಲ್ಲಿ ಶ್ರೀ ಚಕ್ರವನ್ನೂ ಅಂತೆಯೇ ಇತರ ಬೀಜಾಕ್ಷರ ಯಂತ್ರಗಳನ್ನು ಆರಾಧಿಸುತ್ತಾರೆ. ಈ ಯಂತ್ರಗಳ ಆರಾಧನೆಗೆ ವಿಶಿಷ್ಟ ಕ್ರಮ ಇರುವುದರ ಜತೆಗೆ ಪ್ರತಿ ಶ್ಲೋಕದ ಪಠಣೆಗೆ ಹಾಗೂ ಯಂತ್ರಪೂಜೆಗೆ ನಿರ್ದಿಷ್ಟ ಇಷ್ಟಾರ್ಥಸಿದ್ಧಿಯ ಫಲವನ್ನು ಹೇಳಲಾಗಿದೆ. ಇದು ಭಕ್ತರಿಗೆ ಆಕರ್ಷಕ ಸಂಗತಿಯಾಗಿದೆ. ನಾನಾ ಬಗೆಯ ಇಷ್ಟಾರ್ಥಗಳು ಸೌಂದರ್ಯಲಹರಿಯ ಶ್ಲೋಕಗಳಿಂದ ಪ್ರಾಪ್ತವಾಗುತ್ತವೆ. ನಿತ್ಯಜೀವನದ ಅನೇಕ ಸಮಸ್ಯೆಗಳಿಗೆ ಈ ಇಷ್ಟಾರ್ಥ ಸಿದ್ಧಿಗಳು ಪರಿಹಾರರೂಪವಾಗಿವೆ.

ಉದಾಹರಣೆಗೆ ಕೆಲವು ಕಾರ್ಯಸಿದ್ಧಿಗಳನ್ನು ಉಲ್ಲೇಖಿಸಿದೆ:

ಸಕಲ ಕಾರ್ಯ ಜಯ (ಶ್ಲೋಕ ೧)

ಸರ್ವೈಶ್ವರ್ಯ ಪ್ರಾಪ್ತಿ (ಶ್ಲೋಕ ೩)

ದಾರಿದ್ರ್ಯನಾಶ (ಶ್ಲೋಕ ೪)

ಸಂತಾನಪ್ರಾಪ್ತಿ (ಶ್ಲೋಕ ೬, ೪೬)

ಶತ್ರುಜಯ (ಶ್ಲೋಕ ೭, ೨೧, ೨೬)

ರೋಗನಿವಾರಣೆ (ಶ್ಲೋಕ ೧೪, ೨೦, ೨೪, ೩೫, ೩೬, ೪೧, ೪೨, ೪೪, ೫೦, ೫೨, ೫೪, ೫೫, ೫೮ ೮೯, ೯೦.

ವಿದ್ಯಾಸಿದ್ಧಿ ೧೨, ೧೫, ೧೭, ೩೨, ೪೫, ೬೦, ೬೬, ೭೫.

ಅಪಮೃತ್ಯು ನಿವಾರಣೆ ೨೮.

ಐಶ್ವರ್ಯ ಪ್ರಾಪ್ತಿ ೩೩, ೪೯, ೫೭, ೯೧, ೨೩.

ಸಕಲಭಾಗ್ಯ ಪ್ರಾಪ್ತಿ ೯೩, ೯೪, ೧೦೦, ೬೮, ೬೫, ೬೧, ೬೦, ೩೮, ೫೭, ೫೧.

ಸೌಂದರ್ಯಲಹರೀ ಸ್ತೋತ್ರ ಪಠಣ ವಿಧಾನ

ಯಂತ್ರಾರಾಧನೆಗೆ ಪ್ರಾರಂಭದಲ್ಲಿ ಪಂಚಾಚರಣೆ ಮಾಡಬೇಕು. ಅದನ್ನು ಕೆಳಗೆ ತಿಳಿಸಿದ್ದಾರೆ.

೧. **ಋಷ್ಯಾದಿಗಳು** – ಅಸ್ಯ ಶ್ರೀ ಸೌಂದರ್ಯಲಹರೀ ಸ್ತೋತ್ರ ಮಹಾಮಂತ್ರಸ್ಯ ಗೋವಿಂದ ಋಷಿಃ ; ಅನುಷ್ಟುಪ್ ಛಂದಃ ; ಶ್ರೀ ಮಹಾತ್ರಿಪುರ ಸುಂದರೀ ದೇವತಾ; 'ಶಿವಃ ಶಕ್ತ್ಯಾ ಯುಕ್ತಃ' ಇತಿಬೀಜಮ್; ಸುಧಾಸಿಂಧೋರ್ಮಧ್ಯೇ' ಇತಿ ಶಕ್ತಿಃ; 'ಜಪೋ ಜಲ್ಪಃ ಶಿಲ್ಪಮ್' ಇತಿ ಕೀಲಕಮ್; ಶ್ರೀಲಲಿತಾಮಹಾ ತ್ರಿಪುರಸುಂದರೀ ಪ್ರೀತ್ಯರ್ಥೇ ಪಾರಾಯಣೇ ಜಪೇ ವಿನಿಯೋಗಃ

೨. **ಕರನ್ಯಾಸಃ** – ಹ್ರಾಂ ಅಂಗುಷ್ಠಾಭ್ಯಾಂ ನಮಃ; ಹ್ರೀಂ ತರ್ಜನೀಭ್ಯಾಂ ಸ್ವಾಹಾ; ಹ್ರೂಂ ಮಧ್ಯಮಾಭ್ಯಾಂ ವಷಟ್; ಹ್ರೈಂ ಅನಾಮಿಕಾಭ್ಯಾಂ ನಮಃ; ಹ್ರೌಂ ಕನಿಷ್ಠಿಕಾಭ್ಯಾಂ ವೌಷಟ್; ಹ್ರಃ ಕರತಲಕಪೃಷ್ಠಾಭ್ಯಾಂ ಫಟ್

೩. **ಅಂಗನ್ಯಾಸಃ** – ಹ್ರಾಂ ಹೃದಯಾಯ ನಮಃ; ಹ್ರೀಂ ಶಿರಸೇ ಸ್ವಾಹಾ; ಹ್ರೂಂ ಶಿಖಾಯೈ ವಷಟ್; ಹ್ರೈಂ ಕವಚಾಯ ಹುಮ್ ; ಹ್ರೌಂ ನೇತ್ರತ್ರಯಾಯ ವೌಷಟ್; ಹ್ರಃ ಅಸ್ತ್ರಾಯ ಫಟ್; ಭೂರ್ಭುವಃ ಸುವರೋಮಿತಿ ದಿಗ್ಬಂಧಃ

೪. **ಧ್ಯಾನಮ್** – ಲೌಹಿತ್ಯನಿರ್ಜಿತಜಪಾಕುಸುಮಾನುರಾಗಾಂ
ಪಾಶಾಂಕುಶೌ ಧನುರಿಷೂನಪಿ ಧಾರಯಂತೀಮ್
ತಾಮ್ರೇಕ್ಷಣಾಮರುಣಮಾಲ್ಯವಿಶೇಷಭೂಷಾಂ
ತಾಂಬೂಲಪೂರಿತಮುಖೀಂ ತ್ರಿಪುರಾಂ ನಮಾಮಿ

೫. **ಪಂಚೋಪಚಾರಾಃ** – ಲಂ ಪೃಥಿವ್ಯಾತ್ಮಿಕಾಯೈ ಗಂಧಂ ಕಲ್ಪಯಾಮಿ; ಹಂ ಆಕಾಶಾತ್ಮಿಕಾಯೈ ಪುಷ್ಪಂ ಕಲ್ಪಯಾಮಿ; ಯಂ ವಾಯ್ವಾತ್ಮಿಕಾಯೈ; ಧೂಪಂ ಕಲ್ಪಯಾಮಿ; ರಂ ವಹ್ನ್ಯಾತ್ಮಿಕಾಯೈ ದೀಪಂ ಕಲ್ಪಯಾಮಿ; ವಂ ಜಲಾತ್ಮಿಕಾಯೈ ನೈವೇದ್ಯಂ ಕಲ್ಪಯಾಮಿ.

೧. ಸೌಂದರ್ಯಲಹರೀ ಸ್ತೋತ್ರದೀಪಿಕೆ
ಶ್ಲೋಕಗಳ ಮೊದಲ ಸಾಲು ಮತ್ತು ವಿಷಯಸೂಚಿ

ಶ್ಲೋಕ ಸಂಖ್ಯೆ	ಮೊದಲಸಾಲು ಮತ್ತು ವಿಷಯ
೧.	ಶಿವಶ್ಶಕ್ತ್ಯಾಯುಕ್ತೋ (ದೇವಿಯ ಮಹಿಮೆ)
೨.	ತನೀಯಾಂಸಂ ಪಾಂಸುಂ (ದೇವಿಯ ಪಾದಧೂಳಿಯ ಪ್ರಭಾವ)
೩.	ಅವಿದ್ಯಾನಾಮಂತಸ್ತಿಮಿರ (ದೇವಿಯ ಪಾದಧೂಳಿಯ ಪ್ರಭಾವ)
೪.	ತ್ವದನ್ಯಃ ಪಾಣಿಭ್ಯಾಮ್ (ದೇವಿಯ ಪಾದಾರವಿಂದಗಳ ಮಹಿಮೆ)
೫.	ಹರಿಸ್ತ್ವಾಮಾರಾಧ್ಯ (ದೇವಿಯ ಸೌಂದರ್ಯಮಹಿಮೆ)
೬.	ಧನುಃ ಪೌಷ್ಪಂ ಮೌರ್ವೀ (ದೇವಿಯ ಕೃಪಾಪ್ರಭಾವ)
೭.	ಕ್ವಣತ್ಕಾಂಚೀದಾಮಾ (ದೇವಿಯ ದಿವ್ಯಮೂರ್ತಿ ಸ್ಮರಣೆ)
೮.	ಸುಧಾಸಿಂಧೋರ್ಮಧ್ಯೇ (ದೇವಿಯ ಪೀಠವರ್ಣನೆ)
೯.	ಮಹೀಂ ಮೂಲಾಧಾರೇ (ದೇವಿಯ ವಿಹಾರಮಾರ್ಗಗಳು)
೧೦.	ಸುಧಾಧಾರಾಸಾರೈಃ (ದೇವಿಯ ವಿಶ್ರಾಂತಿಧಾಮದ ವರ್ಣನೆ)

೧೧. ಚತುರ್ಭಿಃ ಶ್ರೀಕಂಠೈಃ
(ಶ್ರೀ ಚಕ್ರದ ಸ್ವರೂಪ)

೧೨. ತ್ವದೀಯಂ ಸೌಂದರ್ಯಂ
(ದೇವಿಯ ಸೌಂದರ್ಯದ ಅನಿರ್ವರ್ಣನೀಯತೆ)

೧೩. ನರಂ ವರ್ಷೀಯಾಂಸಂ
(ದೇವಿಯ ಕಡೆಗಣ್ಣೋಟದ ಪ್ರಭಾವ)

೧೪. ಕ್ಷಿತೌ ಷಟ್ಪಂಚಾಶತ್
(ದೇವಿಯ ಪಾದಾಂಕಿತ ಷಟ್ಚಕ್ರಗಳ ಕಿರಣ ವಿಭಾಗ)

೧೫. ಶರಜ್ಜ್ಯೋತ್ಸ್ನಾ ಶುದ್ಧಾಂ
(ದೇವಿಯ ಮಧುರವಾಣಿಯ ಉಗಮ)

೧೬. ಕವೀಂದ್ರಾಣಾಂ ಚೇತಃ
(ವಾಣಿಯ ಪ್ರಕಾಶನಕ್ಕಾಗಿ ದೇವಿಯ ಧ್ಯಾನ)

೧೭. ಸವಿತ್ರೀಭಿರ್ವಾಚಾಂ
(ಕವಿತಾಮೂಲವಾದ ದೇವಿಯ ಧ್ಯಾನ)

೧೮. ತನುಚ್ಛಾಯಾಭಿಸ್ತೇ
(ಅಪ್ಸರೆಯರನ್ನು ಆಕರ್ಷಿಸುವ ದೇವೀ ಸೌಂದರ್ಯ)

೧೯. ಮುಖಂ ಬಿಂದುಂ ಕೃತ್ವಾ
(ದೇವಿಯ ಅದ್ಭುತ ಸೌಂದರ್ಯವರ್ಣನೆ)

೨೦. ಕಿರಂತೀಮಂಗೇಭ್ಯಃ
(ಜ್ವರಪರಿಹಾರಕವಾದ ದೇವಿಯ ಧ್ಯಾನ)

೨೧. ತಟಿಲ್ಲೇಖಾ ತನ್ವೀಂ
(ಆನಂದದಾಯಿ ದೇವಿಯ ಕಲೋಪಾಸನೆ)

೨೨. ಭವಾನೀ ತ್ವಂ ದಾಸೇ
(ಭಗವತ್ಸಾಯುಜ್ಯವನ್ನು ಕೊಡುವ ದೇವಿಯ ಧ್ಯಾನವಿಶೇಷ)

೨೩. ತ್ವಯಾ ಹೃತ್ವಾ ವಾಮಂ
(ಶಕ್ತಿಸ್ವರೂಪಿಣಿಯೇ ಶಿವಮಯ ರೂಪ)

೨೪. ಜಗತ್ಸೂತೇ ಧಾತಾ
(ದೇವಿಯೇ ಕ್ರಿಯಾಶಕ್ತಿ ಸ್ವರೂಪಿಣೀ)

೨೫. ತ್ರಯಾಣಾಂ ದೇವಾನಾಂ
(ದೇವೀಪೂಜೆಯೇ ತ್ರಿಮೂರ್ತಿಗಳ ಪೂಜೆ)

೨೬. ವಿರಂಚಿಃ ಪಂಚತ್ವಂ
(ಪರಶಿವನ ಶಾಶ್ವತತೆ)

೨೭. ಜಪೋಜಲ್ಪಃ
(ಸಕಲ ಕರ್ಮಗಳೂ ನಿನ್ನ ಸೇವೆ)

೨೮. ಸುಧಾಮಪ್ಯಾಸ್ವಾದ್ಯ
(ದೇವಿಯ ಕರ್ಣಭೂಷಣಗಳ ಮಹಿಮೆ)

೨೯. ಕಿರೀಟಂ ವೈರಿಂಚಂ
(ದೇವಿಗೆ ಸದಾಶಿವನಲ್ಲಿರುವ ಗೌರವ)

೩೦. ಸ್ವದೇಹೋದ್ಭೂತಾಭಿಃ
(ದೇವಿಯ ಐಕ್ಯಭಾವೋಪಾಸನೆ)

೩೧. ಚತುಷ್ಷಷ್ಟ್ಯಾ ತಂತ್ರೈಃ
(ಪುರುಷಾರ್ಥದ ಹಾದಿತೋರಿಸುವ ಶ್ರೀಚಕ್ರದಮಹಿಮೆ)

೩೨. ಶಿವಶ್ಶಕ್ತಿಃ ಕಾಮಃ
(ಪಂಚದಶಾಕ್ಷರೀ, ಮಂತ್ರೋದ್ಧಾರ)

೩೩. ಸ್ಮರಂ ಯೋನಿಂ ಲಕ್ಷ್ಮೀಂ
(ದೇವೀ ಮಂತ್ರೋಪಾಸನೆಯ ಕ್ರಮ)

೩೪. ಶರೀರಂ ತ್ವಂ ಶಂಭೋಃ
(ಶಿವ ಶಕ್ತಿಗಳ ಐಕ್ಯವರ್ಣನೆ)

೩೫. ಮನಸ್ತ್ವಂ ವ್ಯೋಮತ್ವಂ
(ದೇವಿಯ ತತ್ತ್ವಾತ್ಮಿಕತೆ)

೩೬. ತವಾಜ್ಞಾಚಕ್ರಸ್ಥಂ
(ಆಜ್ಞಾಚಕ್ರದಲ್ಲಿ ದೇವಿಯ ಧ್ಯಾನ)

೩೭. ವಿಶುದ್ಧೌ ತೇ
(ವಿಶುದ್ಧಿ ಚಕ್ರದಲ್ಲಿ ದೇವಿಯಧ್ಯಾನ)

೩೮. ಸಮುನ್ಮೀಲತ್ಸಂವಿತ್
(ಅನಾಹತ ಚಕ್ರದಲ್ಲಿ ದೇವಿಯ ಧ್ಯಾನ)

೩೯. ತವ ಸ್ವಾಧಿಷ್ಠಾನೇ
(ಸ್ವಾಧಿಷ್ಠಾನ ಚಕ್ರದಲ್ಲಿ ದೇವಿಯಧ್ಯಾನ)

೪೦. ತಟಿತ್ತ್ವಂತಂ ಶಕ್ತ್ಯಾ
(ಮಣಿಪೂರಚಕ್ರದಲ್ಲಿ ದೇವಿಯ ಧ್ಯಾನ)

೪೧. ತವಾಧಾರೇ ಮೂಲೇ
(ಮೂಲಾಧಾರ ಚಕ್ರದಲ್ಲಿ ದೇವಿಯ ಧ್ಯಾನ)

೪೨. ಗತೈರ್ಮಾಣಿಕ್ಯತ್ವಂ
(ದೇವಿಯ ಕಿರೀಟವರ್ಣನೆ)

೪೩. ಧುನೋತು ಧ್ವಾಂತಂ
(ದೇವಿಯ ಕೇಶಪಾಶಗಳ ವರ್ಣನೆ)

೪೪. ತನೋತು ಕ್ಷೇಮಂ
(ದೇವಿಯ ಬೈತಲೆಯ ವರ್ಣನೆ)

೪೫. ಅರಾಲೈಸ್ಸ್ವಾಭಾವ್ಯಾತ್
(ದೇವಿಯ ಮುಖಕಮಲ ವರ್ಣನೆ)

೪೬. ಲಲಾಟಂ ಲಾವಣ್ಯದ್ಯುತಿ
(ದೇವಿಯ ಹಣೆಯ ವರ್ಣನೆ)

೪೭. ಭ್ರುವೌ ಭುಗ್ನೇ
(ದೇವಿಯ ಹುಬ್ಬುಗಳ ವರ್ಣನೆ)

೪೮. ಅಹಃಸೂತೇ ಸವ್ಯಂ
(ದೇವಿಯ ನೇತ್ರಗಳ ವರ್ಣನೆ)

೪೯. ವಿಶಾಲಾ ಕಲ್ಯಾಣೀ
(ದೇವಿಯ ಕಟಾಕ್ಷವರ್ಣನೆ)

೫೦. ಕವೀನಾಂ ಸಂದರ್ಭಃ
(ದೇವಿಯ ಹಣೆಗಣ್ಣಿನ ವರ್ಣನೆ)

೫೧. ಶಿವೇ ಶೃಂಗಾರಾರ್ದ್ರಾ
(ದೇವಿಯ ನವರಸನೋಟದ ವರ್ಣನೆ)

೫೨. ಗತೇ ಕರ್ಣಾಭ್ಯರ್ಣಂ
(ದೇವಿಯ ನೇತ್ರದೈರ್ಘ್ಯ ವರ್ಣನೆ)

೫೩. ವಿಭಕ್ತತ್ರೈವರ್ಣ್ಯಂ
(ದೇವಿಯ ಕಣ್ಣಿನ ಬಣ್ಣಗಳ ವರ್ಣನೆ)

೫೪. ಪವಿತ್ರೀಕರ್ತುಂ ನಃ
(ದೇವಿಯ ಕಣ್ಣಿನ ಬಣ್ಣಗಳ ವರ್ಣನೆ)

೫೫. ನಿಮೇಷೋನ್ಮೇಷಾಭ್ಯಾಂ
(ದೇವಿಯ ಕಣ್ಮುಚ್ಚುವ ತೆಗೆವ ವರ್ಣನೆ)

೫೬. ತವಾಪರ್ಣೇ ಕರ್ಣೇ
(ದೇವಿಯ ನೇತ್ರಗಳ ಸೌಭಾಗ್ಯ ವರ್ಣನೆ)

೫೭. ದೃಶಾ ದ್ರಾಘೀಯಸ್ಯಾ
(ದೇವಿಯ ಕೃಪಾಕಟಾಕ್ಷ ವರ್ಣನೆ)

೫೮. ಅರಾಲಂ ತೇ ಪಾಲೀಯುಗಲಂ
(ದೇವಿಯ ಪಾಲಿಗಳ ವರ್ಣನೆ)

೫೯. ಸ್ಫುರದ್ಗಂಡಾಭೋಗ
(ದೇವಿಯ ಬೆಂಡೋಲೆಗಳ ವರ್ಣನೆ)

೬೦. ಸರಸ್ವತ್ಯಾಃ ಸೂಕ್ತೀಃ
(ದೇವಿಯ ಮಧುರಾಲಾಪ ವರ್ಣನೆ)

೬೧. ಅಸೌನಾಸಾವಂಶಃ
(ದೇವಿಯ ನಾಸಾಪುಟದ ವರ್ಣನೆ)

೬೨. ಪ್ರಕೃತ್ಯಾಽಽರಕ್ತಾಯಾಸ್ತವ
(ದೇವಿಯ ತುಟಿಗಳ ವರ್ಣನೆ)

೬೩. ಸ್ಮಿತಜ್ಯೋತ್ಸ್ನಾಜಾಲಂ
(ದೇವಿಯ ವದನಬಿಂಬ ವರ್ಣನೆ)

೬೪. ಅವಿಶ್ರಾಂತಂ ಪತ್ಯುಃ
(ದೇವಿಯ ಜಿಹ್ವಾಗ್ರವರ್ಣನೆ)

೬೫. ರಣೇ ಜಿತ್ವಾ ದೈತ್ಯಾನ್
(ದೇವಿಯ ತಾಂಬೂಲದ ಪವಿತ್ರತಾವರ್ಣನೆ)

೬೬. ವಿಪಂಚ್ಯಾ ಗಾಯಂತೀ
(ದೇವಿಯ ಕಂಠಮಾಧುರ್ಯ ವರ್ಣನೆ)

೮೧. ಗುರುತ್ವಂ ವಿಸ್ತಾರಂ
(ದೇವಿಯ ನಿತಂಬವರ್ಣನೆ)

೮೨. ಕರೀಂದ್ರಾಣಾಂ ಶುಂಡಾನ್
(ದೇವಿಯ ತೊಡೆಗಳ ವರ್ಣನೆ)

೮೩. ಪರಾಜೇತುಂ ರುದ್ರಂ
(ದೇವಿಯ ಮೊಣಕಾಲುಗಳ ವರ್ಣನೆ)

೮೪. ಶ್ರುತೀನಾಂ ಮೂರ್ಧಾನೋ
(ದೇವಿಯ ಚರಣಾನುಗ್ರಹಕ್ಕೆ ಪ್ರಾರ್ಥನೆ)

೮೫. ನಮೋವಾಕಂ ಬ್ರೂಮೋ
(ದೇವಿಯ ಚರಣಗಳಿಗೆ ನಮನ)

೮೬. ಮೃಷಾಕೃತ್ವಾ ಗೋತ್ರಸ್ಖಲನಂ
(ದೇವಿಯ ಕಾಲಂದುಗೆ ವರ್ಣನೆ)

೮೭. ಹಿಮಾನೀ ಹಂತವ್ಯಂ
(ದೇವಿಯ ಪದಕಮಲ ವರ್ಣನೆ)

೮೮. ಪದಂ ತೇ ಕೀರ್ತೀನಾಂ
(ದೇವಿಯ ಪಾದಾಗ್ರ ವರ್ಣನೆ)

೮೯. ನಖೈರ್ನಾಕಸ್ತ್ರೀಣಾಂ
(ದೇವಿಯ ಪದಮಹಿಮಾ ವರ್ಣನೆ)

೯೦. ದದಾನೇ ದೀನೇಭ್ಯಃ
(ದೇವಿಯ ಚರಣಭಕ್ತಿ ಪ್ರಾರ್ಥನೆ)

೯೧. ಪದನ್ಯಾಸಕ್ರೀಡಾಪರಿಚಯಂ
(ದೇವಿಯ ಕಾಲ್ದಂಡೆಗಳ ವರ್ಣನೆ)

೯೨. ಗತಾಸ್ತೇ ಮಂಚತ್ವಂ
(ದೇವಿಯ ಸೌಂದರ್ಯ ವರ್ಣನೆ)

೯೩. ಅರಾಲಾ ಕೇಶೇಷು
(ದೇವಿಯ ಸೌಂದರ್ಯವರ್ಣನೆ)

೯೪. ಕಲಂಕಃ ಕಸ್ತೂರೀ
(ಚಂದ್ರಮಂಡಲವೇ ದೇವಿಯ ಕರ್ಪೂರಕರಂಡ)

೯೫. ಪುರಾರಾತೇರಂತಃಪುರಮಸಿ
(ಚಂಚಲಚಿತ್ತರಿಗೆ ದೇವೀಪೂಜಾ ದುರ್ಲಭ)

೯೬. ಕಲತ್ರಂ ವೈಧಾತ್ರಂಕತಿಕತಿ
(ದೇವಿಯ ಪಾತಿವ್ರತ್ಯ ವರ್ಣನೆ)

೯೭. ಗಿರಾಮಾಹುರ್ದೇವೀಂ
(ದೇವಿಯ ತುರೀಯತ್ವ ವರ್ಣನೆ)

೯೮. ಕದಾ ಕಾಲೇ ಮಾತಃ
(ದೇವಿಯ ಪಾದತೀರ್ಥ ಪ್ರಾರ್ಥನೆ)

೯೯. ಸರಸ್ವತ್ಯಾ ಲಕ್ಷ್ಮ್ಯಾ
(ದೇವೀಭಕ್ತರ ಮಹಿಮೆ)

೧೦೦. ಪ್ರದೀಪಜ್ವಾಲಾಭಿಃ
(ಈ ಸ್ತೋತ್ರವನ್ನು ದೇವಿಗೇ ಸಮರ್ಪಿಸುವುದು)

ಅಧಿಕ ಶ್ಲೋಕಗಳು

೧೦೧.* ಸಮಾನೀತಃ ಪದ್ಭ್ಯಾಂ*
(ದೇವಿಯ ಮುಖದ ಪ್ರತಿಬಿಂಬದ ವರ್ಣನೆ)

೧೦೨.* ಸಮುದ್ಭೂತ ಸ್ಥೂಲಸ್ತನಭರಂ*
(ದೇವಿಯ ಉಪಾಸನೆಯ ಫಲ)

೧೦೩.* ನಿಧೇ ನಿತ್ಯಸ್ಮೇರೇ*
(ದೇವಿಯಲ್ಲಿ ಬಿನ್ನಹ)

[೧೦೧, ೧೦೨, ೧೦೩ನೇ ಶ್ಲೋಕಗಳು ಕೆಲವು ಪ್ರತಿಗಳಲ್ಲಿ ಮಾತ್ರ ಕಂಡು ಬರುತ್ತವೆ]

೨. ಸೌಂದರ್ಯಲಹರೀ ಸ್ತೋತ್ರದೀಪಿಕೆ
ಗ್ರಂಥ ಸಂಕೇತಸೂಚಿ

ಗ್ರಂಥ ಸಂಕೇತಸೂಚಿ (ಕನ್ನಡ ಮುದ್ರಿತ ಗ್ರಂಥಗಳು)

ಕ್ರಮ ಸಂಖ್ಯೆ	ಗ್ರಂಥ ಸಂಕೇತ	ಗ್ರಂಥದ ಹೆಸರು–ಲೇಖಕರು/ಸಂಪಾದಕರು/ಅನುವಾದಕರು/ಟೀಕಾಕಾರರು ಪ್ರಕಾಶಕರು / ಇಸವಿ
೧.	ಪು	ಸೌಂದರ್ಯಲಹರಿ (ಮೂಲ–ಕನ್ನಡ ಪದ್ಯಾನುವಾದ–ವಿವರಣೆ) ಲೇ: ಬಿ.ಪುಟ್ಟಸ್ವಾಮಯ್ಯ ಪ್ರ: ಶ್ರೀ ದುರ್ಗಾಬುಕ್‌ಸ್ಟಾಲ್, ಬೆಂಗಳೂರು. ಇ:೧೯೮೨
೨.	ಶೇ	ಸೌಂದರ್ಯಲಹರೀ (ಲಕ್ಷ್ಮೀಧರಾ ವ್ಯಾಖ್ಯಾನದ ಕನ್ನಡ ಅನುವಾದದೊಡನೆ ಮೂಲ–ತಾತ್ಪರ್ಯ–ವ್ಯಾಖ್ಯಾನ) ಲೇ: ವಿದ್ವಾನ್ ಶೇಷಾಚಲಶರ್ಮಾ ಪ್ರ: ಆರ್ಷವಿದ್ಯಾ ಪ್ರಕಾಶನ, ಬೆಂಗಳೂರು. ಇ:೨೦೦೪
೩.	ಶಂ	ಸೌಂದರ್ಯಲಹರಿ (ವಾರ್ಧಕಷಟ್ಪದಿ ಪದ್ಯಾನುವಾದ –ತಾತ್ಪರ್ಯ –ಟಿಪ್ಪಣಿ) ಲೇ: ಗಮಕಿ ಆರ್. ಶಂಕರನಾರಾಯಣ್ ಎಂ.ಎ. ಪ್ರ : ಸತ್ಯಶ್ರೀ ಪ್ರಕಾಶನ, ಬೆಂಗಳೂರು. ಇ:1997
೪.	ಬು	ಸೌಂದರ್ಯಲಹರೀ ಸ್ತೋತ್ರ ಶತಕಂ (ಮೂಲ– ಪದಯೋಜನೆ–ಪ್ರತಿಪದಾರ್ಥ–ತಾತ್ಪರ್ಯ–ಭಾವಾರ್ಥ) ಲೇ : ಬುರುಗನಹಳ್ಳಿ ಭೀಮಸೇನಶರ್ಮಾ ಪ್ರ: ಎಸ್.ಸುಬ್ರಹ್ಮಣ್ಯ ಅಯ್ಯರ್, ಭದ್ರಾವತಿ. ಇ: ೧೯೭೪
೫.	ರ	ಸೌಂದರ್ಯಲಹರೀ (ಮೂಲ–ಕನ್ನಡ ಪದ್ಯಾನುವಾದ – ವ್ಯಾಖ್ಯಾನ) ಲೇ : ಕೆ.ಪಿ. ರತ್ನಾಕರಭಟ್ಟ ಪ್ರ : ಶಿವಚೇತನ ಪ್ರಕಾಶನ, ಮೈಸೂರು. ಇ:೨೦೦೨

೬.	ಗುಂ	ಸೌಂದರ್ಯಲಹರೀ (ಮೂಲ-ತಾತ್ಪರ್ಯ-ಪ್ರಯೋಗ-ಚಿತ್ರಗಳು) ಲೇ : ವೇ॥ಬ್ರಾ॥ಶ್ರೀ॥ ಗುಂಜೂರು ರಾಮಚಂದ್ರಶಾಸ್ತ್ರೀ ಪ್ರ : ಶ್ರೀನಿಧಿ ಪಬ್ಲಿಕೇಷನ್ಸ್, ಬೆಂಗಳೂರು. ಇ:೨೦೧೨
೭.	ಶ್ರೀ	ಸೌಂದರ್ಯಲಹರಿ (ಮೂಲ-ಪದವಿಭಾಗ-ತಾತ್ಪರ್ಯ-ವಿವರಣೆ-ಯಂತ್ರವಿವರಣೆ) ಸಂ: ಬಿ.ವಿ. ಶ್ರೀನಿವಾಸಯ್ಯ ಪ್ರ : ಪಾರು ಪ್ರಕಾಶನ, ಗದಗ. ಇ: ೨೦೦೩?
೮.	ಸಿ	ಕನ್ನಡ ಸೌಂದರ್ಯಲಹರೀ (ಕನ್ನಡ ಪದ್ಯಾನುವಾದ-ಟಿಪ್ಪಣಿಗಳು- ಆಯ್ದಪದ್ಯಗಳ ಅನುವಾದ) ಲೇ : ಸಿ.ಪಿ.ಕೆ. ಪ್ರ : ಶಾರದಾಮಂದಿರ, ಮೈಸೂರು. ಇ: ೧೯೬೯
೯.	ಗ	ಸೌಂದರ್ಯ ಲಹರೀ (ಮೂಲ-ಅನ್ವಯಾರ್ಥ-ತಾತ್ಪರ್ಯ-ಟಿಪ್ಪಣಿ) ಅನು : ವಿದ್ವಾನ್ ಶ್ರೀ ಗಣೇಶಭಟ್ಟ ಹೋಬಳಿ. ಇ: ೨೦೦೨ ಪ್ರ : ವೇದಾಂತ ಭಾರತೀ, ಕೃಷ್ಣರಾಜನಗರ, ಮೈಸೂರು ಜಿಲ್ಲೆ ಇ : ೨೦೦೩
೧೦.	ವಿ	ಶಾಂಕರ ಸ್ತೋತ್ರಮುಕ್ತಾವಲಿಃ (ಸೌಂದರ್ಯಲಹರೀ) (ಮೂಲ-ತಾತ್ಪರ್ಯ) ಅನು : ವಿದ್ವಾನ್ ಚಿ.ನಾ. ವಿಶ್ವನಾಥಶಾಸ್ತ್ರೀ ಪ್ರ: ಶೃಂಗೇರಿ ಶ್ರೀ ಜಗದ್ಗುರು ಮಹಾಸಂಸ್ಥಾನ. ಶೃಂಗೇರಿ. ಇ:೨೦೦೧
೧೧.	ಅ	ಸೌಂದರ್ಯಲಹರೀ (ಮೂಲ-ವರ್ಣನೆ-ವ್ಯಾಖ್ಯಾನ-ಸ್ತೋತ್ರಲಕ್ಷಣ - ಫಲ) ಲೇಖಕಿ: ಡಾ॥ ಅನಸೂಯ ಎಸ್. ರಾಜೀವ್ ಪ್ರ : ವೆಂಕಟಾದ್ರಿ ಪ್ರಕಾಶನ, ಬೆಂಗಳೂರು. ಇ: ೨೦೧೧
೧೨.	ಯೋ	ವಿಶ್ವಶಾಂತಿಗಾಗಿ ಸೌಂದರ್ಯಲಹರೀ (ಮೂಲ-ತಾತ್ಪರ್ಯ -ಯಂತ್ರವಿವರಣೆ) ಲೇ : ಶ್ರೀ ಯೋಗಾ ನರಸಿಂಹ ಪ್ರ : ಶ್ರೀ ಕನಕ ಸಾಹಿತ್ಯ ಪ್ರತಿಷ್ಠಾನ, ಬೆಂಗಳೂರು- ಇ: ೨೦೦೧
೧೩.	ಜ	ಸೌಂದರ್ಯಲಹರೀ (ಕನ್ನಡ ಟೀಕೆ) (ಮೂಲ-ಅನ್ವಯಾರ್ಥ-ವ್ಯಾಖ್ಯಾನ-ಯಂತ್ರವಿವರಣೆ) ಟೀ: ಜಕ್ಕಣಾಮಾತ್ಯ ಸಂ: ವಿದ್ವಾನ್ ಸು.ನಾರಾಯಣಸ್ವಾಮಿ ಶಾಸ್ತ್ರೀ ಪ್ರ: ಕುವೆಂಪು ಕನ್ನಡ ಅಧ್ಯಯನಸಂಸ್ಥೆ, ಮೈ.ವಿ.ವಿ. ಇ: ೨೦೦೩

೧೪.	ಪ	**ಭವಾನೀ ಸೌಂದರ್ಯಲಹರೀ** **(ಮೂಲ–ತಾತ್ಪರ್ಯ–ವಿವರಣೆ)** ಟೀ : ಶ್ರೀಮತಿ ಪವನಿ ನಿರ್ಮಲ ಪ್ರಭಾವತಿ ಅನು: (ತೆಲುಗಿನಿಂದ ಕನ್ನಡಕ್ಕೆ) ಸದಾಶಿವ ದೇವುಡು. ಪ್ರ: ಶ್ರೀವಿದ್ಯಾಗಣಪತಿ ಪ್ರಕಾಶನ, ಬೆಂಗಳೂರು. ಇ: ೨೦೦೯
೧೫.	ವೆಂ	**ಸೌಂದರ್ಯಲಹರಿಯ ಕನ್ನಡಾನುವಾದ** **(ಮೂಲ–ತಾತ್ಪರ್ಯ)** ಅನು : ಎನ್.ಎಸ್. ವೆಂಕಟನಾಥಾಚಾರ್ಯ ಪ್ರ : ಓರಿಯೆಂಟಲ್ ರಿಸರ್ಚ್ ಇನ್ಸಿಟ್ಯೂಟ್, ಮೈಸೂರು. ಇ: ೧೯೬೯
೧೬.	ಕೃ	**ಸೌಂದರ್ಯಲಹರೀ** **(ಮೂಲ–ತಾತ್ಪರ್ಯ)** ಅನು : ಟಿ.ಎಸ್. ಪದ್ಮನಾಭ ಶರ್ಮ ಎಂ.ಎ. ಪ್ರ : ಟಿ.ಎನ್. ಕೃಷ್ಣಯ್ಯ ಶೆಟ್ಟಿ ಆಂಡ್ ಸನ್ಸ್, ಬೆಂಗಳೂರು ಇ: ೨೦೦೯
೧೭.	ತೋ	**ಆನಂದಲಹರೀ** **(ಸೌಂದರ್ಯಲಹರಿಯ ಪೂರ್ವಭಾಗ)** **(ಮೂಲ–ಪದ್ಯಾನುವಾದ – ವಿವರಣೆ)** ಅನು : ಲಕ್ಷ್ಮೀಶ ತೋಳ್ಪಾಡಿ ಪ್ರ : ಅಭಿನವ ಪ್ರಕಾಶನ, ಬೆಂಗಳೂರು ಇ: ೨೦೧೫
೧೮.	ನಾ	**ಸೌಂದರ್ಯಲಹರೀ ಭಾವಸೋಪಾನ** **(ಮೂಲ–ಪದ್ಯಾನುವಾದ)** ಲೇ : ಪಿ. ನಾರಾಯಣಭಟ್ ಪ್ರ : ಕಾಮಧೇನು ಪ್ರಕಾಶನ, ಬೆಂಗಳೂರು ಇ: ೨೦೧೧ (೫ನೇ ಮುದ್ರಣ)
೧೯.	ಪ್ರ	**ಸೌಂದರ್ಯಲಹರೀ** **(ಮೂಲ–ಪದ್ಯಾನುವಾದ–ಟಿಪ್ಪಣಿಗಳು)** ಅನು : ಪುಟ್ಟು, ಪ. ಕುಲಕರ್ಣಿ ಪ್ರ : ಪ್ರಜ್ಞಾ ಪ್ರಕಾಶನ, ಮೈಸೂರು, ರಾಣಿಬೆನ್ನೂರು, ಇ: ೧೯೮೮
೨೦.	ಸೀ	**ಸೌಂದರ್ಯಲಹರಿ ಭಾವಸೋಪಾನ** **(ಮೂಲ–ಅನ್ವಯ–ತಾತ್ಪರ್ಯ)** ಅನು : ಎಚ್.ಎಲ್. ಸೀತಾದೇವಿ ಪ್ರ : ನವಭಾರತೀ ಪ್ರಕಾಶನ, ಮೈಸೂರು, ಇ: ೨೦೧೫

೨೧.	ಚಿ	**ಸಚಿತ್ರ ಆನಂದಲಹರೀ** **(ಸಂ–ಕ–ಇಂ–ಹಿ) ಮೂಲ–ತಾತ್ಪರ್ಯ–ಚಿತ್ರ)** ಸಂ : ಚಿ.ಸು. ಕೃಷ್ಣಶೆಟ್ಟಿ ಪ್ರ : ಅಧ್ಯಾತ್ಮ ಪ್ರಕಾಶನ, ರಾಧಾಕೃಷ್ಣ ಲೇಔಟ್, ಪದ್ಮನಾಭನಗರ, ಬೆಂಗಳೂರು ಇ : ೨೦೧೩
೨೨.	ವಿ	**ಆನಂದ ಲಹರೀ ಮತ್ತು ಇತರ ಸ್ತೋತ್ರಗಳು** **(ಪದ್ಯಾನುವಾದ)** ಅನು : ಲಕ್ಷ್ಮಣ ವಿರೂಪಾಕ್ಷ ಜೋಶಿ ಪ್ರ : ಲಕ್ಷ್ಮಣ ವಿರೂಪಾಕ್ಷ ಜೋಶಿ, ಮಾಳುಮಡ್ಡಿ, ಧಾರವಾಡ ಇ : ೧೯೮೬
೨೩.	ನ	**ಸೌಂದರ್ಯಲಹರೀ ಮತ್ತು ಇತರ ಸ್ತೋತ್ರಗಳು** **(ಮೂಲ–ಅನುವಾದ–ವಿವರಣೆಗಳು)** ಲೇ : ಶ್ರೀ ನಾಗರಾಜ ಪ್ರ : ನವಭಾರತ ಪಬ್ಲಿಕೇಷನ್ಸ್, ಬೆಂಗಳೂರು–೫೩ ಇ : ೨೦೧೨

II ಗ್ರಂಥ ಸಂಕೇತಸೂಚಿ (ಕನ್ನಡ ಹಸ್ತಪ್ರತಿಗಳು)

ಕ್ರಮ ಸಂಖ್ಯೆ	ಗ್ರಂಥ ಸಂಕೇತ	ಗ್ರಂಥದ ಹೆಸರು–ಲೇಖಕರು/ಸಂಪಾದಕರು/ಅನುವಾದಕರು/ಟೀಕಾಕಾರರು ಪ್ರಕಾಶಕರು / ಇಸವಿ
೧.	ಕ	**ಸೌಂದರ್ಯಲಹರಿ (ಕಾಗದದ ಹಸ್ತಪ್ರತಿ) (ಅಪ್ರಕಟಿತ)** **(ಮೂಲ–ಅನ್ವಯಾರ್ಥ–ಟಿಪ್ಪಣಿ)** ಅನು: ಬಿ.ಎಸ್. ಕಪನೀಪತಯ್ಯ, ಮೈಸೂರು. ೫೬೩, ೨ನೇ ಕ್ರಾಸ್, ರಾಮಚಂದ್ರ ಅಗ್ರಹಾರ ಕೆ.ಆರ್. ಮೊಹಲ್ಲಾ, ಮೈಸೂರು ಆಕರ : ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಹಸ್ತಪ್ರತಿ ವಿಭಾಗ, ಬೆಂಗಳೂರು
೨.	ಎಂ	**ಸೌಂದರ್ಯಲಹರೀ (ಕಾಗದ ಹಸ್ತಪ್ರತಿ) (ಅಪ್ರಕಟಿತ)** **(ವಾರ್ಧಕ ಷಟ್ಪದಿ)** ಅನು: ಎಂ.ವಿ. ಸೀತಾರಾಮಯ್ಯ ರಚನೆಕಾಲ ೧೯೮೦ ಆಕರ : ಬಿ.ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ, ಹಸ್ತಪ್ರತಿ ವಿಭಾಗ, ಬೆಂಗಳೂರು.
	ಟಿಪ್ಪಣಿ	ಈ ಎರಡು ಹಸ್ತಪ್ರತಿಗಳನ್ನು ಪರಿಷ್ಕರಿಸಿ ಈ ಗ್ರಂಥದಲ್ಲಿ ಸೇರಿಸಿದೆ ಸಂಪಾದಕರು: ಪ್ರೊ ಜಿ. ಅಶ್ವತ್ಥನಾರಾಯಣ, ಬೆಂಗಳೂರು

III ಗ್ರಂಥ ಸಂಕೇತಸೂಚಿ (ಸಂಸ್ಕೃತ)

ಕ್ರಮ ಸಂಖ್ಯೆ	ಗ್ರಂಥ ಸಂಕೇತ	ಗ್ರಂಥದ ಹೆಸರು–ಲೇಖಕರು/ಸಂಪಾದಕರು/ಅನುವಾದಕರು/ಟೀಕಾಕಾರರು ಪ್ರಕಾಶಕರು / ಇಸವಿ
೧.	ಲ	**ಲಕ್ಷ್ಮೀಧರನ ವ್ಯಾಖ್ಯಾನಸಹಿತ ಸೌಂದರ್ಯಲಹರೀ (ಸಂಸ್ಕೃತ)** ಭಾವನೋಪನಿಷತ್ (ಭಾಸ್ಕರಾಚಾರ್ಯ ಟೀಕೆ) ದೇವಿ ಪಂಚಶತಿ (ಮೂಲ) ಸಂ: ಎನ್.ಎನ್. ಸ್ವಾಮಿ ಘನಪಾಠಿ ಪರಿಷ್ಕರಣ : ಪಂಡಿತ ಎಸ್. ನಾರಾಯಣಸ್ವಾಮಿ ಶಾಸ್ತ್ರೀ ಪ್ರ: ಓರಿಯೆಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್, ಮೈಸೂರು ಇಸವಿ: ೧೮೮೬ (ಪ್ರ ಮು) ೧೯೪೫ (ದ್ವಿ ಮು) ೧೯೫೩ (ತೃ.ಮು) ೧೯೬೯ (ಚ.ಮು) ೧೯೫೩ರ ಮುದ್ರಣವನ್ನು ಇಲ್ಲಿ ಬಳಸಲಾಗಿದೆ.
೨.	ಕು	**ಸೌಂದರ್ಯಲಹರೀ (ಶ್ರೀ ಶಂಕರಭಗವತ್ಪಾದಾಚಾರ್ಯ)** ಮೂಲ ಮತ್ತು ೧೦ ವ್ಯಾಖ್ಯಾನಗಳು ೧೦ ಸಂಸ್ಕೃತ ವ್ಯಾಖ್ಯಾನಗಳು : ೧ ಲಕ್ಷ್ಮೀಧರಾ ೨ ಸೌಭಾಗ್ಯ ವರ್ಧಿನೀ, ೩ ಅರುಣಮೋದಿನೀ, ೪ ಆನಂದಗಿರಿ, ೫ ತಾತ್ಪರ್ಯ ದೀಪಿನೀ, ೬ ಪದಾರ್ಥ ಚಂದ್ರಿಕಾ, ೭ ಡಿಂಡಿಮ ಭಾಷ್ಯ ೮ ಗೋಪಾಲಸುಂದರೀ, ೯ ಆನಂದಲಹರೀ, ೧೦ ಕೈವಲ್ಯ ವರ್ಧಿನೀ. (ಮೂಲ ಶ್ಲೋಕಗಳು, ಇಂಗ್ಲಿಷ್ ಅನುವಾದ, ಟಿಪ್ಪಣಿ, ಯಂತ್ರ ವಿವರಣೆಗಳೊಂದಿಗೆ) ಸಂಪಾದಕರು : ಎ.ಕುಪ್ಪುಸ್ವಾಮಿ ಪ್ರಕಾಶಕರು : ನಾಗ್ ಪಬ್ಲಿಷರ್ಸ್, ದೆಹಲಿ. ಇಸವಿ ೨೦೦೬

(24) ಭಾ ಅಮೃತಲಹರಿ
(ಸೌಂದರ್ಯಲಹರಿ ಭಾವಾರ್ಥ ಚಿಂತನೆ)
ಡಾ. ವಿಜಯಭಾರತಿ
ಪ್ರ: ಪ್ರೇಮಾನಂದ ಪ್ರಕಾಶನ 4ನೇ ಬ್ಲಾಕ್ ಜಯನಗರ
ಬೆಂಗಳೂರು-41 ಇಸವಿ 2006 (1)

IV ಗ್ರಂಥ ಸಂಕೇತಸೂಚಿ (ಇಂಗ್ಲಿಷ್)

ಕ್ರಮ ಸಂಖ್ಯೆ	ಗ್ರಂಥ ಸಂಕೇತ	ಗ್ರಂಥದ ಹೆಸರು–ಲೇಖಕರು/ಸಂಪಾದಕರು/ಅನುವಾದಕರು/ಟೀಕಾಕಾರರು ಪ್ರಕಾಶಕರು / ಇಸವಿ
೧.	ಸು	ಸೌಂದರ್ಯಲಹರೀ (Sundarya-Lahari the ocean of Beauty (ರೋಮನ್ ಲಿಪಿಯಲ್ಲಿ ಮೂಲ–ಅನುವಾದ ವಿವರಣೆ–ಯಂತ್ರ ವಿವರಣೆ) ಅನು: ಪಂಡಿತ್ ಎಸ್. ಸುಬ್ರಹ್ಮಣ್ಯ ಶಾಸ್ತ್ರೀ ಮತ್ತು ಟಿ.ಆರ್. ಶ್ರೀನಿವಾಸ್ ಅಯ್ಯಂಗಾರ್ ಪ್ರ: ದಿ ಥಿಯೊಸಫಿಕಲ್ ಪಬ್ಲಿಷಿಂಗ್ ಹೌಸ್, ಚೆನ್ನೈ ೨೦೦೬. ಇಸವಿ (೧೧ನೇ ಮುದ್ರಣ)
೨.	ತ	ಸೌಂದರ್ಯ ಲಹರೀ (ಇಂಗ್ಲಿಷ್ ಅನುವಾದ) (ಸಂಸ್ಕೃತ ಮೂಲ–ರೋಮನ್ ಲಿಪಿಯಲ್ಲಿ ಮೂಲ–ತಾತ್ಪರ್ಯ–ವಿವರಣೆ) ಅನು: ಸ್ವಾಮಿ ತಪಸ್ಯಾನಂದ ಪ್ರ: ರಾಮಕೃಷ್ಣಮಠ, ಮದ್ರಾಸ್. ಇಸವಿ ೧೯೮೭
೩.	ಚಂ	ಸೌಂದರ್ಯಲಹರೀ (ತಮಿಳು ಗ್ರಂಥದ ಇಂಗ್ಲಿಷ್ ಅನುವಾದ) ಲೇ: ಕಂಚಿಕಾಮಕೋಟಿ ಪೀಠಾಧಿಪತಿ ಶ್ರೀ ಚಂದ್ರಶೇಖರೇಂದ್ರ ಸರಸ್ವತೀ ಸ್ವಾಮಿ ಪ್ರ : ಭಾರತೀಯ ವಿದ್ಯಾಭವನ, ಮುಂಬಯಿ. ಇಸವಿ ೨೦೧೨

V ಗ್ರಂಥ ಸಂಕೇತಸೂಚಿ (ತೆಲುಗು)

ಕ್ರಮ ಸಂಖ್ಯೆ	ಗ್ರಂಥ ಸಂಕೇತ	ಗ್ರಂಥದ ಹೆಸರು–ಲೇಖಕರು/ಸಂಪಾದಕರು/ಅನುವಾದಕರು/ಟೀಕಾಕಾರರು ಪ್ರಕಾಶಕರು / ಇಸವಿ
೧.	ಪೋ	**ಸೌಂದರ್ಯಲಹರೀ (ತೆಲುಗು ಅನುವಾದ)** **(ಮೂಲ–ಅವತಾರಿಕ–ಪದವಿಭಾಗ–ಟೀಕೆ–ತಾತ್ಪರ್ಯ–ವಿವರಣೆ–ಯಂತ್ರ–ಪೂಜಾವಿಧಾನ)** ಟೀ: ಡಾಕ್ಟರ್ ಪೋಚಿನಪೆದ್ದಿ ಕಾಮ ಸತ್ಯನಾರಾಯಣ ಪ್ರ: ವಿ.ಜಿ.ಎಸ್. ಪ್ರಕಾಶನ, ವಿಜಯವಾಡ ಇ: ೨೦೦೮
೨.	ತು	**ಸೌಂದರ್ಯಲಹರಿ (ತೆಲುಗು ಪದ್ಯಾನುವಾದ)** **(ಮೂಲ–ಅನ್ವಯಾರ್ಥ–ತಾತ್ಪರ್ಯ–ತೆಲುಗು ವ್ಯಾಖ್ಯಾನ–ಯಂತ್ರವಿವರಣೆ)** ಟೀ: ತುಮ್ಮಲಪಲ್ಲಿ ರಾಮಲಿಂಗೇಶ್ವರರಾವು ಶರ್ಮಗಾರು (ಸದಾಶಿವಾನಂದನಾಥ) ಪ್ರ : ಬಾಲಸರಸ್ವತೀ ಬುಕ್ ಡಿಪೋ–ಕರ್ನೂಲು ಇ: ೨೦೦೮
೩.	ಪಂ	**ಸೌಂದರ್ಯಲಹರಿ (ತೆಲುಗು ಅನುವಾದ)** **(ಶ್ಲೋಕ–ತಾತ್ಪರ್ಯ–ವಿವರಣೆ–ವಿಶೇಷಾಂಶ–ಯಂತ್ರ ವಿವರಣೆ)** ಟೀ: ಬ್ರಹ್ಮಶ್ರೀ ಪಂಚಯಜ್ಞಂ ಅಗ್ನಿಹೋತ್ರಾವಧಾನಿ ಪ್ರ: ಜೆ.ಪಿ. ಪಬ್ಲಿಕೇಶನ್ಸ್, ವಿಜಯವಾಡ ಇ: ೨೦೧೩
೪.	ಉ	**ಸೌಂದರ್ಯಲಹರಿ (ತೆಲುಗು ಅನುವಾದ)** **(ಶ್ಲೋಕ–ಪ್ರತಿಪದಾರ್ಥ –ತಾತ್ಪರ್ಯ–ವಿವರಣೆ)** ಟೀ: ಶ್ರೀಮತಿ ಉನ್ನವ ಕಮಲಕುಮಾರಿ ಪ್ರ: ಅಂಬಿಕಾ ಅನಂತನಾರಾಯಣ ಪಬ್ಲಿಕೇಷನ್ಸ್, ಕೆಂಗೇರಿ. ಬೆಂಗಳೂರು ಇಸವಿ : ೨೦೧೦
೫.	ಭ	**ಸೌಂದರ್ಯಲಹರಿ (ತೆಲುಗು ಅನುವಾದ)** **(ಶ್ಲೋಕ–ತಾತ್ಪರ್ಯ ಯಂತ್ರವಿವರಣೆ–ಸಂಕ್ಷಿಪ್ತ ವಿವರಣೆ)** ಅನು: ಭಮಿಡಿಪಲ್ಲಿ ವಿಜಯಲಕ್ಷ್ಮಿ ಪ್ರ: ವಸುಂಧರ ಪಬ್ಲಿಕೇಷನ್ಸ್ ವಿಜಯವಾಡ ಇಸವಿ ೨೦೧೦?

VI ಗ್ರಂಥ ಸಂಕೇತಸೂಚಿ (ಲಲಿತಾ ಸಹಸ್ರನಾಮ ಗ್ರಂಥಗಳು)

ಕ್ರಮ ಸಂಖ್ಯೆ	ಗ್ರಂಥ ಸಂಕೇತ	ಗ್ರಂಥದ ಹೆಸರು–ಲೇಖಕರು/ಸಂಪಾದಕರು/ಅನುವಾದಕರು/ಟೀಕಾಕಾರರು ಪ್ರಕಾಶಕರು / ಇಸವಿ
೧.	ಲ–ಕೂ	**ಶ್ರೀ ಕೃಪಾ ತಾತ್ಪರ್ಯ ಸಹಿತ** ಶ್ರೀಲಲಿತಾನಾಮಾವಳಿ (ಸಂಸ್ಕೃತ–ಕನ್ನಡ) (ಸಹಸ್ರನಾಮ–ಪಂಚಶತಿ–ತ್ರಿಶತಿ–ಅಷ್ಟೋತ್ತರ – ಪಂಚವಿಂಶತಿ–ಕಾಮಸಂಜೀವಿನಿ ಇತ್ಯಾದಿ ಸ್ತೋತ್ರಗಳು (ಕನ್ನಡ) ಲೇ : ಕೂಡಲಿ ಜಗನ್ನಾಥ ಶಾಸ್ತ್ರೀ ಪ್ರ: ಶ್ರೀಕೃಪಾ ಪ್ರಕಾಶನ ೧ನೇ ಕ್ರಾಸ್ ಅಶೋಕನಗರ, ಶಿವಮೊಗ್ಗ ೫೭೭ ೨೦೧ ಇಸವಿ ೧೯೯೪
೨.	ಲ–ಯ	**ಶ್ರೀ ಲಲಿತಾ ಸಹಸ್ರನಾಮ ಭಾಷ್ಯಂ (ಕನ್ನಡ)** (ಶ್ರೀ ಲಲಿತಾ ಶ್ರೀ ಗೌರಿ ಮತ್ತು ಮಂತ್ರಗಳ ರಹಸ್ಯಾರ್ಥ) ಲೇ: ಯಡತೊರೆ ಸುಬ್ಬರಾಯಶರ್ಮ ಮಲ್ಲೇಶ್ವರಂ, ಬೆಂಗಳೂರು ಪ್ರ: ಲೇಖಕರು, ಮಲ್ಲೇಶ್ವರಂ, ಬೆಂಗಳೂರು ಇಸವಿ ೧೯೪೯
೩.	ಲ–ಆ	**ಶ್ರೀ ಲಲಿತಾ ಸಹಸ್ರನಾಮ ಸ್ತೋತ್ರ (ಕನ್ನಡ)** **ಶ್ರೀ ಲಲಿತಾ ತ್ರಿಶತಿ ಸ್ತೋತ್ರ (ಭಾಷ್ಯ ಸಹಿತ)** ಲೇ : ಸ್ವಾಮಿ ಆದಿದೇವಾನಂದ ಪ್ರ : ಶ್ರೀರಾಮಕೃಷ್ಣಾಶ್ರಮ, ಮೈಸೂರು–೨೦ ಇಸವಿ ೨೦೧೪
೪.	ಲ–ಪ	**ಶ್ರೀ ಲಲಿತಾ ಸಹಸ್ರನಾಮ ಸ್ತೋತ್ರ ಸಾರಸರ್ವಸ್ವ (ಕನ್ನಡ)** (ಮೂಲ–ವ್ಯಾಖ್ಯಾನ) ಲೇ : ಪವನಿ ನಿರ್ಮಲ ಪ್ರಭಾವತಿ ಅನು: ಲಲಿತಾ ಶಾಸ್ತ್ರೀ ಪ್ರ : ಮಧೂಸ್ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಬೆಂಗಳೂರು ಇಸವಿ ೨೦೧೩ (೯)
೫.	ಲ–ಜೋ	**ಶ್ರೀ ಲಲಿತಾ ಸಹಸ್ರನಾಮ (ಇಂಗ್ಲಿಷ್)** **(ಮೂಲ–ಅನುವಾದ–ವಿವರಣೆ–ಅಕಾರಾದಿ)** ಅನು: ಎಲ್.ಎಂ. ಜೋಶಿ ಪ್ರ : ಡಿ.ಕೆ. ಪ್ರಿಂಟ್‌ವರ್ಲ್ಡ್ ಪ್ರೈವೇಟ್ ಲಿ. ನ್ಯೂ ಡೆಲ್ಲಿ ಇಸವಿ ೨೦೦೯

೬.	ಲ–ತ	**ಶ್ರೀ ಲಲಿತಾ ಸಹಸ್ರನಾಮ (ಇಂಗ್ಲಿಷ್)** (ನಾಮ ರೋಮನ್ ಲಿಪಿ–ಅನುವಾದ) ಅನು: ಸ್ವಾಮಿ ತಪಸ್ಯಾನಂದ ಪ್ರ : ಶ್ರೀ ರಾಮಕೃಷ್ಣಾಶ್ರಮ, ಮದ್ರಾಸ್ ಇಸವಿ ೧೯೯೦
೭.	ಲ–ಶಿ	**ಶ್ರೀ ಚಕ್ರ ಸಂಕೇತ (ಕನ್ನಡ)** ಲೇ: ಶಿವಲ ಸುಬ್ರಹ್ಮಣ್ಯಂ ಅನು: (ತೆಲುಗಿನಿಂದ ಕನ್ನಡಕ್ಕೆ) ಎಂ.ಎಲ್. ರಾಘವೇಂದ್ರರಾವ್ ಪ್ರ : ಠಾಗೂರ್ ಪಬ್ಲಿಷಿಂಗ್ ಹೌಸ್ ಹೈದ್ರಾಬಾದ್, ಇಸವಿ ೨೦೧೫
೮.	ಲ–ಪು	**ಶ್ರೀ ಲಲಿತಾ ಸಹಸ್ರ ಸಾಂಗತ್ಯ** (ಪದ್ಯಾನುವಾದ ಮತ್ತು ಟಿಪ್ಪಣಿಗಳು) ಅನು: ಬಿ. ಪುಟ್ಟಸ್ವಾಮಯ್ಯ ಪ್ರ : ಶಾರದಾ ಪ್ರಕಾಶನ, ಅರಳೇಪೇಟೆ, ಬೆಂಗಳೂರು ಇ : ೧೯೭೬
೯.	ಲ–ತಿ	**ಶ್ರೀ ಲಲಿತಾ ಸಹಸ್ರನಾಮ** (ಮೂಲ ಮತ್ತು ಅನುವಾದ) ಅನು: ತಿರುವಾಲಿ ವಳ್ಳಿಕಾಟ್ಟು ನಾರಾಯಣಮೂರ್ತಿ ಕನ್ನಡಕ್ಕೆ : ಶಂಸಐತಾಳ್ ಪ್ರ : ಅಮೃತಾನಂದಮಯಿ ಟ್ರಸ್ಟ್, ಕೇರಳ ಇ : ೧೯೯೮
೧೦.	ಲ–ಸೌ	**ಸೌದಾಮಿನೀ (ಕನ್ನಡ)** (ಲಲಿತಾ ಸಹಸ್ರನಾಮ ಟೀಕೆ) ಟೀ: ಸ್ವಯಂಪ್ರಕಾಶ ಅಭಿನವ ರಾಮಾನಂದ ಸರಸ್ವತೀಸ್ವಾಮಿ ಪ್ರ : ಸ್ವಯಂಪ್ರಾಶ ಪಬ್ಲಿಕೇಷನ್ಸ್ ಟ್ರಸ್ಟ್, ಗಿರಿನಗರ, ಬೆಂಗಳೂರು ಇ : ೨೦೧೨ (೬)
೧೧.	ಲ–ಬ	**ಶ್ರೀ ಲಲಿತಾ ಸಹಸ್ರನಾಮ ಸ್ತೋತ್ರಂ (ಕನ್ನಡ)** (ಭಾಸ್ಕರಾಚಾರ್ಯ ಟೀಕೆ ಮತ್ತು ಶಂಭುನಾಥ ಟೀಕೆ) ಅನು: ಬಟುಕಾಂತಶಾಸ್ತ್ರೀಖಿಸ್ತೇ ಪ್ರ : ಸಂಪೂರ್ಣ ಸಂಸ್ಕೃತ ವಿಶ್ವವಿದ್ಯಾಲಯ, ವಾರಾಣಸಿ ಇ : ೨೦೦೩

೧೨.	ಲ–ಸ	**ಶ್ರೀ ವಿದ್ಯಾ ಷೋಡಶಿಕಾ (ಭಾಗ ೧)** (ವಿಮರ್ಶಾ ಗ್ರಂಥ – ಕನ್ನಡ) ಲೇ: ರಾ. ಸತ್ಯನಾರಾಯಣ ಪ್ರ : ಶ್ರೀ ವಿದ್ಯಾ ಪ್ರತಿಷ್ಠಾನ ಮೈಸೂರು, ಇ : ೨೦೧೦
೧೩.	ಲ–ಗಂ	**ಲಲಿತಾ ತ್ರಿಶತೀ ಭಾಷ್ಯಂ** (ನಾಮಾವಳೀ–ಕನ್ನಡಾನುವಾದ ಸಹಿತ) ಅನು: ಎ.ಎನ್. ಗಂಗಾಧರಶಾಸ್ತ್ರೀ ಪ್ರ : ವಿದ್ಯಾಗಣಪತಿ ಪ್ರಕಾಶನ, ತ್ಯಾಗರಾಜನಗರ, ಬೆಂಗಳೂರು ಇ : ೨೦೦೦
೧೪.	ಲ–ಲ	**ಶ್ರೀ ಚಕ್ರ ನಿರೂಪಣಂ** (ಶ್ರೀ ಚಕ್ರದ ೯ ಭಾಗಗಳ ವಿವರಣೆ) ಲೇ: ಸಿ. ಲಕ್ಷ್ಮೀನಾರಾಯಣ ಪ್ರ : ರಾಜಲಕ್ಷ್ಮೀ ಪ್ರಕಾಶನ, ಗೀತಾ ಏಜೆನ್ಸೀಸ್ ಬೆಂಗಳೂರು ಇ : ೨೦೦೦
೧೫.	ಲ–ದೇ	**ಶ್ರೀ ಲಲಿತಾ ಸಹಸ್ರನಾಮ ಸ್ತೋತ್ರಮ್** (ಮೂಲ : ತಾತ್ಪರ್ಯ–ನಾಮಾವಳಿ) ಸ್ವಾಮಿ ತಪಸ್ಯಾನಂದರ ಇಂಗ್ಲಿಷ್ ಕೃತಿಯ ಅನುವಾದ ಅನು : ದೇವರಕೊಂಡ ಶೇಷಗಿರಿರಾವ್ ಪ್ರ : ರಾಮಕೃಷ್ಣಮಠ, ಹೈದ್ರಾಬಾದ್, ೨೦೧೫ (೫)
೧೬.	ಲ–ಭಾ	**ಶ್ರೀ ಸಹಸ್ರಿಕ (ಕನ್ನಡ)** (ಶ್ರೀ ಲಲಿತಾ ಸಹಸ್ರನಾಮ ವಿಶೇಷ ವ್ಯಾಖ್ಯಾನ) ಮೂಲ : ಡಾ. ಇಲಪಾವಲೂರಿ ಪಾಂಡುರಂಗರಾವ್ (ತೆಲುಗು) ಸಂ : ಭಾರ್ಗವ ನರಸಿಂಹ ಪ್ರ : ತಿರುಮಲ ತಿರುಪತಿ ಪ್ರತಿಷ್ಠಾನ, ಬೆಂಗಳೂರು, ೨೦೧೫.
೧೭.	ಲ–ರಾ	**ಲಲಿತಾ ಸಹಸ್ರನಾಮ ಸ್ತೋತ್ರಂ** ಲೇ : ಪುರಾಣ ಪಂಡ ರಾಧಾಕೃಷ್ಣಮೂರ್ತಿ ಪ್ರ : ಗೊಲ್ಲಪೂಡಿ ವೀರಸ್ವಾಮಿ ಸನ್ಸ್ ರಾಜಮಹೇಂದ್ರಿ, ೧೯೮೪.

೧೮.	ಲ–ವಿ	**ಶ್ರೀ ವಿದ್ಯಾತತ್ತ್ವ (ಕನ್ನಡ)** (ಶ್ರೀ ಲಲಿತಾ ಸಹಸ್ರನಾಮ ಭಾವಾನುವಾದ) ಸಂ : ವಿ.ಎನ್. ಗಂಗಾಧರಶಾಸ್ತ್ರಿ ಪ್ರ : ಶ್ರೀ ವಿದ್ಯಾಗಣಪತಿ ಪ್ರಕಾಶನ, ಬೆಂಗಳೂರು, ೧೯೮೬.
೧೯.	ಲ–ಶಾ	**ಲಲಿತಾ ಸಹಸ್ರನಾಮ** (ಮೂಲ ಮತ್ತು ಇಂಗ್ಲಿಷ್ ವಿವರಣೆ) ಲೇ : ಆರ್. ಅನಂತಕೃಷ್ಣ ಶಾಸ್ತ್ರೀ ಪ್ರ : ಲೇಖಕರು, ೧೯೯೬.
೨೦.	ಲ–ಯೋ	**ಶ್ರೀ ಲಲಿತಾನಾಮ ಸ್ತೋತ್ರ** (ಮೂಲ ಮತ್ತು ಕನ್ನಡಾನುವಾದ) ಲೇ : ಸ್ವಾಮಿ ವಿಮಲಾನಂದ (ಇಂಗ್ಲಿಷ್) ಅನು : ಪಿ. ಗಣಪತಿ (ಕನ್ನಡ) ಪ್ರ : ಯಡತೊರೆ ಶ್ರೀ ಯೋಗಾನಂದ ಮಠ, ೨೦೦೦.

ಸೌಂದರ್ಯಲಹರೀ ಸ್ತೋತ್ರದೀಪಿಕೆ

(ಪೂರ್ವಭಾಗ : ಶ್ಲೋಕ – ೧–೪೧)

ಸೌಂದರ್ಯಲಹರೀ ಸ್ತೋತ್ರದೀಪಿಕೆ

ಶ್ರೀರಸ್ತು

ಶ್ರೀ ಚಾಮುಂಡೇಶ್ವರೀ ಪ್ರಸಾದ ಸಿದ್ಧಿರಸ್ತು
ಶ್ರೀ ಪರದೇವತಾ ಪ್ರಸಾದ ಸಿದ್ಧಿರಸ್ತು
ಶ್ರೀ ಲಲಿತಾಂಬಾಯೈ ನಮಃ

ಶ್ಲೋಕ ೧

ದೇವಿಯ ಮಹಿಮೆ

ಶಿವಶ್ಶಕ್ತ್ಯಾ[೧] ಯುಕ್ತೋ ಯದಿ ಭವತಿ ಶಕ್ತಃ ಪ್ರಭವಿತುಂ
ನ ಚೇದೇವಂ ದೇವೋ ನ ಖಲು ಕುಶಲಸ್ಸ್ಪಂದಿತು[೨]ಮಪಿ
ಅತಸ್ತ್ವಾಮಾರಾಧ್ಯಾಂ ಹರಿಹರವಿರಿಂಚಾ[೩]ದಿಭಿರಪಿ
ಪ್ರಣಂತುಂ ಸ್ತೋತುಂ ವಾ ಕಥಮಕೃತಪುಣ್ಯಃ ಪ್ರಭವತಿ ॥ ೧ ॥

ಪಾಠಾಂತರ

೧. ಶಿವಃ ಶಕ್ತ್ಯಾ (K) ೨. ಕುಶಲಃ ಸ್ಪಂದಿತುಮಪಿ (K) ೩. ವಿರಂಚ್ಯಾ (ಸು)

ಪದವಿಭಾಗ

(ಶಿವಶ್ಶಕ್ತ್ಯಾ) = ಶಿವಃ + ಶಕ್ತ್ಯಾ, (ಯುಕ್ತೋ)=ಯುಕ್ತಃ, ಯದಿ, ಭವತಿ, ಶಕ್ತಃ, ಪ್ರಭವಿತುಂ, ನ, (ಚೇದೇವಂ)=ಚೇತ್+ಏವಂ, ದೇವಃ, ನ, ಖಲು ಕುಶಲಃ, (ಸ್ಪಂದಿತುಮಪಿ) ಸ್ಪಂದಿತುಂ+ಅಪಿ, (ಅತಸ್ತ್ವಾಮಾರಾಧ್ಯಾಂ)=ಅತಃ+ತ್ವಾಂ+ಆರಾಧ್ಯಾಂ (ಹರಿಹರವಿರಿಂಚಾದಿಭಿರಪಿ) = ಹರಿಹರ ವಿರಿಂಚಿ+ಆದಿಭಿಃ+ಅಪಿ, ಪ್ರಣಂತುಂ, ಸ್ತೋತುಂ, ವಾ, (ಕಥಮಕೃತಪುಣ್ಯಃ)=ಕಥಂ+ಅಕೃತಪುಣ್ಯಃ+ಪ್ರಭವತಿ.

ಅನ್ವಯಾರ್ಥ

(ಹೇ ಭಗವತಿ)	(ಪೂಜ್ಯಳಾದ ಎಲೈ ದೇವಿಯೇ)
ಶಿವಃ	(ದೇವರು) ಈಶ್ವರನು
ಶಕ್ತ್ಯಾ ಯುಕ್ತಃ	ನಿನ್ನ ಶಕ್ತಿಯಿಂದ ಯುಕ್ತನಾದವನು
ಭವತಿ ಯದಿ	ಆದವನೆ ಆದರೆ
(ತದಾ)	(ಆವಾಗ)
ಪ್ರಭವಿತುಂ ಶಕ್ತಃ	ತನ್ನ ಕಾರ್ಯವನ್ನು ನೆರವೇರಿಸಿಕೊಳ್ಳುವುದಕ್ಕೆ ಸಮರ್ಥನಾಗುವನು
ಏವಂ	ಈ ರೀತಿ ಶಿವಶಕ್ತಿಯುಕ್ತನು
ನ ಚೇತ್	ಆಗದೇ ಇದ್ದ ಪಕ್ಷದಲ್ಲಿ
ದೇವೋ	ಸ್ವಾಮಿಯು
ಸ್ಪಂದಿತುಮಪಿ	ಅಲ್ಲಾಡುವುದಕ್ಕೂ ಕೂಡ
ಕುಶಲಃ ನ ಖಲು	ಸಮರ್ಥನು ಆಗುವುದಿಲ್ಲ ಅಲ್ಲವೇ !
ಅತಃ	ಈ ಕಾರಣದಿಂದ
ಹರಿಹರ ವಿರಿಂಚಾದಿಭಿರಪಿ	(ಹರಿಹರ ವಿರಿಂಚಿ+ಆದಿಭಿಃ+ಅಪಿ)= ವಿಷ್ಣು, ಈಶ್ವರ, ಬ್ರಹ್ಮ-ಮೊದಲಾದ ದೇವತೆಗಳಿಂದಲೂ
ಆರಾಧ್ಯಾಂ ತ್ವಾಂ	ಪೂಜಿಸಲ್ಪಟ್ಟ ನಿನ್ನನ್ನು
ಅಕೃತಪುಣ್ಯಃ	ಪುಣ್ಯ ಮಾಡದೆ ಇರುವವನು (ಪಾಪಿಯು)
ಪ್ರಣಂತುಂ	ನಮಸ್ಕಾರ ಮಾಡುವುದಕ್ಕಾಗಲೀ
ಸ್ತೋತುಂ ವಾ	ಸ್ತೋತ್ರ ಮಾಡುವುದಕ್ಕಾಗಲೀ
ಕಥಂ ಪ್ರಭವತಿ?	ಹೇಗೆ ತಾನೆ ಸಮರ್ಥನಾಗುತ್ತಾನೆ?

ತಾತ್ಪರ್ಯ

ಪೂಜ್ಯಳಾದ ಎಲೈ ದೇವಿಯೇ ದೇವನಾದ ಶಿವನು ನಿನ್ನ ಶಕ್ತಿಯಿಂದ ಕೂಡಿದವನಾದರೆ ಆಗ ಮಾತ್ರ ತನ್ನ ಕಾರ್ಯವನ್ನು ನೆರವೇರಿಸಿಕೊಳ್ಳಲು ಸಮರ್ಥನಾಗುತ್ತಾನೆ. ಆದ್ದರಿಂದ ಶಿವನು ಶಕ್ತಿಯುಕ್ತನು ಆಗದ ಪಕ್ಷದಲ್ಲಿ ಯಾವ ರೀತಿಯಲ್ಲಿ ಚಲಿಸಲೂ ಸಮರ್ಥನಾಗಲಾರನು. ಆದಕಾರಣ ವಿಷ್ಣು ಈಶ್ವರ, ಬ್ರಹ್ಮ ಮೊದಲಾದವರಿಂದಲೂ ಪೂಜಿಸಲ್ಪಡುವ ನಿನ್ನನ್ನು (ಪೂರ್ವ ಜನ್ಮಗಳಲ್ಲಿ) ಪುಣ್ಯ ಮಾಡದೆ ಇರುವವನು ಮತ್ತು ಪಾಪಿಯಾದವನು ನಮಸ್ಕಾರ ಮಾಡುವುದಕ್ಕಾಗಲೀ, ಸ್ತೋತ್ರ ಮಾಡುವುದಕ್ಕಾಗಲೀ ಹೇಗೆ ತಾನೇ ಸಮರ್ಥನಾಗುತ್ತಾನೆ? (ಸಮರ್ಥನಾಗುವುದಿಲ್ಲ)

ಪದ್ಯಾನುವಾದ

ಹೇ ದೇವಿ! ದೇವಾಧಿದೇವನೆನಿಸಿದ ಶಿವನು
ಶಕ್ತಿಯುಕ್ತನುಯೆನಿಸಿದಂದು ಶಕ್ತನು ತಾನು
ಸೃಷ್ಟಿಕಾರ್ಯವನೆಸಗಲಂತಲ್ಲದಿರಲವನು ಕದಲಲೂ ಆರನಲ್ತೆ;
ಇಂತಿರಲು ಹರಿಹರ ವಿರಿಂಚಾದ್ಯರಿಂದ ಸಂ-
ಪೂಜ್ಯೆಯಾಗಿರುವ ನಿನಗೆಂತು ಪ್ರಣಾಮವನು
ಸಂಸ್ತೋತ್ರಗಳನರ್ಪಿಸಲ್ಕಾರ್ಪನೆನಿಸುವನು ಕೃತಪುಣ್ಯನಲ್ಲದವನು ॥ ೧ ॥

ಟಿಪ್ಪಣಿಗಳು

೧. ಶಿವಶಕ್ತಿಯರು ಪತಿಪತ್ನಿಯರು ಆಗಿದ್ದರೂ ಪತಿಯಾದ ಶಿವನು ಪತ್ನಿಯಾದ ಶಕ್ತಿಯೊಡನೆ ಜೊತೆಗೂಡಿದರೆ ಮಾತ್ರ ಪ್ರಪಂಚರೂಪವಾದ ಸಂತಾನವನ್ನು (ಲೋಕ ಸೃಷ್ಟಿಯನ್ನು) ನಿರ್ಮಾಣಮಾಡಲು ಶಕ್ತನಾಗುತ್ತಾನೆ.
(ಅ-ಪುಟ ೭)

೨. ಶ್ರೀಚಕ್ರದಿಂದಲೇ ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳಾಗಿರುತ್ತವೆ ಎಂದು ಹೇಳಲಾಗಿದೆ. ಏಕೆಂದರೆ ಒಂಭತ್ತು ತ್ರಿಕೋಣಗಳುಳ್ಳ ಶ್ರೀಚಕ್ರದಲ್ಲಿ ನಾಲ್ಕು ತ್ರಿಕೋಣ ರೂಪವಾದ ಅರ್ಧಚಕ್ರವು ಶಿವಶಬ್ದದಿಂದ ಸಂಕೇತಿಸಲಾಗುತ್ತದೆ. ಶಕ್ತಿಶಬ್ದದಿಂದ ಉಳಿದ ಐದು ತ್ರಿಕೋಣರೂಪವಾದ ಅರ್ಧಚಕ್ರವು ಸಂಕೇತಿಸಲಾಗಿದೆ ಎಂಧರೆ ಈ ಎರಡು ಅರ್ಧಚಕ್ರಗಳು ಸೇರಿ ಶ್ರೀಚಕ್ರವಾಗಿದೆ ಅರ್ಥಾತ್ ಶಿವಶಕ್ತಿ ಸ್ವರೂಪವಾದ ಶ್ರೀಚಕ್ರದಿಂದಲೇ ಜಗತ್ತಿನ ಉತ್ಪತ್ತಿ ಸ್ಥಿತಿ ಲಯಗಳಾಗಿಹುದು. ಆದ್ದರಿಂದ ಶ್ರೀಚಕ್ರವು ಶಿವಶಿವೆಯರ ಶರೀರ ರೂಪವಾಗಿದೆ ಎಂದು ತಿಳಿಯಬೇಕು.
(ಶ್ರೀ-ಪುಟ ೧೦)

೩. ಶಿವ ಶಬ್ದವು ಸರ್ವವಿಧವಾದ ಮಂಗಳಗಳಿಂದ ಕೂಡಿದವನು ಅಂದರೆ ಸದಾಶಿವತತ್ತ್ವವು ಕಾಂತಿ ಎಂಬ ಅರ್ಥವನ್ನು ತಿಳಿಸುವ ಏಕಧಾತುವಿನಿಂದ (ಶಿವಶಬ್ದವು) ನಿಷ್ಪನ್ನವಾಗಿದೆ.
(ಶೇ-ಪುಟ ೭)

೪. ಅ=ಬ್ರಹ್ಮವು, ಹ=ಶಕ್ತಿ–ಇವೆರಡರ ಸಮಾಹಾರದಿಂದ 'ಅಹಂ' ಪದ ಸಿದ್ಧವಾಗುತ್ತದೆ. 'ನಾನು' ಎಂದರೆ ಜೀವನು ಅರ್ಥಾತ್ ಶಿವಶಕ್ತಿಯುಕ್ತನು. ವಾಕ್ ಶಕ್ತಿಯಾಗಿ, ಅರ್ಥ ಬ್ರಹ್ಮವಾಗಿರುತ್ತದೆ.

(ಶೇ–ಪುಟ ૩)

೫. ೧೬ ಸ್ವರಗಳು ಶಕ್ತಿಸ್ವರೂಪದವುಗಳಾಗಿದ್ದರೆ, ૩೬ ವ್ಯಂಜನಗಳು ಶಿವಸ್ವರೂಪದವಾಗಿವೆ. ಸ್ವರಗಳು ಸ್ವತಂತ್ರವಾಗಿವೆ (ಇತರ ವ್ಯಂಜನಗಳ ಸಹಾಯವಿಲ್ಲದೆ ಉಚ್ಚರಿಸಬಹುದು). ವ್ಯಂಜನಗಳು ಸ್ವರಗಳ ಆಧಾರದಿಂದ ಬಳಕೆ ಆಗುತ್ತದೆ ಎಂದರೆ ಶಿವನು ಶಕ್ತಿ ಆಧಾರ ಹೊಂದಿದ್ದಾನೆ. 'ಶಿವ' ಶಬ್ದದಲ್ಲಿ ಶ್+ಇ, ವ್+ಅ ಎಂದೂ ವ್ಯಂಜನ ಸ್ವರಗಳಿವೆ ಎಂದರೆ ಶ್, ವ್ ವ್ಯಂಜನಗಳು ಶಕ್ತಿ ಸ್ವರೂಪದ ಸ್ವರಗಳ ಸಹಾಯದಿಂದ ಶಿವ ಶಬ್ದ ಸಿದ್ಧವಾಗಿದೆ.

(ಶೇ–ಪುಟ ೭)

೬. "ಸೌಂದರ್ಯ ಲಹರಿಯ ಒಳಗಡೆಯೇ ಎರಡು ಹೆಸರುಗಳಿವೆ. ನೂರು ಹಾಡುಗಳಲ್ಲಿ ಮೊದಲ ನಲವತ್ತೊಂದು ಹಾಡುಗಳಿಗೆ 'ಆನಂದ ಲಹರೀ' ಎನ್ನುವರು. ಅನಂತರದ ಭಾಗವೇ 'ಸೌಂದರ್ಯಲಹರೀ'. ಆನಂದಲಹರಿಯಲ್ಲಿ ತಂತ್ರದ ತಾತ್ತ್ವಿಕ ಚಿಂತನೆಯ ಹೊಳಹುಗಳಿವೆ. ಇದು ಬಯಲಿದ್ದಂತೆ. ಸೌಂದರ್ಯಲಹರಿಯಲ್ಲಿ ಶ್ರೀ ಸುಂದರಿಯ ಮುಡಿ–ಅಡಿಯ ಬಣ್ಣನೆಯ ನಿರ್ಭರತೆ ಇದೆ. ಇದು 'ಬಯಲಿನಲ್ಲಿಯೇ ಆಕಾರಗೊಂಡ ಆಲಯವಿದ್ದಂತೆ.' ಈ ಎರಡು ಲಹರಿಗಳೊಳಗೆ ಬಯಲು–ಆಲಯಗಳ ನಡುವಣ ಸಂಬಂಧವೇ 'ಮನೆ' ಮಾಡಿದೆ. ಶಿವಶಕ್ತಿಗಳೆಂಬ ಎರಡು ತತ್ತ್ವಗಳ ಪರಸ್ಪರತೆ ಮತ್ತು ಈ ಪರಸ್ಪರತೆ ಯಿಂದಲೇ ಸೃಷ್ಟಿ ಎಂದು ಹೇಳುವ ಸೌಂದರ್ಯಲಹರಿ, ಹೀಗೆ ತನ್ನೊಳಗೇ ಎರಡು ಕವಲುಗಳಾಗಿ ಹರಿಯುತ್ತಿರುವುದು ಅರ್ಥಪೂರ್ಣವೇ ಆಗಿದೆ.

(ಶೇ–ಪುಟ ೨೬)

೭. **"ಪ್ರಣಂತುಂ ಸ್ತೋತುಂ ವಾ ಕಥಂ ಅಕೃತಪುಣ್ಯಃ ಪ್ರಭವತಿ"**


(ಯಾವನವನು ಪೊಡಮಡುವನವ್ವ ಹೊಗಳುವನು ಹಾಡಿ ಬರಿದೆ! ಎಂದಿದ್ದಾರೆ ಬೇಂದ್ರೆ.)

ನೀನು ಸ್ತೋತ್ರಪ್ರಿಯಾಂ 'ಆಗಿರುವುದರಿಂದ ನಮ್ಮಲ್ಲಿ ಹಾಡು ಹುಟ್ಟುವುದು. ಹಾಡೆಂದರೆ ಸ್ತೋತ್ರ ಎನ್ನುವಾಗ "ಸೃಷ್ಟಿಯ ಮುಂದೆ ಸೃಷ್ಟಿಯೇ ಆಗಿರುವ ಶಿವಶಕ್ತಿಯರ ಮುಂದೆ ನಮ್ಮನ್ನು ತೋಡಿಕೊಳ್ಳುವುದು"

೮. ಲಲಿತಾ ಸಹಸ್ರನಾಮದಲ್ಲಿ ಸ್ತೋತ್ರಪ್ರಿಯಾ (ನಾಮ ೬೨೭, ಶ್ಲೋಕ ೧೭೨) ಎಂಬ ಮಾತಿದೆ. ಲಲಿತೆ ಸ್ತೋತ್ರ ಪ್ರಿಯಳಾದ್ದರಿಂದ ನಮ್ಮಲ್ಲಿ ಹಾಡು ಹುಟ್ಟುವುದು ಆ ಹಾಡು ನಮ್ಮಲ್ಲಿ ಹುಟ್ಟುವುದಕ್ಕೆ ಪೂರ್ವಜನ್ಮದ ಸುಕೃತವಿರಬೇಕು ಎಂದರೆ ದೇವಿಯ ಅನುಗ್ರಹ ನಮ್ಮಲ್ಲಿ ಇರಬೇಕು ಆಗ ನೆಲದಲ್ಲಿ ಅಡಗಿದ್ದ ಜಲ ಮೇಲೆದ್ದು ಬಂದಂತೆ ದೇವಿಸ್ತೋತ್ರ ನಮ್ಮಲ್ಲಿ ಮೂಡುತ್ತದೆ. ಇದರರ್ಥ ದೇವಿಯ ಅನುಗ್ರಹವಿಲ್ಲದೆ ನಾವು ಸ್ತುತಿ ಮಾಡಲು ಶಕ್ಯರಲ್ಲ.

(ತೋ. ಪುಟ ೩೨–೩೩)

ಯಂತ್ರಾರಾಧನೆ (ಶ್ಲೋಕ–೧)



ಯಂತ್ರ ರಚನೆ : ಅಕ್ಕಿ ಹಿಟ್ಟಿನಿಂದ ಶುದ್ಧವಾದ ಸ್ಥಳದಲ್ಲಿ ಈ ಬೀಜಾಕ್ಷರಯುಕ್ತ ಯಂತ್ರವನ್ನು ಬರೆದು ಅದರಲ್ಲಿ ತುಪ್ಪದ ದೀಪವನ್ನು ಇರಿಸಬೇಕು. ಅಥವಾ ಬಂಗಾರದ ತಗಡಿನ ಮೇಲೆ ಈ ಯಂತ್ರವನ್ನು ಬರೆಯಬೇಕು.

ಪೂಜೆ : ಕೆಂಪು ದಾಸವಾಳ ಅಥವಾ ಶ್ರೇಷ್ಠವಾದ ಕೆಂಪು ಹೂಗಳಿಂದ ಪೂಜಿಸಬೇಕು.

ನೈವೇದ್ಯ : ತ್ರಿಮಧುರ ನೈವೇದ್ಯ ಮಾಡಬೇಕು. (ತ್ರಿಮಧುರ ಎಂದರೆ, ಅನ್ನಕ್ಕೆ ಕೊಬ್ಬರಿತುರಿ, ಬೆಲ್ಲ, ಬಾಳೆಹಣ್ಣು ಇವುಗಳನ್ನು ಕಲಸಿ ತುಪ್ಪ ಸೇರಿಸಿದ ಖಾದ್ಯ.)

ಜಪ : ಮಣೆ ಅಥವಾ ಚಾಪೆಯ ಮೇಲೆ ಪೂರ್ವಾಭಿಮುಖವಾಗಿ ಕುಳಿತುಕೊಂಡು ಈ ಶ್ಲೋಕವನ್ನು ೧೦೦೦ ಸಲ ಪ್ರತಿನಿತ್ಯವೂ ೧೨ ದಿನಗಳ ಕಾಲ ಜಪಿಸಬೇಕು.

ಫಲ : **ಸಕಲ ಕಾರ್ಯ ಜಯ.**

ಶ್ಲೋಕ ೨

ದೇವಿಯ ಪಾದಧೂಳಿಯ ಪ್ರಭಾವ

ತನೀಯಾಂಸಂ ಪಾಂಸುಂ ತವ ಚರಣಪಂಕೇರುಹಭವಂ
ವಿರಿಂಚಿಃ ಸಂಚಿನ್ವನ್ ವಿರಚಯತಿ [1]ಲೋಕಾನವಿಕಲಮ್ ।
ವಹತ್ಯೇನಂ ಶೌರಿಃ ಕಥಮಪಿ ಸಹಸ್ರೇಣ ಶಿರಸಾಂ
[2]ಹರಃ ಸಂಕ್ಷುದ್ಯೈನಂ ಭಜತಿ [3]ಭಸಿತೋದ್ಧೂಲನ ವಿಧಿಮ್ ॥ ೨ ॥

ಪಾಠಾಂತರ

೧. ಲೋಕಾನವಿಕಲಾನ್ (ಸು) ೨. ಹರಃ ಸಂಕ್ಷುದ್ಯೈನಂ (ಜ) (ಗ)
೩. ಭಸಿತೋದ್ಧೂಳನ ವಿಧಿ (ತು) (ಕ), (ಭಸಿತಂದ್ಧೂಳನವಿಧಿಂ) (ಸು)

ಪದವಿಭಾಗ

ತನೀಯಾಂಸಂ, ಪಾಂಸುಂ, (ತವಚರಣಪಂಕೇರುಹ ಭವಂ ವಿರಂಚಿಃ, ಸಂಚಿನ್ವನ್, ವಿರಚಯತಿ, (ಲೋಕಾನವಿಕಲಮ್) ಲೋಕಾನ್ + ಅವಿಕಲಮ್, (ವಹತ್ಯೇನಂ) ವಹತಿ+ಏನಂ; ಶೌರಿಃ, ಹರಃ, (ಸಂಕ್ಷುದ್ಯೈನಂ) = ಸಂಕ್ಷುದ್ಯ + ಏನಂ, ಭಜತಿ (ಭಸಿತೋದ್ಧೂಲನವಿಧಿಮ್) ಭಸಿತ+ಉದ್ಧೂಲನ+ವಿಧಿಮ್.

ಅನ್ವಯಾರ್ಥ

(ಹೇ ಭಗವತಿ)	(ಎಲೈ ದೇವಿಯೇ)
ವಿರಂಚಿಃ	ಬ್ರಹ್ಮನು
ತವ ಚರಣಪಂಕೇರುಹಭವಂ	ನಿನ್ನ-ಕಮಲದಂತಿರುವ ಪಾದದಲ್ಲಿ-ಸಂಬಂಧಿಸಿರುವ
ತನೀಯಾಂಸಂ ಪಾಂಸುಂ	ಬಹಳ ಸೂಕ್ಷ್ಮವಾದ ಧೂಳನ್ನು
ಸಂಚಿನ್ವನ್	ಸಂಪಾದಿಸಿಕೊಂಡವನಾಗಿ (ಬಂಡವಾಳವನ್ನಾಗಿಟ್ಟುಕೊಂಡು)
ಲೋಕಾನ್	ಹದಿನಾಲ್ಕು ಲೋಕಗಳನ್ನು

ಅವಿಕಲಂ ವಿರಚಯತಿ	ಸಂಪೂರ್ಣವಾಗಿ ಸೃಷ್ಟಿಸುತ್ತಾನೆ
ಶೌರಿಃ	(ಶೂರನ ಮಗನು, ಬಲರಾಮ ರೂಪನಾಗಿರುವ ಆದಿಶೇಷನು)
ಏನಂ	ಇದನ್ನು ಈ ಪ್ರಪಂಚರೂಪವಾಗಿರುವ ಪದದ ಧೂಳನ್ನು
ಸಹಸ್ರೇಣ ಶಿರಸಾಂ	ಸಾವಿರ ತಲೆಗಳಿಂದಲೂ
ಕಥಮಪಿ ವಹತಿ	ಕಷ್ಟದಿಂದ ಧರಿಸಿರುತ್ತಾನೆ
(ಹೇ ಭಗವತಿ)	ಎಲೈ ದೇವಿಯೇ (ಅದೇ ನಿನ್ನ ಪಾದಧೂಳನ್ನು ಬಂಡವಾಳವನ್ನಾಗಿಟ್ಟುಕೊಂಡು)
ಏನಂ	ಈ ಪ್ರಪಂಚವನ್ನು
ಸಂಕ್ಷುದ್ಯ ಹರಃ	ಚೆನ್ನಾಗಿ ಚೂರ್ಣಮಾಡಿ ಅದನ್ನು ಶಿವನು
ಭಸಿತೋದ್ಧೂಲನ ವಿಧಿಂ	ಬೂದಿಯ ಲೇಪನಕ್ರಮವನ್ನು
ಭಜತಿ	ಹೊಂದುತ್ತಾನೆ. (ಬೂದಿ ಮಾಡಿ ಮೈಗೆಲ್ಲಾ ಬಳಿದುಕೊಂಡಿರುತ್ತಾನೆ)

ತಾತ್ಪರ್ಯ

ಹೇ ಜಗನ್ಮಾತೆ ನಿನ್ನ ಪಾದಧೂಳಿನ ಮಹಿಮೆಯನ್ನು ಏನೆಂದು ವರ್ಣಿಸಲಿ। ನಿನ್ನ ಕಮಲದಂತಿರುವ ಪಾದಗಳಲ್ಲಿರುವ ಬಹಳ ಸೂಕ್ಷ್ಮವಾದ ಧೂಳನ್ನು ಸಂಪಾದಿಸಿಕೊಂಡು ಬ್ರಹ್ಮನು ಹದಿನಾಲ್ಕು ಲೋಕಗಳನ್ನು ಸಂಪೂರ್ಣವಾಗಿ ಸೃಷ್ಟಿಸುತ್ತಾನೆ. ಬಲರಾಮ ರೂಪನಾಗಿರುವ (ಶೌರಿಯು) ಆದಿಶೇಷನಾಗಿ ಈ ಪ್ರಪಂಚರೂಪವಾಗಿರುವ ಪಾದದ ಧೂಳನ್ನು ಸಾವಿರ ತಲೆಗಳಿಂದ ಕಷ್ಟದಿಂದ ಧರಿಸಿರುತ್ತಾನೆ. ಶಿವನು ನಿನ್ನ ಪಾದಧೂಳನ್ನೇ ಬಂಡವಾಳವನ್ನಾಗಿರಿಸಿಕೊಂಡು ಈ ಪ್ರಪಂಚವನ್ನು ನಾಶಪಡಿಸಿ (ಧೂಳೀಕರಣ ಮಾಡಿ) ಭಸ್ಮವನ್ನಾಗಿ ಮಾಡಿಕೊಂಡು ತನ್ನ ಶರೀರದಲ್ಲಿ ಧರಿಸುತ್ತಾನೆ. ಇದರರ್ಥ ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಶಿವರು, ದೇವಿಯ ಪಾದಧೂಳಿಯನ್ನೇ ಆಧರಿಸಿ ಸೃಷ್ಟಿ, ಸ್ಥಿತಿ, ಲಯ ಕಾರ್ಯಗಳನ್ನು ನಿರ್ವಹಿಸುತ್ತಾರೆ.

ಪದ್ಯಾನುವಾದ

ಹೇ ದೇವಿ! ಅಡಿದಾವರೆಯ ಸೂಕ್ಷ್ಮಾತಿ
ಸೂಕ್ಷ್ಮಧೂಳಿಯ ಕಣವ ಪಡೆದೊಟ್ಟುಗೂಡಿಸುತ
ಈರೇಳು ಲೋಕಗಳನಾ ವಿರಿಂಚಿಯು ವಿರಚಿಸುವನಲ್ತೆ ಸೊಗಸುವಂತೆ;

ಈ ಲೋಕಗಳನ್ನೆಲ್ಲ ಬಹಳ ಪ್ರಯಾಸದಿಂ-
ದಾ ವಿಷ್ಣು ಧರಿಸಿಹನು ಶಿರಸಹಸ್ರಗಳಿಂದ
ಲೋಕಗಳ ಪುಡಿಗುಟ್ಟಿ ಪುಡಿಯ ಹರ ಬಳಿದುಕೊಳುವನು ಭಸ್ಮಲೇಪನದೊಲು
॥ ೨ ॥

ಟಿಪ್ಪಣಿಗಳು

೧. ವಹತ್ಯೇನಂ ಶೌರಿಃ

"ಶೂರನ ಅಂದರೆ ಯದುವಿನ ಸಂತಾನವಾದ ಬಲರಾಮನೇ ಶೌರಿಯು. ಆದ್ದರಿಂದ ಆದಿಶೇಷನೆಂದು ಗ್ರಹಿಸಬೇಕು. ಹಿಂಸೆ ಮಾಡುವವನು ಅಥವಾ ಕಚ್ಚುವವನು (ಶೃಣಾತಿ). ಆದ್ದರಿಂದ ಶೌರಿಯೆಂದರೆ ಸರ್ಪರಾಜನಾದ ಆದಿಶೇಷನು ಅರ್ಥಾತ್ ವಿಷ್ಣುವು. ಚತುಶ್ಶ್ರುತಿ ಗ್ರಂಥದಲ್ಲಿ ಹೀಗೆ ಹೇಳಲಾಗಿದೆ: ವಿಷ್ಣುವು ಶಿಂಶುಮಾರ ರೂಪದಿಂದ ಕೆಳಗಿರುವ ಸಪ್ತಲೋಕಗಳನ್ನು ಧರಿಸಿದ್ದಾನೆ ಮತ್ತು ಆದಿಶೇಷನ ರೂಪದಿಂದ ಮೇಲಿನ ಸಪ್ತಲೋಕಗಳನ್ನು ಧರಿಸಿದ್ದಾನೆ. ಆದ್ದರಿಂದ ಶೇಷ ಎಂದರೆ ವಿಷ್ಣುವೇ ಆಗಿದ್ದಾನೆ."

(ಶೇ–ಪುಟ ೬)

೨. ಲೋಕಾನ್ ಅವಿಕಲಂ ವಿರಚಯತಿ (೧೪ ಲೋಕಗಳನ್ನು ಪರಿಪೂರ್ಣವಾಗಿ ಸೃಷ್ಟಿಸುತ್ತಾನೆ.) ಲೋಕಾನ್ ಎಂದರೆ ೧೪ ಲೋಕಗಳು: **ಮೇಲಿನ ೭ ಲೋಕಗಳು:** ೧. ಭೂಲೋಕ, ೨. ಭುವರ್ಲೋಕ, ೩. ಸುವರ್ಲೋಕ, ೪. ಮಹರ್ಲೋಕ, ೫. ಜನೋಲೋಕ, ೬. ತಪೋಲೋಕ, ೭. ಸತ್ಯಲೋಕ.

ಕೆಳಗಿನ ೭ ಲೋಕಗಳು: ೧. ಅತಲ, ೨. ವಿತಲ, ೩. ಸುತಲ, ೪. ತಲಾತಲ, ೫. ರಸಾತಲ, ೬. ಮಹಾತಲ, ೭. ಪಾತಾಲ.

ಬ್ರಹ್ಮನು ಶ್ರೀದೇವಿಯ ಪಾದಧೂಳಿನ ಪ್ರಭಾವದಿಂದ ಈ ೧೪ ಲೋಕಗಳನ್ನು ಸೃಷ್ಟಿಸುತ್ತಾನೆ. ಲಲಿತಾ ಸಹಸ್ರನಾಮದಲ್ಲಿ ಇದೇ ಭಾವವನ್ನು "ಸೃಷ್ಟಿಕರ್ತ್ರೀ ಬ್ರಹ್ಮರೂಪಾ" ಎಂಬ ನಾಮದಲ್ಲಿ ಹೇಳಲಾಗಿದೆ.

(ಪೋ–ಪುಟ ೧೦)

೩. ಹರಃ ಸಂಕ್ಷುದ್ಯೈನಂ ಭಜತಿ ಭಸಿತೋದ್ಧೂಲನವಿಧಿಂ

(ದೇವಿಯ ಪಾದಧೂಳಿಯನ್ನು ಬಂಡವಾಳವಾಗಿಟ್ಟುಕೊಂಡು ಈ ಜಗತ್ತನ್ನು ಹರನು ನಾಶ ಮಾಡುತ್ತಾನೆ)

ಈ ಅಭಿಪ್ರಾಯವನ್ನೇ ಲಲಿತಾ ಸಹಸ್ರನಾಮದಲ್ಲಿ (೨೬೮, ೨೬೯) 'ಸಂಹಾರಿಣೀ, ರುದ್ರರೂಪಾ' ಎಂದು ಹೇಳಲಾಗಿದೆ. ಲೋಕ ಲಯಕಾರ್ಯವನ್ನು ದೇವಿಯ ಪಾದರೇಣುವಿನಿಂದ ನಿರ್ವಹಿಸುತ್ತಿದ್ದೇನೆ ಎಂಬುದರ ಸಂಕೇತವಾಗಿ ಹರನು ಭಸ್ಮಧಾರಿ ಆಗಿದ್ದಾನೆ.

(ಪೋ-ಪುಟ ೧೧)


೪. **ತವ ಚರಣಪಂಕೇರುಹಭವಂ ತನೀಯಾಂಸಂ ಪಾಂಸುಂ ಸಂಚಿನ್ವನ್**

(ತಾಯೇ, ನಿನ್ನ ಪಾದಕಮಲದ ಬಹುಸೂಕ್ಷ್ಮ ಧೂಳನ್ನು ಪಡೆದುಕೊಂಡು ೧೪ ಲೋಕಗಳನ್ನು ಸೃಷ್ಟಿಸುತ್ತಾನೆ)

"ಬ್ರಹ್ಮನು ತಾಯಿಯಾದ ಶಕ್ತಿಯ ಪಾದಧೂಳಿಯಲ್ಲಿರುವ ಸೃಷ್ಟಿಶೀಲ ಕಂಪನಗಳನ್ನು ತನ್ನ ಅಂಗೈಗಳಲ್ಲಿ ಅನುಭವಿಸುತ್ತಿರುವವನಂತೆ. ಹಾಗೆ ಸೃಷ್ಟಿಯಾಯಿತಂತೆ. ಸೌಂದರ್ಯಲಹರಿಗೆ ತಾತ್ಪರ್ಯದೀಪಿನೀ ಎಂಬೊಂದು ವ್ಯಾಖ್ಯಾನವಿದೆ. ಹಾಡಿನಲ್ಲಿರುವ ಸಂಚಿನ್ವನ್ ಎಂಬ ಪದಕ್ಕೆ ಉಳಿದ ವ್ಯಾಖ್ಯಾನಕಾರರು" ಒಟ್ಟುಗೂಡಿಸಿ ಎನ್ನುವ ಅರ್ಥವನ್ನು ಹೇಳಿದರೆ ತಾತ್ಪರ್ಯದೀಪಿನೀಕಾರ "ಸಂಚಿನ್ವನ್ ಮನೋರೂಢಂ ಕುರ್ವನ್" ಎಂದಿದ್ದಾನೆ. ಮನೋರೂಢ ಎಂದರೆ ಏಕಾಗ್ರವಾಗಿ-ಪಾದಧೂಳಿಯಲ್ಲಿ ಏಕಾಗ್ರವಾಗಿ ಎಂದು.

(ತೋ-ಪುಟ ೫೬)

ಯಂತ್ರಾರಾಧನೆ (ಶ್ಲೋಕ-೨)



ಯಂತ್ರರಚನೆ : ಚಿನ್ನದ ತಗಡಿನಲ್ಲಿ ಯಂತ್ರ ರಚಿಸಬೇಕು. ಸಮಭುಜಾಕಾರ ತ್ರಿಕೋಣ ಲೇಖನವಿರಬೇಕು.

ಪೂಜೆ : ಲಲಿತಾ ತ್ರಿಶತಿ ಪೂರ್ವಕ ಕುಂಕುಮಾರ್ಚನೆ ಮಾಡಬೇಕು.

ನೈವೇದ್ಯ : ಹಾಲಿನಿಂದ ತಯಾರಿಸಿದ ಪಾಯಸ ಮತ್ತು ತೆಂಗಿನಕಾಯಿ, ಹಣ್ಣುಗಳನ್ನು ಅರ್ಪಿಸಬೇಕು.

ಜಪ : ಉತ್ತರಾಭಿಮುಖವಾಗಿ ಕುಳಿತು ೫೫ ದಿನಗಳು (ಕೆಲವರ ಪ್ರಕಾರ ೪೫ ದಿನಗಳು ಅಥವಾ ೧೨ ದಿನಗಳು) ಪ್ರತಿದಿನಗಳು ೧೦೦೦ ಬಾರಿ ಈ ಶ್ಲೋಕವನ್ನು ಜಪಿಸಬೇಕು.

ಫಲ : **ಸರ್ವಲೋಕ ವಶೀಕರಣ ಮತ್ತು ಪ್ರಕೃತಿ ಜಯ**

ಶ್ಲೋಕ ೩

ದೇವಿಯ ಪಾದಧೂಳಿಯ ಪ್ರಭಾವ

ಅವಿದ್ಯಾನಾಮಂತಸ್ತಿಮಿರಮಿಹಿರದ್ವೀಪನಗರೀ[೧] ।
ಜಡಾನಾಂ ಚೈತನ್ಯಸ್ತಬಕಮಕರಂದಸ್ರುತಿಝುರೀ[೨] ।
ದರಿದ್ರಾಣಾಂ ಚಿಂತಾಮಣಿಗುಣನಿಕಾ ಜನ್ಮಜಲಧೌ
ನಿಮಗ್ನಾನಾಂ ದಂಷ್ಟ್ರಾ ಮುರರಿಪುವರಾಹಸ್ಯ ಭವತಿ[೩] ॥ ೩ ॥

ಪಾಠಾಂತರ

೧. (ಮಿಹಿರ ದ್ವೀಪನಗರೀ) ಮಿಹಿರೋದ್ದೀಪನಕರೀ (ಸು) ೨. (ಸ್ರುತಿಝುರೀ) ಸ್ರುತಿಶಿರಾ (ಸು) ೩. (ಭವತಿ) ಭವತೀ (ಸು)

ಪದವಿಭಾಗ

(ಅವಿದ್ಯಾನಾಮಂತಸ್ತಿಮಿರಮಿಹಿರದ್ವೀಪನಗರೀ = ಅವಿದ್ಯಾನಾಂ + ಅಂತಃ + ತಿಮಿರ-ಮಿಹಿರದ್ವೀಪ ನಗರೀ; ಜಡಾನಾಂ, ಚೈತನ್ಯಸ್ತಬಕಮಕರಂದಸ್ರುತಿಝುರೀ, ದರಿದ್ರಾಣಾಂ, ಚಿಂತಾಮಣಿಗುಣನಿಕಾ, ಜನ್ಮ ಜಲಧೌ, ನಿಮಗ್ನಾನಾಂ, ದಂಷ್ಟ್ರಾ, ಮುರರಿಪುವರಾಹಸ್ಯ, ಭವತಿ.

ಅನ್ವಯಾರ್ಥ

(ಹೇ ಭಗವತಿ)	(ಎಲೈ ದೇವಿಯೆ)
(ತವ ಪಾದಾಬ್ಜರೇಣುಃ ಏಷಃ)	(ನಿನ್ನ ಕಮಲದಂತಿರುವ ಪಾದದ ಧೂಳು)
ಅವಿದ್ಯಾನಾಂ	ಅಜ್ಞಾನಿಗಳ
ಅಂತಸ್ತಿಮಿರಮಿಹಿರದ್ವೀಪನಗರೀ	ಅಜ್ಞಾನವೆಂಬ ಕತ್ತಲೆಗೆ-ಸೂರ್ಯನ-ದ್ವೀಪದ ಪಟ್ಟಣವಾಗಿಯೂ
ಜಡಾನಾಂ	ಚೈತನ್ಯವಿಲ್ಲದ ಪ್ರಾಣಿಗಳಿಗೆ (ಅಲ್ಪಬುದ್ಧಿಯುಳ್ಳ ಮನುಷ್ಯರಿಗೆ)

ಚೈತನ್ಯ ಸ್ತಬಕ ಮಕರಂದ	ಚೈತನ್ಯವೆಂಬ ಹೂವಿನ
ಸ್ರುತಿ ಝುರೀ	ಗೊಂಚಲಿನ-ಮಕರಂದ
	ಪ್ರವಾಹವಾಗಿಯೂ
ದರಿದ್ರಾಣಾಂ	ದರಿದ್ರರಿಗೆ
ಚಿಂತಾಮಣಿ ಗುಣನಿಕಾ	ಸಕಲೇಷ್ಟಾರ್ಥವನ್ನು ಕೊಡುವ
	ಚಿಂತಾಮಣಿಯೆಂಬ ಮಣಿಗಳ-
	ಸಮೂಹವಾಗಿಯೂ
ಜನ್ಮಜಲಧೌ	ಸಂಸಾರವೆಂಬ ಸಮುದ್ರದಲ್ಲಿ
ನಿಮಗ್ನಾನಾಂ	ಮುಳುಗಿರುವ ಜನಗಳಿಗೆ
ಮುರರಿಪುವರಾಹಸ್ಯ	ವರಾಹರೂಪನಾಗಿರುವ ಮಹಾವಿಷ್ಣುವಿನ
	ರೂಪಾದ ವರಾಹನ
ದಂಷ್ಟ್ರಾ ಭವತಿ	ಕೋರೇಹಲ್ಲಾಗಿ ಇರುತ್ತದೆ.

ತಾತ್ಪರ್ಯ

ಎಲೈ ದೇವಿಯೆ, ನಿನ್ನ ಚರಣಕಮಲಗಳ ಧೂಳಿನ ಮಹಿಮೆಯನ್ನು ಏನೆಂದು ಬಣ್ಣಿಸಲಿ! ನಿನ್ನ ಪಾದಧೂಳು ಅಜ್ಞಾನಿಗಳ ಅಂತರಂಗದ ಅಜ್ಞಾನದ ಕತ್ತಲೆಗೆ ಸೂರ್ಯೋದಯವಾಗುವ ರೀತಿಯಲ್ಲಿ (ಸಮುದ್ರ ಮಧ್ಯದಲ್ಲಿ ಇರುವ ಪಟ್ಟಣಕ್ಕೆ ಬೆಳಕಾದಂತೆ) ಚೈತನ್ಯವಿಲ್ಲದ ಜಡಪ್ರಾಣಿಗಳಿಗೆ ಎಂದರೆ ಅಲ್ಪಬುದ್ಧಿಯುಳ್ಳ ಮನುಷ್ಯರಿಗೆ ಚೈತನ್ಯವೆಂಬ ಹೂವಿನ ಗೊಂಚಲಿನಿಂದ ಸುರಿಯುವ ಮಕರಂದದ ಪ್ರವಾಹದಂತಿದೆ.

ದರಿದ್ರರಿಗೆ ಸಕಲ ಇಷ್ಟಾರ್ಥಗಳನ್ನು ಕೊಡುವ ಚಿಂತಾಮಣಿಯೆಂಬ ರತ್ನರಾಶಿಯಾಗಿದೆ.

ಜನನ ಮರಣಗಳ ಸಂಸಾರವೆಂಬ ಸಮುದ್ರದಲ್ಲಿ ಮುಳುಗಿರುವ ಜನರನ್ನು ಮೇಲೆತ್ತುವ ವರಾಹರೂಪಿಯಾದ ಮಹಾವಿಷ್ಣುವಿನ ಕೋರೆಹಲ್ಲಾಗಿ ಇದೆ. (ವರಾಹ ರೂಪಿಯಾದಂಥ ವಿಷ್ಣುವಿನ ಕೋರೇಹಲ್ಲು ಯಾವ ರೀತಿಯಲ್ಲಿ ಸಮುದ್ರದಲ್ಲಿ ಮುಳುಗಿ ಹೋಗಿದ್ದ ಭೂಮಂಡಲವನ್ನು ಮೇಲಕ್ಕೆ ಎತ್ತಿ ತೋರುವುದೊ ಅದೇ ರೀತಿ ನಿನ್ನ ಪಾದದ ಧೂಳು ಸಂಸಾರ ಸಮುದ್ರದಲ್ಲಿ ಮುಳುಗಿರುವುದನ್ನು ಮೇಲೆತ್ತುವುದು.)

ಪದ್ಯಾನುವಾದ

ಅಜ್ಞಾನವಂತರಂತಃಕರಣತಿಮಿರಕ್ಕೆ
ಭಾಸ್ಕರದ್ವೀಪನಗರವಿದು, ಜಡತೆಯ ಜನಕೆ
ಚೈತನ್ಯವೆಂಬ ಹೂಗೊಂಚಲಿಂದೊಸ*ರ್ವ ಮಕರಂದ ಝುರಿಯಾಗಿರುವುದು;

ಬಡವರಿಗೆ ಚಿಂತಾಮಣಿಯ ಮಾಲೆಯಾಗಿಹುದು
ಜನ್ಮಜಲಧಿಯೊಳು ಮುಳುಗಿರುವವರನ್ನುದ್ಧರಿಸಿ
ಪೊರೆವ ಮುರರಿಪುವರಾಹನ ದಾಡೆಯಾಗಿಹುದು ತವಪಾದಪದ್ಮಧೂಳಿ
॥ ೩ ॥

ಟಿಪ್ಪಣಿಗಳು

೧. **ಅವಿದ್ಯಾನಾಂ ಅಂತಸ್ತಿಮಿರಮಿಹಿರದ್ವೀಪನಗರೀ**

(ಅಜ್ಞಾನಿಗಳ ಅಜ್ಞಾನವೆಂಬ ಕತ್ತಲೆಯನ್ನು ಹೋಗಲಾಡಿಸುವ ಜ್ಞಾನಸೂರ್ಯನ ಉದಯದ ದ್ವೀಪನಗರಿಯಾಗಿದೆ)

ವಿದ್ಯೆ ಎಂದರೆ ಆತ್ಮಜ್ಞಾನ, ಪರಬ್ರಹ್ಮನ ಬಗ್ಗೆ ತಿಳಿವಳಿಕೆ, ಅವಿದ್ಯೆ ಇದನ್ನು ತಪ್ಪಿಸಲೆತ್ನಿಸುತ್ತದೆ. ಮೋಕ್ಷಾಪೇಕ್ಷಿಯಾದವನಿಗೆ ಆತ್ಮಜ್ಞಾನದಿಂದ ಅವಿದ್ಯೆಯೆಂಬ ಕತ್ತಲೆನಾಶವಾಗಿ ಶಿವಜ್ಞಾನದ ಬೆಳಕು ಉಂಟಾಗುತ್ತದೆ. ಇದೇ ವಿಷಯವನ್ನು ಲಲಿತಾಸಹಸ್ರನಾಮದಲ್ಲಿ **ಅಜ್ಞಾನಧ್ವಾಂತ ದೀಪಿಕಾ** (ಅಜ್ಞಾನವೆಂಬ ಕತ್ತಲೆಗೆ ದೀಪವಾಗಿರುವವಳು) (ನಾಮ೯೩) **ಶ್ರೀ ದೇವಿ ಶಿವಜ್ಞಾನ ಪ್ರದಾಯಿನೀ** (ಬ್ರಹ್ಮಜ್ಞಾನವನ್ನು ಅನುಗ್ರಹಿಸಿದವಳು) (ನಾಮ ೭೨೭) ಎಂದು ದೇವಿಯನ್ನು ಕರೆಯಲಾಗಿದೆ. (ಪೋ–ಪುಟ ೧೫)

೨. **ಅವಿದ್ಯಾನಾಂ ಅಂತಸ್ತಿಮಿರ**

"ಅವಿದ್ಯಾನಾಂ ಅಂತಸ್ತಿಮಿರ" ಎಂದಾಗ ಅವಿದ್ಯೆಯುಳ್ಳವರ, ಅಜ್ಞಾನಿಗಳ ಒಳಮನವನ್ನು ಅಂತಸ್ತಿಮಿರ ಎಂದು ಕರೆದಿದ್ದಾರೆ, ಒಳಗತ್ತಲು. ಅಂತಸ್ತಿಮಿರ ಎಂದಾಗ–ನಮಗೆ ಇಷ್ಟವಾದಂತಿರುವ ನಮ್ಮ ನೋವು, ನಾವು ಮುಚ್ಚಿಟ್ಟ ಸತ್ಯ, ನಾವು ಸಾಧಿಸಬಹುದಾಗಿದ್ದು ಸಾಧಿಸದೆ ಹೋದ ನಮ್ಮ ಸಾಮರ್ಥ್ಯ"

೩. **ಮಿಹಿರ ದ್ವೀಪನಗರೀ**

ಮಿಹಿರ ದ್ವೀಪನಗರೀ ಎಂಬುದರ ಬದಲಿಗೆ "ಮಿಹಿರೋದ್ದೀಪನಕರೀ" ಎಂದು ಪಾಠಾಂತರವಿದೆ. ಮಿಹಿರ ಎಂದರೆ ಸೂರ್ಯ. ಈ ಪಾಠವನ್ನು ನೆಚ್ಚಿ ಬೇಂದ್ರೆಯವರು "ಬೆಳಕೊತ್ತುದೀಪ ನೀನು" ಎಂದು ಅನುವಾದಿಸಿದರು. (ಆ ಅವಿದ್ಯೆಯೊಳಗತ್ತಲಲ್ಲಿ ಬೆಳಕೊತ್ತುದೀಪ ನೀನು) ಆದರೆ ಮಿಹಿರ ದ್ವೀಪನಗರೀ ಎಂದಾಗ ಹೆಚ್ಚು ಸ್ವಾರಸ್ಯ. ಹೆಚ್ಚಿನೆಲ್ಲ ವ್ಯಾಖ್ಯಾನಕಾರರೂ ಈ ಮಾತನ್ನು ಬಳಸಿದ್ದಾರೆ.

'ಪ್ರಥಮ ಪ್ರಭಾತ ಉದಯ ತವರ್ಗನೇ' ಎಂಬ ರವೀಂದ್ರರ ಸಾಲಿನಂತೆ ಇದು ಕೇಳಿಸುತ್ತದೆ. 'ಅಂತಸ್ತಿಮಿರ' ಎಂದಾಗ ಮನದೊಳಗಿನ ದುಮ್ಮಾನ ಕತ್ತಲೆ. ಮತ್ತು ಮನಸ್ಸೆನ್ನುವುದೂ ಒಂದು ದ್ವೀಪವೇ ಅಲ್ಲವೇ? ಕಳವಳದ ಕಾವಳದಿಂದ ತುಂಬಿದ ಮನವೆಂಬ ದ್ವೀಪಕ್ಕೆ ಅರಿವೆಂಬ ಬೆಳಕಿನ ದೀಪ.

(ತೋ–ಪುಟ ೬೪)

೪. **ದರಿದ್ರಾಣಾಂ ಚಿಂತಾಮಣಿಗುಣನಿಕಾ**

(ಚೈತನ್ಯವಿಲ್ಲದ ಜಡಪ್ರಾಣಿಗಳಿಗೆ (ದರಿದ್ರರಿಗೆ) ಸಕಲ ಇಷ್ಟಾರ್ಥಗಳನ್ನು ಕೊಡುವ ಚಿಂತಾಮಣಿಯೆಂಬ ರತ್ನಮಣಿಯಾಗಿದೆ)
ಕೇಳಿದವರಿಗೆ ಅವರ ಇಷ್ಟಾರ್ಥಗಳನ್ನು ನೆರವೇರಿಸುವ ರತ್ನಚಿಂತಾಮಣಿ. ಭಕ್ತರ ನಾನಾಬಗೆಯ ದಾರಿದ್ರ್ಯಗಳನ್ನು ಹೋಗಲಾಡಿಸುವ ಗುಣಗಳ ರಾಶಿಯಾದ ಚಿಂತಾಮಣಿ ದೇವಿಯ ಪಾದಧೂಳು (ನಾಮ ೯೮೯)
ಲಲಿತಾಸಹಸ್ರನಾಮದಲ್ಲಿ ಇದೇ ಭಾವವನ್ನು **ವಾಂಛಿತಾರ್ಥಪ್ರದಾಯಿನಿ** ಎಂದು ಹೇಳಲಾಗಿದೆ. (ಭಕ್ತರ ಇಷ್ಟಾರ್ಥಗಳನ್ನು ನೆರವೇರಿಸುವವಳು)

(ಪೋ–ಪುಟ ೧೬)

೫. **ಜನ್ಮಜಲಧೌ ನಿಮಗ್ನಾನಾಂ ದಂಷ್ಟ್ರಾ ಮುರರಿಪುವರಾಹಸ್ಯ**
(ಶ್ರೀ ದೇವಿ ಸಂಸಾರಸಾಗರದಲ್ಲಿ ಮುಳುಗಿದವರನ್ನು ವರಾಹಾವತಾರದಲ್ಲಿ ವಿಷ್ಣು ತನ್ನ ಕೋರೆದಾಡೆಗಳಿಂದ ಭೂದೇವಿಯನ್ನು ರಕ್ಷಿಸಿದಂತೆ ರಕ್ಷಿಸುತ್ತಾಳೆ)
ಅಜ್ಞಾನವೆಂಬ ಸಂಸಾರಸಮುದ್ರದಲ್ಲಿ ಮುಳುಗಿರುವವರನ್ನು ದೇವಿಯ ಪಾದಧೂಳು ಉದ್ಧರಿಸುತ್ತದೆ.
ಇದೇ ಅರ್ಥವನ್ನು ಲಲಿತಾ ಸಹಸ್ರನಾಮದಲ್ಲಿ (ನಾಮ ೮೮೦) ಹೀಗೆ ಹೇಳಿದೆ.
ಸಂಸಾರಪಂಕನಿರ್ಮಗ್ನಸಮುದ್ಧರಣ ಪಂಡಿತಾ
(ಸಂಸಾರವೆಂಬ ಕೆಸರಿನಲ್ಲಿ ಸಿಕ್ಕಿರುವವರನ್ನು ಪಾರುಮಾಡುವುದರಲ್ಲಿ ಪರಿಣತೆಯಾದವಳು) (ಪೋ–೧೬)

೬. ಜಡಾನಾಂ ಚೈತನ್ಯ ಸ್ತಬಕ ಮಕರಂದ ಸ್ತುತಿಝುರೀ "ಸಂಸಾರದಲ್ಲಿ ಜಡಗೊಂಡ ಮನಸ್ಸುಗಳಿಗೆ ಆ ಜಡತೆಯನ್ನು ನಿವಾರಿಸುವ ಚೈತನ್ಯವೆಂಬ ಕಲ್ಪವೃಕ್ಷದ ಹೂಗೊಂಚಲುಗಳಿಂದ ಸುರಿವ ಮಕರಂದದ ಹನಿ ಹೊನಲಂತೆ ಆಪ್ಯಾಯಮಾನ ತಾಯೇ ನಿನ್ನ ಪಾದಧೂಲಿಯ ಧ್ಯಾನ" ಎಂದು ಆಚಾರ್ಯ ಶರಣರು ಕಾವ್ಯಾತ್ಮಕವಾಗಿ ಹೇಳುತ್ತಿದ್ದಾರೆ."


(ತೋ–ಪುಟ ೬೯)

೭. ಅಲಂಕಾರ

ದೇವಿಯ ಪಾದಕಮಲ ಪರಾಗವನ್ನು ಮಿಹಿರದ್ವೀಪನಗರೀ, ದಂಷ್ಟ್ರಾ ಮುರರಿಪುವರಾಹಸ್ಯ ಮುಂತಾದ ಉಲ್ಲೇಖಗಳಿಂದ ನಾನಾಪ್ರಕಾರವಾಗಿ ವರ್ಣಿಸಿರುವುದರಿಂದ ಉಲ್ಲೇಖಾಲಂಕಾರವಾಗಿದೆ.

(ಶೇ ಪುಟ–೧೦)

ಯಂತ್ರಾರಾಧನೆ : ಶ್ಲೋಕ – ೩



ಯಂತ್ರರಚನೆ : ಚಿನ್ನದ ತಗಡಿನ ಮೇಲೆ ಯಂತ್ರವನ್ನು ಬೀಜಾಕ್ಷರ ಸಹಿತ ಕೆತ್ತಿಸಬೇಕು.

ಪೂಜೆ : ಮಲ್ಲಿಗೆ ಮುಂತಾದ ಬಿಳಿ ಹೂಗಳಿಂದ ಲಲಿತಾ ತ್ರಿಶತೀ ಅರ್ಚನೆ ಮಾಡಬೇಕು.

ನೈವೇದ್ಯ : ಅನ್ನ, ಉದ್ದಿನ ವಡೆ, ಜೇನುತುಪ್ಪ, ತಾಂಬೂಲ ....

ಜಪ : ಈಶಾನ್ಯ ದಿಕ್ಕಿಗೆ ಎದುರಾಗಿ ಮಣೆ ಅಥವಾ ಚಾಪೆಯ ಮೇಲೆ ಕುಳಿತುಕೊಳ್ಳಬೇಕು. ಪ್ರತಿದಿನವೂ ೧೦೦೦ ಬಾರಿ ಅಥವಾ ೨೦೦೦ ಸಾರಿ ಶ್ಲೋಕವನ್ನು ಜಪಿಸಬೇಕು. ೪೫ ಅಥವಾ ೫೪ ಅಥವಾ ೧೫ ದಿನಗಳ ಕಾಲ ಜಪಿಸಬೇಕು.

ಫಲ : **ವೇದಾದಿ ವಿದ್ಯೆ ಮತ್ತು ಐಶ್ವರ್ಯ ಪ್ರಾಪ್ತಿ**

ಶ್ಲೋಕ ೪

ದೇವಿಯ ಪಾದಾರವಿಂದಗಳ ಮಹಿಮೆ

ತ್ವದನ್ಯಃ ಪಾಣಿಭ್ಯಾಮಭಯವರದೋ[೧] ದೈವತಗಣಃ
ತ್ವಮೇಕಾ ನೈವಾಸಿ ಪ್ರಕಟಿತವರಾಭೀತ್ಯಭಿನಯಾ ।
ಭಯಾತ್ತ್ರಾತುಂ ದಾತುಂ[೨] ಫಲಮಪಿ ಚ ವಾಂಛಾಸಮಧಿಕಂ
ಶರಣ್ಯೇ ಲೋಕಾನಾಂ ತವ ಹಿ ಚರಣಾವೇವ ನಿಪುಣೌ ॥ ೪ ॥

ಪಾಠಾಂತರ

೧. ಪಾಣಿಭ್ಯಾಮ್ ಅಭಯವರದೋ (K) ೨. ಭಯಾತ್ ತ್ರಾತುಂ ದಾತುಂ (ಸು)

ಪದವಿಭಾಗ

(ತ್ವದನ್ಯಃ) = ತ್ವತ್ + ಅನ್ಯಃ, (ಪಾಣಿಭ್ಯಾಮಭಯವರದೋ)=ಪಾಣಿಭ್ಯಾಂ + ಅಭಯವರದಃ; ದೈವತಗಣಃ, (ತ್ವಮೇಕಾ) ತ್ವಂ+ಏಕಾ; (ನೈವಾಸಿ) ನ+ಏವ+ಅಸಿ; (ಪ್ರಕಟಿತವರಾಭೀತ್ಯಭಿನಯಾ) = ಪ್ರಕಟಿತವರಾ + ಅಭೀತಿ + ಅಭಿನಯಾ (ಭಯಾತ್ತ್ರಾತುಂ) ಭಯಾತ್+ತ್ರಾತುಂ; ದಾತುಂ, (ಫಲಮಪಿ)=ಫಲಂ+ಅಪಿ; ಚ, ವಾಂಛಾಸಮಧಿಕಂ, ಶರಣ್ಯೇ, ಲೋಕಾನಾಂ, ತವ, ಹಿ, (ಚರಣಾವೇವ)= ಚರಣೌ+ಏವ, ನಿಪುಣೌ

ಪ್ರತಿಪದಾರ್ಥ

(ಹೇ ಭಗವತಿ)	(ಎಲೈ ದೇವಿಯೆ)
ಲೋಕಾನಾಂ	ಸಕಲ ಲೋಕಗಳಿಗೂ
ಶರಣ್ಯೇ	ಪಾಲಕಳಾಗಿರುವ
ತ್ವದನ್ಯಃ	ನೀನಲ್ಲದೆ ಇತರವಾದ
ದೈವತ ಗಣಃ	ದೇವತೆಗಳ ಸಮೂಹವು
ಪಾಣಿಭ್ಯಾಂ ಅಭಯವರದಃ	ಎರಡು ಕೈಗಳಿಂದಲೂ ಅಭಯವರವನ್ನು ಕೊಡುವುದಾಗಿ
ಏಕಾ ತ್ವಂ	ನೀನು ಒಬ್ಬಳೇ ಮಾತ್ರ

ಪ್ರಕಟಿತವರಾಭೀತ್ಯಭಿನಯಾ	ಸ್ಪಷ್ಟಪಡಿಸಿದ–ವರದ ಹಸ್ತ–ಅಭಯ ಹಸ್ತಭಾವವುಳ್ಳವಳಾಗಿ
ನೈವಾಸಿ ಹಿ	ನೀನು ಪ್ರಸಿದ್ಧಳಾಗಿಲ್ಲ ಅಲ್ಲವೇ?
(ಇತಿ ಸಂಚಿಂತ್ಯ)	(ಹೀಗೆಂದು ಯೋಚಿಸಿ)
ತವ ಚರಣೌ ಏವ	ನಿನ್ನ ಎರಡು ಕಾಲುಗಳೇ
ಭಯಾತ್ ತ್ರಾತುಂ	ಭಯದ ದೆಸೆಯಿಂದಸಂರಕ್ಷಿಸುವುದಕ್ಕೂ
ವಾಂಛಾಸಮಧಿಕಂ	ಅಪೇಕ್ಷೆಗಿಂತಲೂ–ಹೆಚ್ಚಾದ
ಫಲಂ ಅಪಿ ದಾತುಂ	ಫಲವನ್ನು ಕೊಡುವುದಕ್ಕೂ
ನಿಪುಣೌ	ಸಮರ್ಥವಾಗಿವೆ

ತಾತ್ಪರ್ಯ

ಹೇ ಜಗದ್ರಕ್ಷಕಳೇ! ಸಕಲ ಲೋಕಗಳ ಪಾಲಕಳಾಗಿರುವ ನಿನ್ನನ್ನು ಬಿಟ್ಟು ಉಳಿದ ದೇವತಾ ಸಮೂಹಗಳು, ತಮ್ಮ ಎರಡು ಕೈಗಳಿಂದಲೂ ಅಭಯವನ್ನು ಮತ್ತು ವರವನ್ನು ನೀಡುವವರಾಗಿದ್ದಾರೆ. ಆದರೆ ನೀನೊಬ್ಬಳು ಮಾತ್ರ ಅವರ ಹಾಗೆ ವರ–ಅಭಯಗಳ ಅಭಿನಯ ನೀಡುವವಳು ಆಗಿಲ್ಲ. ಏಕೆಂದರೆ ನಿನ್ನ ಎರಡು ಕಾಲುಗಳೇ ಅಂತಹ ಭಯದ ದೆಸೆಯಿಂದ ಸಂರಕ್ಷಿಸುವುದರಲ್ಲಿ (ಅಭಯ) ಅಪೇಕ್ಷೆಗಿಂತಲೂ ಹೆಚ್ಚಾದ ಫಲವನ್ನು (ವರ) ಕೊಡುವುದಕ್ಕೆ ಸಮರ್ಥವಾಗಿವೆ. ಆದ್ದರಿಂದ ನೀನೊಬ್ಬಳೇ ಲೋಕಕ್ಕೆ ಪ್ರಧಾನ ರಕ್ಷಕಳಾಗಿದ್ದೀಯೇ. ಅವರಂತೆ ನೀನು ಅಭಯಹಸ್ತೆ, ವರದಹಸ್ತೆ ಆಗಿದ್ದರೆ. ನಿನಗೂ ಆ ದೇವತೆಗಳಿಗೂ ಸಮಾನತೆ ಉಂಟಾಗುತ್ತಿತ್ತು. ಆದರೆ ನೀನೊಬ್ಬಳೇ ಏಕಮಾತ್ರ ಶರಣ್ಯಳು. ಅಂದರೆ ಅಭಯಹಸ್ತ, ವರದಹಸ್ತ ತೋರಿಸಬೇಕಾದ ಆವಶ್ಯಕತೆಯೇ ಇಲ್ಲ. ಭಕ್ತರ ಇಷ್ಟಸಿದ್ಧಿಗೆ ನಿನ್ನ ಪಾದದರ್ಶನವೇ ಸಾಕು.

ಪದ್ಯಾನುವಾದ

ಸರ್ವಲೋಕಶರಣ್ಯೆ! ನಿನ್ನಿಂದಿತರ ದೇವ
ಗಣಗಳೆರಡೂ ಕೈಗಳಿಂದ ಕೊಡುವರು ವರವ–
ನಭಯವನು; ನೀನೊಬ್ಬಳೇ, ತಾಯೆ, ವರದಾಭಯಾಭಿನಯವಿಲ್ಲದವಳು;
ಭಯಭೀತರಾಗಿ ತಲ್ಲಣಗೊಳದ ತೆರದಲ್ಲಿ
ಪೊರೆಯಲೂ ವಾಂಛಿತಕ್ಕಧಿಕವಹ ಫಲಗಳನು
ನೀಡಲೂ ನಿನ್ನೆರಡು ದಿವ್ಯ ಚರಣಗಳೆ ಸಾಲವೆ ಪೇಳು ಕೈಗಳೇಕೆ? ॥ ೪ ॥

ಟಿಪ್ಪಣಿಗಳು

೧. **ಪಾಣಿಭ್ಯಾಂ ಅಭಯವರದ**

ಸಾಮಾನ್ಯವಾಗಿ ದೇವತೆಗಳ ವಿಗ್ರಹಗಳನ್ನು ಕಂಡಾಗ ಅವು ಅಭಯಹಸ್ತ, ವರದಹಸ್ತ ಮುದ್ರೆಗಳನ್ನು ಧರಿಸಿರುವುದು ಕಂಡು ಬರುತ್ತದೆ. ಎಂದರೆ ಬಲಗೈಯನ್ನು ಮೇಲ್ಮುಖ ಮಾಡಿ ಅಭಯಹಸ್ತವನ್ನು, ಎಡಗೈಯನ್ನು ಕೆಳಮುಖಮಾಡಿ ವರದಹಸ್ತವನ್ನು ತೋರಿಸುತ್ತಾ ಇರುವುದು ಕಂಡುಬರುತ್ತದೆ.

ಅಭಯಹಸ್ತದ ಅರ್ಥ ಭಯದಿಂದ, ಕಷ್ಟಗಳಿಂದ ಕಾಪಾಡುವ ಹಸ್ತ; ಭಕ್ತರು ಅಪೇಕ್ಷಿಸಿದ ವರಗಳನ್ನು ನೀಡುವುದು ವರದಹಸ್ತ ಎಂದರ್ಥ.

(ಪೋ–ಪುಟ ೧೮)

೨. ಈ ಶ್ಲೋಕದಲ್ಲಿರುವ ಭಾವವನ್ನು ಲಲಿತಾ ಸಹಸ್ರನಾಮದಲ್ಲಿ ಬರುವ (ನಾಮ ೧೨೧) 'ಭಯಾಪಹಾ' ಸಂಸಾರ ಭಯನಾಶಿನಿ ವರದಾ (ನಾಮ ೩೩೧) ವರದಾ = ವರಗಳನ್ನು ಕೊಡುವವಳು ಶ್ಲೋಕ ೭೪) ನಿರಪಾಯಾ (ನಾಮ ೧೮೬) – ಅಪಾಯರಹಿತಳು, ವಾಂಛಿತಾರ್ಥಪ್ರದಾಯಿನಿ (ನಾಮ ೯೮೯) ಭಕ್ತರ ಇಷ್ಟಾರ್ಥಗಳನ್ನು ನೆರವೇರಿಸುವವಳು ಅನ್ನುವ ನಾಮಗಳ ಸಾದೃಶ್ಯದಲ್ಲಿ ಕಾಣಬಹುದು.

೩. ಕಂಚಿ ಕಾಮಾಕ್ಷಿದೇವಿಗೆ ಅಭಯ ವರದ ಹಸ್ತಮುದ್ರೆಗಳಿಲ್ಲ. ಭಕ್ತರು ದೇವೀ ಪಾದಕ್ಕೆ ವಂದಿಸುತ್ತಾ, ದೇವಿಯ ಕೃಪಾಕಟಾಕ್ಷಕ್ಕೆ ಹಾತೊರೆಯುತ್ತಾ, ತಮ್ಮ ಕಷ್ಟಕಾರ್ಪಣ್ಯಗಳನ್ನು, ಆಕೆಗೆ ನಿವೇದಿಸಿಕೊಳ್ಳುತ್ತಾರೆ.


(ಪೋ–ಪುಟ ೨೦)

೪. ಎರಡು ಕೈಗಳಿಂದ (ಅಭಯ, ವರದ ಹಸ್ತಗಳಲ್ಲಿ), ವರಪ್ರದಾನ ಮಾಡಿದರೆ ಉಳಿದ ದೇವತೆಗಳೂ ಹಾಗೆಯೇ ಮಾಡುವುದರಿಂದ ದೇವತೆಗಳ ಸಮಾನ ದೇವಿಯನ್ನೂ ಭಾವಿಸುವಂತಾಗುತ್ತದೆ. ಎಲ್ಲ ಲೋಕಗಳಿಗೂ ಏಕಮಾತ್ರ ಶರಣ್ಯಳು ಎಂಬ ಮಾತಿಗೆ ವಿರೋಧವುಂಟಾಗುವ ಕಾರಣ, ದೇವಿಯ ಪಾದಗಳಿಗೆ ಶರಣಾದರೆ ಸಾಕು, ಭಕ್ತರ ಇಷ್ಟಾರ್ಥ ಸಿದ್ಧಿಸುವುದು ಎಂಬುದರ ಮೂಲಕ ದೇವಿಯ ಹಿರಿಮೆಯನ್ನು ಈ ಶ್ಲೋಕದಲ್ಲಿ ನಿರೂಪಿಸಲಾಗಿದೆ. ದೇವಿಯ ಹಸ್ತಗಳಲ್ಲಿ ವರದಾಭಯ

ಮುದ್ರೆಗಳ ಬದಲಾಗಿ ಪಾಶ, ಅಂಕುಶ, ಇಕ್ಷು, ಬಾಣಗಳಿವೆ ಎಂಬುದನ್ನು ಗಮನಿಸಬೇಕು.

(ಪೋ–ಪುಟ ೧೯)

ಯಂತ್ರಾರಾಧನೆ (ಶ್ಲೋಕ – ೪)



ಯಂತ್ರರಚನೆ : ಚಿನ್ನ ಅಥವಾ ಬೆಳ್ಳಿಯ ತಗಡಿನ ಮೇಲೆ ಅಷ್ಟ ದಳ ಪದ್ಮಲೇಖನ, ಕರ್ಣಿಕೆಯಲ್ಲಿ ಬೀಜಾಕ್ಷರವಿರುವ ಇರುವ ಯಂತ್ರವನ್ನು ಬೀಜಾಕ್ಷರ ಸಹಿತ ಕೆತ್ತಿಸಬೇಕು.

ಪೂಜೆ : ಲಲಿತಾ ಸಹಸ್ರನಾಮಪೂರ್ವಕ ಕುಂಕುಮಾರ್ಚನೆಯನ್ನು ಕೆಂಪು ಹೂಗಳಿಂದ ಪುಷ್ಪಾರ್ಚನೆಯನ್ನು ಮಾಡಬೇಕು.

ನೈವೇದ್ಯ : ಅಕ್ಕಿ, ಹೆಸರುಬೇಳೆ, ಅರಿಶಿನ ಸೇರಿಸಿದ ಹುಗ್ಗಿ (ಪೊಂಗಲ್), ನಿಂಬೆಹಣ್ಣಿನ ಚಿತ್ರಾನ್ನ, ಹಾಲು, ಕೊಬ್ಬರಿ

ಜಪ : ಪ್ರತಿದಿನ ೧೦೦೦ ಬಾರಿ ೧೫ (೩೬) ದಿನಕಾಲ ಶ್ಲೋಕ (೪) ಜಪಿಸಬೇಕು. ಈಶಾನ್ಯದಿಕ್ಕಿಗೆ ಅಭಿಮುಖವಾಗಿ ಕುಳಿತಿರಬೇಕು.

ಫಲ : **ದಾರಿದ್ರ್ಯ ನಿವೃತ್ತಿ ಮತ್ತು ರೋಗ ನಿವಾರಣೆ.**

ಶ್ಲೋಕ ೫
ದೇವಿಯ ಸೌಂದರ್ಯ ಮಹಿಮೆ

ಹರಿಸ್ತ್ವಾಮಾರಾಧ್ಯ ಪ್ರಣತಜನಸೌಭಾಗ್ಯಜನನೀಂ
[೧]ಪುರಾ ನಾರೀಭೂತ್ವಾ ಪುರರಿಪುಮಪಿ ಕ್ಷೋಭಮನಯತ್ ।
[೨]ಸ್ಮರೋಽಪಿ ತ್ವಾಂ ನತ್ವಾ ರತಿನಯನಲೇಹ್ಯೇನ ವಪುಷಾ
ಮುನಿನಾಮಪ್ಯಂತಃ ಪ್ರಭವತಿ ಹಿ ಮೋಹಾಯ ಮಹತಾಮ್ ॥೫॥

ಪಾಠಾಂತರ

೧. ಪುರಾ ನಾರೀ ಭೂತ್ವಾ (ಸು), ಸ್ಮರೋಪಿ (K)

ಪದವಿಭಾಗ

(ಹರಿಸ್ತ್ವಾಮಾರಾಧ್ಯ)=ಹರಿಃ+ತ್ವಾಂ+ಆರಾಧ್ಯ, ಪ್ರಣತಜನಸೌಭಾಗ್ಯಜನನೀಂ, ಪುರಾ, ನಾರೀಭೂತ್ವಾ, (ಪುರರಿಪುಮಪಿ)=ಪುರರಿಪುಂ+ಅಪಿ, (ಕ್ಷೋಭಮನಯತ್)= ಕ್ಷೋಭಂ+ಅನಯತ್, (ಸ್ಮರೋಽಪಿ)=ಸ್ಮರಃ+ಅಪಿ, ತ್ವಾಂ, ನತ್ವಾ, ರತಿನಯನಲೇಹ್ಯೇನ, ವಪುಷಾ, (ಮುನೀನಾಮಪ್ಯಂತಃ) ಮುನೀನಾಂ+ಅಪಿ+ಅಂತಃ, ಪ್ರಭವತಿ, ಹಿ, ಮೋಹಾಯ, ಮಹತಾಮ್

ಅನ್ವಯಾರ್ಥ

(ಹೇ ಭಗವತಿ)	(ಎಲೈ ದೇವಿಯೆ)
ಪ್ರಣತಜನಸೌಭಾಗ್ಯಜನನೀಂ	ಬಹಳವಾಗಿ ನಮಸ್ಕಾರ ಮಾಡಿದ–ಜನಗಳಿಗೆ–ಸುಖವನ್ನುಂಟು ಮಾಡುವ–ತಾಯಿಯಾದ–
ತ್ವಾಂ ಹರಿಃ ಆರಾಧ್ಯ	ನಿನ್ನನ್ನು–ವಿಷ್ಣುವು–ಪೂಜಿಸಿ
ಪುರಾ	ಪೂರ್ವದಲ್ಲಿ
ನಾರೀ ಭೂತ್ವಾ	ಸ್ತ್ರೀ (ಮೋಹಿನೀ) ರೂಪವನ್ನು ಧರಿಸಿ
ಪುರರಿಪುಮಪಿ	ಈಶ್ವರನನ್ನೂ ಕೂಡ
ಕ್ಷೋಭಂ ಅನಯತ್	ಮನೋವಿಕಾರವನ್ನು – ಹೊಂದುವಂತೆ ಮಾಡಿದನು

ಸ್ಮರೋऽಪಿ	ಮನ್ಮಥನೂ ಕೂಡ
ತ್ವಾಂ	ನಿನ್ನನ್ನು
ನತ್ವಾ	ನಮಸ್ಕಾರ ಮಾಡಿ (ನಮಸ್ಕರಿಸಿ)
ರತಿನಯನಲೇಹ್ಯೇನ	ರತಿ ದೇವಿಯ-ಕಣ್ಣುಗಳಿಗೆ-ರುಚಿಯನ್ನು ಉಂಟುಮಾಡುವ (ಇವಳಿಗೆ ಮಾತ್ರ ಗೋಚರನಾದ)
ವಪುಷಾ	ಶರೀರದಿಂದ
ಮಹತಾಂ	ಮಹಾತ್ಮರಾದಂಥಾ
ಮುನೀನಾಂ ಅಪಿ	(ಜಿತೇಂದ್ರಿಯರಾದ) ಋಷಿಗಳಿಗೂ-ಕೂಡ
ಅಂತಃ ಮೋಹಾಯ	ಅಂತರಂಗದಲ್ಲಿ-ಅಜ್ಞಾನ (ಮೋಹ)ವನ್ನು ಉಂಟುಮಾಡುವುದಕ್ಕೆ
ಪ್ರಭವತಿ ಹಿ	ಸಮರ್ಥವಾಗಿ ಇದ್ದಾನೆ ಎಂಬುದು ಪ್ರಸಿದ್ಧವಲ್ಲವೆ?

ತಾತ್ಪರ್ಯ

ಎಲೈ ದೇವಿಯೆ, ಭಕ್ತಿಭಾವದಿಂದ (ಕಾಯಿಕ, ವಾಚಿಕ, ಮಾನಸಿಕವೆಂಬ ಮೂರು ವಿಧವಾದ) ನಮಸ್ಕಾರ ಮಾಡಿದ ಜನರಿಗೆ ಸುಖವನ್ನುಂಟುಮಾಡುವವಳು ನೀನು. ನಿನ್ನನ್ನು ವಿಷ್ಣುವು (ಪೂಜಿಸಿ, ಜಪಿಸಿ ಮತ್ತು ಧ್ಯಾನ ಮಾಡಿ,) ಆರಾಧಿಸಿ, ಹಿಂದೊಮ್ಮೆ ಮೋಹಿನಿ ರೂಪವನ್ನು ಧರಿಸಿ ಈಶ್ವರನಿಗೂ ಕೂಡ ಮನೋವಿಕಾರವನ್ನು ಉಂಟು ಮಾಡಿದನು. ಮನ್ಮಥನೂ ಕೂಡ ನಿನ್ನನ್ನು ಆರಾಧಿಸಿ ಎಂಥ ಚೆಲುವನ್ನು ಪಡೆದನೆಂದರೆ ಅವನ ಹೆಂಡತಿಯಾದ ರತಿದೇವಿಯು ಅವನ ಚೆಲುವನ್ನು ಸದಾ ತನ್ನ ಬೊಗಸೆ ಕಣ್ಣುಗಳಿಂದ ಕಂಡು ಆಕರ್ಷಿತಳಾಗಿರುತ್ತಾಳೆ. ಅಂಥ ಮೈ ಚೆಲುವಿನ ಮನ್ಮಥನು ತನ್ನ ಸೌಂದರ್ಯದಿಂದ ಮಹಾತ್ಮರೂ ಜಿತೇಂದ್ರಿಯರೂ ಆದ ಋಷಿಗಳಿಗೆ ಅವರ ಅಂತರಂಗದಲ್ಲಿ ಮೋಹವುಂಟುಮಾಡಲು ಶಕ್ತನಾಗುತ್ತಾನೆ. ಇವೆಲ್ಲ ನೀನು ಅವರಿಗೆ ಅನುಗ್ರಹಿಸಿದ ಸೌಂದರ್ಯ ವಿಶೇಷವಾಗಿದೆ ಅಲ್ಲವೇ?

ಪದ್ಯಾನುವಾದ

ನತಜನಕೆ ಸೌಭಾಗ್ಯವನು ಸಂಜನಿಪ ನಿನ್ನ-
ನಾರಾಧಿಸುವ ವಿಷ್ಣು ಮುನ್ನ ಪಡೆಯುತ ಹೆಣ್ಣ
ರೂಪವನು ಪುರರಿಪುಮಹೇಶ್ವರನನೂ ಸಹ ಕ್ಷೋಭೆಗೊಳಗಾಗಿಸಿದನು;

ಮನ್ಮಥನು ಕೂಡ ನಮಿಸುತ ನಿನಗೆ, ರತಿಗೆ ಕಣ್
ಸವಿಯಾದ ಮೈಸೊಬಗವಡೆದು ಮುನಿಪುಂಗವರ
ಅಂತರಂಗದಲಿ ಸಹ ಮೋಹವನು ಮೂಡಿಸಲು ತಾನ್‌ಶಕ್ತನಾದನಲ್ತೆ ॥ ೫ ॥

ಟಿಪ್ಪಣಿಗಳು

೧. **ಪುರಾ ನಾರೀ ಭೂತ್ವಾ**

ದೇವಿಯನ್ನು ಪೂಜಿಸಿ ನಾರಾಯಣನು ಸುಂದರಿ ರೂಪವನ್ನು ಧರಿಸಿದವನಾಗಿ ಕನಕಸ್ವಾಮಿ ಎಂಬುವನಿಗೆ ಮೋಹವನ್ನುಂಟು ಮಾಡಿ ಅವನನ್ನು ಕೊಂದು ಹಾಕಿದನು. ಅಂತಹ ಸ್ತ್ರೀರೂಪದಿಂದ ಅಮೃತ ಪ್ರಾಪ್ತಿಗಾಗಿ ದೇವ-ದಾನವರು ಕ್ಷೀರಸಾಗರವನ್ನು ಕಡೆದು ಅಮೃತ ಪಡೆದಾಗ ಅದನ್ನು ಹಂಚುವುದಕ್ಕಾಗಿ ಮೋಹಿನೀ ರೂಪಧರಿಸಿ ಬಂದನು. ಆ ಸಮಯದಲ್ಲಿ ಶಿವನೂ ಸಹ ಅವನ ಸೌಂದರ್ಯದಿಂದ ಮರುಳಾದನು. ಇನ್ನು ಅನಂಗನಾದ ಮನ್ಮಥನು ತ್ರಿಪುರಸುಂದರಿಯಾದ ದೇವಿಯನ್ನು ಆರಾಧಿಸಿ, ರತಿ ಸಹ ಸದಾಕಾಲದಲ್ಲಿ ಮೋಹಗೊಳ್ಳುತ್ತಿರುವಂತೆ ಮಾಡಿ, ಹೀಗೆ ವಿಷ್ಣು, ಶಿವ, ಮನ್ಮಥರಿಗೆ ಮರಳುಗೊಳಿಸುವ ಸೌಂದರ್ಯವನ್ನು ಅನುಗ್ರಹಿಸಿದವಳು ನೀನು ಎಂಬುದಾಗಿ ವಾಮಕೇಶ್ವರ ತಂತ್ರದಲ್ಲಿ ಇದನ್ನು ಹೇಳಲಾಗಿದೆ.

(ಶೇ-೧೫)

೨. **ಪುರರಿಪುಮಪಿ ಕ್ಷೋಭಂ**

(ತ್ರಿಪುರಾಂತಕನಾದ ಈಶ್ವರನಿಗೂ ಮನೋವಿಕಾರ ಉಂಟುಮಾಡಿದನು)

ದೇವಿಯ ಸ್ವರೂಪವಾದ ಹ್ರೀಂಕಾರವನ್ನು ಜಪಿಸಿ ಆಕೆಯ ಅನುಗ್ರಹ ಪಡೆದು ವಿಷ್ಣುವು ಮೋಹಿನಿ ರೂಪವನ್ನು ಧರಿಸಿದನು. ವಿಷ್ಣುವನ್ನು ಈ ಮೋಹಿನಿ ರೂಪದ ಮೂಲಕ ಸಾರೂಪ್ಯ ಲಾಭ ಹೊಂದಿದನು ಎಂದರ್ಥ. ಇದನ್ನು ಕಂಡು ಈಶ್ವರನು ಆ ಮೋಹಿನೀ ರೂಪವನ್ನು ತನಗೆ ತೋರಿಸಬೇಕೆಂದು ಕೇಳಿಕೊಂಡಾಗ ಅದು ತಾಮಸ ರೂಪ, ಇಂದ್ರಿಯನಿಗ್ರಹಿಗಳಿಗೆ ಮಾತ್ರ ಗೋಚರವಾಗುವಂಥದ್ದು ಎಂದಾಗ, ನಾನೂ ಜಿತೇಂದ್ರಿಯನೇ, ಮನ್ಮಥನನ್ನು ಗೆದ್ದವನು. ನನಗೆ ಮನೋವಿಕಾರವಾಗದು, ನಿನ್ನ ಮೋಹಿನೀರೂಪ ತೋರಿಸು ಎಂದಾಗ ಕಾಲ ಕೂಡಿಬಂದಾಗ ತೋರಿಸುವೆ ಎಂದನು. ಅನಂತರ ಕೈಲಾಸ

ಪರ್ವತದಲ್ಲಿ ಶಿವನು ವಿಹಾರಕ್ಕೆ ಹೊರಟಾಗ ಅನುಪಮ ಸುಂದರಿಯಾಗಿ ವಿಷ್ಣು ಕಾಣಿಸಿಕೊಂಡಾಗ ಶಿವನು ಅವಳಿಗೆ ಪರವಶನಾದನು. ಆಗ ವಿಷ್ಣು ನಿಜರೂಪದಲ್ಲಿ ಕಾಣಿಸಿಕೊಂಡು ಈ ಅತಿಶಯ ರೂಪ ದೇವಿಯ ಕೃಪೆಯಿಂದ ಆದುದು ಎಂದನು. ಇದು ಇನ್ನೊಂದು ಐತಿಹ್ಯ. (ಉ–ಪು. ೧೫–೧೬)

೩. **ಪ್ರಣತಜನಸೌಭಾಗ್ಯಜನನೀಂ**

(ಭಕ್ತಿಯಿಂದ ನಮಿಸಿದ ಮಾತ್ರದಿಂದಲೇ ಸೌಭಾಗ್ಯ ನೀಡುವವಳು ದೇವಿ)

ಭಕ್ತಿಯಿಂದ ತ್ರಿಕರಣಪೂರ್ವಕ ನಮಿಸಿದವರಿಗೆ ದೇವಿಯು ಸೌಭಾಗ್ಯ, ಸುಭಗತ್ವ, ಸಾರೂಪ್ಯ, ಸೌಶೀಲ್ಯಾದಿ ಭಾಗ್ಯಗಳನ್ನು ನೀಡುತ್ತಾಳೆಂದು ಮಾರ್ಕಂಡೇಯ ಪುರಾಣದಲ್ಲಿ ಹೇಳಲಾಗಿದೆ. ಮಾರ್ಕಂಡೇಯ ಪುರಾಣದಲ್ಲಿ ಈ ಮಾತುಗಳಿವೆ:


ಸ್ತುತಾ ಸಂಪೂಜಿತಾ ಪುಷ್ಪೈರ್ಧೂಪ ಗಂಧಾದಿಭಿಸ್ತಥಾ
ದದಾತಿ ವಿತ್ತಂ ಪುತ್ರಾಂಶ್ಚ ಮತಿಂ ಧರ್ಮೇ ತಥಾ ಶುಭಂ
ಸಾ ಚಿಂತಿತಾಚ ವಿಜ್ಞಾನಂ ತುಷ್ಟಾ ಬುದ್ಧಿಂ ಪ್ರಯಚ್ಛತಿ
ಆರಾಧಿತಾ ನೈವ ನೃಣಾಂ ಭೋಗ ಸ್ವರ್ಗಾಪವರ್ಗದಾ
ಶರಣಾಗತ ದೀನಾರ್ತ ಪರಿತ್ರಾಣಪರಾಯಣಾಃ
ಸರ್ವಸ್ಯಾರ್ತಿ ಹರೇ ದೇವಿ ನಾರಾಯಣೀ ನಮೋಸ್ತುತೆ

೪. **ರತಿನಯನಲೇಹ್ಯೇನ ವಪುಷಾ**

ರತಿಯ ನೇತ್ರಗಳಿಗೆ ಮಾತ್ರ ಕಾಣುವ ಸುಂದರ ದೇಹ ಹೊಂದಿದವನು ಮನ್ಮಥ.

ಶಿವನು ತನ್ನ ಮೂರನೇ ಕಣ್ಣಿನಿಂದ ಮನ್ಮಥನನ್ನು ದಹಿಸಿದ ಮೇಲೆ ರತಿದೇವಿ ದುಃಖದಿಂದ ದೇವಿಗೆ ಮೊರೆ ಹೋದಳು. ದೇವಿಯು ರತಿಗೆ ಮಾತ್ರ ಸುಂದರವಾಗಿ ಕಾಣುವ ದೇಹ ಸೌಂದರ್ಯವನ್ನು ಮನ್ಮಥನಿಗೆ ಕರುಣಿಸಿದಳು. ಉಳಿದವರಿಗೆ ಅವನು ಅನಂಗವಾಗಿಯೇ ಉಳಿದನು. (ಶೇ–ಪು ೧೪)

ಯಂತ್ರಾರಾಧನೆ : ಶ್ಲೋಕ ೫



ಯಂತ್ರರಚನೆ : ತಾಮ್ರದ ತಗಡಿನಲ್ಲಿ ಯಂತ್ರವನ್ನು ಬರೆಯಬೇಕು. ಮೂಲೆಗಳಲ್ಲಿ ಎರಡೆರಡು ತ್ರಿಶೂಲಗಳಿರುವಂತೆ ಸಮಚತುರಶ್ರ ಲೇಖನವಿರಬೇಕು. ಬೀಜಾಕ್ಷರಗಳನ್ನು ಒಳಗೊಂಡಿರಬೇಕು. ಅರಿಶಿನ ಪುಡಿಯ ಮೇಲೂ ಯಂತ್ರವನ್ನು ರಚಿಸಬಹುದು.

ಪೂಜೆ : ವಾಯವ್ಯ ದಿಕ್ಕಿಗೆ ಅಭಿಮುಖವಾಗಿ ಕುಳಿತು ಪೂಜಿಸಬೇಕು. ಪೂರ್ವಾಭಿಮುಖವಾಗಿಯೂ ಕೂತು ಪೂಜಿಸಬಹುದು.

ನೈವೇದ್ಯ : ಹೆಸರುಬೇಳೆ ಬೆಲ್ಲದ ಹುಗ್ಗಿಯ ಪಾಯಸ, ಜೇನುತುಪ್ಪ, ತೆಂಗಿನಕಾಯಿ

ಜಪ : ಪ್ರತಿದಿನ ೨೦೦೦ ಅಥವಾ ೧೦೦೧ ಸಲ ಜಪವನ್ನು ೧೨ ದಿನಗಳು ಅಥವಾ ೮ ದಿನಗಳು ಅನುಷ್ಠಾನ ಮಾಡಬೇಕು.

ಫಲ : **ಸ್ತ್ರೀಯರಿಗೆ ಪುರುಷರ ವಶೀಕರಣ ಮತ್ತು ಸಕಲಜನ ಸಂಮೋಹನ.**

ಶ್ಲೋಕ ೬
ದೇವಿಯ ಕೃಪಾ ಪ್ರಭಾವ

ಧನುಃ ಪೌಷ್ಪಂ ಮೌರ್ವೀ ಮಧುಕರಮಯೀ ಪಂಚ ವಿಶಿಖಾಃ
ವಸಂತಸ್ಸಾಮಂತೋ ಮಲಯಮರುದಾಯೋಧನರಥಃ ।
[1]ತಥಾಪ್ಯೇಕಸ್ಸರ್ವಂ ಹಿಮಗಿರಿಸುತೇ ಕಾಮಪಿ ಕೃಪಾಂ
ಅಪಾಂಗಾತ್ತೇ ಲಬ್ಧ್ವಾ ಜಗದಿದಮನಂಗೋ ವಿಜಯತೇ ॥ ೬ ॥

ಪಾಠಾಂತರ

೧. (ತಥಾಪ್ಯೇಕಃ) = ತಥಾಽಪ್ಯೇಕಃ (೭)

ಪದವಿಭಾಗ

ಧನುಃ, ಪೌಷ್ಪಂ, ಮೌರ್ವೀ, ಮಧುಕರಮಯೀ, ಪಂಚ, ವಿಶಿಖಾಃ, ವಸಂತಃ, (ಸಾಮಂತೋ) ಸಾಮಂತಃ, (ಮಲಯಮರುದಾಯೋಧನರಥಃ) = ಮಲಯ ಮರುತ್ + ಆಯೋಧನರಥಃ, (ತಥಾಪ್ಯೇಕಃ) = ತಥಾ + ಅಪಿ + ಏಕಃ, ಸರ್ವಂ, ಹಿಮಗಿರಿಸುತೇ, (ಕಾಮಪಿ) = ಕಾಮ್ + ಅಪಿ, ಕೃಪಾಂ, (ಅಪಾಂಗಾತ್ತೇ) = ಅಪಾಂಗಾತ್ + ತೇ, ಲಬ್ಧ್ವಾ, (ಜಗದಿದಮನಂಗೋ) = ಜಗತ್ + ಇದಂ + ಅನಂಗಃ. ವಿಜಯತೇ.

ಅನ್ವಯಾರ್ಥ

(ಹೇ) ಹಿಮಗಿರಿಸುತೇ	ಎಲೈ ಹಿಮವಂತನ ಮಗಳೇ (ಪಾರ್ವತಿಯೇ)
(ಯಸ್ಯಾನಂಗಸ್ಯ)	(ಯಾವ–ಮನ್ಮಥನ)
ಧನುಃ ಪೌಷ್ಪಂ	ಬಿಲ್ಲು ಪುಷ್ಪಮಯವಾಗಿಯೂ
ಮೌರ್ವೀ ಮಧುಕರಮಯೀ	ಹೆಡೆಯು ಭ್ರಮರಗಳಿಂದ ಕೂಡಿ
ವಿಶಿಖಾಃ ಪಂಚ	ಬಾಣಗಳು ಐದಾಗಿಯೂ
ಸಾಮಂತಃ ವಸಂತಃ	ಮಂತ್ರಿಯು ಮಿತ್ರ ವಸಂತ ಋತುವಾಗಿಯೂ
ಆಯೋಧನ ರಥಃ	ಯುದ್ಧದ–ರಥವು

ಮಲಯ ಮರುತ್ (ಸಂತಿ)	ಮಲಯ ಪರ್ವತದ ಗಾಳಿಯಾಗಿಯೂ ಇದೆಯೋ
ತಥಾಪಿ	ಹಾಗಿದ್ದರೂ
ಅನಂಗಃ	ಮನ್ಮಥನು
ಏಕಃ	ಒಬ್ಬನೇ (ಮತ್ತೊಬ್ಬರ ಸಹಾಯವನ್ನು ಅಪೇಕ್ಷಿಸದೆ)
ತೇ ಅಪಾಂಗಾತ್	ನಿನ್ನ ಕಟಾಕ್ಷ ದೆಸೆಯಿಂದ (ಉಂಟಾದ)
ಕಾಮಪಿ	ಹೀಗೆಂದು ಹೇಳುವುದಕ್ಕೆ ಅಸಾಧ್ಯವಾದ
ಕೃಪಾಂ ಲಬ್ಧ್ವಾ	ದಯೆಯನ್ನು ಹೊಂದಿ
ಇದಂ ಸರ್ವಂ ಜಗತ್	ಈ ಎಲ್ಲಾ ಜಗತ್ತನ್ನು
ವಿಜಯತೇ	ಜಯಿಸುತ್ತಾನೆ

ತಾತ್ಪರ್ಯ

ಓ! ಹಿಮಗಿರಿಪುತ್ರಿಯೇ! ಮನ್ಮಥನ ಬಿಲ್ಲು ಪುಷ್ಪಮಯವಾಗಿದೆ; ಹೆದೆಯು ಭ್ರಮರಗಳಿಂದ ಕೂಡಿದೆ; ಬಾಣಗಳು ಕೇವಲ ಐದು ಇವೆ; ಸಾಮಂತನು (ಮಂತ್ರಿಯು) ವಸಂತನಾಗಿದ್ದಾನೆ; ಯುದ್ಧದ ರಥವು ಮಲಯ ಪರ್ವತದ ಮಾರುತವಾಗಿದೆ; ಹಾಗಿದ್ದರೂ ಮನ್ಮಥನು ಸ್ವಯಂ ಶರೀರರಹಿತನಾಗಿದ್ದಾನೆ. ಇಂಥ ಮನ್ಮಥನು ಅಸಹಾಯಶೂರನಾಗಿ ನಿನ್ನ ಕಟಾಕ್ಷದ ದಯೆಯಿಂದ ಈ ಜಗತ್ತೆಲ್ಲವನ್ನೂ ಜಯಿಸುತ್ತಾನೆ.

ಪದ್ಯಾನುವಾದ

ಹಿಮಗಿರಿಸುತೇ! ಬಿಲ್ಲು ಹೂವಿನದು, ಆ ಹೆದೆಯೊ
ತುಂಬಿಯಿಂದಾಗಿಹುದು, ಬಾಣವೈದೇ ಐದು,
ಸಾಮಂತನು ವಸಂತ, ಮಲಯಮಾರುತರಥ, ಯುದ್ಧಮಾಡುವನನಂಗ;
ಅಲ್ಲದೆಯುಮೇಕಾಕಿ; ಇಂತಿರಲ್ಕವನಿರವು,
ನಿನ್ನಯ ಕೃಪಾಮಯ ಕಟಾಕ್ಷವೀಕ್ಷಣಮಹಿಮೆ-
ಯಿಂದವನು ಬಲವಡೆದು ಯೀಜಗವನೆಲ್ಲವನು ಗೆಲ್ಲುತಿಹನಲ್ತೆ ತಾಯೇ
॥ ೬ ॥

ಟಿಪ್ಪಣಿಗಳು

೧. **ವಸಂತ**

ವಸಂತ ಋತುವೆಂಬ ಕಾಲ ವಿಶೇಷ. ಒಂದು ಋತುವಿಗೆ ೨ ಮಾಸಗಳು, ಮಧು (ಚೈತ್ರ) ಮಾಸ ಮತ್ತು ಮಾಧವ (ವೈಶಾಖ) ಮಾಸಗಳಿಗೆ ವಸಂತ ಋತು ಎನ್ನುತ್ತಾರೆ.

೨. **ಅನಂಗಃ ಏಕಃ**

ಲೋಕದಲ್ಲಿ ಮನ್ಮಥನು ಎಲ್ಲರನ್ನೂ ಗೆಲ್ಲುವ ಶೂರ ಎನ್ನುತ್ತಾರೆ. ಆದರೆ ಅವನು ಒಂಟಿ, ಅಸಹಾಯಕ ಆಗಿದ್ದಾನೆ. ಏಕೆಂದರೆ ಅವನ ಬಿಲ್ಲು ಹೂವಿನಿಂದ ಆಗಿರುವುದರಿಂದ ಮೃದುವಾದ್ದರಿಂದ ಗಟ್ಟಿ ಬಿಲ್ಲಿನ ಹಾಗೆ ಎಳೆಯುವುದು, ಬಗ್ಗಿಸುವುದು ಮೊದಲಾದ ಕಾರ್ಯಗಳು ಸಾಧ್ಯವಿಲ್ಲ. ಬಿಲ್ಲಿನ ಹೆದೆ (ಹಗ್ಗ) ದುಂಬಿಗಳ ಸಾಲಿನಿಂದ ಕೂಡಿರುವುದರಿಂದ ಎಳೆಯುವ ಹಗ್ಗವಾಗದು. ಇನ್ನು ಬಿಡುವ ಪಂಚಬಾಣಗಳು ಮೃದು ಹೂಗಳಾಗಿರುವುದರಿಂದ ಅವು ಯಾವ ಘಾತವನ್ನೂ ಉಂಟುಮಾಡುವುದಿಲ್ಲ. ಇನ್ನು ವಸಂತ ಋತು ಸದಾ ಇರುವುದಿಲ್ಲವಾಗಿ ಸಕಾಲಕ್ಕೆ ಒದಗದ ಸಚಿವನಂತಾಗಿದೆ. ದಕ್ಷಿಣಮಾರುತ (ಮಲಯಮಾರುತ) ಎಲ್ಲೆಡೆ ಇರುವುದಿಲ್ಲ. ಅದು ಆಕಾರರಹಿತವಾದುದರಿಂದ ತನ್ನಿಷ್ಟದಂತೆ ಚಲಿಸಬಲ್ಲ ರಥ ಅದಲ್ಲ. ಹೀಗಾಗಿ ಮನ್ಮಥನು ಲೋಕಯೋಧನಾಗಿಲ್ಲ (ಅಸಹಾಯಕನಾಗಿದ್ದಾನೆ). (ಇನ್ನು ಅನಂಗನಾದ್ದರಿಂದ ಬಿಲ್ಲನ್ನು ಹಿಡಿಯುವುದು, ಬಾಣ ಬಿಡುವುದು ಇತ್ಯಾದಿ ಮಾಡಲು ಸಾಧ್ಯವಿಲ್ಲ. ಹೀಗಾಗಿ ಒಂಟಿಯಾಗಿದ್ದಾನೆ.) ಆದರೆ ನಿನ್ನ ದಯೆಯಿಂದ ಲೋಕದಲ್ಲಿ ವಿಜಯಿ ಆಗಿದ್ದಾನೆ.

೩. **ಧನುಃ ಪೌಷ್ಪಂ**

ಮನ್ಮಥನ ಧನುಸ್ಸನ್ನು ಇಕ್ಷುದಂಡ (ಕಬ್ಬಿನ ಜಲ್ಲೆ) ಎನ್ನುತ್ತಾರೆ. ಆದರೆ ಇಲ್ಲಿ ಹೂಬಿಲ್ಲು ಎಂದು ಹೇಳಲಾಗಿದೆ. ಮನ್ಮಥನ ಬಿಲ್ಲಿನ ಹೆಸರು ಪೌಂಡ್ರ.

(ಪೋ-ಮು೨೭)

೪. **ಪಂಚವಿಶಿಖಾಃ**

ಅರವಿಂದ, ಅಶೋಕ, ಚೂತ, ನವಮಲ್ಲಿಕ, ನೀಲೋತ್ಪಲ ಎಂಬುದು ಪಂಚಬಾಣಗಳ ಹೆಸರು. ಇವುಗಳನ್ನು ಮಂತ್ರಪೂರಿತವಾಗಿ ಪ್ರಯೋಗಿಸಿದಾಗ ಅವು ಕ್ರಮವಾಗಿ ಉನ್ಮಾದ, ತಾಪಸ, ಕ್ರೋಧ, ಸ್ತಂಭ, ಸಮ್ಮೋಹಗಳನ್ನು ಉಂಟುಮಾಡುತ್ತವೆ. ಆದ್ದರಿಂದ ಈ ಹೆಸರುಗಳು ಪಂಚಬಾಣಗಳಿಗೆ ಅನ್ವಯಿಸುತ್ತವೆ. ಮನ್ಮಥನ ಲೋಕದ ಹೆಸರು 'ಅರ್ಚಿತ', ಮನ್ಮಥನ ಪದ್ಮವು ಸಾವತಂಸ, ಮನ್ಮಥನ ಶಂಖದ ಹೆಸರು 'ವಿಲಾಸ'

(ಪ-ಪುಟ ೧೪೦)

೫. **ಮೌರ್ವೀ ಮಧುಕರಮಯೀ**

ಬಿಲ್ಲಿನ ಹಗ್ಗ (ಹೆದೆ) ಬಲವಾದ ನಾರಿನಿಂದ ಹೆಣೆದಿರುತ್ತದೆ. ಆದರೆ ಇಲ್ಲಿ ದುಂಬಿಗಳೇ ಸಾಲುಗಟ್ಟಿ ಬಿಲ್ಲಿನ ಹಗ್ಗವಾಗಿವೆ. ಒಂದಕ್ಕೊಂದು ಬಂಧವಿಲ್ಲ. ಹೆದೆಗೆ ಬಾಣ ಸೇರಿಸಿ ಎಳೆದು ಬಿಡಲಾಗದು.

೬. **ಅಪಾಂಗಾತ್ತೇ ಲಬ್ಧ್ವಾ**

ಜಗನ್ಮಾತೆಯ ಕೃಪಾಕಟಾಕ್ಷಕ್ಕೆ (ಕಡೆಗಣ್ಣೋಟ) ಪಾತ್ರನಾದ ಮನ್ಮಥನು, ತನ್ನ ಬಿಲ್ಲು ಬಾಣ ರಥ ಸಾರಥಿ ಮೊದಲಾದ ಸಾಧನಗಳು ಪ್ರಯೋಗಿಸಲು ವ್ಯರ್ಥವಾಗಿ ಅನಂಗನಾಗುತ್ತಾನೆ. ಆದರೆ ದೇವಿಯ ಕಡೆಗಣ್ಣೋಟದ ದಯೆಯಿಂದ ಸರ್ವಜಗತ್ತನ್ನು ಜಯಿಸಬಲ್ಲ ಶಕ್ತಿವಂತನಾಗಿರುತ್ತಾನೆ. ಇದು ದೇವಿಯ ಹಿರಿಮೆ.

೭. **ಪಠಣಫಲದ ಅಂತರಾರ್ಥ**

ಈ ಸ್ತೋತ್ರದ ಪಠಣಫಲವನ್ನು ಕುರಿತು ಷಂಡತ್ವ ನಿವಾರಣೆ ಮತ್ತು ಉತ್ತಮ ಸಂತಾನಪ್ರಾಪ್ತಿ ಎಂದು ಹೇಳಲಾಗಿದೆ. "ಷಂಡತ್ವ ಅಥವಾ ನಪುಂಸಕತ್ವ" ಎಂದರೆ ಸಂತಾನೋತ್ಪತ್ತಿ ಮಾಡಲು ಶಕ್ತಿಹೀನತೆ ಎಂದರ್ಥವಲ್ಲ. ಕೆಲವರು ಸ್ತ್ರೀ ಪುರುಷರಿಗೆ ಸುಮ್ಮನೆ ನಿರಾಸೆ, ನಿಸ್ಪೃಹತೆ, ತಾವು ಏನನ್ನೂ ಸಾಧಿಸಲಾರೆವು ಎನ್ನುವ ಆತ್ಮನ್ಯೂನತಾಭಾವವಿರುತ್ತದೆ. ಅವರ ಹೃದಯದಲ್ಲಿ ತಾವು ಎಂದೆಂದಿಗೂ ಕೆಲಸಕ್ಕೆ ಬಾರದವರಾಗಿ ಯಾವ ಕೆಲಸವನ್ನೂ ಮಾಡಲಾರೆವು ಎಂದಾಗಿ ಒಂದು ತರಹೆಯ

ಕೀಳರಿಮೆ (ಇನ್‌ಫಿರಿಯಾರಿಟಿ ಕಾಂಪ್ಲೆಕ್ಸ್) ಇರುತ್ತದೆ. ಈ ಭಾವವನ್ನು ನಪುಂಸಕತ್ವ ಎಂದು ಕರೆಯಬಹುದು.

ಇಂಥವರಿಗೆ ಆತ್ಮವಿಶ್ವಾಸ ನೀಡಿ ತಾವು ಯಾವುದೇ ಕೆಲಸ ಮಾಡಬಲ್ಲೆವು ಎಂಬ ಆತ ವಿಶ್ವಾಸವನ್ನು (ದೃಢತೆಯನ್ನು) ಈ ಶ್ಲೋಕದ ಪುರಶ್ಚರಣ ನೀಡುತ್ತದೆ. ಇದೇ ಷಂಡತ್ವ ನಿವಾರಣೆ. ಇನ್ನು ಒಳ್ಳೆಯದನ್ನು ಮಾಡಬೇಕೆನ್ನುವ ಒಂದುಭಾವವುಂಟಾಗುವುದೇ ಉತ್ತಮ ಪುತ್ರಪ್ರಾಪ್ತಿಗೆ ಸಮವಾದ ಸಂಗತಿಯಾಗಿದೆ.

(ಪ–ಪುಟ ೪೨)

೧೦. "ದೇವಿಗೆ ಹೋಲಿಕೆ ಮಾಡಿ ಹೇಳುವ ಮಾತಿದು: ದೇವಿಯ ಮನಸ್ಸೇ ಬಿಲ್ಲು, ಪಂಚತನ್ಮಾತ್ರೆಗಳೇ ಬಾಣಗಳು. ಈ ಬಾಣಗಳು ಸ್ಥೂಲ, ಸೂಕ್ಷ್ಮ ಪರ ಎಂದು ಮೂರು ವಿಧ. ಸ್ಥೂಲವು ಪುಷ್ಪಮಯ ಸೂಕ್ಷ್ಮವು ಮಂತ್ರರೂಪ; ಪರ ವಾಸನಾಮಯ, ಕಮಲ, ಕೈರವ, ಕಲ್ಹಾರ, ಇಂದೀವರ, ಮಾವಿನಹೂ ಮಾತ್ರ ಪಂಚಬಾಣಗಳು, ಇವು ಮಂತ್ರಯುಕ್ತವಾದಾಗ ಹರ್ಷಣ, ರೋಚನ, ಮೋಹನ, ಶೋಷಣ, ಮಾರಣ ಎಂಬ ಪಂಚಾಸ್ತ್ರಗಳಾಗುವುವು. ಕೆಲವರು ಕ್ಷೋಭಣ, ದ್ರಾವಣ, ಆಕರ್ಷಣ, ವಶ್ಯ, ಉನ್ಮಾದ ಎಂಬುದನ್ನು ಪಂಚಬಾಣಗಳೆಂದು ಹೇಳುತ್ತಾರೆ.


(ಶ್ರೀ–ಪು ೩೧)

೧೧. **ವಿಭಾವನಾಲಂಕಾರ**

ಈ ಶ್ಲೋಕದಲ್ಲಿ ವಿಭಾವನಾಲಂಕಾರವಿದೆ. ಇದರ ಲಕ್ಷಣ ಹೀಗಿದೆ. (ಕಾರಣೇನ ವಿನಾ ಅಪಿಕಾರ್ಯೋತ್ಪತ್ತಿಃ = ಕಾರಣವು ಇಲ್ಲದಿದ್ದರೂ ಕಾರ್ಯವು ಉಂಟಾಗುವುದು). ಈ ಶ್ಲೋಕದಲ್ಲಿ ಮನ್ಮಥನು ವಿಜಯಿಯಾಗಲು ಅವನಿಗೆ ರಥ, ಬಾಣ, ಬಿಲ್ಲು ಇತ್ಯಾದಿ ಬೇಕಾಗಿದೆ. ಆ ಸಾಧನೋಪಕರಣಗಳಿಲ್ಲದೆ (ಇರುವ ಸಾಧನಗಳು ಉಪಯುಕ್ತ ವಾಗಿಲ್ಲ) ಇದ್ದರೂ ಮನ್ಮಥನು ದೇವಿಯ ಕೃಪಾಕಟಾಕ್ಷದಿಂದ ವಿಜಯ ಸಾಧಿಸುತ್ತಾನೆ. ಆದ್ದರಿಂದ ಇಲ್ಲಿ ವಿಭಾವನಾಲಂಕಾರ ಇದೆ.

(ಶೇ–ಪು ೧೮)

ಯಂತ್ರಾರಾಧನೆ : ಶ್ಲೋಕ ೬



ಯಂತ್ರ ರಚನೆ : ಚಿನ್ನದ ತಗಡಿನಲ್ಲಿ ಸಮ ಚತುರಶ್ರಾಕಾರ ರಚಿಸಬೇಕು. ಅದರ ಮೂಲೆಗಳಲ್ಲಿ ಎರಡೆರಡರಂತೆ ೮ ತ್ರಿಶೂಲಗಳಿರಬೇಕು.

ಪೂಜೆ : ಪೂರ್ವಾಭಿಮುಖವಾಗಿ ಮಣೆ ಅಥವಾ ಚಾಪೆ ಮೇಲೆ ಕುಳಿತು ಮಲ್ಲಿಗೆ ಅಥವಾ ಸಂಪಿಗೆ ಹೂಗಳಿಂದ ಲಲಿತಾತ್ರಿಶತಿ ಅರ್ಚನೆ ಮಾಡಬೇಕು.

ನೈವೇದ್ಯ : ಕಬ್ಬು, ಪಾಯಸ, ತಾಂಬೂಲಾದಿಗಳನ್ನು ಅರ್ಪಿಸಬೇಕು.

ಜಪ : ಪ್ರತಿದಿನ ೫೦೦ ಬಾರಿ ೨೧ ದಿನಗಳ ಕಾಲ ಶ್ಲೋಕವನ್ನು ಜಪಿಸಬೇಕು.

ಫಲ : **ಷಂಡತ್ವ ನಿವಾರಣೆ ಮತ್ತು ಉತ್ತಮ ಸಂತಾನ ಪ್ರಾಪ್ತಿ**

ಶ್ಲೋಕ ೭

ದೇವಿಯ ದಿವ್ಯಮೂರ್ತಿ ಸ್ಮರಣೆ

ಕ್ವಣತ್ಕಾಂಚೀದಾಮಾ ಕರಿಕಲಭಕುಂಭ[೧]ಸ್ತನನತಾ
ಪರಿಕ್ಷೀಣಾ ಮಧ್ಯೇ ಪರಿಣತಶರಚ್ಚಂದ್ರವದನಾ ।
ಧನುರ್ಬಾಣಾನ್ ಪಾಶಂ ಸೃಣಿಮಪಿ ದಧಾನಾ ಕರತಲೈಃ
ಪುರಸ್ತಾದಾಸ್ತಾಂ ನಃ ಪುರಮಥಿತುರಾಹೋ ಪುರುಷಿಕಾ ॥ ೭ ॥

ಪಾಠಾಂತರ

೧. (ಸ್ತನಗತಾ) ಸ್ತನಭರಾ (ಸು) (ತು)

ಪದವಿಭಾಗ

(ಕ್ವಣತ್ಕಾಂಚೀದಾಮಾ)= ಕ್ವಣತ್ + ಕಾಂಚೀದಾಮಾ, ಕರಿಕಲಭಕುಂಭಸ್ತನನತಾ, ಪರಿಕ್ಷೀಣಾ, ಮಧ್ಯೇ, (ಪರಿಣತ ಶರಚ್ಚಂದ್ರವದನಾ) = ಪರಿಣತಶರತ್ + ಚಂದ್ರವದನಾ, (ಧನುರ್ಬಾಣಾನ್) = ಧನುಃ + ಬಾಣಾನ್, ಪಾಶಂ, (ಸೃಣಿಮಪಿ)=ಸೃಣಿಂ+ಅಪಿ, ದಧಾನಾ, ಕರತಲೈಃ, (ಪುರಸ್ತಾದಾಸ್ತಾಂ) = ಪುರಸ್ತಾತ್+ಆಸ್ತಾಂ, ನಃ, (ಪುರಮಥಿತುರಾಹೋ) = ಪುರಮಥಿತುಃ+ಆಹೋ, ಪುರುಷಿಕಾ.

ಅನ್ವಯಾರ್ಥ

ಕ್ವಣತ್ಕಾಂಚೀದಾಮಾ	ಧ್ವನಿಮಾಡುವ-ನಡುವಿನ ಡಾಬುಳ್ಳ
ಕರಿಕಲಭ ಕುಂಭಸ್ತನನತಾ	೨೦ ವರ್ಷದ ಆನೆಯ-ಕುಂಭ ಸ್ಥಳದಂತಿರುವ ಸ್ತನಗಳಿಂದ-ಸ್ವಲ್ಪ ಬಾಗಿರುವ
ಮಧ್ಯೇ ಪರಿಕ್ಷೀಣಾ	ನಡುವಿನಲ್ಲಿ ಕೃಶಳಾದ
ಪರಿಣತಶರಚ್ಚಂದ್ರವದನಾ	ಸಂಪೂರ್ಣನಾದ-ಶರತ್ಕಾಲದ ಚಂದ್ರನ ಹಾಗೆ-ಮುಖವುಳ್ಳ
ಧನುಃ	ಬಿಲ್ಲನ್ನೂ
ಬಾಣಾನ್	ಬಾಣಗಳನ್ನೂ
ಪಾಶಂ	ಹಗ್ಗವನ್ನೂ
ಸೃಣಿಮಪಿ	(ಸೃಣಿಂ+ಅಪಿ) ಅಂಕುಶವನ್ನೂ ಕೂಡ

ಕರತಲೈಃ	(ನಾಲ್ಕು) ಕೈಗಳಿಂದಲೂ
ದಧಾನಾ	ಧರಿಸಿಕೊಂಡಿರುವ
ಪುರಮಥಿತುಃ	ಈಶ್ವರನ (ಗರ್ವರೂಪಳಾದ)
ಆಹೋ ಪುರುಷಿಕಾ	ದೇವಿಯು ಓಹೋ !
ನಃ ಪುರಸ್ತಾತ್ ಆಸ್ತಾಂ	ನಮ್ಮಗಳ-ಮುಂದುಗಡೆಯಲ್ಲಿ- ಇರಲಿ

ತಾತ್ಪರ್ಯ

ಮೆಲುದನಿಯ ನಾದಮಾಡುವ ಕಿರಿಗೆಜ್ಜೆಯ, ರತ್ನಖಚಿತ ನಡುವಿನ ಡಾಬುಳ್ಳವಳಾಗಿದ್ದಾಳೆ; ಇಪ್ಪತ್ತು ವರುಷದ ಮರಿಯಾನೆಯ ಕುಂಭಸ್ಥಳದಂತಿರುವ ಸ್ತನಭಾರದಿಂದ ಸ್ವಲ್ಪ ಬಾಗಿರುವ ತೆಳುವಾದ ನಡುವನ್ನು ಹೊಂದಿದ್ದಾಳೆ; ಸಂಪೂರ್ಣ ಕಲೆಗಳಿಂದ ಕೂಡಿದ ಶರತ್ಕಾಲದ ಚಂದ್ರನಂತೆ ಮುಖವುಳ್ಳವಳಾಗಿದ್ದಾಳೆ; ಒಂದು ಕೈಯಲ್ಲಿ ಬಿಲ್ಲನ್ನೂ, ಇನ್ನೊಂದು ಕೈಯಲ್ಲಿ ಬಾಣಗಳನ್ನೂ, ಮೂರನೇ ಕೈಯಲ್ಲಿ ಪಾಶವನ್ನೂ, ನಾಲ್ಕನೇ ಕೈಯಲ್ಲಿ ಅಂಕುಶವನ್ನೂ ಧರಿಸಿದ್ದಾಳೆ. ಇಂಥ ತ್ರಿಪುರಾಂತಕನಾದ ರುದ್ರನ ಅಹಂಭಾವರೂಪಳಾದ ಭಗವತಿಯು ನಮ್ಮ ಹೃದಯಕಮಲದಲ್ಲಿ ಆಸೀನಳಾಗಿರಲಿ.

ಪದ್ಯಾನುವಾದ

ದನಿಗೈವ ಕಾಂಚಿಯನು ತಳೆದವಳು, ಕರಿಕಲಭ-
ಕುಂಭವನು ಪೋಲ್ವ ಕುಚಗಳ ಭಾರದಿಂದ ನಸು-
ಬಾಗಿಹಳು, ಬಡನಡುವಿನವಳು, ಶಾರದಸಮಯಪೂರ್ಣೇಂದುಸದೃಶವದನೆ,
ಬಿಲುಬಾಣಗಳನು ಪಾಶಾಂಕುಶಗಳನು ನಾಲ್ಕು
ಕೈಗಳಲಿ ಪಿಡಿದವಳು- ತ್ರಿಪುರಾಂತಕನ ಮಡದಿ
ಅವನಹಂಕಾರರೂಪಿಣಿ ನಮ್ಮ ಹೃತ್ಕಮಲಕೈತಂದು ನೆಲಸಲಲ್ಲಿ ॥ ೭ ॥

ಟಿಪ್ಪಣಿಗಳು

೧. **ಕ್ವಣತ್‌ಕಾಂಚೀದಾಮಾ**

(ಧ್ವನಿಮಾಡುವ ಡಾಬುಳ್ಳ) ಎಂಬಲ್ಲಿ ನಡುವಿನ ಡಾಬಿನ ಗೆಜ್ಜೆ ಸದ್ದು ಕುಂಡಲಿನೀ ಸಾಧಕನಿಗೆ ಆಜ್ಞಾಚಕ್ರಾನಂತರ ಕೇಳಿಸುವ ನಾದದ ಸಂಕೇತವಾಗಿದೆ.

೨. **ಪರಿಣತಶರಚ್ಚಂದ್ರವದನಾ**

(ಶರತ್ಕಾಲದ ಪೂರ್ಣಚಂದ್ರ ಹಾಗೆ ಮುಖವುಳ್ಳ) ಎಂಬಲ್ಲಿ ಸಹಸ್ರಾರ ಚಕ್ರದಲ್ಲಿ ಪರಾಶಕ್ತಿಯ ಚಂದ್ರಜ್ಯೋತಿಯನ್ನು ಸೂಚಿಸುತ್ತದೆ ಇಲ್ಲಿ.

೩. **ಆಹೋ ಪುರುಷಿಕಾ**

ಆಹೋ ಎಂಬ ಶಬ್ದವು ಆಶ್ಚರ್ಯವನ್ನು ತಿಳಿಸುತ್ತದೆ. ಪ್ರತ್ಯಗಾತ್ಮವಾಚಿಯಾದ (ಪರಮಾತ್ಮನ) ವಾಚಿಯಾದ ಪುರುಷ ಶಬ್ದವು ಅಹಂ ಶಬ್ದದಿಂದ ಸೂಚಿತವಾಗುತ್ತದೆ ಎಂದು ಲಾಕ್ಷಣಿಕವಾಗಿ ಗ್ರಹಿಸಬೇಕು ಆದುದರಿಂದ ಆಹೋ-ಅಹಂಭಾವ ಎನ್ನುವುದೇ ಆಹೋ ಪುರುಷಿಕಾ ಎಂದರೆ ಅಹಂಕಾರ ಎಂದರ್ಥ. ಆದ್ದರಿಂದ ಭಗವತಿಯು ರುದ್ರನ ಅಹಂಭಾವ ಸ್ವರೂಪಳು ಎಂದರ್ಥ. ಅಮರಕೋಶದಲ್ಲಿ "ಅಹೋ ಪುರುಷಿಕಾ ದರ್ಪಾದ್ಯಾಸ್ಯಾತ್‌ಸಂಭಾವನಾತ್ಮನಿ (ಕಾಂಡ II ಶ್ಲೋಕದಲ್ಲಿ ೫೫೬)" ಎಂದು ಹೇಳಿದೆ.

(ಶೇ-೨೦)

೪. **ಕರಿಕಲಭಃ**

ಕಲಭ! ಎಂದರೆ ಆನೆಮರಿ ೩೦ ವರುಷದ್ದು ಎಂದು ಕೋಶದಲ್ಲಿ ಹೇಳಿದೆ. ತ್ರಿಂಶಂದ್ವರ್ಷಸ್ತು ಕಲಭಃ; ಕೆಲವೆಡೆ ೨೦ ವರುಷ ಎಂದಿದೆ.

೫. **ಪಠಣಫಲ**

ಈ ಶ್ಲೋಕದ ಪಠಣಫಲ ಶತ್ರುಜಯ ಎಂದಿದೆ. ಶತ್ರುಜಯ ಎಂದರೆ, ಹೊರಗೆ ಯುದ್ಧದಲ್ಲಿ ಶತ್ರುಗಳನ್ನು ಗೆಲ್ಲವುದು ಎಂದಲ್ಲ, ನಮ್ಮಲ್ಲಿನ ಅಂತಶ್ಶತ್ರುಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳೆಂಬ ಆರು ಮಂದಿ ಶತ್ರುಗಳನ್ನು ದೇವಿಯ ಸ್ತೋತ್ರ, ಪೂಜೆ, ನಾಮ ಜಪಗಳ ಪುರಶ್ಚರಣೆಯಿಂದ ಗೆಲ್ಲುವುದು ಎಂದರ್ಥ. ನಾವು ಒಳ್ಳೆಯವರಾಗಿದ್ದರೂ ನಮ್ಮನ್ನು ಬಾಧಿಸುವ ಸಮಸ್ಯೆಗಳು, ದುಷ್ಟರ ವರ್ತನೆಗಳು ಈ ಪುರಶ್ಚರಣೆಯಿಂದ ನಾಶವಾಗುವುದು ಎಂದರ್ಥ.

೬. **ಪುರಮಥಿತುಂ**

ಈ ಪದವು ತ್ರಿಪುರಸಂಹಾರಿಯಾದ ಈಶ್ವರನನ್ನು ಸೂಚಿಸುವುದರ ಜತೆಗೆ ಸಾರಭೂತವಾದ ಐಂ, ಕ್ಲೀಂ, ಸೌಃ ಎಂಬ ಬೀಜಾಕ್ಷರಗಳನ್ನು ಸಂಕೇತಿಸುತ್ತದೆ. ತ್ರಿಪುರಾಮಾತೃಕವಾದ ಈ ಮೂರನ್ನು ಧರಿಸಿ ಶಿವನು ಲೋಕಪ್ರಕಾಶಗೊಳಿಸಿದನೆಂದು ಹೇಳಲಾಗಿದೆ.

೭. **ಧನುರ್ಬಾಣಾನ್ ಪಾಶಂ ಸೃಣಿಮಪಿ ದಧಾನಾ ಕರತಲೈಃ**

ದೇವಿ ಚತುರ್ಭುಜಳು. ಆಕೆ ತನ್ನ ಕೆಳ ಎಡದ ಕೈಯಲ್ಲಿ ದುಂಬಿಗಳ ಹೆದೆಯುಳ್ಳ ಕಬ್ಬಿನ ಜಲ್ಲೆಯ ಬಿಲ್ಲನ್ನು, ತನ್ನ ಮೇಲಿನ ಎಡಗೈಯಲ್ಲಿ ಹವಳದಂತೆ ಹೊಳೆಯುವ ಪಾಶವನ್ನು, ಮೇಲಿನ ಬಲಗೈಯಲ್ಲಿ

ಅರ್ಧಚಂದ್ರಾಕೃತಿಯಲ್ಲಿ ಹೊಳೆವ ಅಂಕುಶವನ್ನು, ಕೆಳಗಿನ ಬಲಗೈಯಲ್ಲಿ ಪಂಚ ಪುಷ್ಪ ಬಾಣಗಳನ್ನು (ಕಮಲ, ರಕ್ತಕೈರವ, ಕಲ್ಹಾರ, ಇಂದೀವರ, ಸಹಕಾರ ಎಂಬ ಪಂಚಪುಷ್ಪಗಳು) ಧರಿಸಿದ್ದಾಳೆ.

ಮೇಲಿನ ವರ್ಣನೆ ದೇವಿಯ ಸ್ಥೂಲರೂಪವನ್ನು ಹೇಳುತ್ತದೆ. ದೇವಿಯು ಚತುರ್ಭುಜಗಳಲ್ಲಿ ಧರಿಸಿರುವ ಆಯುಧಗಳು ಮಂತ್ರಮೂಲವಾದ ಸೂಕ್ಷ್ಮರೂಪಕ್ಕೂ ಸಾಕ್ಷಿಯಾಗಿವೆ. ಬಿಲ್ಲು, ದಂ ಬೀಜಾಕ್ಷರವನ್ನೂ ಪಂಚಬಾಣಗಳು (ದ್ರಾಂ, ದ್ರೀಂ, ಕ್ಲೀಂ, ಬ್ಲೂಂ, ಸೌಃ ಎಂಬ ೫ ಬೀಜಾಕ್ಷರಗಳನ್ನೂ) ಸೂಚಿಸುತ್ತವೆ. ದೇವಿಯ ಪರಾರೂಪವನ್ನು ಬಿಲ್ಲು (ಮನಸ್ಸು) ಪಂಚಬಾಣಗಳು (ಪಂಚತನ್ಮಾತ್ರೆಗಳು) ಪಾಶ (ಮನೋ ವಿಕಾರ) ಅಂಕುಶ (ಕೋಪ)ವನ್ನು ಸೂಚಿಸುವುವು. ಹೀಗೆ ದೇವಿಯು ಚತುರ್ಭುಜಗಳಲ್ಲಿ ಧರಿಸಿರುವ ಆಯುಧಗಳು ಸ್ಥೂಲ, ಸೂಕ್ಷ್ಮ ಪರಾ ಸ್ವರೂಪವುಳ್ಳದ್ದಾಗಿವೆ.

(ಶ್ರೀ–ಪುಟ ೩೪)

೮. ಶ್ಲೋಕ ೭ರಲ್ಲಿ ಚತುರ್ಭುಜಳಾದ ದೇವಿಯ ವರ್ಣನೆಯನ್ನು ಸಗುಣ ರೂಪದಲ್ಲಿ ವರ್ಣಿಸಿದೆ. ಹೊರನೋಟಕ್ಕೆ ಇದು ನಿಜವೆನಿಸಿದರೂ, ಮನುಷ್ಯ ಆಕಾರದಂತೆ ಕೈಗಳ, ಆಯುಧಗಳ ವರ್ಣನೆ ಅಲ್ಲ. ಸೀಮಿತ ಶಕ್ತಿಯ ಪ್ರತೀಕವಲ್ಲ. ದೇವಿಯ ಸ್ವರೂಪ ಅಪರಿಮಿತ, ಅಗಾಧ; ಮಾನವನ ಅರಿವಿಗೆ ಎಟುಕಲು, ದೇವಿಯು ಚತುರ್ಭುಜಳಾಗಿ ವರ್ಣಿತಳಾಗಿದ್ದಾಳೆ. ಏಕೆಂದರೆ ಭಕ್ತರಿಗೆ ದೇವಿಯ ಸಹಸ್ರಾರು ಬಾಹುರೂಪವನ್ನು ನೋಡಲು ಶಕ್ಯವಿಲ್ಲ. ಭಗವದ್ಗೀತೆಯಲ್ಲಿ ಅರ್ಜುನನೂ ಕೂಡ ಕೃಷ್ಣನನ್ನು ಸಹಸ್ರ ಬಾಹುಗಳಲ್ಲಿ ವಿಶ್ವರೂಪ ನೋಡುವುದಕ್ಕಿಂತ ಚತುರ್ಭುಜಗಳಲ್ಲಿ ನಿನ್ನನ್ನು ನೋಡಲು ಇಚ್ಛಿಸುತ್ತೇನೆ ಎನ್ನುತ್ತಾನೆ.
(ಅಧ್ಯಾಯ ೧೧ ಶ್ಲೋಕ ೪೬ ಭಗವದ್ಗೀತೆ).

(ಶ್ರೀ–ಪುಟ ೩೫)

'ತ್ರಿಪುರಮಥನದ ಅರ್ಥ–ನಮ್ಮಲ್ಲಿಯೇ ಇರುವ ಮೂರು ಶರೀರಗಳ ಮಥನ ಎಂದೇ. ಈ ದೇಹಗಳನ್ನು ಸ್ಥೂಲ, ಸೂಕ್ಷ್ಮ, ಕಾರಣ ಅಥವಾ ಶಕ್ತಿಕಾಯ ಎನ್ನುತ್ತಾರೆ ಈ ಮೂರು ಶರೀರಗಳಾಚೆಗೂ ನಮ್ಮ 'ಅಸ್ಮಿತೆ' ಇದೆ, ಹಬ್ಬಿದೆ. ಅದರ ಅರಿವಾಗಬೇಕಾಗಿದೆ. ಈ ತ್ರಿಪುರ ಮಥನಕ್ಕೆ ಬೇಕಾದ ಆಯುಧಗಳು ನಮ್ಮಲ್ಲೇ ಇವೆ. ನಮ್ಮೊಳಗೇ ಒಂದು ಆಯುಧಾಗಾರವಿದೆ. ಅದನ್ನು ಬಳಸುವವಳು ಮಾತ್ರ ನಮ್ಮ ಅಸ್ಮಿತೆಯ ಮೂಲವಾದ ದೇವಿ. ದೇವಿಯು ಧನುಸ್ಸೆಂದರೆ ಮನಸ್ಸು,

ಪಂಚಬಾಣಗಳೆಂದರೆ ಪಂಚೇಂದ್ರಿಯ ವಿಷಯಗಳು, ಪಾಶವೆಂದರೆ ರಾಗ ಮತ್ತು ಅಂಕುಶವೆಂದರೆ ಕ್ರೋಧ ಎಂದು ಈ ಆಯುಧಗಳೆಲ್ಲ ಸಾಂಕೇತಿಕವಾಗಿವೆ.

(ತೋ–ಪು ೧೦೯)

೯. ಭಗವದ್ಗೀತೆಯಲ್ಲಿ ೧೧ನೇ ಅಧ್ಯಾಯ ೪೬ನೇ ಶ್ಲೋಕದಲ್ಲಿ ಸಹಸ್ರಬಾಹು ಕೃಷ್ಣನ ಬದಲು ಚತುರ್ಭುಜ ಕೃಷ್ಣನನ್ನು ನೋಡಲು ಅರ್ಜುನ ಇಚ್ಛಿಸುತ್ತಾನೆ.

ಕಿರೀಟಿನಂ ಗದಿನಂ ಚಕ್ರ ಹಸ್ತ –
ಮಿಚ್ಛಾಮಿ ತ್ವಾಂ ದ್ರಷ್ಟುಮಹಂ ತಥೈವ
ತೇನೈವ ರೂಪೇನ ಚತುರ್ಭುಜೇನ
ಸಹಸ್ರಬಾಹೋ ಭವ ವಿಶ್ವಮೂರ್ತೇ (೧೧–೪೬ ಗೀತೆ)

(ಕಿರೀಟಿನಂ) ಕಿರೀಟವನ್ನಿಟ್ಟುಕೊಂಡಿರುವಂಥ (ಗದಿನಂ) ಗದೆಯನ್ನು, ಹಿಡಿದಿರುವಂಥ (ಚಕ್ರ ಹಸ್ತಂ) ಚಕ್ರವನ್ನು ಕೈಯಲ್ಲಿ ಹಿಡಿದಿರುವಂಥ (ತ್ವಾಂ) ನಿನ್ನನ್ನು (ತಥೈವ) ಹಿಂದಿನಂತೆಯೇ (ದ್ರಷ್ಟುಂ) ನೋಡಲು (ಅಹಂ) ನಾನು (ಇಚ್ಛಾಮಿ) ಬಯಸುತ್ತೇನೆ. (ಸಹಸ್ರಬಾಹೋ) ಸಾವಿರ ಕೈಗಳೆಂದರೆ (ವಿಶ್ವಮೂರ್ತೇ) ವಿಶ್ವರೂಪವನ್ನು ಧರಿಸಿದವನೇ (ಚತುರ್ಭುಜೇನ) ನಾಲ್ಕು ತೋಳುಗಳುಳ್ಳಂಥ (ತೇನೈವರೂಪೇಣ) ವಾಸುದೇವನ ಮಗನಾದ ಶ್ರೀ ಕೃಷ್ಣ ರೂಪದಿಂದಲೇ (ಭವ) ಕಾಣಿಸಿಕೊಳ್ಳುವವನಾಗು.

(ಹೊಸಕೆರೆ ಚಿದಂಬರಯ್ಯನವರ ಗೀತಾ ಅನುವಾದ ಪುಟ ೨೮೭).

೧೦. 'ಅರುಣಾಮೋದಿನೀ, ವ್ಯಾಖ್ಯಾನದಲ್ಲಿ ಕ್ವಣತ್ ಕಾಂಚೀದಾಮ' ಎಂಬುದಕ್ಕೆ ವಿವರಣೆ ಹೀಗಿದೆ. "ಕಿಂಕಿಣಿ ಕಿರುಗೆಜ್ಜೆ ಒಡ್ಯಾಣ ಉಳ್ಳವಳು" ಎನ್ನುವ ವಿಶೇಷಣವು ಧ್ಯಾನ ಮಾಡುತ್ತಿರುವ ಸಾಧಕನ ಒಳ ಬಗೆಯಲ್ಲಿ ಆಸೀನಳಾಗಲು ದೇವಿ ನಡೆದು ಬರುತ್ತಿರುವ ಸೂಚನೆಯಾಗಿದೆ.

(ತೋ–ಪುಟ ೧೦೫)

೧೧. **ಆಹೋಪುರುಷಿಕಾ**

ಶಿವ–ಶಕ್ತಿ ತತ್ತ್ವಗಳನ್ನು ಪ್ರಕಾಶ ಮತ್ತು ವಿಮರ್ಶಾ ತತ್ತ್ವಗಳೆಂದು ತಂತ್ರ ಗುರುತಿಸುತ್ತದೆ. ಪ್ರಕಾಶ ಎಂದರೆ ಬೆಳಕು ಮತ್ತು ವಿಮರ್ಶೆ ಎಂದರೆ ಅದನ್ನು ಪ್ರತಿಫಲ ಮಾಡುವ ಶಕ್ತಿ ಎನ್ನಬಹುದು. ಅಚ್ಚರಿ

ಎಂದರೆ ತನ್ನದೇ ಪ್ರತಿಫಲನವನ್ನು ಕಂಡಾಗ ಮಾತ್ರ, ಬೆಳಕಿಗೆ ತಾನು ಬೇಕೆಂಬ ಸ್ವೋಪಜ್ಞ ಅರಿವು ಉಂಟಾಗುವುದಂತೆ. ತಾನು ಪ್ರತಿಫಲನ ಮಾಡಬಲ್ಲೆನೆಂಬ ಅರಿವು ಉಂಟಾಗುವುದಂತೆ. ಪ್ರಕಾಶ ಮತ್ತು ವಿಮರ್ಶೆ-ಬೆಳಕು ಮತ್ತದರ ಪ್ರತಿಫಲನ ಇದರಲ್ಲೇ ಅಡಗಿದೆ. ಇಡಿಯ ಸೃಷ್ಟಿ. ಆದುದರಿಂದಲೇ ಸೃಷ್ಟಿ ಎಂದರೆ ನಿರಂತರ ಪ್ರತಿಫಲನ ಸರಣಿ; ಹೀಗೆ ಪ್ರತಿಫಲನ ಮಾಡುವ ವಿಮರ್ಶಾಶಕ್ತಿಯೇ ಇಲ್ಲಿ 'ಆಹೋಪುರುಷಿಕಾ'.

(ತೋ-ಪು ೧೦೬)

ಯಂತ್ರಾರಾಧನೆ : ಶ್ಲೋಕ ೭



ಯಂತ್ರರಚನೆ : ಚಿನ್ನದ ತಗಡಿನ ಮೇಲೆ ಯಂತ್ರ ಬರೆಯಬೇಕು. ಸಮ ಚತುರಶ್ರ ನಕ್ಷೆ ಬೀಜಾಕ್ಷರದಿಂದ ಕೂಡಿರಬೇಕು ಅಥವಾ ತಾಮ್ರದ ತಟ್ಟೆಯ ಮೇಲೆ ಶುದ್ಧ ಭಸ್ಮವನ್ನು ಹರಡಿ ಅದರ ಮೇಲೆ ನಕ್ಷೆ ಬೀಜಾಕ್ಷರ ಬರೆಯಬಹುದು.

ಪೂಜೆ : ಪೂರ್ವಾಭಿಮುಖವಾಗಿ ಕುಳಿತು ಅಥವಾ ಈಶಾನ್ಯ ದಿಕ್ಕಿಗೆ ಎದುರಾಗಿ ಕುಳಿತು ಪೂಜಿಸಬೇಕು. ದುರ್ಗಾ ಸಹಸ್ರನಾಮದಿಂದ ಕುಂಕುಮಾರ್ಚನೆ ಮಾಡಬೇಕು ಅಥವಾ ಕೆಂಪು ಹೂಗಳಿಂದ ಪೂಜಿಸಬಹುದು.

ನೈವೇದ್ಯ : ಮೊಸರನ್ನ, ಹಣ್ಣಿನ ರಸಗಳು, ಕ್ಷೀರಪಾಯಸ ಸಮರ್ಪಿಸಬೇಕು.

ಜಪ : ೪೫ ದಿನಗಳು ಅಥವಾ ೧೨ ದಿನಗಳು ಪ್ರತಿದಿನ ೧೦೦೦ ಬಾರಿ ಶ್ಲೋಕವನ್ನು ಜಪಿಸಬೇಕು. ಪೂಜಿಸಿದ ಯಂತ್ರವನ್ನಾಗಲಿ, ವಿಭೂತಿಯನ್ನಾಗಲಿ ಧರಿಸಬೇಕು.

ಫಲ : ಶತ್ರು ಜಯ.

ಶ್ಲೋಕ ೮

ದೇವಿಯ ಪೀಠವರ್ಣನೆ

ಸುಧಾಸಿಂಧೋರ್ಮಧ್ಯೇ ಸುರವಿಟಪಿವಾಟೀಪರಿವೃತೇ
ಮಣಿದ್ವೀಪೇ ನೀಪೋಪವನವತಿ ಚಿಂತಾಮಣಿಗೃಹೇ ।
ಶಿವಾಕಾರೇ ಮಂಚೇ ಪರಮಶಿವಪರ್ಯಂಕನಿಲಯಾಂ
ಭಜಂತಿ ತ್ವಾಂ ಧನ್ಯಾಃ ಕತಿಚನ ಚಿದಾನಂದಲಹರೀಂ ॥ ೮ ॥

ಪದವಿಭಾಗ

(ಸುಧಾಸಿಂಧೋರ್ಮಧ್ಯೇ)= ಸುಧಾಸಿಂಧೋಃ+ಮಧ್ಯೇ, ಸುರವಿಟಪಿವಾಟೀಪರಿವೃತೇ, ಮಣಿದ್ವೀಪೇ, (ನೀಪೋಪವನವತಿ)= ನೀಪ+ಉಪವನವತಿ, ಚಿಂತಾಮಣಿಗೃಹೇ, (ಶಿವಾಕಾರೇ) ಶಿವ+ಆಕಾರೇ, ಮಂಚೇ, ಪರಮಶಿವಪರ್ಯಂಕನಿಲಯಾಂ, ಭಜಂತಿ, ತ್ವಾಮ್, ಧನ್ಯಾಃ ಕತಿಚನ, (ಚಿದಾನಂದಲಹರೀಂ) = ಚಿತ್+ಆನಂದಲಹರೀಂ.

ಅನ್ವಯಾರ್ಥ

(ಹೇ ಭಗವತಿ)	(ಎಲೈ ಪೂಜ್ಯಳಾದ ದೇವಿಯೆ)
ಸುಧಾಸಿಂಧೋಃ ಮಧ್ಯೇ	ಅಮೃತಸಮುದ್ರದ ಮಧ್ಯದಲ್ಲಿ
ಸುರವಿಟಪಿ ವಾಟೀ	ಕಲ್ಪವೃಕ್ಷಗಳ–ಸಾಲುಗಳಿಂದ–ಯುಕ್ತವಾದ
ಪರಿವೃತೇ	(ಸುತ್ತುವರಿಯಲ್ಪಟ್ಟ)
ಮಣಿದ್ವೀಪೇ	ರತ್ನದ್ವೀಪದಲ್ಲಿ
ನೀಪೋಪವನವತಿ	(ನೀಪ+ಉಪವನವತಿ) ಕದಂಬವೃಕ್ಷ ಕೈತೋಟವುಳ್ಳ
ಚಿಂತಾಮಣಿ ಗೃಹೇ	ಚಿಂತಾಮಣಿಯೆಂಬ ರತ್ನದಿಂದ ಕಟ್ಟಿದ ಮನೆಯಲ್ಲಿ
ಶಿವಾಕಾರೇ	(ಶಿವ+ಆಕಾರೇ) ಶಕ್ತಿರೂಪವಾದ (ತ್ರಿಕೋಣಾಕಾರವಾದ)
ಮಂಚೇ	ಮಂಚದಲ್ಲಿ (ಪವಡಿಸಿರುವ)
ಪರಮಶಿವ ಪರ್ಯಂಕ (ಕ)	ಪರಿ+ಅಂ ಪರಮಶಿವನ–ಶ್ರೇಷ್ಠತೊಡೆಯ ಮೇಲೆ–

ನಿಲಯಾಂ	ಇರುವ
ತ್ವಾಂ	ನಿನ್ನನ್ನು
ಚಿದಾನಂದ ಲಹರೀಂ	ಚಿದ್ರೂಪವಾದ ಆನಂದ ಪ್ರವಾಹ ಸ್ವರೂಪಳನ್ನಾಗಿ
ಕತಿಚನ ಧನ್ಯಾಃ	ಎಲ್ಲೋ ಕೆಲವು – ಪುಣ್ಯಶಾಲಿಗಳು
ಭಜಂತಿ	ಸೇವಿಸುತ್ತಾರೆ.

ತಾತ್ಪರ್ಯ

ಎಲೈ ಪೂಜ್ಯಳಾದ ದೇವಿಯೇ, ಅಮೃತ ಸಮುದ್ರದ ಮಧ್ಯದಲ್ಲಿ ಕಲ್ಪವೃಕ್ಷ ಸಾಲುಗಳ (ತೋಪುಗಳಿಂದ) ಸುತ್ತುವರಿಯಲ್ಪಟ್ಟ ರತ್ನದ್ವೀಪದಲ್ಲಿ ಕದಂಬ ವೃಕ್ಷಗಳ ಉಪವನದಿಂದ ಕೂಡಿದ ಚಿಂತಾಮಣಿಯೆಂಬ ರತ್ನದಿಂದ ಕಟ್ಟಿದ ಮನೆಯಲ್ಲಿ ಅಂದರೆ ಶಕ್ತಿರೂಪವಾದ ತ್ರಿಕೋಣದಲ್ಲಿ ಪರಮಶಿವನ ಶ್ರೇಷ್ಠವಾದ ತೊಡೆಯ ಮೇಲೆ ಚಿದಾನಂದ ಪ್ರವಾಹ ಸ್ವರೂಪಳಾಗಿ ಇರುವ ನಿನ್ನನ್ನು ಕೆಲವೇ ಮಂದಿ ಪುಣ್ಯಶಾಲಿಗಳು ಸೇವಿಸುತ್ತಾರೆ.

ಪದ್ಯಾನುವಾದ

ಅಮೃತೋದಧಿಯ ನಡುವೆ ಕಲ್ಪವೃಕ್ಷೋಪವನ–
ದಿಂದ ಪರಿವೃತವಾದ ರತ್ನಮಯ ದೀವಿಯೊಳು
ನೀಪೋಪವನದಿಂದ ಶೋಭಿಸುವ ಚಿಂತಾಮಣಿವಿನಿರ್ಮಿತಾಲಯದಲಿ
ಶಿವನಾಕೃತಿಯ ಮಂಚದಲಿ ಪರಮಶಿವ ತಾನು
ಪರ್ಯಂಕವೆನಿಸಲದರಲ್ಲಿ ಪವಡಿಪ ಮಹಿಮೆ–
ಯುಳ್ಳ ನಿನ್ನನು ಚಿದಾನಂದಲಹರಿಯನು ಕೆಲಬರೆ ಧನ್ಯರಾದವರು
ಭಜಿಸುತಿಹರು ॥ ೮ ॥

ಟಿಪ್ಪಣಿಗಳು

೧. **ಸುಧಾಸಿಂಧೋ ರ್ಮಧ್ಯೇ**

ಶ್ರೀ ಚಕ್ರಕ್ಕೆ ವಿಯಚ್ಚಕ್ರವೆಂದು ಇನ್ನೊಂದು ಹೆಸರಿದೆ. ಆಕಾಶದಲ್ಲಿ ಪೂಜಿಸಲ್ಪಡುವುದರಿಂದ ಇದನ್ನು ವಿಯಚ್ಚಕ್ರವೆಂದು ಕರೆಯುತ್ತಾರೆ. ವಿಯಚ್ಚಕ್ರ ಪೂಜೆ ಎರಡು ವಿಧ. ಒಂದು, ದಹರಾಕಾಶದಲ್ಲಿ ನಡೆಯುವ ಪೂಜೆ, ಇನ್ನೊಂದು ಬಾಹ್ಯಾಕಾಶದಲ್ಲಿ ನಡೆಯುವ ಪೂಜೆ.

ದಹರಾಕಾಶ ಪೂಜೆ ಎಂದರೆ ಹೃದಯಾಕಾಶದ ಅವಕಾಶದಲ್ಲಿ ಶ್ರೀ ಚಕ್ರವನ್ನು ಪೂಜಿಸುವುದು. ಇದನ್ನು **ಸಮಯಪೂಜಾ** ಎಂದು ಕರೆಯುತ್ತಾರೆ.

ಬಾಹ್ಯಾಕಾಶ ಪೂಜೆ ಎಂದರೆ ಆಕಾಶದ ಅವಕಾಶದಲ್ಲಿ ಪೀಠ ಮೊದಲಾದುದರ ಮೇಲೆ ಭೂರ್ಜಪತ್ರ, ಶುದ್ಧ ವಸ್ತ್ರ, ಚಿನ್ನ ಬೆಳ್ಳಿ ಇತ್ಯಾದಿ ರೇಕುಗಳ ಮೇಲೆ ಯಂತ್ರ, ಬೀಜಾಕ್ಷರ ಇತ್ಯಾದಿ ಬರೆದು ಮಾಡುವ ಪೂಜೆ. ಇದನ್ನು **ಕೌಲಪೂಜಾ** ಎಂದು ಕರೆಯುತ್ತಾರೆ.

ಶ್ರೀ ಚಕ್ರಪೂಜೆಯಲ್ಲಿ ೯ ತ್ರಿಕೋಣಗಳಲ್ಲಿ ಕೆಳಗಡೆ ಇರುವ ೪ ಶಿವ ತ್ರಿಕೋಣಗಳ ಮತ್ತು ಮೇಲುಗಡೆ ಇರುವ ೫ ಶಕ್ತಿ ತ್ರಿಕೋಣಗಳಿಗೆ ಕೆಳಗಡೆಗೆ ಇರುವ ಪ್ರದೇಶವಾದ ಬೈಂದವಸ್ಥಾನಕ್ಕೆ **ಸುಧಾಸಿಂಧು** ಎಂದು ಹೆಸರು. ಇದೇ ಅಮೃತಸಮುದ್ರದ ಮಧ್ಯದಲ್ಲಿರುವ ಬಿಂದುಸ್ಥಾನ.

(ಶೇ.ಪು. ೨೨)

೨. **ವಾಮಕೇಶ್ವರ ತಂತ್ರದಲ್ಲಿ ಹೀಗೆ ಹೇಳಿದೆ:–**

ಬಿಂದುಸ್ಥಾನವೇ ಸುಧಾಸಿಂಧು. ಐದು ತ್ರಿಕೋಣಗಳು ಕಲ್ಪವೃಕ್ಷಗಳು ಅಲ್ಲಿಯೇ ಕದಂಬವೃಕ್ಷಗಳ ತೋಪು ಇದೆ. ಅದರ ನಡುವೆ ರತ್ನಮಂಟಪ. ಅಲ್ಲಿ ಚಿಂತಾಮಣಿಗಳಿಂದ ರಚಿತವಾದ ದೇವಿಯ ಮಂದಿರವಿದೆ. ಅಲ್ಲಿ ಶಿವನ ರೂಪವಾದ ಮಹಾಮಂಚದಲ್ಲಿ ಮಹೇಶ್ವರನೇ ತಲೆದಿಂಬು; ಸದಾಶಿವನೇ ಹಾಸುಬಟ್ಟೆ: ಬ್ರಹ್ಮ, ವಿಷ್ಣು, ರುದ್ರ, ಈಶ್ವರರು ಮಂಚದ ನಾಲ್ಕು ಕಾಲುಗಳು; ಮಹೇಂದ್ರನೇ ಪೀಕದಾನಿ ಹಿಡಿದಿದ್ದಾನೆ ಅಲ್ಲಿ ತ್ರಿಪುರಸುಂದರಿ ದೇವಿ ಸುಷುಮ್ನಾ ಮಾರ್ಗ ಬಿಟ್ಟು ಇಂದುಮಂಡಲದಲ್ಲಿ ನೆಲೆನಿಂತು ಅಮೃತವೃಷ್ಟಿ ಸುರಿಸಿ ಮತ್ತೆ ಮೂಲನೆಲೆಗೆ ಬಂದು ಮಲಗುತ್ತಾಳೆ.

(ಶೇ–ಪುಟ ೨೩)

೩. **ಚಿಂತಾಮಣಿಗೃಹೇ**

ದೇವಿ ಚಿಂತಾಮಣಿಗೃಹದಲ್ಲಿ ವಾಸಿಸುತ್ತಾಳೆ. ಚಿಂತಾಮಣಿ ಎಂದರೆ ನಾವು ಚಿಂತಿಸುವ ವಸ್ತುಗಳನ್ನೆಲ್ಲಾ ಅನುಗ್ರಹಿಸುವ ಮಂತ್ರಗಳಿಂದ ಕೂಡಿದ, ರತ್ನಗಳಿಂದ ನಿರ್ಮಾಣವಾದ ಗೃಹ; ಸಹಸ್ರಾರ ಕಮಲದ ಮಧ್ಯೆ ಇರುವ ಕರ್ಣಿಕೆಯ ಮಧ್ಯಬಿಂದುವನ್ನು ಚಿಂತಾಮಣಿಗೃಹ ಎಂದು ಕರೆಯುತ್ತಾರೆ.

(ಶ್ರೀ–ಪುಟ ೩೮)

೪. ಲಲಿತಾಸಹಸ್ರನಾಮದಲ್ಲಿ ಅಂತರ್ಮುಖ ಸಮಾರಾಧ್ಯಾ (೮೭೦) ಬಹಿರ್ಮುಖ ಸುದುರ್ಲಭಾ (೮೭೧) ಚಿಂತಾಮಣಿ ಗೃಹಾಂತಸ್ಥಾ (೫೭) ಎಂದು ಹೇಳಿದೆ. ಅಂತರ್ಮುಖರು ಎಂದರೆ "ನವಾವರಣದಿಂದ ಕೂಡಿದ ಶ್ರೀ ಚಕ್ರಮಧ್ಯಸ್ಥೆಯಾಗಿ, ಶ್ರೀಚಕ್ರಸ್ವರೂಪಿಣಿ ಆಗಿ ಕದಂಬ ವೃಕ್ಷ - ಕಲ್ಪವೃಕ್ಷಗಳ ವನಮಧ್ಯದಲ್ಲಿ ಚಿಂತಾಮಣಿದ್ವೀಪಗೃಹದಲ್ಲಿ ವಾಸಿನಿ ಆಗಿ ಪಂಚಬ್ರಹ್ಮಾಸನಾಸೀನೆಯಾಗಿ ಲಲಿತಾತ್ರಿಪುರ ಸುಂದರಿಯಾಗಿ ಇರುವ ದೇವಿಯನ್ನು ದರ್ಶನಮಾಡಬಲ್ಲವರು.

ಬಹಿರ್ಮುಖರು ಎಂದರೆ ಕುತರ್ಕಗಳಿಂದ, ಲೌಕಿಕವಾದಗಳಿಂದ ಭೋಗಾಪೇಕ್ಷೆಯಿಂದ, ಸ್ವಾರ್ಥಪರತೆಯಿಂದ, ಕಪಟಹೇಳಿಕೆಗಳಿಂದ ಅಮ್ಮನವರ ಪೂಜೆಯನ್ನು ಲೌಕಿಕಜೀವನಕ್ಕೆ ಸಾಧನವಾಗಿ ಎಣಿಸುವವರೇ ಬಹಿರ್ಮುಖರು.

(ಭ-ಪುಟ ೪೪)

೫. ಜಗತ್ತೆಂಬುದು ಅಮೃತಸಾಗರ. ಪ್ರತಿ ವ್ಯಕ್ತಿ ಒಂದು ಮರವಿದ್ದಂತೆ. ಅನೇಕ ವ್ಯಕ್ತಿಗಳ ಸಮೂಹವೇ ಕಲ್ಪವೃಕ್ಷಗಳ ತೋಟ. ಅವರಲ್ಲಿರುವ ಅಂತಃಪ್ರಜ್ಞೆಯೇ ಮಣಿದ್ವೀಪ. ಬಾಳು ಎಂಬುದೇ ಕದಳೀವನ, ಬಯಸಿದ್ದನ್ನು ಪಡೆಯುವ ತಾಣ. ಚಿಂತಾಮಣಿಗೃಹ. ಎಲ್ಲಕ್ಕೂ ಕಾರಣವಾಗಿರುವ ಪ್ರಕೃತಿಯು ಶಿವಾಕಾರವೆಂಬ ಮಂಚದ ಮೇಲೆ ಆಸೀನ ವ್ಯಕ್ತಿಯು ನಡೆದುಕೊಳ್ಳಬೇಕಾದ ರೀತಿಯೇ ಚಿದಾನಂದಲಹರಿ ಎಂದೂ ಹೇಳಲಾಗಿದೆ.

(ಅ-ಪುಟ ೨೦)

೬. **ಚಿಂತಾಮಣಿಗೃಹೇ**

ಚಿಂತಾಮಣಿಗೃಹವು ತ್ರಿಪುರಸುಂದರಿಯು (ಲಲಿತಾ ದೇವಿ) ವಾಸಿಸುವ ಸ್ಥಳ. ಇಂದ್ರಾದಿ ದೇವತೆಗಳು ಸಂತೋಷದಿಂದ ಲಲಿತೆ ಮತ್ತು ಕಾಮಶಿವ ಇವರ ನಿತ್ಯೋಪಭೋಗಾರ್ಥಕ್ಕೆಂದು ಕಟ್ಟಿಸಿದರು ಎಂದು ಹೇಳುತ್ತಾರೆ. ದೇವಾಸುರ ಶಿಲ್ಪಿಗಳಾದ ವಿಶ್ವಕರ್ಮ ಮತ್ತು ಮಯ ಇವರಿಬ್ಬರೂ ಸ್ಥಪತಿಗಳು. ಇದು ರಥಾಂಡ, ವಿಮಾನಾಂಡ ಮತ್ತು ಬ್ರಹ್ಮಾಂಡವೆಂದು ಕರೆಯಲ್ಪಡುವ ತ್ರಿಪುರಾ ಮಧ್ಯದಲ್ಲಿ, ಸುಧಾಸಾಗರದಿಂದ ಆವೃತವಾದ ರತ್ನಮಯ ದ್ವೀಪದ ಮಧ್ಯದಲ್ಲಿರುವುದು.

ಚಿಂತಾಮಣಿಗೃಹವು ಒಂದರೊಳಗೊಂದು ಇರುವ ೨೫ ಪ್ರಾಕಾರಗಳು ಮತ್ತು ಕಕ್ಷೆಗಳಿಂದ ಸುತ್ತುವರಿಯಲ್ಪಟ್ಟಿದೆ. ಈ ಚಿಂತಾಮಣಿಗೃಹಕ್ಕೆ

ಸ್ವರ್ಣಮಯವಾದ ಬಾಗಿಲುಗಳ ೪ ದ್ವಾರಗಳಿವೆ. ಈ ನಾಲ್ಕು ದ್ವಾರಗಳಿಗೆ ಎದುರಾಗಿ ೪ ರತ್ನಗೃಹಗಳಿದ್ದು ಅವುಗಳ ಕೆಳಭಾಗದಲ್ಲಿ ಅದೇ ಮಾದರಿಯ ಆರಾರು ಗೃಹಗಳಿವೆ.

(ಶ್ರೀ–ಪುಟ ೪೦)

೭. **ಚಿಂತಾಮಣಿ ಗೃಹೇ**

ಕದಂಬ ವೃಕ್ಷಗಳ ಕೈತೋಟದಲ್ಲಿ ಚಿಂತಾಮಣಿಗಳಿಂದಲೇ ರಚಿತವಾದಂತಿರುವ ಒಂದು ಮಹಮನೆ ಇದೆ. ಚಿಂತಾಮಣಿ ಎಂದರೆ ಬಯಸಿದ್ದನ್ನು ಕೊಡುವುವು; ಯಾವುದನ್ನು ಬಯಸಬೇಕು ಎಂಬ ಹೊಳಹನ್ನು ಕೂಡ. ತಾಯಿ ಎಂದರೆ ಹೊಳಹಿನ ಹೊಳಹು! ಲೋಕವೊಂದು ಅನುಭವಮಂಟಪವಾದರೆ ಧ್ಯಾನವೊಂದು ಚಿಂತಾಮಣಿ ಗೃಹ. ಎರಡೂ ತಾಯಿಯ ಮನೆಗಳೇ ಮತ್ತು ಎರಡೂ ಮನೆಗಳು ಒಂದರೊಳಗೊಂದು ಬೆರತಿವೆ.

(ತೋ–ಪುಟ ೧೧೮)

೮. **ಶಿವಾಕಾರೇ ಮಂಚೇ**

ಶ್ರೀ ಚಕ್ರದ ಬಿಂದುಸ್ಥಾನ ಶಿವ–ಶಕ್ತಿಗಳ ಸಂಯೋಗಸ್ಥಾನ ಸಹಸ್ರಾರ ಸ್ಥಾನವನ್ನು ಇದು ಸೂಚಿಸುತ್ತದೆ. ಈ ಸ್ಥಾನ ಪರಮಾನಂದಕರವಾದುದು. ಮೋಕ್ಷಪ್ರದವಾದುದು. ಶ್ರೀವಿದ್ಯಾ ಸಂಪ್ರದಾಯದಲ್ಲಿ ಸಾಂಕೇತಿಕವಾಗಿ, ಈ ಮಂಚದ ೪ ಕಾಲುಗಳೆಂದರೆ ಬ್ರಹ್ಮ, ವಿಷ್ಣು, ರುದ್ರ, ಈಶ್ವರ ಎಂದು ಹೇಳುತ್ತಾರೆ. ಸದಾಶಿವನೊಡನೆ ಈ ಪರ್ಯಂಕದಲ್ಲಿ ದೇವಿ ವಿರಾಜಿತಳಾಗುತ್ತಾಳೆ.

(ಉ– ಪು ೨೭)

೯. **ಶಿವಾಕಾರೇ ಮಂಚೇ**

ಚಿಂತಾಮಣಿ ಗೃಹದಲ್ಲಿ ಮಂಚವೊಂದಿದೆ. ಮಂಚವೆಂದರೆ ಪವಡಿಕೆ, ವೇದಿಕೆ, ತೊಟ್ಟಿಲು–ಎಲ್ಲವೂ, ಇದು ಸೃಷ್ಟಿಮಂಚ. ಶಿವಾಕಾರೇ ಮಾತೇ ಎಂದರೆ ಶಿವಾತ್ಮಕವಾದ ಶಿವರೂಪಿಯಾದ ಮಂಚ.

ಸೃಷ್ಟಿಗೆ ಕಾರಣರಾದ ಶಿವಶಕ್ತಿಯನ್ನು ಲೋಕದ ತಾಯಿ–ತಂದೆಯರನ್ನು ಧಾರಣ ಮಾಡುವ ಸೃಷ್ಟಿಮಂಚ. ಈ ಮಂಚದ ಕೇಂದ್ರವೇ ತಾಯಿ, ನೆಲಸಿರುವ ಜಾಗ. ತಾಯಿ ಎಂದರೆ ಶಕ್ತಿ, ಶಕ್ತಿ ಎಂದರೆ ಶಿವ ಶಕ್ತಿ ಕೂಡ. ಆದುದರಿಂದ 'ಪರಮಶಿವ ಪರ್ಯಂಕನಿಲಯಾಂ' ಎಂದು.

(ತೋ–ಪುಟ ೧೧೯)

೧೦. **ಚಿದಾನಂದಲಹರೀಂ**

ಚಿತ್ ಎಂದರೆ ಜ್ಞಾನ. ಚಿದಾನಂದ ಲಹರಿ ಎಂದರೆ ಜ್ಞಾನಾನಂದಲಹರಿ ಕೃತಪುಣ್ಯರು, ಮಾತ್ರವೇ ದೇವೀ ಧ್ಯಾನದಿಂದ ಜ್ಞಾನಾನಂದಲಹರಿಯಲ್ಲಿ ಓಲಾಡಬಲ್ಲರು.

ಲಲಿತಾ ಸಹಸ್ರನಾಮದಲ್ಲಿ ಶಿವಕಾಮೇಶ್ವರಾಂಕಸಿದ್ಧಿ (೫೨) ಸುಮೇರು ಮಧ್ಯಶೃಂಗಸ್ಥಾ (೫೫) ಬೈಂದವಾಸನಾ (೯೦೫) ಸುಧಾಸಾಗರಮಧ್ಯಸ್ಥಾ (೬೧) ಶಿವಶ್ಯಕ್ತ್ಯೈಕ್ಯರೂಪಿಣಿ (೯೯೯) ಪಂಚಬ್ರಹ್ಮಾಸನಸ್ಥಿತಾ (೫೮) ಮೊದಲಾದ ನಾಮಗಳು ಈ ಶ್ಲೋಕದ ಭಾವವನ್ನು ಹೇಳುತ್ತವೆ.

(ಉ – ಪುಟ ೨೮)

೧೧. **ನೀಪೋಪವನವತಿ**

(ಕದಂಬವೃಕ್ಷಗಳ ತೋಟವುಳ್ಳ) ಅಮೃತ ಸಮುದ್ರದ ಮಧ್ಯದಲ್ಲಿರುವ ಮಣಿದ್ವೀಪದಲ್ಲಿ ದೇವಿ ನೆಲಸಿದ್ದಾಳೆ. ದ್ವೀಪವನ್ನು ಕಲ್ಪವೃಕ್ಷಗಳು ಸುತ್ತುವರಿದಿವೆ; ಕಲ್ಪವೃಕ್ಷಗಳು ಎಂದರೆ ಬಯಸಿದ್ದನ್ನು ಕೊಡುವ ದೇವ–ತರುಗಳು ಇಲ್ಲೊಂದು ವಿಶೇಷವಿದೆ: ಕಲ್ಪವೃಕ್ಷಗಳೇ ಇದ್ದರೂ ತಾಯಿ ಭಗವತಿಗೆ ಕದಂಬಗಿಡಗಳೆಂದರೆ ಬಹು ಇಷ್ಟ. ಹಾಗೆ ಕದಂಬವೃಕ್ಷಗಳ ಸಣ್ಣತೋಟವೊಂದು ಬೇರೆ ಇದೆ ಅಲ್ಲಿ ಕೃಷ್ಣನಿಗೆ ತಮಾಲ ವೃಕ್ಷಗಳು ಇಷ್ಟ. ಅವನು ತಮಾಲ ಶ್ಯಾಮಲ. ತಮಾಲ ಎಂದರೆ ಹೊಂಗೆ, ತಾಯಿ ಕದಂಬ ವೃಕ್ಷಗಳ ಪ್ರಿಯೆ. ದೇವಿ ಕದಂಬವನ ವಾಸಿನೀ (೬೦) (ಲಲಿತಾಸಹಸ್ರನಾಮ: ಕದಂಬ ಕುಸುಮಪ್ರಿಯೆ (೩೨೩) ಕಾದಂಬರೀ ಪ್ರಿಯಾ (೩೩೦) ಕದಂಬ ಮರಗಳಿಂದ ತೆಗೆದ ಮದ್ಯ ಕೂಡ ತಾಯಿಗೆ ಇಷ್ಟ. ಆ ಮದ್ಯದ ಹೆಸರು ಕಾದಂಬರೀ–ಹೀಗೆ ತಾಯಿ ಕಾದಂಬರೀ ಪ್ರಿಯೆ. ಈ ಕದಂಬವೃಕ್ಷಗಳ ಈ ಉಪವನ ಅಥವಾ ಕೈತೋಟ ಎನ್ನುವ ಮಾತು ತಾಯಿಯ ವ್ಯಕ್ತಿತ್ವವನ್ನು ಸೂಚಿಸುತ್ತದೆ.

(ತೋ–ಪುಟ ೧೧೮)


೧೨. 'ತಂತ್ರ'ದಲ್ಲಿ 'ದೇಶ'ವನ್ನು ಭುವನೇಶ್ವರಿ ಎನ್ನುವರು. ಹಾಗೆಂದು ಉಪಾಸಿಸುವರು.

ಕಾಲವನ್ನು 'ಮಹಾಕಾಲೀ' ಎನ್ನುವರು ಹಾಗೆಂದು ಉಪಾಸಿಸುವರು. ದೇಶ–ಕಾಲಗಳ ಐಕ್ಯವನ್ನು ತ್ರಿಪುರಸುಂದರಿ ಎನ್ನುವರು. ಹಾಗೆಂದು

ಉಪಾಸಿಸುವರು. ಈ ಶ್ಲೋಕದಲ್ಲಿ ತ್ರಿಪುರಸುಂದರಿಯ ನೆಲೆಯನ್ನು ಬಣ್ಣಿಸಿದ್ದಾರೆ.

(ತೋ–ಪುಟ ೧೧೯)

ಯಂತ್ರಾರಾಧನೆ : ಶ್ಲೋಕ ೮



ಯಂತ್ರರಚನೆ: ಬೆಳ್ಳಿಯ ತಟ್ಟೆಯಲ್ಲಿ ಕೇಸರಿ ಮಿಶ್ರವಾದ ಶ್ರೀಗಂಧಲೇಪನವನ್ನು ಹರಡಿ ಯಂತ್ರ ರಚಿಸಬೇಕು. ಚಿತ್ರದಲ್ಲಿ ತೋರಿಸಿರುವಂತೆ ರಂ ಬೀಜಾಕ್ಷರಯುಕ್ತ ಮೂರು ಕಡೆ ತ್ರಿಶೂಲವುಳ್ಳ ನಕ್ಷೆ ಇರಬೇಕು.

ಪೂಜೆ: ಉತ್ತರಾಭಿಮುಖವಾಗಿ ಕುಳಿತು ದುರ್ಗಾಷ್ಟೋತ್ತರವನ್ನು ಹೇಳಿ ಉತ್ತಮವಾದ ಕೆಂಪು ಹೂಗಳಿಂದ ಅರ್ಚನೆ ಮಾಡಬೇಕು. ಯಂತ್ರದ ಮುಂದೆ ಎಳ್ಳೆಣ್ಣೆ ದೀಪ ಬೆಳಗಬೇಕು.

ನೈವೇದ್ಯ: ಕಾಳುಮೆಣಸಿನಪುಡಿ ಮಿಶ್ರವಾದ ಅನ್ನ, ಬೆಲ್ಲದ ಪಾಯಸ, ತೆಂಗಿನಕಾಯಿ

ಜಪ: ೧೨ ದಿನಗಳ ಕಾಲ ಪ್ರತಿದಿನಕ್ಕೆ ೧೨೦೦ ಅಥವಾ ೧೦೦೮ ಆವರ್ತಿ ಶ್ಲೋಕವನ್ನು ಜಪಿಸಬೇಕು.

ಫಲ: **ಕಾರಾಗೃಹ ನಿವೃತ್ತಿ ಮತ್ತು ಸಕಲಕಾರ್ಯಜಯ.**

ಶ್ಲೋಕ ೯

ದೇವಿಯ ವಿಹಾರಮಾರ್ಗಗಳು

ಮಹೀಂ ಮೂಲಾಧಾರೇ ಕಮಪಿ ಮಣಿಪೂರೇ ಹುತವಹಂ
ಸ್ಥಿತಂ ಸ್ವಾಧಿಷ್ಠಾನೇ ಹೃದಿ ಮರುತಮಾಕಾಶಮುಪರಿ ।
ಮನೋಽಪಿ ಭ್ರೂಮಧ್ಯೇ ಸಕಲಮಪಿ ಭಿತ್ತ್ವಾ ಕುಲಪಥಂ
ಸಹಸ್ರಾರೇ ಪದ್ಮೇ ಸಹ ರಹಸಿ ಪತ್ಯಾ ವಿಹರಸೇ ॥ ೯ ॥

ಪದವಿಭಾಗ

ಮಹೀಂ, ಮೂಲಾಧಾರೇ, (ಕಮಪಿ) = ಕಂ+ಅಪಿ, ಮಣಿಪೂರೇ, ಹುತವಹಂ, ಸ್ಥಿತಂ, ಸ್ವಾಧಿಷ್ಠಾನೇ, ಹೃದಿ, (ಮರುತಮಾಕಾಶಮುಪರಿ) = ಮರುತಂ + ಆಕಾಶಂ + ಉಪರಿ, (ಮನೋಽಪಿ) = ಮನಃ + ಅಪಿ, ಭ್ರೂಮಧ್ಯೇ, (ಸಕಲಮಪಿ) = ಸಕಲಂ + ಅಪಿ, ಭಿತ್ತ್ವಾ, ಕುಲಪಥಂ, ಸಹಸ್ರಾರೇ, ಪದ್ಮೇ, ಸಹ, ರಹಸಿ, ಪತ್ಯಾ, ವಿಹರಸೇ.

ಅನ್ವಯಾರ್ಥ

(ಹೇ ಭಗವತಿ)	(ಎಲೈ ದೇವಿಯೆ)
ಮೂಲಾಧಾರೇ ಸ್ಥಿತಂ	ಮೂಲಾಧಾರ ಚಕ್ರದಲ್ಲಿ ಇರುವ
ಮಹೀಂ	ಪೃಥ್ವೀ ತತ್ತ್ವವನ್ನೂ
ಮಣಿಪೂರೇ	ಮಣಿಪೂರ ಚಕ್ರದಲ್ಲಿ
ಕಮಪಿ	ಉದಕತತ್ತ್ವವನ್ನೂ
ಸ್ವಾಧಿಷ್ಠಾನೇ	ಸ್ವಾಧಿಷ್ಠಾನ ಚಕ್ರದಲ್ಲಿ
ಹುತವಹಂ	ಅಗ್ನಿತತ್ತ್ವವನ್ನೂ
ಹೃದಿ	ಅನಾಹತ ಚಕ್ರದಲ್ಲಿ
ಮರುತಂ	ವಾಯುತತ್ತ್ವವನ್ನೂ
ಉಪರಿ	ಅದರ ಮೇಲಿನ ವಿಶುದ್ಧ ಚಕ್ರದಲ್ಲಿ
ಆಕಾಶಂ	ಆಕಾಶ ತತ್ತ್ವವನ್ನು
ಭ್ರೂಮಧ್ಯೇ	ಎರಡು ಹುಬ್ಬುಗಳ ಮಧ್ಯೆ
ಮನೋಽಪಿ	ಮನಸ್ತತ್ತ್ವವನ್ನೂ

ಸಕಲಂ	ಸಮಸ್ತವಾದ
ಕುಲಪಥಮಪಿ	ಸುಷುಮ್ನಾ ನಾಡಿಯ ಮಾರ್ಗವನ್ನು
ಭಿತ್ವಾ	ಭೇದಿಸಿಕೊಂಡು
ಸಹಸ್ರಾರೇ ಪದ್ಮೇ	ಸಹಸ್ರದಳಗಳುಳ್ಳ (ಬ್ರಹ್ಮರಂಧ್ರದಲ್ಲಿರುವ)
ರಹಸಿ	ಏಕಾಂತದಲ್ಲಿ
ಪತ್ಯಾ ಸಹ	(ಪತಿಯೊಡನೆ) ಸದಾಶಿವನಾದ ಪರಮೇಶ್ವರನೊಡನೆ
ವಿಹರಸೇ	ಕ್ರೀಡಿಸುತ್ತಾ ಇರುತ್ತೀಯೆ

ತಾತ್ಪರ್ಯ

ಮೂಲಾಧಾರಾದಿ ಐದು ಚಕ್ರಗಳಲ್ಲಿ ಕ್ರಮವಾಗಿ ಪೃಥಿವ್ಯಾದಿ ಪಂಚಭೂತ ರೂಪದಿಂದ ಇರುವುವು ಮತ್ತು ಗಂಧ, ರಸ, ರೂಪ, ಸ್ಪರ್ಶಗಳೆಂಬ ತನ್ಮಾತ್ರಗಳೂ ಇರುವುವು. ಕೊನೆಯ ಚಕ್ರದಲ್ಲಿ ಮನಸ್ತತ್ವ ಇರುವುದು. ಅಂದರೆ ಮನಸ್ಸು ಹಾಗೂ ತ್ವಕ್, ಚಕ್ಷು, ಶ್ರೋತ್ರ, ಜಿಹ್ವಾ, ಘ್ರಾಣಗಳೆಂಬ ಐದು ಇಂದ್ರಿಯಗಳೂ, ವಾಕ್, ಪಾಣಿ, ಪಾದ, ಪಾಯು, ಉಪಸ್ಥಗಳೆಂಬ ಪಂಚಕರ್ಮೇಂದ್ರಿಯಗಳೂ ಸೇರಿಕೊಂಡಿವೆ. ಅಂದರೆ ಇದುವರೆಗೆ ೨೧ ತತ್ತ್ವಗಳು ಆದವು. ಶಿರಸ್ಸಿನಲ್ಲಿ ಇರುವ ಚಕ್ರದಲ್ಲಿ, ಮಾಯಾ, ಶುದ್ಧವಿದ್ಯಾ, ಮಹೇಶ್ವರ, ಸದಾಶಿವಾತ್ಮಕ ನಾಲ್ಕು ಇವೆ. ಮಾಯೆಯು ಮಹೇಶ್ವರನೊಡನೆ ಸೇರಿದರೆ ಜೀವವೆನಿಸಿಕೊಳ್ಳುತ್ತಾನೆ. ಶುದ್ಧ ವಿದ್ಯೆಯು ಸದಾಶಿವನೊಡನೆ ಒಬ್ಬಳೆಂದು ರೂಢಿಯನ್ನು ಹೊಂದುತ್ತಾಳೆ. ಆದ್ದರಿಂದ ಭಗವತಿಯು ೨೪ ತತ್ತ್ವಗಳನ್ನು ಅತಿಕ್ರಮಿಸಿ ೨೫ನೆಯ ತತ್ತ್ವ ಸದಾಶಿವನೊಡನೆ ಸೇರಿ ವಿಹರಿಸುತ್ತಾಳೆ ಎಂದು ಹೇಳಿದುದರಿಂದ ಪರಮಾತ್ಮ ಸ್ವರೂಪಳೆಂದು ಹೇಳಿದಂತಾಯಿತು.

ಪದ್ಯಾನುವಾದ

ಭೂಮಿ ಮೂಲಾಧಾರ ಚಕ್ರದಲಿ, ಮಣಿಪೂರ
ಚಕ್ರದಲಿ ಜಲವಗ್ನಿಯರಿಯೆ *ಸ್ವಾಧಿಷ್ಠಾನ
ಚಕ್ರದಲಿ, ಹೃದಯದಲಿ ಮಾರುತನು, ಮೇಲಿಹ ವಿಶುದ್ಧದಲ್ಲಾಕಾಶವು;
ಹುಬ್ಬುಗಳ ನಡುವೆಯಾಜ್ಞಾಚಕ್ರದಲ್ಲಿ ಮನಸು–
ಇಂತಿವೆಲ್ಲದರ ಕುಲಪಥವ ನೆರೆ ಭೇದಿಸುತ
ನೀ ಸಹಸ್ರಾರಕಮಲದಲಿ ಪತಿಯೊಡನೆಯೇಕಾಂತದಲಿ ನಲಿಯುತಿರುವೆ
॥ ೯ ॥

ಟಿಪ್ಪಣಿಗಳು

೧. ಷಟ್‌ಚಕ್ರಪಟ್ಟಿ

೧. ಈ ಶ್ಲೋಕದಲ್ಲಿ ವ್ಯಕ್ತವಾಗಿರುವ ವಿಷಯವನ್ನು ಹೀಗೆ ಪಟ್ಟಿರೂಪದಲ್ಲಿ ತೋರಿಸಬಹುದು.

ಶಿರಸ್ಸು	ಸಹಸ್ರದಳಪದ್ಮ		ಚಂದ್ರಸ್ಥಾನ (ಚಂದ್ರ ಖಂಡ)
ಹುಬ್ಬಿನ ಮಧ್ಯೆ	ಆಜ್ಞಾಚಕ್ರ	ಬ್ರಹ್ಮಗ್ರಂಥಿ	
ಕಂಠ	ವಿಶುದ್ಧಚಕ್ರ		ಸೂರ್ಯಸ್ಥಾನ ಸೂರ್ಯಖಂಡ)
ಎದೆ	ಅನಾಹತಚಕ್ರ	ವಿಷ್ಣುಗ್ರಂಥಿ	
ನಾಭಿ	ಮಣಿಪೂರಚಕ್ರ		ಅಗ್ನಿಸ್ಥಾನ ಅಗ್ನಿಖಂಡ) (೧)
ಕಿಬ್ಬೊಟ್ಟೆ	ಸ್ವಾಧಿಷ್ಠಾನಚಕ್ರ	ರುದ್ರಗ್ರಂಥಿ	
ಗುದದ್ವಾರ	ಮೂಲಾಧಾರಚಕ್ರ		

೨. ಷಟ್‌ಚಕ್ರಗಳ ವಿವರಣೆ

ಮೂಲಾಧಾರ ಚಕ್ರ

ಉಳಿದೆಲ್ಲ ಚಕ್ರಗಳಿಗೆ ಆಧಾರವಾಗಿದೆ. ಶರೀರ ಕಂಪಿಸಿ ಬೀಳದಹಾಗೆ ಮಾಡುವುದರಿಂದ ಇದನ್ನು ಮೂಲಾಧಾರ ಚಕ್ರವೆನ್ನುತ್ತಾರೆ. ಇದರ ಸ್ಥಾನ, ಗುದ ಪ್ರದೇಶ. ಮೂಲಾಧಾರ ಚಕ್ರದಲ್ಲಿ ೪ ದಳಗಳಿರುತ್ತವೆ. ಅಭಿಮಾನಿ ದೇವತೆ, ಗಣಪತಿ.

ಸ್ವಾಧಿಷ್ಠಾನ ಚಕ್ರ

ಕುಂಡಲಿನೀ ಶಕ್ತಿಯು ಇಲ್ಲಿ ಪದ್ಮಾಸನಾರೂಢಳಾಗಿ ಕುಳಿತಿರುತ್ತಾಳೆ ಮತ್ತು ಆಕೆಯ ವಾಸಸ್ಥಾನವಾದ್ದರಿಂದ ಸ್ವಾಧಿಷ್ಠಾನ ಚಕ್ರವೆನ್ನುತ್ತಾರೆ. ಇದರಲ್ಲಿ ೬ ದಳಗಳಿರುತ್ತವೆ. ಲಿಂಗಮೂಲದಲ್ಲಿ ಇದು ಇರುತ್ತದೆ. ಅಭಿಮಾನಿ ದೇವತೆ ಚತುರ್ಮುಖನು.

ಮಣಿಪೂರ ಚಕ್ರ

ನಾಭಿಯ ಹತ್ತಿರವಿರುತ್ತದೆ. ಇದರಲ್ಲಿ ೧೦ ದಳಗಳಿವೆ. ಸಾಧಕನ ಉಪಾಸ್ಯ ದೇವಿಯು ಈ ಚಕ್ರಧಲ್ಲಿದ್ದು ದಿವ್ಯಮಣಿಗಳಿಂದ ಈ ಭಾಗವನ್ನು ತುಂಬುತ್ತಾಳೆ. ಆದ್ದರಿಂದ ಇದನ್ನು ಮಣಿಪೂರ ಚಕ್ರವೆನ್ನುತ್ತಾರೆ. ಅಭಿಮಾನಿ ದೇವತೆ ವಿಷ್ಣು.

ಅನಾಹತ ಚಕ್ರ

ಹೃದಯ ಪ್ರದೇಶದಲ್ಲಿ ಈ ಚಕ್ರವಿದೆ. ನಾದಕ್ಕೆ ತಡೆಯಿಲ್ಲದ ಸ್ಥಾನವಾದ್ದರಿಂದ ಅನಾಹತ ಚಕ್ರವೆಂದು ಕರೆಯುತ್ತಾರೆ. ಈ ಚಕ್ರಕ್ಕೆ ದಳಗಳು ೧೨ ಅಭಿಮಾನಿ ದೇವತೆ ರುದ್ರನು.

ವಿಶುದ್ಧಿ ಚಕ್ರ

ಸ್ಫಟಿಕದಂತೆ ಅತಿ ನಿರ್ಮಲವಾಗಿರುವುದರಿಂದ ಈ ಚಕ್ರಕ್ಕೆ ವಿಶುದ್ಧಿ ಚಕ್ರವೆಂದು ಹೆಸರು. ಇದರ ಸ್ಥಾನ ಕಂಠ ಪ್ರದೇಶ. ಇದಕ್ಕೆ ೧೬ ದಳಗಳು; ಅಭಿಮಾನಿ ದೇವತೆ ಸದಾಶಿವನು.

ಆಜ್ಞಾ ಚಕ್ರ

ಸಾಧಕನು ತನ್ನ ಸಾಧನೆಯಿಂದ ಸಮಾಧಿ ಸ್ಥಿತಿಗೇರಿದಾಗ ಆ ಸ್ಥಿತಿಯಲ್ಲಿ ದೇವಿ ಕಿಂಚಿತ್ ಗೋಚರಿಸಿ ಸಾಧಕನನ್ನು ಆನಂದಪರವಶಗೊಳಿಸುವಳು, ಸಮಾಧಿಸ್ಥಿತಿಯ ನಂತರ ಸಾಧಕನು ಬಹಿರ್ಮುಖನಾದಾಗ, ದೇವಿಯ ರೂಪವು ಮಾಯವಾಗಿ ಸಾಧಕನಿಗೆ ಅಜ್ಞಾನವು ಕವಿಯುತ್ತದೆ. ಆದಕಾರಣ ಆಜ್ಞಾ ಚಕ್ರವೆಂದು ಕರೆಯುತ್ತಾರೆ. ಅಭಿಮಾನಿದೇವತೆ ಗುರು.

ತ್ರಿಖಂಡಗಳು

ಎರಡೆರಡು ಚಕ್ರಗಳ ನಡುವಣ ಪ್ರದೇಶಕ್ಕೆ ಬೇರೆಬೇರೆ ಹೆಸರುಗಳಿವೆ. ಮೂಲಾಧಾರ ಮತ್ತು ಸ್ವಾಧಿಷ್ಠಾನ ಈ ಎರಡುಚಕ್ರಗಳ ನಡುವಣ ಪ್ರದೇಶಕ್ಕೆ **ಅಗ್ನಿಕುಂಡ**ವೆಂದು ಹೆಸರು. ಇದರ ಮೇಲಿನ ಭಾಗವೇ **ರುದ್ರಗ್ರಂಥಿ**.

ಮಣಿಪೂರ ಮತ್ತು ಅನಾಹತ ಚಕ್ರಗಳ ಮಧ್ಯಪ್ರದೇಶಕ್ಕೆ **ಸೂರ್ಯಖಂಡ** ಎನ್ನುವರು. ಇದರ ಮೇಲ್ಭಾಗವನ್ನು **ವಿಷ್ಣುಗ್ರಂಥಿ** ಎಂದು ಕರೆಯುವರು.

ವಿಶುದ್ಧಿ ಚಕ್ರ ಮತ್ತು ಆಜ್ಞಾ ಚಕ್ರಗಳ ನಡುವೆ ಇರುವ ಪ್ರದೇಶ **ಸೋಮಖಂಡ** ಎಂದು ಕರೆಯುವರು. ಇದರ ಮೇಲಿನ ಭಾಗವನ್ನು **ಬ್ರಹ್ಮಗ್ರಂಥಿ** ಎಂದು ಕರೆಯುವರು.

ಈ ೬ ಚಕ್ರಗಳ ದಳಗಳನ್ನು ಸೇರಿಸಿದಾಗ ೫೦ ದಳಗಳಾಗುವುವು. ಇವುಗಳನ್ನೇ ಅಕಾರಾದಿಯಿಂದ ಕ್ಷಕಾರದವರೆಗೆ **ಪಂಚಶತ್ ಮಾತೃಕೆಗಳು** ಎಂದು ಕರೆಯುತ್ತಾರೆ. (ಹೋ – ಪು ೧೧–೧೨)

(ಕ–ಪುಟ ೧೮)

(ಹೋ–ಪುಟ ೧೧–೧೨)

ಸಮಯಾಚಾರ ಷಟ್ಚಕ್ರ ಧ್ಯಾನಪದ್ಧತಿ

ಸಮಯಾಚಾರದಲ್ಲಿ ಬಿಂದುವು ಚತುರಶ್ರದಲ್ಲಿದ್ದು ತ್ರಿಕೋಣದಲ್ಲಿರುತ್ತದೆ. ಈ ತ್ರಿಕೋಣ ಊರ್ಧ್ವಮುಖವಾಗಿರುತ್ತದೆ. ಸಮಯಾಚಾರಿಗಳು ಮೂಲಾಧಾರದಿಂದ ಸಹಸ್ರಾರದವರೆಗೂ ಶರೀರದ ಕೆಳಗಿನ ಭಾಗ (ಗುದಸ್ಥಾನ) ದಿಂದ ಶಿರಸ್ಸಿನವರೆಗೂ ತಮ್ಮ ಧ್ಯಾನಪದ್ಧತಿಯನ್ನು ಮುಂದುವರೆಸುತ್ತಾರೆ.

ಕಏಈಲಹ್ರೀಂ, ಹಸಕಹಲಹ್ರೀಂ ಸಕಲಹ್ರೀಂ ಮಂತ್ರವನ್ನು ಸಾಧನೆ ಮಾಡುತ್ತಾರೆ. ಶುಕ್ಲಪಕ್ಷ ಪಾಡ್ಯದಿಂದ ಹುಣ್ಣಿಮೆಯವರೆಗೆ ನಿತ್ಯಾಧಿದೇವತೆಗಳನ್ನು ವರಸೆಯಾಗಿ ಪರಿಗಣಿಸುತ್ತಾರೆ.

ಹೀಗೆ ಸಮಯಾಚಾರದಲ್ಲಿ ಧ್ಯಾನಪದ್ಧತಿ ಮೊದಲಿಂದ ಕೊನೆವರೆಗೆ ಊರ್ಧ್ವಮುಖವಾಗಿರುತ್ತದೆ. ಅಂದರೆ ಆರೋಹಣ ಕ್ರಮವಾಗಿರುತ್ತದೆ.

(ಪ–ಪುಟ ೨೦೭)

ಕೌಲಾಚಾರ ಷಟ್ಚಕ್ರ ಧ್ಯಾನಪದ್ಧತಿ

ಕೌಲಾಚಾರದವರು (ವಾಮಾಚಾರರು) ಸಹಸ್ರಾರದಿಂದ ಕೆಳಕ್ಕೆ ಅಂದರೆ ಶಿರಸ್ಸಿನಿಂದ ಶರೀರದ ಕೆಳಗಿನ ಭಾಗ ಗುದಸ್ಥಾನದವರೆಗೆ ಧ್ಯಾನಿಸುತ್ತಾರೆ. ಅಂದರೆ ಈ ಪದ್ಧತಿಯಲ್ಲಿ ಬಿಂದುವು ಚತುರಸ್ರದಲ್ಲಿದ್ದು ತ್ರಿಕೋಣದಲ್ಲಿರುತ್ತದೆ. ಅಂದರೆ ತ್ರಿಕೋಣವು ಅಧೋಮುಖವಾಗಿರುತ್ತದೆ. ಸಕಲ ಹ್ರೀಂ, ಹಸಕಹಲಹ್ರೀಂ ಕಏಈಲಹ್ರೀಂ ವರಸೆಯಲ್ಲಿ ಮಂತ್ರಸಾಧನೆ ಮಾಡುತ್ತಾರೆ.

ಕೃಷ್ಣಪಕ್ಷ ಪಾಡ್ಯಮಿಯಿಂದ ಅಮಾವಾಸ್ಯೆಯವರೆಗೂ ನಿತ್ಯಾಧಿದೇವತೆಗಳನ್ನು ವರಸೆಯಾಗಿ ಪರಿಗಣಿಸುತ್ತಾರೆ. ಇವರ ಕ್ರಮ ಕೊನೆಯಿಂದ ಮೊದಲಿನವರೆಗೆ ಅವರೋಹಣ ಕ್ರಮ ಆಗಿರುತ್ತದೆ. ಅಧೋಮುಖವಾಗಿರುತ್ತದೆ.

ಈ ಇಬ್ಬರಲ್ಲಿ (ಸಮಯಾಚಾರಿಗಳು ಮತ್ತು ಕೌಲಾಚಾರಿಗಳು) ಸಾಧನಾ ವಿಧಾನ ಭಿನ್ನ ಕ್ರಮವಾದರೂ ಧ್ಯೇಯವೊಂದೇ. ಅದೇ ಕುಂಡಲಿನೀ ಶಕ್ತಿಯನ್ನು ಜಾಗೃತಗೊಳಿಸುವುದು.

(ಪ–ಪುಟ ೨೦೮)

ಸಹಸ್ರಾರೇ ಪದ್ಮೇ ಸಹರಹಸಿ ಪತ್ಯಾ ವಿಹರಸೇ

(ಸಹಸ್ರಾರ ಕಮಲದಲ್ಲಿ ಏಕಾಂತದಲ್ಲಿ ಪತಿಯಾದ ಸದಾಶಿವನೊಡನೆ ಕ್ರೀಡಿಸುತ್ತೀಯೆ)

ಈ ಮಾತಿನಲ್ಲಿ ೪ ತತ್ತ್ವಗಳು ಸೂಚಿತವಾಗಿವೆ. ಅವು ಯಾವುವೆಂದರೆ ಮಾಯಾ, ಶುದ್ಧವಿದ್ಯಾ, ಮಹೇಶ್ವರ, ಸದಾಶಿವ ರೂಪದ ತತ್ತ್ವಗಳು, ಷಟ್‌ಚಕ್ರಗಳ ೨೧ ತತ್ತ್ವಗಳು ಸೇರಿ ಒಟ್ಟು ೨೫ ತತ್ವಗಳಾಗುತ್ತವೆ.

ಸಾದಾಖ್ಯಾ ಎಂಬ ಕಲೆಯು ಇಪ್ಪತ್ತೈದನೆಯ ತತ್ತ್ವವಾದ ಸದಾಶಿವನೊಡನೆ ಸೇರಿ ೨೬ನೇ ತತ್ತ್ವವಾಗುತ್ತದೆ. ಏಕೆಂದರೆ ಮೇಳನವು ಒಂದು ಬೇರೆ ತತ್ತ್ವವೇ ಆಗುತ್ತದೆ. ಮೇಳನ ತಾದಾತ್ಮ ಸ್ವರೂಪದಿಂದ ಬೇರೆ ಒಂದು ತತ್ತ್ವವಾಗಿರುತ್ತದೆ ಎಂಬುದು ರಹಸ್ಯಾರ್ಥ.

(ಶೇ. ಪು. ೨೭)


ಬೈಂದವ ಸ್ಥಾನ ವಿಚಾರ

ಬೈಂದವ ಸ್ಥಾನವು ೪ ಶಿವಚಕ್ರಗಳ ಮೇಲೆ ೫ ಶಕ್ತಿ ಚಕ್ರಗಳ ಕೆಳಗೆ ಇದೆ. ೪ ಶಿವಚಕ್ರಗಳಿಂದಲೂ ೫ ಶಕ್ತಿಚಕ್ರಗಳಿಂದಲೂ ಕೂಡಿ ಶಿವಶಕ್ತಿಮಯವಾಗಿ ಇರುವ ಶ್ರೀ ಚಕ್ರವನ್ನು ಶಿವಶಿವೆಯರ ಶರೀರವೆಂಬುದಾಗಿ ತಿಳಿಯಬೇಕು.

ಇಲ್ಲಿ ಶ್ರೀಚಕ್ರವೆಂದರೆ ತ್ರಿಕೋಣ, ಅಷ್ಟಕೋಣ, ಎರಡು ದಶಾರಗಳು, ಚತುರ್ದಶ ಕೋಣ – ರೂಪವಾದ ೫ ಅಂಗಗಳು, ಶಕ್ತಿ ಚಕ್ರಗಳೆಂದರೆ ಅಷ್ಟದಳ, ಹದಿನಾರು ದಳ, ಮೂರು ಮೇಖಲೆಗಳು, ಭೂಪುರತ್ರಯ–ಈ ರೂಪವಾದವು ಶಿವಚಕ್ರಗಳು ಎಂದು ತಿಳಿಯಬೇಕು. ಆದುದರಿಂದ ಶಕ್ತಿ ಚಕ್ರಗಳ ಹೊರಗಡೆ ಶಿವಚಕ್ರಗಳಿವೆ. ಶಿವನು ಶಕ್ತಿಯಿಂದ ಹೊರಗೆ ಇರುವುದು ಯುಕ್ತವಲ್ಲವಾದ್ದರಿಂದ ಆ ಶಿವಚಕ್ರಗಳನ್ನು ಬಿಂದುರೂಪದಿಂದ ಆಕರ್ಷಣೆ ಮಾಡಿ ಶಕ್ತಿಚಕ್ರಗಳ ಒಳಗೆ ಸ್ಥಾಪಿಸಲಾಗಿದೆ. ಆದ್ದರಿಂದಲೇ ಬಿಂದುವು ೪ ಶಿವಚಕ್ರಗಳ ರೂಪವಾಗಿದ್ದು ೫ ಶಕ್ತಿಚಕ್ರಗಳಲ್ಲಿ ವ್ಯಾಪಿಸಿ ಕೊನೆಗೊಳ್ಳುವ ಕಾರಣ ಶಿವ–ಶಕ್ತಿಗಳ ಐಕ್ಯವುಂಟಾಗುತ್ತದೆ.

(ಶೇ. ಪು ೨೮)

ಯಂತ್ರಾರಾಧನೆ (ಶ್ಲೋಕ ೯)



ಯಂತ್ರ ರಚನೆ :	ಕಸ್ತೂರಿಲೇಪನ ಹಾಕಿದ ಚಿನ್ನದ ರೇಖಿನಲ್ಲಿ ಯಂತ್ರದ ನಕ್ಷೆ ಬರೆಯಬೇಕು.
ಪೂಜೆ :	ಈಶಾನ್ಯ ದಿಕ್ಕಿಗೆ ಅಭಿಮುಖವಾಗಿ ಕುಳಿತು ಬಿಳಿಹೂಗಳಿಂದ ಲಲಿತಾ ತ್ರಿಶತಿಯಿಂದ ಅರ್ಚನೆ ಮಾಡಬೇಕು.
ನೈವೇದ್ಯ :	ಅನ್ನ, ಕ್ಷೀರ ಪಾಯಸ, ಜೇನುತುಪ್ಪ, ಕೊಬ್ಬರಿ ತುರಿ
ಜಪ :	ಪ್ರತಿದಿನ ೧೦೦೦ ಬಾರಿಯಂತೆ ೪೫ ದಿನಗಳು ಜಪಿಸಬೇಕು.
ಫಲ :	**ಪಂಚಭೂತಗಳ ಮೇಲೆ ಜಯ; ದೇಶಾಂತರ ಹೋದವರು ಶೀಘ್ರದಲ್ಲಿ ಆಗಮಿಸುವರು.**

ಶ್ಲೋಕ ೧೦

ದೇವಿಯ ವಿಶ್ರಾಂತಿಧಾಮದ ವರ್ಣನೆ

ಸುಧಾಧಾರಾಸಾರೈಶ್ಚರಣಯುಗಲಾಂತರ್ವಿಗಲಿತೈಃ
ಪ್ರಪಂಚಂ ಸಿಂಚಂತೀ ಪುನರಪಿ [೧]ರಸಾಮ್ನಾಯಮಹಸಃ ।
ಅವಾಪ್ಯ[೨] ಸ್ವಾಂ ಭೂಮಿಂ ಭುಜಗನಿಭಮಧ್ಯುಷ್ಟವಲಯಂ
ಸ್ವಮಾತ್ಮಾನಂ ಕೃತ್ವಾ ಸ್ವಪಿಷಿ ಕುಲಕುಂಡೇ [೩]ಕುಹರಿಣಿ ॥ ೧೦ ॥

ಪಾಠಾಂತರ

೧. (ರಸಮ್ನಾಯ ಮಹಸಃ)= ರಸಾಮಯ ಮಹಸಾ (ಸು)

೨. (ಸ್ವಾಂ)=ತ್ವಾಂ (ಪೋ)

೩. (ಕುಹರಿಣಿ) = ಕುಹರಿಣೀ (ಸು)

ಪದವಿಭಾಗ

(ಸುಧಾಧಾರಾಸಾರೈಶ್ಚರಣಯುಗಲಾಂತರ್ವಿಗಲಿತೈಃ)= ಸುಧಾಧಾರಾಸಾರೈಃ+ ಚರಣಯುಗಲ+ಅಂತಃ+ವಿಗಲಿತೈಃ, ಪ್ರಪಂಚಂ, ಸಿಂಚಂತೀ (ಪುನರಪಿ)=ಪುನಃ + ಅಪಿ, ರಸಾಮ್ನಾಯಮಹಸಃ, ಅವಾಪ್ಯ, ಸ್ವಾಂ, ಭೂಮಿಂ, (ಭುಜಗನಿಭಮಧ್ಯುಷ್ಟವಲಯಂ) = ಭುಜಗನಿಭಂ+ಅಧ್ಯುಷ್ಟವಲಯಂ, (ಸ್ವಮಾತ್ಮಾನಂ) = ಸ್ವಂ + ಆತ್ಮಾನಂ, ಕೃತ್ವಾ, ಸ್ವಪಿಷಿ ಕುಲಕುಂಡೇ, ಕುಹರಿಣಿ.

ಅನ್ವಯಾರ್ಥ

(ಹೇ ಭಗವತಿ)	(ಎಲೈ ದೇವಿಯೆ)
ಚರಣಯುಗಲಾಂತರ್ವಿಗಲಿತೈಃ	(ನಿನ್ನ) ಎರಡು ಪಾದಗಳ– ಒಳಗಿನಿಂದ–ಸುರಿಯುತ್ತಿರುವ
ಸುಧಾಧಾರಾಸಾರೈಃ	(ಸುಧಾ+ಧಾರಾ+ಆಸಾರೈಃ) ಅಮೃತದ – ಧಾರೆಗಳ – ನಿರಂತರವಾದ ಸಂಪಾತಗಳಿಂದ (ಸುರಿಯುವಿಕೆಗಳಿಂದ)
ಪ್ರಪಂಚಂ ಸಿಂಚಂತೀ	೭೨ ಸಾವಿರ ನಾಡಿಗಳ ಮಾರ್ಗವನ್ನು ನೆನೆಯಿಸುತ್ತಾ (ತೋಯಿಸುತ್ತಾ)

ರಸಾಮ್ನಾಯ ಮಹಸಃ	(ರಸ+ಆಮ್ನಾಯ+ಮಹಸಃ) ಶಿರಸ್ಸಿನಲ್ಲಿರುವ ಚಂದ್ರನ ಅಮೃತ ರಸದ ಆಮ್ನಾಯ ಗುಣವುಳ್ಳ ಕಾಂತಿಯ
(ಸಕಾಶಾತ್)	ಸಮೀಪದ ದೆಸೆಯಿಂದ
ಸ್ವಾಂ ಭೂಮಿಂ	ತನ್ನ ಕ್ಷೇತ್ರವನ್ನು (ಮೂಲಾಧಾರ ಚಕ್ರವನ್ನು ಕುರಿತು)
ಪುನರಪಿ ಅವಾಪ್ಯ	ಮತ್ತೆ ಬಂದು ಕೂಡ
ಭುಜಗನಿಭಮಂ ಅಧ್ಯುಷ್ಟ ವಲಯಂ	ಭುಜಗನಿಭಮಂ ಅಧ್ಯುಷ್ಟ ವಲಯಂ = ಸರ್ಪಕ್ಕೆ-ಸಮಾನವಾದ (ಮೂರೂವರೆ ಸುತ್ತನ್ನು) - ಹೊಂದಲ್ಪಟ್ಟ- ದುಂಡು ಆಕಾರವುಳ್ಳ
ಸ್ವಮಾತ್ಮಾನಂ ಕೃತ್ವಾ	ತನ್ನದನ್ನಾಗಿ ಮಾಡಿಕೊಂಡು
ಕುಲಕುಂಡೇ	ಸುಷಮ್ನಾನಾಡಿಯ ಮೂಲಭಾಗದಲ್ಲಿ ಅಣಗಿಸಿಕೊಂಡಿರುವ ಸ್ಥಾನ ಅಂದರೆ ಆಧಾರ ಚಕ್ರದಲ್ಲಿ
ಕುಹರಿಣಿ	(ತಾವರೆ ಗೆಡ್ಡೆಯ ಮಧ್ಯದಲ್ಲಿರುವ) ರಂಧ್ರವುಳ್ಳ ಗುಹೆಯಲ್ಲಿ
ಸ್ವಪಿಷಿ	ನಿದ್ರೆ ಹೋಗುತ್ತೀಯೆ.

ತಾತ್ಪರ್ಯ

ಓ ಭಗವತಿಯೆ, ನಿನ್ನ ಪಾದಕಮಲಗಳ ಒಳಗಿನಿಂದ ಹರಿದುಬರುತ್ತಿರುವ ಅಮೃತ ಧಾರೆಗಳ ಪ್ರವಾಹಗಳಿಂದ ೭೨೦೦೦ ನಾಡಿಗಳನ್ನು ತೋಯಿಸುತ್ತಿರುವೆ. ಶಿರಸ್ಸಿನಲ್ಲಿರುವ ಚಂದ್ರನನ್ನು ಸಿಂಪಡಿಸುತ್ತಾ ಅಲ್ಲಿಂದ ಹೊರಟು ನಿನ್ನ ವಾಸಸ್ಥಾನವಾದ ಆಧಾರ ಚಕ್ರವನ್ನು ಸೇರುತ್ತೀಯೆ. ಈ ಆಧಾರಚಕ್ರದಲ್ಲಿ ಕುಂಡಲಾಕಾರ ಮಾಡಿಕೊಂಡು ಸುತ್ತಿಕೊಂಡು ಮಲಗಿರುವ ಸರ್ಪದಂತೆ ಕಮಲದ ಕರ್ಣಿಕೆಯ ಮಧ್ಯದಲ್ಲಿರುವ ಸಣ್ಣ ರಂಧ್ರದಂತೆ ಸೂಕ್ಷ್ಮವಾಗಿ, ಪೃಥಿವೀತತ್ತ್ವದಲ್ಲಿ ಕುಂಡಲಿನೀಶಕ್ತಿಯಾಗಿ ನಿದ್ರಿಸುತ್ತೀಯೆ.

ಪದ್ಯಾನುವಾದ

ಅಡಿದಾವರೆಗಳಿಂದ ಸುರಿಮಳೆಯ ತೆರದಲ್ಲಿ
ಸುರಿವಮೃತವರ್ಷದಿಂ ನಾಡೀಪ್ರಪಂಚವನು
ತೋಯಿಪಳು ಸಾಹಸ್ರಕಮಲಸ್ಥ ಚಂದ್ರಮಂಡಲ ಸಮಾಯುಕ್ತಳೆನಿಸಿ;

ಮತ್ತೆಯ್ದಿ ತನ್ನ ಮೂಲಾಧಾರ ಭೂಮಿಯನು
ಪುಚ್ಛ ಕಚ್ಚಿದ ಸರ್ಪವನು ಪೋಲ್ವ ಕುಂಡಲಿನಿ-
ಶಕ್ತಿಯನು ತನ್ನ ತೆರನಾಗಿಸುವ ಕುಲಕುಂಡಕುಹರದಲಿ ನಿದ್ರಿಸುವಳು ॥ ೧೦ ॥

ಟಿಪ್ಪಣಿಗಳು

೧. **ಪ್ರಪಂಚಂ ಸಿಂಚಂತೀ**

ಶರೀರದಲ್ಲಿರುವ ೭೨೦೦೦ ನಾಡಿಗಳ ಮಂಡಲವನ್ನು ಪ್ರಪಂಚ ಎನ್ನುತ್ತಾರೆ.

(ಪ–ಪುಟ ೨೦೮)

೨. **ಸುಧಾಧಾರಾಸಾರೈಃ ಚರಣಯುಗಲಾಂತರ್ವಿಗಲಿತೈಃ**

(ನಿನ್ನ ಪಾದಯುಗ್ಮಗಳಿಂದ ಹರಿಯುತ್ತಿರುವ ಸುಧಾಧಾರೆಯಿಂದ) ದೇವಿ ಶಿರಸ್ಸಿನಲ್ಲಿರುವ ಸಹಸ್ರ ಕಮಲದೊಳಗೆ ಶ್ರೀ ಚಕ್ರರೂಪವಾಗಿರುವ ಚಂದ್ರಬಿಂಬದ ಮಧ್ಯೆ ಇರುವ ಭಗವತಿಯ ಚರಣಕಮಲಗಳನ್ನು ಅಭಿಷೇಚನಮಾಡಿದ ಅಮೃತಮಯವಾದ ಜಲದಿಂದ ಸಾಧಕನ ಸಮಸ್ತ ಶರೀರವನ್ನು ಸ್ನಾನ ಮಾಡಿಸುತ್ತಾಳೆ.

(ಶೇ–ಪುಟ ೩೨)

೩. ಕುಂಡಲಿನೀರೂಪದಲ್ಲಿ ಭಗವತಿ ಸಹಸ್ರಾರ ಚಕ್ರದಲ್ಲಿ ಸದಾಶಿವನೊಡನೆ ಕ್ರೀಡಿಸಿ ಅನಂತರ ತನ್ನ ಸಹಜರೂಪಾದ ಸರ್ಪರೂಪವನ್ನು ಹೊಂದಿ ಮೂಲಾಧಾರ ಪದ್ಮವನ್ನು ಸೇರಿ ನಿದ್ರಿಸುತ್ತಾಳೆ ಎಂದು ವಾಮಕೇಶ್ವರ ತಂತ್ರದಲ್ಲಿ ಹೇಳಿದೆ.

(ಪೋ–ಪುಟ ೫೫)

೪. ಮೂಲಾಧಾರ ಚಕ್ರಕ್ಕೆ ಕುಲ ಎಂದು ಹೆಸರು. ಅದನ್ನು ಪೂಜಿಸುವವರೇ ಕೌಲರು. ಶಿರಸ್ಸಿನ ಮಧ್ಯದಲ್ಲಿರುವ ಸಹಸ್ರಾರ ಚಕ್ರದಲ್ಲಿ ಚಂದ್ರಮಂಡಲವಿರುವುದನ್ನು ಯೋಗಶಾಸ್ತ್ರದಲ್ಲಿ ಹೇಳಿದೆ. ಈ ಚಂದ್ರ ಮಂಡಲವೇ ಸಮಯಿಗಳ ಮತದಲ್ಲಿ ಶ್ರೀಚಕ್ರವಾಗಿದೆ.

(ಶೇ–ಪುಟ ೩೧)

೫. ಭವಾನೀ, ಭುಜಂಗ ಪ್ರಯಾತ ಸ್ತೋತ್ರದಲ್ಲಿ ಹೀಗೆ ಹೇಳಿದೆ. (ಸ್ತೋತ್ರ–೧) ಹೇ ದೇವಿ, ಷಟ್ಚಕ್ರಗಳ ಪದ್ಮದಲ್ಲಿ ಸಂಚರಿಸಿ ಸಾಧಕನ ಶಿರಸ್ಸಿನ

ಮೇಲಿರುವ ಸಹಸ್ರಾರ ಚಕ್ರವೆಂಬ ಸಹಸ್ರಾರ ಪದ್ಮದಲ್ಲಿ, ಸಹಸ್ರ ಕೋಟಿ ಚಂದ್ರಕಾಂತಿಯಿಂದ ಪ್ರಕಾಶಿಸುತ್ತಾ, ಶತಸಹಸ್ರಕೋಟಿ ಅಮೃತ ಬಿಂದುಗಳಿಂದ ನಾಡೀಮಂಡಲಗಳನ್ನು ಅಭಿಷೇಕಿಸುತ್ತಾ, ಆ ಅಮೃತ ರಸಾಸ್ವಾದನೆಯಲ್ಲಿ, ಸರ್ವ ಪ್ರಾಪಂಚಿಕಭೋಗಗಳನ್ನು ತಿರಸ್ಕರಿಸುವ ಸಾಧಕರನ್ನು ಅಮೃತತ್ವಸ್ಥಾಯಿಗೆ ಸೇರಿಸುವ, ಹೇ ತಾಯಿ, ನಿನ್ನಲ್ಲಿ ನಾನು ಶರಣಾಗುತ್ತಿದ್ದೇನೆ.

(ಪವನಿ–ಪುಟ ೩೫೧)

೬. **ಕುಲಕುಂಡೇ ಸ್ವಪಿಷಿ**

"ಮೂಲಾಧಾರೈಕನಿಲಯಾ ಎಂದು ಲಲಿತಾ ಸಹಸ್ರನಾಮದಲ್ಲಿ (ನಾಮ ಸಂಖ್ಯೆ ೯೯) ಹೇಳಲಾಗಿದೆ. (ಮೂಲಾಧಾರವೇ ಮುಖ್ಯ ನಿವಾಸವಾಗಿ ಇರುವವಳು) ಮೂಲಾಧಾರ ಚಕ್ರವನ್ನು ೪ ದಳಗಳ ಕಮಲದಂತೆ ಚಿತ್ರಿಸಲಾಗುತ್ತದೆ. ಅದರ ಮಧ್ಯಭಾಗದಲ್ಲಿ ಕುಲಕುಂಡವೆಂಬ ಒಂದು ಬಿಂದುವಿದೆ. ನೋಟಕ್ಕೆ ತೋರದೆ ಗುಪ್ತವಾಗಿರುವ ಕುಂಡಲಿನಿ ಇಲ್ಲಿ ನಿದ್ರಿಸುತ್ತ ಇರುತ್ತದೆ. ಮೂಲವೆಂದರೆ ಬೇರು ಅಥವಾ ಆಧಾರ. ಆಧಾರವೆಂದರೂ ಮೂಲವೇ. ಮೂಲಾಧಾರವೆಂಬ ಪರಿಭಾಷೆಯ ಸುಷುಮ್ನಾದ ಬೇರನ್ನೂ ಕುಂಡಲಿನಿಯ ಆಧಾರವನ್ನೂ ಸೂಚಿಸುತ್ತದೆ. ಕುಂಡಲಿನಿಯು ಉದಯಿಸಿ ಮೇಲೇರುತ್ತಿದ್ದಂತೆ, ಅದು ಅಡ್ಡಹಾಯುವ ಷಟ್ ಚಕ್ರಗಳನ್ನು ಮೇಲೆ ಉಲ್ಲೇಖಿಸಲಾಗಿದೆ. ಸುಷುಮ್ನಾಗೆ ಸೇರುವ ಮಾರ್ಗದಲ್ಲಿ ಕುಂಡಲಿನಿ ಈ ೬ ಚಕ್ರಗಳ ಮೂಲಕ ಹಾದು ಹೋಗುತ್ತದೆ. ಇದೇ ಯೋಗಿಗಳ ಸರ್ವಜ್ಞತ್ವ ಮೂಲ.

(ತಿರು–ಪುಟ ೯೨)

೬. **ಕುಲಕುಂಡೇ ಕುಹರಿಣಿ ಸ್ವಪಿಷಿ**

ದೇವಿಯ ಚರಣಗಳ ಸುಧಾಸಾರಸ್ತೋತ್ರವು ಜಗತ್ತನ್ನು ಪಾವನಗೊಳಿಸುವುದನ್ನು ತೈತ್ತರೀಯ ಬ್ರಾಹ್ಮಣ, ೩–೧–೨) ಹೇಳುತ್ತದೆ. "ಸೂರ್ಯ, ಚಂದ್ರ, ನಕ್ಷತ್ರಗಳ ಬೆಳಕಿನಲ್ಲಿ ಪ್ರಕಾಶಮಾನವಾಗಿ ೧೪ ಲೋಕಗಳ ಪ್ರವೇಶಮಾರ್ಗಗಳನ್ನು ಪವಿತ್ರವನ್ನಾಗಿ, ಮಹತ್ವದ್ದನ್ನಾಗಿ ಮಾಡುವ ಧಾರಾಕಾರವಾದ ಸುಧೆಯನ್ನು ೩೨ ಸಹಸ್ರ ನಾಡಿಗಳಿಂದ ಬಹುವಾಗಿ ಕಡೆದು ತೆಗೆದು ಲೋಕನಿವಾಸಿಗಳನ್ನು ತೃಪ್ತಗೊಳಿಸುವ ದೇವಿಯ ಪಾದಗಳು ನಮಗೂ ತೃಪ್ತಿ ಕೊಡಲಿ.

(ಪು–ಪುಟ ೬೫)

೭. ಸುಧಾಧಾರಾಸಾರೆಯಾದ ದೇವಿಯು ಎಲ್ಲಾ ಇಷ್ಟಾರ್ಥಗಳನ್ನು ನೆರವೇರಿಸುತ್ತಾಳೆ. ಇಂಥ ಆರಾಧನೆಯನ್ನು ಬಿಟ್ಟು ಅನ್ಯಮತ ದೈವ, ಧರ್ಮ, ಮತಸಂಪ್ರದಾಯಗಳನ್ನು ಹುಡುಕುತ್ತಾ ಹೋಗುವುದು ಎಂದರೆ (ಸಿದ್ಧಮನ್ನಂಪರಿತ್ಯಜ್ಯ ಭಿಕ್ಷಾಮಟತಿ ದುರ್ಮತಿಃ) ಸಿದ್ಧವಾದ ಅನ್ನಬಿಟ್ಟು, ಬುದ್ಧಿಕೆಟ್ಟವನು ಭಿಕ್ಷಾಟನೆಗೆ ಹೊರಟಂತೆ ಎಂದಿದ್ದಾರೆ ಆದಿಶಂಕರರು.

(ಪು–ಪುಟ ೬೫).

೮. **ರಸಾಮ್ನಾಯ ಮಹಸಃ**

"ಚಂದ್ರಮಂಡಲದಿಂದ ಅಮೃತಮಯ ರಸಧಾರೆ ಕೆಳಗೆ ಹರಿದುಬರುತ್ತಿದೆ. ಚಂದ್ರಮಂಡಲ ಎನ್ನುವುದು ಸಹಸ್ರಾರಚಕ್ರವನ್ನೇ ಸಂಕೇತಿಸುವ ಮಾತಾಗಿದೆ. ಸೂರ್ಯ, ಅಗ್ನಿ, ಚಂದ್ರ ಇವು ಮೂರೂ ಬೆಳಕಿನ ನೆಲೆಗಳು. ಅಗ್ನಿಯಲ್ಲಿ ಬೆಳಕು ಕಮ್ಮಿ ಮತ್ತು ಸುಡುವ ಶಾಖ ಹೆಚ್ಚಳದಲ್ಲಿದೆ. ಸೂರ್ಯನಲ್ಲಿ ಬೆಳಕು ಶಾಖ–ಎರಡೂ ತೀವ್ರ ಉನ್ನತಿಯಲ್ಲಿವೆ. ಚಂದ್ರನಲ್ಲಿ ಮಾತ್ರ ಶಾಖವಿಲ್ಲದ ಶೀತಲವಾದ ಬೆಳಕು! ಇದೇ ಪ್ರಾಣದ ಇನ್ನೊಂದು ಮುಖ, ಇದೇ ಸೋಮ. ಇದೇ ಪ್ರಾಣರಸ. ಇದು ಪರಮಾಹ್ಲಾದಕಾರಕ ಇದೇ ಅಮೃತ ನೀರೆಂಬ ಜೀವದಾಯಕ ಬೆಳಕು, ನೀರಿನಲ್ಲಿರುವ ಜೀವರಸ."

(ತೋ–ಪುಟ ೧೩೪)

೯. ರಸಾಮ್ನಾಯ ಎಂದರೆ ಆರು ಚಕ್ರಗಳ ಕುರುಹುಗಳು ಮನಸ್ಸು, ಆಕಾಶ, ವಾಯು, ತೇಜ, ಆಪ್, ಪೃಥ್ವೀ ಸ್ಥಾನಗಳ ಕುರುಹುಗಳು ಎಂಬುದು ಕೆಲವು ವ್ಯಾಖ್ಯಾನಗಳ ಒಳನೋಟವಾಗಿದೆ.

(ತೋ–ಪುಟ ೧೩೫)

೧೦. **ಕುಲಕುಂಡೇ ಕುಹರಣಿ**


"ಕೆಳಗಿಳಿಯುತ್ತಿರುವ ಕುಂಡಲಿನಿಯ ಮೂಲಾಧಾರ ಚಕ್ರದಲ್ಲಿ **ಕುಲಕುಂಡ** (ಮೂಲಾಧಾರವನ್ನು ಸೂಚಿಸುವ ಪದವು) ಸುರುಳಿಯಾಗಿ ಸಿಂಬಿಸುತ್ತಿ ಮಲಗಿದೆ ಎನ್ನಲಾಗಿದೆ. **ಅಧ್ಯುಷ್ಟವಲಯಂ** ಎಂಬ ಮಾತು ಅಧ್ಯುಷ್ಟ ಎಂದರೆ ಮೂರು ಮತ್ತರ್ಧವಾಗಿ ಮೂರೂವರೆ ಎನ್ನುವ ನಿಷ್ಕೃಷ್ಟ ಅಂಕೆಯನ್ನು ಸೂಚಿಸುವ ಪದ. ವಲಯ ಎಂದರೆ ಬಳೆಯಂತೆ ವರ್ತುಲಾಕಾರ. ಹಾವು ಮಲಗಿದೆ, ಕುಲಕುಂಡವೆಂಬ ಬಲದಲ್ಲಿ

ಇಡಿಯಾಗಿ ಮೂರು ಆವರ್ತದಲ್ಲಿ ಬಳೆಯಂತೆ ಸುರುಳಿ ಸುತ್ತಿಕೊಂಡಿದೆ. ಅದರ ಮೈ ಮತ್ತರ್ಧ ಉಳಿದಿದೆ ಅದನ್ನು ಮತ್ತೆ ಮಡಿಕೆಯಾಗಿಸಿದೆ ಹೀಗೆ ಮೂರು ಮತ್ತರ್ಧವಾಗಿ ಮುದುಡಿ ಮಲಗಿದೆ.

(ತೋ–ಪುಟ ೧೪೪)

ಯಂತ್ರಾರಾಧನೆ (ಶ್ಲೋಕ ೧೦)

೧, ೩ ಕ್ಲೀಂ



೨, ೪, ೫, ೬, ೭, ೮, ೯ ಹ್ರೀಂ

ಯಂತ್ರರಚನೆ : ಚಿನ್ನದ ತಗಡಿನಲ್ಲಿ ಬರೆಯಬೇಕು.

ಪೂಜೆ : ಪೂರ್ವಾಭಿಮುಖವಾಗಿ ಕುಳಿತು ಕೆಂಪು ಹೂಗಳಿಂದ ದುರ್ಗಾ ಸಹಸ್ರನಾಮದ ಕುಂಕುಮಾರ್ಚನೆ ಮಾಡಬೇಕು.

ಜಪ : ಪ್ರತಿದಿನ ಶ್ಲೋಕವನ್ನು ೧೦೦೦ ಬಾರಿ ೬ ದಿನಗಳ ಕಾಲ ಜಪಿಸಬೇಕು. ಕೆಂಪು ರೇಷ್ಮೆದಾರದಿಂದ ಯಂತ್ರವನ್ನು ಕಟ್ಟಿಕೊಳ್ಳಬೇಕು.

ನೈವೇದ್ಯ : ಅನ್ನ, ಬಾಳೆಹಣ್ಣಿನ ರಸಾಯನ ಮತ್ತು ಹಣ್ಣುಗಳು.

ಫಲ : ಪುರುಷರಿಗೆ ವೀರ್ಯ ವೃದ್ಧಿ, ಸ್ತ್ರೀಯರಿಗೆ ದೇಹಶುದ್ಧಿ ಮತ್ತು ರಜೋದರ್ಶನ.

ಶ್ಲೋಕ – ೧೧

ಶ್ರೀಚಕ್ರದ ಸ್ವರೂಪ

ಚತುರ್ಭಿಶ್ಶ್ರೀಕಂಠೈಶ್ಶಿವಯುವತಿಭಿಃ ಪಂಚಭಿರಪಿ
ಪ್ರಭಿನ್ನಾಭಿಶ್ಶಂಭೋರ್ನವಭಿರಪಿ ಮೂಲಪ್ರಕೃತಿಭಿಃ
[೧]ಚತುಶ್ಚತ್ವಾರಿಂಶದ್ವಸುದ[೨]ಲಕಲಾಶ್ರತ್ರಿವಲಯ –
ತ್ರಿರೇಖಾಭಿಃ ಸಾರ್ಧಂ ತವ[೩] ಶರಣಕೋಣಾಃ ಪರಿಣತಾಃ ॥ ೧೧॥

ಪಾಠಾಂತರ

೧. (ಚತುಶ್ಚತ್ವಾರಿಂಶದ್ವಸುದಲ) = ತ್ರಯಶ್ಚತ್ವಾರಿಂಶದ್ವಸುದಲ (ಸು)
೨. (ಕಲಾಶ್ರತ್ರಿವಲಯ) = ಕಲಾಬ್ಜತ್ರಿವಲಯ (ಸು) (ಪೋ)
೩. (ಶರಣಕೋಣಾಃ) = ಚರಣಕೋಣಾಃ, ಭವನಕೋಣಾಃ (ಸು)

ಪದವಿಭಾಗ

ಚತುರ್ಭಿಃ, ಶ್ರೀಕಂಠೈಃ, ಶಿವಯುವತಿಭಿಃ, (ಪಂಚಭಿರಪಿ) = ಪಂಚಭಿಃ+ಅಪಿ, ಪ್ರಭಿನ್ನಾಭಿಃ, (ಶಂಭೋರ್ನವಭಿರಪಿ) = ಶಂಭೋಃ+ನವಭಿಃ+ಅಪಿ, ಮೂಲ ಪ್ರಕೃತಿಭಿಃ, (ಚತುಶ್ಚತ್ವಾರಿಂಶದ್ವಸುದಲಕಲಾಶ್ರತ್ರಿವಲಯತ್ರಿರೇಖಾಭಿಃ) = ಚತುಃ+ಚತ್ವಾರಿಂಶತ್+ ವಸುದಲ ಕಲಾಶ್ರತ್ರಿವಲಯತ್ರಿರೇಖಾಭಿಃ, ಸಾರ್ಧಂ, ತವ, ಶರಣಕೋಣಾಃ, ಪರಿಣತಾಃ.

ಅನ್ವಯಾರ್ಥ

(ಹೇ ಭಗವತಿ)	(ಎಲೈ ದೇವಿಯೇ),
ಚತುರ್ಭಿಃ ಶ್ರೀಕಂಠೈಃ	ನಾಲ್ಕಾದ–ಶಿವಾತ್ಮಕಗಳಾದ ಚಕ್ರಗಳಿಂದಲೂ
ಶಂಭೋಃ (ಸಕಾಶಾತ್)	ಶಿವ ಚಕ್ರಕ್ಕಿಂತಲೂ
ಪ್ರಭಿನ್ನಾಭಿಃ	ಬೇರೆಯಾದ
ಶಿವಯುವತಿಭಿಃ	ಶಕ್ತಿ ಚಕ್ರಗಳಿಗಿಂತಲೂ
ಪಂಚಭಿಃ	ಐದಾದ
ಮೂಲ ಪ್ರಕೃತಿಭಿಃ	ಪ್ರಪಂಚಕ್ಕೆ ಮುಖ್ಯ ಕಾರಣವಾದ
ನವಭಿಃ	ತ್ವಜ್ಮಾಂಸಾದಿ ಒಂಬತ್ತು ಪದಾರ್ಥಗಳಿಂದಲೂ

ವಸುದಲಕಲಾಶ್ರತ್ರಿವಲಯ	ಅಷ್ಟದಳವುಳ್ಳ ಕಮಲದೊಡನೆಯೂ
ತ್ರಿರೇಖಾಭಿಃ	ಷೋಡಶದಳ ಪದ್ಮದೊಡನೆಯೂ
ಸಾರ್ಧಂ	ಮೂರುಸುತ್ತಿನ ಗೆರೆಗಳೊಡನೆಯೂ
ತವ	ಮೂರು ಚೌಕವಾದ ರೇಖೆಗಳೊಡನೆಯೂ
ಶರಣಕೋಣಾಃ	ಸೇರಿ
ಚತುಶ್ಚತ್ವಾರಿಂಶತ್	ನಿನ್ನ
ಪರಿಣತಾಃ	(ಬಿಂದು ರೂಪವಾದ) ಮನೆಯೊಡನೆ
	ಸೇರಿದ – ಮೂಲೆಗಳು
	ನಲವತ್ತನಾಲ್ಕು ರೂಪಗಳಾಗಿವೆ.

ತಾತ್ಪರ್ಯ

ಎಲೈ ದೇವಿಯೇ, ನಾಲ್ಕು ಶಿವಾತ್ಮಕಚಕ್ರಗಳಿಂದಲೂ, (೪) ಶಿವಚಕ್ರಗಳಿಗಿಂತಲೂ ಬೇರೆಯಾಗಿರುವ ಐದು ಶಕ್ತಿಚಕ್ರಗಳಿಗಿಂತಲೂ (೫) ಹೀಗೆ ನಿನ್ನ ಒಂಬತ್ತು ಮೂಲಪ್ರಕೃತಿಗಳಿಂದ ಪ್ರಪಂಚಕ್ಕೆ ಮುಖ್ಯಕಾರಣವಾದ ತ್ವಕ್ ಮಾಂಸಾದಿ ಪದಾರ್ಥಗಳಿಂದ ಕೂಡಿರುವೆ. ನಂತರ ಬಿಂದುರೂಪವಾದ ಮನೆಯೊಡನೆ ಸೇರಿದ ಮೂಲೆಗಳು (ಬೈಂದವ ಮಂದಿರ) (೧) ಮತ್ತು ಅಷ್ಟದಳಪದ್ಮ, (೮) ಷೋಡಶದಳ ಪದ್ಮ, (೧೬) ಮೇಖಲಾತ್ರಯ (ವಲಯತ್ರಯ=ಮೂರು ಸುತ್ತಿನ ಗೆರೆಗಳು), (೩) ಮೂರು ಚೌಕವಾದ ರೇಖೆಗಳೊಡನೆ (ಭೂಪುರ) (೩) ಇವುಗಳ ಜೊತೆ ಪರಿಣಾಮವನ್ನು (ಅಂತರ್ಭಾವವನ್ನು) (೧) ಹೊಂದಿ ನಲವತ್ತನಾಲ್ಕು ಕೋಣಗಳಾಗಿ ಶ್ರೀಚಕ್ರವೆನಿಸಿದೆ. ಎಂದರೆ

ಶಿವಚಕ್ರ	೪
ಶಕ್ತಿ ಚಕ್ರ	೫
ಬೈಂದವ ಮಂದಿರ	೧
ತ್ರಿಕೋಣ	೩
ಅಷ್ಟದಳ	೮
ಷೋದಶದಳ	೧೬
ಮೇಖಲಾತ್ರಯ	೩
ಭೂಪುರತ್ರಯ	೩
ಅಂತರ್ಭಾವ	೧
ಒಟ್ಟು	೪೪ ಕೋಣಗಳಾಗಿವೆ.

ಪದ್ಯಾನುವಾದ

ನಾಲ್ಕು* ಶ್ರೀಕಂಠ ಚಕ್ರಗಳಿಂದೆ ಮೇಣ್ ಶಂಭು
ಚಕ್ರಪ್ರಭಿನ್ನವಹ ಐದು ಶಿವಯುವತಿ ಚ-
ಕ್ರಗಳಿಂದೆಯಿವು ಕೂಡಿದೊಂಬತ್ತು ಮೂಲಪ್ರಕೃತಿಗಳೆನಿಸಿದವುಗಳಿಂದೆ;
ವಸುದಳ ಕಲಾಶ್ರತ್ರಿವಲಯ ತ್ರಿರೇಖೆಗಳು
ಕೂಡಿಕೊಂಡಿರಲಾಗಿ ನಿನ್ನನಲನೆಲೆಯಾಗಿ
ಪರಿಣಮಿಸಿ ಶೋಭಿಸಿವೆ ನಾಲ್ವತ್ತುನಾಲ್ಕು ತ್ರಿಕೋಣಗಳು ಬಿಂದುವೆನಿಸಿ
॥ ೧೧ ॥

ಟಿಪ್ಪಣಿಗಳು

ಅನನ್ವಯಾಲಂಕಾರ

೧. ಅನನ್ವಯಾಲಂಕಾರವೆಂದರೆ : "ಲೋಕದಲ್ಲಿ ಎಲ್ಲಿಯೂ ಕೂಡ ಸದೃಶವಾದ ಮತ್ತೊಂದು ವಸ್ತು ಇಲ್ಲವಾದ್ದರಿಂದ ತನಗೆ ತಾನೇ ಸದೃಶವಾದುದು ಅನನ್ವಯಾಲಂಕಾರ." ಭಗವತಿಗೆ ಸದೃಶಳಾದವಳು ಭಗವತಿಯೇ ಎಂಬುದಾಗಿ ಇಲ್ಲಿ ತೋರುತ್ತದೆ.
(ಶೇ. ಪುಟ ೫೮)

೨. ಅನನ್ವಯಾಲಂಕಾರವನ್ನು ಉಪಮೆಯ ಪ್ರಭೇದವೆಂದೇ ಭೋಜ, ಹೇಮಚಂದ್ರ ಮುಂತಾದವರು ಭಾವಿಸುತ್ತಾರೆ. ಆದರೆ ಇತರರು ಇದನ್ನು ಒಪ್ಪುವುದಿಲ್ಲ. ಉಪಮೆಯಲ್ಲಿ ಸಾದೃಶ್ಯದಲ್ಲಿ ಚಮತ್ಕಾರವಿರುತ್ತದೆ. ಆದರೆ ಅನನ್ವಯಾಲಂಕಾರದಲ್ಲಿ ಸಾದೃಶ್ಯ ನಿರಾಕರಣೆಯೇ ಕಾರಣವಾಗಿರುತ್ತದೆ. ಆ ದೃಷ್ಟಿಯಿಂದ ನೋಡಿದರೆ ಉಪಮೆಗೆ ವಿರುದ್ಧವಾದ ಕ್ರಿಯೆ ನಡೆಯುತ್ತದೆ.
(ಎಂ.ಎ. ಹೆಗ್ಗಡೆ – ಅಲಂಕಾರತತ್ತ್ವ ಪುಟ ೫೨)

ನಿದರ್ಶನ

ಸಭ್ಯತ್ವ ಧರ್ಮರತ್ನ ಪ್ರದೀಪ, ಸೌ
ಮ್ಯತ್ವ ಗಂಧ ಕುಸುಮ
ಅವಳವಳ ಹಾಗೆ ಮಿಕ್ಕವರು ಮಿಕ್ಕವರು
ಹೆಸರಿಗಷ್ಟೆ ಕುಸುಮ

(ಬಿ.ಎಚ್. ಶ್ರೀಧರ–ರಸಯಜ್ಞ)

೩. **ಮೂಲಪ್ರಕೃತಿಭಿಃ**

ಪ್ರಪಂಚದ ಮೂಲ ಕಾರಣಗಳಾದುದರಿಂದ ಶಿವಶಕ್ತಿ ಚಕ್ರಗಳನ್ನು 'ಯೋನಿ' ಶಬ್ದದಿಂದ ಕರೆಯಲಾಗಿದೆ. ೯ ಯೋನಿಗಳು (೪ ಶಿವಚಕ್ರ ೫ ಶಕ್ತಿಚಕ್ರಗಳು) ೯ ಧಾತುಗಳ ರೂಪವಾಗಿವೆ. ಈ ೯ ರಲ್ಲಿ ಚರ್ಮ, ರಕ್ತ, ಮಾಂಸ, ಮೇದಸ್ಸು, ಅಸ್ಥಿ ಈ ಧಾತುಗಳು ಶಕ್ತಿಮೂಲಕವಾದವು, ಮಜ್ಜಾ, ಶುಕ್ಲ, ಪ್ರಾಣ, ಜೀವ– ಈ ೪ ಧಾತುಗಳು ಶಿವಮೂಲಕವಾಗಿವೆ. ಈ ೯ ಧಾತುಗಳಿಂದ ಈ ಶರೀರವು ಉಂಟಾಗಿದೆ.

೪. **ಬೈಂದವಸ್ಥಾನ**

ಹತ್ತನೇ ಯೋನಿಯು ಒಂದೇ ಆಗಿದೆ. ಅದೇ ಈ ಶರೀರದ ಈಶ್ವರಿಯಾದ ಪರಾಶಕ್ತಿಯು. ಹತ್ತನೆಯ ಯೋನಿಯೆಂದರೆ ಬೈಂದವಸ್ಥಾನ. ತದೀಶ್ವರೀ ಎಂದರೆ ಅಂತಹ ಶರೀರದ ಈಶ್ವರಿಯೇ ಶ್ರೀದೇವಿ ಎಂದರ್ಥ.

ಈ ರೀತಿಯಾಗಿ ಪಿಂಡಾಂಡವು ಬ್ರಹ್ಮಾಂಡವೂ ದೇವಿಯಿಂದ ಉದ್ಭವಿಸಿ ಬೆಳಗುತ್ತದೆ.

೫. **ಚತುರ್ಭಿಃ ಶ್ರೀಕಂಠೈಃ ಪ್ರಭಿನ್ನಾಭಿಃ ಶಿವಯುವತಿಭಿಃ ಅಪಿ**

ನವಯೋನಿಗಳಲ್ಲಿ ಪಂಚಭೂತಗಳು ಶಕ್ತಿಗೆ ಸೇರಿದವು ಆದರೆ ಮನಸ್ಸು, ಬುದ್ಧಿ ಚಿತ್ತ ಅಹಂಕಾರ ಈ ೪ ಶಿವನಿಗೆ ಸೇರಿದವು. ೨೫ ತತ್ತ್ವಗಳು ಶಿವ–ಶಕ್ತಿ ತತ್ತ್ವಗಳಲ್ಲಿ ಅಂತರ್ಗತವಾಗಿರುತ್ತವೆ. ಚರ ಎಂದರೆ ಪಿಂಡಾಂಡ, ಅಚರ ಎಂದರೆ ಬ್ರಹ್ಮಾಂಡ. ಚರಾಚರಾತ್ಮಕವಾದುದು ಜಗತ್ತು ಎಂದರೆ ಪಿಂಡಾಂಡ ಮತ್ತು ಬ್ರಹ್ಮಾಂಡಗಳನ್ನು ಒಳಗೊಂಡಿದ್ದು ಎಂದರ್ಥ.

ಶ್ರೀಕಂಠ ಎಂಬಲ್ಲಿ ಶ್ರೀ ಎಂದರೆ ವಿಷ, ಕಂಠ ಎಂದರೆ ಕಂಠದಲ್ಲಿ ಧರಿಸಿದವನು ಎಂದು ಅರ್ಥವಿದೆ. ಅಂದರೆ ಕಂಠದಲ್ಲಿ ವಿಷವನ್ನು ಧರಿಸಿರುವವನು ಶ್ರೀಕಂಠ. ಶೃ–ಹಿಂಸಾಯಾಂ ಇತಿಧಾತುಃ. ಶ್ರೀ ಎಂದರೆ ಲಕ್ಷ್ಮಿ ಎಂಬ ಅರ್ಥ ಇಲ್ಲಿಗೆ ಹೊಂದುವುದಿಲ್ಲ.

೬. **ಶರಣಕೋಣಾಃ**

ಶರಣಕೋಣಾಃ ಎಂದರೆ ಬೈಂದವ ಮಂದಿರ ರೂಪವಾದ ಗೃಹ ಅದು ಮತ್ತು ಕೋಣಗಳು ಎಂದು ದ್ವಂದ್ವ ಸಮಾಸವಾಗಿದೆ. ಆದುದರಿಂದ ೪೪ ಕೋಣಗಳು ಎಂದರ್ಥ. ಆದರೆ ಕೆಲವರು ಹೇಳುವಂತೆ, ಬಿಂದು,

ತ್ರಿಕೋಣ ಇತ್ಯಾದಿ ಕ್ರಮದಿಂದ ತ್ರಿಕೋಣ ಮತ್ತು ಬಿಂದುಗಳು ಸೇರಿದರೆ ಒಟ್ಟು ೪೬ ಕೋಣಗಳಾಗುತ್ತವೆ. ಬಿಂದುವನ್ನು ಬಿಟ್ಟರೆ ೪೫ ಕೋಣಗಳಾಗುತ್ತವೆ. ಆದರೆ ಪ್ರಸ್ತಾರವಶದಿಂದ ತ್ರಿಕೋಣದ ಕೆಳಗಿರುವ ೨ ತ್ರಿಕೋಣಗಳು ಅಷ್ಟಕೋಣದಲ್ಲಿ ಅಂತರ್ಗತವಾಗುವುದರಿಂದ ೪೩ ಕೋಣಗಳು ಆಗುತ್ತದೆ. ತ್ರಯಿಶ್ಚತ್ವಾರಿಂಶತ್ ಎಂಬ ಪಾಠಾಂತರವು ಇರುವುದರಿಂದ ೪೩ ಕೋಣಗಳು ಎಂಬುದು ಸ್ಪಷ್ಟವಾಗಿದೆ.

೭. **ಚತುಶ್ಚತ್ವಾರಿಂಶತ್ ಪರಿಣತಾಃ**

(೪೪ ರೂಪಗಳಾಗಿ ಪರಿಣಾಮ ಹೊಂದಿವೆ)

೪ ಶ್ರೀಕಂಠ ಚಕ್ರಗಳು

೫ ಸಕಾಶದಿಂದ ಬೇರೆಯಾಗಿರುವ ೫ ಚಕ್ರಗಳು

೧ ಒಂಬತ್ತು ಮೂಲಪ್ರಕೃತಿಗಳಿಂದ (೪+೫) ಕೂಡಿದ ಬೈಂದವಮಂದಿರ

೩ ತ್ರಿಕೋಣಗಳು

೧೬ ಷೋಡಶದಳ ಪದ್ಮ

೮ ಅಷ್ಟದಳ ಪದ್ಮ

೩ ಮೇಖಲಾತ್ರಯ

೩ ಭೂಪುರ (ಮೂರು ರೇಖೆಗಳು)

೧ ಪರಿಣಾಮ (ಅಂತರ್ಭಾವ)

---

೪೪ ಒಟ್ಟು ಕೋಣಗಳು

(ಶೇ ಪುಟ ೪೧)

೮. **ಸಂಧಿ ಮತ್ತು ಮರ್ಮಸ್ಥಾನಗಳು**

ಎರಡು ರೇಖೆಗಳು ಸೇರುವ ಸ್ಥಾನವನ್ನು ಸಂಧಿ ಎಂದು ಕರೆಯುತ್ತಾರೆ. ಮೂರು ರೇಖೆಗಳು ಸೇರುವ ಸ್ಥಾನವನ್ನು ಮರ್ಮವೆಂದು ಕರೆಯುತ್ತಾರೆ. ೧೪ ಕೋಣಗಳ ಚಕ್ರದಲ್ಲಿ ೨ ಹತ್ತು ಕೋಣಗಳ ಚಕ್ರಗಳಲ್ಲಿ ಮತ್ತು ೮ ಕೋಣಗಳ ಚಕ್ರದಲ್ಲಿ (ಮೂರು ರೇಖಾ ಸಂಗಮಗಳ ಸ್ಥಾನಗಳು) ಇವುಗಳು ಒಟ್ಟಿಗೆ ಸೇರಿ ೧೪+೨+೮=೨೪ ಮರ್ಮಸ್ಥಾನಗಳಾಗುತ್ತವೆ.

೧) ಅಷ್ಟದಳ ೨) ಷೋಡಶದಳ ೩) ಮೇಖಲಾತ್ರಯ ೪) ಭೂಪುರತ್ರಯ – ಈ ರೂಪದ ೪ ಶಿವಚಕ್ರಗಳ ವೃತ್ತಗಳನ್ನು ಮೂರುರೇಖೆಗಳು ಸೇರುವ ಸ್ಥಾನವಿಲ್ಲವಾದರೂ ಮರ್ಮಸ್ಥಾನಗಳು ಎಂದೇ ಕರೆಯಲಾಗುತ್ತದೆ ಆದ್ದರಿಂದ ಒಟ್ಟಿನಲ್ಲಿ ೨೮ ಮರ್ಮಸ್ಥಾನಗಳು ಎಂದು ಕರೆಯುತ್ತೇವೆ.

(ಶೇ–ಪುಟ ೪೨)

೯. **ಶ್ರೀಚಕ್ರಲೇಖನಕ್ರಮ (ನವಯೋನಿ ಚಕ್ರರಚನಾಕ್ರಮ)**

ಶ್ರೀ ಚಕ್ರಲೇಖನಕ್ರಮ ಪರಿಜ್ಞಾನವಿಲ್ಲದಿದ್ದರೆ ನವಶಿವಚಕ್ರಗಳ ಮತ್ತು ಶಕ್ತಿಚಕ್ರಗಳ ರಚನಾಕ್ರಮ ತಿಳಿಯುವುದು ಕಷ್ಟ. ಅದಕ್ಕಾಗಿ ಇದನ್ನು ಇಲ್ಲಿ ವಿವರಿಸಿದೆ. ಇದರಲ್ಲಿ ೨ ವಿಧ

೧) ಸಮಯಮಾರ್ಗಾನುಸಾರವಾದ ಸೃಷ್ಟಿಕ್ರಮದ ಚಕ್ರಲೇಖನಕ್ರಮ

೨) ಕೌಲಮಾರ್ಗಾನುಸಾರ ಸಂಹಾರಕ್ರಮದ ಚಕ್ರಲೇಖನಕ್ರಮ

೧೦. **ಕೌಲಮಾರ್ಗಾನುಸಾರ ಸಂಹಾರಕ್ರಮದ ಚಕ್ರಲೇಖನಕ್ರಮ.**

ಅ) ಒಂದು ವೃತ್ತವನ್ನು ಬರೆದು ಮಧ್ಯದಲ್ಲಿ ಒಂಬತ್ತು ರೇಖೆಗಳನ್ನು ಬರೆಯಬೇಕು.

ಆ) ಪಶ್ಚಿಮದ ಕಡೆಯ ರೇಖೆಯ ತುದಿಗಳಿಂದ ಕೂಡಿಸಿ ಒಂದು ತ್ರಿಕೋಣವನ್ನು ರಚಿಸಿ ಆ ರೇಖೆಯ ಕಡೆಯಿಂದ ಆರನೆಯ ರೇಖೆಯೊಡನೆ ಸೇರಿಸಬೇಕು.

ಇ) ಇದೇ ರೀತಿಯಾಗಿ ಪೂರ್ವದ ಕಡೆಯ ರೇಖೆಯ ತುದಿಗಳಿಂದ ತ್ರಿಕೋಣವನ್ನು ರಚಿಸಿ ಆ ರೇಖೆಯ ಕಡೆಯಿಂದ ಏಳನೆಯ ರೇಖೆಯೊಡನೆ ಸೇರಿಸಬೇಕು.

ಈ) ಪಶ್ಚಿಮದಕಡೆಯ ಎರಡನೆಯ ರೇಖೆಯ ತುದಿಗಳಿಂದ ತ್ರಿಕೋಣವನ್ನು ರಚಿಸಿ ಆ ರೇಖೆಯ ಕಡೆಯಿಂದ ಎಂಟನೆಯ ರೇಖೆಯೊಡನೆ ಸೇರಿಸಬೇಕು.

ಉ) ಪೂರ್ವದಕಡೆಯ ಎರಡನೆಯ ರೇಖೆಯ ತುದಿಗಳಿಂದ ತ್ರಿಕೋಣವನ್ನು ರಚಿಸಿ ಆ ರೇಖೆಯ ಕಡೆಯಿಂದ ಎಂಟನೆಯ ರೇಖೆಯೊಡನೆ ಸೇರಿಸಬೇಕು.

* ಅನಂತರ ಪೂರ್ವ ಮತ್ತು ಪಶ್ಚಿಮದ ಕಡೆಯ ಮೂರನೆಯ ರೇಖೆಗಳ ತುದಿಗಳಿಂದ ಷಟ್ಕೋಣವನ್ನು ರಚಿಸಬೇಕು (ಷಟ್ಕೋಣವನ್ನು ರಚಿಸಿ ವೃತ್ತದೊಡನೆ ಸೇರಿಸಬೇಕು ಎಂಬ ಪಾಠಾಂತರವೂ ಇದೆ).

ಋ) ಷಟ್ಕೋಣದ ಮಧ್ಯದಲ್ಲಿರುವ ಮೂರು ಸಣ್ಣ ರೇಖೆಗಳ ಪೈಕಿ ಪಶ್ಚಿಮದ ಕಡೆಯ ರೇಖೆಯ ತುದಿಗಳಿಂದ ತ್ರಿಕೋಣವನ್ನು ರಚಿಸಿ ಆ ರೇಖೆಯ ಕಡೆಯಿಂದ ಐದನೆಯ ರೇಖೆಯೊಡನೆ ಸೇರಿಸಬೇಕು.

ೠ) ಇದೇ ರೀತಿಯಾಗಿ ಪೂರ್ವದ ಕಡೆಯ ರೇಖೆಯ ತುದಿಗಳಿಂದ ತ್ರಿಕೋಣವನ್ನು ರಚಿಸಿ ಆ ರೇಖೆಯ ಕತೆಯಿಂದ ಐದನೆಯ ರೇಖೆಯೊಡನೆ ಸೇರಿಸಬೇಕು.

ಎ) ಮಧ್ಯದಲ್ಲಿರುವ ಅತ್ಯಂತ ಸಣ್ಣ ರೇಖೆಯ ತುದಿಗಳಿಂದ ತ್ರಿಕೋಣವನ್ನು ರಚಿಸಿ ಆ ರೇಖೆಯ ಕತೆಯಿಂದ ಮೂರನೆಯ ರೇಖೆಯೊಡನೆ ಸೇರಿಸಬೇಕು.

ಏ) ಈ ರೀತಿಯಾಗಿ ೨೪ ಮರ್ಮಗಳು ೨೪ ನಾಭಿಗಳು ಉಂಟಾಗಿ ನವಯೋನಿ ಚಕ್ರ ಆಗುತ್ತದೆ. ಇದು ಕಾಲಮಾರ್ಗದ ಕ್ರಮ.

೧೧. ಸಮಯಮಾರ್ಗದ ಸೃಷ್ಟಿಕ್ರಮದ ಚಕ್ರಲೇಖನ ಕ್ರಮ

ಅ. ಮೊದಲು ತ್ರಿಕೋಣವನ್ನು ರಚಿಸಿ ಮಧ್ಯದಲ್ಲಿ ಬಿಂದುವನ್ನು ಹಾಕಬೇಕು

ಆ. ಬಿಂದುವಿನ ಮೇಲೆ ತ್ರಿಕೋಣವನ್ನು ಭೇದಿಸಿ ಮತ್ತೊಂದು ತ್ರಿಕೋನವನ್ನು ಪೂರ್ವದ ಕಡೆ ತುದಿಯಿರುವಂತೆ ರಚಿಸಬೇಕು.

ಇ. ಮೊದಲನೆಯ ತ್ರಿಕೋಣದ ತುದಿಯಿಂದ ಮತ್ತೊಂದು ತ್ರಿಕೋಣವನ್ನು ಪಶ್ಚಿಮಾಭಿಮುಖವಾಗಿರುವಂತೆ ರಚಿಸಬೇಕು.

ಈ. ಈ ರೀತಿಯಾಗಿ ಅಷ್ಟಕೋಣ ಚಕ್ರವಾಗುತ್ತದೆ.

ಉ. ಇದರಿಂದಲೇ ಹತ್ತುಕೋಣಗಳ ಚಕ್ರವನ್ನು ರಚಿಸಬೇಕು ಅದು ಹೇಗೆಂದರೆ: ಅಷ್ಟಕೋಣದ ಪೂರ್ವ ಮತ್ತು ಪಶ್ಚಿಮದ ಕಡೆಯರೇಖೆಯ ತುದಿಗಳಿಂದ ಷಟ್ಕೋನವನ್ನು ರಚಿಸಿ ವಿದಿಕ್ಕುಗಳಲ್ಲಿ (ದಿಕ್‌ಮೂಲೆಗಳಲ್ಲಿ) ಇರುವ ನಾಲ್ಕು ಮರ್ಮಸ್ಥಾನಗಳಿರುವ ನಾಲ್ಕು ತ್ರಿಕೋಣಗಳನ್ನು ಅಷ್ಟಕೋಣದಲ್ಲಿರುವ ಯೋನಿಯ ಮೇಲುಗಡೆ ದಕ್ಷಿಣೋತ್ತರವಾಗಿ ದೀರ್ಘವಾದ ರೇಖೆಗಳನ್ನು ಈಶಾನ ಮತ್ತು ಅಗ್ನಿಕೋಣಗಳ ತ್ರಿಕೋಣಗಳಲ್ಲಿ ಸೇರಿಸಬೇಕು. ಇದೇ ರೀತಿಯಾಗಿ ಪಶ್ಚಿಮದ ಕಡೆ ಸೇರಿಸಬೇಕು. ಹಾಗೆ ದಶಕೋಣವು ಆಗುತ್ತದೆ.

ಊ) ಈ ದಶಕೋಣ ಚಕ್ರದಿಂದಲೇ ಪುನಃ ಮತ್ತೊಂದು ದಶಕೋಣ ಚಕ್ರವನ್ನು ಮೇಲೆ ಹೇಳಿದ ರೀತಿಯಲ್ಲೇ ರಚಿಸಬೇಕು. ಷಟ್ಕೋಣದ ಮಧ್ಯದಲ್ಲಿರುವ ಮೂರು ಸಣ್ಣರೇಖೆಗಳ ಪೈಕಿ ಪಶ್ಚಿಮವಾದ ಕಡೆಯ ರೇಖೆಯ ತುದಿಗಳಿಂದ

ತ್ರಿಕೋಣವನ್ನು ರಚಿಸಿ ಆ ರೇಖೆಯ ಕಡೆಯಿಂದ ಐದನೆಯ ರೇಖೆಯೊಡನೆ ಸೇರಿಸಬೇಕು.

ಋ) ಈ ದಶಕೋಣ ಚಕ್ರದಿಂದಲೇ ಹದಿನಾಲ್ಕು ಕೋಣಗಳ ಚಕ್ರವನ್ನು ರಚಿಸಬೇಕು. ಅದು ಹೇಗೆಂದರೆ:-

ಮೊದಲನೆಯ ದಶಕೋಣ ಚಕ್ರದ ಪೂರ್ವ ಮತ್ತು ಪಶ್ಚಿಮ ರೇಖೆಗಳ ತುದಿಗಳಿಂದ ಷಟ್ಕೋಣವನ್ನು ರಚಿಸಬೇಕು.

ಏ) ಅನಂತರ ಮೇಲುಗಡೆ ಇರುವ ನಾಲ್ಕು ಮರ್ಮಸ್ಥಾನಗಳಿಂದ ದಶಕೋಣ ಚಕ್ರದಂತೆ ನಾಲ್ಕು ತ್ರಿಕೋಣಗಳನ್ನು ರಚಿಸಿ ಪೂರ್ವ ಮತ್ತು ಪಶ್ಚಿಮ ರೇಖೆಗಳನ್ನು ಸೇರಿಸಬೇಕು.

ಐ) ಈ ರೀತಿಯಾಗಿ ನಲವತ್ತು ಮೂರು ತ್ರಿಕೋಣಗಳು ಇಪ್ಪತ್ತನಾಲ್ಕು ಸಂಧಿಗಳು ಮತ್ತು ಇಪ್ಪತ್ತನಾಲ್ಕು ಮರ್ಮಗಳು ಉಂಟಾಗುತ್ತವೆ. ಇದೇ ಸಮಯಮತದ ರಹಸ್ಯ.

೧೨. ಸಮಯಮಾರ್ಗಕ್ಕೂ ಕೌಲಮಾರ್ಗಕ್ಕೂ ವ್ಯತ್ಯಾಸಗಳು

ಸಮಯಮಾರ್ಗದಲ್ಲಿ ತ್ರಿಕೋಣವನ್ನು ಊರ್ಧ್ವಮುಖವಾಗಿ ಬರೆಯಬೇಕು. ಕೌಲಮಾರ್ಗದಲ್ಲಿ ತ್ರಿಕೋಣದ ಮಧ್ಯದಲ್ಲಿ ಬಿಂದು ಇರುತ್ತದೆ. ಸಮಯಮಾರ್ಗದಲ್ಲಿ ಚತುಷ್ಕೋಣದ ಮಧ್ಯದಲ್ಲಿ ಬಿಂದು ಇರುತ್ತದೆ. ಕೌಲಮಾರ್ಗದಲ್ಲಿ ಒಂಬತ್ತು ತ್ರಿಕೋಣಗಳ ರೂಪವಾಗಿರುವುದರಿಂದ ಕೋಣಗಳ ಸಂಖ್ಯೆಯೇನೂ ತಿಳಿಯುವುದಿಲ್ಲ. ಒಂಬತ್ತು ತ್ರಿಕೋಣಗಳನ್ನು ಸೇರಿಸಿದರೆ ಮರ್ಮ ಸಂಧಿಗಳು ಆಗಿರುತ್ತವೆ.

೧೩. ಸಮಯಮಾರ್ಗ, ಕೌಲಮಾರ್ಗಗಳಿಗೆ ಸಮಾನ ಅಂಶಗಳು

ಎಂಟು ದಳಗಳ ಪದ್ಮ, ಅನಂತರ ಹದಿನಾರು ದಳಗಳ ಪದ್ಮ ಆಮೇಲೆ ಮೂರು ಮೇಖಲೆಗಳು ಅದರಮೇಲೆ ನಾಲ್ಕು ದ್ವಾರಗಳಿಂದ ಕೂಡಿದ ಮೂರು ಭೂಪುರಗಳು ಇವೆ. ಈ ರೀತಿಯಾಗಿ ಶ್ರೀಚಕ್ರೋದ್ಧಾರವನ್ನು ತಿಳಿಯಬೇಕು.

(ಶೇ ಪುಟ ೪೨-೪೪)

೧೪. ಮೂರು ಮೇರುಪ್ರಸ್ತಾರಗಳು

ಶ್ರೀಚಕ್ರದಲ್ಲಿ ಮೇರುಪ್ರಸ್ತಾರ, ಕೈಲಾಸಪ್ರಸ್ತಾರ ಭೂಪ್ರಸ್ತಾರ ಎಂಬ ಮೂರು ಪ್ರಸ್ತಾರಗಳಿವೆ. ಮೇರು ಪ್ರಸ್ತಾರವೆಂದರೆ ಷೋಡಶ ನಿತ್ಯೆಯರೊಡನೆ ತಾದಾತ್ಮ್ಯ ಹೊಂದಿರುವುದು. ಕೈಲಾಸ ಪ್ರಸ್ತಾರವೆಂದರೆ ಮಾತೃಕಾತಾದಾತ್ಮ್ಯ ಹೊಂದಿರುವುದು. ಭೂಪ್ರಸ್ತಾರವೆಂದರೆ ವಶಿನ್ಯಾದಿಗಳೊಡನೆ ತಾದಾತ್ಮ್ಯ ಹೊಂದಿರುವುದು. ಈ

ಬಗ್ಗೆ ಶ್ಲೋಕ ೩೧ ರಲ್ಲಿ (ಚತುಃಷಷ್ಟ್ಯಾ ತಂತ್ರೈ ಶ್ಲೋಕದಲ್ಲಿ) ವಿಶದವಾಗಿ ಹೇಳಿದೆ.

ರುದ್ರಯಾಮಳದಲ್ಲಿ ತೈತ್ತಿರೀಯಾರಣ್ಯಕದಲ್ಲಿ ಈ ಬಗ್ಗೆ ಇನ್ನು ಹೆಚ್ಚಿನ ವಿಷಯಗಳು ಸಿಗುತ್ತವೆ. (ಲಕ್ಷ್ಮೀಧರನ ಟೀಕೆಯಲ್ಲಿ ವಿವರಿಸಲಾಗಿದೆ)

(ಶೇ–ಪುಟ ೪೪–೪೫)

ಯಂತ್ರಾರಾಧನೆ (ಶ್ಲೋಕ ೧೧)



ಯಂತ್ರರಚನೆ : ಚಿನ್ನದ ತಗಡಿನಲ್ಲಿ ಯಂತ್ರ ರಚಿಸಬೇಕು. ವೃತ್ತದೊಳಗೆ ಷಟ್ಕೋಣವನ್ನು ಮತ್ತು ವೃತ್ತದನಡುವೆ ಬೀಜಾಕ್ಷರ ಬರೆಯಬೇಕು.

ಪೂಜೆ : ಉತ್ತರಾಭಿಮುಖವಾಗಿ ಕುಳಿತು ಪೂಜಿಸಬೇಕು. ಲಲಿತಾ ಸಹಸ್ರನಾಮ ಅರ್ಚನೆಯನ್ನು ಸಿಂಧೂರ ಬಣ್ಣದ ಹೂಗಳಿಂದ ಮಾಡಬೇಕು.

ನೈವೇದ್ಯ : ಚಿತ್ರಾನ್ನ (ಹರಿದ್ರಾನ್ನ), ಹೆಸರುಬೇಳೆ ಪಾಯಸ ಅಥವಾ ಬೆಲ್ಲದ ಪಾಯಸ. ಬಂಜೆತನ ನಿವಾರಣೆಗೆ ಸ್ತ್ರೀಯರು ಶುದ್ಧಬೆಣ್ಣೆಯ ಮೇಲೆ ಯಂತ್ರವನ್ನು ಬರೆದು ಅಭಿಮಂತ್ರಿಸಿ ಪ್ರತಿದಿನವೂ ಸೇವಿಸಬೇಕು.

ಜಪ : ದಿನಕ್ಕೆ ೧೦೦೦೦ ಬಾರಿಯಂತೆ ೮೧ ದಿನಗಳು ಜಪಿಸಬೇಕು.

ಫಲ : **ಸ್ತ್ರೀಯರ ಬಂಜೆತನ ನಿವಾರಣೆ.**

ಶ್ಲೋಕ-೧೨

ದೇವೀ ಸೌಂದರ್ಯದ ಅನಿರ್ವರ್ಣನೀಯತೆ

ತ್ವದೀಯಂ ಸೌಂದರ್ಯಂ ತುಹಿನಗಿರಿಕನ್ಯೇ ತುಲಯಿತುಂ
ಕವೀಂದ್ರಾಃ ಕಲ್ಪಂತೇ ಕಥಮಪಿ ವಿರಿಂಚಿಪ್ರಭೃತಯಃ ।
[೧]ಯದಾಲೋಕೌತ್ಸುಕ್ಯಾದಮರಲಲನಾ ಯಾಂತಿ ಮನಸಾ
[೨]ತಪೋಭಿರ್ದುಷ್ಪ್ರಾಪಾಮಪಿ ಗಿರಿಶಸಾಯುಜ್ಯಪದವೀಮ್ ॥ ೧೨ ॥

ಪಾಠಾಂತರ

೧. (ಯದಾಲೋಕೌತ್ಸುಕ್ಯಾತ್) ಯದಾಲೋಕೌತ್ಸುಕ್ಯಾತ್ (ಸು) ೨. (ತಪೋಭಿಃ) = ಪಶೂನಾಮ್ (ಸು)

ಪದವಿಭಾಗ

ತ್ವದೀಯಂ, ಸೌಂದರ್ಯಂ, ತುಹಿನಗಿರಿಕನ್ಯೇ, ತುಲಯಿತುಂ, (ಕವೀಂದ್ರಾಃ) ಕವಿ+ಇಂದ್ರಾಃ, ಕಲ್ಪಂತೇ, (ಕಥಮಪಿ) = ಕಥಂ+ಅಪಿ, ವಿರಿಂಚಿಪ್ರಭೃತಯಃ, (ಯದಾಲೋಕೌತ್ಸುಕ್ಯಾತ್)= ಯತ್ +ಆಲೋಕ+ಔತ್ಸುಕ್ಯಾತ್, (ಅಮರಲಲನಾ) = ಅಮರಲಲನಾಃ ಯಾಂತಿ, ಮನಸಾ, (ತಪೋಭಿರ್ದುಷ್ಪ್ರಾಪಾಮಪಿ) = ತಪೋಭಿಃ+ದುಷ್ಪ್ರಾಪಾಂ+ಅಪಿ, ಗಿರಿಶಸಾಯುಜ್ಯಪದವೀಮ್.

ಅನ್ವಯಾರ್ಥ

(ಹೇ) ತುಹಿನಗಿರಿಕನ್ಯೇ	ಹಿಮವಂತನ ಮಗಳೇ ದೇವಿಯೇ
ತ್ವದೀಯಂ ಸೌಂದರ್ಯಂ	ನಿನ್ನ ಅಂಗಾಂಗಗಳ ಸೌಂದರ್ಯವನ್ನು
ತುಲಯಿತುಂ	ತೂಕಮಾಡಿ (ಹೋಲಿಸಿ) ತಿಳಿಯುವುದಕ್ಕೋಸ್ಕರ (ವರ್ಣಿಸಲು)
ವಿರಂಚಿಪ್ರಭೃತಯಃ	ಬ್ರಹ್ಮನೇ-ಮೊದಲಾದ
ಕವೀಂದ್ರಾಃ	(ಕವಿ+ಇಂದ್ರಾಃ) ಕವಿಗಳಲ್ಲಿ-ಶ್ರೇಷ್ಠರಾದವರು
ಕಥಮಪಿ	(ಕಥಂ+ಅಪಿ) ಹೇಗೆತಾನೆ
ಕಲ್ಪಂತೇ	ಸಮರ್ಥರಾಗುತ್ತಾರೆ.

ಯತ್	(ಯದ್ಯಸ್ಮಾತ್ಕಾರಣಾತ್) ಯಾವ ಕಾರಣದ ದೆಸೆಯಿಂದ
ಅಮರಲಲನಾಃ	ದೇವತೆಗಳ–ಸ್ತ್ರೀಯರು (ಊರ್ವಶೀ ಮೊದಲಾದವರು)
ಆಲೋಕೌತ್ಸುಕ್ಯಾತ್	(ಆಲೋಕ+ಔತ್ಸುಕ್ಯಾತ್) ನಿನ್ನ ಸೌಂದರ್ಯವನ್ನು ನೋಡುವುದರಲ್ಲಿ–ಉತ್ಸಾಹಪಟ್ಟು
ತಪೋಭಿಃ	(ಅನೇಕ ವಿಧವಾದ) ತಪಸ್ಸುಗಳಿಂದ
ದುಷ್ಪ್ರಾಪಾಮಪಿ	ಹೊಂದಲು ಅಸಾಧ್ಯವಾಗಿದ್ದರೂ ಕೂಡ
ಗಿರಿಶ ಸಾಯುಜ್ಯ ಪದವೀಂ	ಈಶ್ವರನೊಡನೆ–ಸಾಯುಜ್ಯ ಮುಕ್ತಿಯನ್ನು
ಮನಸಾ ಯಾಂತಿ	ಮನಸ್ಸಿನಲ್ಲಿ ಹೊಂದಿರುತ್ತಾರೆ (ಅಪೇಕ್ಷಿಸುತ್ತಾ ಇರುತ್ತಾರೆ)

ತಾತ್ಪರ್ಯ

ಎಲೈ ದೇವಿಯೇ ಬ್ರಹ್ಮಾದಿಗಳೂ ಕೂಡ ಅಸದೃಶವಾದ ನಿನ್ನ ಸೌಂದರ್ಯವನ್ನು ವರ್ಣಿಸಲು ಶಕ್ತರಲ್ಲ. ಅದು ಹೇಗೆಂದರೆ, ಯಾವ ಕಾರಣದಿಂದ ಊರ್ವಶೀ ಮೊದಲಾದ ಅಪ್ಸರಸ್ತ್ರೀಯರುಗಳು ತಮ್ಮತಮ್ಮ ಸೌಂದರ್ಯವನ್ನು ನಿಂದಿಸಿಕೊಂಡು ಪಾರ್ವತೀದೇವಿಯ ಸೌಂದರ್ಯವನ್ನು ನೋಡಬೇಕೆಂದು ಬಹಳವಾಗಿ ಚಿಂತೆಪಟ್ಟು ಪರಮೇಶ್ವರನ ರೂಪವನ್ನು ನಾವು ಹೊಂದಿದ ಹೊರತು ದೇವೀಸೌಂದರ್ಯ ದರ್ಶನವಾಗಲಾರದೆಂದು ನಿಶ್ಚಯಿಸಿ ಅನೇಕರೀತಿಯ ತಪಸ್ಸು ಮಾಡಿ ಶಿವಸಾಯುಜ್ಯವನ್ನು ಹೊಂದಬೇಕೆಂದು ಆಶೆಪಟ್ಟರು.

(ಕ–ಪುಟ ೨೪)

ಪದ್ಯಾನುವಾದ

ಹೇ ತುಹಿನಗಿರಿಕನ್ಯೆ! ಎಣೆಯಿಲ್ಲದಿಹ ನಿನ್ನ
ಚೆಲುವನುಪಮಿಸಲರಿವರೇನಾ ವಿರಿಂಚಿ ಮುಂ–
ತಪ್ಪ ಕವಿವರ್ಯರಿನ್ನುಳಿದ ಕವಿಗಳ ಕುಬ್ಜಕಲ್ಪನೆಗೆ ಸಾಧ್ಯವಹುದೇ?
ತಪದಿಂದಲೂ ಕೂಡ ಪಡೆಯಲಾಗದ ಶಿವನ
ಸಾಯುಜ್ಯ ಪದವಿಯನು ಆ ಸೊಬಗಿನಾಲೋಕ–
ದೌತ್ಸುಕ್ಯಮಾತ್ರದಿಂದ್ಯೈದುವರು ಮನಸಿನಲಿ ದೇವಲಲನಾಮಣಿಗಳು

॥ ೧೨ ॥

ಟಿಪ್ಪಣಿಗಳು

೧. ಅಲಂಕಾರ

ಲಕ್ಷ್ಯ:–೧ ಗಗನಂ ಗಗನಾಕಾರಂ ಸಾಗರಸ್ಸಾಗರೋಪಮಃ
ರಾಮ ರಾವಣಯೋರ್ಯುದ್ಧಂ ರಾಮರಾವಣಯೋರಿವ
[ಗಗನವು ಗಗನದಂತೆಯೇ: ಸಾಗರವು ಸಾಗರದಂತೆಯೇ)
ಮೇಲಿನ ಉದಾಹರಣೆಯಲ್ಲಿ ಗಗನ, ಸಾಗರ ರಾಮರಾವಣರ ಯುದ್ಧಕ್ಕೆ
ಅವೇ ಸದೃಶ, ಬೇರೆಯದಕ್ಕೆ ಅನ್ವಯಿಸಲಾಗದು]

(ವಾಲ್ಮೀಕಿ ರಾಮಾಯಣ)

ಲಕ್ಷ್ಯ–೨ ಹೆಣಗಳಲಿ ನಿನ್ನ ಸರಿ
ಭಕಿತಿರ್ಝುರಿ ; ಮುಕುತಿ ಸಿರಿ
ಇನ್ನದಾರದು ?
ಇನ್ನುವರೆಗೂ ತೋರದು.

(ಡಿ.ಎಸ್. ಕರ್ಕಿ, ನಕ್ಷತ್ರಗಾನ, ಪುಟ ೩೪)

ಅಲಂಕಾರ ಲಕ್ಷಣ: ಏಕಸ್ಯವೋಪಮಾನೋಪಮೇಯತ್ವೇ ಅನನ್ವಯಃ
(ಉಪಮಾನ ಉಪಮೇಯ ಭಾವಗಳೆರಡೂ ಒಂದರಲ್ಲಿಯೇ
ಇದ್ದರೆ ಅದು ಅನನ್ವಯಾಲಂಕಾರ.)

(ಕುವಲಯಾನಂದಗ್ರಂಥ)

ಈ ಶ್ಲೋಕದಲ್ಲಿ ಅನನ್ವಯಾಲಂಕಾರ ಧ್ವನಿತವಾಗುತ್ತದೆ ಅನನ್ವಯಾಲಂಕಾರವೆಂದರೆ "ಲೋಕದಲ್ಲಿ ಎಲ್ಲಿಯೂ ಕೂಡ ಸದೃಶವಾದ ಮತ್ತೊಂದು ವಸ್ತು ಇಲ್ಲವಾದುದರಿಂದ ತನಗೆ ತಾನೇ ಸದೃಶವಾದುದು."ಇಲ್ಲಿ ಭಗವತಿಗೆ ಸದೃಶಳಾದವಳು ಭಗವತಿಯೇ ಎಂದು ತಿಳಿಯುತ್ತದೆ.

(ಶೇ–ಪುಟ ೫೮)

೨. ಈ ಶ್ಲೋಕದ ಅಂತರಾರ್ಥ ಹೀಗಿದೆ:–
ವಾಣೀಪತಿಯಾದ ಬ್ರಹ್ಮ ವಾಚಸ್ಪತಿಯೆನಿಸಿದ ಬೃಹಸ್ಪತಿ ಮೊದಲಾದವರೆಲ್ಲ ಕವಿಗಳೇ ಆದರೂ ಬೇರೊಂದು ವಸ್ತುವನ್ನು ಕಲ್ಪನೆ ಮಾಡಿ ನಿನ್ನ ಸೌಂದರ್ಯ ಅದರಂತೆ ಎಂದು ವರ್ಣಿಸಲು ಅವರಿಗೂ ಸಾಧ್ಯವಿಲ್ಲ. ಏಕೆಂದರೆ ನೀನು ಅಸದೃಶ (ಅಸಮಾನ) ರೂಪಳು.


ಇನ್ನು ಬ್ರಹ್ಮ ಸೃಷ್ಟಿಯಲ್ಲಿ ಸೌಂದರ್ಯದ ಖಣಿಗಳೆಂದರೆ ಅಪ್ಸರೆಯರಾದ ರಂಭೆ, ಊರ್ವಶಿ, ತಿಲೋತ್ತಮೆ, ಮೊದಲಾದವರು. ಆದರೆ ದೇವಿಯ ಲೇಶದ ಅತಿ ಸ್ವಲ್ಪಕೋಟಿಭಾಗದ ಸೌಂದರ್ಯಕ್ಕೂ ಅವರ ಸೌಂದರ್ಯ ಸಾಟಿ

ಅಲ್ಲ. ಅದಕ್ಕಾಗಿ ನಿನ್ನ ಇಂಥ ಸೌಂದರ್ಯವನ್ನು ನೋಡಲು ಅಪೇಕ್ಷಿಸಿದ ಅವರು ಶಿವ ಪುರುಷಭಾವವಿಲ್ಲದೆ ನಿನ್ನನ್ನು ಅರಿಯಲು ಸಾಧ್ಯವಿಲ್ಲ. ಸದಾಶಿವನಿಗೆ ಮಾತ್ರ ಅದು ಶಕ್ಯ. ಆದ್ದರಿಂದ ತಮ್ಮ ಸೌಂದರ್ಯದಲ್ಲಿ ತಿರಸ್ಕಾರ ಹೊಂದಿದವರಾಗಿ ಸದಾಶಿವನಲ್ಲಿ ಸಾಯುಜ್ಯ ಮನೋರಥ (ಸಂಕಲ್ಪ–ಅಭಿಲಾಷೆ) ಹೊಂದಿದರು; ಅಂದರೆ ಯೋಗಶಕ್ತಿಯಿಂದ ಮಾತ್ರ ನೋಡಲು ಸಾಧ್ಯವಾದ್ದರಿಂದ ಶಿವಯೋಗದಲ್ಲಿ ತಲ್ಲೀನರಾದರು.

ಇದರರ್ಥ ಸಾಧಾರಣ ಕೋರಿಕೆಗಳೂ ಪ್ರಬೋಧಗಳೂ ಸಿದ್ಧಿಗಳ ಆಕರ್ಷಣೆ ಇರುವವರು ಯಾರೂ ಶಿವನಬಳಿ ಹೋಗಲಾರರು. ಯೋಗದಿಂದ ಮಾತ್ರ ದೇವಿಯ ಸೌಂದರ್ಯದರ್ಶನ ಲಾಭ, ಈಶ್ವರಸಾಯುಜ್ಯ ದೊರೆಯುವುದು.

(ಶೇ–ಪುಟ ೫೮)

ಯಂತ್ರಾರಾಧನೆ (ಶ್ಲೋಕ ೧೨)



ಯಂತ್ರರಚನೆ : ಬೆಳ್ಳಿಯ ಪಾತ್ರೆಯಲ್ಲಿ ನೀರು ಅಥವಾ ಜೇನುತುಪ್ಪವನ್ನು ಹಾಕಿ ಅಭಿಮುಖವಾಗಿ ಕೂಡಬೇಕು.

ಪೂಜೆ : ಬಿಳಿಯ ಹೂಗಳಿಂದ ಸರಸ್ವತೀ ಅಷ್ಟೋತ್ತರ ಅರ್ಚನೆಯನ್ನು ಮತ್ತು ಲಲಿತಾ ಅಷ್ಟೋತ್ತರ ಅರ್ಚನೆಯನ್ನು ಮಲ್ಲಿಗೆ ಹೂಗಳಿಂದ ಮಾಡಬೇಕು.

ನೈವೇದ್ಯ : ಅನ್ನ, ಜೇನುತುಪ್ಪ, ದಾಳಿಂಬೆಹಣ್ಣು ಅಭಿಮಂತ್ರಿಸಿದ ನೀರು ಅಥವಾ ಜೇನುತುಪ್ಪವನ್ನು ಪ್ರತಿದಿನ ಸೇವಿಸಬೇಕು.

ಜಪ : ಪ್ರತಿದಿನ ಸಾವಿರ ಬಾರಿ ಶ್ಲೋಕವನ್ನು ೪೫ ದಿನಗಳ ಕಾಲ ಜಪಿಸಬೇಕು.

ಫಲ : **ಮೂಕತನ ನಿವಾರಣೆ, ವಾಕ್‌ಸಿದ್ಧಿ, ಕವಿತಾಶಕ್ತಿ ಪ್ರಾಪ್ತಿ, ವಶಿತ್ವಸಿದ್ಧಿ.**

ಶ್ಲೋಕ–೧೩

ದೇವಿಯ ಕಡೆಗಣ್ಣೋಟದ ಪ್ರಭಾವ

ನರಂ ವರ್ಷೀಯಾಂಸಂ ನಯನವಿರಸಂ ನರ್ಮಸು ಜಡಂ
ತವಾಪಾಂಗಾಲೋಕೇ ಪತಿತಮನುಧಾವಂತಿ ಶತಶಃ ।
ಗಲದ್ವೇಣೀಬಂಧಾಃ ಕುಚಕಲಶವಿಸ್ರಸ್ತಸಿಚಯಾಃ
ಹಠಾತ್ತ್ರುಟ್ಯತ್ಕಾಂಚ್ಯೋ ವಿಗಲಿತದುಕೂಲಾ ಯುವತಯಃ ॥ ೧೩ ॥

ಪದವಿಭಾಗ

ನರಂ, ವರ್ಷೀಯಾಂಸಂ, ನಯನವಿರಸಂ, ನರ್ಮಸು, ಜಡಂ, (ತವಾಪಾಂಗಾಲೋಕೇ) =ತವ+ಅಪಾಂಗ+ಆಲೋಕೇ, (ಪತಿತಮನುಧಾವಂತಿ)= ಪತಿತಂ+ಅನುಧಾವಂತಿ, ಶತಶಃ (ಗಲದ್ವೇಣೀಬಂಧಾಃ) = ಗಲತ್+ವೇಣಿಬಂಧಾಃ, ಕುಚಕಲಶವಿಸ್ರಸ್ತಸಿಚಯಾಃ (ಹಠಾ, ತ್ರುಟ್ಯತ್ಕಾಂಚ್ಯೋ) = ಹಠಾತ್+ತ್ರುಟ್ಯತ್+ಕಾಂಚ್ಯಃ, (ವಿಗಲಿತದುಕೂಲಾ ಯುವತಯಃ) = ವಿಗಲಿತದುಕೂಲಾಃ + ಯುವತಯಃ

ಅನ್ವಯಾರ್ಥ

(ಹೇ ಭಗವತಿ)	(ಎಲೈ ದೇವಿಯೇ)
ವರ್ಷೀಯಾಂಸಂ	ಬಹಳ ಮುದುಕನಾಗಿಯೂ
ನಯನ ವಿರಸಂ	ಕಣ್ಣಲ್ಲಿ ದೋಷವುಳ್ಳವನಾಗಿಯೂ
ನರ್ಮಸು ಜಡಂ	ಮನ್ಮಥ ಕ್ರೀಡೆಗಳಲ್ಲಿ ಅತಿಮೂಢನಾಗಿದ್ದು (ಅನಂತರದಲ್ಲಿ)
ತವಾಪಾಂಗಾಲೋಕೇ	(ತವ+ಅಪಾಂಗಲೋಕೇ) ನಿನ್ನ – ಕಡೆಗಣ್ಣೋಟದಲ್ಲಿ
ಪತಿತಂ ನರಂ	ಬಿದ್ದ ಒಳಗಾದ ಪುರುಷನನ್ನು
ಯುವತಯಃ	.ಪ್ರಾಯದ ಹೆಂಗಸರು (ತರುಣಿಯರು)
ಗಲದ್ವೇಣೀಬಂಧಾಃ	(ಗಲತ್+ವೇಣೀಬಂಧಾಃ) ಬಿಚ್ಚುಕೊಂಡಿರುವ ತುರುಬುಳ್ಳವರಾಗಿಯೂ

ಕುಚಕಲಶ ವಿಸ್ರಸ್ತಸಿಚಯಾಃ	(ಕುಚಕಲಶ + ವಿಸ್ರಸ್ತ + ಸಿಚಯಾಃ) ಕಲಶಗಳಂತಿರುವ ಸ್ತನಗಳ ಮೇಲಿನಿಂದ ಜಾರಿದ ಸೆರಗುಳ್ಳವರಾಗಿಯೂ
ಹಠಾತ್ತ್ರುಟ್ಯತ್ಕಾಂಚ್ಯಃ	(ಹಠಾತ್+ತ್ರುಟ್ಯತ್+ಕಾಂಚ್ಯಃ)= ಇದಕ್ಕಿದ್ದ ಹಾಗೆ–ಕಳಚಿ ಹೋಗುತ್ತಿರುವ ಗೆಜ್ಜೆ ಡಾಬುವುಳ್ಳವರಾಗಿ
ವಿಗಲಿತದುಕೂಲಾಃ	ಜಾರಿಬಿದ್ದ – ವಸ್ತ್ರವುಳ್ಳವರಾಗಿಯೂ
ಅನುಧಾವಂತಿ	(ಹಿಂಬಾಲಿಸಿ) ಅನುಸರಿಸಿ ಓಡಿಬರುತ್ತಾರೆ.

ತಾತ್ಪರ್ಯ

ಎಲೈ ದೇವಿಯೇ, ನಿನ್ನ ಕಡೆಗಣ್ಣೋಟಕ್ಕೆ (ಕೃಪಾಕಟಾಕ್ಷಕ್ಕೆ) ಒಳಗಾದ ವಿಕಾರಿ ಪುರುಷನನ್ನು ಸುಂದರ ತರುಣಿಯರೂ ಕೂಡ ಅವನನ್ನು ಮನ್ಮಥನೆಂದು ಭಾವಿಸಿ ತಾವಾಗಿ ಅವನ ಮೇಲೆ ಬಿದ್ದು ಬರುತ್ತಾರೆ ಎಂಬುದಿಲ್ಲಿಯ ಸಾರಾಂಶ. ಅದನ್ನು ವರ್ಣಿಸುವ ಬಗೆ ಹೀಗೆ :–

ನಿನ್ನ ಭಕ್ತನು ಹಣ್ಣು ಹಣ್ಣು ಮುದುಕನಾಗಿದ್ದರೂ, ನೇತ್ರದೋಷಗಳಿಂದ ಅಂಧನಾಗಿದ್ದರೂ, ರತಿಕ್ರೀಡೆಗಳಲ್ಲಿ ಅತ್ಯಂತ ಮೂಢನಾಗಿದ್ದರೂ, ನಿನ್ನ ಕಡೆಗಣ್ಣನೋಟಕ್ಕೆ ಒಳಗಾದರೆ, ನೂರಾರು ಮಂದಿ ತರುಣಿಯರು ಮೋಹ ಪರವಶರಾಗಿ, ಬಿಚ್ಚಿದ ತುರುಬು ಉಳ್ಳವರಾಗಿ, ಕಲಶದಂತಿರುವ ಸ್ತನಗಳಿಂದ ಜಾರಿಬಿದ್ದ ಸೆರಗು ಉಳ್ಳವರಾಗಿ, ಇದ್ದಕ್ಕಿದ್ದ ಹಾಗೆ ಜಾರುತ್ತಿರುವ ಗೆಜ್ಜೆ ಡಾಬುವುಳ್ಳರಾಗಿ, ಉಟ್ಟ ಸೀರೆ ಜಾರಿಬಿದ್ದವರಾಗಿ ಆದರೂ ಅವುಗಳ ಪರಿವೆ ಇಲ್ಲದೆ ನಿನ್ನ ಆಕರ್ಷಣಕ್ಕೆ ಒಳಗಾಗಿ (ಮೋಹಾಂಧಕರಾಗಿ) (ಆ ವೃದ್ಧವಿಕಾರಿ) ಮುದುಕನನ್ನು ಮನ್ಮಥನೆಂದು ಭಾವಿಸಿ ಮೋಹಾಂಧಕರಾಗಿ ಹಿಂಬಾಲಿಸುತ್ತಾರೆ. ನಿನ್ನ ಕಡೆಗಣ್ಣೋಟದ ಮಹಿಮೆ ಅಂತಹದು.

ಪದ್ಯಾನುವಾದ

ಅತಿವೃದ್ಧನರತಗಣ್ಣವನು ರತಿಸುಖ ವಿಮುಖ–
ನಿಂತಿಪ್ಪ ನರನಮೇಲೊಡನೆ ಬೀಳಲು ನಿನ್ನ
ಕಡೆಗಣ್ಣ ನೋಟವಾಕ್ಷಣದಲ್ಲಿ, ಓ ದೇವಿ, ನೂರಾರು ಎಳೆವೆಣ್ಗಳು
ಮುಡಿಗಟ್ಟು ಬಿಚ್ಚಿಕೊಳೆ ಎದೆಯ ಮೇಲುದ ಜಾರೆ
ತಟ್ಟನೆ ಮುರಿಯೆ ಕಾಂಚಿ ತೊಟ್ಟನುಟ್ಟುಡೆಕಳಚಿ
ಎಂಥ ಸೋಜಿಗವೆಂದು ಲೋಕನಿಬ್ಬೆರಗಾಗೆ ಅವನ ಹಿಂದೋಡಿಬಹರು
॥ ೧೩ ॥

ಟಿಪ್ಪಣಿಗಳು

೧. **ಶತಶಃ ಅನುಧಾವಂತಿ**

(ನೂರಾರು ಜನ ಯುವತಿಯರು ಹಿಂಬಾಲಿಸುತ್ತಾರೆ) ನೂರಾರು ಜನ ಯುವತಿಯರು ಎಂದರೆ ಭೂಲೋಕ ಭುವರ್‌ಲೋಕ ಸುವರ್‌ಲೋಕ ಈ ಎಲ್ಲ ಲೋಕಗಳಲ್ಲೂ ಇರುವ ಯುವತಿಯರು ಎಂದರ್ಥ.

(ಶೇ–ಪುಟ ೫೮)

೨. **ನಯನವಿರಸಂ**

(ಕಣ್ಣಿನದೋಷವುಳ್ಳವರಾಗಿ) ಕಾಚ, ಕಾಮಿಲ, ಪಟಲ ಮೊದಲಾದ ನೇತ್ರದೋಷಗಳಿಂದ ಕೂಡಿದವರಾಗಿ ಎಂದರೆ ಎರಡೂ ಕಣ್ಣುಗಳಿಂದ ನೋಡಲಾರದ ಕುರುಡರಾಗಿ ಎಂದು ಭಾವಾರ್ಥ.

(ಶೇ–ಪುಟ ೫೮)

೩. **ನರ್ಮಸು ಜಡಂ**

(ರತಿಕ್ರೀಡೆಗಳಲ್ಲಿ ಅತಿಮೂಢನು) ಶೃಂಗಾರದ ಕ್ರೀಡೆಗಳ ಪರಿಜ್ಞಾನವಿಲ್ಲದ ಅರಸಿಕನೂ ಮೂರ್ಖನೂ ಆದವನು.

೪. **ತವಾಪಾಂಗಾಲೋಕೇ ಪತಿತಂ ನರಂ ಯುವತಯಃ ಅನುಧಾವಂತಿ**

(ದೇವಿಯ ಕೃಪಾಕಟಾಕ್ಷಕ್ಕೆ ಒಳಗಾದ ವಿಕಾರಿಪುರುಷರು ಎಂಥ ಲೋಕಸುಂದರರು ಆಗುತ್ತಾರೆ ಎಂದರೆ ಸಮಸ್ತಲೋಕದ ಸುಂದರಿಯರೂ ಹಿಂಬಾಲಿಸುವಂಥ ಮನ್ಮಥರಾಗುತ್ತಾರೆ)

ಹೀಗೆ ಮೋಹದಾಸಿಯರಾದ ನಾರಿಯರು ಎಷ್ಟು ಉನ್ಮತರಾಗಿರುತ್ತಾರೆಂದರೆ, ಅವರ ತುರುಬು ಬಿಚ್ಚಿಹೋದರೂ, ಎದೆಮೇಲಿಂದ ಸೆರಗು ಜಾರಿದರೂ, ಸೊಂಟದ ಡಾಬಿನಿಂದ ಸೀರೆ ಕಳಚಿದರೂ, ಅದರ ಪರಿವೆ ಅವರಿಗಿರುವುದಿಲ್ಲ. ಸೀರೆ ಸೊಂಟಕ್ಕೆ ಬಿಗಿದಿರುವುದು ಸೀರೆಯನ್ನು ಎದೆತುಂಬ ಹೊದ್ದಿರುವುದು, ತುರುಬು ಗಂಟು ಹಾಕಿಕೊಂಡಿರುವುದು ಹೆಣ್ಣು ಮಕ್ಕಳ ಲಕ್ಷಣ. ಅವುಗಳನ್ನೆಲ್ಲ ಗಮನಿಸದೇ ದೇವೀ ಕಟಾಕ್ಷಕ್ಕೆ ಒಳಗಾದ ವೃದ್ಧರನ್ನು ಹಿಂಬಾಲಿಸುತ್ತಾರೆಂದರೆ ಅವರ ಸೌಂದರ್ಯ ಆಕರ್ಷಣೆ ಎಷ್ಟಿರಬೇಕು ಎಂದು ಊಹಿಸಿಕೊಳ್ಳಬೇಕು. ಹೀಗೆ ದೇವಿಯ ಕಡೆಗಣ್ಣೋಟದ ಮಹಿಮೆ ಈ ಶ್ಲೋಕದಲ್ಲಿ ವ್ಯಕ್ತವಾಗಿದೆ.

(ಶೇ–ಪುಟ ೫೮)

೫. "ವರ್ಷೀಯಾಂಸಂ ನಯನವಿರಸಂ ನರ್ಮಸು ಜಡಂ

ಈ ಶ್ಲೋಕದಲ್ಲಿ ಬಣ್ಣಿಸಿದ ಮುದುಕ ಬೇರಾರು ಅಲ್ಲ ಶಿವನೇ. ಹೌದು. ಶಿವನು ವಿರಕ್ತ. ಆದುದರಿಂದ ಕಾಮಜಡ, ಶಿವ, ಮುಕ್ಕಣ್ಣ, ಆ ಅರ್ಥದಲ್ಲಿ ನಯನವಿರಸ. ಅಲ್ಲದೆ ಶಿವ ಬೂದಿಬಡಕ : ಮಸಣವಾಸಿ, ಭಿಕ್ಷು ಹೀಗೆಲ್ಲ ಅವನ ವಿಲಕ್ಷಣತೆ. ಅಪ್ಸರ ಸ್ತ್ರೀಯರು ಗಿರಿಶಸಾಯುಜ್ಯವನ್ನು ಪಡೆದರೆಂಬ ಶ್ಲೋಕ ೧೨ರ ಮುಂದುವರಿಕೆ ಈ ಶ್ಲೋಕ ಎನ್ನಬಹುದು"

(ತೋ-ಪುಟ ೧೮೯)

ಯಂತ್ರಾರಾಧನೆ (ಶ್ಲೋಕ ೧೩)

ಕ್ಲೀಂ	ಕ್ಲೀಂ	ಕ್ಲೀಂ
	ಸಾಧ್ಯಮ್	
ಕ್ಲೀಂ	ಕ್ಲೀಂ	ಕ್ಲೀಂ

ಯಂತ್ರರಚನೆ : ಚಿನ್ನದ ತಗಡಿನ ಮೇಲೆ ಅಥವಾ ಸೀಸದ ತಗಡಿನಮೇಲೆ ದೀರ್ಘ ಚತುರಶ್ರಾಕಾರವಾಗಿ ಬೀಜಾಕ್ಷರಗಳೊಡನೆ ಬರೆಯಬೇಕು.

ಪೂಜೆ : ಪೂರ್ವಾಭಿಮುಖವಾಗಿ ಕುಳಿತು ಕೆಂಪು ಹೂಗಳಿಂದ ಲಲಿತಾತ್ರಿಶತಿ ಅರ್ಚನೆ ಮಾಡಬೇಕು.

ನೈವೇದ್ಯ : ಅನ್ನ, ತ್ರಿಮಧುರ (ಹಾಲು, ಕೊಬ್ಬರಿ, ಬೆಲ್ಲ ಸೇರಿದ ಪಾಯಸ)

ಜಪ : ೬ ದಿನಗಳ ಕಾಲ ಪ್ರತಿದಿನ ಸಾವಿರಬಾರಿ ಜಪಿಸಬೇಕು. ಯಂತ್ರವನ್ನು ಜಪಮುಗಿದ ಮೇಲೆ ಕತ್ತಿನಲ್ಲಿ ಧರಿಸಬೇಕು.

ಫಲ : ಷಂಡತನನಿವೃತ್ತಿ, ಸ್ತ್ರೀವಶೀಕರಣ

ಶ್ಲೋಕ–೧೪

ದೇವಿಯ ಪಾದಾಂಕಿತವಾದ ಷಟ್‌ಚಕ್ರಗಳ ಕಿರಣವಿಭಾಗ

ಕ್ಷಿತೌ ಷಟ್ಪಂಚಾಶದ್ದ್ವಿಸಮಧಿಕಪಂಚಾಶದುದಕೇ
ಹುತಾಶೇ ದ್ವಾಷಷ್ಟಿಶ್ಚತುರಧಿಕಪಂಚಾಶದನಿಲೇ ।
ದಿವಿ ದ್ವಿಷ್ಷಟ್‌ತ್ರಿಂಶನ್ಮನಸಿ ಚ ಚತುಷ್ಷಷ್ಟಿರಿತಿ ಯೇ
ಮಯೂಖಾಸ್ತೇಷಾಮಪ್ಯುಪರಿ ತವ ಪಾದಾಂಬುಜಯುಗಮ್
॥ ೧೪ ॥

ಪದವಿಭಾಗ

ಕ್ಷಿತೌ, (ಷಟ್ಪಂಚಾಶದ್ದ್ವಿಸಮಧಿಕಪಂಚಾಶದುದಕೇ) = ಷಟ್ + ಸಂಚಾಶತ್ + ದ್ವಿ+ಸಂ+ಅಧಿಕ ಪಂಚಾಶತ್+ಉದಕೇ, ಹುತಾಶೇ, (ದ್ವಾಷಷ್ಟಿಶ್ಚತುರಧಿಕಪಂಚಾಶದನಿಲೇ) = ದ್ವಾಷಷ್ಟಿಃ+ಚತುಃ+ಅಧಿಕ ಪಂಚಾಶತ್+ ಅನಿಲೇ, ದಿವಿ, (ದ್ವಿಷ್ಷಟ್ತ್ರಿಂಶನ್ಮನಸಿ) = ದ್ವಿಃ+ಷಟ್+ತ್ರಿಂಶತ್+ಮನಸಿ) ಚ, (ಚತುಷ್ಷಷ್ಟಿರಿತಿ) = ಚತುಃ+ಷಷ್ಟಿಃ+ಇತಿ, ಯೇ (ಮಯೂಖಾಸ್ತೇಷಾಮಪ್ಯುಪರಿ) = ಮಯೂಖಾಃ + ತೇಷಾಂ+ಅಪಿ+ಉಪರಿ) ತವ, (ಪಾದಾಂಬುಜಯುಗಮ್)=ಪಾದ+ಅಂಬುಜಯುಗಮ್.

ಅನ್ವಯಾರ್ಥ

(ಹೇ ಭಗವತಿ)	(ಎಲೈ ದೇವಿಯೇ,)
ಯೇ ಮಯೂಖಾಃ	ಯಾವ ಕಿರಣಗಳು
ಕ್ಷಿತೌ	ಪೃಥ್ವಿ ತತ್ತ್ವಯುಕ್ತವಾದ ಮೂಲಾಧಾರಚಕ್ರದಲ್ಲಿ
ಷಟ್ಪಂಚಾಶತ್	(ಷಟ್+ಪಂಚಾಶತ್) ಐವತ್ತಾರು ಆಗಿಯೂ
ಉದಕೇ	ಆ ಜಲತತ್ತ್ವಯುಕ್ತವಾದ ಮಣಿಪೂರ ಚಕ್ರದಲ್ಲಿ
ದ್ವಿಸಮಧಿಕ ಪಂಚಾಶತ್	ಎರಡಕ್ಕಿಂತ ಹೆಚ್ಚಾದ–ಐವತ್ತಾಗಿ (ಅಂದರೆ ೫೨ ಆಗಿಯೂ)

ಹುತಾಶೇ	ಅಗ್ನಿತತ್ತ್ವಯುಕ್ತವಾದ ಸ್ವಾಧಿಷ್ಠಾನ ಚಕ್ರದಲ್ಲಿ
ದ್ವಾಷಷ್ಟಿಃ	ಅರವತ್ತೆರಡಾಗಿಯೂ
ಅನಿಲೇ	ವಾಯು ತತ್ತ್ವಯುಕ್ತವಾದ ಅನಾಹತಚಕ್ರದಲ್ಲಿ
ಚತುರಧಿಕ ಪಂಚಾಶತ್	ನಾಲ್ಕರಿಂದ ಹೆಚ್ಚಾದ ಐವತ್ತಾಗಿ (ಎಂದರೆ ೫೪ ಆಗಿಯೂ)
ದಿವಿ	ಆಕಾಶ ತತ್ತ್ವಯುಕ್ತವಾದ (ವಿಶುದ್ಧಿಚಕ್ರದಲ್ಲಿ)
ದ್ವಿಷಟ್ತ್ರಿಂಶತ್	(ದ್ವಿಃ+ಷಟ್ತ್ರಿಂಶತ್) ಎರಡು–ಮೂವತ್ತಾರಾಗಿ (ಅಂದರೆ ೭೨ ಆಗಿಯೂ)
ಮನಸಿ	(ಮನಸ್ತತ್ತ್ವಯುಕ್ತವಾದ ಆಜ್ಞಾಚಕ್ರದಲ್ಲಿ) ಮನಸ್ಸಿನಲ್ಲಿ
ಚತುಷ್ಷಷ್ಟಿ (ವರ್ತಂತೇ)	(ಚತುಃ+ಷಷ್ಟಿಃ) ೬೪ ಆಗಿಯೂ ಇರುತ್ತವೆಯೋ
ಇತಿ	ಈ ಪ್ರಕಾರವಾದ
ತೇಷಾಮಪ್ಯುರಿ	(ತೇಷಾಂ+ಅಪಿ+ಉಪರಿ) ೩೬೦ ಕಿರಣಗಳ ಮೇಲುಭಾಗದಲ್ಲಿ (ಸಹಸ್ರದಳ ಕಮಲದಲ್ಲಿ)
ತವ ಪದಾಂಬುಜಯುಗಂ (ವರ್ತತೇ)	ನಿನ್ನ ಕಮಲದಂತಿರುವ ಎರಡು ಪಾದಗಳು (ಇರುತ್ತದೆ)
	ಸಮಯ ಸಂಪ್ರದಾಯವು ಈ ರೀತಿಯಾಗಿದೆ.

ತಾತ್ಪರ್ಯ

ಹೇ ಭಗವತಿ, ಯಾವ ಕಿರಣಗಳು ಪೃಥ್ವೀತತ್ತ್ವಯುಕ್ತವಾದ ಮೂಲಾಧಾರ ಚಕ್ರದಲ್ಲಿ ೫೬ ಆಗಿಯೂ ಜಲತತ್ತ್ವಯುಕ್ತವಾದ ಮಣಿಪೂರ ಚಕ್ರದಲ್ಲಿ ೫೨ ಆಗಿಯೂ ಅಗ್ನಿ ತತ್ತ್ವಯುಕ್ತವಾದ ಸ್ವಾಧಿಷ್ಠಾನ ಚಕ್ರದಲ್ಲಿ ೬೨ ಆಗಿಯೂ ವಾಯುತತ್ತ್ವಯುಕ್ತವಾದ ಅನಾಹತ ಚಕ್ರದಲ್ಲಿ ೫೪ ಆಗಿಯೂ ಆಕಾಶತತ್ತ್ವಯುಕ್ತವಾದ ವಿಶುದ್ಧಿಚಕ್ರದಲ್ಲಿ ೭೨ ಆಗಿಯೂ ಮನಸ್ತತ್ತ್ವಯುಕ್ತವಾದ ಆಜ್ಞಾಚಕ್ರದಲ್ಲಿ ೬೪ ಆಗಿಯೂ ಒಟ್ಟು ಷಟ್ಚಕ್ರಗಳಿಂದ ೩೬೦ ಕಿರಣಗಳಾಗುತ್ತವೆ. ಈ ೩೬೦ ಕಿರಣಗಳ ಮೇಲ್ಭಾಗದಲ್ಲಿ ಎಂದರೆ ಸಹಸ್ರದಳ ಕಮಲದಲ್ಲಿ ನಿನ್ನ ಕಮಲದಂತಿರುವ ಎರಡು ಪಾದಗಳು ಶೋಭಿಸುತ್ತವೆ. ಇದು ಸಮಯ ಸಂಪ್ರದಾಯದ ರೀತಿಯ ವರ್ಣನೆ ಆಗಿದೆ.

ಈ ವಿವರಣೆಯನ್ನು ಪಟ್ಟಿ ರೂಪದಲ್ಲಿ ಹೀಗೆ ತಿಳಿಸಬಹುದು.

ಕ್ರಸಂ.	ಚಕ್ರದ ಹೆಸರು	ತತ್ತ್ವದ ಹೆಸರು	ಕಾಂತಿಕಿರಣಗಳು	ಸ್ಥಾನ	ಗ್ರಂಥಿ
೧ ೨	ಮೂಲಾಧಾರ ಚಕ್ರ ಮಣಿಪೂರ ಚಕ್ರ	ಭೂತತ್ತ್ವ ಜಲತತ್ತ್ವ	೫೬ ೫೨	ಅಗ್ನಿ ಸೂರ್ಯ	ರುದ್ರಗ್ರಂಥಿ ವಿಷ್ಣುಗ್ರಂಥಿ
೩ ೪	ಸ್ವಾಧಿಷ್ಠಾನ ಚಕ್ರ ಅನಾಹತ ಚಕ್ರ	ಅಗ್ನಿತತ್ತ್ವ ವಾಯುತತ್ತ್ವ	೬೨ ೫೪	ಅಗ್ನಿ ಸೂರ್ಯ	
೫ ೬	ವಿಶುದ್ಧ ಚಕ್ರ ಆಜ್ಞಾ ಚಕ್ರ	ಆಕಾಶತತ್ತ್ವ ಮನಸ್‌ತತ್ತ್ವ	೭೨ ೬೪	ಚಂದ್ರ ಚಂದ್ರ	ಬ್ರಹ್ಮಗ್ರಂಥಿ

ಒಟ್ಟು ಕಾಂತಿಕಿರಣಗಳು ೩೬೦

ಇವುಗಳ ಮೇಲಿರುವ ಸಹಸ್ರದಳ ಕಮಲದಲ್ಲಿ ದೇವಿಯ ಪಾದಗಳು ವಿರಾಜಿಸುತ್ತಿವೆ.

ಪದ್ಯಾನುವಾದ

ಐವತ್ತು ಮೇಲಾರು ಭೂನಿಷ್ಠ ಚಕ್ರದಲಿ
ಐವತ್ತು ಮೇಲೆರಡು ಜಲಯುಕ್ತ ಚಕ್ರದಲಿ
ಅಗ್ನಿ ಚಕ್ರದಲಾರು ಹತ್ತು ಮೇಲೆರಡನಿಲದಲ್ಲಿ ಐವತ್ತುನಾಲ್ಕು
ಆಕಾಶ ಚಕ್ರದಲ್ಲೆಪ್ಪತ್ತು ಮೇಲೆರಡು
ಮಾನಸದ ಚಕ್ರದಲ್ಲರುವತ್ತು ನಾಲ್ಕಂತು
ಮುನ್ನೂರರುವತ್ತು ಕಿರಣಗಳ ಮೇಲ್ನಿನ್ನಡಿದಾವರೆಗಳ ಜೋಡಿ ॥ ೧೪ ॥

ಟಿಪ್ಪಣಿಗಳು

೧. **ಷಟ್‌ಚಕ್ರಗಳ ವಿವರಣೆ:** ಕುಬ್ಜಿಕಾತಂತ್ರದ ಪ್ರಕಾರ ಷಟ್‌ಚಕ್ರಗಳ ಕಿರಣಗಳ ವಿವರಣೆ ಹೀಗಿದೆ : – ಪೃಥ್ವೀತತ್ತ್ವದ ೫೬ ಕಿರಣಗಳಲ್ಲಿ ಶಿವರೂಪಕಿರಣಗಳು ೨೮, ಶಕ್ತಿರೂಪಕಿರಣಗಳು ೨೮ ಕಿರಣಗಳ ವಿವರ ಹೀಗಿದೆ:– ಪಂಚತನ್ಮಾತ್ರೆ (೫) ಪಂಚಭೂತಗಳು (೫) ಪಂಚಜ್ಞಾನೇಂದ್ರಿಯಗಳು (೫) ಪಂಚಕರ್ಮೇಂದ್ರಿಯಗಳು (೫) ಅಂತಃಕರಣ ಚತುಷ್ಟಯ (೪) ಕಾಲ (೧) ಪ್ರಕೃತಿ–ಪುರುಷ ಮಹತ್ತತ್ತ್ವ (೨) ಮನಸ್ಸು (೧) ಒಟ್ಟು ೨೮x೨=೫೬ ಕಿರಣಗಳು. ಜಲತತ್ತ್ವದ ಕಿರಣಗಳು ೫೨: ಇವುಗಳಲ್ಲಿ ಶಿವ–ಶಕ್ತಿರೂಪಕಿರಣಗಳು (೨೬+೨೬=೫೨) ೫೨. ೨೬ ಕಿರಣಗಳ ವಿವರ ಹೀಗಿದೆ: ಪಂಚಭೂತಗಳು (೫) ದಶಸಾರ್ಥಗಳು ೧೦ ಮನಸ್ಸು (೧) ಒಟ್ಟು ೨೬x೨=೫೨. ಅಗ್ನಿಸ್ಥಾನದ ಕಿರಣಗಳು ೬೨ ಶಿವ–ಶಕ್ತಿ ರೂಪಕಿರಣಗಳು ೩೧+೩೧=೬೨ ಪಂಚಭೂತಗಳು (೫) ಪಂಚತನ್ಮಾತ್ರ

(೫) ಪಂಚಜ್ಞಾನೇಂದ್ರಿಯಗಳು (೫) ಪಂಚಕರ್ಮೇಂದ್ರಿಯಗಳು (೫) ದಶಸಾರ್ಥಗಳು (೧೦) ಮನಸ್ಸು (೧) ಒಟ್ಟು ೩೧ (೩೧x೨=೬೨). ವಾಯುಸ್ಥಾನದ ಕಿರಣಗಳು ೫೪ ಶಿವಶಕ್ತಿ ರೂಪಕಿರಣಗಳು ೨೭x೨=೫೪ ಪಂಚತನ್ಮಾತ್ರೆ (೫) ಪಂಚಭೂತಗಳು (೫) ಪಂಚಜ್ಞಾನೇಂದ್ರಿಯ (೫) ಪಂಚಕರ್ಮೇಂದ್ರಿಯ (೫) ಅಂತಃಕರಣ ಚತುಷ್ಟಯ (೪) ಕಾಲ (೧) ಮನಸ್ಸು (೧) ಪ್ರಕೃತಿ (೧) ಒಟ್ಟು ೨೭. ಆಕಾಶಸ್ಥಾನದ ಕಿರಣಗಳು ೭೨ (೩೬+೩೬ ಶಿವ+ಶಕ್ತಿ ರೂಪಗಳು). ೩೬ ಕಿರಣಗಳ ವಿವರ ಹೀಗೆ: ಜ್ಞಾನೇಂದ್ರಿಯ (೫) ಕರ್ಮೇಂದ್ರಿಯ (೫) ಪಂಚತನ್ಮಾತ್ರೆ (೫) ಪಂಚಭೂತಗಳು. ೫+೧೬ ಅಂಶಗಳು (ಶಿವ–ಸದಾಶಿವ–ಈಶ್ವರ–ಶುದ್ಧವಿದ್ಯಾಸಕ್ತಿ–ಮಾಯಾ–ಕಾಲ–ರಾಗ–ಕಲಾ–ವಿದ್ಯಾ–ನಿಯತಿ–ಪುರುಷ–ಪ್ರಕೃತಿ–ಬುದ್ಧಿ–ಅಹಂಕಾರ–ಮನಸ್ಸು). ಮನಸ್ತತ್ತ್ವದಲ್ಲಿ ೬೪ ಕಿರಣಗಳು (೩೨x೨=೬೪ ಶಿವ+ಶಕ್ತಿ ರೂಪಗಳು) ಪರಾ (೪) ಸಪ್ತಕ್ರಿಯಾಶಕ್ತಿ (೭) ಜ್ಞಾನಶಕ್ತಿ (೪) ಕ್ರಿಯಾಶಕ್ತಿ (೫) ಕುಂಡಲಿನೀ ಭೂಮತಾ ಭೇದಗಳು (೪) ಮಾತೃಕಾವರ್ಗಾಷ್ಟಕ ಭೇದಗಳು (೮).

೨. **ತೇಷಾಮಪ್ಯುಪರಿ ತವ ಪಾದಾಂಬುಜಂ ವರ್ತತೇ**

(ಅವುಗಳಿಗೂ ಮೇಲೆ ನಿನ್ನ ಪಾದಕಮಲವಿದೆ) ಸೂರ್ಯ–ಚಂದ್ರ–ಅಗ್ನಿಗಳು ಭಗವತಿಯ ಪಾದಾರವಿಂದಗಳಿಂದ ಉತ್ಪನ್ನವಾದ ಅನಂತಕೋಟಿ ಕಿರಣಗಳ ಪೈಕಿ ಕೆಲವು ಕಿರಣಗಳನ್ನು ಸ್ವೀಕರಿಸಿ ಭಗವತಿಯ ಅನುಗ್ರಹದಿಂದ ಪ್ರಾಪ್ತವಾದ ಜಗತ್ಪ್ರಕಾಶನ ಸಾಮರ್ಥ್ಯದಿಂದ ಲೋಕಗಳನ್ನು ಬೆಳಗುತ್ತಾರೆ. ಆದುದರಿಂದ ಚಂದ್ರಕಲಾಚಕ್ರವಾದ ಬೈಂದವಸ್ಥಾನವು ಸಮಸ್ತಲೋಕಗಳನ್ನು ಮೀರಿ ಇದೆ. ಅಲ್ಲಿ ಭಗವತಿಯ ಚರಣಕಮಲಗಳಿವೆ. ಅನೇಕ ಕೋಟಿ ಬ್ರಹ್ಮಾಂಡ–ಪಿಂಡಾಂಡಗಳಿಂದ ಕೂಡಿದ ಕಿರಣಗಳು ಮೇಲೆಯೇ ಇರುವುದರಿಂದ ಅವುಗಳ ಮೇಲೆ ದೇವಿಯ ಚರಣಕಮಲಗಳಿವೆ ಎಂದು ಹೇಳಿದೆ.

೩. ಬ್ರಹ್ಮಾಂಡವನ್ನು ಬೆಳಗುವ ೩೬೦ ಕಿರಣಗಳ ವಿವರ ಹೀಗಿದೆ.


ಈ ಕಿರಣಗಳು ಕಾಲಗಳನ್ನು (ಭೂತ–ವರ್ತಮಾನ–ಭವಿಷ್ಯತ್) ಪ್ರಕಟಿಸಿರುವುದರಿಂದ ೩೬೦ ದಿನಗಳಾಗಿ ಸಂವತ್ಸರ ರೂಪವಾಗಿದೆ. ಕಾಲರೂಪಿಯಾದವನೇ ಮಹಾದೇವನಾದ ಪ್ರಜಾಪತಿ ಆಗಿದ್ದಾನೆ. ಈ ೩೬೦ ಕಿರಣಗಳು ಸುಮಾರು ಸೋಮ–ಸೂರ್ಯ ಅಗ್ನಿರೂಪವಾಗಿ ವ್ಯಾಪಿಸಿದೆ. (ಅಗ್ನಿಕಿರಣಗಳು ೧೦೮ ಸೂರ್ಯಕಿರಣಗಳು ೧೧೬ ಚಂದ್ರಕಿರಣಗಳು ೧೩೬ ಒಟ್ಟು ೩೬೦)

ಈ ಕಿರಣಗಳು ಹಗಲಿನಲ್ಲಿ ಸೂರ್ಯರೂಪವಾಗಿಯೂ ರಾತ್ರಿಯಲ್ಲಿ ಚಂದ್ರ ರೂಪವಾಗಿಯೂ ಸಂಧ್ಯಾಕಾಲಗಳಲ್ಲಿ ಅಗ್ನಿರೂಪವಾಗಿಯೂ ಇರುತ್ತವೆ.

೪. ಶಿವಶಕ್ತಿ ಸ್ವರೂಪಳೂ ಚೈತನ್ಯರೂಪಳೂ ಆದ ಆ ಭಗವತಿಯು ಇಲ್ಲದಿದ್ದಲ್ಲಿ ಚರಾಚರಾತ್ಮಕವಾದ ಈ ಜಗತ್ತೆಲ್ಲ ಅಂಧಕಾರಮಯವಾಗಿ ಬಿಡುತ್ತಿತ್ತು. ಆಕೆಯ ಅನಂತಕೋಟಿ ಕಿರಣಗಳಲ್ಲಿ ೩೬೦ ಕಿರಣಗಳು ಮೇಲೆ ತಿಳಿಸಿದಂತೆ ಈ ಲೋಕವನ್ನು ಬ್ರಹ್ಮಾಂಡವನ್ನು ವ್ಯಾಪಿಸಿವೆ.

(ಶೇ–ಪುಟ ೬೧–೬೩)

ಯಂತ್ರಾರಾಧನೆ (ಶ್ಲೋಕ ೧೪)



ಯಂತ್ರರಚನೆ : ಚಿನ್ನದ ತಗಡಿನಲ್ಲಿ ಯಂತ್ರ ತಯಾರಿಸಬೇಕು. ಎಂಟು ತ್ರಿಶೂಲ ಸಹಿತವಾಗಿ ಸಮ ಚತುರಶ್ರವಾಗಿ ಬರೆಯಬೇಕು.

ಪೂಜೆ : ಪೂರ್ವಾಭಿಮುಖವಾಗಿ ಕುಳಿತು ಕೆಂಪು ಹೂಗಳಿಂದ ಲಲಿತಾ ಸಹಸ್ರನಾಮ ಅರ್ಚನೆ ಮಾಡಬೇಕು.

ನೈವೇದ್ಯ : ಅನ್ನ, ಉದ್ದಿನವಡೆ, ಪಾಯಸ, ತಾಂಬೂಲ

ಜಪ : ೪೫ ದಿನಗಳ ಕಾಲ ಪ್ರತಿದಿನ ಶ್ಲೋಕವನ್ನು ದಿನಕ್ಕೆ ಸಾವಿರ ಬಾರಿ ಜಪಿಸಬೇಕು ಯಂತ್ರವನ್ನು ಕಂಠದಲ್ಲಿ ಧರಿಸಬೇಕು.

ಫಲ : **ವಸಂತಾದಿಕಾಲಗಳಲ್ಲಿ ಬರುವ ರೋಗ ನಿವಾರಣೆ ಮತ್ತು ದುರ್ಭಿಕ್ಷ ನಿವಾರಣೆ**

ಶ್ಲೋಕ–೧೫

ದೇವಿಯ ಸ್ವರೂಪವೇ ಮಧುರವಾಣಿಯ ಉಗಮಸ್ಥಾನ

ಶರಜ್ಜ್ಯೋತ್ಸ್ನಾಶುದ್ಧಾಂ[೧] ಶಶಿಯುತಜಟಾಜೂಟಮಕುಟಾಂ
ವರತ್ರಾಸತ್ರಾಣಸ್ಫಟಿಕಘಟಿಕಾ[೪]ಪುಸ್ತಕಕರಾಮ್[೨] ।
ಸಕೃನ್ನತ್ವಾ[೩] ನ ತ್ವಾ ಕಥಮಿವ ಸತಾಂ ಸನ್ನಿದಧತೇ
ಮಧುಕ್ಷೀರದ್ರಾಕ್ಷಾ ಮಧುರಿ ಮಧುರೀಣಾಃ ಫಣಿತಯಃ ॥ ೧೫ ॥

ಪಾಠಾಂತರ

೧. (ಶರತ್+ಜ್ಯೋತ್ಸಾಶುದ್ಧಾಂ) = ಶರಜ್ಜ್ಯೋತ್ಸ್ನಾ ಶುಭ್ರಾಂ (ಪೋ)
೨. (ಪುಸ್ತಕ ಕರಾಮ್)=ಪುಸ್ತಕ ಘಂಟಿಕಾ (ಸು) ಪುಸ್ತಕ ಗುಣಿಕಾ (ಸು)
೩. (ಸಕೃನ್ನ ತ್ವಾ) = ಸಕೃನ್ನತ್ವಾ ಸು) (ಗ)
೪. (ಘಟಿಕಾ)=ಘುಟಿಕಾ ಪುಸ್ತಕ (ಓ) (ಸ್ಫಟಿಕಗುಳಿಕಾ) (ಶೇ)

ಪದವಿಭಾಗ

(ಶರಜ್ಜೋತ್ಸಾಶುದ್ಧಾಂ)=ಶರತ್+ಜ್ಯೋತ್ಸಾಶುದ್ಧಾಂ, ಶಶಿಯುತಜಟಾಜೂಟಮಕುಟಾಂ, ವರತ್ರಾಸತ್ರಾಣಸ್ಫಟಿಕ ಘಟಿಕಾಪುಸ್ತಕಕರಾಂ, (ಸಕೃನ್ನತ್ವಾ)=ಸಕೃತ್ + ನತ್ವಾ, ನತ್ವಾ, (ಕಥಮಿವ) ಕಥಮ್+ಇವ, ಸತಾಂ, = ಸಂ+ನಿದಧತೇ, ಮಧುಕ್ಷೀರದ್ರಾಕ್ಷಾ ಮಧುರಿಮಧುರೀಣಾಃ, ಫಣಿತಯಃ

ಅನ್ವಯಾರ್ಥ

(ಹೇ ಭಗವತಿ)	(ಎಲೈ ದೇವಿಯೇ)
ಶರಜ್ಜ್ಯೋತ್ಸ್ನಾ ಶುದ್ಧಾಂ	(ಶರತ್+ಜ್ಯೋತ್ಸ್ನಾ)= ಶರತ್ಕಾಲದ (ಆಶ್ವಯುಜ, ಕಾರ್ತಿಕ) ಬೆಳುದಿಂಗಳಂತೆ–ಬೆಳ್ಳಗಿರುವ
ಶಶಿಯುತ ಜಟಾಜೂಟಮಕುಟಾಂ	ಚಂದ್ರಸಹಿತನಾದ–ತುರುಬೂ ಜಟೆಯೂ ಕಿರೀಟವಾಗುಳ್ಳ
ವರತ್ರಾಸತ್ರಾಣ ಸ್ಫಟಿಕ ಘಟಿಕಾ	ವರದಾನಮುದ್ರೆಯಿಂದಲೂ

ಪುಸ್ತಕಕರಾಮ್	ಅಭಯದಾನ ಮುದ್ರೆಯಿಂದಲೂ– ಸ್ಫಟಿಕದ ಗಿಂಡಿಯಿಂದಲೂ– ಪುಸ್ತಕದಿಂದಲೂ ಯುಕ್ತವಾದ ಕೈಗಳುಳ್ಳ
ತ್ವಾ	ನಿನ್ನನ್ನು
ಸಕೃನ್ನತ್ವಾ	(ಸಕೃತ್+ನತ್ವಾ) ಒಂದಾವರ್ತಿ– ನಮಸ್ಕಾರ ಮಾಡುತ್ತಾ
ಸತಾಂ	ಇರುವ ಕವಿಗಳಿಗೆ
ಮಧುಕ್ಷೀರದ್ರಾಕ್ಷಾಮಧುರಿಮಧುರೀಣಾಃ	ಜೇನುತುಪ್ಪದ–ಹಾಲಿನ– ದ್ರಾಕ್ಷೀಹಣ್ಣಿನ–ಮಾಧುರ್ಯವನ್ನು– ವಹಿಸಿಕೊಂಡಿರುವ (ಅಂದರೆ ಅವುಗಳಂತೆ ಮಾಧುರ್ಯಭಾರ ಹೊತ್ತಿರುವಂತಹ)
ಫಣಿತಯಃ -	ವಾಕ್ಕುಗಳು
ಕಥಮಿವ	ಹೇಗೆ ತಾನೇ
ನ ಸನ್ನಿದಧತೇ	ಸಮೀಪಸ್ಥವಾಗುವುದಿಲ್ಲ?

ತಾತ್ಪರ್ಯ

ಶರತ್ಕಾಲದ ಬೆಳದಿಂಗಳಿನಂತೆ ಅತ್ಯಂತ ಶುಭ್ರಳಾಗಿರುವ ಶರೀರದವಳು ನೀನು. ಚಂದ್ರನಿಂದ ಕೂಡಿದ ಜಟೆಯನ್ನೇ ಕಿರೀಟವಾಗುಳ್ಳ ವರದಾನ ಮುದ್ರೆಯಿಂದಲೂ, ಅಭಯದಾನ ಮುದ್ರೆಯಿಂದಲೂ, ಸ್ಫಟಿಕಮಣಿಮಯವಾದ ಗಿಂಡಿಯಿಂದಲೂ, ಪುಸ್ತಕದಿಂದಲೂ ಯುಕ್ತವಾಗಿ (ಕೂಡಿರುವ) ನಾಲ್ಕು ಕೈಗಳಲ್ಲಿ ಧರಿಸಿರುವೆ. ನಿನ್ನನ್ನು ಒಂದಾವರ್ತಿ ನಮಸ್ಕಾರ ಮಾಡಿರುವ ಕವಿಗಳಿಗೆ ಜೇನುತುಪ್ಪ, ಹಸುವಿನ ಹಾಲು, ದ್ರಾಕ್ಷಿಹಣ್ಣು – ಇವುಗಳ ಮಾಧುರ್ಯವನ್ನು ವಹಿಸಿಕೊಂಡಿರುವ ಅಂದರೆ ಅವುಗಳಂತೆ ಮಾಧುರ್ಯಭಾವ ಹೊಂದಿರುವ ವಾಗ್ವೈಖರಿಗಳು ಹೇಗೆ ತಾನೇ ಒದಗಿಬಂದು ಸೇರುವುದಿಲ್ಲ?

[K ಇದಕ್ಕೆ ಸಾರಸ್ವತ ಪ್ರಯೋಗವೆಂದು ಹೆಸರು. ಸರಸ್ವತೀ ರೂಪಳಾದ ಈ ದೇವಿಗೆ ಮಾಡುವ ನಮಸ್ಕಾರಗಳು ಕವಿತ್ವಶಕ್ತಿಯನ್ನುಂಟು ಮಾಡುವುದಕ್ಕೆ ಕಾರಣೀಭೂತವಾದುದು ಎಂದು ತಾತ್ಪರ್ಯವು]

ಪದ್ಯಾನುವಾದ

ಶಾರದದ ಬೆಳ್ದಿಂಗಳಂತೆ ಶುಭ್ರಳು, ಚಂದ್ರ-
ನನು ಮುಡಿದ ಜಡೆಮುಡಿಯ ಮುಡಿಯವಳು, ವರವೀವ
ಅಭಯದೋರುವ ಪಳಿಕುಗಳಸ ಹೊತ್ತಗೆಗಳನು ಪಿಡಿದ ನಾಲ್ಕೈಗಳವಳು;
ಇಂಥಳಹ ನಿನಗೊಮ್ಮೆಯಾದರೂ ನಮಿಸದಿರೆ
ಎಂತೊದಗುವುದು ತಾಯೆ, ಹಾಲುಜೇನುದ್ರಾಕ್ಷೆ-
ಗಳ ಮಧುರಗುಣವುಳ್ಳ ಕವಿತೆಯದು ಕಾವ್ಯಕರ್ಮಾಸಕ್ತಸಜ್ಜನರಿಗೆ ॥ ೧೫ ॥

ಟಿಪ್ಪಣಿಗಳು

೧. **ಶರಜ್ಜ್ಯೋತ್ಸ್ನಾಶುದ್ಧಾಂ**

(ಶರತ್ಕಾಲದ ಬೆಳದಿಂಗಳಿನಂತೆ ಶುಭ್ರವಾದ ಚಂದ್ರನಿಂದ ಕೂಡಿದ ಜಟೆಯನ್ನು ಕಿರೀಟವಾಗುಳ್ಳ)

ಕೆಲವರು ಚಂದ್ರಕಲೆಯನ್ನೇ ಶಿರೋಭೂಷಣವಾಗುಳ್ಳವಳು ಎನ್ನುತ್ತಾರೆ. ಈ ಶ್ಲೋಕದಲ್ಲಿ ಸಾರಸ್ವತ ಪ್ರಯೋಗಕ್ಕೆ ಸಂಬಂಧಿಸಿದ ಉಪದೇಶವಿದೆ. ಸಾರಸ್ವತ ಸಿದ್ಧಿಗಾಗಿ ದೇವಿಯನ್ನು ಧ್ಯಾನಿಸುವಾಗ ಕಾಣಬೇಕಾದ ರೂಪದ ವರ್ಣನೆ ಇದೆ. ವಿದ್ಯಾರ್ಥಿಗಳು, ಕವಿಗಳು ಪಂಡಿತರು ಆಗುತ್ತಾರೆ ಎಂದು ಅಭಿಪ್ರಾಯ. ದೇವಿಯ ವರ್ಣ ಸಹಜವಾಗಿ ಅರುಣವರ್ಣ (ಕೆಂಪು ಬಣ್ಣ). ಇಲ್ಲಿ ಶರತ್ಕಾಲದ ಚಂದ್ರನ ಬೆಳದಿಂಗಳಂತೆ ಬೆಳ್ಳಗೆ ಎಂದು ವರ್ಣಿಸಲಾಗಿದೆ.

(ಪೋ-ಪುಟ ೮೮,೮೯)

೨. **ಶಶಿಯುತಜಟಾಜೂಟಮಕುಟಾಂ**

(ದೇವಿಯ ಜಡೆಮುಡಿಯ ಮೇಲೆ ಚಂದ್ರರೇಖೆ ಇರುತ್ತದೆ.)

ಚಂದ್ರರೇಖೆಯಿಂದ ಕೂಡಿದ ಜಟಾಜೂಟದ ಶಿರಸ್ಸಿನ ಮೇಲೆ ಕಿರೀಟವಿರುತ್ತದೆ. ಇಲ್ಲಿ ಚಂದ್ರರೇಖೆಯಂತೆ ಸುಕುಮಾರ ಭಾವಗಳು ಜಟಾಜೂಟದಂತೆ ಕಠಿಣಬಂಧಗಳ ರಚನಾಶಕ್ತಿ ಉಂಟಾಗುತ್ತದೆ ಎಂದರ್ಥ. ನಾಲ್ಕು ಪುರುಷಾರ್ಥಗಳಿಗೆ ದೇವಿಯ ನಾಲ್ಕು ಹಸ್ತಗಳು ಸಂಕೇತವಾಗಿದೆ. ದೇವಿಯ ವರದಾನಹಸ್ತದಿಂದ ಆಶ್ರಿತಭಕ್ತರ ಕೋರಿಕೆಗಳೆಲ್ಲ ಪೂರೈಸುತ್ತವೆ. ಅಭಯಹಸ್ತದಿಂದ ನೂರಾರು ಭಯ ನಿವಾರಣೆ ಆಗುತ್ತದೆ. ಅಕ್ಷಮಾಲಾ

ಹಸ್ತದಿಂದ ಸಕಲ ತಪಸ್ಸುಗಳೂ ಸಿದ್ಧಿಸುತ್ತವೆ. ಪುಸ್ತಕ ಹಸ್ತದಿಂದ ಸರ್ವವಿದ್ಯಾನುಗ್ರಹವಾಗುತ್ತದೆ ಎಂದರ್ಥ.

(ಪೋ–ಪುಟ ೮೮–೮೯)

೩. **ವರತ್ರಾಸತ್ರಾಣ ಸ್ಫಟಿಕಘಟಿಕಾ ಪುಸ್ತಕಕರಾಂ**

(ವರದಾನ ಮುದ್ರೆಯಿಂದಲೂ ಅಭಯದಾನ ಮುದ್ರೆಯಿಂದಲೂ ಸ್ಫಟಿಕಮಣಿಯ ಗಿಂಡಿಯಿಂದಲೂ ಪುಸ್ತಕದಿಂದಲೂ ಕೂಡಿರುವ ಹಸ್ತಗಳುಳ್ಳ)

ಇಲ್ಲಿ ವರ ಎಂದರೆ ಇಷ್ಟಾರ್ಥವನ್ನು ನೀಡುವ ಹಸ್ತಮುದ್ರೆ ಎಂತಲೂ ತ್ರಾಸತ್ರಾಣ ಎಂದರೆ ಭಯವನ್ನು ಹೋಗಲಾಡಿಸುವ ಅಭಯಮುದ್ರೆ ಎಂತಲೂ ಸ್ಫಟಿಕ ಘಟಿಕಾ ಎಂದರೆ ಸ್ಫಟಿಕಶಿಲಾಮಯವಾದ ಪಾನಪಾತ್ರೆ ಎಂತಲೂ ಪುಸ್ತಕ ಎಂದರೆ ವಿದ್ಯಾಮುದ್ರೆ ಎಂತಲೂ ಹೇಳುವರು. ಕೆಲವರು ಪಾನಪಾತ್ರೆ ಬದಲಾಗಿ ಸ್ಫಟಿಕಮಣಿಯ ಅಕ್ಷಮಾಲೆ ಎಂತಲೂ ವಿದ್ಯಾಮುದ್ರೆ ಬದಲಾಗಿ ಪುಸ್ತಕವೇ ಹಸ್ತದಲ್ಲಿದೆ ಎಂತಲೂ ಹೇಳುತ್ತಾರೆ.

(ಶೇ–ಪುಟ ೬೭)

೪. ಈ ಶ್ಲೋಕದಲ್ಲಿ ದೇವಿಗೆ ಕಾಯಾ ವಾಚಾ ಮನಸಾ ಕರ್ಮಣಾ ನಮಸ್ಕಾರ ಮಾಡಿದ ಕವಿಗಳಿಗೆ, ಅವರು ಸಾಧಾರಣ ಕವಿಗಳಾಗಿದ್ದರೂ, ದೇವಿ ಸರಸ್ವತೀ ರೂಪಗಳಾಗಿ ಅಸಾಧಾರಣ ಮಾಧುರ್ಯವುಳ್ಳ ಕವಿತಾಶಕ್ತಿಯನ್ನು ಅನುಗ್ರಹಿಸುತ್ತಾಳೆ ಎಂದು ಆದಿಶಂಕರರು ಹೇಳಿದ್ದಾರೆ.

ಮೂರ್ಖನಾಗಿ ಕುರಿಕಾಯುತ್ತಿದ್ದ ಪಾಮರನನ್ನೇ ಶ್ರೀದೇವಿ ಕಾಳಿದಾಸನನ್ನಾಗಿ ಮಾಡಿದ ನಿದರ್ಶನವಿದೆ. ಅವನು ಪೂಜೆ, ಜಪ, ಹೋಮ, ಯಜ್ಞಯಾಗ ಯಾವುದೂ ಮಾಡಲಿಲ್ಲ. ಶುದ್ಧಚಿತ್ತನಾಗಿ ನಮಸ್ಕಾರಮಾಡಿ ಬೇಡಿಕೊಂಡನಷ್ಟೆ ದೇವಿಗೆ ನಮಸ್ಕಾರ ಮಾಡಿದರೆ ಪೂಜಾಫಲ ದೊರಕುತ್ತದೆ ಎಂಬುದು ಈ ದೃಷ್ಟಾಂತದಿಂದ ತಿಳಿಯುತ್ತದೆ.

(ಪ–ಪುಟ ೨೩೧)

೫. ಕಾಳಿದಾಸ ರಚಿತ (ಎಂದು ಹೇಳಲಾಗುವ) ಅಂಬಾಸ್ತವ ಮತ್ತು ಲಘುಸ್ತವ ಸ್ತೋತ್ರಗಳಲ್ಲಿ ಶ್ರೀ ದೇವಿಯ ೪ ಹಸ್ತಗಳು ನಾಲ್ಕು ಪುರುಷಾರ್ಥಗಳಿಗೆ ಸಂಕೇತವೆಂದು ಹೇಳಿದೆ. ಆ ಸ್ತುತಿಗಳ ಶ್ಲೋಕಭಾಗಗಳು ಹೀಗಿವೆ:–

ಯಃ ಸ್ಫಟಿಕಾಕ್ಷಗುಣ ಪುಸ್ತಕ ಕುಂಡಿಕಾಢ್ಯಾಂ
ವ್ಯಾಖ್ಯಾ ಸಮುದ್ಯತಕರಾಂ ಶರದಿಂದುಶುಭ್ರಾಂ ॥

ಪದ್ಮಾಸನಾಂ ಚ ಹೃದಯೇ ಭವತೀಮುಪಾಸ್ತೇ
ಮಾತಃ ಸ ವಿಶ್ವಕವಿತಾಂ ಕಿಂ ಚಕ್ರವರ್ತೀ (ಅಂಬಾಸ್ತವ)

೬. ವಾಮೇ ಪುಸ್ತಕಧಾರಿಣೀಮಭಯದಾಂ ಸಾಕ್ಷಸಜಂ ದಕ್ಷಿಣೇ
ವರದಾನ ಪೇಶಲಕರಾಂ ಕರ್ಪೂರ ಕುಂದೋಜ್ವಲಾಂ
ಉಜ್ಜೃಂಭಾಂಬುಜ ಪತ್ರಕಾಂತಿ ನಯನ ಸ್ನಿಗ್ಧ ಪ್ರಭಾಲೋಕನೀಂ
ಯೇ ತ್ವಾಮಂಬ ನ ಶೀಲಯಂತಿ ಮನಸಾ ತೇಷಾಂ ಕವಿತ್ವಂ ಕುತಃ?
(ಪೊ–ಪುಟ ೧೮೮)

೭. ಈ ಶ್ಲೋಕದ (೧೫) ಅಂತರಾರ್ಥವೇನೆಂದರೆ: "ಒಂದು ಬಾರಿ ದೇವಿಗೆ ನಮಿಸಿದರೆ ಕವಿತಾಶಕ್ತಿಗೆ ಕಾರಣವಾದ ಸಂಸ್ಕಾರ ಉಂಟಾಗುತ್ತದೆ. ಒಳ್ಳೆಯ ಮನಸ್ಸು, ಸದ್ವಿದ್ಯೆ, ಸಮಾಜೋದ್ಧಾರಕ್ಕಾಗಿ ವಿದ್ಯೆಯ ಸದ್ಬಳಕೆ ಈ ರೀತಿಯ ಗುಣಗಳನ್ನು ಬೆಳಸಿಕೊಂಡರೆ ಲೋಕದೊಡನೆ ಆಡುವ ಮಾತು ಜೇನಿನಂತೆ ಮಧುರವಾಗಿರುತ್ತದೆ".
(ಅ–ಪುಟ ೩೬)

೮. ವಾಮಕೇಶ್ವರ ತಂತ್ರದಲ್ಲಿ ಅರುಣೋಪಾಸನೆಯ ವಿವರಗಳನ್ನು ಹೀಗೆ ಕೊಟ್ಟಿದೆ:– "ಅಷ್ಟಬಾಹುಗಳಲ್ಲಿ (ಸೌಂದರ್ಯ ಲಹರಿಯಲ್ಲಿ ಚತುರ್ಬಾಹು ಎಂದು ವರ್ಣಿಸಿದೆ) ಪಾಶ ಅಂಕುಶ ಧನು: ಬಾಣಗಳನ್ನು ಅಭಯಹಸ್ತ ವರದಹಸ್ತ, ಪುಸ್ತಕ ಹಸ್ತ, ಅಕ್ಷಮಾಲಾಧರೆಯಾಗಿ ಅಮೃತಸಾಗರದಲ್ಲಿ ಕ್ರೀಡಿಸುತ್ತಿರುವ ಕೆಂಪು ಮೈಬಣ್ಣದ ಅರುಣಾಭಗವತಿಯನ್ನು ಮನಸ್ಸಿನಲ್ಲಿ ಚಿಂತಿಸಿ ಧ್ಯಾನಮಾಡುವ ಸಾಧಕೇಂದ್ರವನ್ನು, ಶೃಂಗಾರರಸಾಸ್ವಾದನ ಲಂಪಟರಾದ ಸಭಾಸದರನ್ನು ಸಂತುಷ್ಟರನ್ನಾಗಿ ಮಾಡುತ್ತಾಳೆ".
(ಪು–ಪುಟ ೭೦)


೯. ಈ ಶ್ಲೋಕದಲ್ಲಿ ಶ್ರೀ ದೇವಿಯನ್ನು ವಿದ್ಯಾದಾಯಿನಿಯಾದ ಸರಸ್ವತೀದೇವಿಯೇ ಆಗಿದ್ದಾಳೆಂದು ವರ್ಣಿಸಲಾಗಿದೆ.

೧೦. "ಈ ಶ್ಲೋಕದಲ್ಲಿ ಸರಸ್ವತಿಯ ಚಿತ್ರವಿದೆ. ಸರಸ್ವತಿಯ ಧ್ಯಾನಶ್ಲೋಕ ಇದು. ಸಾರಸ್ವತ ಪ್ರಯೋಗ ಎಂದೇ ಈ ಧ್ಯಾನವನ್ನು ಕರೆದಿದ್ದಾರೆ. ನಮ್ಮಲ್ಲಿಯೇ ಇರುವ, ಅಡಗಿರುವ, ಅವ್ಯಕ್ತ, ಅಜ್ಞಾತ ಮತ್ತು ನಿಷ್ಪಂದವಾಗಿರುವ ತತ್ತ್ವವನ್ನು ವ್ಯಕ್ತಗೊಳಿಸುವ, ಜಾಗೃತಗೊಳಿಸುವ ಪ್ರಯೋಗವಿದು."
(ತೋ–ಪುಟ ೧೯೧)

೧೧. ಲಕ್ಷ್ಮೀಧರ ತನ್ನ ವ್ಯಾಖ್ಯಾನದಲ್ಲಿ ಸ್ಫಟಿಕ ಘಟಿಕಾ ಎಂಬುದಕ್ಕೆ ಸರಸ್ವತಿಯ ಕೈಯಲ್ಲಿ ಇರುವ ಸ್ಫಟಿಕದ ಪಾನಪಾತ್ರೆ ಎಂದು ವಿವರಿಸಿದ್ದಾನೆ. ಈ ಉಲ್ಲೇಖ ಬೇರೆಲ್ಲೂ ಇಲ್ಲ. ಕೈಯಲ್ಲಿರುವ ಅಕ್ಷರಮಾಲೆಯೇ ಸರಸ್ವತಿಯ ಗುರುತು. ಅಲ್ಲದೆ ಅಕ್ಷರಮಾಲೆ ಎಂಬುದು 'ಅ ಯಿಂದ ಕ್ಷ' ದ ತನಕದ ಅಕ್ಷರಮಾಲೆಯೂ ಆಗುವುದರಿಂದ ಸರಸ್ವತಿಯ ಕೈಯಲ್ಲಿ ಅದೇ ಸೂಕ್ತ. ಇಂಥ ತಾಯಿಗೆ ಮನಸಾ ತಲೆ ಬಾಗಿದರೆ ಕವಿಯ ಮಾತಿನ ರೀತಿ ಗತಿ ಬದಲಾಗುತ್ತದೆ. ಆ ಮಾತಿನಲ್ಲಿ ಹಾಲ್ಜೇನು ದ್ರಾಕ್ಷಿಗಳ ಸವಿ ಇರುತ್ತದೆ ಎಂದು ಆದಿಶಂಕರರು ಆಲಂಕಾರಿಕವಾಗಿ ಹೇಳಿದ್ದಾರೆ"

(ತೋ–ಪುಟ ೧೯೨)

ಯಂತ್ರಾರಾಧನೆ : ಶ್ಲೋಕ – ೧೫



ಯಂತ್ರರಚನೆ : ಚಿನ್ನದ ತಗಡಿನಲ್ಲಿ ಯಂತ್ರ ತಯಾರಿಸಬೇಕು ಅಥವಾ ಬೆಳ್ಳಿಯ ಪಾತ್ರೆಯಲ್ಲಿ ನೀರುತುಂಬಿ ನೀರಿನ ಮೇಲೆ ವೃತ್ತ ಬರೆದು ಅದರಲ್ಲಿ ಬೀಜಾಕ್ಷರಗಳನ್ನು, ಬರೆಯಬೇಕು.

ಪೂಜೆ : ಪೂರ್ವಾಭಿಮುಖವಾಗಿ ಕುಳಿತು ಬಿಳಿ ಹೂಗಳಿಂದ ಸರಸ್ವತಿ ಅಷ್ಟೋತ್ತರ ಮತ್ತು ಕೆಂಪು ಹೂಗಳಿಂದ ಲಲಿತಾ ಅಷ್ಟೋತ್ತರ ಅರ್ಚನೆ ಮಾಡಬೇಕು .

ನೈವೇದ್ಯ : ಅನ್ನ, ಜೇನುತುಪ್ಪ, ಕಲ್ಲುಸಕ್ಕರೆ, ಬಾಳೆಹಣ್ಣು

ಜಪ : ಶ್ಲೋಕವನ್ನು ೪೧ ದಿನಗಳ ಕಾಲ ದಿನಕ್ಕೆ ೧೦೦೦ ಬಾರಿ ಜಪಿಸಬೇಕು. ಯಂತ್ರವನ್ನು ಧರಿಸಬೇಕು.

ಫಲ : **ಕವಿತಾ ಪ್ರತಿಭಾಸಿದ್ಧಿ ಮತ್ತು ಜ್ಞಾನಸಿದ್ಧಿ**

ಶ್ಲೋಕ–೧೬

ನವರಸಭರಿತವಾಣಿಯ ಪ್ರಕಾಶನಕ್ಕೆ ಮೂಲವಾದ ದೇವಿಯ ಧ್ಯಾನ

ಕವೀಂದ್ರಾಣಾಂ ಚೇತಃಕಮಲವನಬಾಲಾತಪರುಚಿಂ
ಭಜಂತೇ ಯೇ ಸಂತಃ ಕತಿಚಿದರುಣಾಮೇವ ಭವತೀಮ್ ।
ವಿರಿಂಚಿಪ್ರೇಯಸ್ಯಾಸ್ತರುಣತರಶೃಂಗಾರಲಹರೀ–
ಗಭೀರಾಭಿರ್ವಾಗ್ಭಿರ್ವಿದಧತಿ [1]ಸತಾಂ ರಂಜನಮಮೀ ॥ ೧೬ ॥

ಪಾಠಾಂತರ

೧. (ಸತಾಂ) = ಸಭಾ (ಸು) ೧ (ತರಲ (ಪೋ)

ಪದವಿಭಾಗ

(ಕವೀಂದ್ರಣಾಂ)=ಕವಿ+ಇಂದ್ರಾಣಾಂ, (ಚೇತಃಕಮಲವನಬಾಲಾತಪಮಚಿಂ)= ಚೇತಃಕಮಲವನ ಬಾಲ+ಆತಪರುಚಿಂ, ಭಜಂತೇ, ಯೇ ಸಂತಃ, (ಕತಿಚಿದರುಣಾಮೇವ) = ಕತಿಚಿತ್+ಅರುಣಾಂ+ ಏವ, ಭವತೀಂ, (ವಿರಂಚಿಪ್ರೇಯಸ್ಯಾಸ್ತರುಣತರ ಶೃಂಗಾರಲಹರೀಗಭೀರಾಭಿರ್ವಾಗ್ಭಿರ್ವಿದಧತಿ)=ವಿರಂಚಿಃ+ ಪ್ರೇಯುಸ್ಯಾಃ + ತರುಣತರಶೃಂಗಾರಲಹರೀಗಭೀರಾಭಿಃ + ವಾಗ್ಭಿಃ+ವಿದಧತಿ, ಸತಾಂ, (ರಂಜನಮಮೀ) =ರಂಜನಂ+ಅಮೀ.

ಅನ್ವಯಾರ್ಥ

(ಹೇ ಭಗವತಿ)	(ಎಲೈ ಸರ್ವಜ್ಞಳಾದ ದೇವಿಯೇ)
ಕವೀಂದ್ರಾಣಾಂ	ಕವಿಶ್ರೇಷ್ಠರ
ಚೇತಃ	ಮನಸ್ಸುಗಳೆಂಬ
ಕಮಲವನ ಬಾಲಾತಪರುಚಿಂ	ಕಮಲಗಳ–ವನಕ್ಕೆ–ಎಳೆಬಿಸಿಲಿನ–(ಕೆಂಪಗಿರುವ) ಕಾಂತಿಯಾಗಿರುವ
ಅರುಣಾಮೇವ	ಅರುಣಾಂಬಾ ಎಂದು ಪ್ರಸಿದ್ಧಳಾಗಿರುವ
ಭವತೀಂ	ನಿನ್ನನ್ನು
ಕತಿಚನ	ಕೆಲವು ಮಂದಿಯಿಂದ

ಯೇ ಸಂತಃ ಭಜಂತೇ	ಯಾವ ಸತ್ಪುರುಷರು (ವಿದ್ವಾಂಸರು) ಸೇವಿಸುತ್ತಾರೋ
ಅಮೀ	ಈ ಸತ್ಪುರುಷರು
ವಿರಂಚಿ ಪ್ರೇಯಸ್ಯಾಃ	ಬ್ರಹ್ಮನ-ಹೆಂಡತಿಯಾದ ಸರಸ್ವತೀದೇವಿಯ
ತರುಣತರ ಶೃಂಗಾರಲಹರೀ	ಅತ್ಯಂತ ಪ್ರಾಯದಲ್ಲಿ ಉಂಟಾದ-ಶೃಂಗಾರ ರಸಪ್ರವಾಹದಿಂದ ಯುಕ್ತವಾಗಿಯೂ
ಗಭೀರಾಭಿಃ	ಗಂಭೀರವಾಗಿಯೂ ಇರುವ
ವಾಗ್ಭಿಃ	ವಾಕ್ಕುಗಳಿಂದ
ಸತಾಂ	ವಿದ್ವಾಂಸರ
ರಂಜನಂ ವಿದಧತಿ	ಮನಸ್ಸಂತೋಷವನ್ನು ಉಂಟುಮಾಡುತ್ತಾರೆ.

ತಾತ್ಪರ್ಯ

ಓ ಭಗವತಿ, ಕವಿಶ್ರೇಷ್ಠರ ಮನಸ್ಸುಗಳೆಂಬ ಕಮಲಗಳ ಸಮೂಹಕ್ಕೆ ಎಳಬಿಸಿಲಿನ ಕೆಂಪಗೆ ಕಾಂತಿಯುತವಾಗಿರುವ ಅರುಣ ಎಂಬ ಹೆಸರಿನಿಂದ ಪ್ರಸಿದ್ಧಳಾದ ಅರುಣಕಾಂತಿಯುಳ್ಳ ನಿನ್ನನ್ನು ಕೆಲವು ಮಂದಿ, ಯಾವ ಸತ್ಪುರುಷರು ಸೇವಿಸುತ್ತಾರೋ ಅಂತಹ ಸತ್ಪುರುಷರು, ಬ್ರಹ್ಮನ ರಾಣಿಯಾದ ಸರಸ್ವತೀ ದೇವಿಯ ಅನುಗ್ರಹ ಪಡೆದು ಅತ್ಯಂತ ಪ್ರಾಯದಲ್ಲಿ ಉಂಟಾಗುವ ಅತಿ ಗಂಭೀರವಾಗಿರುವ ವಾಗ್ವಿಲಾಸಗಳಿಂದ ಸಭಾಸದರ ಮನಸ್ಸಂತೋಷವನ್ನು ಉಂಟುಮಾಡುತ್ತಾರೆ.

ಭಾವಾರ್ಥ : ಎಲೈ ದೇವಿಯೆ, ಹೃದಯಕಮಲದಲ್ಲಿ ಅರುಣಾಂಬೆ ಎಂದು ಪ್ರಸಿದ್ಧಳಾದ ನಿನ್ನನ್ನು ಯಾರು ಧ್ಯಾನಿಸುತ್ತಾರೋ ಅವರು ಶೃಂಗಾರರಸಪ್ರಧಾನವಾದ ಶಬ್ದ ಪ್ರಯೋಗಗಳಿಂದ ಸಭಿಕರ ಮನಸ್ಸಂತೋಷಪಡಿಸುತ್ತಾರೆ. ಅಂದರೆ ಅರುಣಾಂಬಾ ದೇವಿಯ ಧ್ಯಾನ ಮಹಿಮೆಯಿಂದ ಎಲ್ಲರ ಮನಸ್ಸನ್ನು ಎಳೆಯುವಂಥಾ ವಾಕ್ಚಾತುರ್ಯ ವುಂಟಾಗುವುದೆಂದು ತಾತ್ಪರ್ಯ (K).

ಪದ್ಯಾನುವಾದ

ಕವಿವರರ ಮನವೆಂಬ ತಾವರೆಯ ತಂಡವ-
ನ್ನರಳಿಸುವ ಬಾಲಸೂರ್ಯನ ಕೆಂಪು ಕಿರಣಗಳ
ಅರುಣವರ್ಣದ ನಿನ್ನನಾರಾಧಿಸುವರು ಕೆಲಬರು ಸಾಧುಸತ್ಪುರುಷರು;
ಅಂಥ ಸಂತರು ವಿರಿಂಚಿಯ ಮಡದಿ ಶಾರದೆಯ
ಶೃಂಗಾರ ರಸಪೂರ್ಣ ಗಂಭೀರ ವಾಕ್ಪ್ರವಾ-
ಹದೊಳು ಮುಳುಗಿಸಿ ತೇಲಿಸುವರು ರಂಜಿಸಿ ರಸಿಕ ಸಜ್ಜನರನು ॥ ೧೬ ॥

ಟಿಪ್ಪಣಿಗಳು

೧. ವಾಮಕೇಶ್ವರ ತಂತ್ರದಲ್ಲಿ ಈ ಶ್ಲೋಕದ ಅಭಿಪ್ರಾಯವೇ ವ್ಯಕ್ತವಾಗಿದೆ.

"ಪಾಶ, ಅಂಕುಶ, ಧನಸ್ಸು, ಬಾಣ, ವರದಹಸ್ತ ಅಭಯಹಸ್ತ ಪುಸ್ತಕ ಮತ್ತು ಅಕ್ಷಮಾಲೆಗಳನ್ನು ಎಂಟು ಹಸ್ತಗಳಲ್ಲಿ ಧರಿಸಿರುವ ಅರುಣ ಎಂಬ ಹೆಸರನ್ನು ಪಡೆದವಳೂ ಅರುಣಕಾಂತಿ ಹೊಂದಿದವಳೂ, ಮೂರು ಕಣ್ಣುಳ್ಳವಳೂ, ಅಮೃತ ಸಮುದ್ರದಲ್ಲಿ ಕ್ರೀಡಿಸುತ್ತಿರುವವಳೂ ಆದ ಭಗವತಿ ದೇವಿಯಾದ ಶಿವನನ್ನು ಧ್ಯಾನಮಾಡಬೇಕು. ಹಾಗೆ ಧ್ಯಾನಮಾಡುವ ಸಾಧಕ ಶ್ರೇಷ್ಠನು ಸಭಾಸ್ಥಾನದಲ್ಲಿ ಎಲ್ಲ ಸಭಾಸದರನ್ನು ಸದಾ ಶೃಂಗಾರ ರಸ್ವಾದನಲಂಪಟರನ್ನಾಗಿ ಮಾಡಿಯೇ ಮಾಡುತ್ತಾನೆ."

(ಶೇ–ಪುಟ ೭೦)

೨. ಈ ಶ್ಲೋಕದಲ್ಲಿ ಪರಂಪರಿತ ರೂಪಕಾಲಂಕಾರವಿದೆ.

ಅಲಂಕಾರ ಲಕ್ಷಣ: "ಒಂದು ರೂಪಕವು ಮತ್ತೊಂದು ರೂಪಕಕ್ಕೆ ನಿಮಿತ್ತವಾಗಿದ್ದರೆ ಪರಂಪರಿತ ರೂಪಕವಾಗುತ್ತದೆ".

ಲಕ್ಷ್ಯ: ಭಗವತಿಯಲ್ಲಿ ಬಾಲಾತಪಕಾಂತಿಯ ಅಭೇದವನ್ನು ಆರೋಪ ಮಾಡಲು ಅಂತಃಕರಣದಲ್ಲಿ ಕಮಲದ ಅಭೇದವನ್ನು ಆರೋಪ ಮಾಡಿರುವುದು ನಿಮಿತ್ತವಾಗಿದೆ.

(ಶೇ–ಪುಟ ೭೦)

೩. ಲಲಿತಾ ಸಹಸ್ರನಾಮದಲ್ಲಿ **ತರುಣಾದಿತ್ಯಪಾಟಲಾ** (ನಾಮ ೬೨೨) ಎಂಬ ಮಾತಿದೆ **ಕಮಲವನಬಾಲಾತಪರುಚಿ** ಎಂಬ ಮಾತಿನ ಅರ್ಥವೂ ಅದೇ ಆಗಿದೆ.

೪. "ಹೃದಯ ಕಮಲದಲ್ಲಿ ಬಾಲಸೂರ್ಯನ ಹಾಗೆ ಕೆಂಪಾಗಿ ಇದ್ದ ಸರ್ವೇಶ್ವರಿಯ ಧ್ಯಾನಮಾಡುವವರು ಪುರುಷರೂಪವನ್ನು ಹೊಂದಿದ ಸರಸ್ವತೀದೇವಿಯಂತೆ, ಶೃಂಗಾರರಸ ರೂಪಪ್ರಧಾನವಾದ ತನ್ನ ವಾಗ್ವಿಲಾಸಗಳಿಂದ ಸಭಾರಂಜನವನ್ನು ಮಾಡುವರು ಎಂದು ಅಭಿಪ್ರಾಯ"

(ಜ–ಪುಟ ೨೭)


೫. ಕತಿಚಿದರುಣಾವೇವ ಭವತೀಂ

ಅರುಣಾ ಎಂದರೆ ನಸುಕೆಂಬಣ್ಣ ಎಳೆ ನೇಸರಿನ ಹೊಂಬಣ್ಣ ಕತ್ತಲೆಯ ಕಾವಳ ಕಳೆದು ಅದರೊಡಲಿಂದ ಬೆಳಕು ಮೂಡುವ ತವಕದ ಬಣ್ಣ. ಸೃಷ್ಟಿ

ಹೊಸ ದಿನದ ಮೂಲಕ ಹೊಸ ಮೈಪಡೆಯುವ ಬಣ್ಣ, ಸೃಷ್ಟಿಶೀಲತೆಯ ಬಣ್ಣ, ಈ ಬಣ್ಣವೇ ಮೈಬಣ್ಣವಾಗಿರುವವಳು 'ಅರುಣಾ'. ಬೇಂದ್ರೆಯವರು 'ಅತಿಕಿಂಚಿದರುಣೆ, ವಾತ್ಸಲ್ಯ ವರಣೆ' ಎಂದು ದೇವಿಯನ್ನು ಸ್ತುತಿಸಿದ್ದಾರೆ. ಈ ನಸುಗೆಂಪು ಶೃಂಗಾರ ರಸದ ಬಣ್ಣ ಕೂಡ ಆಗಿದೆ."

(ತೋ-ಪುಟ ೧೯೫)

ಯಂತ್ರಾರಾಧನೆ (ಶ್ಲೋಕ-೧೬)



ಯಂತ್ರರಚನೆ : ತಾಮ್ರ ಅಥವಾ ಚಿನ್ನದ ತಗಡಿನಲ್ಲಿ ಯಂತ್ರವನ್ನು ಬರೆಯಬೇಕು. ಯಂತ್ರದಲ್ಲಿ ಮೂರು ತ್ರಿಶೂಲ ಸಹಿತವಾದ ಸಮಭುಜ ತ್ರಿಕೋಣವನ್ನು ಬೀಜಾಕ್ಷರಗಳ ಸಹಿತ ರಚಿಸಬೇಕು.

ಪೂಜೆ : ಮಲ್ಲಿಗೆ ಹೂಗಳಿಂದ ಲಲಿತಾ ತ್ರಿಶತೀ ಮತ್ತು ಸರಸ್ವತೀ ಅಷ್ಟೋತ್ತರ ಅರ್ಚನೆಗಳನ್ನು ಮಾಡಬೇಕು.

ನೈವೇದ್ಯ : ಮೊಸರನ್ನ, ಹಾಲು, ಜೇನುತುಪ್ಪ, ಹಣ್ಣುಗಳು

ಜಪ : ಈಶಾನ್ಯದಿಕ್ಕಿಗೆ ಅಭಿಮುಖವಾಗಿ ಕುಳಿತು ೪೧ ದಿನಗಳ ಕಾಲ ದಿನಕ್ಕೆ ೧೦೦೦ ಬಾರಿ ಶ್ಲೋಕವನ್ನು ಜಪಿಸಬೇಕು. ಕಂಠದಲ್ಲಿ ಯಂತ್ರವನ್ನು ಧರಿಸಬೇಕು.

ಫಲ : **ವೇದಶಾಸ್ತ್ರ ಪಾರಂಗತನಾಗುವನು.**

ಶ್ಲೋಕ-೧೭

ಕವಿತಾಮೂಲವಾದ ದೇವಿಯ ಧ್ಯಾನ

ಸವಿತ್ರೀಭಿರ್ವಾಚಾಂ ಶಶಿಮಣಿಶಿಲಾಭಂಗರುಚಿಭಿಃ
ವಶಿನ್ಯಾದ್ಯಾಭಿಸ್ತ್ವಾಂ ಸಹ ಜನನಿ ಸಂಚಿಂತಯತಿ ಯಃ ।
ಸ ಕರ್ತಾ ಕಾವ್ಯಾನಾಂ ಭವತಿ ಮಹತಾಂ [1]ಭಂಗಿರುಚಿಭಿಃ
ವಚೋಭಿರ್ವಾಗ್ದೇವೀವದನಕಮಲಾಮೋದಮಧುರೈಃ ॥ ೧೭ ॥

ಪಾಠಾಂತರ

೧. (ಭಂಗಿರುಚಿಭಿಃ) = ಭಂಗಿಸುಭಗೈಃ-(ಸು)

ಪದವಿಭಾಗ

(ಸವಿತ್ರೀಭಿರ್ವಾಚಾಂ) = ಸವಿತ್ರೀಭಿಃ+ವಾಚಾಂ, ಶಶಿಮಣಿಶಿಲಾಭಂಗರುಚಿಭಿಃ, (ವಶಿನ್ಯಾದ್ಯಾಭಿಸ್ತ್ವಾಂ) = ವಶಿನೀ+ಆದ್ಯಾಭಿಃ + ತ್ವಾಂ, ಸಹ, ಜನನಿ, ಸಂಚಿಂತಯತಿ, ಯಃ, (ಸ) = ಸಃ, ಕರ್ತಾ, ಕಾವ್ಯಾನಾಂ, ಭವತಿ, ಮಹತಾಂ, ಭಂಗಿರುಚಿಭಿಃ, (ವಚೋಭಿರ್ವಾಗ್ದೇವೀ ವದನಕಮಲಾಮೋದಮಧುರೈಃ), =ವಚೋಭಿಃ+ವಾಗ್ದೇವೀ+ವದನಕಮಲ+ಆಮೋದಮಧುರೈಃ.

ಅನ್ವಯಾರ್ಥ

ಹೇ ಜನನಿ	ಎಲೈ ತಾಯೆ
ವಾಚಾಂ ಸವಿತ್ರೀಭಿಃ	ವಾಕ್ಕುಗಳನ್ನು ಕೊಡುವ } ಚೆನ್ನಾಗಿ ಮಾತನಾಡುವ ಶಕ್ತಿಯನ್ನುಂಟುಮಾಡುವ
ಶಶಿಮಣಿಶಿಲಾಭಂಗರುಚಿಭಿಃ	ಚಂದ್ರಕಾಂತದ-ಕಲ್ಲುಗಳ ಚೂರುಗಳ ಕಾಂತಿಯಂತೆ ಅತ್ಯಂತ ಶುಭ್ರವಾಗಿರುವ
ವಶಿನ್ಯಾದ್ಯಾಭಿಃ ಸಹ	(ವಶಿನೀ+ಆದ್ಯಾಭಿಃ) ವಶಿನೀ ಮೊದಲಾದ ಶಕ್ತಿದೇವತೆಗಳೊಡನೆ
ತ್ವಾಂ	(ಅಕಾರಾದಿ ಳಕಾರಾಂತವಾದ ೫೦ ಅಕ್ಷರಗಳ ಸ್ವರೂಪಳಾದ) ನಿನ್ನನ್ನು
ಸಂಚಿಂತಯತಿಯಃ	ಯಾವನು ಧ್ಯಾನ ಮಾಡುತ್ತಾನೋ

ಸಃ	ಅವನು
ಮಹತಾಂ	ಮಹಾಕವಿಗಳ
ಭಂಗಿರುಚಿಭಿಃ	ರೀತಿಯಂತೆ–ಮನೋಹರವಾದ
ವಾಗ್ದೇವೀ	ಸರಸ್ವತಿಯೂ
ವದನಕಮಲ ಆಮೋದ ಮಧುರೈಃ	ಮುಖಕಮಲದಲ್ಲಿರುವ– ವಾಸನೆಯಿಂದ – ಇಂಪಾದ
ವಚೋಭಿಃ	ವಾಕ್ಕುಗಳಿಂದ
ಕಾವ್ಯಾನಾಂ	ಕಾವ್ಯರೂಪವಾದ ಗ್ರಂಥಗಳನ್ನು
ಕರ್ತಾ ಭವತಿ }	ಮಾಡುವವನು ಆಗುತ್ತಾನೆ.

ತಾತ್ಪರ್ಯ

ಚೆನ್ನಾಗಿ ಮಾತನಾಡುವ ಶಕ್ತಿಯನ್ನುಂಟುಮಾಡುವ ಚಂದ್ರಕಾಂತಮಣಿ ಶಿಲೆಯ ಖಂಡದಂತೆ ಕಾಂತಿಯುಳ್ಳ ವಶಿನೀ ಮೊದಲಾದ ಶಕ್ತಿ ದೇವತೆಗಳೊಡನೆ ಅಕಾರಾದಿ ಳಕಾರಾಂತವಾದ ೫೦ ಅಕ್ಷರಗಳ ಸ್ವರೂಪಳಾದ ನಿನ್ನನ್ನು, ಯಾವನು ಧ್ಯಾನ ಮಾಡುತ್ತಾನೊ ಅವನು ಕಾಳಿದಾಸಾದಿ ಮಹಾಕವಿಗಳ ರೀತಿಯಂತೆ, ಮನೋಹರವಾದ (ಆಸ್ವಾದನೀಯವಾದ) ಸರಸ್ವತಿಯ ಮುಖಕಮಲದಲ್ಲಿರುವ ಪರಿಮಳದಿಂದ ಮಧುರ ವಾಗಿರುವ ವಾಗ್ವಿಳಾಸದಿಂದ ಉತ್ತಮ ಕಾವ್ಯಗಳನ್ನು ರಚನೆ ಮಾಡುವವನಾಗುತ್ತಾನೆ.

ಪದ್ಯಾನುವಾದ

ಎಲೆ ತಾಯೆ, ಮಾತುಗಳ ಮಾತೆಯಾಗಿಹ, ಚಂದ್ರ–
ಕಾಂತಶಿಲೆಯೊಡೆಯಲೊಗೆತರ್ಪ ಕಿರಣಗಳಂತೆ
ಶೋಭಿಪ ವಶಿನ್ಯಾದಿ ಶಕ್ತಿಗಳ ಕೂಡಿರುವ ನಿನ್ನ ಚಿಂತಿಸುವಾತನು
ವಾಗ್ದೇವಿಯಾ ವದನದಿಂದೊಗೆವ ಸೌಗಂಧ
ಮಾಧುರ್ಯಪರಿಪೂರ್ಣ ವಚನರಚನಾಸುಭಗ
ವರ ಮಹಾಕಾವ್ಯಕೃತಿಕಾರ ತಾನೆನಿಸುವನು ನಿನ್ನ ವಾಗ್ವರದಾನದೆ ॥ ೧೭ ॥

ಟಿಪ್ಪಣಿಗಳು

೧. ವಶಿನ್ಯಾದ್ಯಾಭಿಃ ಸಹ ತ್ವಾಂ

(ವಶಿನೀ ಮೊದಲಾದ ಶಕ್ತಿ ದೇವತೆಗಳೊಡನೆ ಅಕಾರಾದಿ ಳಕಾರಾಂತ ೫೦ ಅಕ್ಷರಗಳ ಸ್ವರೂಪಳಾದ ನಿನ್ನನ್ನು) ಸಂಸ್ಕೃತ ಭಾಷೆಯಲ್ಲಿ ೫೦ ವರ್ಣಗಳನ್ನು ೮ ವರ್ಗಗಳನ್ನಾಗಿ ಪರಿಗಣಿಸುತ್ತಾರೆ. ಈ ೮ ವರ್ಗಗಳಿಗೆ ವಶನೀ, ಕಾಮೇಶ್ವರೀ ಮೋದಿನೀ, ವಿಮಲಾ, ಅರುಣ, ಜಯನೀ, ಸರ್ವೇಶ್ವರೀ, ಕೌಲಿನೀ ಎಂಬ ಎಂಟುಮಂದಿ ಶಕ್ತಿಯರು, ಅಧಿಪತಿಗಳು. ಅ, ಕ, ಚ, ಟ, ತ, ಪ, ಯ, ಶ ಎಂಬ ೮ ವರ್ಗಗಳಿಂದ ಕೂಡಿದ್ದು ೫೦ ಅಕ್ಷರಗಳಾಗುತ್ತವೆ. ಇವು ಶ್ರೀದೇವಿಯ ಸ್ವರೂಪವೇ ಆಗಿರುತ್ತದೆ. ಈ ೫೦ ಅಕ್ಷರಗಳ ವರ್ಗೀಕರಣವನ್ನು ಹೀಗೆ ತೋರಿಸಬಹುದು.

೧a

ಕ್ರಸಂ.	ವರ್ಗ	ಅಧಿದೇವತೆ	ವರ್ಣಗಳು	ಸಂಖ್ಯೆ
೧	'ಅ' ವರ್ಗ	ವಶನೀ	ಅ ಆ ಇ ಈ ಉ ಊ ಋ ೠ ಎ ಏ ಐ ಒ ಓ ಔ ಅಂ ಅಃ	೧೬
೨	'ಕ' ವರ್ಗ	ಕಾಮೇಶ್ವರೀ	ಕ, ಖ, ಗ, ಘ, ಙ	೫
೩	'ಚ' ವರ್ಗ	ಮೋದಿನೀ	ಚ, ಛ, ಜ, ಝ, ಞ	೫
೪	'ಟ' ವರ್ಗ	ವಿಮಲಾ	ಟ, ಠ, ಡ, ಢ, ಣ	೫
೫	'ತ' ವರ್ಗ	ಅರುಣಾ	ತ, ಥ, ದ, ಧ, ನ	೫
೬	'ಪ' ವರ್ಗ	ಜಯನೀ	ಪ, ಫ, ಬ, ಭ, ಮ	೫
೭	'ಯ' ವರ್ಗ	ಸರ್ವೇಶ್ವರೀ	ಯ, ರ, ಲ, ವ	೪
೮	'ಶ' ವರ್ಗ	ಕೌಲಿನೀ	ಶ, ಷ, ಸ, ಹ, ಳ	೫
ಒಟ್ಟು	೮ ವರ್ಗಗಳು	೮ ಅಧಿದೇವತೆಗಳು	ಒಟ್ಟು ವರ್ಣಗಳು	೫೦

(ಪೋ–ಪುಟ ೯೭)

೧b ಇನ್ನು ದ್ವಾದಶ (೧೨) ಯೋಗಿನಿಯರಿದ್ದಾರೆ :

೧) ವಿದ್ಯಾಯೋಗಿನೀ
೨) ರೇಚಿಕಾಯೋಗಿನೀ
೩) ಮೋಚಿಕಾಯೋಗಿನೀ
೪) ಅಮೃತಯೋಗಿನೀ
೫) ದೀಪಿಕಾಯೋಗಿನೀ
೬) ಜ್ಞಾನಯೋಗಿನೀ
೭) ಆಪ್ಯಾಯಿನೀ ಯೋಗಿನೀ
೮) ವ್ಯಾಪಿನೀಯೋಗಿನೀ
೯) ಮೇಧಾಯೋಗಿನೀ
೧೦) ವ್ಯೋಮರೂಪಯೋಗಿನೀ
೧೧) ಸಿದ್ಧರೂಪಯೋಗಿನೀ
೧೨) ಲಕ್ಷ್ಮೀಯೋಗಿನೀ

೧೮ ಶ್ರೀ ಚಕ್ರದ ನಾಲ್ಕು ದ್ವಾರಗಳಲ್ಲಿ ೧) ಗಂಧಾಕರ್ಷಿಣೀ ೨) ರಸಾಕರ್ಷಿಣಿ ೩) ರೂಪಾಕರ್ಷಿಣೀ ೪) ಸ್ಪರ್ಶಾಕರ್ಷಿಣೀ ಎಂಬ ಅಧಿದೇವತೆಗಳಿರುತ್ತಾರೆ. ಹೀಗೆ ೮ ವಶಿನ್ಯಾದಿಗಳು ೧೨ ಯೋಗಿನಿಯರು ಸೇರಿ ೨೦ ಕಲೆಗಳು ಇರುತ್ತವೆ. ದಶಾರದ್ವಯ ಕೋಣಗಳಲ್ಲಿ ಎಂದರೆ ೨೦ ಕೋಣಗಳಲ್ಲಿ ೨೦ ಕಲೆಗಳನ್ನು ಧ್ಯಾನ ಮಾಡಬೇಕು.

೨. ೪ ಆಕರ್ಷಿಣಿ ದ್ವಾರದ ಅಧಿದೇವತೆಗಳು ಸೇರಿದರೆ ಒಟ್ಟು ೨೪ ಆಗುತ್ತವೆ.

ಮಾತೃಕಾಂ ವಶಿನೀಯುಕ್ತಾಂ
ಯೋಗಿನೀಭಿಸ್ಸಮನ್ವಿತಾಂ
ಗಂಧಾದ್ಯಾಕರ್ಷಿಣೀಯುಕ್ತಾಂ
ಸಂಸ್ಮರೇತ್ತ್ರಿಪುರಾಂಬಿಕಾಂ

[ವಶಿನೀ ಮೊದಲಾದ ೮ ಶಕ್ತಿದೇವತೆಗಳಿಂದಲೂ ೧೨ ಜನ ಯೋಗಿನಿಯರಿಂದಲೂ ಕೂಡಿಕೊಂಡು ೪ ಆಕರ್ಷಣೀ ದೇವತೆಗಳೊಡನೆ ೨೪ ಕಲೆಗಳ ಮಾತೃರೂಪಿಣೀ ಆಗಿರುವ ತ್ರಿಪುರಾಂಬಿಕೆಯನ್ನು ಸ್ಮರಿಸಬೇಕು]

ಈ ಶ್ಲೋಕದ ಭಾವವನ್ನೇ ಸವಿತ್ರೀಭಿರ್ವಾಚಾಂ... ಶ್ಲೋಕ (೧೭) ಒಳಗೊಂಡಿದೆ).

೩. ೪ ಜನ ಆಕರ್ಷಿಣೀ ದ್ವಾರದೇವತೆಗಳನ್ನು ಕುರಿತು ಹೀಗೆ ಹೇಳಿದೆ.

ಗಂಧದ್ವಾರಾಂ ದುರಾಧರ್ಷಾಂ
ನಿತ್ಯದ್ವಾರಾಂ ಕರೀಷಿಣೀಂ
ಈಶ್ವರೀಂ ಸರ್ವಭೂತಾನಾಂ
ತಾಮಿಹೋಪಪ್ವಯೇ ಶ್ರೀಯಂ

[ಗಂಧಾಕರ್ಷಿಣೀ ರಸಾಕರ್ಷಿಣೀ, ರೂಪಾಕರ್ಷಿಣೀ ಸ್ಪರ್ಶಾಕರ್ಷಿಣೀ ಎಂಬ ೪ ಅಧಿದೇವತೆಗಳಿಂದ ಕೂಡಿದ ೪ ದ್ವಾರಗಳನ್ನು ಗಂಧದ್ವಾರಾ ಶ್ರೀ ವಿದ್ಯೆ ಎನ್ನುತ್ತಾರೆ. ಮಂದಭಾಗ್ಯರಾದವರು ಸೊಕ್ಕಿನಿಂದ ಪ್ರತಿಭಟಿಸಲು ಸಾಧ್ಯವಾಗದಿರುವಂಥ ನಿತ್ಯಾನಂದಸ್ವರೂಪಿಣಿಯಾದ ಗಂಧಾಕರ್ಷಿಣೀ ರೂಪವಾಗಿರುವ ಸಮಸ್ತಭೂತಗಳಿಗೆ ಅಧಿದೇವತೆಯಾದಂಥ ಶ್ರೀ ಚಕ್ರದಲ್ಲಿ ಆವಾಹನೆ ಮಾಡಿ ಧ್ಯಾನಿಸುತ್ತೇನೆ.]

೪. **೫೦ ಅಕ್ಷರಗಳ ಅಧಿದೇವತೆಗಳ ವರ್ಣರೂಪಗಳು**

ಕೆಲವರು ಸ್ವರಾತ್ಮಕ ಶಕ್ತಿಯರು ಸ್ಫಟಿಕದಂತೆ ಶುಭ್ರವರ್ಣವುಳ್ಳವರು ಕಕಾರಾದಿಯಾಗಿ ಮಕಾರಾಂತವಾದ ವರ್ಣಗಳ ಶಕ್ತಿದೇವತೆಗಳು ವಿದ್ರುಮ

(ಹವಳ) ವರ್ಣದವರಾಗಿಯೂ, ಯಕಾರ ಮೊದಲಾದ ೯ ವರ್ಣಗಳ ಶಕ್ತಿಯರು ಪೀತ(ಹಳದಿ) ಬಣ್ಣವುಳ್ಳವರೆಂದು ಹೇಳುತ್ತಾರೆ. ಇನ್ನು ಕೆಲವರು ಹೇಳುತ್ತಾರೆ:

ಅಕಾರ ಮೊದಲಾದವು ಧೂಮ್ರವರ್ಣವುಳ್ಳವು, ಕಕಾರ ಮೊದಲಾಗಿ ಠಕಾರಾಂತವಾದವು ಸಿಂಧೂರವರ್ಣವುಳ್ಳವು, ಡಕಾರಾದಿಯಾಗಿ ಪಕಾರಾಂತವಾದವು ಗೌರವರ್ಣವುಳ್ಳವು, ಬಕಾರಾದಿಯಾಗಿ ಲಕಾರಾಂತವಾದವು ಅರುಣವರ್ಣವುಳ್ಳವು, ವಕಾರಾದಿಯಾಗಿ ನಕಾರಾಂತವಾದವು ಸುವರ್ಣವರ್ಣವುಳ್ಳವು ಹಕಾರ ಮತ್ತು ಷಕಾರಗಳು ಮಿಂಚಿನಂತೆ ಹೊಳಪುಳ್ಳವು, ಳಕಾರವು ಲಕಾರದಲ್ಲೇ ಅಂತರ್ಭೂತವಾದುದು ಎನ್ನುತ್ತಾರೆ. ಇದು ಶಂಕರರಿಗೆ ಸಮ್ಮತಾಭಿಪ್ರಾಯ. ಸುಭಗೋದಯ ವ್ಯಾಖ್ಯಾನದಲ್ಲಿ ಇದನ್ನು ವಿವರವಾಗಿ ತಿಳಿಸಿದೆ.

(ಶೇ–ಪುಟ ೭೫)

೫. ಪೂರ್ವಜನ್ಮಪುಣ್ಯದಿಂದ ಕವಿತಾರಚನೆಗೆ ಬೇಕಾದ ಪ್ರತಿಭಾಶಕ್ತಿ ಲಭಿಸುತ್ತದೆ. ಆದರೆ ವಾಗ್ವಿಲಾಸ ದೊರಕುವುದಿಲ್ಲ. ವಾಗ್ವಿಲಾಸವಿಲ್ಲದೆ ಮಹಾಕಾವ್ಯ ರಚನೆ ಅಸಾಧ್ಯ. ಆದ್ದರಿಂದ ಕಾವ್ಯರಚನಾಶಕ್ತಿ (ಪ್ರತಿಭೆ) ಇದ್ದರೂ ವಾಗ್ವಿಲಾಸ ದೊರೆಯಬೇಕಾದರೆ ಶ್ರೀದೇವಿಯನ್ನು ಆರಾಧಿಸಬೇಕು ಆಗ ಲಭ್ಯವಾಗುತ್ತದೆ. ಆದ್ದರಿಂದ ಮಹಾಕವಿಗಳು ಶ್ರೀಚಕ್ರದ ಮೂಲಕ ಶ್ರೀದೇವಿಯನ್ನು ಆರಾಧಿಸುತ್ತಾರೆ ಎಂದು ಶಂಕರರು ಹೇಳಿದ್ದಾರೆ.

(ಪೋ–ಪುಟ ೯೯)

೬. ೨೪ ದೇವತೆಗಳ (೮ ವಾಗ್ದೇವತೆಗಳು, ೧೨ ಯೋಗಿನಿಯರು, ೪ ಆಕರ್ಷಿಣೀ ಶಕ್ತಿಗಳು) ಮಾತೃಕಾರೂಪ (ಅಕ್ಷರರೂಪವಾದ) ತ್ರಿಪುರಸುಂದರಿಯನ್ನು ಧ್ಯಾನಿಸಬೇಕು. ಈ ಶಕ್ತಿಗಳ ಶಕ್ತಿ ವಿಸ್ತೀರ್ಣ ಅಪಾರ. ಶಕ್ತಿ ವಿಸ್ತೀರ್ಣ ಎಂದರೆ ಪ್ರಕಾಶಶಕ್ತಿ, ಪ್ರಭಾವ ಎಂದರ್ಥ. ಹಲವು ಕೋಟಿಯೋಜನೆಗಳ ದೂರ. ಸೂರ್ಯಕಾಂತಿಕಿರಣಗಳ ವೇಗವನ್ನು ಮೀರಿದ್ದು. ಆ ದೇವಿಯ ಶಕ್ತಿಯಲ್ಲಿನ ಒಂದು ಕಿರಣ, ಕರುಣಕಿರಣ ಸಾಕು ನಮ್ಮಲ್ಲಿನ ಜ್ಞಾನದೀಪಬೆಳಗಿಸಲು. ಆದ್ದರಿಂದ ಯಾರು ಆ ತಾಯಿಯನ್ನು ಮಾತೃಕಾವರ್ಣರೂಪಿಣಿಯನ್ನಾಗಿ ಉಪಾಸನೆ ಮಾಡುತ್ತಾರೋ ಅವರಿಗೆ ಶ್ರೀವಿದ್ಯಾ, ಶ್ರೀಚಕ್ರಸ್ವರೂಪಿಣಿಯಾಗಿ ಕಾಣಿಸಿಕೊಂಡು ಅದ್ಭುತ ಕವಿತಾಪಾಂಡಿತ್ಯವನ್ನು ಕೊಡುತ್ತಾಳೆ.

(ಪ–ಪುಟ ೨೪೨)

೭. ಲಲಿತಾ ಸಹಸ್ರನಾಮದಲ್ಲಿ ೮೫,೮೬,೮೭,೮೮,೮೯ ನೇ ನಾಮಗಳು ಹೀಗಿವೆ.

(೮೫) ಶ್ರೀಮದ್ವಾಗ್ಭವಕೂಟೈಕಸ್ವರೂಪ ಮುಖಪಂಕಜಾಯೈ ನಮಃ (ವಾಗ್ಭವ ಕೂಟದ ವರ್ಣನೆ ಇಲ್ಲಿ ಇದೆ. ಕಏಈಲಹ್ರೀಂ ಎಂಬ ಬೀಜಾಕ್ಷರವಾಗುವ ಕೂಟಗಳ ಶಕ್ತಿಯನ್ನೇ ಉಳ್ಳವಳಿಗೆ ನಮಸ್ಕಾರ)

(೮೬) ಕಂಠಾಧಃ ಕಟಿಪರ್ಯಂತ ಮಧ್ಯಕೂಟ ಸ್ವರೂಪಿಣ್ಯೈ ನಮಃ

(ಮಧ್ಯಕೂಟದ ಅಥವಾ ಕಾಮರಾಜಕೂಟದ ವರ್ಣನೆ ಇದೆ. ಕಂಠದಿಂದ ಕೆಳಗೆ ಬೀಜಾಕ್ಷರಗಳ (ಹಸಕಹಲಹ್ರೀಂ) ಶಕ್ತಿಯನ್ನೇ ಕಂಠದಿಂದ ಕೆಳಗೆ ಸೊಂಟದವರೆಗಿನ ರುಂಡವಾಗಿ ಉಳ್ಳವಳಿಗೆ ನಮಸ್ಕಾರ.

(೮೭) ಶಕ್ತಿ ಕೂಟೈಕತಾಪನ್ನಕಟ್ಯಧೋಭಾಗಧಾರಿಣ್ಯೈ ನಮಃ

ಶಕ್ತಿಕೂಟದ ವಿವರಣೆ ಇಲ್ಲಿದೆ. ಶಕ್ತಿಕೂಟದ ಬೀಜಾಕ್ಷರಗಳ (ಸಕಲಹ್ರೀಂ) ಶಕ್ತಿಯನ್ನೇ ಸೊಂಟದ ಕೆಳಭಾಗವಾಗಿ (ಕಾಲುಗಳು ಉಳ್ಳವಳಿಗೆ) ನಮಸ್ಕಾರ.

(೮೮) ಮೂಲಮಂತ್ರಾತ್ಮಿಕಾಯೈ ನಮಃ


೧೫ ಬೀಜಾಕ್ಷರಗಳ ಮೂಲಮಂತ್ರದ (ಪಂಚದಶಿ) ಆತ್ಮಶಕ್ತಿಯಾಗಿರುವಳಿಗೆ ನಮಸ್ಕಾರ.

(೮೯) ಮೂಲಕೂಟತ್ರಯ ಕಲೇವರಾಯೈ ನಮಃ ಮೂಲಮಂತ್ರದ ವಾಗ್ಭವಕೂಟ, ಮಧ್ಯಕೂಟ, ಶಕ್ತಿಕೂಟ–ಈ ಮೂರು ಸಮೂಹಗಳಲ್ಲಿಯೂ ಸಗುಣ ರೂಪದಲ್ಲಿರುವವಳಿಗೆ ನಮಸ್ಕಾರ.

(ಪಂಚದಶಿಯ ಭಿನ್ನರೂಪವಾದ ಕೂಟತ್ರಯಗಳನ್ನು ಬೇರೆ ಬೇರೆಯಾಗಿ ಉಪದೇಶ ಪಡೆದು ಪುನಶ್ಚರಣೆ ಮಾಡಿದರೂ ಶ್ರೀದೇವಿ ಪ್ರತಿಯೊಂದರಲ್ಲೂ ಪರಿಪೂರ್ಣ ರೂಪದಲ್ಲಿದ್ದು ಅನುಗ್ರಹಿಸುತ್ತಾಳೆ ಎಂದು ಹೇಳಲಾಗಿದೆ ಇಲ್ಲಿ.)

(ಲ–ಕೂ ಪುಟ ೧೦೨)

ಯಂತ್ರಾರಾಧನೆ (ಶ್ಲೋಕ-೧೭)



ಯಂತ್ರರಚನೆ : ಚಿನ್ನದ ತಗಡಿನಲ್ಲಿ ದೀರ್ಘಚತುರಶ್ರವನ್ನು ಬರೆದು ಎರಡು ಭಾಗ ಮಾಡಬೇಕು. ಎಂಟು ತ್ರಿಶೂಲಗಳು ನಾಲ್ಕು ಮೂಲೆಗಳಿಗೆ ಇರಬೇಕು.

ಪೂಜೆ : ಮಲ್ಲಿಗೆ ಅಥವಾ ಸಂಪಿಗೆ ಹೂಗಳಿಂದ ಲಲಿತಾ ಅಷ್ಟೋತ್ತರ ಮತ್ತು ಸರಸ್ವತೀ ಅಷ್ಟೋತ್ತರ ಅರ್ಚನೆ ಮಾಡಬೇಕು. ಈಶಾನ್ಯದಿಕ್ಕಿಗೆ ಕೂಡಬೇಕು.

ನೈವೇದ್ಯ : ಬಾಳೆಹಣ್ಣು, ಹಾಲು, ಕಲ್ಲುಸಕ್ಕರೆ, ಕಬ್ಬು, ಅನ್ನ ಜೇನುತುಪ್ಪ

ಜಪ : ೬೧ ದಿನಗಳ ಕಾಲ ದಿನಕ್ಕೆ ಸಾವಿರಬಾರಿ ಈ ಶ್ಲೋಕವನ್ನು ಜಪಿಸಿ ಯಂತ್ರವನ್ನು ಕಂಠದಲ್ಲಿ ಧರಿಸಬೇಕು.

ಫಲ : **ಸಕಲ ಕಲಾವಿದನಾಗುವನು. ಮಹಾತ್ಮರ ಅನುಗ್ರಹಕ್ಕೆ ಪಾತ್ರನಾಗುವನು**

ಶ್ಲೋಕ-೧೮

ಅಪ್ಸರೆಯರನ್ನು ಆಕರ್ಷಿಸುವ ದೇವೀ ಸೌಂದರ್ಯ

ತನುಚ್ಛಾಯಾಭಿಸ್ತೇ ತರುಣತರಣಿ[1]ಶ್ರೀಸರಣಿಭಿಃ
ದಿವಂ ಸರ್ವಾಮುರ್ವೀ[2]ಮರುಣಿಮನಿಮಗ್ನಾಂ ಸ್ಮರತಿ ಯಃ ।
ಭವಂತ್ಯಸ್ಯ ತ್ರಸ್ಯದ್ವನಹರಿಣಶಾಲೀನನಯನಾಃ
ಸಹೋರ್ವಶ್ಯಾ ವಶ್ಯಾಃ ಕತಿ ಕತಿ ನ ಗೀರ್ವಾಣಗಣಿಕಾಃ ॥ ೧೮ ॥

ಪಾಠಾಂತರ

೧. (ಶ್ರೀಸರಣಿಭಿಃ)=ಶ್ರೀ ಸರಣಿಭಿ- (ಸು)

೨. (ಮರುಣಿಮನಿಮಗ್ನಾಂ)=ಮರುಣೀಮಣಿಮಗ್ರಾಂ (ಸು)

ಪದವಿಭಾಗ

(ತನುಚ್ಛಾಯಾಭಿಸ್ತೇ)=ತನುಚ್ಛಾಯಾಭಿಃ+ತೇ, ತರುಣತರಣಿಶ್ರೀಸರಣಿಭಿಃ, ದಿವಂ, (ಸರ್ವಾಮುರ್ವೀಮರುಣಿಮನಿಮಗ್ನಾಂ) = ಸರ್ವಾಂ+ ಉರ್ವೀಂ+ ಅರುಣಿಮನಿ-ಮಗ್ನಾಂ, ಸ್ಮರತಿ ಯಃ, (ಭವಂತ್ಯಸ್ಯ) = ಭವಂತಿ+ಅಸ್ಯ, (ತ್ರಸ್ಯದ್ವನಹರಿಣ)= ತ್ರಸ್ಯತ್+ವನಹರಿಣಃ, ಶಾಲೀನನಯನಾಃ, (ಸಹೋರ್ವಶ್ಯಾ) = ಸಹಾ+ಊರ್ವಶ್ಯಾ, ವಶ್ಯಾಃ, ಕತಿ ಕತಿ, ನ, ಗೀರ್ವಾಣಗಣಿಕಾಃ.

ಅನ್ವಯಾರ್ಥ

(ಹೇ ಭಗವತಿ)	(ಎಲೈ ಸರ್ವಜ್ಞಳಾದ ದೇವಿಯೇ)
ತರುಣ ತರಣಿ ಶ್ರೀ ಸರಣಿಭಿಃ	ಬಾಲ-ಸೂರ್ಯನ-ಕಾಂತಿಯಂತೆ-ಸೌಭಾಗ್ಯಗಳುಳ್ಳ
ತೇ	ನಿನ್ನ
ತನುಚ್ಛಾಯಾಭಿಃ	ದೇಹದ-ಕಾಂತಿಗಳಿಂದ
ಸರ್ವಾಂ ದಿವಂ	(ಸಕಲ) ಆಕಾಶವನ್ನೂ
ಉರ್ವೀಂ ಚ	(ಸಕಲ) ಭೂಮಂಡಲವನ್ನೂ ಕೂಡ

ಅರುಣಿಮನಿಮಗ್ನಾಂ	(ನಿನ್ನ) ಕೆಂಪಾದ ದೇಹದ ಕಾಂತಿಯಲ್ಲಿ ಮುಳುಗಿದುದನ್ನಾಗಿ
ಯಃ ಸ್ಮರತಿ	ಯಾವನು ಧ್ಯಾನ ಮಾಡುತ್ತಾನೋ
ತ್ರಸ್ಯದ್ವನಹರಿಣಶಾಲೀನನಯನಾಃ	(ತ್ರಸ್ಯತ್+ವನಹರಿಣ+ಶಾಲೀನ+ ನಯನಾಃ) ಬೆದರುತ್ತಿರುವ-ಕಾಡು ಜಿಂಕೆಯ ಹಾಗೆ ಅತಿ ಸುಂದರವಾದ-ಕಣ್ಣುಗಳುಳ್ಳ
ಗೀರ್ವಾಣಗಣಿಕಾಃ	ದೇವತೆಗಳ-ವೇಶ್ಯಾಸ್ತ್ರೀಯರು (ಅಪ್ಸರೆಯರು)
ಊರ್ವಶ್ಯಾ ಸಹ	ಊರ್ವಶೀಯೆಂಬ-ಅಪ್ಸರಸ್ತ್ರೀಯೊಡನೆ
ಕತಿ ಕತಿ	ಇನ್ನೂ ಎಷ್ಟೆಷ್ಟೋ ಮಂದಿ
ಅಸ್ಯ ವಶ್ಯಾಃ ನ ಭವಂತಿ	ಆತನ ಸ್ವಾಧೀನರಾಗುವುದಿಲ್ಲವೇ?

ತಾತ್ಪರ್ಯ

ಎಲೈ ಸರ್ವಜ್ಞಳಾದ ದೇವಿಯೆ, ಉದಯಿಸುತ್ತಿರುವ ಬಾಲಸೂರ್ಯನ ಕಾಂತಿಯಂತೆ ಕಾಂತಿಪುಂಜಗಳನ್ನು ಹೊರಸೂಸುತ್ತಿರುವ ಸೌಭಾಗ್ಯವುಳ್ಳ ನಿನ್ನ ದೇಹದ ಕಾಂತಿಯಿಂದ ಸಕಲವಾದ ಆಕಾಶವೂ ಮತ್ತು ಭೂಮಂಡಲವೂ ಅರುಣಕಾಂತಿಯಲ್ಲಿ ಮುಳುಗಿದೆಯೆಂದು ಯಾವನು ಧ್ಯಾನಮಾಡುತ್ತಾನೋ ಅಂಥ ಸಾಧಕನಿಗೆ ಬೆದರುತ್ತಿರುವ ಕಾಡು ಜಿಂಕೆಗಳಿಗೆ ಇರುವ ಹಾಗೆ ಅತಿಸುಂದರವಾದ ಕಣ್ಣುಗಳುಳ್ಳ ದೇವ ವಾರಾಂಗನೆಯರು ಊರ್ವಶೀ ಸಮೇತವಾಗಿ ಸಮಸ್ತ ಅಪ್ಸರೆಯರೂ ವಶರಾಗುತ್ತಾರೆ.

ಪದ್ಯಾನುವಾದ

ಉದಯರವಿರಶ್ಮಿರಾಶಿಯ ತೆರನ ಅರುಣತೆಯ
ನಿನ್ನೊಡಲ ಕಾಂತಿಯೊಳು ಮುಳುಗಿ ಕೆಂಪಾಗಿರುವ
ಭೂವ್ಯೋಮವೆಲ್ಲದರ ಕೆಂಬೆಳಕನೇ ಸ್ಮರಿಸುತಿಹನಾವನಾ ಭಕುತಗೆ
ಕಾಡುಹುಲ್ಲೆಯ ಬೆದರುಕಂಗಳಂತಹ ಕಂಗ-
ಳಿಂದೊಪ್ಪುತಿಹ ಊರ್ವಶೀಸಹಿತ ದೇವಲೋ-
ಕದ ವೇಶ್ಯೆವೆಣ್ಗಳವರಾರಾದರೇನವರು ವಶವಾಗದಿಹರೆ, ತಾಯೆ? ॥ ೧೮॥

ಟಿಪ್ಪಣಿಗಳು

೧. **ತನುಚ್ಛಾಯಾಭಿಸ್ತೇ ತರುಣತರಣಿ ಶ್ರೀ ಸರಣಿಭಿಃ**
(ಉದಯಿಸುತ್ತಿರುವ ಬಾಲಸೂರ್ಯನ ಕಾಂತಿಯಂತೆ ಕಾಂತಿಪುಂಜಗಳನ್ನು ಹೊರಸೂಸುತ್ತಿರುವ ನಿನ್ನ ಶರೀರವು ಕಾಂತಿಯಿಂದ ಕೂಡಿದೆ.) ಆ ಕಾಂತಿ,

ಆ ಬಣ್ಣ ದೇವಿಯ ವಿರಾಡ್ರೂಪವಾಗಿ ಭೂಮ್ಯಾಕಾಶಗಳೆರಡೂ ಕೆಂಪು ಸಮುದ್ರದಲ್ಲಿ ಮುಳುಗಿ ಹೋಗಿವೆಯೆನ್ನುವ ಸುಂದರ ದೃಶ್ಯವನ್ನು ಚಿತ್ರಕಾರನು ಊಹಿಸಿ, ಭಾವಿಸಿ ಚಿತ್ರಿಸಿದಂತೆ ಯಾರು ದೇವಿಯನ್ನು ಧ್ಯಾನಿಸುತ್ತಾರೋ ಅಂಥ ಅರುಣವರ್ಣವುಳ್ಳವಳು ದೇವಿ.

ಇದೇ ವರ್ಣನೆಯನ್ನು ಲಲಿತಾ ಸಹಸ್ರನಾಮದಲ್ಲಿ ರಕ್ತವರ್ಣಾ(೪೯) ಸರ್ವಾರುಣಾ(೪೯) ತರುಣಾದಿತ್ಯ ಪಾಟಲಾಂ (೯೨) ಅನ್ನುವ ನಾಮಗಳಿಂದ ದೇವಿಯನ್ನು ಅರುಣವರ್ಣೇ ಎಂದು ವರ್ಣಿಸಲಾಗಿದೆ.

೨. **ದಿವಂ ಸರ್ವಾಮುರ್ವೀಮರುಣಿಮನಿಮಗ್ನಾಂ ಸ್ಮರತಿ ಯಃ**

(ನಿನ್ನ ಶರೀರ ಕಾಂತಿಯಿಂದ ಭೂಮ್ಯಾಕಾಶಗಳು ಕೆಂಪುಸಮುದ್ರದಲ್ಲಿ ಮುಳುಗಿ ಹೋದಂತೆ ಎನ್ನುವ ಭಾವವನ್ನು ಕಲ್ಪಿಸಿಕೊಂಡು ಯಾರು ನಿನ್ನನ್ನು ಧ್ಯಾನಿಸುತ್ತಾರೋ)

ಅರುಣಿಮನಿಮಗ್ನಾಂ ಪದವನ್ನು ಅರುಣಿಮನಿ+ಮಗ್ನಾಂ ಎಂದೂ ಅಥವಾ ಅರುಣಿಮ+ನಿಮಗ್ನಾಂ ಎಂದೂ ಬಿಡಿಸಬಹುದು ಅರ್ಥವ್ಯತ್ಯಾಸವೇನೂ ಆಗದು. ದೇವಿಯ ಶರೀರವು ಭೂಮ್ಯಾಕಾಶಗಳನ್ನು ಆವರಿಸಿದ ಅರುಣಕಾಂತಿಯ ಹಾಗೆ ಅರುಣವರ್ಣವಾಗಿದೆ ಎಂದರ್ಥ. ಲಲಿತಾ ಸಹಸ್ರನಾಮದಲ್ಲಿ **"ನಿಜಾರುಣ ಪ್ರಭಾಪೂರಮಜ್ಜತ್ ಬ್ರಹ್ಮಾಂಡಮಂಡಲಾ"** (೧೨) ಎಂದು ಸೂರ್ಯೋದಯವನ್ನು ಇದೇ ಭಾವದಲ್ಲಿ ಹೇಳಲಾಗಿದೆ.

೩. ಈಶ್ವರನನ್ನೂ ಸಹ ಅರುಣವರ್ಣದವನು ಎಂದು ವರ್ಣಿಸಲಾಗಿದೆ.

ಯಾವಕಾಬ್ಧೌ ನಿಮಗ್ನಾಂ ಯೋ । ದಿವಂ ಭೂಮಂ ವಿಚಿಂತಯೇತ್
ತಸ್ಯ ಸರ್ವಾವಶಂ ಯಾತಾಃ । ತ್ರೈಲೋಕ್ಯವನಿತಾದ್ರುತಮ್

[ಆಕಾಶ, ಭೂಮಿ, ಕೆಂಪು ಬಣ್ಣದ ಸಮುದ್ರದಲ್ಲಿ ಮುಳುಗಿದಹಾಗಿರುವ ಅರುಣವರ್ಣದ ಶಿವನನ್ನು ಯಾವ ಸಾಧಕನು ಧ್ಯಾನಿಸುತ್ತಾನೋ ಆತನಿಗೆ ಮೂರು ಲೋಕದ ಸ್ತ್ರೀಯರೂ ವಶರಾಗುತ್ತಾರೆ]

೪. **ತ್ರಸ್ಯದ್ವನಹರಿಣಶಾಲೀನನಯನಾಃ**

(ಬೆದರಿದ ಕಾಡುಜಿಂಕೆಗಳಿಗೆ ಇರುವ ಸುಂದರಕಣ್ಣುಗಳ ಹಾಗೆ ಚಂಚಲ ಕಣ್ಣುಗಳಿರುವ ಅಪ್ಸರೆಯರು)

ಕಾಡಿನಲ್ಲಿರುವ ಜಿಂಕೆಗಳು ಎಲ್ಲಿ ಹುಲಿ, ಸಿಂಹಗಳು ತಮ್ಮನ್ನು ಬೇಟೆಯಾಡಿ ಬಿಡುತ್ತವೆಯೋ ಎಂದು ಅತ್ತಿತ್ತ ತಮ್ಮ ಕಣ್ಣುಗಳಲ್ಲಿ ಬೆದರು ನೋಟಗಳನ್ನೇ ಹೊಂದಿರುತ್ತವೆ. ಆ ನೋಟ ನೋಡಲು ಮನೋಹರವಾಗಿರುತ್ತವೆ. ಅಂಥ ಬೆದರುಕಣ್ಣುಗಳ ಹಾಗೆ ಸುಂದರನಯನಗಳುಳ್ಳ ಅಪ್ಸರೆಯರು ಎಂದರ್ಥ.

೫. **ಭವಂತ್ಯಸ್ಯ ಸಹೋರ್ವಶ್ಯಾ ಕತಿ ಕತಿ ನ ಗೀರ್ವಾಣಗಣಿಕಾಃ**

(ಭೂವ್ಯ್ಯಾಕಾಶಗಳನ್ನು ಆವರಿಸಿದ ಅರುಣವರ್ಣದಂತೆ ಶ್ರೀದೇವಿ ಅರುಣವರ್ಣೆ ಆಗಿದ್ದಾಳೆ. ಅಂಥ ದೇವಿಯನ್ನು ಧ್ಯಾನಿಸುವವರಿಗೆ ಊರ್ವಶೀ ಸಮೇತ ಎಲ್ಲ ಅಪ್ಸರೆಯರೂ ವಶವಾಗುತ್ತಾರೆ).

ಇಲ್ಲಿ ದೇವಲೋಕದಲ್ಲಿ ರಂಭೆ ಮೇನಕಾ ಮೊದಲಾದ ಅಪ್ಸರೆಯರು ಪ್ರಸಿದ್ಧರಿದ್ದರೂ ಊರ್ವಶಿಯನ್ನು ಪ್ರತ್ಯೇಕವಾಗಿ ಉಲ್ಲೇಖಿಸಲಾಗಿದೆ. ಏಕೆಂದರೆ ಅಪ್ಸರೆಯರನ್ನೆಲ್ಲ ಬ್ರಹ್ಮಸೃಷ್ಟಿಸಿದ್ದರೆ ಊರ್ವಶಿ ಮಾತ್ರ ಶ್ರೀಮನ್ನಾರಾಯಣನ ತೊಡೆಯಿಂದ ಹುಟ್ಟಿದ್ದಾಳೆ. ಅವಳು ಸಾಧಕನಲ್ಲಿ ಮೋಹಗೊಂಡರೆ ಉಳಿದ ಅಪ್ಸರೆಯೂ ಅವಳನ್ನು ಹಿಂಬಾಲಿಸುತ್ತಾರೆ. ಹೀಗೆ ಊರ್ವಶಿಯ ಮಹತ್ವ ಹೆಚ್ಚಾದುದರಿಂದ ಇಲ್ಲಿ ಊರ್ವಶಿಯನ್ನು ಪ್ರತ್ಯೇಕವಾಗಿ ಉಲ್ಲೇಖಿಸಿದೆ.

೬. **ಗೀರ್ವಾಣಗಣಿಕಾ**

(ದೇವಲೋಕದ ಅಪ್ಸರೆಯರು) ದೇವತೆಗಳು ಅನಿಮಿಷರು (ಕಣ್ಣು ರೆಪ್ಪೆ ಮಿಟುಕಿಸದವರು) ಅಂಥವರು ಸ್ಥಿರ ನೋಟದವರು, ರೆಪ್ಪೆಯನ್ನು ಮಿಟುಕಿಸುವ ಚಂಚಲ ನೋಟದವರಾಗುತ್ತಾರೆ ಎಂದರೆ ಮೋಹಪರವಶವಾಗುವರು ಎಂದರ್ಥ. ಅಂದರೆ ಅಂಥ ಊರ್ವಶೀ ರಂಭಾ ಮೇನಕಾ ಮೊದಲಾದವರು ಚಂಚಲನೇತ್ರಗಳಿಂದ ಸಾಧಕನಲ್ಲಿ ಮೋಹಗೊಂಡರೂ ಆತ ಅವರನ್ನು ಲೆಕ್ಕಿಸುವುದಿಲ್ಲ. ಏಕೆಂದರೆ ದೇವಿಯ ಸೌಂದರ್ಯದ ನೋಟದ ಮುಂದೆ ಅವೆಲ್ಲ ತಿರಸ್ಕರಣೀಯವಾಗಿರುತ್ತದೆ. ಅವನಿಗೆ ಅಂಥಾ ಅಪೂರ್ವಸೌಂದರ್ಯದ ದರ್ಶನವಾಗಿದೆ. ಅದು ದೇವಿಯ ಅರುಣವರ್ಣ ಸೌಂದರ್ಯ.

೭. ಭೂವ್ಯ್ಯಾಕಾಶಗಳನ್ನು ಆವರಿಸಿದ ಅರುಣವರ್ಣದಂತೆ ಎಂಬ ಮಾತಿನ ಸೊಗಸು ತಿಳಿಯಬೇಕಾದರೆ ಯಾವುದೇ ಸಮುದ್ರ ತೀರದಲ್ಲಿ (ಕನ್ಯಾಕುಮಾರಿ, ಕೋಣಾರ್ಕಗಳ ಬಳಿ ಇರುವ ಸಮುದ್ರ ತೀರಗಳಲ್ಲಿ) ನಿಂತು ನೋಡುವಾಗ ಉದಯಕಾಲದಲ್ಲಿ ಕಂಡುಬರುವ ಅರುಣವರ್ಣ (ಕೆಂಪು ಬಣ್ಣದ ನೋಟ) ನೋಡಿದಾಗ ಈ ಮಾತಿನ ಸೊಗಸು ತಿಳಿಯುತ್ತದೆ.

(ಪ–ಪುಟ ೨೪೩)


೮. ದೇವತೆಗಳು ಕಣ್ಣುಗಳನ್ನು ಮಿಟುಕಿಸಲಾರರು ಎಂಬುದು ಸ್ವಾಭಾವಿಕವಾದರೂ ವಿಶೇಷ ಸಂದರ್ಭದಲ್ಲಿ ಮಿಟಕಿಸುವವರಾಗುತ್ತಾರೆ ಎಂದು ಕಾಳಿದಾಸನ ಕಾವ್ಯಗಳ ವ್ಯಾಖ್ಯಾನಕಾರ ಮಲ್ಲಿನಾಥ ಒಂದೆಡೆ ಹೇಳುತ್ತಾನೆ.

ಗುರುಂ ನೇತ್ರ ಸಹಸ್ರೇಣ ಬೋಧಯಾಮಾಸ ವಾಸವಃ (ತು–ಪುಟ ೧೨೯)

೯. ಅಮರಕೋಶದಲ್ಲಿ ಸ್ವರ್ವೇಶ್ಯಾ ಊರ್ವಶೀಮುಖಾಃ ಎಂದು ಹೇಳಿದೆ. ಊರ್ವಶೀ ಉಳಿದ ವೇಶ್ಯೆಯರಿಗಿಂತ ಮಿಗಿಲೆಂದು ಹೇಳಿದೆ. (ತು–ಪುಟ ೧೨೯)

೧೦. ಈ ಶ್ಲೋಕದಲ್ಲಿ ದೇವಿಯನ್ನು ಕಾಮರಾಜಕೂಟದಲ್ಲಿ ಇಚ್ಛಾಶಕ್ತಿರೂಪದಲ್ಲಿ ಧ್ಯಾನಿಸಿದಾಗ ದೊರಕುವ ಶಕ್ತಿಯ ವಿಚಾರವಿದೆ. (ಶ್ರೀ–ಪುಟ ೧೨೩)

ಯಂತ್ರಾರಾಧನೆ (ಶ್ಲೋಕ–೧೮)



ಯಂತ್ರರಚನೆ : ಚಿನ್ನದ ತಗಡಿನ ಮೇಲೆ ಬರೆಯಬೇಕು ಅಥವಾ ಬೆಳ್ಳಿಯ ತಟ್ಟೆ ಅಥವಾ ಬಾಳೆ ಅಗ್ರದೆಲೆಯ ಮೇಲೆ ಶ್ರೀಗಂಧದಲೇಪ ಅಥವಾ ಶುದ್ಧ ಭಸ್ಮ ಇಲ್ಲವೇ ಅರಿಸಿನ ಹರಡಿ ಯಂತ್ರ ಬರೆಯಬೇಕು ಆರು ತ್ರಿಶೂಲಗಳ ಸಹಿತ ಬೀಜಾಕ್ಷರಗಳೊಡನೆ ಷಟ್ಕೋಣಗಳನ್ನುಬರೆಯಬೇಕು.

ಪೂಜೆ : ಪೂರ್ವಾಭಿಮುಖವಾಗಿ ಕುಳಿತು ಕೆಂದಾವರೆಗಳಿಂದ ಅಥವಾ ಕೆಂಪು ಗುಲಾಬಿಗಳಿಂದ ಲಲಿತಾಸಹಸ್ರನಾಮ ಅರ್ಚನೆ ಮಾಡಬೇಕು. ಶ್ರೀಗಂಧ, ಕುಂಕುಮಗಳನ್ನು ಮಂತ್ರಿಸಿ ಧರಿಸಬೇಕು.

ನೈವೇದ್ಯ : ಹರಿದ್ರಾನ್ನ, ಪಾಯಸ, ಹಾಲು, ಹಣ್ಣು, ತಾಂಬೂಲ

ಜಪ : ೪೫ ದಿನಗಳ ಕಾಲ ದಿನಕ್ಕೆ ೧೦೦೦ ಬಾರಿ ಶ್ಲೋಕವನ್ನು ಜಪಿಸಬೇಕು.

ಫಲ : ಸಕಲ ಪ್ರಾಣಿಗಳ ವಶೀಕರಣ.

ಶ್ಲೋಕ–೧೯

ಸುಂದರಿಯರನ್ನೂ ಸೆಳೆವ ದೇವಿಯ ಅದ್ಭುತಸೌಂದರ್ಯದ ವರ್ಣನೆ

ಮುಖಂ ಬಿಂದುಂ ಕೃತ್ವಾ ಕುಚಯುಗಮಧಸ್ತಸ್ಯ ತದಧೋ
[1]ಹರಾರ್ಧಂ ಧ್ಯಾಯೇದ್ಯೋ ಹರಮಹಿಷಿ ತೇ ಮನ್ಮಥಕಲಾಮ್ ।
ಸ ಸದ್ಯಸ್ಸಂಕ್ಷೋಭಂ ನಯತಿ ವನಿತಾ ಇತ್ಯತಿಲಘು
ತ್ರಿಲೋಕೀಮಪ್ಯಾಶು ಭ್ರಮಯತಿ ರವೀಂದುಸ್ತನಯುಗಾಮ್ ॥ ೧೯॥

ಪಾಠಾಂತರ

೧. (ಹರಾರ್ಧಂ ಧ್ಯಾಯೇದ್ಯೋ)=ಹಕಾರಾರ್ಧಂ ಧ್ಯಾಯೇದ್ಧರಂ (ಸು)

ಪದವಿಭಾಗ

ಮುಖಂ, ಬಿಂದುಂ, ಕೃತ್ವಾ, (ಕುಚಯುಗಮಧಸ್ತಸ್ಯ)=ಕುಚಯುಗಂ+ಅಧಃ+ತಸ್ಯ, (ತದಧೋ)=ತತ್+ಅಧಃ, ಹರಾರ್ಧಂ, (ಧ್ಯಾಯೇದ್ಯೋ), ಧ್ಯಾಯೇತ್+ಯಃ, ಹರಮಹಿಷಿ, ತೇ, ಮನ್ಮಥಕಲಾಮ್, (ಸ) = ಸಃ, (ಸದ್ಯಸ್ಸಂಕ್ಷೋಭಂ)=ಸದ್ಯಃ+ ಸಂಕ್ಷೋಭಂ, ನಯತಿ, ವನಿತಾ, (ಇತ್ಯತಿಲಘು)=ಇತಿ+ಅತಿಲಘು, (ತ್ರಿಲೋಕೀಮಪ್ಯಾಶು) = ತ್ರಿಲೋಕೀಂ +ಅಪಿ+ಆಶು, ಭ್ರಮಯತಿ, (ರವೀಂದುಸ್ತನಯುಗಾಮ್.) = ರವಿ + ಇಂದುಸ್ತನಯುಗಾಂ

ಅನ್ವಯಾರ್ಥ

(ಹೇ) ಹರಮಹಿಷಿ	(ಎಲೈ) ಈಶ್ವರನ ಪಟ್ಟದ ರಾಣಿಯೆ,
ಮುಖಂ	(ತನಗಿಷ್ಟಳಾದ ಸ್ತ್ರೀಯ) ಮುಖವನ್ನು
ಬಿಂದುಂ }	ಶ್ರೀ ಚಕ್ರದ ಮಧ್ಯ ಬಿಂದುವನ್ನಾಗಿ
ಕೃತ್ವಾ	ಇಟ್ಟುಕೊಂಡು (ಬಿಂದುಸ್ಥಾನದಲ್ಲಿ ಧ್ಯಾನಿಸಿ)
(ತಸ್ಯಅಧಃ	ಆ ಬಿಂದುವಿನ ಕೆಳಭಾಗದಲ್ಲಿ
ಕುಚಯುಗಂ	ಸ್ತನಯುಗ್ಮವನ್ನು
(ಕೃತ್ವಾ)	(ಧ್ಯಾನಿಸಿ)
ತದಧಃ	ಅದರ ಕೆಳಗೆ
ಹರಾರ್ಧಂ	ಈಶ್ವರನ ಅರ್ಧದೇಹವನ್ನು

(ಕೃತ್ವಾ)	(ಶಕ್ತಿ ದೇವತಾರೂಪವಾದ ಯೋನಿಯನ್ನು)
(ತತ್ರ)	(ಧ್ಯಾನಮಾಡಿ ಅಲ್ಲಿ)
ತೇ ಮನ್ಮಥಕಲಾಂ	ನಿನ್ನ ಕಾಮ ಬೀಜವನ್ನು (ದ್ರಾಂ, ದ್ರೀಂ, ಕ್ಲೀಂ, ಬ್ಲೂಂ, ಸಃ)
ಯಃ ಧ್ಯಾಯೇತ್	ಯಾವನು ಧ್ಯಾನಮಾಡುತ್ತಾನೋ
ಸಃ ಸದ್ಯಃ	ಅವನು ಆಗಲೇ
ವನಿತಾಃ ಸಂಕ್ಷೋಭಂ	ಸ್ತ್ರೀಯರುಗಳಿಗೆ ಮನೋವಿಕಾರವನ್ನು
ನಯತೀತಿ	ಹೊಂದಿಸುತ್ತಾನೆಯೆಂಬುವುದು
(ಯತ್) }	(ಯಾವುದುಂಟೋ)
(ತತ್) }	(ಅದು)
ಅತಿಲಘು	ಬಹಳ ಸುಲಭವಾದದ್ದು
(ಕಿಂತು)	(ಮತ್ತೇನೆಂದರೆ)
ರವೀಂದುಸ್ತನಯುಗಾಂ	(ರವಿ+ಇಂದು+ಸ್ತನಯುಗಾಂ) ಸೂರ್ಯ ಚಂದ್ರರೆಂಬ-ಎರಡು ಸ್ತನಗಳುಳ್ಳ)
ತ್ರಿಲೋಕೀಮಪಿ	ತ್ರಿಲೋಕಿಯನ್ನೂ (ಮೂರುಲೋಕವೆಂಬ ಸ್ತ್ರೀಯನ್ನ)
ಆಶು ಭ್ರಮಯತಿ	ಶೀಘ್ರವಾಗಿ ಭ್ರಮೆಗೊಳಿಸುತ್ತಾನೆ.

ತಾತ್ಪರ್ಯ

ಹೇ ಈಶ್ವರನ ಪಟ್ಟದರಾಣಿಯೇ, ತನಗಿಷ್ಟಳಾದ ಸ್ತ್ರೀಯ ಮುಖವನ್ನು ಶ್ರೀ ಚಕ್ರದ ಬಿಂದುರೂಪವನ್ನಾಗಿ ಧ್ಯಾನಮಾಡಿ ಆ ಬಿಂದುವಿನ ಕೆಳಭಾಗದಲ್ಲಿ ಸ್ತನಯುಗ್ಮವನ್ನು (ಭಾವಿಸಿ) ಅದರ ಕೆಳಗೆ ಶಕ್ತಿರೂಪವಾದ ತ್ರಿಕೋಣವನ್ನು (ಯೋನಿಯನ್ನು) ಧ್ಯಾನಮಾಡಿ ಅಲ್ಲಿ ನಿನ್ನ ಕಾಮಬೀಜವನ್ನು ದ್ರಾಂ, ದ್ರೀಂ, ಕ್ಲೀಂ, ಬ್ಲೂಂ, ಸಃ ಎಂಬ ಬೀಜಾಕ್ಷರ ಮಂತ್ರವನ್ನು) ಯಾವ ಸಾಧಕನು ಧ್ಯಾನಿಸುತ್ತಾನೆಯೋ ಅವನು ಆಗಲೇ (ತತ್ಕಾಲದಲ್ಲಿ) ಸ್ತ್ರೀಯರು ಚಿತ್ತವಿಕಾರವನ್ನು ಹೊಂದುವಂತೆ ಮಾಡುತ್ತಾನೆ ಎಂಬುದು ಬಹಳ ಸುಲಭವಾದ (ಅತ್ಯಂತ ಲಘುವಾದ) ವಿಷಯವಾಗಿದೆ. ಅದಕ್ಕೂ ಮಿಗಿಲಾಗಿ ಸೂರ್ಯ ಚಂದ್ರರೇ ಎರಡು ಸ್ತನಗಳಾಗಿರುವ ತ್ರಿಲೋಕಿಯನ್ನೂ (ಮೂರು ಲೋಕವೆಂಬ ಸ್ತ್ರೀಯನ್ನು) ಶೀಘ್ರವಾಗಿ ಭ್ರಮೆಗೊಳಿಸುತ್ತಾನೆ.

ಪದ್ಯಾನುವಾದ

ಹೇ ಹರನ ರಾಣಿ ಮುಖವನು ಬಿಂದು ಮಾಡುತ್ತ-
ಲದರಡಿಯೊಳ್ಕುಚಯುಗವನದರಡಿಯೊಳ್ಧ್ಯಾನಿಸುತ
ಹರನರ್ಧವನ್ನಲ್ಲಿ ನಿನ್ನ ಮನ್ಮಥಕಲೆಯ ಜಾನಿಸುವನಾವನವನು

ತಾನಾಗಳಿಚ್ಚಿಸಿದ ಹೆಣ್ಣಮನವನು ಕಲಕಿ
ಸೆಳೆವನೆಂಬುದು ದೊಡ್ಡಿತಲ್ಲ, ರವಿಶಶಿಗಳೇ
ಕುಚಯುಗ್ಮವಾದ ತ್ರಿಲೋಕಿಯನ್ನಾಕ್ಷಣದೆ ತಳ್ಳಂಕಗೊಳಿಸುವನು ॥ ೧೯ ॥

ಟಿಪ್ಪಣಿಗಳು

೧. **ರವೀಂದುಸ್ತನಯುಗಾಂ ತ್ರಿಲೋಕೀಮಪಿ**
ಇಲ್ಲಿ ಸೂರ್ಯ ಚಂದ್ರರೆಂಬ ಸ್ತನದ್ವಯವುಳ್ಳ ಎಂಬ ವಿಶೇಷಣದಿಂದ ಮಾದನ ತ್ರಿಲೋಕಿಯನ್ನು ಸ್ತ್ರೀಯೆಂಬುದಾಗಿ ಭಾವಿಸಿರುವುದರಿಂದ ಈ ಪ್ರಯೋಗವನ್ನು ಸ್ತ್ರೀಯಲ್ಲಿಯೇ ಪ್ರಯೋಗಿಸಬೇಕು ಎಂಬುದನ್ನು ತಿಳಿಸುತ್ತದೆ.

೨. ಇಲ್ಲಿ ನಿರೂಪಿಸಿರುವ ಮಾದನ ಪ್ರಯೋಗದ ಧ್ಯಾನವಿಧಾನವನ್ನು ಚತುಶ್ಶತಿ, ಸನತ್ಕುಮಾರ ಸಂಹಿತೆಯಲ್ಲಿ ವಿಸ್ತಾರವಾಗಿ ತಿಳಿಸಲಾಗಿದೆ.
ಚತುಶ್ಶತಿಯಲ್ಲಿ ಹೀಗೆ ಹೇಳಿದೆ:–
ಮುಖವನ್ನು ಬಿಂದುರೂಪವನ್ನಾಗಿ ಸಂಕಲ್ಪಮಾಡಿ ಅದರ ಕೆಳಗೆ ಕುಚದ್ವಯವನ್ನು ಮತ್ತು ಅದರಿಂದ ಕೆಳಗಡೆ ಅಧೋಮುಖವಾಗಿರುವ ಶಕ್ತಿ ತ್ರಿಕೋಣವನ್ನು ಚಿಂತಿಸಬೇಕು. ಅಲ್ಲಿ ಕಾಮಕಲಾರೂಪಿಣಿಯಾದ ಅರುಣಾದೇವಿಯನ್ನು ಚಿಂತಿಸಬೇಕು.

೩. "ಈ ಶ್ಲೋಕವು ಪಂಚಮಯೋಗ ರಹಸ್ಯವನ್ನು ಕುರಿತದ್ದು ಎಂದು ಹೇಳುತ್ತಾರೆ. ಪಂಚಮಯೋಗವೆಂದರೆ ಕುಂಡಲಿನೀ ಶಕ್ತಿಯು ಪರಮ ಶಿವನೊಡನೆ ಸಂಯೋಗ ಹೊಂದುವುದು ಎಂಬರ್ಥವನ್ನೂ ಪ್ರಾಪಂಚಿಕವಾಗಿ ಮೈಥುನವೆಂಬ ಅರ್ಥವನ್ನೂ ಕುರಿತದ್ದು ಎಂದು ಹೇಳುವರು."

(ಶ್ರೀ–ಪುಟ ೧೩೦)

೪. **ಮುಖಂ ಬಿಂದುಂ ಕೃತ್ವಾ**
ಈ ಮಾತಿನಲ್ಲಿ ಶಂಕರರು ನಮ್ಮ ಭಾರತದೇಶದ ಭೌಗೋಳಿಕ ರೂಪವನ್ನು ಕಂಡಿದ್ದಾರೆ. ಕಾಶ್ಮೀರ, ನೇಪಾಲ, ಕನ್ಯಾಕುಮಾರಿ, ಪ್ರದೇಶಗಳು ತ್ರಿಕೋಣವಾಗಿ ಕಾಶಿಯನ್ನು ಬಿಂದುವಾಗಿ ಭಾವಿಸಿದರು. ಶ್ರೀವಿದ್ಯಾಸ್ವರೂಪದಲ್ಲಿ 'ಕಾಮರಾಜಕೂಟ'ವೆನ್ನುವ ಎರಡನೆಯ ಮಂತ್ರಭಾಗವನ್ನು ಆ ತಾಯಿಯ ವಿರಾಡ್ರೂಪವಾಗಿ ಭಾವಿಸಿ ಯಾರು ಧ್ಯಾನಮಾಡುತ್ತಾರೋ ಅವರು ಸರ್ವಸಿದ್ಧಿಗಳನ್ನು ವಶಮಾಡಿಕೊಡು, ಮೂರುಲೋಕಗಳನ್ನು ಮೋಹಪಡಿಸಬಲ್ಲರು.

(ಪ–ಪುಟ ೨೪೪)

೫. ಈ ಶ್ಲೋಕದಲ್ಲಿ (೧೯) ಹೇಳಿರುವ ಭಾವವನ್ನು ಸನತ್ಕುಮಾರ ಸಂಹಿತೆಯಲ್ಲಿ ಹೀಗೆ ಹೇಳಿದೆ.

"ಬಿಂದುವಿನಲ್ಲಿ ಆ ಮುಖವನ್ನು ಆರೋಪಿಸಿ ಅದರ ಕೆಳಗಡೆ ಎರಡು ಬಾಹುಗಳನ್ನು ಅವುಗಳ ಕೆಳಗೆ ಕುಚದ್ವಯವನ್ನೂ ಅದರಿಂದ ಕೆಳಗಡೆ ಯೋನಿಯನ್ನೂ (ಶಕ್ತಿ ತ್ರಿಕೋಣವನ್ನು) ಭಾವಿಸಬೇಕು. ಈ ಐದು ಸ್ಥಾನಗಳಲ್ಲಿ ಪಂಚಬಾಣ ಬೀಜಗಳನ್ನು ಚಿಂತಿಸಬೇಕು." ಮುಖದಲ್ಲಿ ಎರಡು ಬಾಹುಗಳಲ್ಲಿ ಕುಚಗಳ ಮಧ್ಯದಲ್ಲಿ ಮತ್ತು ಯೋನಿಮಧ್ಯದಲ್ಲಿ ಕ್ರಮವಾಗಿ ದ್ರಾಂ, ದ್ರೀಂ, ಕ್ಲೀಂ, ಬ್ಲೂಂ, ಸಃ–ಎಂಬುದಾಗಿ ಐದು ಪಂಚಬಾಣ ಬೀಜಗಳನ್ನು ಚಿಂತಿಸಬೇಕು. ಈ ಪ್ರಯೋಗವನ್ನು ಕಾಮಬೀಜಪ್ರಯೋಗ ಸಮಯದಲ್ಲೇ ಮಾಡಲ್ಪಡಬೇಕು.

(ಶೇ–ಪುಟ ೭೯)

೬. **ತ್ರಿಲೋಕೀಮಪ್ಯಾಶು ಭ್ರಮಯತಿ ರವೀಂದುಸ್ತನಯುಗಾಂ**

(ಸೂರ್ಯ ಚಂದ್ರಸ್ವರೂಪದ ಸ್ತನಗಳುಳ್ಳ ಮೂರುಲೋಕದ ಸ್ತ್ರೀಯರಲ್ಲಿ ಭ್ರಮೆಗೊಳಿಸುತ್ತಾನೆ) ಇಲ್ಲಿ ಶ್ರೀದೇವಿಯ ಕಾಮರಾಜಬೀಜಗಳಲ್ಲಿ ಒಂದಾದ ಕ್ಲೀಂ ಎಂಬ ಬೀಜಾಕ್ಷರಕ್ಕೆ ಇರುವ ಸ್ತ್ರೀವಶೀಕರಣ ಮಹಿಮೆಯನ್ನು ಹೇಳಲಾಗಿದೆ. ಈ ಮಂತ್ರದಿಂದ ಒಬ್ಬ ಸ್ತ್ರೀಯನ್ನಷ್ಟೇ ಅಲ್ಲ ತ್ರಿಲೋಕಗಳ ಸ್ತ್ರೀಯರನ್ನು ಭ್ರಮೆಗೊಳಿಸಬಲ್ಲನು.

(ಪೋ–ಪುಟ ೧೦೮)


೭. ಈ ಶ್ಲೋಕದ ಅಂತರಾರ್ಥವನ್ನು ಗಮಕಿ ಶಂಕರನಾರಾಯಣ್ ಅವರು ಹೀಗೆ ಅರ್ಥೈಸಿದ್ದಾರೆ. ಶ್ರೀ ಚಕ್ರದ ಬಿಂದುಸ್ಥಾನದಲ್ಲಿರುವ ಶಿವನ ಹೆಣ್ಣಾದ ನಿನ್ನ ಮುಖಾರವಿಂದವನ್ನು, ಅದರ ಕೆಳಗಿರುವ ಸ್ತನಯುಗ್ಮವನ್ನು, ಅದರ ಕೆಳಗಿರುವ ಯೋನಿಯನ್ನು ಕಾಮದೃಷ್ಟಿಯಿಂದ ಯಾವನು ಧ್ಯಾನಿಸುತ್ತಾನೋ ಅವನು ಹೆಣ್ಣಿನ ಮನಸ್ಸಿನಲ್ಲಿ ವಿಕಾರವನ್ನು, ಸಂಕ್ಷೋಭೆಯನ್ನು ಉಂಟು ಮಾಡಬಲ್ಲನು. ಆದರೆ ಇದು ಅತ್ಯಂತ ತುಚ್ಛವಾದ ಭಾವನಾತ್ಮಕ ಸಾಧನೆ. ಆದರೆ ದೇವಿಯ ಕಾಮರೂಪದ ಅಂಗಗಳು ಮಾತೃಸ್ವರೂಪದ ಭಾವನೆಗಳನ್ನು ಪ್ರಚೋದಿಸುವಂಥವು. ಮುಖವು ವಾತ್ಸಲ್ಯದ ಪ್ರತಿರೂಪ. ಸ್ತನಗಳು ಜೀವಾಮೃತವನ್ನು ನೀಡುವ ಕುಂಭಗಳು, ಯೋನಿ ಜನನಸ್ಥಾನ, ಏಕೆಂದರೆ ಆಕೆಯ ಸ್ತನಗಳು ತ್ರಿಲೋಕಗಳನ್ನು ಮೋಹಗೊಳಿಸುವ ಸೂರ್ಯಚಂದ್ರ ಸ್ವರೂಪಗಳು. ಈ ಕಲ್ಪನೆಯ ಭಾವದಿಂದ ಅವನು ಮೂರುಲೋಕಗಳನ್ನು ವಶಪಡಿಸಿಕೊಳ್ಳುವ ಸಾಮರ್ಥ್ಯ ಪಡೆಯುತ್ತಾನೆ.

(ಶಂ–ಪುಟ ೪೧)

೮. ಪದಾರ್ಥ ಚಂದ್ರಿಕಾ ಎಂಬ ಸೌಂದರ್ಯಲಹರಿಯ ವ್ಯಾಖ್ಯಾನದಲ್ಲಿ ಈ ಶ್ಲೋಕ ದೇವಿಯ ಅರ್ಧನಾರೀಶ್ವರ ರೂಪದ ಧ್ಯಾನದ ಶ್ಲೋಕ ಎಂದು ಹೇಳಲಾಗಿದೆ.

(ತೋ–ಪುಟ ೨೧೯)

ಯಂತ್ರಾರಾಧನೆ (ಶ್ಲೋಕ–೧೯)



ಯಂತ್ರರಚನೆ : ಚಿನ್ನದ ರೇಖಿನಲ್ಲಿ ರಚಿಸಬೇಕು. ವೃತ್ತವನ್ನು ಬರೆದು ಅದರೊಳಗೆ ನಾಲ್ಕುದಿಕ್ಕುಗಳ ಕಡೆ ಇರುವಂತೆ 'ಹ್ರೀಂ' ಬೀಜಾಕ್ಷರವನ್ನು ಬರೆಯಬೇಕು. ಅಥವಾ ಬೆಳ್ಳಿ ಅಥವಾ ತಾಮ್ರದ ತಟ್ಟೆ ಮೇಲೆ ಶ್ರೀಗಂಧಲೇಪನ ಅಥವಾ ಶುದ್ಧಭಸ್ಮ ಇಲ್ಲವೇ ಕುಂಕುಮ ಹರಡಿ ಯಂತ್ರವನ್ನು ಬರೆಯಬಹುದು.

ಪೂಜೆ : ಕುಂಕುಮ ಅಥವಾ ಕೆಂಪು ಅಕ್ಷತೆಗಳಿಂದ ದುರ್ಗಾ ಅಷ್ಟೋತ್ತರ ಮತ್ತು ಲಲಿತಾತ್ರಿಶತೀ ಅರ್ಚನೆ ಮಾಡಬೇಕು.

ನೈವೇದ್ಯ : ಹಾಲು, ಜೇನುತುಪ್ಪ, ಬಾಳೆಹಣ್ಣು.

ಜಪ : ಉತ್ತರಾಭಿಮುಖವಾಗಿ ಕುಳಿತು ೨೫ ದಿನಗಳು ದಿನಕ್ಕೆ 200 ಬಾರಿ ಶ್ಲೋಕವನ್ನು ಜಪಿಸಬೇಕು. ಚಂದನ, ಕುಂಕುಮ, ಭಸ್ಮ ಹೂಗಳನ್ನು ಅಭಿಮಂತ್ರಿಸಿ ಧರಿಸಬೇಕು.

ಫಲ : **ಸಮಸ್ತ ರಾಜ, ರಾಕ್ಷಸ, ಮೃಗ, ಸ್ತ್ರೀಯರು ವಶರಾಗುವರು.**

ಶ್ಲೋಕ–೨೦

ಜ್ವರ ಪರಿಹಾರಕವಾದ ದೇವೀಧ್ಯಾನ

ಕಿರಂತೀಮಂಗೇಭ್ಯಃ ಕಿರಣನಿಕುರುಂಬಾಮೃತರಸಂ
ಹೃದಿ ತ್ವಾಮಾಧತ್ತೇ ಹಿಮಕರಶಿಲಾಮೂರ್ತಿಮಿವ ಯಃ ।
ಸ ಸರ್ಪಾಣಾಂ ದರ್ಪಂ ಶಮಯತಿ ಶಕುಂತಾಧಿಪ ಇವ
[೧]ಜ್ವರಪ್ಲುಷ್ಟಾನ್ ದೃಷ್ಟ್ವಾ ಸುಖಯತಿ[೨] ಸುಧಾಧಾರಸಿರಯಾ ॥ ೨೦ ॥

ಪಾಠಾಂತರ

೧. (ಜ್ವರ ಪ್ಲುಷ್ಟಾನ್) = ಜ್ವರಪ್ಲುಷ್ಟಂ (ಸು)

೨. (ಸುಧಾಧಾರಸಿರಯಾ) = ಸುಧಾಸಾರಸಿಯಾ (ಸು)

ಪದವಿಭಾಗ

(ಕಿರಂತೀಮಂಗೇಭ್ಯಃ)=ಕಿರಂತೀಮ್+ಅಂಗೇಭ್ಯಃ, (ಕಿರಣನಿಕುರುಂಬಾಮೃತರಸಂ) = ಕಿರಣನಿಕುಂರುಂಬ+ಅಮೃತರಸಂ, ಹೃದಿ, (ತ್ವಾಮಾಧತ್ತೇ)=ತ್ವಾಂ+ಆಧತ್ತೇ, (ಹಿಮಕರಶಿಲಾಮೂರ್ತಿಮಿವ)=ಹಿಮಕರ ಶಿಲಾಮೂರ್ತಿಂ+ಇವ, ಯಃ, (ಸ) = ಸಃ, ಸರ್ಪಾಣಾಂ, ದರ್ಪಂ, ಶಮಯತಿ, (ಶಕುಂತ+ಅಧಿಪ)=ಶಕುಂತಾಧಿಪಃ ಇವ, ಜ್ವರಪ್ಲುಷ್ಟಾನ್, ದೃಷ್ಟ್ವಾ ಸುಖಯತಿ, ಸುಧಾಧಾರ, ಸಿರಯಾ.

ಅನ್ವಯಾರ್ಥ

(ಹೇ ದೇವಿ)	(ಎಲೈ ದೇವಿಯೇ)
ಯಃ (ಸಾಧಕಃ)	ಯಾವ (ಉಪಾಸಕನು)
ಅಂಗೇಭ್ಯಃ	ಸಮಸ್ತ ಅವಯವಗಳ ದೆಸೆಯಿಂದ
ಕಿರಣನಿಕುರುಂಬ ಅಮೃತರಸಂ	ಕಾಂತಿಗಳ–ಸಮೂಹದಿಂದುಂಟಾದ–ಅಮೃತರಸವನ್ನು
ಕಿರಂತೀಂ	ಎಲ್ಲಾ ಕಡೆಗೂ ಎರಚುತ್ತಿರುವ
ಹಿಮಕರಶಿಲಾ ಮೂರ್ತಿಮಿವ	ಚಂದ್ರನ–ಕಲ್ಲಿನ(ಚಂದ್ರಕಾಂತ ಶಿಲೆಯಿಂದ ಮಾಡಿದ)–ವಿಗ್ರಹದಂತೆ

ಹೃದಿ ತ್ವಾಂ	ಹೃದಯದಲ್ಲಿ ನಿನ್ನನ್ನು
ಆಧತ್ತೇ	ಇರಿಸಿಕೊಳ್ಳುತ್ತಾನೋ (ಧ್ಯಾನಮಾಡುತ್ತಾನೋ)
ಸಃ ಶಕುಂತಾಧಿಪಃ ಇವ	ಅವನು ಶಕುಂತ ಪಕ್ಷಿಗಳಿಗೆ ಅಧಿಪತಿಯಾದ ಗರುಡನಂತೆ
ದೃಷ್ಟ್ಯಾ	ಕಟಾಕ್ಷದಿಂದಲೇ (ನೋಡಿದಮಾತ್ರದಿಂದಲೇ) (ಕ್ರೂರದೃಷ್ಟಿ)
ಸರ್ಪಾಣಾಂ ದರ್ಪಂ	ಹಾವುಗಳ ಅಹಂಕಾರವನ್ನು
ಶಮಯತಿ	ಮುರಿಯುತ್ತಾನೆ.
ಸುಧಾಧಾರಾಸಿರಯಾ	ಅಮೃತದ–ಧಾರೆಯುಳ್ಳ–ನಾಡಿಯುಳ್ಳ
(ದೃಷ್ಟ್ಯಾ)	(ಕಟಾಕ್ಷದಿಂದ ನೋಡಿ)
ಜ್ವರಪ್ಲುಷ್ಟಾನ್	ಜ್ವರಗಳಿಂದ–ಸಂತಾಪವನ್ನು ಹೊಂದಿದವರನ್ನು
ಸುಖಯತಿ	(ತಾಪ ಹೋಗುವಂತೆ) ಸುಖವನ್ನು ಹೊಂದಿಸುತ್ತಾನೆ.

ತಾತ್ಪರ್ಯ

ಓ ದೇವಿಯೇ, ದೇಹದ ಸಮಸ್ತ ಅವಯವಗಳಿಂದ ರಣಸಮೂಹದಿಂದ ಉತ್ಪನ್ನವಾದ ಅಮೃತಸರವನ್ನು ಎಲ್ಲೆಡೆಗೂ ಸುರಿಸುತ್ತಿರುವ ಚಂದ್ರಕಾಂತ ಶಿಲೆಯಿಂದ ನಿರ್ಮಿತವಾದ ಮೂರ್ತಿಯೇ ಎಂಬಂತಿರುವ ನಿನ್ನನ್ನು ಹೃದಯದಲ್ಲಿ ಯಾವ ಉಪಾಸಕನು, ಧ್ಯಾನಿಸುತ್ತಾನೆಯೋ ಅಂತಹ ಉಪಾಸಕನು ಪಕ್ಷಿಗಳಿಗೆ ಅಧಿಪತಿಯಾದ ಗರುಡನು. ನೋಡಿದ ಮಾತ್ರದಿಂದಲೇ ಹಾವುಗಳ ಅಹಂಕಾರವನ್ನು ಶಾಂತಗೊಳಿಸುವಂತೆ, ತನ್ನ ಅಮೃತವಾಹಿನೀ ನಾಡೀರೂಪವಾದ ದೃಷ್ಟಿಯಿಂದ ಜ್ವರಪೀಡಿತರ ತಾಪವನ್ನು ಹೋಗಲಾಡಿಸುತ್ತಾನೆ.

ಪದ್ಯಾನುವಾದ

ಹೇ ಜನನಿ, ಅಂಗಾಂಗಜನ್ಯಕಿರಣಾಳಿಯಿಂ
ದುಗುವಮೃತರಸರೂಪಿ ಶಶಿಶಿಲಾಮೂರ್ತಿಯೆನೆ
ನಿನ್ನನಾವನು ತನ್ನ ಹೃತ್ಕಮಲದಲಿ ಧರಿಸಿಕೊಂಡಿಹನೊ ಆ ಭಕ್ತನು
ಕಣ್ಣೋಟದಿಂದಲೇ ಸರ್ಪಗಳ ದರ್ಪವನು
ಮುರಿಯಲಾರ್ಪನು ತಾನು ಪಕ್ಷಿರಾಜನವೋಲು,
ಜ್ವರತಪ್ತರಿಗೆ ಸುಖವನೀಯಬಲ್ಲನು ಸುಧೆಗೆ ನೆಲೆಯಾದ ಸೆರೆಗಳಿಂದ

॥ ೨೦ ॥

ಟಿಪ್ಪಣಿಗಳು

೧. ಈ ಶ್ಲೋಕದಲ್ಲಿ ಗಾರುಡ ಪ್ರಯೋಗವು ಉಕ್ತವಾಗಿದೆ. ಇದನ್ನು ಚತುಶ್ಶತಿ ಗ್ರಂಥದಲ್ಲಿ ಹೀಗೆ ಹೇಳಿದೆ. "ಆರು ತಿಂಗಳ ಧ್ಯಾನಯೋಗದಿಂದ ಸಾಧಕನು ಗರುಡನಂತಾಗಿ ತನ್ನ ದೃಷ್ಟಿಯಿಂದಲೇ ಲೋಕವನ್ನು ಆಕರ್ಷಿಸಿ ವಶಪಡಿಸಿಕೊಳ್ಳುತ್ತಾನೆ. ತನ್ನ ಕಟಾಕ್ಷದಿಂದಲೇ ಸ್ತ್ರೀಯರನ್ನು ವಶಪಡಿಸಿಕೊಳ್ಳುತ್ತಾನೆ. ಚಂದ್ರಕಾಂತ ಶಿಲಾಮೂರ್ತಿಯಾದ ದೇವಿಯನ್ನು ಧ್ಯಾನಮಾಡಿ ಸಮಸ್ತ ತಾಪಜ್ವರಗಳನ್ನು ಹೋಗಲಾಡಿಸುತ್ತಾನೆ. ಪಕ್ಷಿರಾಜನಾದ ಗರುಡನಂತೆ ಸರ್ಪಗಳ ದರ್ಪವನ್ನು ನಾಶಮಾಡುತ್ತಾನೆ."

(ಶೇ–ಪುಟ ೮೧)

೨. ಭೈರವ ಯಾಮಳವೆಂಬ ತಂತ್ರಗ್ರಂಥದಲ್ಲಿ ಹೀಗೆ ಹೇಳಿದೆ. "ಸಕಲ ತತ್ತ್ವಾತೀತೆ ಮಹೇಶ್ವರಿ ಸದಾಶಿವನೊಡನೆ ಕೂಡಿ ಜ್ಯೋತಿರೂಪದಿಂದ ಪ್ರಕಾಶಿಸುತ್ತಾಳೆ. ಆಕೆಯ ಶರೀರದಿಂದ ಹೊರಹೊಮ್ಮುವ ಕಿರಣಗಳು ಅನಂತ ಕೋಟಿಗಳಾಗಿವೆ. ಈ ಕಿರಣಗಳು ಅಮೃತರಸವನ್ನು ಹೊರಸೂಸುತ್ತಿರುತ್ತವೆ. "ಕಿರಂತೀಮಂಗೇಭ್ಯಃ ಕಿರಣನಿಕುರುಂಬಾಮೃತರಸಂ" ಎಂಬ ಮಾತಿನಲ್ಲಿ ವ್ಯಕ್ತವಾಗಿರುವ ಅಭಿಪ್ರಾಯ ಇದೇ ಆಗಿದೆ.

(ಪೋ–ಪುಟ ೧೧೨)


೩. ಸಾಧಕನು ಗರುಡನಂತೆ ಸರ್ಪವಿಷವನ್ನು ಹೋಗಲಾಡಿಸಬಲ್ಲನು ರಾಮಾಯಣದಲ್ಲಿ ಒಂದು ಪ್ರಸಂಗ ಬರುತ್ತದೆ. ಇಂದ್ರಜಿತ್ ನಾಗಾಸ್ತ್ರದಿಂದ ರಾಮಲಕ್ಷ್ಮಣರನ್ನು ಬಂಧಿಸಿದಾಗ ಗರುತ್ಮಂತನಿಂದ ಮಾತ್ರ ನಾಗಾಬಂಧ ನಿವಾರಣೆ ಆಗುತ್ತದೆ ಎಂದು ಹೇಳುತ್ತಾರೆ.

೪. **ಜ್ವರಪ್ಲುಷ್ಟಾನ್ ದೃಷ್ಟ್ಯಾ ಸುಖಯತಿ ಸುಧಾಧಾರಾಸಿರಯಾ**
ಸಾಧಕನಲ್ಲಿದ್ದ ನಾಡಿಗಳಿಂದ ಹೊರಬರುವ ಅಮೃತ ಧಾರೆಯಿರುತ್ತದೆ. ಅದು ದೃಷ್ಟಿಯಲ್ಲಿ ಪ್ರವಹಿಸಿದಾಗ ಜ್ವರಪೀಡಿತನ ಜ್ವರನಿವಾರಣೆ ಆಗುತ್ತದೆ.

೫. **ಸ ಸರ್ಪಾಣಾಂ ದರ್ಪಂ ಶಮಯತಿ ಶಕುಂತಾಧಿಪ ಇವ**

ಈ ಮಾತಿಗೆ ಲಕ್ಷ್ಮೀಶ ತೋಳ್ಪಾಡಿ ಅವರ ವಿವರಣೆ ಹೀಗಿದೆ. ಹಾರುವ ಹಕ್ಕಿಗಳ ದೊರೆಯಾದ (ಶಕುಂತಾಧಿಪ) ಗರುಡನ ನೆರಳು ನೆಲದ ಮೇಲೆ ಹರಿದಾಡುವ ಸರ್ಪದ ಮೇಲೆ ಬಿದ್ದರೆ ಅಂಜುತ್ತ ಬಿಲ ಸೇರುತ್ತದೆ. ಗರುಡ ಅಮೃತಕ್ಕೆ ಹಾರುವ ಹಕ್ಕಿ, ಅಮೃತವನ್ನು ಒಯ್ಯುವ ಹಕ್ಕಿ 'ಮದ' ಇಳಿಯದೆ 'ದಮ' ಆಗದಿದ್ದರೆ ಅಮೃತ ಸೂಸಲಾರದು. ಮೈಯೆಲ್ಲ ಅಮೃತ ಸೂಸುವ ಮೂರ್ತಿಯನ್ನು ಧ್ಯಾನಿಸು ವವನು ಗರುಡನಾಗುತ್ತಾನೆ. ಈ ಧ್ಯಾನವನ್ನೇ ತಾಂತ್ರಿಕರು 'ಗಾರುಡ ಪ್ರಯೋಗ' ವೆನ್ನುತ್ತಾರೆ. (ತೋಳ್ಪಾಡಿ–ಪುಟ ೨೧೨)

ಯಂತ್ರಾರಾಧನೆ (ಶ್ಲೋಕ-೨೦)



ಯಂತ್ರರಚನೆ : ತಾಮ್ರದ ತಟ್ಟೆಯಲ್ಲಿ ಭಸ್ಮದಿಂದ ಬರೆಯಬೇಕು. ಚಿತ್ರದಲ್ಲಿ ತೋರಿಸಿರುವಂತೆ ಎರಡು ಸಮ ಚತುರಶ್ರಗಳನ್ನು ಕೂಡಿಸಿ ಎಂಟು ತ್ರಿಶೂಲಗಳನ್ನು ಬರೆಯಬೇಕು. ಓಂ ಕ್ಷಿಪ ಸ್ವಾಹಾ ಮಂತ್ರವನ್ನು ನಡುವೆ ಲಿಖಿಸಬೇಕು.

ಪೂಜೆ : ಉತ್ತರಾಭಿಮುಖವಾಗಿ ಕುಳಿತು ಬಿಲ್ವಪತ್ರೆಯಿಂದ ದುರ್ಗಾ ಅಷ್ಟೋತ್ತರ ಅರ್ಚನೆ ಮಾಡಬೇಕು.

ನೈವೇದ್ಯ : ಎಳ್ಳನ್ನ, ಕ್ಷೀರ ಪಾಯಸ, ತೆಂಗಿನ ಕಾಯಿ, ಹಣ್ಣುಗಳು.

ಜಪ : ೪೫ ದಿನ ಪ್ರತಿದಿನ ೨೦೦೦ ಬಾರಿ ಜಪಿಸಿದರೆ ವಿಷಭಯ ಇರುವುದಿಲ್ಲ. ೨೫ ದಿನಕ್ಕೆ ೧೦೦೦ ಸಲ ಜಪಿಸಿದರೆ ವಿಷದೋಷ ದೂರವಾಗುವುದು ಜ್ವರ ದೂರವಾಗುವುದು.

ಈ ಯಂತ್ರವನ್ನು ಮಯೂರತಾಮ್ರ ಅಥವಾ ಪುನ್ನಾಗತಾಮ್ರದ ಮೇಲೆ ಬರೆಸಿ ಪೂಜಿಸಿ ೪೫ ದಿನ ೨೦೦೦ ಬಾರಿ ಜಪಿಸಿ ಆ ಯಂತ್ರವನ್ನು ಉಂಗುರಮಾಡಿ ಧರಿಸಿದರೆ ಆ ಉಂಗುರದ ಮೇಲಿನಿಂದ ಸರ್ಪದಂಷ್ಟ್ರ ಪುರುಷನ ಮೇಲೆ ಜಲ ಪ್ರೋಕ್ಷಿಸಿದರೆವಿಷ ನಿವೃತ್ತಿ ಆಗುತ್ತದೆ.

ಫಲ : **ಸರ್ಪಾದಿ ವಿಷಜಂತುಗಳ ವಿಷ ನಿವಾರಣೆ, ವಿಷಭಯನಿವಾರಣೆ.**

ಶ್ಲೋಕ–೨೧

ಪರಮಾನಂದ ನೀಡುವ ದೇವಿಯ ಕಲೋಪಾಸನೆ

ತಟಿಲ್ಲೇಖಾತನ್ವೀಂ ತಪನಶಶಿವೈಶ್ವಾನರಮಯೀಂ
ನಿಷಣ್ಣಾಂ ಷಣ್ಣಾಮಪ್ಯುಪರಿ ಕಮಲಾನಾಂ ತವ ಕಲಾಮ್ ।
ಮಹಾಪದ್ಮಾಟವ್ಯಾಂ [1]ಮೃದಿತಮಲಮಾಯೇನ ಮನಸಾ
ಮಹಾಂತಃ ಪಶ್ಯಂತೋ ದಧತಿ[2] ಪರಮಾಹ್ಲಾದಲಹರೀಮ್ ॥ ೨೧ ॥

ಪಾಠಾಂತರ

೧. (ಮೃದಿತ ಮಲಮಾಯೇನ) = ಮೃದುತಮಮಮಾಯೇನ (ಸು)

೨. ಪರಮಾಹ್ಲಾದ ಲಹರೀಮ್ = ಪರಂ ಆಹ್ಲಾದಲಹರೀಂ (ವ)

ಪದವಿಭಾಗ

(ತಟಿಲ್ಲೇಖಾತನ್ವೀಂ) = ತಟಿತ್ + ಲೇಖಾತನ್ವೀಂ ತಪನಶಶಿವೈಶ್ವಾನರಮಯೀಂ, ನಿಷಣ್ಣಾಂ, (ಷಣ್ಣಾಮಪ್ಯುಪರಿ) = ಷಣ್ಣಾಮ್+ಅಪಿ+ಉಪರಿ, ಕಮಲಾನಾಂ, ತವ, ಕಲಾಮ್, ಮಹಾಪದ್ಮಾಟವ್ಯಾಂ, ಮೃದಿತಮಲಮಾಯೇನ, ಮನಸಾ, ಮಹಾಂತಃ, (ಪಶ್ಯಂತೋ) = ಪಶ್ಯಂತಃ, ದಧತಿ (ಪರಮಾಹ್ಲಾದಲಹರೀಮ್) = ಪರಮ+ಆಹ್ಲಾದ ಲಹರೀಂ

ಅನ್ವಯಾರ್ಥ

(ಹೇ ಭಗವತಿ)	(ಸರ್ವಜ್ಞಳಾದ ಎಲೈ ದೇವಿಯೆ,)
ತಟಿಲ್ಲೇಖಾತನ್ವೀಂ	(ತಟಿತ್+ಲೇಖಾ+ತನ್ವೀಂ) ಮಿಂಚಿನ ಗೆರೆಯಂತೆ – ಸೂಕ್ಷ್ಮವಾಗಿಯೂ (ಉದ್ದವಾಗಿಯೂ) ಇರುವ
ತಪನ ಶಶಿವೈಶ್ವಾನರಮಯೀಂ	ಸೂರ್ಯ–ಚಂದ್ರ–ಅಗ್ನಿ ಸ್ವರೂಪಳಾಗಿ
ನಿಷಣ್ಣಾಂ	ಇರುವ
ಷಣ್ಣಾಂ	ಆರು (ಆರುಕಮಲಗಳ ಮತ್ತು ಗ್ರಂಥಿತ್ರಯದ ಮೇಲೆ)

ಕಮಲಾನಾಂ ಅಪಿ ಉಪರಿ	(ಮೂಲಾಧಾರಾದಿ) ಕಮಲಗಳ (ಮತ್ತು ರುದ್ರಗ್ರಂಥಿ, ಬ್ರಹ್ಮಗ್ರಂಥಿ, ವಿಷ್ಣುಗ್ರಂಥಿಗಳ) ಮೇಲು ಭಾಗದಲ್ಲಿಯೂ
ಮಹಾಪದ್ಮಾಟವ್ಯಾಂ	(ಮಹಾಪದ್ಮ+ಅಟವ್ಯಾಂ) ಸಹಸ್ರದಳವುಳ್ಳ ಕಮಲಗಳ–ವನದಲ್ಲಿ
(ನಿಷಣ್ಣಾಂ)	ಇರುವ
ತವ	ನಿನ್ನ
ಕಲಾಂ	ಸಾದಾಖ್ಯೆಯೆಂಬ ಕಲೆಯನ್ನು
ಮೃದಿತ ಮಲ ಮಾಯೇನ	ನಾಶಪಡಿಸಲ್ಪಟ್ಟ–ಕಾಮಕ್ರೋಧಾದಿ ಮಲಗಳೂ–ಅವಿದ್ಯಾ ಮುಂತಾದ ಕ್ಲೇಶಗಳೂ ಉಳ್ಳ (ಕಾಮಕ್ರೋಧಾದಿಗಳಿಂದಲೂ–ಅವಿದ್ಯಾ–ಅಸ್ಮಿತ ಅಹಂಕಾರ–ರಾಗ–ದ್ವೇಷಗಳೆಂಬ ಪಂಚಕ್ಲೇಶಗಳಿಂದಲೂ ರಹಿತವಾದ)
ಮನಸಾ ಪಶ್ಯಂತಃ	ಮನಸ್ಸಿನಿಂದ (ಅಂತಃಕರಣದಿಂದ) ನೋಡುತ್ತಿರುವ
ಮಹಾಂತಃ	ಮಹಾತ್ಮರು
ಪರಮಾಹ್ಲಾದಲಹರೀಂ	ಪರಮಾನಂದದ–ಪ್ರವಾಹವನ್ನು (ಬ್ರಹ್ಮಾನಂದವನ್ನು)
ದಧತಿ	ಹೊಂದುತ್ತಾರೆ.

ತಾತ್ಪರ್ಯ

ಸರ್ವಜ್ಞಳಾದ ಎಲೈ ದೇವಿಯೆ, ಮಿಂಚಿನಗೆರೆಯಂತೆ ಸೂಕ್ಷ್ಮವಾಗಿಯೂ ಉದ್ದವಾಗಿಯೂ ಇರುವ ಆಜ್ಞಾಚಕ್ರದಲ್ಲಿ ಮಿಂಚಿನಿಂತೆ ಕ್ಷಣಕಾಲ ದರ್ಶನವಾಗುವ, ಸೂರ್ಯ ಚಂದ್ರ ಅಗ್ನಿಸ್ವರೂಪವಾಗಿರುವ, ಮೂಲಾಧಾರಾದಿ ಕಮಲಗಳ ಮೇಲೆ ಮತ್ತು ರುದ್ರಗ್ರಂಥಿ, ಬ್ರಹ್ಮಗ್ರಂಥಿ, ವಿಷ್ಣುಗ್ರಂಥಿಗಳ ಮೇಲುಭಾಗದ ಸಹಸ್ರದಳವುಳ್ಳ ಕಮಲವನದಲ್ಲಿ ನೆಲೆಸಿರುವ; ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಅರಿಷಡ್ವರ್ಗಗಳನ್ನು ಗೆದ್ದು, ಅವಿದ್ಯಾ, ಅಸ್ಮಿತ, ಅಹಂಕಾರ, ರಾಗ, ದ್ವೇಷಗಳೆಂಬ ಪಂಚಕ್ಲೇಶರಹಿತರಾಗಿ ಶುದ್ಧ ಅಂತಃಕರಣದಿಂದ ನಿನ್ನ ಸಾದಾಖ್ಯಾ ಎಂಬ ಬೈಂದವಕಲೆಯನ್ನು ಧ್ಯಾನಿಸುವ ಮಹಾತ್ಮರಾದ ಸಾಧಕರು, ಪರಮಾನಂದಕರ ಪ್ರವಾಹದಂತಿರುವ ಬ್ರಹ್ಮಾನಂದವನ್ನು ಹೊಂದುತ್ತಾರೆ.

ಪದ್ಯಾನುವಾದ

ಸೆಳೆಮಿಂಚಿನೊಡಲವಳು, ಸೂರ್ಯ ಚಂದ್ರಾಗ್ನಿಸ್ವ-
ರೂಪತೇಜೋಮಯೀ, ಷಟ್‌ಕಮಲಗಳ ಮೇಲೆ
ಮೆರೆವ ಸಾಹಸ್ರಕಮಲದ ನಡುವೆ ನೆಲಸಿರುವ ತಾಯೆ, ನಿನ್ನಯ ಕಲೆಯನ್ನು,-
ತನ್ನೊಳಗಿನ ಜ್ಞಾನ ಕಾಮ ಮದ ಮಾತ್ಸರ್ಯ
ಮೊದಲಪ್ಪ ಕೊಳೆಯೆಲ್ಲವನು ನೀಗಿಕೊಂಡ ಮನ-
ದಿಂದ ಕಾಣುವ ಮಹಾನ್ತನು ಪಡೆವನಲ್ತೆ ಪರಮಾಹ್ಲಾದಲಹರಿಯನ್ನು
॥ ೨೧ ॥

ಟಿಪ್ಪಣಿಗಳು

೧. ಸಾರವಿಚಾರ

ಈ ಶ್ಲೋಕದಲ್ಲಿ ಜೀವನ್ಮುಕ್ತಿಯನ್ನು ಸಿದ್ಧಿ ಪಡೆಯಲು ಸಾಧನವಾದ ಭಾವನಾ ವಿಶೇಷವನ್ನು ವರ್ಣಿಸಲಾಗಿದೆ. ಈ ಮೊದಲಿನ ಶ್ಲೋಕಗಳಲ್ಲಿ ಕವಿತ್ವ, ವಕ್ತೃತ್ವ, ಕಾವ್ಯಕರ್ತೃತ್ವ, ಸ್ತ್ರೀವಶೀಕರಣ ಮೊದಲಾದವುಗಳು ದೇವಿಯ ಆರಾಧನೆಯಿಂದ ದೊರಕುವುದನ್ನು ವರ್ಣಿಸಲಾಗಿದೆ. ಈ ಶ್ಲೋಕದಲ್ಲಿ ಶ್ರೀ ದೇವಿಯ ಕೃಪೆಯಿಂದ, ಶ್ರೀ ಚಕ್ರಾರಾಧನೆಯಿಂದ, ಪರಮಾನಂದ ಸ್ಥಿತಿಯನ್ನು ಹೊಂದುವ ಬಗೆಯನ್ನು ತಿಳಿಸಲಾಗಿದೆ.

೨. ಸಾದಾಖ್ಯಕಲೆ

ಷಟ್‌ಚಕ್ರ ಕಮಲಗಳ ಮೇಲೆ, ಗ್ರಂಥಿತ್ರಯಗಳ ಮೇಲೆ ಸಹಸ್ರಾರಕಮಲವಿದೆ. ಅದರಲ್ಲಿ ಚಂದ್ರಮಂಡಲದ ಅಂಶವಾಗಿ ಸ್ಥಿರರೂಪದಲ್ಲಿ ಇರುವ ಹದಿನಾರನೆಯ ಕಳೆಯನ್ನೇ, 'ಸಾದಾ' ಅನ್ನುತ್ತಾರೆ. ಸಮಯಾ, ಧ್ರುವಾ ಎಂತಲೂ ಹೇಳುತ್ತಾರೆ. ಈ ಕಲೆಯೇ ಶ್ರೀ ದೇವಿ ಆಗಿದ್ದಾಳೆ. ಈ ರೀತಿ ಸಾದಾಖ್ಯ ಕಲಾರೂಪಿಣಿಯಾದ ದೇವಿಯನ್ನು ಆರಾಧಿಸಿದವರು ಪರಮಾನಂದ ಹೊಂದುತ್ತಾರೆ.

(ಶೇ-ಪುಟ ೮೩)

೩. **ತಪನಶಶಿವೈಶ್ವಾನರಮಯೀಂ**

ಕುಂಡಲಿನೀಶಕ್ತಿ ಸಹಸ್ರಾರಕಮಲದತ್ತ ಸಾಗುವಾಗ ಅಗ್ನಿಸ್ಥಾನದ ರುದ್ರಗ್ರಂಥಿಯನ್ನು ಸೂರ್ಯಸ್ಥಾನದ ವಿಷ್ಣುಗ್ರಂಥಿಯನ್ನು ಚಂದ್ರಸ್ಥಾನದ ಬ್ರಹ್ಮಗ್ರಂಥಿಯನ್ನು ದಾಟಿಕೊಂಡು ಹೋಗುತ್ತದೆ. ಆದಕಾರಣ ಸಾದಾಖ್ಯ ಕಲೆಯನ್ನು ಸೂರ್ಯಚಂದ್ರಾನಲಕಲಾತ್ಮಕವಾದುದು ಎಂದು ಗ್ರಹಿಸಬೇಕು. ಈ ಕಾರಣದಿಂದ ತಪನಶಶಿ ವೈಶ್ವಾನರರೂಪಳು ಶ್ರೀದೇವಿ ಎಂದು ಹೇಳಲಾಗಿದೆ.

೪. ಆದಿಶಂಕರರ ಭವಾನಿ ಭುಜಂಗಪ್ರಯಾತದ ೨ನೆಯ ಶ್ಲೋಕದಲ್ಲಿ ಇದೇ ಭಾವವನ್ನು ವರ್ಣಿಸಲಾಗಿದೆ. "ಕೋಟಿಸೂರ್ಯಪ್ರಭೆಯಿಂದ ಉದಯವಾಗುತ್ತಿರುವ ಬಾಲಸೂರ್ಯನನ್ನು ಹೋಲುವ ಅರುಣವರ್ಣ ಶರೀರದಿಂದ, ಕಾಮಾರಿಯಾದ ಈಶ್ವರನ ಹೃದಯಕ್ಕೆ ಆಹ್ಲಾದವನ್ನುಂಟು ಮಾಡುವ ಮಹಾಶೃಂಗಾರ ಸೌಂದರ್ಯಲಹರಿಯಾಗಿ ಭಕ್ತಜನರಪಾಲಿಗೆ ಮಹಾತೇಜೋಮೂರ್ತಿ ಜಗನ್ಮಾತೆಯಾಗಿ, ಸಹಸ್ರಾರ ಪದ್ಮವೆನ್ನುವ, ಮಹಾಪದ್ಮ ಚಕ್ರದಲ್ಲಿನ ಕೇಸರಂಗಳು (ಕಿಂಜಲ್ಕಗಳು) ಕಿರಣಗಳ ಮಧ್ಯೆ ನಿನ್ನ ನಿರಾಕಾರ ಸ್ವರೂಪವಾದ ಶ್ರೀ ಚಕ್ರದೊಳಗಿನ ತ್ರಿಕೋಣಚಕ್ರದಲ್ಲಿ ವಿಮರ್ಶಾರೂಪಿಣಿಯಾಗಿ ವಿರಾಜಿಸುತ್ತಿರುವ ತಾಯಿ ಭವಾನೀ. ನಿನ್ನನ್ನೇ ಶರಣುಹೊಂದಿ ಭಜಿಸುತ್ತಿದ್ದೇನೆ"

(ಪ–ಪುಟ ೩೫೨)


೫ ತಪನಶಶಿ ವೈಶ್ವಾನರ ಮಯೀಂ ಎಂಬ ಮಾತಿಗೆ ಸೌಂದರ್ಯ ಲಹರಿಯ ಡಿಂಡಿಮ ವ್ಯಾಖ್ಯಾನಕಾರ ಹೀಗೆ ವ್ಯಾಖ್ಯಾನಿಸಿದ್ದಾನೆ :

"ತಪನ ಎಂದರೆ ಅಹಂಕಾರ ಸೂರ್ಯ ; ವೈಶ್ವಾನರ ಎಂದರೆ ಅಗ್ನಿ ಆಹಾರವನ್ನು ಪರಿಹಾರ ಮಾಡತಕ್ಕ ತೇಜಸ್ಸು, ಶಶಿ (ಚಂದ್ರ) ದೇಹವನ್ನು ಕಾಪಾಡತಕ್ಕ ರಸವಿಶೇಷ. ಬೆಳಕಿನ ಈ ಮೂರು ರೂಪಗಳು ಸ್ಥೂಲ, ಸೂಕ್ಷ್ಮ ದೇಹಗಳಿಗೆ ಕಾರಣವಾಗುತ್ತವೆ. ಬೆಳಕಿನ ಈ ಮುಬ್ಬಗೆ (೩ ರೂಪಗಳು) ಒಂದು ಇನ್ನೊಂದಾಗಬಲ್ಲವು. ಆಜ್ಞಾಚಕ್ರದ ಕ್ಷಣ ಜ್ಞಾನದಲ್ಲಿ ಗೋಚರಿಸುವ ಇದರಾಚೆಗೆ ಸಾವಿರ ತಾವರೆಗಳ ಕೊಳ (ಮಹಾಪದ್ಮಾಟವಿ ಸಹಸ್ರಾರ ಕೆಂದಾವರೆಯ ತೋಟವಿದೆ). ಆಜ್ಞಾ ಚಕ್ರದಲ್ಲಿ ಕಂಡದ್ದು

ಈ ಸಾವಿರದಲ್ಲಿ ಒಂದು. ಮಹಾಂತರು ಈ ವಿಸ್ಮಯಾನಂದವನ್ನೇ "ಪರಮಾಹ್ಲಾದ ಲಹರೀಂ" ಪರಮಾನಂದದ ಹೊನಲು ಎಂದು ಕರೆದರು.

(ತೋಳ್ಪಾಡಿ–ಪುಟ ೨೨೦)

ಯಂತ್ರಾರಾಧನೆ (ಶ್ಲೋಕ–೨೧)



ಯಂತ್ರರಚನೆ: ಚಿನ್ನ, ಅಥವಾ ಬೆಳ್ಳಿ ಅಥವಾ ತಾಮ್ರದ ತಗಡಿನಲ್ಲಿ ಬರೆಯಬೇಕು ಚಿತ್ರದಲ್ಲಿರುವಂತೆ ರೇಖಾಯುಕ್ತವಾದ ವಲಯದೊಳಗೆ ಬೀಜಾಕ್ಷರಗಳಿರಬೇಕು.

ಪೂಜೆ: ಪಶ್ಚಿಮಾಭಿಮುಖವಾಗಿ ಕುಳಿತು ಲಲಿತಾ ಅಷ್ಟೋತ್ತರ ಅರ್ಚನೆ ಕುಂಕುಮದಿಂದ ಮಾಡಬೇಕು.

ನೈವೇದ್ಯ: ಬಾಳೆಹಣ್ಣು, ಜೇನುತುಪ್ಪ, ಹಣ್ಣುಗಳು, ಕಲ್ಲುಸಕ್ಕರೆ, ಬೆಲ್ಲ.

ಜಪ: ೪೫ ದಿನಗಳ ಕಾಲ ದಿನಕ್ಕೆ ೧೦೦೦ ಸಲ ಶ್ಲೋಕವನ್ನು ಪಠಿಸಬೇಕು.

ಫಲ : **ಸಕಲಜನವಿರೋಧನಾಶ ಮತ್ತು ಜನವಶೀಕರಣ.**

ಶ್ಲೋಕ-೨೨

ಸಾಯುಜ್ಯ ಮೋಕ್ಷ ನೀಡುವ ದೇವಿಯ ಧ್ಯಾನವಿಶೇಷ

ಭವಾನಿ ತ್ವಂ ದಾಸೇ ಮಯಿ ವಿತರ ದೃಷ್ಟಿಂ ಸಕರುಣಾಂ
ಇತಿ ಸ್ತೋತುಂ ವಾಂಛನ್ ಕಥಯತಿ ಭವಾನಿ ತ್ವಮಿತಿ ಯಃ ।
ತದೈವ ತ್ವಂ ತಸ್ಮೈ ದಿಶಸಿ ನಿಜಸಾಯುಜ್ಯಪದವೀಂ
ಮುಕುಂದಬ್ರಹ್ಮೇಂದ್ರಸ್ಫುಟಮಕುಟನೀರಾಜಿತಪದಾಮ್ ॥ ೨೨ ॥

ಪದವಿಭಾಗ

ಭವಾನಿ, ತ್ವಂ, ದಾಸೇ, ಮಯಿ, ವಿತರ, ದೃಷ್ಟಿಮ್, ಸಕರುಣಾಂ, ಇತಿ, ಸ್ತೋತುಂ, ವಾಂಛನ್, ಕಥಯತಿ, ಭವಾನಿ, (ತ್ವಮಿತಿ)=ತ್ವಂ + ಇತಿ, ಯಃ (ತದೈವ)=ತದಾ+ಏವ, ತ್ವಮ್, ತಸ್ಮೈ, ದಿಶಸಿ, ನಿಜಸಾಯುಜ್ಯಪದವೀಂ, ಮುಕುಂದಬ್ರಹ್ಮ+ಇಂದ್ರ + ಸ್ಫುಟಮಕುಟ+ ನೀರಾಜಿತಪದಾಮ್. = ಮುಕುಂದಬ್ರಹ್ಮೇಂದ್ರಸ್ಫುಟಮಕುಟನೀರಾಜಿತಪದಾಮ್.

ಅನ್ವಯಾರ್ಥ

(ಹೇ) ಭವಾನಿ	ಎಲೈ ಶಿವಪತ್ನಿಯಾದ ದೇವಿಯೆ
ತ್ವಂ	ನೀನು
ದಾಸೇ ಮಯಿ	ಸೇವಕನಾದ ನನ್ನಲ್ಲಿ
ಸಕರುಣಾಂ ದೃಷ್ಟಿಂ	ದಯೆಯಿಂದ ಕೂಡಿದ ಕಟಾಕ್ಷವನ್ನು
ವಿತರ (ಇತಿ)	ಕೊಡು (ಇಡು)- ಹೀಗೆಂಬುದಾಗಿ
ಸ್ತೋತುಂ	ಸ್ತೋತ್ರ ಮಾಡುವುದಕ್ಕೋಸ್ಕರ
ವಾಂಛನ್	ಅಪೇಕ್ಷಿಸುತ್ತಾ
ಭವಾನಿ ತ್ವಂ ಇತಿ	(ನೀನೇ ನಾನಾಗಿದ್ದೇನೆ ಎಂಬ ಅರ್ಥವನ್ನು ಸೂಚಿಸುವ) ಭವಾನಿ ತ್ವಂ ದಾಸೇ ಮಯಿ ವಿತರದೃಷ್ಟಿಂ ಕರುಣಾಂ ಎಂಬ ವಾಕ್ಯದಲ್ಲಿ ಭವಾನೀತ್ವಂ ಎಂಬುದನ್ನಷ್ಟೇ

ಯಃ ಕಥಯತಿ	ಯಾವನು ಹೇಳುತ್ತಾನೋ
ತಸ್ಮೈ	(ಅಷ್ಟರಲ್ಲೇ) ಅವನಿಗೆ
ತ್ವಂ ತದೈವ	ನೀನು ಆಗಲೇ
ಮುಕುಂದಬ್ರಹ್ಮೇಂದ್ರ	ವಿಷ್ಣು–ಬ್ರಹ್ಮ–ಇಂದ್ರ–ಇವರುಗಳ ಸ್ಪಷ್ಟವಾದ
ಸ್ಫುಟಮಕುಟ ನೀರಾಜಿತಪದಾಂ	ಕಿರೀಟಗಳಿಂದ –ಆರತಿ ಎತ್ತಲ್ಪಟ್ಟ (ನೀರಾಜನ ಮಾಡಲ್ಪಟ್ಟ) ಪಾದಗಳುಳ್ಳ ನೀನು
ನಿಜಸಾಯುಜ್ಯ ಪದವೀಂ	ನಿನ್ನದಾದ – ಸಾಯುಜ್ಯ ಪದವಿಯನ್ನು
ದಿಶಸಿ	ಕೊಡುತ್ತೀಯೆ

ತಾತ್ಪರ್ಯ

ಎಲೈ ಶಿವಪತ್ನಿಯಾದ ದೇವಿಯೆ, ನೀನು ಸೇವಕನಾದ ನನ್ನಲ್ಲಿ ಕರುಣಾಪೂರ್ಣ ನೋಟ ತೋರಬೇಕು. (ಭವಾನಿ ತ್ವಂ ಮಯಿ ಸಕರುಣಾಂ ದೃಷ್ಟಿಂ ವಿತರ ಇತಿ) ಎಂದು ಹೇಳಲು ಹೊರಟು, ಭವಾನಿ ತ್ವಂ ಎಂದು ವಾಕ್ಯದ ಎರಡು ಪದಗಳನ್ನು ಹೇಳುವಷ್ಟರಲ್ಲೇ (ಆ ವಾಕ್ಯವನ್ನು ಪೂರೈಸುವ ಮೊದಲೇ ಎಂದರೆ ತನ್ನ ಬಿನ್ನಹವನ್ನು ಮುಂದಿಡಲು ಪ್ರಾರಂಭಮಾಡಿದ ಕೂಡಲೇ) ವಿಷ್ಣು ಬ್ರಹ್ಮ ಇಂದ್ರಾದಿಗಳ ಕಿರೀಟಗಳಿಂದ ಆರತಿ ಎತ್ತಿಸಿಕೊಳ್ಳುವ ಪಾದಗಳುಳ್ಳ ನೀನು ಆ ಭಕ್ತನ ಕೋರಿಕೆಯನ್ನು, ನೆರವೇರಿಸುತ್ತೀಯೆ.

ಪದ್ಯಾನುವಾದ

"ಹೇ ಭವಾನೀ ನೀನು ದಾಸನಾದೆನ್ನಲ್ಲಿ
ನಿನ್ನ ಕರುಣಾಪೂರ್ಣ ದೃಷ್ಟಿಯನ್ನಿರಿಸೆ"ಂದು
ಸಂಪ್ರಾರ್ಥಿಸಲ್ಕಿಚ್ಛಿಸುತ 'ಭವಾನೀ ನೀ...' ಎನುತ ನುಡಿಯುವನಿತರಲ್ಲಿ
ಅವನಿಗಾಗಲೆ ನೀನು ಬ್ರಹ್ಮೇಂದ್ರ ವಿಷ್ಣುಗಳ
ತೊಳಗುವ ಕಿರೀಟಗಳು ಬೆಳಗುವಾರತಿಯಿಂದ
ಹೊಳೆವ ನಿನ್ನಡಿಗಳೆಡೆಯಲ್ಲಿ ಸಾಯುಜ್ಯಪದವಿಯನು ದಯೆಗೈವೆ ಮುದದಿ
॥ ೨೨ ॥

ಟಿಪ್ಪಣಿಗಳು

೧. **ಭವಾನಿ ತ್ವಂ**

"ಅನಿಚ್ಛಯಾऽಪಿ ಸಂಸ್ಪೃಷ್ಟೋ ದಹತ್ಯೇವಹಿ ಪಾವಕಃ" (ಇಚ್ಛೆಯಿಲ್ಲದಿದ್ದರೂ ಕೂಡ ಬೆಂಕಿಯನ್ನು, ಮುಟ್ಟಿದರೆ ಅದು ಸುಟ್ಟೇ ಸುಡುತ್ತದೆ) ಎಂಬ ದೃಷ್ಟಾಂತಕ್ಕೆ ಅನುಸಾರವಾಗಿ ವಿವಕ್ಷೆಯಿಲ್ಲದೆ ಉಚ್ಚಾರಣೆ ಮಾಡಿದ ಮಹಾವಾಕ್ಯದ (ಭಾಗವು) ಫಲದಾಯಕ ವಾಗಿರುತ್ತದೆ. ಇದು ದೇವಿಯ ಹಿರಿಮೆ.

(ಶೇ–ಪುಟ ೮೫)

೨. **ಮುಕುಂದಬ್ರಹ್ಮೇಂದ್ರಸ್ಫುಟಮಕುಟನೀರಾಜಿತಪದಾಂ**

ಪದಾಂ ವಿಷ್ಣು, ಬ್ರಹ್ಮ, ಇಂದ್ರ ಇವರು ತಮ್ಮ ರತ್ನಖಚಿತ ಕಿರೀಟಗಳಿಂದ ಶಿರಗಳನ್ನು ಬಾಗಿಸುತ್ತಾ ನೀರಾಜನಗಳನ್ನು (ಕರ್ಪೂರದಾರತಿ) ನೀಡುತ್ತಾ ತಮಗೆ ಸಾಯುಜ್ಯ ನೀಡುತಾಯೆ ಎಂದು ಬೇಡಿಕೊಳ್ಳುತ್ತಿದ್ದರೂ ಅವರಿಗೆ ಸಾಯುಜ್ಯ ಪದವಿ ಲಭ್ಯವಾಗಿಲ್ಲ. ಏಕೆಂದರೆ ಅಣಿಮಾದಿ ಅಷ್ಟಸಿದ್ಧಿಗಳಿಂದ ಸಂದ ದಿವ್ಯಶಕ್ತಿಗಳಲ್ಲಿ ಮೋಹವಿದೆ.

ಆದರೆ ಭೋಗಗಳಲ್ಲಿ ಅನಾಸಕ್ತಿ, ದೊರೆತದ್ದರಲ್ಲಿ ತೃಪ್ತಿ, ಜಗನ್ಮಾತೆಯ ಚರಣಾರವಿಂದಗಳಲ್ಲಿ ನಿಶ್ಚಲವಾದ ಮನಸ್ಸುಳ್ಳ ದಾಸರಿಗೆ (ಭಕ್ತರಿಗೆ) 'ಭವಾನಿ' ಎನ್ನುವ ಹೆಸರನ್ನು ಉಚ್ಚರಿಸುತ್ತಲೇ, ಸಾಯುಜ್ಯ ಪ್ರಸಾದವಾಗುತ್ತದೆ. ಆ ದೇವಿಯ ಕರುಣೆ ಅಷ್ಟು ಅಪಾರವಾದುದು.

(ಪ–ಪುಟ ೨೨೫)

೩. ಪರಮೇಶ್ವರಿಯು– ಭವಾನಿ ಎಂದರೆ ಭವನಿಗೆ (ಈಶ್ವರನಿಗೆ) ಚೇತನಶಕ್ತಿಯಾಗಿರುವಳು, ಎಂದರ್ಥ. ಯಾರು ಈ ವಿಶ್ವದ ಎಲ್ಲಾ ವಸ್ತುಗಳ ಸೃಷ್ಟಿ, ಆಶ್ರಯ ಮತ್ತು ನಾಶಕ್ಕೆ ಕಾರಣನಾಗುತ್ತಾನೆಯೋ ಅವನಿಗೆ ಭವ ಎನ್ನುತ್ತಾರೆ. ಆ ಭವನಿಗೆ ಚೇತನಶಕ್ತಿ ನೀಡುವವಳು ಭವಾನಿ.

(ಶ್ರೀ – ಪುಟ ೧೩೬)

೪. ಲಲಿತಾಸಹಸ್ರನಾಮದಲ್ಲಿ ದೇವಿಯನ್ನು ಅವ್ಯಾಜಕರುಣಾಮೂರ್ತಿ (ನಾಮ ೯೯೨) ಎಂದು ಕರೆದಿದ್ದಾರೆ ಶಂಕರರು.

(ಲ–ಜೋ ಪುಟ ೩೧೧)

೪. **ನಿಜಸಾಯುಜ್ಯ ಪದವೀಂ ದಿಶಸಿ**

(ನಿಜಸಾಯುಜ್ಯ ಮುಕ್ತಿಯನ್ನು ಕೊಡುತ್ತೀಯೆ) ಮುಕ್ತಿ ೪ ಬಗೆ ೧) ಸಾಲೋಕ್ಯ ೨) ಸಾಮಿಪ್ಯ ೩) ಸಾರೂಪ್ಯ ೪) ಸಾಯುಜ್ಯ.

ಪರಮಾತ್ಮನ ಲೋಕವನ್ನು ಸೇರುವುದು ಸಾಲೋಕ್ಯಮುಕ್ತಿ ಮತ್ತು ಪರಮಾತ್ಮನಂತೆ ಸಮಾನರೂಪವನ್ನು ಹೊಂದುವುದು ಸಾರೂಪ್ಯ ಮುಕ್ತಿ. ಪರಮಾತ್ಮನ ಸನ್ನಿಧಿಯನ್ನು ಸೇರುವುದು ಸಾಮೀಪ್ಯ ಮುಕ್ತಿ ಮತ್ತು ಮತ್ತು ಪರಮಾತ್ಮನಲ್ಲೇ ಏಕೀಭವಿಸುವುದು ಸಾಯುಜ್ಯ ಮುಕ್ತಿ. ಈ ೪ರಲ್ಲಿ ಸಾಯುಜ್ಯ ಮುಕ್ತಿ ಸರ್ವಶ್ರೇಷ್ಠ ಮುಕ್ತಿಯಾಗಿದೆ.

ಲಲಿತಾ ಸಹಸ್ರನಾಮದಲ್ಲಿ 'ದಯಾಮೂರ್ತಿ, (೫೮೧) ಸಾಂದ್ರ ಕರುಣಾ (೧೯೭)' ಎಂಬ ಮಾತಿನ ಭಾವ ಇದೇ ಆಗಿದೆ.

(ಪೋ–ಪುಟ ೧೨೨)

೫. ಬ್ರಹ್ಮೇಂದ್ರಾದಿಗಳಿಗೆ ದೇವಿಯ ಪಾದಸೇವನೆಯಿಂದ ದೊರೆಯುವ ಮುಕ್ತಿ ಭಕ್ತನಿಗೆ ಸ್ತೋತ್ರ ಸೇವೆಯಿಂದಲೇ ದೊರೆಯುತ್ತದೆ ಎಂದು ಈ ಶ್ಲೋಕದ ಭಾವ.

(ಪೋ–ಪುಟ ೧೨೨)

೬. ಶಿವಾನಂದ ಲಹರಿಯಲ್ಲಿ (ಶ್ಲೋಕ ೨೮) ಆದಿಶಂಕರರು ಹೀಗೆ ಹೇಳಿದ್ದಾರೆ.

ಸಾರೂಪ್ಯಂ ತವ ಪೂಜನೇ ಶಿವ ಮಹಾದೇವೇತಿ ಸಂಕೀರ್ತನೇ
ಸಾಮಿಪ್ಯಂ ಶಿವಭಕ್ತಿ ಧುರ್ಯಜನತಾ ಸಾಂಗತ್ಯ ಸಂಭಾಷಣೇ
ಸಾಲೋಕ್ಯಂ ಚ ಚರಾಚರಾತ್ಮಕ ತನುಧ್ಯಾನೇ ಭವಾನೀಪತೇ
ಸಾಯುಜ್ಯಂ ಮಮ ಸಿದ್ಧಿಮತ್ರ ಭವತಿ ಸ್ವಾಮಿನ್ ಕೃತಾರ್ಥೋಽಸ್ಮ್ಯಹಮ್

(ಸ್ವಾಮಿ ಭವಾನೀಪತಿಯೆ, ನಿನ್ನನ್ನು ಪೂಜಿಸುವುದರಿಂದ ಸಾರೂಪ್ಯ; ಶಿವಮಹಾದೇವ ಎಂದು ಕೀರ್ತನೆ ಮಾಡುವುದರಿಂದ ಸಾಮಿಪ್ಯ; ಶ್ರೇಷ್ಠರಾದ ಶಿವಭಕ್ತರೊಡನೆ ಕಲೆತು ಸಂಭಾಷಣೆ ಮಾಡುವುದರಿಂದ ಸಾಲೋಕ್ಯ; ಮತ್ತು ಚರಾಚರಾತ್ಮಕವಾದ ನಿನ್ನ ಸ್ವರೂಪವನ್ನು ಧ್ಯಾನ ಮಾಡುತ್ತಿರುವುದರಿಂದ ಸಾಯುಜ್ಯ ಮುಕ್ತಿಗಳು ನನಗೆ ಇಲ್ಲಿಯೇ ಲಭಿಸುತ್ತಿರುವಾಗ ನಾನೇ ಧನ್ಯನು)

(ತು–ಪುಟ ೧೪೬)

ಯಂತ್ರಾರಾಧನೆ (ಶ್ಲೋಕ–೨೨)



ಯಂತ್ರರಚನೆ : ಚಿನ್ನದಲ್ಲಿ ಶ್ರೀಚಕ್ರವನ್ನು ಕೆತ್ತಿಸಬೇಕು. ನಾಲ್ಕು ಊರ್ಧ್ವಮುಖ ತ್ರಿಕೋಣಗಳು ಮತ್ತು ಐದು ಅಧೋಮುಖತ್ರಿಕೋಣಗಳು ಇರಬೇಕು. ದೇವಾಲಯ, ನದಿತೀರ ಅಥವಾ ಪುಣ್ಯ ಕ್ಷೇತ್ರಗಳಲ್ಲಿ ಅನುಷ್ಠಾನ ಮಾಡಬೇಕು.

ಪೂಜೆ : ಕೆಂಪು ಹೂಗಳಿಂದ ಲಲಿತಾಸಹಸ್ರನಾಮಾರ್ಚನೆ ಮಾಡಬೇಕು.

ನೈವೇದ್ಯ : ಜೇನುತುಪ್ಪ, ತ್ರಿಮಧುರ, ಮೊಸರು, ಹಾಲು, ಚಿತ್ರಾನ್ನ

ಜಪ : ಪೂರ್ವಾಭಿಮುಖವಾಗಿ ಕುಳಿತು ಶ್ಲೋಕವನ್ನು ೪೫ ದಿನಗಳ ಕಾಲ ದಿನಕ್ಕೆ ೧೦೦೦ ಬಾರಿ ಜಪಿಸಬೇಕು.

ಫಲ : **ಐಹಿಕ ಸರ್ವಾಭೀಷ್ಟಸಿದ್ಧಿ, ಸಕಲೈಶ್ವರ್ಯ, ಸಾಮ್ರಾಜ್ಯ ಸಿದ್ಧಿ.**



ಶ್ಲೋಕ–೨೩

ಶಕ್ತಿಸ್ವರೂಪಿಣಿಯನ್ನು ಶಿವಮಯವಾಗಿ ಕಾಣುವ ವಿಭಾಗ

ತ್ವಯಾ ಹೃತ್ವಾ ವಾಮಂ [1]ವಪುರಪರಿತೃಪ್ತೇನ ಮನಸಾ
ಶರೀರಾರ್ಧಂ ಶಂಭೋರಪರಮಪಿ ಶಂಕೇ ಹೃತಮಭೂತ್
[2]ಯದೇತತ್ತ್ವದ್ರೂಪಂ ಸಕಲಮರುಣಾಭಂ ತ್ರಿನಯನಂ
ಕುಚಾಭ್ಯಾಮಾನಮ್ರಂ ಕುಟಿಲಶಶಿಚೂಡಾಲಮಕುಟಮ್ ॥ ೨೩ ॥

ಪಾಠಾಂತರ

೧. (ವಪುರಪರಿತೃಪ್ತೇನ) = ವಪುರಪರಿತುಷ್ಟೇನ (ಸು)
೨. (ಯದೇತತ್ ತ್ವದ್ರೂಪಂ) = ತಥಾಹಿ ತ್ವದ್ರೂಪಂ

ಪದವಿಭಾಗ

ತ್ವಯಾ, ಹೃತ್ವಾ, ವಾಮಂ, (ವಪುರಪರಿತೃಪ್ತೇನ) = ವಪುಃ+ಅಪರಿತೃಪ್ತೇನ, ಮನಸಾ, (ಶರೀರಾರ್ಧಂ), ಶರೀರ+ಅರ್ಧಂ, (ಶಂಭೋರಪರಮಪಿ) = ಶಂಭೋಃ+ ಅಪರಮ್+ಅಪಿ, ಶಂಕೇ, (ಹೃತಮಭೂತ್)=ಹೃತಂ+ಅಭೂತ್, (ಯದೇತತ್) = ಯತ್ + ಏತತ್, (ತ್ವದ್ರೂಪಂ)= ತ್ವತ್+ರೂಪಂ, (ಸಕಲಮರುಣಾಭಂ) = ಸಕಲಮ್+ಅರುಣಾಭಂ, ತ್ರಿನಯನಂ, (ಕುಚಾಭ್ಯಾಮಾನಮ್ರಂ)= ಕುಚಾಭ್ಯಾಂ + ಆನಮ್ರಂ, ಕುಟಿಲಶಶಿಚೂಡಾಲಮಕುಟಮ್.

ಅನ್ವಯಾರ್ಥ

(ಹೇ ಭಗವತಿ)	(ಸರ್ವಜ್ಞಳಾದ ಎಲೈ ದೇವಿಯೆ),
ಶಂಭೋಃ ವಾಮಂ	ಈಶ್ವರನ –ಎಡಭಾಗದ
ವಪುಃ	ಶರೀರವು
ತ್ವಯಾ ಹೃತ್ವಾ	ನಿನ್ನಿಂದ ಅಪಹರಿಸಲ್ಪಟ್ಟು
ಅಪರಿತೃಪ್ತೇನ	ಪೂರ್ಣ ತೃಪ್ತಿಯಿಲ್ಲದ
ಮನಸಾ	ಮನಸ್ಸಿನಿಂದ
ಅಪರಂ	ಬಲಭಾಗದ (ಎರಡನೆಯ)

ಶರೀರಾರ್ಧಂ ಅಪಿ	(ಈಶ್ವರನ ಉಳಿದ) ದೇಹದ ಅರ್ಧಭಾಗವು ಕೂಡ
ಹೃತಮಭೂತ್	(ಹೃತಂ+ಅಭೂತ್)= ಅಪಹರಿಸಲ್ಪಟ್ಟುದ್ದಾಗಿ-ಆಯಿತು (ಎಂಬುದಾಗಿ)
ಶಂಕೇ	(ಭಾವಿಸುತ್ತೇನೆ) ಊಹಿಸುತ್ತೇನೆ
ಯದೇತತ್ತ್ವದ್ರೂಪಂ	(ಯತ್+ಏತತ್+ತ್ವದ್ರೂಪಂ)=ಯಾವ ಕಾರಣದಿಂದ-ಈ ನಿನ್ನ ರೂಪವು
ಸಕಲಮರುಣಾಭಂ	ಸಮಸ್ತಭಾಗವೂ ಕೆಂಪಾಗಿಯೂ
ತ್ರಿನಯನಂ	ಮೂರು ಕಣ್ಣುಗಳಿಂದ ಕೂಡಿದ್ದಾಗಿಯೂ
ಕುಚಾಭ್ಯಾಮಾನಮ್ರಂ	(ಕುಚಾಭ್ಯಾಂ+ಆನಮ್ರಂ) = ಎರಡುಸ್ತನಗಳಿಂದ-ಸ್ವಲ್ಪ ಬಾಗಿರುವ
ಕುಟಿಲಶಶಿಚೂಡಾಲಮಕುಟಂ	ವಕ್ರವಾದ-ಚಂದ್ರ ಕಲೆಯಿಂದ ಚೂಡಾಮಣಿ- ಯುಕ್ತವಾದ ಕಿರೀಟವುಳ್ಳದ್ದಾಗಿಯೂ
ಭವತಿ	ಆಗಿರುತ್ತದೆ.

ತಾತ್ಪರ್ಯ

ಸರ್ವಜ್ಞಳಾದ ಎಲೈ ದೇವಿಯೇ, ಈಶ್ವರನ ಎಡಭಾಗದ ಶರೀರವನ್ನು ಆಕ್ರಮಿಸಿಕೊಂಡಿರುವುದಕ್ಕಷ್ಟೇ ಸಂತುಷ್ಟವಾಗದಿರುವ ಮನಸ್ಸಿನಿಂದ, ಈಶ್ವರನ ಬಲಭಾಗದ ಅರ್ಧಶರೀರವನ್ನೂ ಅಪಹರಿಸಿದವಳಾಗಿದ್ದೀಯೇ, ಎಂಬುದಾಗಿ (ಭಾವಿಸುತ್ತೇನೆ) ಊಹಿಸುತ್ತೇನೆ. ಏಕೆಂದರೆ ನಿನ್ನ ಶರೀರವು ಸಂಪೂರ್ಣವಾಗಿ ಕೆಂಪು ಕಾಂತಿಯುಳ್ಳದ್ದಾಗಿಯೂ ಮೂರುಕಣ್ಣುಗಳಿಂದ ಮತ್ತು ಎರಡುಸ್ತನಗಳಿಂದಾಗಿ ಸ್ವಲ್ಪಬಾಗಿದ್ದು, ವಕ್ರವಾದ ಚಂದ್ರಕಲೆಯನ್ನೇ ಚೂಡಾಮಣಿಯನ್ನಾಗಿ ಹೊಂದಿರುವ ಕಿರೀಟವುಳ್ಳದ್ದಾಗಿದೆ.

ಪದ್ಯಾನುವಾದ

ಹೇ ದೇವಿ, ಶಂಭುವಿನ ದೇಹದೆಡಭಾಗವನು
ಕಸಿದುಕೊಂಡೂ ನೀನು ತಣಿಯದಿಹ ಮನಸಿಂದ
ಉಳಿದ ದೇಹಾರ್ಧವನು ಕಸಿದುಕೊಂಡಿಹೆಯೆಂದು ಶಂಕೆಯಾಗುತಿದೆ ನನಗೆ;

ಏಕೆನಲು, ನಿನ್ನ ದೇಹವದೆಲ್ಲ ಕೆಂಪಾಗಿ,
ಮೂರು ಕಣ್ಗಳನೊಂದಿ. ಕುಚಭಾರದೊಳು ಬಾಗಿ
ಕೊಂಕುಚಂದಿರನ ಮುಡಿದಿಹ ಜಡೆಮುಡಿಯ ಕಿರೀಟವ ಧರಿಸಿಯೊಪ್ಪುತಿಹುದು
॥ ೨೩ ॥

ಟಿಪ್ಪಣಿಗಳು

ಶಿವ–ಶಕ್ತಿ ತತ್ತ್ವ

೧. ಈ ಶ್ಲೋಕದ ಅಂತರಾರ್ಥ ಹೀಗಿದೆ;

"ಭಗವತಿಯಿಂದ ಶಂಭುವಿನ ಶರೀರಾರ್ಧಭಾಗವು ಅಪಹರಿಸಲ್ಪಟ್ಟದ್ದಾಗಿ ಇನ್ನೊಂದು ಅರ್ಧಭಾಗವೂ ಅಪಹರಣವಾಗಿದೆ ಎಂದು ಉತ್ಪ್ರೇಕ್ಷಿಸಲಾಗಿದೆ. ಇಲ್ಲಿ ಉತ್ತರ ಕೌಲಸಿದ್ಧಾಂತದ ಪ್ರತಿಪಾದನೆಯನ್ನು ಕಾಣುತ್ತೇವೆ. ಉತ್ತರ ಕೌಲಸಿದ್ಧಾಂತದಲ್ಲಿ ಶಕ್ತಿತತ್ತ್ವಕ್ಕಿಂತಲೂ ಬೇರೆಯಾದ ಶಿವತತ್ತ್ವವು ಇಲ್ಲ. ಆದಕಾರಣ ಶಿವತತ್ತ್ವವು ಶಕ್ತಿತತ್ತ್ವದಲ್ಲಿ ಅಂತರ್ಭೂತವಾಗಿರುವುದರಿಂದ ಅಂತಹ ಶಕ್ತಿತತ್ತ್ವವನ್ನೆ ಉಪಾಸಿಸಬೇಕು.

(ಶ್ರೀ –ಪುಟ ೮೬,೮೭)

೨. ಈ ಶ್ಲೋಕದಲ್ಲಿ ಶಿವ ಮತ್ತು ಶಕ್ತಿತತ್ತ್ವಗಳ ಐಕ್ಯವನ್ನು ಕಾಣುತ್ತೇವೆ. ಶಕ್ತಿ ತತ್ತ್ವದೊಳಗೆ ಶಿವತತ್ತ್ವಾಂತರ್ಭಾವ ಇಲ್ಲಿದೆ. ಶಿವಶ್ಶಕ್ತ್ಯಾಯುಕ್ತೋ, ಎಂಬ ಪ್ರಥಮ ಶ್ಲೋಕದ ಭಾವವೂ ಇಲ್ಲಿದೆ.

(ಶ್ರೀ–ಪುಟ ೧೩೯)

೩. ಭಗವತಿ ಶಂಕರನರ್ಧಾಂಗಸೌಂದರ್ಯಶರೀರೆ. ಶ್ರೀ ಶಂಕರನ ಅರ್ಧಾಂಗದಲ್ಲಿ ನೆಲಸಿದ್ದರೂ ಅರ್ಧಾಂಗದ ದರ್ಶನ ಮಾಡುವ ಭಕ್ತರ ಮೇಲೆ ಪರಿಣಾಮ ಬೀರದ ರೀತಿಯಲ್ಲಿ ಸೌಂದರ್ಯಾತಿಶಯ ಪ್ರಭಾವವುಳ್ಳವಳು. ಎಂದರೆ ಶಿವನ ಭಕ್ತರು ಬಂದು ಅರ್ಧನಾರೀಶ್ವರನ ದರ್ಶನ ಮಾಡಿದ ಅವರಿಗೆ ಆಕೃತಿಯು ಪೂರ್ಣವಾಗಿ ಶಂಕರನ ರೂಪದಂತೆಯೂ ಶಿವೆಯ ಭಕ್ತರಿಗೆ ಸಂಪೂರ್ಣವಾಗಿ ಶಿವೆಯ ರೂಪದಂತೆಯೂ ಶಿವಶಿವೆಯರಲ್ಲಿ ಸಮಾನವಾದ ಭಕ್ತಿಯುಳ್ಳವರು

ದರ್ಶನ ಮಾಡಿದಾಗ ಶಂಕರ ಗಿರಿಜೆಯರು ಜೊತೆಯಾಗಿ ನಿಂತಿರುವಂತೆ ಕಾಣುವ ಅತಿಶಯಸೌಂದರ್ಯವನ್ನು ದೇವಿಯು ಪಡೆದಿರುವಳು.

(ಶ್ರೀ–ಪುಟ ೧೪೦)

೪. ಶ್ರೀಕಂಠನಂತೆ ನೀಲವರ್ಣ ಶುಕ್ಲವರ್ಣ ಎರಡು ವರ್ಣಗಳು ದೇವಿಗೂ ಇದೆ. ಶುಕ್ಲಭಾಗವನ್ನು ಗೌರಿ ಎಂದೂ ಕೃಷ್ಣಭಾಗವನ್ನು ಕಾಳೀಎಂದು ಕರೆಯುತ್ತಾರೆ.

(ಶ್ರೀ–ಪುಟ ೪೪೦)

ಅರ್ಧನಾರೀಶ್ವರ ತತ್ತ್ವ

೫. ಗೌರಿ ಶಂಕರರತತ್ತ್ವ ಅಥವಾ ಅರ್ಧನಾರೀಶ್ವರತತ್ತ್ವವನ್ನು ಈ ಶ್ಲೋಕದಲ್ಲಿ ಕಾಣುತ್ತೇವೆ. ಇಲ್ಲಿ ಕಾಣುವ ಅರ್ಧನಾರೀಶ್ವರನ ಸ್ವರೂಪವನ್ನು ಆದಿಶಂಕರರು ಅರ್ಧನಾರೀಶ್ವರಸ್ತೋತ್ರ (ಅಷ್ಟಕದಲ್ಲಿ) ಸೊಗಸಾಗಿ ವರ್ಣಿಸಿದ್ದಾರೆ.

ಚಾಂಪೇಯ ಗೌರಾರ್ಧಶರೀರಕಾಯ್ಯೆ
ಕರ್ಪೂರ ಗೌರಾರ್ಧ ಶರೀರಕಾಯ
ಧಮ್ಮಿಲ್ಲಿಕಾಯ್ಯೆ ಚ ಜಟಾಧರಾಯ
ನಮಶ್ಶಿವಾಯ್ಯೆ ಚ ನಮಶ್ಶಿವಾಯ.....

ಇದೇ ರೀತಿ ಉಳಿದ ೭ ಶ್ಲೋಕಗಳಲ್ಲಿ ಎಡಬಲಗಳೆರಡೂ ಸೇರಿಹೋದ ಶಿವಶಕ್ತಿ ಸ್ವರೂಪವನ್ನು ಆ ಸ್ತೋತ್ರದಲ್ಲಿ ಆದಿಶಂಕರರು ವರ್ಣಿಸಿದ್ದಾರೆ.

(ಭ–ಪುಟ ೨೫೭)

೬. ಅಶೋಕವನದ ಸೀತೆಯನ್ನು ಕಂಡಾಗ ಆಂಜನೇಯ ಅಂದುಕೊಂಡ ಮಾತುಗಳಲ್ಲೂ ಅರ್ಧನಾರೀಶ್ವರ ತತ್ತ್ವ ಅಭಿವ್ಯಕ್ತವಾಗಿದೆ. ಏಕೆಂದರೆ ಸೀತೆಯಲ್ಲಿಯ ಪಾತಿವ್ರತ್ಯ, ರಾಮನಲ್ಲಿನ ದೈವತ್ವ ಇಬ್ಬರಲ್ಲೂ ಸೇರಿಹೋಗಿ ಇಬ್ಬರಲ್ಲೂ ಒಬ್ಬರ ಹೃದಯ ತೇಜಸ್ಸು ಇನ್ನೊಬ್ಬರಲ್ಲಿ ಪ್ರತಿಫಲಿಸುತ್ತಿರುವುದರಿಂದ ಇಬ್ಬರೂ ಜೀವಂತರಾಗಿದ್ದಾರೆ.

(ಪ–ಪುಟ ೨೫೪)

೭. ಲಲಿತಾಸಹಸ್ರನಾಮದಲ್ಲಿ ನಿರೀಶ್ವರಾ (೧೫೫) ಎನ್ನುವ ನಾಮವಿದೆ. ನಿರೀಶ್ವರಾ ಎಂದರೆ ಈಶ್ವರನಿಲ್ಲದವಳು ಎಂದು ವಾಚ್ಯಾರ್ಥ. ಆದರೆ ಇಲ್ಲಿ ಆ ಅರ್ಥವಲ್ಲ. ಇಲ್ಲಿನ ಅರ್ಥವೆಂದರೆ "ಈಶ್ವರನಲ್ಲಿ ಐಕ್ಯವಾಗಿ ಹೋಗಿ ಕರ್ಪೂರದಂತೆ ಕರಗಿಹೋದ ಆ ತಾಯಿ ತನ್ನ ಇರುವಿಕೆಯನ್ನು, ವ್ಯಕ್ತಿತ್ವವನ್ನು, ಭಾವವನ್ನು, ಕ್ರಿಯೆಗಳನ್ನು ಸರ್ವಸ್ವವನ್ನು ಆ ಸ್ವಾಮಿಯಲ್ಲಿ ಲೀನಗೊಳಿಸಿದಳು. ಆದ್ದರಿಂದ

ಆಕೆ ನಿರೀಶ್ವರಾ ಆದಳು, ಬೇರೆ ಈಶ್ವರನಿಲ್ಲ, ಆಕೆಯಲ್ಲೇ ಇದ್ದಾನೆ– ಬೇರೆ ಈಶ್ವರಿಯಿಲ್ಲ ಆ ಸ್ವಾಮಿಯಲ್ಲೇ ಸೇರಿ ಹೋಗಿದ್ದಾಳೆ.

(ಪ–ಪುಟ ೨೫೮)

೮. ಶ್ರೀ ದೇವಿಯ ಸರ್ವಾರುಣತ್ವವು ಶಕ್ತಿಮಯತನುವನ್ನು, ಕಿರೀಟವು ಸರ್ವೇಶ್ವರತ್ವವನ್ನು, ಶಶಿಮಕುಟಮಣಿ ಆನಂದಮಯತ್ವವನ್ನು, ತ್ರಿನೇತ್ರವು ಕಾಲತ್ರಯತ್ವವನ್ನು, ಸ್ತನದ್ವಯಭಾರವು ಸೃಷ್ಟಿಜೀವಿಗಳ ಅನ್ನಮಯಾದಿ ಪಂಚಕೋಶಪೋಷಣದ್ರವ್ಯಗಳ ಸಮೃದ್ಧಿಯನ್ನು ಸೂಚಿಸುತ್ತವೆ. ಹೀಗೆ ಶ್ರೀದೇವಿಯ ಮಾತೃವಿರಾಟ್‌ಸ್ವರೂಪ ಇಲ್ಲಿ ವ್ಯಕ್ತವಾಗಿದೆ.

(ತು–ಪುಟ ೧೫೦)

೯. ಲಲಿತಾಸಹಸ್ರನಾಮದಲ್ಲಿ (ಶಿವಶಕ್ತ್ಯೈಕರೂಪಿಣ್ಯೈ ನಮಃ) ನಾಮಸಂಖ್ಯೆ ೯೯೯) ಮತ್ತು ಶಿವಶಕ್ತಿಯರು ಶ್ರೀಶಿವಾ (೯೯೮) ನಾಮ ಸೇರಿರುವಂತಹ ಒಂದೇ ರೂಪದಲ್ಲಿ ಇರುವವಳು. ಶಿವ ಎಂದರೆ ವಿಮರ್ಶೆ, ಶಕ್ತಿ ಎಂದರೆ ಪ್ರಕಾಶ. ಶಿವಶಕ್ತಿಯರ ಸಂಗಮವಾದ ರೂಪವೇ ಪರಾಶಕ್ತಿ.

(ಶಂಸಐತಾಳ–ಲಲಿತಾ ಸಹಸ್ರನಾಮ ಅನುವಾದ, ಪುಟ ೪೫೭)


೧೦. ಶಿವಶಕ್ತಿಯರ ಐಕ್ಯವೇ (ಸಾಮರಸ್ಯವೇ) ದೇವಿಯ ಸ್ವರೂಪವಾಗಿದೆ. ಬ್ರಹ್ಮಾಂಡಪುರಾಣದಲ್ಲಿ ಹೇಳಿರುವಂತೆ "ತ್ರಿಕೋಣದಲ್ಲಿ ಬಿಂದುವನ್ನು ಸೇರಿಸಬೇಕು. ಅಷ್ಟಾರವನ್ನು ಅಷ್ಟದಳಪದ್ಮದೊಂದಿಗೆ ಸೇರಿಸಬೇಕು. ಶಿವಶಕ್ತಿ ಚಕ್ರಗಳ ಪರಸ್ಪರ ಅವಿನಾಭಾವ ಸಂಬಂಧವನ್ನು ಯಾವನು ಅರಿತಿರುತ್ತಾನೋ ಅವನೇ ಚಕ್ರವಿದನು."

(ಲಲಿತಾ ಸಹಸ್ರನಾಮ– ಆದಿದೇವಾನಂದ –ಪುಟ ೨೦೫)

೧೧. "ನಿನ್ನ ಮೂಲಕ ಶಿವನನ್ನೇ ಹೊಳೆಯಿಸುತ್ತಿರುವೆ ತಾಯಿ ಶಿವನ ಸಂಕೇತಗಳೇ ನಿನ್ನ ಅಲಂಕಾರಗಳಾಗಿ ಮೆರೆಯುತ್ತಿವೆ. ಶಿವ ನಿನ್ನ ಮೂಲಕ ನಸುಗೆಂಪು ಅರುಣನಾಗಿ ಕಂಗೊಳಿಸುತ್ತಿದ್ದಾನೆ. ನಸುಗೆಂಪು ನಾಚಿ ಮರೆಯಾಗಿರುವುದನ್ನು ಸೂಚಿಸುತ್ತಿದೆ. ಹಣೆಗಣ್ಣು ಗೆರೆಚಂದ್ರ ಧ್ಯಾನಮೂರ್ತಿಯಾದ ಶಿವನ ಪರಿಕರಗಳು ಅಂದರೆ ನಾನು ಪ್ರಕಟವಾಗಿ ಈ ರೂಪದಲ್ಲಿ ತೋರುಬರುತ್ತ ಶಿವನ ನೆನಪನ್ನು ಎಲ್ಲೆಡೆ ಬಿತ್ತುತ್ತಿರುವೆ. ಶಿವನ ಎಡ ಬಲ ಕದ್ದು ಅದನ್ನು ನೀನೇ ಹೊದ್ದು ಶಿವನನ್ನು ಅಖಂಡ ಧ್ಯಾನದ ವಸ್ತುವಾಗಿಸಿದೆ."

(ತೋ–ಪುಟ ೨೨೭)

ಯಂತ್ರಾರಾಧನೆ (ಶ್ಲೋಕ-೨೩)



ಯಂತ್ರರಚನೆ : ಚಿನ್ನದ ತಗಡಿನಲ್ಲಿ ತಯಾರಿಸಬೇಕು. ಸ್ವಗೃಹದಲ್ಲಿ ಪೂಜಾಮಂದಿರದಲ್ಲಿ ಸ್ಥಾಪಿಸಬೇಕು. ಯಂತ್ರದಲ್ಲಿ 'ಸ್ರಂ' ಬೀಜಾಕ್ಷರದೊಡನೆ ಒಂದು ವೃತ್ತದೊಳಗೆ ಮತ್ತೊಂದು ವೃತ್ತ ಇರಬೇಕು. ಒಳಗಿನ ವೃತ್ತಕ್ಕೆ ೯ ದಳಗಳಿರಬೇಕು.

ಪೂಜೆ : ಕೆಂಪು ತಾವರೆದಳಗಳಿಂದ ಅಥವಾ ಕೆಲವು ಗುಲಾಬಿ ದಳಗಳಿಂದ ಲಕ್ಷ್ಮೀಸಹಸ್ರನಾಮ ಅರ್ಚನೆ ಮಾಡಬೇಕು.

ನೈವೇದ್ಯ : ಅನ್ನ, ಕ್ಷೀರಪಾಯಸ, ವಡೆ, ಹಣ್ಣು, ತಾಂಬೂಲ.

ಜಪ : ಉತ್ತರಾಭಿಮುಖವಾಗಿ ಕುಳಿತು ೩೦ ದಿನಗಳಕಾಲ ದಿನಕ್ಕೆ ೩೦೦೦ ಬಾರಿ ಶ್ಲೋಕವನ್ನು ಜಪಿಸಬೇಕು.

ಫಲ : **ಸರ್ವಾಪತ್ತು ನಿವೃತ್ತಿ; ಋಣಪರಿಹಾರ; ಭೂತಪ್ರೇತ ಶಮನ.**

ಶ್ಲೋಕ–೨೪

ದೇವಿಯೇ ಕ್ರಿಯಾಶಕ್ತಿ ಸ್ವರೂಪಿಣಿ

ಜಗತ್ಸೂತೇ ಧಾತಾ ಹರಿರವತಿ ರುದ್ರಃ ಕ್ಷಪಯತೇ
ತಿರಸ್ಕುರ್ವನ್ನೇತತ್ಸ್ವಮಪಿ[೧] ವಪುರೀಶಸ್ತಿರಯತಿ
ಸದಾಪೂರ್ವಸ್ಸರ್ವಂ ತದಿದಮನುಗೃಹ್ಣಾತಿ ಚ ಶಿವಃ
ತವಾಜ್ಞಾಮಾಲಂಬ್ಯ ಕ್ಷಣಚಲಿತಯೋರ್ಭ್ರೂಲತಿಕಯೋಃ ॥ ೨೪ ॥

ಪಾಠಾಂತರ

೧. (ವಪುರೀಶಸ್ತಿರಯತಿ) – ವಪುರೀಶಃ ಸ್ಥಗಯತಿ (ಸು)

ಪದವಿಭಾಗ

(ಜಗತ್ಸೂತೇ) = ಜಗತ್+ಸೂತೇ, ಧಾತಾ, (ಹರಿರವತಿ)= ಹರಿಃ+ಅವತಿ, ರುದ್ರಃ, ಕ್ಷಪಯತೇ, (ತಿರಸ್ಕುರ್ವನ್ನೇತತ್)= ತಿರಸ್ಕುರ್ವನ್+ಏತತ್, (ಸ್ವಮಪಿ) =ಸ್ವಂ+ಅಪಿ, (ವಪುರೀಶಸ್ತಿರಯತಿ)= ವಪುಃ+ಈಶಃ+ತಿರಯತಿ, ಸದಾಪೂರ್ವಃ, ಸರ್ವಂ, (ತದಿದಮನುಗೃಹ್ಣಾತಿ) = ತತ್+ಇದಮ್+ಅನುಗೃಹ್ಣಾತಿ, ಚ, ಶಿವಃ, (ತವಾಜ್ಞಾಮಾಲಂಬ್ಯ) = ತವ+ಆಜ್ಞಾಂ+ಆಲಂಬ್ಯ, (ಕ್ಷಣಚಲಿತಯೋರ್ಭ್ರೂಲತಿಕಯೋಃ) = ಕ್ಷಣಚಲಿತಯೋಃ + ಭ್ರೂಲತಿಕಯೋಃ.

ಅನ್ವಯಾರ್ಥ

(ಹೇ ಭಗವತಿ)	(ಸರ್ವಜ್ಞಳಾದ ದೇವಿಯೆ,)
ಧಾತಾ ಜಗತ್ ಸೂತೇ	ಬ್ರಹ್ಮನು–(ಪ್ರಪಂಚವನ್ನು)–ನಿರ್ಮಿಸುತ್ತಾನೆ
ಹರಿಃ (ಜಗತ್) ಅವತಿ	ವಿಷ್ಣುವು–(ಪ್ರಪಂಚವನ್ನು)–ರಕ್ಷಿಸುತ್ತಾನೆ.
ರುದ್ರಃ (ಜಗತ್) ಕ್ಷಪಯತೇ	ರುದ್ರನು–(ಪ್ರಪಂಚವನ್ನು) ನಾಶಪಡಿಸುತ್ತಾನೆ
ಈಶಃ ಏತತ್ ತಿರಸ್ಕುರ್ವನ್	ಪರಮೇಶ್ವರನು ಈ ಮೂರು ಮಂದಿಯನ್ನು (ಮಹಾಪ್ರಳಯಕಾಲದಲ್ಲಿ) ತನ್ನಲ್ಲಿ ಅಡಗಿಸಿಕೊಳ್ಳುತ್ತಾ
ಸ್ವಮಪಿ ವಪುಃ	ತನ್ನದಾದ ಶರೀರವನ್ನು ಕೂಡ

ತಿರಯತಿ	ಕಣ್ಣಿಗೆ ಕಾಣದಂತೆ ಮಾಡಿಕೊಳ್ಳುತ್ತಾನೆ (ಸದಾಶಿವತತ್ತ್ವದಲ್ಲಿ ಸೇರಿಸಿಬಿಡುತ್ತಾನೆ)
ಸದಾಪೂರ್ವಃ	ಸತ್ ಎಂಬ ಶಬ್ದವೇ ಮೊದಲಲ್ಲಿ ಉಳ್ಳ ತತ್ತ್ವವಾದ
ಶಿವಃ	ಈಶ್ವರನು (ಸದಾಶಿವನು)
ಸರ್ವಂ+ತದಿದಂ	ಆ ಈಯೆಲ್ಲವನ್ನು ಅಂದರೆ ಪೂರ್ವೋಕ್ತವಾದ ಬ್ರಹ್ಮವಿಷ್ಣು-ರುದ್ರ-ಈಶ್ವರ ರೂಪವಾದ ೪ ತತ್ತ್ವಗಳನ್ನು
ತವ	ನಿನ್ನ
ಕ್ಷಣಚಲಿತಯೋಃ	ಒಂದು ಕ್ಷಣಕಾಲದಲ್ಲಿ ಅಲ್ಲಾಡಿದ
ಭ್ರೂಲತಿಕಯೋಃ	ಲತೆಗಳಂತಿರುವ ಹುಬ್ಬುಗಳ
ಆಜ್ಞಾಮಾಲಂಬ್ಯ	(ಆಜ್ಞಾಂ+ಆಲಂಬ್ಯ) ಆಜ್ಞೆಯನ್ನು (ಸನ್ನೆಯನ್ನು)-ಆಶ್ರಯಿಸಿ
ಅನುಗೃಹ್ಣಾತಿ	ಅನುಗ್ರಹಿಸುತ್ತಾನೆ (ಸೃಷ್ಟಿಸುತ್ತಾನೆ)

ತಾತ್ಪರ್ಯ

ಸರ್ವಜ್ಞಳಾದ ದೇವಿಯೇ, ಬ್ರಹ್ಮನು ಜಗತ್ತನ್ನು ಸೃಷ್ಟಿಸುತ್ತಾನೆ; ವಿಷ್ಣು ಜಗತ್ತನ್ನು ರಕ್ಷಿಸುತ್ತಾನೆ; ರುದ್ರನು ಜಗತ್ತನ್ನು ನಾಶಪಡಿಸುತ್ತಾನೆ; ಈಶ್ವರನು ಈ ಮೂರು ಮಂದಿಯನ್ನು ಮಹಾಪ್ರಳಯಕಾಲದಲ್ಲಿ ತನ್ನಲ್ಲಿ ಅಡಗಿಸಿಕೊಳ್ಳುತ್ತಾ, ತನ್ನದಾದ ಶರೀರವನ್ನು ತನ್ನಲ್ಲಿ ಲಯಗೊಳಿಸುತ್ತಾ ಕಣ್ಣಿಗೆಕಾಣದಂತೆ ಮಾಡಿಕೊಳ್ಳುತ್ತಾನೆ (ಸದಾಶಿವತತ್ತ್ವದಲ್ಲಿ ಸೇರಿಸಿಬಿಡುತ್ತಾನೆ). (ಸತ್ ಎಂಬ ಶಬ್ದವೇ ಮೊದಲಲ್ಲಿ ಉಳ್ಳ ಶಿವತತ್ತ್ವವಾದ) ಸದಾಶಿವನು ಈಯೆಲ್ಲವನ್ನೂ ಅಂದರೆ ಪೂರ್ವೋಕ್ತವಾದ ಬ್ರಹ್ಮ, ವಿಷ್ಣು, ರುದ್ರ, ಈಶ್ವರ ರೂಪವಾದ ನಾಲ್ಕು ತತ್ತ್ವಗಳನ್ನು, ನಿನ್ನ ಒಂದು ಕ್ಷಣಕಾಲದಲ್ಲಿ ಚಲಿಸಿದ ಬಳ್ಳಿಯಂತಿರುವ ಹುಬ್ಬುಗಳ ಮೂಲಕ ಸೂಚಿತವಾದ ಅಪ್ಪಣೆಯನ್ನು, ಅವಲಂಬಿಸಿ ಅವರವರ ಕೆಲಸಗಳಲ್ಲಿ ಬ್ರಹ್ಮ, ವಿಷ್ಣು, ರುದ್ರ, ಈಶ್ವರರು ಅಂದರೆ ಈ ಬ್ರಹ್ಮಾಂಡದಲ್ಲಿ ನಿನ್ನ ಕುಡಿಹುಬ್ಬುಗಳ ಸಂಜ್ಞೆಯ ಆಜ್ಞಾಮಾತ್ರದಿಂದಲೇ ಸೃಷ್ಟಿ ಸ್ಥಿತಿ ಲಯ ಕಾರ್ಯಗಳು ನಡೆಯುತ್ತಿವೆ. ನಿನ್ನ ಕಣ್ಣೋಟದ ಮಹಿಮೆ ಅಷ್ಟೊಂದು ಅಪಾರವಾದದ್ದು, ಅಸದೃಶವಾದುದು.

ಪದ್ಯಾನುವಾದ

ಜಗವಸೃಷ್ಟಿಸುವನು ವಿಧಾತೃ, ಹರಿ ಪೊರೆಯುವನು,
ನಾಶಗೊಳಿಪನು ರುದ್ರಃ ಸರ್ಗಪಾಲನ ನಾಶ-
ತತ್ತ್ವಗಳನೀಶ ತನ್ನೊಳೆ ಲಯಿಸಿ ತನ್ನೊಡಲ ಲಯಿಪನು ಸದಾಶಿವನೊಳು;

ಬಳಿಕಾ ಸದಾಶಿವನು ನಿನ್ನ ಸುಭ್ರೂಲತಿಕೆ
ಚಣಮಾತ್ರ ಚಲನೆಯಿಂದೊರೆವಾಣತಿಯ ಕೊಂಡು
ಸೃಷ್ಟಿಪಾಲನ ನಾಶಗಳಿಗೆ ಕಾರಣವಪ್ಪ ತತ್ತ್ವಗಳ ಸೃಷ್ಟಿಸುವನು ॥ ೨೪ ॥

ಟಿಪ್ಪಣಿಗಳು

ಕ್ಷಣಚಲಿತಯೋಃ ಭ್ರೂಲತಿಕಯೋಃ

೧. "ಸದಾಶಿವನು ಸೃಷ್ಟಿ, ಸ್ಥಿತಿ, ಸಂಹಾರ, ಲಯ (ತಿರೋಭಾವ) ಕರ್ತರಾದ ಬ್ರಹ್ಮ, ವಿಷ್ಣು, ರುದ್ರ, ಈಶ್ವರ ಈ ನಾಲ್ವರ ಉತ್ಪತ್ತಿ, ಸ್ಥಿತಿ, ನಾಶ, ಲಯಗಳನ್ನು ಮಾಡಲು ಭಗವತಿಯ ಭ್ರೂಚಲನ ಮಾತ್ರವೆ ಸಹಾಯವೆಂದು ಈ ಶ್ಲೋಕದ ಸಾರ"

(ಜ–ಪುಟ ೩೫)

೨. "ಕ್ಷಣಕಾಲ ಮಾತ್ರ ಚಲಿಸಿದ ಲತೆಯಂತೆ ದೀರ್ಘವಾದ ಹುಬ್ಬುಗಳೆ, ಅಂದರೆ ಲತಾಸದೃಶವಾದ ಹುಬ್ಬುಗಳ ಚಲನೆಯಿಂದಲೇ ತಿಳಿಯಲ್ಪಡಬೇಕಾದ ನಿನ್ನ ಆಜ್ಞೆಯನ್ನು ಅವಲಂಬಿಸಿ, ಬ್ರಹ್ಮ–ವಿಷ್ಣು–ರುದ್ರ–ಈಶ್ವರ ರೂಪವಾದ ನಾಲ್ಕು ತತ್ತ್ವಗಳು ಅವಲಂಬಿತವಾಗುತ್ತವೆ. ಮತ್ತು ನೀನು ಕೇವಲ ಹುಬ್ಬುಗಂಟಿಕ್ಕುವುದರಿಂದಲೇ ಆ ನಾಲ್ಕು ತತ್ವಗಳೂ ನಾಶಹೊಂದುತ್ತವೆ. ಆದ್ದರಿಂದ ಅನೇಕ ಕೋಟಿ ಬ್ರಹ್ಮಾಂಡಗಳನ್ನು ಸೃಷ್ಟಿಸುವುದರಲ್ಲಿ ಹಾಗೂ ನಾಶಮಾಡುವುದರಲ್ಲಿ ನಿನ್ನ ಹುಬ್ಬುಗಳ ಚಲನಮಾತ್ರರೂಪವಾದ ಶಕ್ತಿಯು ಸದಾಶಿವನಿಗೆ ಸಹಾಯ ಮಾಡುತ್ತವೆ"

(ಶೇ–ಪುಟ ೮೮)

೩. **ಸದಾಪೂರ್ವಃ**

ಸದಾ ಎಂಬ ಶಬ್ದವು ಯಾವ ಶಿವಶಬ್ದಕ್ಕೆ ಪೂರ್ವಪ್ರತ್ಯಯವಾಗಿದೆಯೋ ಆ ಶಬ್ದ ಸದಾ ಪೂರ್ವವಾದ ಶಿವಶಬ್ದ ಅಂತಹ ಸದಾಶಿವಶಬ್ದದಿಂದ ವಾಚ್ಯಾರ್ಥ ಮತ್ತು ವಾಚಕಶಬ್ದಗಳಿಗೆ ಅಭೇದವನ್ನು ಆರೋಪ ಮಾಡಿರುವುದರಿಂದ ಸದಾಶಿವರೂಪವಾದ ತತ್ತ್ವವು ಗ್ರಹಿಸಲ್ಪಡುತ್ತದೆ.
(ಶೇ–ಪುಟ ೮೭)

೪. **ಪಂಚಕೃತ್ಯ ಪರಾಯಣೆ**

ಲಲಿತಾ ಸಹಸ್ರನಾಮದಲ್ಲಿ (೨೭೪) ಶ್ರೀದೇವಿಯನ್ನು ಪಂಚಕೃತ್ಯ ಪರಾಯಣೇನಮಃ ಎಂದು ಕರೆಯಲಾಗಿದೆ ಸೃಷ್ಟಿ, ಸ್ಥಿತಿ, ಸಂಹಾರ, ತಿರೋಧಾನ, ಅನುಗ್ರಹವೆಂಬ ಐದು ಕೃತ್ಯಗಳನ್ನು ನಿರ್ವಹಿಸುವವಳು ಎಂದರ್ಥ. (ಪೋ–ಪುಟ ೧೩೦)

೫. **ತಿರೋಧಾನ**

ರುದ್ರನಿಂದ ನಾಶವಾದ ಜಗತ್ತಿನಲ್ಲಿ ಇರುವ ಮೂಲತತ್ತ್ವಗಳನ್ನು ಸಂಪೂರ್ಣವಾಗಿ ಪ್ರಕೃತಿಯಲ್ಲಿ ಲಯಮಾಡಿ ಅವುಗಳು ತಮ್ಮ ಸ್ವರೂಪದಲ್ಲಿ ಕಾಣದಂತೆ ಮರೆಮಾಚುವುದೇ ತಿರೋಧಾನ.

ಜೀವಿಗಳಿಗೆ ತಮ್ಮ ಮೂಲ ಸ್ವರೂಪವನ್ನು, ಭಗವತತ್ತ್ವರೂಪವನ್ನು ತಿಳಿಯದಂತೆ ಮಾಡುವ, ತಿಳಿದುಕೊಳ್ಳಬೇಕೆಂದು ಕೇಳಿಕೊಳ್ಳಲೂ ಆಗದಂತೆ ಮಾಡುವ ಕಾರ್ಯವೂ ತಿರೋಧಾನವೇ ಆಗಿದೆ.

(ಪೋ–ಪುಟ ೧೩೦)

೬. **ಅನುಗ್ರಹ**

ಸಂಪೂರ್ಣವಾಗಿ ಲಯಹೊಂದಿ ಮೂಲ ಪ್ರಕೃತಿಯಲ್ಲಿ ಐಕ್ಯ ಹೊಂದಿದ ಜಗತ್ತಿನ ಮೂಲತತ್ತ್ವಗಳನ್ನು ಮತ್ತೆ ಸೃಷ್ಟಿಯಾಗಲು ಅನುಕೂಲವುಂಟುಮಾಡುವುದೇ ಅನುಗ್ರಹ. (ಪೋ–ಪುಟ ೧೩೦)

ಜೀವಿಗಳು ತಮ್ಮ ಸ್ವರೂಪವನ್ನು ಮತ್ತು ಭಗವತಿಯ ಸ್ವರೂಪವನ್ನು ತಿಳಿದುಕೊಳ್ಳುವಂತೆ ಮಾಡುವುದೇ ಅನುಗ್ರಹ.

೭. ದೇವಿಯ ಕಣ್ಣುಗುಡ್ಡೆಯಲ್ಲಿ ಆಜ್ಞಾಚಕ್ರವಿರುವುದು ಪ್ರಸಿದ್ಧವಾದದ್ದು. ಆದ್ದರಿಂದ ಆಕೆಯ ಹುಬ್ಬುಸಂಚಲನೆಯ ಮೂಲಕ ಅಪ್ಪಣೆ ಮಾಡಲಾಗುತ್ತದೆ. ದೇವಿಯ ಭ್ರೂವಿಲಾಸವನ್ನು ಇಲ್ಲಿ ವರ್ಣಿಸಲಾಗಿದೆ.

ಸೌಂದರ್ಯಲಹರಿಯ ೨೪ನೇ ಶ್ಲೋಕದಲ್ಲಿ ಹೇಳಿರುವ ಸಂಗತಿಗಳನ್ನು ಲಲಿತಾಸಹಸ್ರನಾಮದಲ್ಲಿ (೨೬೪) ಸೃಷ್ಟಿಕರ್ತ್ರೀ ನಮಃ (೨೬೫) ಬ್ರಹ್ಮರೂಪಾಯೈ ನಮಃ (೨೬೬) ಗೋಪ್ತ್ರೈ ನಮಃ (೨೬೭) ಗೋವಿಂದ ರೂಪಿಣ್ಯೈ ನಮಃ (೨೬೮) ಸಂಹಾರಿಣ್ಯೈ ನಮಃ (೨೬೯) ರುದ್ರರೂಪಾಯೈನಮಃ (೨೭೦) ತಿರೋಧಾನಕರ್‍ಯೈ ನಮಃ (೨೭೧) ಈಶ್ವರ್‍ಯೈ ನಮಃ (೨೭೨) ಸದಾಶಿವಾಯೈ ನಮಃ (೨೭೩)

ಅನುಗ್ರಹದಾಯ್ಯೈ ನಮಃ (೨೭೪), ಪಂಚಕೃತ್ಯ ಪರಾಯಣಾಯ್ಯೈ ನಮಃ (೨೭೫) ಎಂಬ ನಾಮಗಳಲ್ಲಿ ಹೇಳಲಾಗಿದೆ.

ವಿವರಗಳಿಗೆ ಲಲಿತಾ ಸಹಸ್ರನಾಮದ ಟೀಕೆಗಳನ್ನು
(ಕೂಡಲಿಜಗನ್ನಾಥಶಾಸ್ತ್ರಿ – ಶ್ರೀಲಲಿತಾ ನಾಮಾವಳಿ
ಯಡತೊರೆ –ಶ್ರೀ ಲಲಿತಾ ಸಹಸ್ರನಾಮಭಾಷ್ಯ
ಶ್ರೀ ಶಂಸ್ಯೆತಾಳ (ಅನು)– ಶ್ರೀ ಲಲಿತಾ ಸಹಸ್ರನಾಮ ನೋಡಿ)

೮. ಚಕ್ರವರ್ತಿ, ಮಹಾರಾಜ, ಉನ್ನತ ಅಧಿಕಾರಿ ಇತ್ಯಾದಿ ವ್ಯಕ್ತಿಗಳು ಸಾಧಾರಣವಾಗಿ ತಮ್ಮ ಅಧೀನದಲ್ಲಿರುವರಿಗೆ, ತಮ್ಮ ಇಷ್ಟಾನಿಷ್ಟಗಳನ್ನು ಮೆಚ್ಚುಗೆ, ಆನಂದ, ಕೋಪ ಮೊದಲಾದ ಭಾವಗಳನ್ನು ಹೆಚ್ಚು ಮಾತನಾಡದೆ ತಮ್ಮ ಕಣ್ಣು ಹುಬ್ಬುಗಳ ಚಲನೆಯಿಂದಲೇ ವ್ಯಕ್ತಪಡಿಸುತ್ತಾರೆ. ಅಂತೆಯೇ ಜಗನ್ಮಾತೆಯ ಭ್ರೂವಿಭ್ರಮ ವಿನ್ಯಾಸ ಒಂದು ಲಾಸ್ಯ. ವಿಶ್ವವನ್ನೆಲ್ಲಾ ನಿಯಂತ್ರಿಸುವ ಜಗನ್ಮಾತೆ ತನ್ನ ಕಣ್ಣು, ಹುಬ್ಬುಗಳ ಚಲನೆಯಿಂದಲೇ ಮಾತಾಡುವಂತೆ ತೋರಿಸಬಲ್ಲ ಮಿತಭಾಷಿಣಿ, ಮೃದುಭಾಷಿಣಿ, ಶ್ರೀ ಮಹಾರಾಣಿ ಆ ದೇವಿಯಾಗಿದ್ದಾಳೆ.

(ಪ–ಪುಟ ೨೬೧)

೯. ಈ ೨೪ನೇ ಶ್ಲೋಕದಲ್ಲಿ ಸೃಷ್ಟಿ, ಸ್ಥಿತಿ, ಲಯ, ತಿಲೋಧಾನ, ಅನುಗ್ರಹ ಎಂಬ ಶಾಕ್ತತಂತ್ರದಲ್ಲಿ ಪ್ರಸಿದ್ಧವಾದ ಪಂಚಕೃತ್ಯಗಳನ್ನು ವರ್ಣಿಸಲಾಗಿದೆ.

ಸೃಷ್ಟಿ ಎಂದರೆ ವಿಶಿಷ್ಟತೆಯ ವಿಕಾಸ ಎನ್ನಬಹುದು.


ಸ್ಥಿತಿ ಎಂದರೆ ವಿಶಿಷ್ಟತೆಯನ್ನು ಜೋಪಾನ ಮಾಡುವ ಸ್ಥಿತಿ ಪಾಲಕ ಹರಿ.

ಲಯ ಎಂದರೆ ರುದ್ರ ಇವನ ಹಣೆಗಣ್ಣು ಬೂದಿ ಮುಚ್ಚಿದ ಕೆಂಡ.

ತಿರೋಧಾನ ಎಂದರೆ ಮರೆಯಾಗುವಿಕೆ, ಸೃಷ್ಟಿ–ಸ್ಥಿತಿ–ಲಯ, ಹುಟ್ಟು ಇರುವಿಕೆ–ಸಾವು ಇವು ಮೂರೂ ಬೇರೆ ಬೇರೆ ಕ್ರಿಯೆಗಳಲ್ಲ ಎಂಬ ಭಾವ.

ಅನುಗ್ರಹ ವಿಶಿಷ್ಟವಾದುದೆಲ್ಲ ಸೃಷ್ಟಿಯಾಗಿ, ಸೃಷ್ಟಿಯಾದುದೆಲ್ಲ ಬೆಳೆದು ಕೃತಕೃತ್ಯವಾಗಿ ಫಲಿಸಿ ಹಣ್ಣಾಗಿ ಉದುರಿ ಕರಗಿ ಸಾಮಾನ್ಯತೆಯ ಮಹಾ ಸಾಗರದಲ್ಲಿ ತಮ್ಮ ವಿಶಿಷ್ಟತೆಯ ಸಮಸ್ತವನ್ನು ಕಳೆದುಕೊಂಡು ಮತ್ತೆ ಸಾಮಾನ್ಯತೆಯ ಒಡಲಿನಿಂದಲೇ ವಿಶಿಷ್ಟತೆಯ ರೂಹುಗಳು ಕಾಣಿಸಿಕೊಳ್ಳುವ ನವೋನವವಾದ ಪುನಃಸೃಷ್ಟಿಯ ಹಂಬಲ. (ತೋ–ಪುಟ ೨೩೨)

ಯಂತ್ರಾರಾಧನೆ (ಶ್ಲೋಕ-೨೪)



ಯಂತ್ರರಚನೆ : ಚಿನ್ನದ ತಗಡಿನಲ್ಲಿ ತಯಾರಿಸಬೇಕು. ಚಿತ್ರದಲ್ಲಿರುವಂತೆ ೨೫ ಸಮಚತುರಸ್ರ (ಚೌಕಗಳಿರಬೇಕು) ಮತ್ತು ೨೪ ತ್ರಿಶೂಲಗಳಿರಬೇಕು. ಇದನ್ನು ಶಿವಪಂಚಾಕ್ಷರಿಮಂತ್ರಯಂತ್ರ ಎಂತಲೂ ಕರೆಯುವರು.

ಪೂಜೆ : ತಿಲಾಕ್ಷತೆಗಳಿಂದ ರುದ್ರ ತ್ರಿಶತೀಯನ್ನೂ ಮತ್ತು ಬಿಲ್ವಪತ್ರೆಗಳಿಂದ ದುರ್ಗಾ ಅಷ್ಟೋತ್ತರ ಅರ್ಚನೆಯನ್ನೂ ಮಾಡಬೇಕು.

ನೈವೇದ್ಯ : ಜೇನುತುಪ್ಪ, ಉದ್ದಿನವಡೆ, ಚಿಗಳಿ ಪುಡಿ (ಎಳ್ಳಿನ ಪುಡಿಯೊಂದಿಗೆ ಕಲ್ಲುಸಕ್ಕರೆ ಸೇರಿದ್ದು) ಕಾಳುಮೆಣಸು ಸೇರಿಸಿದ ಅನ್ನ.

ಜಪ : ಈಶಾನ್ಯ ದಿಕ್ಕಿಗೆ ಎದುರಾಗಿ ಕುಳಿತು ೩೦ ದಿನಗಳ ಕಾಲ ದಿನಕ್ಕೆ ೧೦೦೦ ಬಾರಿ ಶ್ಲೋಕವನ್ನು ಜಪಿಸಬೇಕು.

ಫಲ : **ಭೂತಪ್ರೇತಬಾಧೆ ನಿವೃತ್ತಿ, ಅಪಸ್ಮಾರಾದಿರೋಗ ನಿವೃತ್ತಿ.**

ಶ್ಲೋಕ–೨೫

ದೇವೀಪೂಜೆಯೇ ತ್ರಿಮೂರ್ತಿಗಳಿಗೂ ಸಲ್ಲುವುದು

ತ್ರಯಾಣಾಂ ದೇವಾನಾಂ ತ್ರಿಗುಣಜನಿತಾನಾಂ[೧] ತವ ಶಿವೇ
ಭವೇತ್ಪೂಜಾ ಪೂಜಾ ತವ ಚರಣಯೋರ್ಯಾ ವಿರಚಿತಾ
ತಥಾ ಹಿ ತ್ವತ್ಪಾದೋದ್ವಹನಮಣಿಪೀಠಸ್ಯ ನಿಕಟೇ
ಸ್ಥಿತಾಃ ಹ್ಯೇತೇ ಶಶ್ವನ್ಮುಕುಲಿತಕರೋತ್ತಂಸಮಕುಟಾಃ ॥ ೨೫ ॥

ಪಾಠಾಂತರ

೧. (ತವಶಿವೇ) = ತವ ಜನಿತನಾಮಪಿ (ಸು)

ಪದವಿಭಾಗ

ತ್ರಯಾಣಾಂ, ದೇವಾನಾಂ, ತ್ರಿಗುಣಜನಿತಾನಾಂ, ತವ, ಶಿವೇ, ಪೂಜಾ, (ಭವೇತ್ಪೂಜಾ) = ಭವೇತ್+ಪೂಜಾ, ತವ, (ಚರಣಯೋರ್ಯಾ), = ಚರಣಯೋಃ +ಯಾ, ವಿರಚಿತಾ, ತಥಾ, ಹಿ (ತ್ವತ್ಪಾದೋದ್ವಹನ ಮಣಿಪೀಠಸ್ಯ) = ತ್ವತ್+ ಪಾದ+ಉದ್ವಹನ+ಮಣಿಪೀಠಸ್ಯ, ನಿಕಟೇ, ಸ್ಥಿತಾ, (ಹ್ಯೇತೇ) = ಹಿ+ಏತೇ, (ಶಶ್ವನ್ಮುಕುಲಿತಕರೋತ್ತಂಸಮಕುಟಾಃ) = ಶಶ್ವತ್+ಮುಕುಲಿತ + ಕರಾಃ + ಉತ್ತಂಸಮಕುಟಾಃ

ಅನ್ವಯಾರ್ಥ

(ಹೇ ಶಿವೆ)	(ಮಂಗಳಕರಳಾದ ಎಲೈ ದೇವಿಯೆ)
ತವ	ನಿನ್ನ
ತ್ರಿಗುಣಜನಿತಾನಾಂ	ಸತ್ವ, ರಜಸ್ಸು, ತಮಸ್ಸು ಎಂಬ ಮೂರು ಗುಣಗಳಿಂದ – ಉತ್ಪನ್ನರಾದ
ತ್ರಯಾಣಾಂ ದೇವಾನಾಂ	ಬ್ರಹ್ಮ, ವಿಷ್ಣು, ಮಹೇಶ್ವರೆಂಬ ಮೂರು ಮಂದಿಗೆ
ತವ ಚರಣಯೋಃ	ನಿನ್ನ ಪಾದಕಮಲಗಳಲ್ಲಿ
ಯಾ ಪೂಜಾ ವಿರಚಿತಾ	ಯಾವ ಪೂಜೆಯು ಮಾಡಲ್ಪಟ್ಟುದ್ದಾಗಿ
ಭವೇತ್	ಆಗಿದೆಯೋ

ತಥಾ ಹಿ ಪೂಜಾ ಭವೇತ್	ಅದೇ ಪೂಜೆಯೇ ಆಗುವುದು (ಏಕೆಂದರೆ)
ತ್ವತ್ಪಾದೋದ್ವಹನ ಮಣಿಪೀಠಸ್ಯ	ನಿನ್ನ ಕಾಲುಗಳನ್ನು–ಇಡುವುದಕ್ಕಾಗಿ ಮಾಡಿದ – ರತ್ನಪೀಠದ
ನಿಕಟೇ	ಸಮೀಪದಲ್ಲಿ
ಏತೇ ಹಿ	ಈ ಬ್ರಹ್ಮಾದಿಗಳು ತಾವೇ
ಮುಕುಳಿತಕರೋತ್ತಂಸ ಮಕುಟಾಃ	(ಮುಕುಳಿತ+ಕರಾಃ+ಉತ್ತಂಸಾಃ) ಮುಗಿಯಲ್ಪಟ್ಟ–ಕೈಗಳೆಂಬ ಶಿರೋಭೂಷಣ ಗಳಿಂದ ಕೂಡಿದ ಕಿರೀಟವುಳ್ಳವರಾಗಿ
ಶಶ್ವತ್ ಸ್ಥಿತಾಃ	ಸದಾ ಇರುತ್ತಾರೆ.

ತಾತ್ಪರ್ಯ

ಮಂಗಳಕರಳಾದ ಎಲೈದೇವಿಯೆ, ಸತ್ವರಜ ತಮಸ್ಸುಗಳೆಂಬ ಮೂರು ಗುಣಗಳಿಂದ ಉತ್ಪನ್ನರಾದ ಬ್ರಹ್ಮ–ವಿಷ್ಣು–ರುದ್ರರೆಂಬ ದೇವತೆಗಳಿಗೆ ನಿನ್ನ ಪಾದಕಮಲಗಳಲ್ಲಿ ಯಾವ ಪೂಜೆಯು ಅರ್ಪಿತವಾಗುವುದೋ ಅದೇ ಪೂಜೆಯು ಆಗುವುದು. ಏಕೆಂದರೆ ಆ ಕಿರೀಟಧಾರಿಗಳಾದ ತ್ರಿಮೂರ್ತಿಗಳು ತಮ್ಮ ಕೈಗಳನ್ನು ಜೋಡಿಸಿಕೊಂಡು ನಿನ್ನ ಪಾದಗಳು ಪ್ರತಿಷ್ಠಿತವಾದ ಮಣಿಪೀಠಕ್ಕೆ ನಮಸ್ಕಾರ ಮಾಡುತ್ತಿರುವುದರಿಂದ, ನಿನ್ನ ಪಾದಪೂಜೆಯೇ ಅವರ ಶಿರಸ್ಸುಗಳಿಗೆ ಸಲ್ಲಿಸಿದ ಪೂಜೆಯೇ ಆಗುತ್ತದೆ. ಅವರಿಗೆ ಪ್ರತ್ಯೇಕ ಪೂಜೆಯ ಆವಶ್ಯಕತೆಯೇ ಇಲ್ಲ.

ಪದ್ಯಾನುವಾದ

ಹೇ ಶಿವೇ! ನಿನ್ನ ಗುಣಮೂರರಿಂ ಹುಟ್ಟುವಡೆ
ದಿರುವ ಅಜ ವಿಷ್ಣುರುದ್ರಗಳಿಗದಾವುದದು
ಪೂಜೆಯೆನಲಾವ ಪೂಜೆಯು ನಡೆವುದೋ ನಿನ್ನ ಚರಣಗಳಿಗದೆಯವರಿಗೂ;
ನಿನ್ನಡಿಗಳನ್ನೆತ್ತಿ ಹಿಡಿದಿರುವ ಮಣಿಖಚಿತ
ಪೀಠದ ಸಮೀಪದಲ್ಲಿ ಮುಗಿದ ಕೈಗಳಿನೆಸೆವ
ಮಕುಟಗಳ ದೇವರ್ಕಳಿಹರಲ್ತೆ – ಏಕವರ್ಗೆ* ಬೇರೆ ಪೂಜೆ? ॥ ೨೫ ॥

ಟಿಪ್ಪಣಿಗಳು

೧. ದೇವೀಪೂಜೆಯೇ ಶ್ರೇಷ್ಠ ಮತ್ತು ಯೋಗ್ಯ ಏಕೆಂದರೆ '**ಪೂಜ್ಯ ಪೂಜನಂ ಪೂಜಾ ನ ಹಿ ಅಪೂಜ್ಯಪೂಜನಂ**' ಪೂಜ್ಯರಾದವರನ್ನು ಅರ್ಚಿಸುವುದೇ 'ಪೂಜೆ'; ಪೂಜೆಗೆ ಯೋಗ್ಯರಲ್ಲದವರ ಅರ್ಚನೆಯಲ್ಲ ಎಂಬ ಮಾತಿದೆ.

೨. **ವಿಷ್ಣುಪೂಜಾ ಸಹಸ್ರಾಣಿ ಶಿವಪೂಜಾ ಶತಾನಿ ಚ ಅಂಬಿಕಾ ಚರಣಾರ್ಚ್ಯಾಯಾಃ ಕಲಾಂ ನಾರ್ಹತಿ ಷೋಡಶಂ** ಎಂದು ದೇವಿಪುರಾಣದಲ್ಲಿ ಹೇಳಿದೆ.

(ಸಾವಿರಬಾರಿ ವಿಷ್ಣುಪೂಜೆ ಮಾಡಿದರೂ, ಶಿವಪೂಜೆಯನ್ನು ನೂರುಬಾರಿ ಮಾಡಿದರೂ ಅಂಬಿಕೆಯ ಚರಣಗಳಿಗೆ ಮಾಡುವ ಷೋಡಶ ಪೂಜೆ ಸಮಾನ ಯಾವುದೂ ಇಲ್ಲ) (ತು-ಪುಟ ೧೫೫)

೩. **ತ್ರಿಗುಣಜನಿತಾನಾಂ ತ್ರಯಾಣಾಂ**

(ಮೂರು ಗುಣಗಳಿಂದ ಜನಿಸಿದ ಬ್ರಹ್ಮ ವಿಷ್ಣು ಶಿವರು ಮೂವರೂ) ತ್ರಿಮೂರ್ತಿಗಳು ಸತ್ತ್ವ ರಜ ತಮ ಗುಣಗಳಿಂದ ಜನಿಸಿದ್ದಾರೆ ಎಂದು ಈ ಶ್ಲೋಕದಲ್ಲಿ ಹೇಳಲಾಗಿದೆ. ಆ ಮೂರು ಗುಣಗಳ ಸ್ವರೂಪ ಹೀಗಿದೆ. ಈ ಗುಣಗಳು ತ್ರಿಮೂರ್ತಿಗಳಿಗೂ ಅನ್ವಯಿಸುತ್ತದೆ.

೧. **ಸತ್ತ್ವಗುಣ** : ಮನೋನಿಗ್ರಹ, ಇಂದ್ರಿಯನಿಗ್ರಹ, ಸ್ಥೈರಣೆ, ವಿವೇಕ, ಸ್ವಧರ್ಮಾಚರಣೆ, ಸತ್ಯ, ದಯೆ, ಪೂರ್ವಾಪರಾನುಸಂಧಾನ ಸಂತುಷ್ಟಿ, ಗುರುಭಕ್ತಿ, ವೇದಾದಿಗಳಲ್ಲಿ ವಿಶ್ವಾಸ, ಹೀನಕೃತ್ಯಗಳಲ್ಲಿ ನಾಚಿಕೆ, ಔದಾರ್ಯ, ವಿನಯಾದಿ ಸದ್ಗುಣಗಳ ವರ್ತನೆ, ನಿಷ್ಕಾಪಟ್ಯ, ಆತ್ಮಾನಂದ –ಇವು ಸತ್ತ್ವಗುಣಗಳು.

೨. **ರಜೋಗುಣ** : ವಿಷಯಾಭಿಲಾಷೆ, ವ್ಯಾಪಾರ, ದರ್ಪ, ಅತೃಪ್ತಿ, ಗರ್ವ, ಧನಾಶೆಯಿಂದ ದೇವತಾಪ್ರಾರ್ಥನೆ, ಭೇದಬುದ್ಧಿ, ವಿಷಯೋಪ ಭೋಗ, ಮದದಿಂದ ಯುದ್ಧಾದಿಗಳಲ್ಲಿ ಅಭಿನಿವೇಶ, ಸ್ತೋತ್ರಪ್ರಿಯತ್ವ, ಪರಿಹಾಸ, ಪ್ರಭಾವಪ್ರಕಟನೆ–ಇವು ರಜೋಗುಣದ ಲಕ್ಷಣಗಳು.

೩. **ತಮೋಗುಣ** : ಅಸಹಿಷ್ಣುತೆ, ಜಿಪುಣತನ, ಅಧೃತ, ಪ್ರಾಣಿಹಿಂಸೆ, ದಂಭ, ಶ್ರಮ, ಕಲಹ, ಶೋಕ, ಭ್ರಾಂತಿ, ದುಃಖ, ದೈನ್ಯ, ತೂಕಡಿಕೆ, ಆಶೆ, ಭಯ, ಸೋಮಾರಿತನ –ಇವು ತಮೋಗುಣದ ಲಕ್ಷಣಗಳು. (ಶಂ-ಪುಟ ೭೩)


೪. **ಸ್ಥಿತಾಹ್ಯೇತೇ ಶಶ್ವನ್ಮುಕುಳಿತಕರೋತ್ತಂಸಮಕುಟಾಃ**

ತ್ರಿಮೂರ್ತಿಗಳು ಸರ್ವಕಾಲದಲ್ಲೂ ಸರ್ವಾವಸ್ಥೆಯಲ್ಲೂ ಶ್ರೀದೇವಿಯ ಪಾದಗಳಿಗೆ ನಮಸ್ಕರಿಸುತ್ತಿರುತ್ತಾರೆ. ಆಗ ಕೈಗಳೆರಡನ್ನು ಜೋಡಿಸಿಕೊಂಡು ತಮ್ಮ ತಲೆಯ ಕಿರೀಟಗಳನ್ನು ತೆಗೆದು ಇಟ್ಟುಕೊಂಡು ನಮಸ್ಕರಿಸು ತ್ತಿರುತ್ತಾರೆ. ಆ ಕೈಗಳ ಬೆರಳುಗಳಲ್ಲಿ ಉಂಗುರ ಮೊದಲಾದ ಆಭರಣಗಳನ್ನು ಹೊಂದಿರುವುದು ಕಿರೀಟಗಳು ಆಭರಣಭೂಷಿತವಾದಂತೆ

ಕಾಣುತ್ತದೆ. ಈ ರೀತಿ ನಮಸ್ಕರಿಸುವಾಗ ಎತ್ತರದ ಸಿಂಹಾಸನದಲ್ಲಿ ಕುಳಿತ ಶ್ರೀದೇವಿಯ ಕಾಲುಗಳು ಕೆಳಗಡೆ ಇರುವ ಮಣಿಪೀಠದ ಮೇಲೆ ಇರುತ್ತದೆ. ಆ ಮಣಿಪೀಠದಬಳಿ ತ್ರಿಮೂರ್ತಿಗಳ ಶಿರಸ್ಸುಗಳು ಬಾಗಿರುತ್ತವೆ. ಹಾಗಾಗಿ ದೇವಿಯನ್ನು ಪಾದಗಳಲ್ಲಿ ಪೂಜಿಸಿದಾಗ ಅವರನ್ನೂ ಪೂಜಿಸಿದಂತಾಗುವುದರಿಂದ ಪ್ರತ್ಯೇಕ ಪೂಜೆ ತ್ರಿಮೂರ್ತಿಗಳಿಗೆ ಅಗತ್ಯವಿಲ್ಲ. (ಪೋ–ಪುಟ ೧೩೬)

೫. ಈ ಸೃಷ್ಟಿಯ ನಿರ್ವಾಹವೇ ತ್ರಿಮೂರ್ತಿಗಳು ನಡೆಸುತ್ತಿರುವ ಭಗವದರ್ಚನೆಯಾದುದರಿಂದ ನಾವು ಈ ಸೃಷ್ಟಿಯ ಪ್ರವಾಹದಲ್ಲಿ ಕಾಣಿಸಿಕೊಂಡ ಸಂತತಿಯಾದುದರಿಂದ ನಮ್ಮ ಬಾಳು ನಮಗೆ ತಿಳಿಯದೆಯೇ ತಾಯಿ ಭಗವತಿಯ ಅರ್ಚನೆಯಾಗಿಯೇ ಇರುವುದು. ಆದುದರಿಂದಲೇ ಈ ಕಾಣ್ಕೆಯ ಇನ್ನೊಂದು ಮುಖವಾಗಿ ನಾವು ಮಾಡುವ ತಾಯಿಯ ಅರ್ಚನೆಯೂ ಸೃಷ್ಟಿ ನಿರ್ವಾಹಕರಾದ ತ್ರಿಮೂರ್ತಿಗಳ ಅರ್ಚನೆಯೂ ಆದಂತೆ. (ತೋ–ಪುಟ ೨೩೭)

ಯಂತ್ರಾರಾಧನೆ (ಶ್ಲೋಕ–೨೫)



ಯಂತ್ರರಚನೆ : ಚಿನ್ನದ ತಗಡಿನಲ್ಲಿ ಮಾಡಬೇಕು. ಮೂರು ತ್ರಿಶೂಲಗಳಿಂದ ಕೂಡಿರುವ ಸಮಭುಜ ತ್ರಿಕೋನ (ಕೆಳಮುಖಶೃಂಗ)ವನ್ನು ಸೌಃ ಬೀಜಾಕ್ಷರ ನಡುವೆ ಇರುವಂತೆ ಬರೆಯಬೇಕು.

ಪೂಜೆ : ಕೆಂಪು ಹೂಗಳಿಂದ ಅಥವಾ ಕುಂಕುಮದಿಂದ ಲಲಿತಾತ್ರಿಶತೀ ಅರ್ಚನೆ ಮಾಡಬೇಕು.

ನೈವೇದ್ಯ : ಜೇನುತುಪ್ಪ, ಅನ್ನ, ಹಾಲು, ಕಲ್ಲುಸಕ್ಕರೆ, ಹಣ್ಣುಗಳು

ಜಪ : ಪೂರ್ವಾಭಿಮುಖವಾಗಿ ಕುಳಿತು ೪೫ ದಿನಗಳ ಕಾಲ ಪ್ರತಿದಿನ ೧೦೦೦ ಬಾರಿ ಶ್ಲೋಕವನ್ನು ಜಪಿಸಬೇಕು.

ಫಲ : ಉತ್ಕೃಷ್ಟ ಪದವೀಲಾಭ ; ರಾಜಕೀಯಾಧಿಕಾರ.

ಶ್ಲೋಕ-೨೬

ಪರಶಿವನ ಶಾಶ್ವತತೆ

ವಿರಿಂಚಿಃ ಪಂಚತ್ವಂ ವ್ರಜತಿ ಹರಿರಾಪ್ನೋತಿ ವಿರತಿಂ
ವಿನಾಶಂ ಕೀನಾಶೋ ಭಜತಿ ಧನದೋ ಯಾತಿ ನಿಧನಮ್ ।
[೧]ವಿತಂದ್ರೀ ಮಾಹೇಂದ್ರೀ ವಿತತಿರಪಿ [೨]ಸಂಮೀಲಿತದೃಶಾ
ಮಹಾಸಂಹಾರೇಽಸ್ಮಿನ್ ವಿಹರತಿ ಸತಿ ತ್ವತ್ಪತಿರಸೌ ॥ ೨೬ ॥

ಪಾಠಾಂತರ

೧. (ವಿತಂದ್ರೀ) = ವಿತಂದ್ರಾ (ಸು)

೨. (ಸಂಮೀಲಿತ ದೃಶಾ) = ಸಂಮಿಲತಿ ದೃಶಾ (ಸು) = ಸಂಮೀರಿತ ದೃಶಾ (ಜ)

ಪದವಿಭಾಗ

ವಿರಂಚಿಃ, ಪಂಚತ್ವಂ, ವ್ರಜತಿ, (ಹರಿರಾಪ್ನೋತಿ) = ಹರಿಃ+ಆಪ್ನೋತಿ, ವಿರತಿಂ, ವಿನಾಶಂ, (ಕೀನಾಶೋ) = ಕೀನಾಶಃ, ಭಜತಿ, (ಧನದೋ) = ಧನದಃ, ಯಾತಿ, ನಿಧನಮ್, ವಿತಂದ್ರೀ ಮಾಹೇಂದ್ರೀ, (ವಿತತಿರಪಿ) = ವಿತತಿಃ+ಅಪಿ, ಸಂಮೀಲಿತದೃಶಾ, (ಮಹಾಸಂಹಾರೇಽಸ್ಮಿನ್) =ಮಹಾಸಂಹಾರೇ+ಅಸ್ಮಿನ್, ವಿಹರತಿ, ಸತಿ, (ತ್ವತ್ಪತಿರಸೌ) = ತ್ವತ್ಪತಿಃ+ಅಸೌ.

ಅನ್ವಯಾರ್ಥ

ವಿರಿಂಚಿಃ ಪಂಚತ್ವಂ ವ್ರಜತಿ	ಬ್ರಹ್ಮನು ನಾಶವನ್ನು ಹೊಂದುತ್ತಾನೆ.
ಹರಿಃ ವಿರತಿಂ ಆಪ್ನೋತಿ	ವಿಷ್ಣುವು ಶಾಂತತೆಯನ್ನು ಹೊಂದುತ್ತಾನೆ
ಕೀನಾಶಃ ವಿನಾಶಂ ಭಜತಿ	ಯಮನು ವಿನಾಶವನ್ನು ಹೊಂದುತ್ತಾನೆ
ಧನದಃ ನಿಧನಂ ಯಾತಿ	ಕುಬೇರನು (ಸಾವನ್ನು ಹೊಂದುತ್ತಾನೆ) ಧನವಿಲ್ಲದವನು ಆಗುತ್ತಾನೆ
ಮಾಹೇಂದ್ರೀ	ಇಂದ್ರಸಂಬಂಧಿಯಾದಂಥ
ವಿತತಿರಪಿ	ಸಮೂಹವೂ ಕೂಡ (೧೪ ಜನ ಇಂದ್ರರೂ ಕೂಡ)

ಸಮ್ಮೀಲಿತದೃಶಾ ವಿತಂದ್ರೀ ಭವತಿ	ಮುಚ್ಚಲ್ಪಟ್ಟ –ಕಣ್ಣುಗಳುಳ್ಳುದ್ದಾಗಿ ದೀರ್ಘನಿದ್ರೆಯುಳ್ಳದ್ದಾಗಿ– (ಮರಣ) ಆಗುತ್ತದೆ
ಅಸ್ಮಿನ್ ಮಹಾಸಂಹಾರೇ ಸತಿ	ಈಮಹಾ ಪ್ರಳಯವಾಗುತ್ತಿರಲಾಗಿ (ಹೇ ಪತಿವ್ರತೆಯೇ)
ಅಸೌ ತ್ವತ್ಪತಿಃ	ಈ ನಿನ್ನ ಪತಿಯಾದ ಸದಾಶಿವನು (ನಿನ್ನೊಂದಿಗೆ ಸಹಸ್ರದಳ ಪದ್ಮದಲ್ಲಿ)
ವಿಹರತಿ	ವಿಹರಿಸುತ್ತಾನೆ

ತಾತ್ಪರ್ಯ

ಬ್ರಹ್ಮನು ಪಂಚತ್ವವನ್ನು (ನಾಶವನ್ನು) ಅಪ್ಪುತ್ತಾನೆ; ವಿಷ್ಣುವು ಮರಣವನ್ನು (ಶಾಂತತೆಯನ್ನು) ಹೊಂದುತ್ತಾನೆ. ಯಮನು ಮರಣವನ್ನು (ವಿನಾಶವನ್ನು) ಹೊಂದುತ್ತಾನೆ. ಕುಬೇರನು ನಿರ್ಧನವನ್ನು (ಸಾವನ್ನು) ಹೊಂದುತ್ತಾನೆ. ಇಂದ್ರಸಂಬಂಧಿಯಾದ ಸಮೂಹವೂ ಕೂಡ (೧೪ಜನ ಇಂದ್ರರೂ ಕೂಡ) ಮರಣವನ್ನು (ಮುಚ್ಚಲ್ಪಟ್ಟ ಕಣ್ಣುಗಳುಳ್ಳದ್ದಾಗಿ) ದೀರ್ಘನಿದ್ರೆಯನ್ನು (ಸಾವನ್ನು) ಅಪ್ಪುತ್ತದೆ. ಓ ಪತಿವ್ರತೆಯಾದ ಭಗವತಿಯೇ ಇಷ್ಟೆಲ್ಲ ಆದರೂ ಈ ಜಗತ್ತಿನ ಪ್ರಳಯದಲ್ಲಿ ಕಲ್ಪದ ಕೊನೆಯಲ್ಲಿ ನಿನ್ನ ಪತಿಯಾದ ಸದಾಶಿವನು ನಿನ್ನೊಂದಿಗೆ (ಸಹಸ್ರದಳಪದ್ಮದಲ್ಲಿ) ಸುಖದಿಂದ ವಿಹರಿಸುತ್ತಾನೆ. ಇದು ನಿನ್ನ ಪಾತಿವ್ರತ್ಯದ ಮಹಿಮೆಯೇ ಸರಿ.

ಪದ್ಯಾನುವಾದ

ಪಂಚತ್ವವನು ವಿರಿಂಚಿಯು ಪಡೆವನಾ ಹರಿ ವಿ–
ರಾಮವನ್ನೊಂದುವನು ಕೀನಾಶನಿಗೆ ಕೊನೆಗೆ
ಗತಿ ವಿನಾಶವು ಧನದನವನಾಗುವನು ನಿಧನ ನೋಡು ಇಂತಿವರ ಪಾಡು;
ಮಾಹೇಂದ್ರ ಮೊದಲಪ್ಪ ದೇವರ್ಕಳೆಲ್ಲರುಂ
ದೀರ್ಘನಿದ್ರೆಯ ಕಡೆಗೆ ತೆರಳುವರು ಕೊನೆಗೊಮ್ಮೆ;
ಹೇ ಸತಿಯೆ, ಈ ಮಹಾಪ್ರಲಯದಲಿ ನಿನ್ನ ಪತಿ ವಿಹರಿಸುತ್ತಿರುವನಲ್ತೆ! ॥೨೬॥

ಟಿಪ್ಪಣಿಗಳು

೧. **ವಿರಂಚಿಃ ಪಂಚತ್ವಂ ವ್ರಜತಿ**

(ಬ್ರಹ್ಮನು ನಾಶವನ್ನು ಹೊಂದುತ್ತಾನೆ) ಬ್ರಹ್ಮನು ಲೋಕಗಳನ್ನು ಸೃಷ್ಟಿಸುತ್ತಾನೆ. ಅಂಥ ಸೃಷ್ಟಿಕರ್ತನು ಪಂಚತ್ವ ಹೊಂದುತ್ತಾನೆ. ಎಂದರೆ

ಜೀವಿಗಳ ಶರೀರವು ಪಂಚಭೂತಗಳಿಂದ ನಿರ್ಮಿತವಾಗಿದೆ. ಈ ೫ ಪ್ರಕೃತಿಗಳು (ಪಂಚಭೂತಗಳು) ತಮ್ಮ ತಮ್ಮ ಮೂಲ ಪ್ರಕೃತಿಗಳಲ್ಲಿ ಅಗ್ನಿ ವಾಯು ಆಕಾಶ ಇತ್ಯಾದಿಗಳಲ್ಲಿ ಲೀನವಾಗುತ್ತವೆ. ಆದ್ದರಿಂದ ಬ್ರಹ್ಮನ ಸೃಷ್ಟಿಯೇ ನಾಶವಾದ್ದರಿಂದ ಬ್ರಹ್ಮನು ನಾಶವನ್ನು ಹೊಂದಿದನು ಎಂದು ಹೇಳಲಾಗಿದೆ. (ಪೋ–ಪುಟ ೧೩೮)

೨. **ಹರಿಃ ವಿರತಿಂ ಆಪ್ನೋತಿ**

(ವಿಷ್ಣು ವಿರಾಮವನ್ನು ಹೊಂದುತ್ತಾನೆ) ಎಂದರೆ ತನ್ನ ಲೋಕಗಳನ್ನು ರಕ್ಷಿಸುವ ಕಾರ್ಯದಿಂದ ವಿರಾಮವನ್ನು ಹೊಂದುತ್ತಾನೆ. ಎಂದರೆ ತನ್ನ ಪರಿಪಾಲನಾ ಕಾರ್ಯವನ್ನು ತೊರೆಯುತ್ತಾನೆ. ಇದನ್ನೇ ಹರಿ ಮರಣವನ್ನು ಹೊಂದುತ್ತಾನೆ ಎಂದು ಹೇಳಲಾಗಿದೆ. (ಪೋ–ಪುಟ ೧೩೮)

೩. **ವಿತಂದ್ರೀ ಮಾಹೇಂದ್ರೀ ವಿತತಿರಪಿ ಸಮ್ಮೀಲಿತದೃಶಾ**

(ಇಂದ್ರ ಸಂಬಂಧಿ ಸಮೂಹವೂ ಕಣ್ಣು ಮುಚ್ಚಿಕೊಂಡು ದೀರ್ಘನಿದ್ರೆ ಹೊಂದುತ್ತದೆ). ವಿತಂದ್ರೀ ಅಂದರೆ ಗಾಢನಿದ್ರೆ ಹೊಂದುತ್ತಾರೆ. ಸಾಮಾನ್ಯವಾಗಿ ದೇವತೆಗಳು ಅನಿಮಿಷರು ಕಣ್ಮರೆಪ್ಪೆ ಮುಚ್ಚುವುದಿಲ್ಲ. ಆದ್ದರಿಂದ ಪ್ರಳಯಕಾಲದಲ್ಲಿ ಗಾಢನಿದ್ರೆ ಹೊಂದುತ್ತಾರೆ ಎಂಬುದನ್ನು ಅವರೂ ಮರಣಿಸುತ್ತಾರೆ ಎಂದು ಇಲ್ಲಿ ಹೇಳಲಾಗಿದೆ.

(ಪೋ–ಪುಟ ೧೩೯)

೪. **ಮಹಾಸಂಹಾರೇಽಸ್ಮಿನ್ ವಿಹರತಿ ಸತಿ ತ್ವತ್ಪತಿರಸೌ**

(ಮಹಾಪ್ರಳಯ ಕಾಲದಲ್ಲೂ ನಿನ್ನ ಪತಿಯಾದ ಸದಾಶಿವನು ನಿನ್ನೊಂದಿಗೆ ವಿಹರಿಸುತ್ತಾನೆ). ಮಹಾಪ್ರಳಯ ಕಾಲದಲ್ಲಿ ಎಲ್ಲರೂ ಮರಣಿಸಿದರೂ ಸದಾಶಿವನೊಬ್ಬನೇ ಉಳಿಯುತ್ತಾನೆ ಎಂದರೆ ಅದಕ್ಕೆ ಶ್ರೀದೇವಿಯ ಪಾತಿವ್ರತ್ಯವೇ ಕಾರಣ. ಈ ಶ್ಲೋಕದಲ್ಲಿ ಸತಿ ಅನ್ನುವ ಶಬ್ದವನ್ನು ಪತಿವ್ರತೆ ಎಂಬರ್ಥದಲ್ಲಿ ಪ್ರಯೋಗಿಸಲಾಗಿದೆ. ಪತಿ ಶಬ್ದದ ಸ್ತ್ರೀಲಿಂಗರೂಪವೇ ಸತಿ. ದೇವಶಕ್ತಿಮತೋರಭೇದಃ ಎಂಬ ಮಾತಿನಂತೆ ಶಿವಶಕ್ತಿಗಳು ಬೇರೆಯಲ್ಲ, ಸತ್‌ರೂಪಿಯಾದ ಪರಬ್ರಹ್ಮಸ್ವರೂಪಿ ಶಿವಬ್ರಹ್ಮನಿಗೆ ನಾಶವಿಲ್ಲ. ಆದ್ದರಿಂದ ದೇವಿಯೊಡನೆ ವಿಹರಿಸುತ್ತಾನೆ. ಉಳಿದವರಂತೆ ನಾಶವಾಗುವುದಿಲ್ಲ.

೫. ಸೂತಸಂಹಿತೆಯಲ್ಲಿ ಈ ವಿಷಯವೇ ಹೀಗೆ ಅಭಿವ್ಯಕ್ತವಾಗಿದೆ.


ಅಸಂಖ್ಯಾ ವಿಲಯಂ ಯಾಂತಿ ಬ್ರಹ್ಮಣಃ ಪಂಡಿತೋತ್ತಮಾಃ

ಅಸಂಖ್ಯಾ ವಿಷ್ಣುವೋ ರುದ್ರಾ ಅಸಂಖ್ಯಾ ವಾಸವಾದಯಃ
ಏಕ ಏವ ಶಿವಃ ಸಾಕ್ಷಾತ್ಸೃಷ್ಟಿ ಸ್ಥಿತ್ಯಂತ್ಯ ಹೇತವಃ (ತು–ಪುಟ ೧೫೮)

೬. ಶ್ರುತಿಪಾಠ ಹೀಗಿದೆ; "ಏಕ ಏವ ರುದ್ರೋ ನ ದ್ವಿತೀಯಾಯ ತಸ್ಥೇ" (ತು–ಪು–೧೫೮)

೭. ಈ ಹಾಡಿನಲ್ಲಿ ಶಬ್ದಗಳೊಡನೆ ಆಟವಾಡಿದ್ದಿದೆ. ವಿರಂಚಿ–ಪಂಚತ್ವ, ಹರಿ–ವಿರತಿ ಕೀನಾಶ–ವಿನಾಶ, ಧನದ–ನಿಧನ, ವಿತಂದ್ರೀ–ಮಾಹೇಂದ್ರೀ ಸತಿ–ಪತಿ....ಹೀಗೆ ವಿಹಾರದ ಬಣ್ಣನೆಯಲ್ಲಿ ಆಚಾರ್ಯರದೂ ಪದವಿಹಾರವೇ. (ತೋ–ಪುಟ ೨೪೨)

ಯಂತ್ರಾರಾಧನೆ (ಶ್ಲೋಕ–೨೬)



ಯಂತ್ರರಚನೆ : ಚಿನ್ನದ ತಗಡಿನಲ್ಲಿ ಬರೆಯಬೇಕು. ಚಿತ್ರದಲ್ಲಿರುವಂತೆ ವಿಶೇಷವಾದ ಚತುರಶ್ರ, ಅದರ ಎಡಭಾಗದಲ್ಲಿ ಮೇಲೆ ತ್ರಿಶೂಲ ವಲಯ, ಕೆಳಗೆ ಚತುರಶ್ರದ ರೇಖೆ ಎಡಕ್ಕೆ ಮುಂದುವರೆದು ಅರ್ಧವಲಯದಿಂದ ಕೂಡಿರುವಂತೆ ಯಂತ್ರ ರಚಿಸಬೇಕು.

ಪೂಜೆ : ಉತ್ತರಾಭಿಮುಖವಾಗಿ ಕುಳಿತು ಲಲಿತಾತ್ರಿಶತೀ ಕುಂಕುಮಾರ್ಚನೆ ಮಾಡಬೇಕು. ಅಮಾವಾಸ್ಯೆ ದಿನದಂದು ಶ್ಲೋಕವನ್ನು ೧೦೦೦ ಬಾರಿ ಪಠಿಸಿ ಪೂಜೆಮಾಡಬೇಕು. ಅಥವಾ ೬ ಅಮಾವಾಸ್ಯೆಗಳಲ್ಲಿ ಅಥವಾ ಅಮಾವಾಸ್ಯೆಯಿಂದ ೬ ದಿನಗಳು ಪೂಜಿಸಬೇಕು.

ನೈವೇದ್ಯ : ಬೆಲ್ಲಮಿಶ್ರಿತಹುಗ್ಗಿ, ತೆಂಗಿನಕಾಯಿ, ಬಾಳೆಹಣ್ಣು

ಜಪ : ಅಮಾವಾಸ್ಯೆದಿನ ಅಥವಾ ಅಮಾವಾಸ್ಯೆಯಿಂದ ೬ ದಿನಗಳ ಕಾಲ ಪ್ರತಿದಿನ ೧೦೦೦ ಬಾರಿ ಈ ಶ್ಲೋಕವನ್ನು ಜಪಿಸಬೇಕು.

ಫಲ : ಶತ್ರುಜಯ; ಕುಶಲಕಾರ್ಯಸಿದ್ಧಿ.

ಶ್ಲೋಕ–೨೭

ಸಕಲಕರ್ಮಗಳೂ ಸೇವಾರೂಪವಾಗುವಂತೆ ಪ್ರಾರ್ಥನೆ

ಜಪೋ[1] ಜಲ್ಪಶ್ಶಿಲ್ಪಂ ಸಕಲಮಪಿ[2] ಮುದ್ರಾವಿರಚನಾ
ಗತಿಃ ಪ್ರಾದಕ್ಷಿಣ್ಯಕ್ರಮಣಮಶನಾದ್ಯಾಹುತಿವಿಧಿಃ ।
ಪ್ರಣಾಮಸ್ಸಂವೇಶಃ ಸುಖಮಖಿಲಮಾತ್ಮಾರ್ಪಣ[3]ದೃಶಾ
ಸಪರ್ಯಾಪರ್ಯಾಯಸ್ತವ ಭವತು ಯನ್ಮೇ ವಿಲಸಿತಮ್ ॥ ೨೭ ॥

ಪಾಠಾಂತರ

೧. (ಜಲ್ಪಶ್ಶಿಲ್ಪಂ) =ಜಲ್ಪಃ ಶಿಲ್ಪಂ (ಓ)
೨. (ಮುದ್ರಾವಿರಚನಾ) = ಮುದ್ರಾವಿರಚನಂ (ಸು)
೩. (ಸೃಶಾ) =ದಶಾ (ಸು)

ಪದವಿಭಾಗ

(ಜಪೋ)=ಜಪಃ, (ಜಲ್ಪಶ್ಶಿಲ್ಪಂ)= ಜಲ್ಪಃ+ಶಿಲ್ಪಂ, (ಸಕಲಮಪಿ)=ಸಕಲಂ+ಅಪಿ, ಮುದ್ರಾವಿರಚನಾ, ಗತಿಃ, (ಪ್ರಾದಕ್ಷಿಣ್ಯಕ್ರಮಣಮಶನಾದ್ಯಾಹುತಿವಿಧಿಃ) = ಪ್ರಾದಕ್ಷಿಣ್ಯಕ್ರಮಣಮ್+ ಅಶನಾದಿ+ಆಹುತಿವಿಧಿಃ, (ಪ್ರಣಾಮಸ್ಸಂವೇಶಃ) = ಪ್ರಣಾಮಃ +ಸಂವೇಶಃ, (ಸುಖಮಖಿಲಮಾತ್ಮಾರ್ಪಣದೃಶಾ) = ಸುಖಂ+ಅಖಿಲಂ+ ಆತ್ಮಾರ್ಪಣದೃಶಾ, (ಸಪರ್ಯಾಪರ್ಯಾಯಸ್ತವ) = ಸಪರ್ಯಾಪರ್ಯಾಯಃ+ತವ, ಭವತು, (ಯನ್ಮೇ) = ಯತ್+ಮೇ, ವಿಲಸಿತಮ್.

ಅನ್ವಯಾರ್ಥ

(ಹೇ ಭಗವತಿ)	(ಎಲೈ ಸರ್ವಜ್ಞಳಾದ ದೇವಿಯೆ,)
ಆತ್ಮಾರ್ಪಣದೃಶಾ	ನಿನ್ನಲ್ಲಿ–ಒಪ್ಪಿಸುವ–ಬುದ್ಧಿಯಿಂದ (ಮಾಡಿದ)
ಮೇ ಜಲ್ಪಃ	ನನ್ನ ಮಾತು
ಜಪಃ	ನನ್ನ ಮಂತ್ರಜಪವು ಆಗಿಯೂ
(ಮೇ) ಸಕಲಮಪಿ	(ನನ್ನ) ಸಮಸ್ತವಾದ
ಶಿಲ್ಪಂ	ಅಂಗಚಲನೆಯೂ

ಮುದ್ರಾ ವಿರಚನಾ	ಸಂಕ್ಷೋಭ ಮುಂತಾದ ಮುದ್ರೆಗಳನ್ನು ತೋರಿಸೋಣವಾಗಿಯೂ
(ಮೇ) ಗತಿಃ	(ನನ್ನ) ಸಂಚಾರವೂ
ಪ್ರಾದಕ್ಷಿಣ್ಯ ಕ್ರಮಣಂ	ಪ್ರದಕ್ಷಿಣವನ್ನು ಮಾಡುವುದಾಗಿಯೂ
(ಮೇ) ಅಶನಾದಿ ವಿಧಿಃ	(ನನ್ನ) ಭೋಜನಾದಿಗಳು ಎಲ್ಲ
ಆಹುತಿ	ಆಹುತಿಕ್ರಮವಾಗಿಯೂ
ಸಂವೇಶಃ	ಮಲಗೋಣವು
ಪ್ರಣಾಮಃ	ನಮಸ್ಕಾರವಾಗಿಯೂ
ಅಖಿಲ ಸುಖಂ	ಸಮಸ್ತಸುಖವು
(ಮೇ)	(ನನ್ನ)
ಯದ್ವಿಲಸಿತಂ ಚ	ಯಾವ ಚಲನಾದಿಕ್ರಿಯೆಯು ಯಾವುದುಂಟೋ ಅದೂ ಕೂಡ
ತವ	ನಿನ್ನ
ಸಪರ್ಯಾ ಪರ್ಯಾಯಃ	ಪೂಜೆಯ–ರೂಪಾಂತರವಾಗಿ
ಭವತು	ಆಗಲಿ

ತಾತ್ಪರ್ಯ

ಓ ಭಗವತಿ, ಆತ್ಮಾರ್ಪಣಬುದ್ಧಿಯಿಂದ (ನಿನ್ನಲ್ಲಿ ಒಪ್ಪಿಸುವ ಬುದ್ಧಿಯಿಂದ ಮಾಡಿದ) ಯಾದೃಚ್ಛಿಕವಾದ ಸಲ್ಲಾಪವು (ನಾನಾಡಿದ ಮಾತುಗಳೆಲ್ಲ) ಮಂತ್ರ ಜಪವಾಗಲಿ.

ನನ್ನ ಎಲ್ಲ ಹಸ್ತವಿನ್ಯಾಸಗಳು ನಿನ್ನ ಪೂಜೆಗೆ ಯೋಗ್ಯವಾದ ಮುದ್ರಾರಚನೆಗಳಾಗಲಿ. ಇನ್ನು ನಾನು ನಡೆದಾಡುವುದೆಲ್ಲ ನಿನಗೆ ಪ್ರದಕ್ಷಿಣ ನಮಸ್ಕಾರಕ್ರಿಯೆಯಾಗಲಿ. ನಾನು ಊಟಮಾಡುವುದು ಮೊದಲಾಗಿ ಆಹಾರ ತೆಗೆದುಕೊಳ್ಳುವುದೆಲ್ಲವೂ ನಿನಗೆ ಯಜ್ಞದಲ್ಲಿ ಅರ್ಪಿಸುವ ಹವಿಸ್ಸಾಗಲಿ. ನಾನು ಮಲಗುವುದೇ ನಿನಗೆ ನಾನು ಮಾಡುವ ಸಾಷ್ಟಾಂಗ ದಂಡಪ್ರಣಾಮವಾಗಲಿ. ಶರೀರದ ಚಲನಾದಿಕ್ರಿಯೆಗಳು ಪ್ರತಿದಿನದ ನಿತ್ಯಜೀವನದ ಸಹಜಕ್ರಿಯೆಗಳು ಆತ್ಮಾರ್ಪಣಬುದ್ಧಿಯಿಂದ ನಿನಗೆ ಮಾಡುವ ಷೋಡಶೋಪಚಾರ ಪೂಜೆಗಳಾಗಲಿ.

ಈ ರೀತಿಯ ಆತ್ಮಾರ್ಪಣ ಪೂಜಾಕ್ರಮವನ್ನು ಸಾದಾಖ್ಯತತ್ತ್ವದ ಪೂಜೆ ಎನ್ನುತ್ತಾರೆ. ಈ ಪೂಜೆ ಬಾಹ್ಯಪೀಠದ ಮೂಲಕವಷ್ಟೇ ಅಲ್ಲ, ಹೃದಯದಲ್ಲಿರುವ ಸಹಸ್ರಾರಕಮಲಕ್ಕೆ ಸಲ್ಲಿಸುವ ಅಂತರಂಗದ ಪೂಜೆ. ಸಮಯಮತದಾಚರಣೆಯೂ ಆಗಿದೆ.

ಪದ್ಯಾನುವಾದ

ಹೇ ಜನನಿ, ಆತ್ಮಾರ್ಪಣದ ಬುದ್ಧಿಯಿಂದ ನಾ-
ನುಡಿವ ನುಡಿಯೇ ಜಪವು, ಗೈವ ಗೈಮೆಗಳೆಲ್ಲ
ಮುದ್ರಾವಿರಚನೆ, ತಿರುಗಾಟ ಪ್ರದಕ್ಷಿಣವು, ಅಶನವಾಹುತಿಯು ನಿನಗೆ;
ನಾ ಮಲಗಲದುವೆ ಪ್ರಣಾಮವಾಗಲಿ ನಿನಗೆ,
ನಾನು ಭೋಗಿಪ ವಿಷಯಸುಖವಾವುದಿದೆ
ಅದನೆ ನಾನರ್ಪಿಸುವ ಸರ್ವೋಪಚಾರ ಪೂಜಾವಿಧಿಯು ನಿನಗಾಗಲಿ
॥ ೨೭ ॥

ಟಿಪ್ಪಣಿಗಳು

೧. ಈ ಶ್ಲೋಕದ ಭಾವವನ್ನು ಶಂಕರರು ತಮ್ಮ ಸ್ತೋತ್ರವೊಂದರಲ್ಲಿ ಹೀಗೇ ಹೇಳಿದ್ದಾರೆ.

ಆತ್ಮಾ ತ್ವಂ ಗಿರಿಜಾಮತೇ ಸಹಚರಾಃಪ್ರಾಣಾಃ ಶರೀರಂ ಗೃಹೋ
ಪೂಜಾ ತೇ ವಿಷಯೋಃಪಭೋಗರಚನಾ ನಿದ್ರಾ ಸಮಾಧಿಸ್ಥಿತಿಃ
ಸಂಚಾರಃ ಪದಯೋಪ್ರದಕ್ಷಿಣ ವಿಧೌ ಸ್ತೋತ್ರಾಣಿ ಸರ್ವಾಗಿರೌ
ಯದ್ಯತ್ಕರ್ಮ ಕರೋಮಿ ತತ್ತದಖಿಲಂ ಶಂಭೋ ತವಾರಾಧನಂ ॥
(ಶಿವಮಾನಸಪೂಜಾಸ್ತೋತ್ರ)

(ಹೇ ಸದಾಶಿವ, ನನ್ನ ಆತ್ಮ ನೀನೆ. ನನ್ನ ಮತಿ ಗಿರಿಜಾದೇವಿ ನಿನ್ನ ಜತೆಗಾರರೇ ಪಂಚಪ್ರಾಣಗಳು, ನನ್ನೆಲ್ಲಾ ಕ್ರಿಯೆಗಳೂ ನಿನ್ನ ಪೂಜೆಯೇ ಆಗಿದೆ. ನನ್ನ ನಿದ್ರೆಯೋ ನಿನ್ನನ್ನು ಧ್ಯಾನಮಾಡಿ ಹೊಂದುವ ಸಮಾಧಿಸ್ಥಿತಿ ಆಗಿದೆ. ನಾನು ಚಲಿಸುವುದೆಲ್ಲ ನಿನಗೆ ಪ್ರದಕ್ಷಿಣೆ. ಶಂಭುವೇ, ನಾನಾಡುವ ಮಾತುಗಳೆಲ್ಲ ನಿನ್ನ ಸ್ತುತಿ ಆಗಿದೆ. ಹೆಚ್ಚೇನು ಹೇಳಲಿ ಶಬ್ದವೇ ನನ್ನ ಕಾಯಾವಾಚಾಮನಸಾ ಮಾಡುವ ಕರ್ಮಗಳೆಲ್ಲ ನಿನ್ನದೇ ಆರಾಧನೆ ಆಗಿದೆ.)

೨. ನಾವು ಮಾಡುವ ದೈಹಿಕಕ್ರಿಯೆಗಳು, ಲೌಕಿಕಕಾರ್ಯಗಳು ತಾಮಸ ಕ್ರಿಯೆಗಳೆಲ್ಲವೂ ಶಂಭವಿನ ಆರಾಧನೆ ಆಗುವುದಿಲ್ಲ. ಟಿವಿನೋಡುತ್ತಾ ಕಾರ್ಡ್ ಆಡುತ್ತಾ, ಪಾನಗೃಹಗಳಿಗೆ ಹೋಗುತ್ತಾ, ಕೆಲಸಕ್ಕೆ ಬಾರದ ಮಾತಾಡಿಕೊಳ್ಳುತ್ತಾ, ಚಾಡಿ ಮಾತಾಡಿಕೊಳ್ಳುತ್ತಾ ಹೊತ್ತಲ್ಲದ ಹೊತ್ತಿನಲ್ಲಿ ತಿಂಡಿ ಊಟನಿದ್ದೆಗಳಲ್ಲಿ ದಿನಕಳೆದು, ಇವೆಲ್ಲವು ಶಂಭುವಿನ ಆರಾಧನೆ ಎಂದುಕೊಳ್ಳುವುದರಲ್ಲಿ ಅರ್ಥವಿಲ್ಲ.

ನಮ್ಮಲ್ಲಿ ಶಾರೀರಕ, ಮಾನಸಿಕ, ಗೃಹಸಂಬಂಧ, ಸಾಮಾಜಿಕ ದೌರ್ಬಲ್ಯಗಳಿಂದ, ಸಾಂಗೋಪಾಂಗವಾಗಿ ಪೂಜೆ ಮಾಡಲಾರದವರು ಮನಸ್ಸಿನಲ್ಲಿಯೇ ಶರಣಾಗತಿಭಾವದಿಂದ ಮಾನಸಿಕವಾಗಿ ಆರಾಧಿಸುವುದಕ್ಕಾಗಿ ಆದಿಶಂಕರರು ಮಾನಸಸ್ತೋತ್ರಗಳನ್ನು ರಚಿಸಿದ್ದಾರೆ.

(ಪ–ಪುಟ ೨೬೬)

೩. **ಜಪೋ ಜಲ್ಪಃ**

ಜಲ್ಪವು ಎಂದರೆ ಸ್ವೇಚ್ಛೆಯಾಗಿ ಸಂತೋಷದಿಂದ ಹರಟುವುದು. ಅದೇ ಅದು ಹೇಗೆ ಮಂತ್ರಜಪವಾಗುತ್ತದೆ! ಮಾತುಗಳು ಅಕ್ಷರಗಳಿಂದ ಕೂಡಿರುತ್ತದೆ. ಶ್ರೀದೇವಿ ಅಕ್ಷರಸ್ವರೂಪಿಣಿ ಮಾತೃಕಾವರ್ಣರೂಪಿಣಿ (೫೭೭) ಎಂದು ಲಲಿತಾಸಹಸ್ರನಾಮದಲ್ಲಿ ಹೇಳಿದೆ ಆದ್ದರಿಂದ ಮಾತುಗಳೆಲ್ಲ ಜಪವೆನಿಸುತ್ತದೆ.

ಜಪ ಮೂರು ವಿಧವಾಗಿದೆ **ಮಾನಸಿಕಜಪ** (ಮನಸ್ಸಿನಲ್ಲಿ ಜಪಿಸುವುದು) **ಉಪಾಂಶು ಜಪ,** ಸದ್ದಿಲ್ಲದೆ ತುಟಿಗಳ ಚಲನೆಯಲ್ಲಿ ಹೇಳಿಕೊಳ್ಳುವುದು ಇತರರಿಗೆ ಕೇಳಿಸದಂತೆ ಮಾಡುವ ಜಪ, **ವಾಚಿಕ ಜಪ** ಈ ಮೂರು ಬಗೆಯ ಜಪಗಳ ಮಂತ್ರಗಳಲ್ಲಿ ಅಕ್ಷರಗಳಿವೆ.

(ಪೋ–ಪುಟ ೧೪೨)

೪. **ಜಪವೆಂದರೆ**

ಜಪವೆಂದರೆ–ಯಾವುದೊಂದು ನಾಮವನ್ನು ನಮ್ಮ ಇಷ್ಟದೈವಕ್ಕೆ ಅಂಕಿತ ಮಾಡುವುದು. ಬಸವಣ್ಣ 'ಕೂಡಲಸಂಗಮ' ಎಂದಂತೆ; ಅಲ್ಲಮ 'ಗುಹೇಶ್ವರ' ಎಂದಂತೆ; ಅಕ್ಕಮಹಾದೇವಿ 'ಚೆನ್ನಮಲ್ಲಿಕಾರ್ಜುನ' ಎಂದಂತೆ; ದಾಸರು ವಿಠಲ, ಆದಿಕೇಶವ ಎಂದಂತೆ; ಗಾಂಧಿ 'ರಾಮ' ಎಂದಂತೆ; ಮತ್ತು ಈ ನಾಮವನ್ನು ಪ್ರೀತಿಯಿಂದ ಹೇಳುತ್ತಿರುವುದು. ಹಾಗೆ ಹೇಳುತ್ತಿರುವಲ್ಲಿ ಈ ನಾಮದ ಅರ್ಥವನ್ನು, ಅನುಸಂಧಾನ ಮಾಡುವುದು. ಆ ಅರ್ಥಭಾವನೆಯಲ್ಲಿ ಮುಳುಗುವುದು ತಜ್ಜಪಃ ತದರ್ಥಭಾವನಂ ಎನ್ನುತ್ತಾನೆ ಪತಂಜಲಿ.

(ತೋ–ಪುಟ ೨೪೮)

೫. **ಶಿಲ್ಪಂ ಸಕಲಮಪಿ ಮುದ್ರಾವಿರಚನಾ**

ಶಿಲ್ಪಂ ಎಂದರೆ ಹಲವು ಅರ್ಥಗಳಿವೆ. ಹಸ್ತವಿನ್ಯಾಸಾದಿ ಕ್ರಿಯೆಗಳು ಎಂಬುದು ಒಂದರ್ಥ. ಮುದ್ರೆಗಳು ೨೪. ಅವುಗಳಲ್ಲಿ ಮುಖ್ಯವಾದವು ಒಂಬತ್ತು ೧. ಸಂಕ್ಷೋಭಮುದ್ರಾ ೨. ದ್ರಾವಣಮುದ್ರ ೩. ಆಕರ್ಷಣ ಮುದ್ರಾ ೪. ವಶ್ಯಮುದ್ರಾ ೫. ಉನ್ಮಾದಮುದ್ರಾ ೬. ಮಹಾಂಕುಶ

ಮುದ್ರಾ ೭. ಖೇಚರೀ ಮುದ್ರಾ ೮. ಯೋನಿಮುದ್ರಾ ೯. ತ್ರಿಖಂಡ ಮುದ್ರಾ. ಗಾಯತ್ರಿಜಪಕ್ಕೆ ಮುಂಚೆ ೨೪ ಮುದ್ರೆಗಳನ್ನು ಆಚರಿಸುತ್ತಾರೆ.

(ಪೋ–ಪುಟ ೧೪೩)

೬. **ಗತಿಃ ಪ್ರಾದಕ್ಷಿಣ್ಯ ಕ್ರಮಣಮ್**

ಗತಿ ಅಂದರೆ ನಡಿಗೆ, ಸಂಚಾರ ನನ್ನ ನಡಿಗೆಯನ್ನೇ ನಿನ್ನ ಪ್ರದಕ್ಷಿಣೆಯನ್ನಾಗಿ ಭಾವಿಸು ಎಂದು ಭಕ್ತನ ಪ್ರಾರ್ಥನೆ. ದೇವಿ ಸರ್ವವ್ಯಾಪಿಣಿ ಆಗಿರುವುದರಿಂದ ಎಲ್ಲೇ ನಡೆಯಲಿ ಅಲ್ಲೆಲ್ಲಾ ದೇವಿ ಇರುತ್ತಾಳಾದ್ದರಿಂದ ನಡೆದದ್ದೆಲ್ಲ ದೇವಿಗೆ ಪ್ರದಕ್ಷಿಣೆ ಆಗುತ್ತದೆ.

(ಪೋ–ಪುಟ ೧೪೩)

೭. **ಅಶನಾದ್ಯಾಹುತಿವಿಧಿಃ**

ಅಶನ ಎಂದರೆ ಅನ್ನ ಮೊದಲಾದವನ್ನು ತಿನ್ನುವುದು. ಆಹಾರ ಸ್ವೀಕರಿಸು ವುದು. ದೇವಿಯನ್ನು ಮೆಚ್ಚಿಸಲು ಹೋಮ ಮಾಡುವಾಗ ಅಗ್ನಿಯಲ್ಲಿ ಹವಿಸ್ಸನ್ನು ಅರ್ಪಿಸಲಾಗುತ್ತದೆ. ಅಂತೆಯೇ ನಮ್ಮ ಶರೀರದಲ್ಲಿ ಜಠರಾಗ್ನಿ ಇದೆ. ಜಠರಾಗ್ನಿ ಸಹ ದೇವಿಸ್ವರೂಪವೇ ಆಗಿರುವುದರಿಂದ ನಾವು ತಿನ್ನುವ ಆಹಾರವೆಲ್ಲ ದೇವಿಗೆ ಸಮರ್ಪಿಸುವ ಹೋಮದ್ರವ್ಯವೇ ಆಗುತ್ತದೆ.

(ಪೋ–ಪುಟ ೧೪೩)

೮. ಭಗವದ್ಗೀತೆಯಲ್ಲಿ (ಅ ೯ ಶ್ಲೋ ೨೭) ನಾವು ಮಾಡುವ ಪ್ರತಿಕಾರ್ಯವೂ ಬ್ರಹ್ಮಾರ್ಪಣವಾಗಿರಬೇಕೆಂದು ಹೇಳಿದೆ.

ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್
ಯತ್ತಪಸ್ಯಸಿ ಕೌಂತೇಯ, ತ್ವಂಕುರುಷ್ವಮದರ್ಪಣಂ (ಗೀತೆ ೯–೨೭)

(ಅರ್ಜುನಾ ನೀನು ಮಾಡುವ ಕರ್ಮವನ್ನು, ಉಣ್ಣುವ ಆಹಾರವನ್ನು, ಹೋಮ ಮಾಡುವ ಹವಿಸ್ಸನ್ನು, ನೀಡುವ ದಾನವನ್ನು ಆಚರಿಸುವ ತಪಸ್ಸನ್ನು, ನನಗೆ ಪ್ರೀತಿಯಾಗಲಿ ಎಂದು ಸಮರ್ಪಿಸು)

(ಗೀತಾರ್ಥಚಂದ್ರಿಕೆ ಪುಟ ೨೩೯)

೯. **ಪ್ರಣಾಮಃ ಸಂವೇಶಃ**

'ಸಂವೇಶ' ಎಂದರೆ ಶಯ್ಯಾಶನ ಕೆಳಮೊಗವಾಗಿ ಮಲಗಿರುವುದು. ಕಾಮ ಶಯ್ಯೆಯ ಒಂದು ಭಂಗಿ ಕೂಡ. ಇದನ್ನು 'ಪ್ರಣಾಮ' ಎಂದರು ಆಚಾರ್ಯರು. ಪ್ರಣಾಮಃ ಸಂವೇಶಃ ಅನುಸಂಧಾನದ ಬಲದಿಂದ ಇಲ್ಲಿನ ಇಹದ ಅನುಭವಗಳಾವುವೂ ಕೆಡದೆ ಹೊಸ ಹುಟ್ಟು, ಹೊಸ ಜೀವ ಪಡೆಯುತ್ತದೆ ಎನ್ನುವುದಕ್ಕೆ ಈ ಮಾತು ಉಜ್ವಲವಾದ ಸಾಕ್ಷಿಯಾಗಿದೆ.


(ತೋ–ಪುಟ ೨೪೬)

೧೦. **ಸಪರ್ಯಾ ಪರ್ಯಾಯಃ**

'ಸಪರ್ಯಾ' ಎಂದರೆ ಪೂಜೆ, ಅರ್ಚನೆ. ಪರ್ಯಾಯ ಎಂದರೆ ಇನ್ನೊಂದು ಬಗೆ. ಬದಲಿ ಆ ಇನ್ನೊಂದು ಬಗೆ–ನಿಜವಾದ ಪೂಜೆ ಎಂದು ಪ್ರತ್ಯೇಕ ಮಾಡುವ ಪೂಜೆ ನಿಜವಲ್ಲ. ಬದುಕೇ ಪೂಜೆ. ಪೂಜೆ ಎಂದು ತಿಳಿಯದೆ ನಡೆಯುತ್ತಿರುವ ಸಹಜ ಪೂಜೆ. ನಿಜಕ್ಕಾದರೆ ಈ ನಿಸರ್ಗ ಸಹಜ ಪೂಜೆಗೆ ಬೇರೆ ಪರ್ಯಾಯಗಳಿಲ್ಲ. ಆದರೆ ಆಶ್ಚರ್ಯವೆಂದರೆ ಎಲ್ಲ ಪರ್ಯಾಯಗಳೂ ಹುಟ್ಟಿದ್ದು ಈ ಸಹಜ ಪೂಜೆಯಿಂದಲೇ.

(ತೋ–ಪುಟ ೨೪೭)

ಯಂತ್ರಾರಾಧನೆ (ಶ್ಲೋಕ–೨೭)



ಯಂತ್ರರಚನೆ : ಚಿನ್ನದ ತಗಡಿನಲ್ಲಿ ಅಥವಾ ತಾಮ್ರದಲ್ಲಿ ಯಂತ್ರ ತಯಾರಿಸಬೇಕು ಮೂರು ಕೋಣಗಳಲ್ಲಿ ತ್ರಿಶೂಲ ಇರುವಂತೆ ಸಮಭುಜತ್ರಿಕೋಣವನ್ನು ಬರೆಯಬೇಕು. ಮಧ್ಯೆ ಹ್ರೀಂ ಬೀಜಾಕ್ಷರ ಇರಬೇಕು.

ಪೂಜೆ : ಸಂಪಿಗೆ ಹೂ ಅಥವಾ ಕುಂಕುಮಾಕ್ಷತೆಗಳಿಂದ ಲಲಿತಾತ್ರಿಶತೀ ಅರ್ಚನೆಯನ್ನು ಮಾಡಬೇಕು.

ನೈವೇದ್ಯ : ಬೆಲ್ಲದ ಪಾಯಸ

ಜಪ : ೪೫ ದಿನಗಳ ಕಾಲ ಈ ಶ್ಲೋಕವನ್ನು ಪ್ರತಿದಿನ ೧೦೦೦ ಬಾರಿ ಈಶಾನ್ಯದಿಕ್ಕಿಗೆ ಅಭಿಮುಖವಾಗಿ ಕುಳಿತು ಜಪಿಸಬೇಕು.

ಫಲ : ದೇವಿದರ್ಶನ. ಆತ್ಮಜ್ಞಾನಸಿದ್ಧಿ.

ಶ್ಲೋಕ-೨೮

ದೇವಿಯ ಕರ್ಣಭೂಷಣದಿಂದಲೇ ಶಿವನ ಅಮೃತತ್ವ

ಸುಧಾಮಪ್ಯಾಸ್ವಾದ್ಯ ಪ್ರತಿಭಯಜರಾಮೃತ್ಯು[೧]ಹರಿಣೀಂ
ವಿಪದ್ಯಂತೇ ವಿಶ್ವೇ ವಿಧಿಶತಮಖಾದ್ಯಾ ದಿವಿಷದಃ ।
ಕರಾಲಂ ಯತ್‌ಕ್ಷ್ವೇಲಂ [೨]ಕಬಲಿತವತಃ ಕಾಲಕಲನಾ
ನ ಶಂಭೋಸ್ತನ್ಮೂಲಂ ತವ ಜನನಿ ತಾಟಂಕಮಹಿಮಾ ॥ ೨೮ ॥

ಪಾಠಾಂತರ

೧. (ಹರಿಣೀಂ) = ಹರಣೀಂ (ಸು)
೨. ಕಬಲಿತವತಃ = ಕವಲಿತ ವತಃ (ಶೇ)

ಪದವಿಭಾಗ

(ಸುಧಾಮಪ್ಯಾಸ್ವಾದ್ಯ) = ಸುಧಾಮ್+ಅಪಿ+ಆಸ್ವಾದ್ಯ, ಪ್ರತಿಭಯಜರಾಮೃತ್ಯುಹರಿಣೀಂ, ವಿಪದ್ಯಂತೇ, ವಿಶ್ವೇ, (ವಿಧಿಶತಮಖಾದ್ಯಾ) = ವಿಧಿಶತಮಖ+ಆದ್ಯಾಃ, ದಿವಿಷದಃ, ಕರಾಲಂ, ಯತ್, ಕ್ಷ್ವೇಲಂ, ಕಬಲಿತವತಃ, ಕಾಲಕಲನಾ, ನ, (ಶಂಭೋಸ್ತನ್ಮೂಲಂ) = ಶಂಭೋಃ + ತತ್+ಮೂಲಂ, ತವ, ಜನನಿ, ತಾಟಂಕಮಹಿಮಾ.

ಅನ್ವಯಾರ್ಥ

(ಹೇ) ಜನನಿ,	(ಎಲೈ) ತಾಯೆ,
ವಿಶ್ವೇ	ಸಮಸ್ತರಾದ
ವಿಧಿ ಶತಮಖಾದ್ಯಾಃ	(ವಿಧಿ+ಶತಮಖಾ+ಆದ್ಯಾಃ) ಬ್ರಹ್ಮನೂ-ನೂರು ಅಶ್ವಮೇಧಗಳನ್ನು ಮಾಡಿದ ಇಂದ್ರನೂ-ಮೊದಲಾದ ದೇವತೆಗಳು (ಸ್ವರ್ಗದಲ್ಲಿ ವಾಸಮಾಡತಕ್ಕವರು)
ಪ್ರತಿಭಯಜರಾಮೃತ್ಯುಹರಿಣೀಂ	ಭಯಂಕರವಾದ-ಮುಪ್ಪನ್ನು-ಮರಣವನ್ನು-ಹೋಗಲಾಡಿಸುವ
ಸುಧಾಂ ಆಸ್ವಾದ್ಯಾಪಿ	ಅಮೃತವನ್ನು ಪಾನಮಾಡಿದರೂ ಕೂಡ

ವಿಪದ್ಯಂತೇ	ನಾಶಹೊಂದುತ್ತಾರೆ
ಕರಾಲಂ ಕ್ಷ್ವೇಲಂ	ಬಹಳ ಭಯಂಕರವಾದ (ಸಮುದ್ರದಲ್ಲಿ ಹುಟ್ಟಿದ) ಹಾಲಾಹಲವೆಂಬ ವಿಷವನ್ನು
ಕಬಳಿತವತಃ	ನುಂಗಿದಂತಹ
ಶಂಭೋಃ	ಈಶ್ವರನಿಗೆ
ಕಾಲಕಲನಾ	ಮೃತ್ಯುವಿನ-ಸಂಬಂಧವು (ಮರಣ)
ನ ಯತ್	ಇಲ್ಲವೆಂಬುವುದು ಯಾವುದುಂಟೋ
ತನ್ಮೂಲಂ	ಅದಕ್ಕೆ ಕಾರಣವು
ತವ ತಾಟಂಕಮಹಿಮಾ	ನಿನ್ನ ಓಲೆಯ-ಭಾಗ್ಯವೇ
ಭವತಿ	ಆಗಿರುತ್ತದೆ.

ತಾತ್ಪರ್ಯ

ಎಲೈ ತಾಯೆ, ಸೃಷ್ಟಿಕರ್ತ ಬ್ರಹ್ಮ, ನೂರು ಅಶ್ವಮೇಧಗಳನ್ನು ಮಾಡಿದ ಇಂದ್ರ ಮೊದಲಾದ ಸಮಸ್ತ ದೇವತೆಗಳೂ ಮುಪ್ಪು ಸಾವುಗಳನ್ನು ಹೋಗಲಾಡಿಸುವ ಅಮೃತವನ್ನು ಪಾನಮಾಡಿದರೂ ಕೊನೆಗೆ ನಾಶಹೊಂದುತ್ತಾರೆ. ಆದರೆ ಬಹಳ ಉಗ್ರವಾದ ಹಾಲಾಹಲ ವಿಷವನ್ನು ಪಾನಮಾಡಿದರೂ ಈಶ್ವರನಿಗೆ ಸಾವೆಂಬುದು ಇಲ್ಲ. ಅದಕ್ಕೆ ಕಾರಣವೇನೆಂದರೆ ನಿನ್ನ ಕಿವಿಯೋಲೆಯ (ತಾಟಂಕ) ಮಹಿಮೆ ಆಗಿದೆ ಎಂದರೆ ಅದು ನಿನ್ನ ಪಾತಿವ್ರತ್ಯದ ಪ್ರಭಾವವಾಗಿದೆ.

ಪದ್ಯಾನುವಾದ

ಓ ತಾಯೆ, ಬಹು ಭಯಂಕರಗಳಹ ಮುಪ್ಪುಸಾ-
ವುಗಳ ಕಳೆವಮೃತವನು ಸವಿದಿರ್ದೊಡೇನಂತೆ
ಬ್ರಹ್ಮೇಂದ್ರರಾದಿ ದೇವತೆಗಳೆಲ್ಲರು ತಾವು ಮರಣವನ್ನೈದುವವರೇ;
ಅತಿಘೋರವಾದಚ್ಚನಂಜನೇ ನುಂಗಿದಾ
ಶಂಭುವಿಗೆ ಕಾಲದಾಕಟ್ಟಿಲ್ಲದಿರಲದಕೆ
ಕಾರಣವು ನಿನ್ನ ಕಿವಿದೊಡವುವೋಲೆಯಮಹಿಮೆ, ಅದನೆಂತು ಬಣ್ಣಿಸುವುದೋ!
॥ ೨೮ ॥

ಟಿಪ್ಪಣಿಗಳು

೧. **ಸುಧಾಮಪ್ಯಾಸ್ವಾದ್ಯ ಪ್ರತಿಭಯಜರಾಮೃತ್ಯುಹರಿಣೀಂ**
(ಮುಪ್ಪು ಸಾವುಗಳನ್ನು ಹೋಗಲಾಡಿಸುವ ಅಮೃತವನ್ನು ಪಾನಮಾಡಿದರೂ) ದೇವತೆಗಳು ಅಜರಾಮರರು, ಅರ್ಥಾತ್ ತ್ರಿದಶರು ಎಂದರೆ ಉತ್ಪತ್ತಿ ಸ್ಥಿತಿ ನಾಶ ಎಂಬ ಮೂರು ಸ್ಥಿತಿ ಉಳ್ಳವರು ಮುಪ್ಪು ಎಂಬುದು ಅವರಿಗಿಲ್ಲ. ಏಕೆಂದರೆ ಅವರು ಅಮೃತ ಕುಡಿದವರು ಆದ್ದರಿಂದಲೇ ಅವರು ಸದಾ ಯವ್ವನವಂತರಾಗಿರುತ್ತಾರೆ.

೨. **ತನ್ಮೂಲಂ ತವ ಜನನಿ ತಾಂಟಂಕಮಹಿಮಾ**
(ಶಿವನಿಗೆ ಸಾವಿಲ್ಲದಿರಲು ಕಾರಣ ನಿನ್ನ ಕಿವಿಯೋಲೆಯ ಮಹಿಮೆ ಆಗಿದೆ) ದೇವತೆಗಳು ಅಮೃತಕುಡಿದರೂ ನಾಶ ಹೊಂದುತ್ತಾರೆ. ಆದರೆ ಶಿವ ವಿಷಕುಡಿದರೂ ಅವನಿಗೆ ಸಾವಿಲ್ಲ. ಏಕೆಂದರೆ ಅದು ನಿನ್ನ ಕಿವಿಯೋಲೆಯ (ಪಾತಿವ್ರತ್ಯದ) ಪ್ರಭಾವ ಆಗಿದೆ.
ಇಲ್ಲಿ ಕಿವಿಯೋಲೆಯ ಮಹಿಮೆಯನ್ನು ಹೇಳಲಾಗಿದೆ. ಮುತ್ತೈದೆಲಕ್ಷಣ ಹೇಳಿದೆ. ಮುತ್ತೈದೆ ಎಂದರೆ ಐದು ಒಡವೆ ಧರಿಸಿದವಳು ೧. ಮಂಗಳಸೂತ್ರ ೨. ಅರಿಶಿನ ೩ ಕುಂಕುಮ ೪. ಕೈಬಳೆಗಳು ೫. ಕಿವಿಯೋಲೆಗಳನ್ನು ಪತಿಯಿದ್ದವರು ಮಾತ್ರ ಇವುಗಳನ್ನು ಧರಿಸುತ್ತಾರೆ. ಆಕೆಗೆ ಈ ಭಾಗ್ಯ ಇದ್ದರೆ ಪತಿ ಮರಣಿಸಲು ಸಾಧ್ಯವಿಲ್ಲ. ಆದ್ದರಿಂದ ವಿಷಕುಡಿದರೂ ಈಶ್ವರನಿಗೆ ಸಾವಿಲ್ಲ.

೩. ಲಲಿತಾಸಹಸ್ರನಾಮದಲ್ಲಿ ತಾಟಂಕಯುಗಳೀಭೂತ ತಪನೋಡು–ಪಮಂಡಲಾ(೨೨) ಎಂದು ಹೇಳಿದೆ. ದೇವಿಗೆ ಸೂರ್ಯ ಚಂದ್ರರೇ ಕಿವಿಯೋಲೆಗಳು ಅಂದರೆ ಕಾಲಪ್ರತೀಕವಾದ ಹುಟ್ಟು ಸಾವುಗಳು ಅವಳ ಅಧೀನವಾಗಿದೆ. ಇದಕ್ಕೆ ಸಂಕೇತ ಆಕೆಯ ಕರ್ಣಾಭರಣಗಳು (ತಾಟಂಕಗಳು). ಆದ್ದರಿಂದಲೇ ಪತಿಯ ರಕ್ಷಣೆಗೆ ಸಾಧನಗಳಾದ ಕಿವಿಯೋಲೆ ಮೊದಲಾದವನ್ನು ಭಾರತೀಯ ಮಹಿಳೆಯರು ಕಡ್ಡಾಯವಾಗಿ ಧರಿಸುತ್ತಾರೆ.

(ಪೋ–ಪುಟ ೧೪೮)


೪. ಶ್ರುತಿಯಲ್ಲಿ ದೇವಿಯ ೨ ಸ್ತನಗಳನ್ನು, ೨ ಕಣ್ಣುಗಳನ್ನು ೨ ಕರ್ಣಾಭರಣಗಳನ್ನು ಸೂರ್ಯ ಚಂದ್ರರಿಗೆ ಹೋಲಿಸಲಾಗಿದೆ. ಸೂರ್ಯ ಚಂದ್ರರೇ ಅವಾಗಿವೆ ಎಂದು ಹೇಳಲಾಗಿದೆ.

(ಆರಾ – ಪುಟ ೫೨)

೫. ಗೌರೀವ್ರತದಲ್ಲಿ ಬಾಗಿನಕೊಡುವ ಪದ್ಧತಿ ಇದೆ. ಈ ಬಿದಿರಿನ ಮೊರದಲ್ಲಿ ಕೊಡುವ ವಾಯಿನ (ಬಾಗಿನ)ದಲ್ಲಿ ಕನ್ನಡಿ, ಬಾಚಣಿಗೆ, ಕಾಡಿಗೆ, ಗಂಧ ಅರಿಶಿನ, ಕುಂಕುಮ, ಕರಿಮಣಿ ಇಡುವುದರ ಜೊತೆಗೆ ಕಿವಿಯೋಲೆಯನ್ನು ಎಂದರೆ ಹಸಿತಾಳೆ ಎಲೆಯ ತುಂಡಿನ ಸುರುಳಿಯನ್ನು ಇಟ್ಟಿರುತ್ತಾರೆ. ಈ ತಾಳೆ ಓಲೆಯೇ ಸ್ತ್ರೀ ಪಾತ್ರಿವ್ರತ್ಯಕ್ಕೆ ಶ್ರೀ ಚಕ್ರಕ್ಕೆ ಸಾಕ್ಷಿಯಾಗಿದೆ.

(ಪ-ಪುಟ ೨೭೭)

ಯಂತ್ರಾರಾಧನೆ (ಶ್ಲೋಕ-೨೮)



ಯಂತ್ರರಚನೆ : ಬಂಗಾರದ ತಗಡಿನಲ್ಲಿ ರಚಿಸಬೇಕು. ಎಂಟು ತ್ರಿಶೂಲಗಳಿಂದ ಕೂಡಿರುವ ಸಮಚತುರಶ್ರವನ್ನು ಬರೆಯಬೇಕು.

ಪೂಜೆ : ಕೆಂಪು ಹೂಗಳಿಂದ ದುರ್ಗಾಷ್ಟೋತ್ತರ ಅರ್ಚನೆ ಮಾಡಬೇಕು

ನೈವೇದ್ಯ : ಹಾಲುಕೀರು, ತ್ರಿಮಧುರ ಮತ್ತು ತಾಂಬೂಲ.

ಜಪ : ಆಗ್ನೇಯಿದಿಕ್ಕಿಗೆ ಅಭಿಮುಖವಾಗಿ ಕುಳಿತು ೪೫ ದಿನಗಳ ಕಾಲ ಪ್ರತಿದಿನ ೧೦೦೦ ಬಾರಿ ಜಪಿಸಬೇಕು. ಯಂತ್ರವನ್ನು ಧರಿಸಬೇಕು.

ಫಲ : ಸ್ತ್ರೀಯರಿಗೆ ಸಕಲಸಿದ್ಧಿ, ಪುರುಷರಿಗೆ ಅಪಮೃತ್ಯುನಿವಾರಣೆ.

ಶ್ಲೋಕ–೨೯

ದೇವಿಗೆ ಸದಾಶಿವನಲ್ಲಿರುವ ಗೌರವ

ಕಿರೀಟಂ [1]ವೈರಿಂಚಂ ಪರಿಹರ ಪುರಃ ಕೈಟಭಭಿದಃ
ಕಠೋರೇ ಕೋಟೀರೇ ಸ್ಖಲಸಿ ಜಹಿ ಜಂಭಾರಿಮಕುಟಮ್ ।
ಪ್ರಣಮ್ರೇಷ್ವೇತೇಷು ಪ್ರಸಭಮುಪಯಾತಸ್ಯ ಭವನಂ
ಭವಸ್ಯಾಭ್ಯುತ್ಥಾನೇ ತವ ಪರಿಜನೋಕ್ತಿರ್ವಿಜಯತೇ ॥ ೨೯ ॥

ಪಾಠಾಂತರ

೧. (ವೈರಿಂಚಂ)= ವೈರಿಚ್ಯಂ (ಸು)

ಪದವಿಭಾಗ

ಕಿರೀಟಂ, ವೈರಿಂಚಂ, ಪರಿಹರ, ಪುರಃ, ಕೈಟಭಭಿದಃ ಕಠೋರೇ, ಕೋಟೀರೇ, ಸ್ಖಲಸಿ, ಜಹಿ, ಜಂಭಾರಿಮಕುಟಮ್, (ಪ್ರಣಮ್ರೇಷ್ವೇತೇಷು) = ಪ್ರಣಮ್ರೇಷು+ಏತೇಷು, (ಪ್ರಸಭಮುಪಯಾತಸ್ಯ) = ಪ್ರಸಭಮ್+ಉಪಯಾತಸ್ಯ, ಭವನಂ, (ಭವಸ್ಯಾಭ್ಯುತ್ಥಾನೇ) = ಭವಸ್ಯ+ಅಭಿ+ಉತ್ಥಾನೇ, ತವ, (ಪರಿಜನೋಕ್ತಿರ್ವಿಜಯತೇ) = ಪರಿಜನ+ಉಕ್ತಿಃ+ ವಿಜಯತೇ.

ಅನ್ವಯಾರ್ಥ

(ಹೇ ಭಗವತಿ)	(ಎಲೈ ಸರ್ವಜ್ಞಳಾದ ದೇವಿಯೆ)
ಏತೇಷು	(ಬ್ರಹ್ಮ, ವಿಷ್ಣು ಮಹೇಶ್ವರರು) ಇವರುಗಳು
ಪ್ರಣಮ್ರೇಷು (ಸತ್ಸು)	ನಮಸ್ಕಾರ ಮಾಡುತ್ತಿರಲಾಗಿ
ಭವನಂ ಉಪಯಾತಸ್ಯ	ನಿನ್ನ ಅರಮನೆಯನ್ನು ಕುರಿತು ಬಂದ
ಭವಸ್ಯ ಪ್ರಸಭಂ	ಈಶ್ವರನಿಗೆ ಬಹುಬೇಗನೆ
ತವಾಭ್ಯುತ್ಥಾನೇ	(ತವ+ಅಭ್ಯುತ್ಥಾನೇ) ನೀನು ಎದುರುಗೊಳ್ಳಲು ಹೊರಟಾಗ
ಪುರಃ	ಮುಂದುಗಡೆಯಿರುವ
ವೈರಿಂಚಂ	ಬ್ರಹ್ಮನು ಧರಿಸುವ

ಕಿರೀಟಂ	ಕಿರೀಟವನ್ನು
ಪರಿಹರ	ದೂರಮಾಡು
ಕೈಟಭಭಿದಃ	ಕೈಟಭನನ್ನು ಕೊಂದ (ವಿಷ್ಣುವಿನ)
ಕಠೋರೇ ಕೋಟೀರೇ	ಕಠಿಣವಾದ ಕಿರೀಟವನ್ನು
ಸ್ಖಲಸಿ	ಎಡವೀಯೇ
ಜಂಭಾರಿಮಕುಟಂ ಜಹಿ	(ಜಂಭನಿಗೆ ಶತ್ರುವಾದ) ಇಂದ್ರನ ಕಿರೀಟವನ್ನು ಬಿಡು
ಇತಿ	ಹೀಗೆಂದು
ಪರಿಜನೋಕ್ತಿರ್ವಿಜಯತೇ	ಸೇವಕ ಜನರು ನಿನಗೆ ಹೇಳುತ್ತಿರುವ ಮಾತುಗಳಿಗೆ ವಿಜಯವಾಗಲಿ

ತಾತ್ಪರ್ಯ

ಬ್ರಹ್ಮವಿಷ್ಣು ಮಹೇಂದ್ರರೆಲ್ಲರೂ ನಿನಗೆ ನಮಸ್ಕಾರ ಮಾಡುತ್ತಿದ್ದ ಸಮಯದಲ್ಲಿ ಪತಿಯಾದ ಮಹೇಶ್ವರನು ಬರುತ್ತಿರುವುದನ್ನು ತಿಳಿದು, ಸ್ವಾಗತಿಸಲು ಸಡಗರದಿಂದ ಎದ್ದು ಹೊರಟಾಗ ಆಗ ಪರಿಜನರು ಬಿನ್ನವಿಸುತ್ತಾರೆ: ನಿನ್ನ ಕಾಲಬಳಿಯಲ್ಲಿ ನಮಿಸುತ್ತಿರುವ ಬ್ರಹ್ಮನ ಕಿರೀಟವಿದೆ. ಅದನ್ನು ಸರಿಸಿ ಮುಂದೆ ಹೋಗು; ಇನ್ನೊಂದು ಭಾಗದಲ್ಲಿ ವಿಷ್ಣುವಿನ ಕಠಿಣವಾದ ಕಿರೀಟವಿದೆ. ಅದನ್ನು ಎಡವದಂತೆ ಸಾಗು; ಇನ್ನು ಕಾಲಬಳಿಯ ದೇವೇಂದ್ರನ ಕಿರೀಟವಿದೆ. ಅದನ್ನು ದಾಟಿಕೊಂಡು ಹೋಗು, ಇತ್ಯಾದಿಯಾಗಿ ಬಿನ್ನವಿಸುವ ನುಡಿಗಳು ಸರ್ವಾತಿಶಯವಾಗಿ ಇರುತ್ತವೆ.

ಪದ್ಯಾನುವಾದ

ಹೇ ಒಡತಿ, 'ಮುಂದೆ ಚಾಚಿಹ ವಿರಿಂ–
ಚಿಯ ಕಿರೀಟವನಲ್ಲಿ ಬಿಟ್ಟುಬಿಡು,' 'ಕೈಟಭಾ–
ರಿಯ ಕಠೋರ ಕಿರೀಟವೆಡಹೀಯೆ, 'ಜಂಭಾರಿಮಕುಟವಿದೊ ಬಿಟ್ಟುಸಾಗು'
ಎಂಬ– ಈ ದೇವರ್ಕಳಿವರು ಮೈಚಾಚಿರುವ
ಸಮಯದಲ್ಲಿ, ನಿನ್ನ ಭವನಕೆ ಬಂದ ಭವನ ಬರ–
ಮಾಡಿಕೊಳೆ ಸಡಗರಿಸುತೆದ್ದು ನೀ ತೆರಳುತಿರೆ, ಪರಿಜನಪರಾಕು ಗೆಲ್ಗೆ!

॥ ೨೯ ॥

ಉದಾತ್ತ ಅಲಂಕಾರ

೧. ಈ ಶ್ಲೋಕದಲ್ಲಿ ಉದಾತ್ತಾಲಂಕಾರವಿದೆ. ಸಮೃದ್ಧಿಸಂಪನ್ನವಾದ ವಸ್ತುವಿನ ವರ್ಣನೆಯು ಉದಾತ್ತ ಎಂಬ ಅಲಂಕಾರವಾಗುತ್ತದೆ. (ಸಮೃದ್ಧಿಯದ್ವಸ್ತು ವರ್ಣನಮುದಾತ್ತಮ್) ಈ ಅಲಂಕಾರದ ಮೂಲಕ ಮಹಾರಾಜರಾದಂಥ ಇಂದ್ರಾದಿಗಳೆಲ್ಲರೂ ಭಗವತಿಗೆ ದಾಸರಾಗಿದ್ದಾರೆ ಎಂದು ಹೇಳಲಾಗಿದೆ.

(ತು–ಪುಟ ೧೬೯)

೨. **ಪುರಃ ಕೈಟಭಿಭಿದಃ ಕಠೋರೇ ಕೋಟೀರೇ ಸ್ಖಲಸಿ**


ಮಧು ಕೈಟಭರ ವಿಚಾರ ದೇವೀಭಾಗವತದಲ್ಲಿ ಬರುತ್ತದೆ. ಕಿರೀಟದಲ್ಲಿ ವಜ್ರವೈಢೂರ್ಯಗಳು ಅಡಕವಾಗಿದ್ದುದರಿಂದ ಕಠೋರವಾದ ಕಿರೀಟವಾಗಿದೆ. ಇನ್ನು ಕೋಟೀರ ಎಂದರೆ ಕಿರೀಟದ ತುದಿ. ಪಶುವಿನ ಕಠಿಣ ತುದಿಯುಳ್ಳ (ಕೊಂಬಿನಂತೆಯಿರುವ)ಕಿರೀಟ ಕಾಲಿಗೆ ತಗುಲಿದರೆ ಅನಾಹುತವಾದೀತು, ಎಚ್ಚರಿಕೆ! ಎಂಬುದು ಪರಿಜನರ ಮಾತು.

ಮಧುಕೈಟಭರ ವಿಚಾರ

ಕೈಟಭ, ವಿಷ್ಣುವಿನ ಕಿವಿಯ ಮಲದಿಂದ ಜನಿಸಿದನು. ಇವರಣ್ಣ ಮಧು. ಇವರಿಬ್ಬರೂ ಸೇರಿಕೊಂಡು ಬ್ರಹ್ಮನನ್ನು ಪೀಡಿಸಿದಾಗ ಬ್ರಹ್ಮ ವಿಷ್ಣುವಿನ ಮೊರೆಹೊಕ್ಕನು. ಆಗ ವಿಷ್ಣು ಪರಾಶಕ್ತಿಯಿಂದ ಶಕ್ತಿ ಪಡೆದು ಆ ರಾಕ್ಷಸರನ್ನು ಸೋಲಿಸಿ ಹೇಗೆ ಸಾಯಬೇಕೆಂದಿದ್ದೀರಿ ತಿಳಿಸಿ ಎಂದನು. ಅವರು ನೀರಿಲ್ಲದ ಭೂಮಿಯಲ್ಲಿ ನಮ್ಮನ್ನು ಕೊಲ್ಲು ಎಂದರು. ಆಗ ವಿಷ್ಣು ತನ್ನ ತೊಡೆಯ ಮೇಲೆ ಕೆಡವಿಕೊಂಡು ಕೊಂದನು.

(ಪುರಾಣ ಭಾರತ ಕೋಶ–ಪುಟ ೧೪೭)

ಯಂತ್ರಾರಾಧನೆ (ಶ್ಲೋಕ-೨೯)



ಯಂತ್ರರಚನೆ : ಬಂಗಾರ ಅಥವಾ ತಾಮ್ರದ ತಗಡಿನಲ್ಲಿ ಯಂತ್ರ ರಚಿಸಬೇಕು. ಆರು ತ್ರಿಶೂಲಗಳಿಂದ ಕೂಡಿದ ಷಟ್ಕೋಣವನ್ನು ಬರೆಯಬೇಕು.

ಪೂಜೆ : ದುರ್ಗಾಷ್ಟೋತ್ತರ ಅರ್ಚನೆಯನ್ನು ಸಿಂಧೂರ ಹೂವಿನಿಂದ ಅಥವಾ ಕುಂಕುಮಾರ್ಚನೆಯಿಂದ ಮಾಡಬೇಕು.

ನೈವೇದ್ಯ : ಮೊಸರನ್ನ, ಉದ್ದಿನ ವಡೆ, ಗುಡಾನ್ನ, ಹಾಲು ಜೇನುತುಪ್ಪಗಳನ್ನು ನೈವೇದ್ಯ ಮಾಡಬೇಕು.

ಜಪ : ಪೂರ್ವಾಭಿಮುಖವಾಗಿ ಕುಳಿತು ೪೮ ದಿನಗಳು ಅಥವಾ ೪೨ ದಿನಗಳು ಪ್ರತಿದಿನ ೧೦೦೦ ಸಲ ಶ್ಲೋಕವನ್ನು (೨೯) ಜಪಿಸಬೇಕು. ಬಲಗೈಯಲ್ಲಿ ಯಂತ್ರವನ್ನು ಧರಿಸಬೇಕು.

ಫಲ : **ದುಷ್ಟಜನರ ವಶೀಕರಣ, ಸ್ತ್ರೀಯರಿಗೆ ಸುಖಪ್ರಸವ.**

ಶ್ಲೋಕ–೩೦
ದೇವಿಯ ಐಕ್ಯಭಾವೋಪಾಸನೆ

ಸ್ವದೇಹೋದ್ಭೂತಾಭಿರ್ಘೃಣಿಭಿರಣಿಮಾದ್ಯಾಭಿರಭಿತಃ
ನಿಷೇವ್ಯೇ ನಿತ್ಯೇ ತ್ವಾಮಹಮಿತಿ ಸದಾ ಭಾವಯತಿ ಯಃ ।
ಕಿಮಾಶ್ಚರ್ಯಂ ತಸ್ಯ ತ್ರಿನಯನಸಮೃದ್ಧಿಂ ತೃಣಯತಃ
ಮಹಾಸಂವರ್ತಾಗ್ನಿರ್ವಿರಚಯತಿ ನೀರಾಜನವಿಧಿಮ್ ॥ ೩೦ ॥

ಪದವಿಭಾಗ

(ಸ್ವದೇಹೋದ್ಭೂತಾಭಿರ್ಘೃಣಿಭಿರಣಿಮಾದ್ಯಾಭಿರಭಿತಃ)=(ಸ್ವದೇಹ+ಉದ್ಭೂತಾಭಿಃ+ ಘೃಣಿಭಿಃ+ಅಣಿಮಾದ್ಯಾಭಿಃ+ಅಭಿತಃ, ನಿಷೇವ್ಯೇ, ನಿತ್ಯೇ, (ತ್ವಾಮಹಮಿತಿ) = ತ್ವಾಂ+ಅಹಂ+ಇತಿ, ಸದಾ, ಭಾವಯತಿ, ಯಃ, (ಕಿಮಾಶ್ಚರ್ಯಂ) = ಕಿಂ+ಆಶ್ಚರ್ಯಂ, ತಸ್ಯ ತ್ರಿನಯನಸಮೃದ್ಧಿಂ, ತೃಣಯತಃ, (ಮಹಾಸಂವರ್ತಾಗ್ನಿರ್ವಿರಚಯತಿ) = ಮಹಾಸಂವರ್ತಾಗ್ನಿಃ + ವಿರಚಯತಿ, ನೀರಾಜನವಿಧಿಂ.

ಅನ್ವಯಾರ್ಥ

(ಹೇ ನಿತ್ಯೇ)	(ಎಲೈ) ಕಾಲತ್ರಯದಲ್ಲೂ ಶಾಶ್ವತವಾಗಿ ಇರುವವಳೇ
ನಿಷೇವ್ಯೇ	(ಸರ್ವರಿಂದಲೂ) ಸೇವಿಸಲ್ಪಡುತ್ತಿರುವ ದೇವಿಯೇ
ಸ್ವದೇಹೋದ್ಭೂತಾಭಿಃ ಘೃಣಿಭಿಃ	(ಸ್ವದೇಹ+ಉದ್ಭೂತಾಭಿಃ) ನಿನ್ನ–ದೇಹದಲ್ಲಿ (ಕಾಲುಗಳಲ್ಲಿ)–ಹುಟ್ಟಿದವುಗಳ ಕಾಂತಿಗಳಿಂದಲೂ (ಕಿರಣಗಳಿಂದಲೂ)
ಅಭಿತಃ (ಅವಸ್ಥಿತಾಭಿಃ) ಅಣಿಮಾದ್ಯಾಭಿಃ	ಸುತ್ತಲೂ – (ಆವರಣದೇವತೆಯಾಗಿರುವ) ಅಣಿಮಾ ಮುಂತಾದ (ಅಷ್ಟ ಸಿದ್ಧಿಗಳಿಂದಲೂ)
ಪರಿವೃತಾಂ	ಸುತ್ತುವರಿಯಲ್ಪಟ್ಟಿರುವ
ತ್ವಾಂ ಯಃ	ನಿನ್ನನ್ನು ಯಾವನು

ಅಹಮಿತಿ ಸದಾ	(ದೇವಿಯೇ) ತಾನೇ ಎಂಬುದಾಗಿ ನಿರಂತರವೂ
ಭಾವಯತಿ	ಚಿಂತಿಸುತ್ತಾ ಇರುತ್ತಾನೋ
ತ್ರಿನಯನ ಸಮೃದ್ಧಿಂ	(ಮೂರು ಕಣ್ಣುಗಳುಳ್ಳವನ) ಈಶ್ವರನ ಸಂಪತ್ತನ್ನು
ತೃಣಯತಃ	ಹುಲ್ಲಿನಂತೆ ಭಾವಿಸುವ
ತಸ್ಯ	ಅವನಿಗೆ
ಮಹಾಸಂವರ್ತಾಗ್ನಿಃ	ಮಹಾಪ್ರಳಯಕಾಲದ – ಅಗ್ನಿಯು
ನೀರಾಜನವಿಧಿಂ	ಮಂಗಳಾರತಿಯನ್ನು
ವಿರಚಯತಿ	ಬೆಳಗುತ್ತದೆ ಎಂಬುದರಲ್ಲಿ
ಕಿಮಾಶ್ಚರ್ಯಂ?	ಆಶ್ಚರ್ಯವೇನಿದೆ?

ತಾತ್ಪರ್ಯ

ಹೇ ಶಾಶ್ವತರೂಪಳೇ, ನೀನು ಸಾಧಕಜನರಿಂದ ಸೇವಿಸಲ್ಪಡುವವಳೇ, ನಿನ್ನ ದೇಹದಿಂದ (ಚರಣಗಳಿಂದ) ಹುಟ್ಟಿದ ಕಾಂತಿಗಳಿಂದಲೂ, ಸುತ್ತಲೂ ಇರುವ ಆವರಣದೇವತೆಯಾಗಿರುವ ನಿತ್ಯಾದೇವಿಯರಿಂದ ಸಹಿತಳಾದ ನಿನ್ನನ್ನು ಯಾವಸಾಧಕನು ಅಹಂ (ನಾನೇ) ಎಂಬ ಐಕ್ಯ ಭಾವನೆಯಿಂದ ಧ್ಯಾನಿಸುತ್ತಾನೋ ಅವನು ತ್ರಿನಯನನಾದ ಶಿವನು ಕೊಡುವ ಸಂಪತ್ತನ್ನು ಹುಲ್ಲಿಗೆಣೆ ಎಂದು ಭಾವಿಸಿ ತಿರಸ್ಕರಿಸುತ್ತಾನೆ. ಅಂಥ ಸಾಧಕನಿಗೆ ಮಹಾಪ್ರಳಯಕಾಲದ ಸಂವರ್ತಾಗ್ನಿಯೂ ಸಹ ಮಂಗಳಾರತಿಯನ್ನು ಬೆಳಗುತ್ತಾನೆ ಎಂಬುದರಲ್ಲಿ ಅಚ್ಚರಿಯೇನಿಲ್ಲ.

ಪದ್ಯಾನುವಾದ

ಹೇ ನಿಷೇವ್ಯೇ, ನಿತ್ಯೆ, ನಿನ್ನೊಡಲಿನಿಂದುದಿಸಿ
ಕಿರಣರೂಪದಿ ಹೊಮ್ಮಿದಣಿಮಾದಿ ಸಿದ್ಧಿಗಳು
ಸೇವಿಸುತ್ತಿರುವ ನಿನ್ನನು ಸದಾ ನಾನೆಂದು ಯಾವಾತ ಭಾವಿಸುತ್ತಿಹನೋ
ಮುಕ್ಕಣ್ಣಮೈಮೆಯನು ಹುಲುಕಡ್ಡಿಗೆಣೆಮಾಡಿ–
ದಾ ಮಹಾಮಹಿಮಗೋಹೋ ಮಹಾಪ್ರಲಯ–
ಕಾಲಾಗ್ನಿಯೇ ನೀರಾಜನವಿಧಿಯಗೈವುದಚ್ಚರಿಯೆ, ಅದು ನಿನಗೆ ಕೊನೆಗೆ
॥ ೩೦ ॥

ಟಿಪ್ಪಣಿಗಳು

೧. ಅಷ್ಟಸಿದ್ಧಿಗಳು

೧. ಅಣಿಮಾ – ಅತ್ಯಂತ ಸೂಕ್ಷ್ಮವಾಗೋಣವು

೨. ಮಹಿಮಾ – ಬಹಳ ದೊಡ್ಡದಾಗೋಣವು

೩. ಗರಿಮಾ – ಬಹಳ ಭಾರವಾಗೋಣವು

೪. ಲಘಿಮಾ – ಹಗುರವಾಗೋಣವು

೫. ಪ್ರಾಪ್ತಿಃ – ಕ್ಷಣಕಾಲದಲ್ಲಿ ಬೇಕಾದ ಕಡೆ ಹೋಗೋಣವು

೬. ಪ್ರಾಕಾಮ್ಯಂ – ಇದ್ದಕಡೆಯಲ್ಲೇ ಬೇಕಾದ ಪದಾರ್ಥಗಳನ್ನು ಹೊಂದೋಣವು

೭. ಈಶತ್ವಂ – ಸಕಲಾಧಿಪತ್ಯವು

೮. ವಶಿತ್ವಂ – ಎಲ್ಲರನ್ನು ಸ್ವಾಧೀನ ಮಾಡಿಕೊಳ್ಳೋಣವು.

೨. ಸಾಧಕರಿಗೆ ಜಗನ್ಮಾತೆಯ ವಿರಾಟ್ ಸ್ವರೂಪಧ್ಯಾನದ ಉಪದೇಶ

ಅರುಣಾಂ ಕರುಣಾತರಂಗಿತಾಕ್ಷೀಂ
ಧೃತಪಾಶಾಂಕುಶ ಪುಷ್ಪಬಾಣ ಚಾಪಾಮ್
ಅಣಿಮಾದಿಭಿರಾವೃತಾಂ ಮಯೂಖೈಃ
ಅಹಮಿತ್ಯೇವ ವಿಭಾವಯೇ ಭವಾನೀಂ

(ಲಲಿತಾ ಸಹಸ್ರನಾಮದ ಧ್ಯಾನ ಶ್ಲೋಕ)

"ಅರುಣವರ್ಣ ಶರೀರ ಕಾಂತಿಯಿಂದ, ಕರುಣಾ ಕಟಾಕ್ಷತರಂಗಿಣಿಯಾಗಿ ಅಣಿಮಾದಿ ಅಷ್ಟಸಿದ್ಧಿಗಳು ಎನ್ನುವ ಪ್ರಕಾಶ ಕಿರಣಗಳಿಂದ ಆವರಿಸಲ್ಪಟ್ಟು ಪಾಶಾಂಕುಶ ಇಕ್ಷುಚಾಪಬಾಣಗಳಿಂದ ಕೂಡಿದ ಆ ಜಗನ್ಮಾತೆಯನ್ನು ನಾನೇ" ಎನ್ನುವ ಭಾವದಿಂದ ಧ್ಯಾನಿಸುತ್ತೇನೆ.

(ಪ–ಪುಟ ೨೮೨)

೩. ಭುಜಂಗಪ್ರಯಾತ ಸ್ತೋತ್ರ (೧೧ನೇ ಶ್ಲೋಕ)ದಲ್ಲಿ ಹೀಗೆ ಹೇಳಿದೆ.

"ಗಣೇಶ, ಅಣಿಮಾದ್ಯಷ್ಟಸಿದ್ಧಿಗಳು, ಶಕ್ತಿಬೃಂದಗಳೂ (ಯೋಗಿನಿ ಸಪ್ತಮಾತೃಕಾ ಬೃಂದಗಳು) ಎಲ್ಲರಿಂದಲೂ ಪರಿವೇಷ್ಟಿತಳಾಗಿ ಶ್ರೀ ಚಕ್ರರಾಜರೂಪಿಣಿ ತಾಯಿ, ಪರಾಶಕ್ತಿ ರಾಜರಾಜೇಶ್ವರಿ ತ್ರಿಪುರಸುಂದರೀದೇವಿಯಾಗಿ, ಶಿವನತೊಡೆಯನ್ನಲಂಕರಿಸಿರುವ ನಿನ್ನನ್ನು, ಶಿವಾಭವಾನಿ, ಶರಣಾಗತಿ ಭಾವದಲ್ಲಿ" ನನ್ನ ಧ್ಯಾನದಲ್ಲಿ ಭಾವಿಸುತ್ತಿದ್ದೇನೆ. (ಧ್ಯಾನಿಸುತ್ತಿದ್ದೇನೆ)

(ಪ–ಪುಟ ೨೮೩)

೪. ನಿಷೇವ್ಯೇ

ಸೌಂದರ್ಯ ಲಹರಿಯ 'ಡಿಂಡಿಮ' ಭಾಷ್ಯಕಾರ ತನ್ನ ಭಾಷ್ಯದಲ್ಲಿ ತಾಯ ದೇಹದಿಂದ ಸೂಸುವ ಕಿರಣಗಳನ್ನು ಅಣಿಮಾದಿಸಿದ್ಧಿಗಳಿಂದ ಬೇರೆಯಾಗಿ ಗ್ರಹಿಸಿ ಎರಡೂ ಭಿನ್ನ ರೀತಿಯ ಪೂಜಾಕ್ರಮಗಳನ್ನು ಹೇಳಿದ್ದಾನೆ.


ಲಯಾಂಗ ಮತ್ತು ಭೋಗಾಂಗ

ಲಯಾಂಗವೆಂದರೆ ಭಗವತಿಯ ದೇಹದಲ್ಲಿ ಕಿರಣಗಳಂತೆ ಭಾಸಮಾನರಾಗಿರುವ ದೇವತೆಗಳು ನಡೆಸುವ ಪೂಜೆ.

ಭೋಗಾಂಗವೆಂದರೆ ಶ್ರೀಚಕ್ರದ ಆವರಣದಲ್ಲಿ ನೆಲೆಯಾಗಿರುವ ಅಣಿಮಾದಿ ಸಿದ್ಧಿಗಳ ಅಭಿಮಾನಿ ದೇವತೆಗಳಿಂದ ನಡೆಯುವ ಪೂಜೆ ಈ ಎರಡೂ ಬಗೆಯ ದೇವತೆಗಳಿಂದಲೂ ಭಗವತಿಯು ನಿತ್ಯಸೇವ್ಯಳಾಗಿರುವುದರಿಂದ– ನಿಷೇವ್ಯೇ–ಎಂಬ ಸಂಬೋಧನೆ ಹಾಡಿನಲ್ಲಿದೆ.

(ತೋ–ಪುಟ ೨೫೭)

ಯಂತ್ರಾರಾಧನೆ (ಶ್ಲೋಕ ೩೦)



ಯಂತ್ರರಚನೆ : ಚಿನ್ನದ ತಗಡಿನಲ್ಲಿ ಯಂತ್ರವನ್ನು ಚಿತ್ರದಲ್ಲಿ ತೋರಿಸಿರುವಂತೆ ರಚಿಸಬೇಕು. ವಿಶೇಷಚಿಹ್ನೆಗಳಿಂದ ಕೂಡಿರುವ ಎರಡು ಅರ್ಧವೃತ್ತಗಳಿರಬೇಕು. ಓಂಕಾರ ಬೀಜಾಕ್ಷರದಿಂದ ಕೂಡಿರಬೇಕು.

ಪೂಜೆ : ಬಿಲ್ವಪತ್ರೆ ಅಥವಾ ಪುಷ್ಪಗಳಿಂದ ರುದ್ರತ್ರಿಶತೀ ಅಥವಾ ಲಲಿತಾ ತ್ರಿಶತಿ ಅರ್ಚನೆಯನ್ನು ಮಾಡಬೇಕು.

ನೈವೇದ್ಯ : ಜೇನುತುಪ್ಪ, ತ್ರಿಮಧುರ, ತಾಂಬೂಲ ಅರ್ಪಿಸಬೇಕು.

ಜಪ : ಪೂರ್ವಾಭಿಮುಖವಾಗಿ ಕುಳಿತುಕೊಂಡು ೪೫ ದಿನಗಳ ಕಾಲ ಪ್ರತಿದಿನ ೨೫೦೦ ಬಾರಿ ಪಾರಾಯಣ ಮಾಡಬೇಕು.

ಫಲ : **ಅಣಿಮಾದಿ ಅಷ್ಟಸಿದ್ಧಿಗಳು, ಪರಕಾಯಪ್ರವೇಶಶಕ್ತಿ, ಅಗ್ನಿಸ್ತಂಭನಸಿದ್ಧಿ**

ಟಿಪ್ಪಣಿ:

[ಈ ಶ್ಲೋಕದ ಕ್ರಮಸಂಖ್ಯೆ ಜಕ್ಕಣಾಮಾತ್ಯ, ಗುಂಜೂರು ಪ್ರತಿಗಳಲ್ಲಿ ೯೬ ಆಗಿದೆ. ಶೇಷಾಚಲಶರ್ಮಾ, ಜಕ್ಕಣಾಮಾತ್ಯರ ಅನುವಾಗಳಲ್ಲಿ ಜಪ, ನೈವೇದ್ಯ ಫಲಗಳನ್ನು ಹೇಳಿರುವುದರಲ್ಲಿ ವ್ಯತ್ಯಾಸಗಳಿವೆ. ಜಕ್ಕಣಾಮಾತ್ಯರ ಗ್ರಂಥದಲ್ಲಿ ಯಂತ್ರ ರಚನೆ ಸಹ ಬೇರೆ ಆಗಿದೆ].

ಶ್ಲೋಕ–೩೧

ಪುರುಷಾರ್ಥದ ಹಾದಿಯನ್ನು ತೋರುವ ಶ್ರೀಚಕ್ರದ ಹಿರಿಮೆ

ಚತುಷ್ಷಷ್ಟ್ಯಾ ತಂತ್ರೈಃ [೧]ಸಕಲಮತಿಸಂಧಾಯ ಭುವನಂ
ಸ್ಥಿತಸ್ತತ್ತತ್ಸಿದ್ಧಿ[೨]ಪ್ರಸವಪರತಂತ್ರೈಃ ಪಶುಪತಿಃ ।
ಪುನಸ್ತ್ವನ್ನಿರ್ಬಂಧಾದಖಿಲಪುರುಷಾರ್ಥೈಕಘಟನಾ–
ಸ್ವತಂತ್ರಂ ತೇ ತಂತ್ರಂ ಕ್ಷಿತಿತಲಮವಾತೀತರದಿದಮ್ ॥ ೩೧ ॥

ಪಾಠಾಂತರ

೧ (ಸಕಲಮತಿಸಂಧಾಯ)=ಸಕಲಮತಿಭಿಸಂಧಾಯ (ಗ) (ಪ್ರಸವಪರತಂತ್ರೈಃ)=ಪ್ರಸಭ ಪರತಂತ್ರೈಃ, ಪ್ರಸವ ಸರತಂತ್ರಃ (ಸು)

೨ ಆನಂದಗಿರಿ ಡಿಂಡಿಮ ಗೋಪಾಲಸುಂದರಿ ಮುಂತಾದ ವ್ಯಾಖ್ಯಾನಗಳಲ್ಲಿ ಅಭಿಸಾಧಾಯ ಎಂಬ ಪಾಠಾಂತರವೂ ಇದೆ.

ಪದವಿಭಾಗ

(ಚತುಷ್ಷಷ್ಟ್ಯಾ) = ಚತುಃ + ಷಷ್ಟ್ಯಾ ತಂತ್ರೈಃ, (ಸಕಲಮತಿಸಂಧಾಯ) = ಸಕಲಂ + ಅತಿಸಂಧಾಯ, ಭುವನಂ, (ಸ್ಥಿತಸ್ತತ್ತತ್) = ಸ್ಥಿತಃ+ತತ್+ತತ್, ಸಿದ್ಧಿ ಪ್ರಸವಪರತಂತ್ರೈಃ, ಪಶುಪತಿಃ, (ಪುನಸ್ತ್ವನ್ನಿರ್ಬಂಧಾದಖಿಲ ಪುರುಷಾರ್ಥೈಕ ಘಟನಾ ಸ್ವತಂತ್ರಂ)= ಪುನಃ+ತ್ವತ್+ನಿರ್ಬಂಧಾತ್+ಅಖಿಲಪುರುಷಾರ್ಥ+ಏಕ ಘಟನಾ ಸ್ವತಂತ್ರಂ, ತೇ, ತಂತ್ರಂ, (ಕ್ಷಿತತಲವಾಮತೀತರದಿದಮ್) ಕ್ಷಿತಿತಲಂ + ಅವಾತೀತರತ್+ಇದಂ

ಅನ್ವಯಾರ್ಥ

(ಹೇ ಭಗವತಿ)	(ಎಲೈ ಸರ್ವಜ್ಞಳಾದ ದೇವಿಯೇ),
ಪಶುಪತಿಃ	(ಪ್ರಾಣಿಗಳ ಅಧಿಪತಿಯಾದ) ಈಶ್ವರನು
ಸಕಲಂ	ಸಮಸ್ತವಾದ
ಭುವನಂ	ಪ್ರಪಂಚವನ್ನು (ಜನಗಳನ್ನು)
ತತ್ತತ್ಸಿದ್ಧಿ ಪ್ರಸವ ಪರತಂತ್ರೈಃ	ಆಯಾಯಾ ಸಿದ್ಧಿಗಳನ್ನು – ಉಂಟುಮಾಡುವುದರಲ್ಲಿ –ಸಮರ್ಥವಾದ ಬೇರೆಬೇರೆ ತಂತ್ರಗಳನ್ನು ರಚಿಸಿ ಆ ಮೂಲಕ

ಅತಿಸಂಧಾಯ ಸ್ಥಿತಃ	ಜನರನ್ನು ಮೋಹಪಡಿಸಿದ್ದ
ಪುನಸ್ತ್ವನ್ನಿರ್ಬಂಧಾತ್	(ಪುನಃ+ತ್ವನಿರ್ಬಂಧಾತ್) ಮತ್ತೆ ನಿನ್ನ ನಿರ್ಬಂಧದಿಂದ (ಆಗ್ರಹದಿಂದ)
ಅಖಿಲಪುರುಷಾರ್ಥೈಕಘಟನಾ ಸ್ವತಂತ್ರಂ	ಸಮಸ್ತವಾದ–ಧರ್ಮಾರ್ಥ, ಕಾಮ ಮೋಕ್ಷಗಳೆಂಬ ಪುರುಷಾರ್ಥಗಳನ್ನು – ಮುಖ್ಯವಾಗಿ ಉಂಟುಮಾಡುವುದರಲ್ಲಿ – ಸ್ವತಂತ್ರವಾದ
ಚತುಷ್ಷಷ್ಟ್ಯಾ ತಂತ್ರೈಃ	(ಅನೇಕ ಸಿದ್ಧಿಗಳನ್ನು ಪ್ರತಿಪಾದಿಸುವ) ೬೪ ತಂತ್ರಗಳಿಂದ ಕೂಡಿದ
ತೇ ಇದಂ ತಂತ್ರಂ ಕ್ಷಿತಿತಲಂ ಅವಾತೀತರತ್	ಭಗವತಿಯಾದ ನಿನ್ನ ಈ ದೇವೀತಂತ್ರವನ್ನು ಭೂಮಂಡಲಕ್ಕೆ–ಹೊಂದಿಸಿದನು.

ತಾತ್ಪರ್ಯ

ಪ್ರಾಣಿಗಳ ಅಧಿಪತಿಯಾದ ಶಿವನು ಆಯಾ ಸಿದ್ಧರಿಗೆ ಬೇಕಾದ ಸಿದ್ಧಿಗಳನ್ನು ಅನುಗ್ರಹಿಸುವ ಮಹಾಮಾಯಾ, ಶಾಂಬರ ಮೊದಲಾದ ೬೪ ತಂತ್ರಗಳನ್ನು ರಚಿಸಿ ಭೂಲೋಕದಲ್ಲಿ ಜನರನ್ನು ಮೋಹಪಡಿಸಿ ಸುಮ್ಮನಿದ್ದನು. ಅವನು ಮತ್ತೆ ನಿನ್ನ ಒತ್ತಾಯದಿಂದ ಧರ್ಮಾರ್ಥಕಾಮಮೋಕ್ಷಗಳೆಂಬ ಪುರುಷಾರ್ಥಗಳನ್ನು ಉಂಟುಮಾಡುವ ಸ್ವತಂತ್ರವಾದ ನಿನ್ನ ದೇವೀತಂತ್ರವನ್ನು ಎಂದರೆ ಶ್ರೀವಿದ್ಯಾತಂತ್ರವನ್ನು ಈ ಲೋಕಕ್ಕೆ ನೀಡಿದನು (ಅವತಾರ ಮಾಡಿಸಿದನು).

ಪದ್ಯಾನುವಾದ

ಒಂದೊಂದಕೂ ಬೇರೆ ಸಿದ್ಧಿಯನು ಕೊಡುವಂಥ
ಅರುವತ್ತುನಾಲ್ಕು ತಂತ್ರಗಳನ್ನು ಬಳಸುತ್ತ
ಪಶುಪತಿಯು ಸಕಲಭುವನವನು ವಂಚನೆಗೆ ಗುರಿಮಾಡಿ ಬಳಿಕ,
ಹೇ ದೇವಿ, ನಿನ್ನ ನಿರ್ಬಂಧಕ್ಕೆ ತಲೆವಾಗಿ
ಅಖಿಲ ಪುರುಷಾರ್ಥಗಳ ತಾನಾಗಿಯೇ ಕೊಡುವ
ನಿನ್ನೀ ಸ್ವತಂತ್ರ ತಂತ್ರವನು ಭೂತಲದಿ ಹರಹಿ ನೆಲೆಗೊಳಿಸಿರುವನು ॥ ೩೧॥

ಟಿಪ್ಪಣಿಗಳು

೧. ಚತುಷ್ಷಷ್ಟ್ಯಾತಂತ್ರೈಃ ಸಕಲಮತಿಸಂಧಾಯ ಭುವನಂ

(ಶಿವನು ೬೪ ತಂತ್ರಗಳಿಂದ ಸಮಸ್ತಜಗತ್ತನ್ನು ಮೋಹಗೊಳಿಸಿದ್ದನು)

೬೪ ತಂತ್ರಗಳು : ೧) ಮಹಾಮಾಯಾ ಶಂಬರ ತಂತ್ರಂ ೨) ಯೋಗಿನೀಜಾಲ ಶಂಬರಂ ೩) ತತ್ತ್ವಶಂಬರ ತಂತ್ರಂ ೪) ಸಿದ್ಧ ಭೈರವ ೫) ವಟುಕ ಭೈರವ ೬) ಕಂಕಾಳ ಭೈರವ ೭) ಕಾಲ ಭೈರವ ೮) ಕಾಲಾಗ್ನಿ ಭೈರವ ೯) ಯೋಗಿನೀ ಭೈರವ ೧೦) ಮಹಾ ಭೈರವ ೧೧) ಶಕ್ತಿ ಭೈರವ ೧೨) ಬ್ರಾಹ್ಮೀರೂಪ ೧೩) ಮಾಹೇಶ್ವರೀರೂಪ ೧೪) ಕೌಮಾರೀರೂಪ ೧೫) ವೈಷ್ಣವೀರೂಪ ೧೬) ವಾರಾಹೀರೂಪ ೧೭) ಮಾಹೇಂದ್ರೀರೂಪ ೧೮) ಚಾಮುಂಡೀರೂಪ ೧೯) ಶಿವದೂತಿರೂಪ ೨೦) ಬ್ರಹ್ಮಯಾಮಳ ೨೧) ವಿಷ್ಣುಯಾಮಳ ೨೨) ರುದ್ರಯಾಮಳ ೨೩) ಲಕ್ಷ್ಮೀಯಾಮಳ ೨೪) ಉಮಾಯಾಮಳ ೨೫) ಸ್ಕಂದಯಾಮಳ ೨೬) ಗಣೇಶಯಾಮಳ ೨೭) ಜಯದ್ರಥಯಾಮಳ ೨೮) ಚಂದ್ರಜ್ಞಾನಂ ೨೯) ಮಾಲಿನೀ ವಿದ್ಯಾ ೩೦) ಮಹಾಸಂಮೋಹಕ ೩೧) ವಾಮಜುಷ್ಟತಂತ್ರ ೩೨) ಮಹಾದೇವತಂತ್ರ ೩೩) ವಾತುಲ ೩೪) ವಾತುಲೋತ್ತರ ೩೫) ಕಾಮಿಕ ೩೬) ಹೃದ್ಭೇದತಂತ್ರ ೩೭) ತಂತ್ರಭೇದ ೩೮) ಗುಹ್ಯತಂತ್ರ ೩೯) ಕಲಾವಾದ ೪೦) ಕಲಾಸಾರ ೪೧) ಕುಂಡಿಕಾಮಾಲಾ ೪೨) ಮತ್ತೋತ್ತರ ೪೩) ವೀಣಾಖ್ಯ ೪೪) ತ್ರೋತಲ ೪೫) ತ್ರೋತಲೋತ್ತರ ೪೬) ಪಂಚಾಮೃತ ತಂತ್ರ ೪೭) ರೂಪಭೇದ ೪೮) ಭೂತೋಡ್ಡಾಮರಂ ೪೯) ಕುಲಾಸಾರ ೫೦) ಕುಲೋಡ್ಡೀಶಂ ೫೧) ಕುಲಚೂಡಾಮಣಿ ೫೨) ಸರ್ವಜ್ಞಾನೋತ್ತರಂ ೫೩) ಮಹಾಕಾಳೀಮತಂ ೫೪) ಅರುಣೇಶಂ ೫೫) ಮೋದಿನೀಶಂ ೫೬) ವಿಕುಂಠೇಶ್ವರಂ ೫೭) ಪೂರ್ವಾಮ್ನಾಯ ೫೮) ಪಶ್ಚಿಮಾಮ್ನಾಯ ೫೯) ದಕ್ಷಿಣಾಮ್ನಾಯ ೬೦) ಉತ್ತರಾಮ್ನಾಯ ೬೧) ನಿರುತ್ತರಾಮ್ನಾಯ ೬೨) ವಿಮಲ ೬೩) ವಿಮಲೋತ್ತರ ೬೪) ದೇವಿಮತಂ

[ಯಮಳಾಷ್ಟಕ (೨೦-೨೭) ಕಾಮ ಸಿದ್ಧಾಂತ ಪ್ರತಿಪಾದಿತವಾದ (ಸ್ತ್ರೀ ಪುರುಷರ ಮಿಥುನದ ಸ್ಥಾನಮಾನ ಆಹಾರವಿಹಾರಗಳನ್ನು ಕುರಿತ ೮ ಭೇದಗಳೇ ಯಾಮಳಾಷ್ಟಕಂ]. (ತು-ಪುಟ ೧೭೬-೭೮)

೨. ಪಶುಪತಿ (ಶಿವ)

ಇಂದ್ರಿಯಗಳೇ ಪಶುಗಳು. ಆಯಾಯಾ ಪಶುಗಳನ್ನು ರಕ್ಷಿಸುವನಾದ್ದರಿಂದ ಪಶುಪತಿ ಎಂದರೆ ಜೀವಾತ್ಮನು. ಶಿವನೇ ಜೀವಾತ್ಮಾನಾದ್ದರಿಂದ ಪಶುಪತಿ ಎಂದರೆ ಶಿವನಾಗುತ್ತಾನೆ.

೩. ಸೌಂದರ್ಯಲಹರಿ ಮತ್ತು ಶ್ರೀ ಲಲಿತಾಸಹಸ್ರನಾಮಗಳು ಶ್ರೀವಿದ್ಯೆಯನ್ನು ಪ್ರತಿಪಾದಿಸುತ್ತವೆ. ಲಕ್ಷ್ಮೀಧರ (ಸೌಂದರ್ಯಲಹರಿಯ ವ್ಯಾಖ್ಯಾನಕಾರ) ಭಾಸ್ಕರರಾಯ (ಲಲಿತಾ ಸಹಸ್ರನಾಮ ವ್ಯಾಖ್ಯಾನಕಾರ) ಇವರಿಬ್ಬರ ನಡುವಣ ೫ ಶತಮಾನಗಳ ಅವಧಿಯಲ್ಲಿ ಶ್ರೀವಿದ್ಯೆಯು ಭಾರತ ಮತ್ತು ನೆರೆಯ ರಾಷ್ಟ್ರಗಳಲ್ಲಿ ಜನಪ್ರಿಯತೆ ಗಳಿಸಿತು. ಪರಿಣಾಮವಾಗಿ ಈ ಎರಡು ಸ್ತೋತ್ರಗಳು ವೈದಿಕ ಮತ್ತು ವೈದಿಕೇತರ ಪಂಡಿತರಲ್ಲಿ ಸಮಯಾಚಾರದ ಪ್ರಮುಖ ಪ್ರತಿನಿಧಿಗ್ರಂಥಗಳೆಂದು ಅಂಗೀಕರಿಸಲ್ಪಟ್ಟವು. ಅನಂತರ ಥಿಯಾಸಫಿಕಲ್ ಸೊಸೈಟಿ ಮತ್ತು ಸರ್‌ಜಾನ್ ಉಡ್ರಾಫರು ಪ್ರಕಟಿಸಿದ ಶೈವ-ಶಾಕ್ತ ತತ್ತ್ವಶಾಸ್ತ್ರ ಗ್ರಂಥಗಳ ಪರಿಣಾಮವಾಗಿ ಶ್ರೀವಿದ್ಯೆಯನ್ನು ಪ್ರತಿಪಾದಿಸುವ ಗ್ರಂಥರಾಶಿ ಪಾಶ್ಚಾತ್ಯ ರಾಷ್ಟ್ರಗಳಲ್ಲೂ ಪ್ರಚಾರಕ್ಕೆ ಬಂದಿತು. (ಪು-ಪುಟ ೪೨-೪೩)

೪. ತಂತ್ರಶಾಸ್ತ್ರದ ಇತಿಹಾಸದ ಛಾಯೆಯಿಂದ ಕೂಡಿದ ಈ ಶ್ಲೋಕದ ವ್ಯಾಖ್ಯಾನದಲ್ಲಿ ಲಕ್ಷ್ಮೀಧರನು ೧೨ನೇ ಶ.ದಲ್ಲಿ ಭಾರತದಲ್ಲಿ ಅದರ ನೆರೆ ರಾಷ್ಟ್ರಗಳಾದ ಚೀನಾ, ಬರ್ಮಾ, ಕಾಂಬೋಡಿಯಾ ದೇಶಗಳಲ್ಲಿ ಪ್ರಚಾರದಲ್ಲಿದ್ದ ತಂತ್ರಶಾಸ್ತ್ರ ಜ್ಞಾನವನ್ನು ಸಂಗ್ರಹಿಸಲು ಪ್ರಯತ್ನಿಸಿದ್ದಾನೆ. ಆತ್ಮಾನುಸಂಧಾನದಲ್ಲಿ ಸಾಧಕರು ಪಡೆಯಬಹುದಾದ ಅತೀಂದ್ರಿಯ ಜ್ಞಾನವೇ ವಿಜ್ಞಾನತಂತ್ರ, ಎಂದರೆ ಈಗ ನಾವು ಸೈನ್ಸ್ ಎಂದು ಯಾವುದನ್ನು ಕರೆಯುತ್ತೇವೋ ಅದನ್ನು ಪೂರ್ವಜರು ತಂತ್ರಜ್ಞಾನ ಎನ್ನುತ್ತಿದ್ದರು. ವೈದ್ಯ ಜ್ಯೋತಿಷ್ಯ ಬಿಟ್ಟು ಇನ್ನೆಲ್ಲ ವಿಜ್ಞಾನಗಳೂ ಪೂರ್ವಜರ ದೃಷ್ಟಿಯಲ್ಲಿ ತಂತ್ರವೇ ಆಗಿತ್ತು. (ಪು-ಪುಟ ೮೦-೮೧)

೫. 'ಈಶಾನಃ ಸರ್ವವಿದ್ಯಾನಾಂ' ಎಂಬಂತೆ ಸರ್ವವಿದ್ಯೆಗಳ ಸೃಷ್ಟಿಕರ್ತ ಪಶುಪತಿ (ಶಿವ) ಆದ್ದರಿಂದ ಎಲ್ಲ ವಿದ್ಯೆಗಳೂ ಮಂತ್ರವಿದ್ಯೆಗಳೂ ೬೪ ತಂತ್ರಗಳೂ ಈಶ್ವರನ ಮುಖದಿಂದಲೇ ಹೊರಹೊಮ್ಮಿವೆ. ಆದರೆ ಈ ೬೪ ತಂತ್ರಗಳಿಂದ ಚತುರ್ವಿಧ ಪುರುಷಾರ್ಥ ಲಭಿಸುವುದಿಲ್ಲ. ಮತ್ತು ಈ ತಂತ್ರಗಳು ಸ್ವತಂತ್ರವಾಗಿಲ್ಲ; ಒಂದನ್ನು ಇನ್ನೊಂದು ಆಧರಿಸಿವೆ. ಆದಕಾರಣ ಧರ್ಮಾರ್ಥಕಾಮಮೋಕ್ಷಗಳನ್ನು ಕರುಣಿಸುವ '**ಅಖಿಲ ಪುರುಷಾರ್ಥೈಕಘಟನಾ ಸ್ವತಂತ್ರ**'ವಾದ ಬೇರೊಂದು ತಂತ್ರವನ್ನು ಪ್ರತಿಪಾದಿಸಬೇಕು ಎಂದು ಶಿವೆ ಶಿವನಿಗೆ ಆಜ್ಞಾಪಿಸಿದಳು. ಆಗ ಶ್ರೀವಿದ್ಯಾತಂತ್ರ ಈಶ್ವರನಿಂದ ಈ ಲೋಕದಲ್ಲಿ ಪ್ರತಿಪಾದಿತವಾಯಿತು. ಈ ತಂತ್ರ ಸ್ವತಂತ್ರವಾದುದು ಮತ್ತು ಚತುರ್ವಿಧಪುರುಷಾರ್ಥಸಾಧನವಾಗಿದೆ. ಈ ತಂತ್ರವನ್ನು

ಲಕ್ಷ್ಮೀಧರಾ ವ್ಯಾಖ್ಯಾನಕಾರ ಪಂಚದಶಾಕ್ಷರೀ ಮಂತ್ರವೆಂದು ಕರೆದರೆ ಭಾಸ್ಕರರಾಯ ಮಖೀಂದ್ರನು "ವಾಮಕೇಶ್ವರ ತಂತ್ರ"ವೆಂದು ಕರೆದಿದ್ದಾನೆ.

(ಪೋ–ಪುಟ ೧೬೨–೧೬೩)

೬. ೬೪ ತಂತ್ರಗಳ ವಿದ್ಯೆ ರಾಜಸ, ತಾಮಸ ವೃತ್ತಿಯವರಿಗೆ ಯೋಗ್ಯವೆನಿಸಿದವು. ಅವುಗಳನ್ನು ಪಡೆದವರು ಇತರರಿಗೆ ಹಿಂಸೆ ಮಾಡಿ ಪಾಪಫಲಗಳಿಂದ ಜನನಮರಣಚಕ್ರದಲ್ಲಿ ಸಿಲುಕಿದರು. ಆದ್ದರಿಂದ ಸಾತ್ವಿಕ ಜನರಿಗೆ ಮೋಕ್ಷಾಪೇಕ್ಷೆಗೆ ಈ ೬೪ ತಂತ್ರಗಳು ದಾರಿಯಾಗಲಿಲ್ಲ. ಆಗ ಸಾತ್ತ್ವಿಕರಿಗಾಗಿ ಜಗತ್ತಿನ ಹಿತಕ್ಕಾಗಿ ಪುರುಷಾರ್ಥ ಸಾಧನೆಗೆ ಪಶುಪತಿಯು ಬೇರೆಯ ತಂತ್ರವನ್ನು (ಶ್ರೀವಿದ್ಯೆಯನ್ನು) ಲೋಕಕ್ಕೆ ಬೋಧಿಸಲು ಶಿವೆಯು ಒತ್ತಾಯಿಸಿದಳು. ಅದೇ ಶ್ರೀವಿದ್ಯಾತಂತ್ರ. ಇದರಿಂದ ಶ್ರೀಚಕ್ರ, ಶ್ರೀಚಕ್ರಾರ್ಚನೆ, ಶ್ರೀವಿದ್ಯೆ ಆಗಿ, ಸಾಧಕರು ಮೋಹ ಭ್ರಾಂತಿಗಳಿಂದ ದೂರವಾಗಿ ಮೋಕ್ಷಗಾಮಿಗಳಾಗಲು ಸಾಧ್ಯವಾಯಿತು.

(ಪ–ಪುಟ ೨೪೯)


೭. ದೈವಕ್ಕೆ ೩ ಆಕೃತಿಗಳಿವೆ. ೧. ರೇಖಾಕೃತಿ ೨. ರೂಪಾಕೃತಿ ೩. ಮಂತ್ರಾಕೃತಿ. ಮಂತ್ರಾಕೃತಿಯು, ಶಬ್ದಾಕೃತಿ ಆಗಿದೆ: ರೂಪಾಕೃತಿ ಒಂದು ಭಾವವನ್ನು ವ್ಯಕ್ತಪಡಿಸುವ ಆಕೃತಿ ಆಗಿದೆ; ಇನ್ನು ರೇಖಾಕೃತಿ. ರೇಖೆಗಳ ಮೂಲಕ ಭಾವವನ್ನು ಸಾಂಕೇತಿಕವಾಗಿ ಚಿತ್ರಿಸುತ್ತದೆ. ಯಂತ್ರಾರಾಧನೆಗೆ ಮಂತ್ರವೂ ಅಗತ್ಯ; ರೂಪವೂ ಅಗತ್ಯ, ಆದ್ದರಿಂದಲೇ ದೇವಿಯನ್ನು ಶ್ರೀಚಕ್ರದಿಂದಲೂ ಸಗುಣ ರೂಪವಾಗಿ ವಿಗ್ರಹರೂಪದಲ್ಲಿ ಆರಾಧಿಸುತ್ತೇವೆ. ಮಂತ್ರಾಕೃತಿ, ರೂಪಾಕೃತಿಗಳಿಗಿಂತ ಯಂತ್ರಾಕೃತಿಯ ಆರಾಧನೆ ಪ್ರಭಾವಶಾಲಿ.

(ಪಂ–ಪುಟ ೨೨೬)

೮. ಅಭಿನವದ ಏಕಘನವನ್ನು ಸಾಧಿಸುವುದು ಎಲ್ಲ ಉಪಾಸನೆಗಳ ದಾರಿ. ಇದನ್ನು ಸಾಧಿಸಲು ಯಂತ್ರ ಮಂತ್ರ ತಂತ್ರ ಎಂಬ ಮುಮ್ಮುಖದ ದಾರಿ ಎನ್ನುತ್ತದೆ ಶಾಕ್ತತಂತ್ರ. ಯಂತ್ರ ಎಂದರೆ ಶ್ರೀ ಚಕ್ರೋಪಾಸನೆ ತಂತ್ರ ಎಂದರೆ ಶ್ರೀವಿದ್ಯೋಪಾಸನೆ. ಮಂತ್ರ ಎಂದರೆ ಪಂಚದಶೀ ಮಂತ್ರೋಪಾಸನೆ. ಈ ಮೂರು ಬೇರೆ ಬೇರೆಯಾಗಿ ಕಂಡರೂ ಪರಸ್ಪರ ಸಂಬಂಧಿತ ಕೂಡಾ ಆಗಿದೆ"

(ತೋ–ಪುಟ ೨೪೯)

ಯಂತ್ರಾರಾಧನೆ (ಶ್ಲೋಕ-೩೧)



ಯಂತ್ರರಚನೆ : ಬಂಗಾರದ ತಗಡಿನಲ್ಲಿ ಯಂತ್ರ ರಚಿಸಬೇಕು. ಊರ್ಧ್ವಮುಖವಾದ ಐದು ತ್ರಿಕೋಣಗಳು ಅಧೋಮುಖವಾದ ನಾಲ್ಕು ತ್ರಿಕೋಣಗಳು ಇರುವಂತೆ ಶ್ರೀ ಚಕ್ರ ಲೇಖನವಿರಬೇಕು.

ಪೂಜೆ : ಪೂರ್ವಾಭಿಮುಖವಾಗಿ ಕುಳಿತು ಕೆಂಪು ಹೂಗಳಿಂದ ಪೂಜಿಸಬೇಕು ಲಲಿತಾ ಸಹಸ್ರನಾಮ ಕುಂಕುಮಾರ್ಚನೆ ಮಾಡಬೇಕು.

ನೈವೇದ್ಯ : ಹಾಲು ಮತ್ತು ಜೇನುತುಪ್ಪ.

ಜಪ : ೪೫ ದಿನಗಳ ಕಾಲ ಪ್ರತಿ ದಿನವೂ ಯಂತ್ರವನ್ನು ಕೈಲಿಟ್ಟುಕೊಂಡು ೧೦೦೦ ಸಾರಿ ಶ್ಲೋಕವನ್ನು ಜಪಿಸಬೇಕು.

ಫಲ : **ಸಕಲಜನವಶ್ಯ, ರಾಜವಶ್ಯ**

ಶ್ಲೋಕ–೩೨

ಪಂಚದಶಾಕ್ಷರೀ ಮಂತ್ರೋದ್ಧಾರ

[೧]ಶಿವಶ್ಶಕ್ತಿಃ ಕಾಮಃ ಕ್ಷಿತಿರಥರವಿಶ್ಶೀತಕಿರಣಃ
ಸ್ಮರೋ ಹಂಸಶ್ಶಕ್ರಸ್ತದನು ಚ ಪರಮಾರಹರಯಃ
ಅಮೀ ಹೃಲ್ಲೇಖಾಭಿಸ್ತಿಸೃಭಿರವಸಾನೇಷು ಘಟಿತಾಃ
ಭಜಂತೇ ವರ್ಣಾಸ್ತೇ ತವ ಜನನಿ ನಾಮಾವಯವತಾಮ್ ॥ ೩೨ ॥

ಪಾಠಾಂತರ

೧. (ಶಿವಶ್ಶಕ್ತಿಃ)=ಶಿವಃ ಶಕ್ತಿಃ (ಓ)

ಪದವಿಭಾಗ

(ಶಿವಶ್ಶಕ್ತಿ)=ಶಿವಃ+ಶಕ್ತಿಃ, ಕಾಮಃ, (ಕ್ಷಿತಿರಥರವಿಶ್ಶೀತಕಿರಣಃ) = ಕ್ಷಿತಿಃ+ಅಥ+ರವಿಃ+ ಶೀತಕಿರಣಃ, (ಸ್ಮರೋ)=ಸ್ಮರಃ, (ಹಂಸಶ್ಶಕ್ರಸ್ತದನು) = ಹಂಸಃ + ಶಕ್ರಃ+ತತ್+ಅನು, ಚ, ಪರಾವರಾರಹರಯಃ, ಅಮೀ, (ಹೃಲ್ಲೇಖಾಭಿಸ್ತಿಸೃಭಿರವಸಾನೇಷು) = ಹೃತ್+ಲೇಖಾಭಿಃ +ತಿಸೃಭಿಃ+ ಅವಸಾನೇಷು, ಘಟಿತಾಃ, ಭಜಂತೇ, (ವರ್ಣಾಸ್ತೇ) =ವರ್ಣಾಃ+ ತೇ, ತವ, ಜನನಿ, (ನಾಮಾವಯವತಾಮ್)=ನಾಮ+ಅವಯವತಾಮ್

ಅನ್ವಯಾರ್ಥ

ಜನನಿ,	ಎಲೈತಾಯೆ
ಶಿವಃ ಶಕ್ತಿಃ ಕಾಮಃ ಕ್ಷಿತಿಃ	ಶಿವ, ಶಕ್ತಿ, ಕಾಮ, ಕ್ಷಿತಿಗಳೂ (ಕಕಾರವು, ಏಕಾರವೂ ಈ ಕಾರವು ಲಕಾರವು)– (ಈ ೪ ವರ್ಣಗಳು)
ಅಥ ರವಿಃ ಶೀತಕಿರಣಃ ಸ್ಮರಃ ಹಂಸಃ ಶಕ್ರಃ	ಆಮೇಲೆ = ರವಿ, ಚಂದ್ರ, ಸ್ಮರ, ಹಂಸ, ಶಕ್ರಗಳೂ ಹಕಾರವು, ಸಕಾರವು, ಕಕಾರವು ಹಕಾರವು ಲಕಾರವು ಎಂಬ ಈ ೫ ವರ್ಣ) ಗಳು
ತದನು	ಆಮೇಲೆ

ಪರಾಮಾರ ಹರಯಃ	ಪರಾಮಾರ ಹರಿಗಳೂ ಸಕಾರವು-ಕಕಾರವು-ಲಕಾರವೂ (ಈ ೩ ವರ್ಣ)ಗಳು
ಅಮೀ ತೇ ವರ್ಣಾಃ	ನಿನ್ನ ಈ ಹನ್ನೆರಡು ಅಕ್ಷರಗಳು
ತಿಸೃಭಿಃ	ಮೂರಾದ
ಹೃಲ್ಲೇಖಾಭಿಃ	ಹ್ರೀಂಕಾರಗಳಿಂದ
ಅವಸಾನೇಷು	ಈ ಮೂರುಖಂಡಗಳ ಕೊನೆಗಳಲ್ಲೂ (ವಿರಾಮಸ್ಥಾನಗಳಲ್ಲಿ ಅಂದರೆ ೪,೫,೩ ವರ್ಣಗಳಾದ ಮೇಲೆ ಈ ಮೂರು ಖಂಡಗಳ ಕೊನೆಗಳಲ್ಲೂ)
ಘಟಿತಾಃ	ಸೇರಲ್ಪಡುವುಗಳಾಗಿ
ತವ	ನಿನ್ನ
ನಾಮಾವಯವತಾಂ	(ನಾಮ+ಅವಯವತಾಂ) ಮಂತ್ರಕ್ಕೆ
ಭಜಂತೇ	(ಲಿಂಗತ್ವವನ್ನು) ಹೊಂದುತ್ತವೆ ಎಂದರೆ (ನಿನ್ನ) ಮಂತ್ರವಾಗಿ ಹೋಗುತ್ತೆ (ತ್ರಿಪುರಸುಂದರೀ ಅಮರತ್ವವನ್ನು ಹೊಂದುತ್ತವೆ).

ತಾತ್ಪರ್ಯ

ಈ ಶ್ಲೋಕದಲ್ಲಿ ಪಂಚದಶಾಕ್ಷರೀ (೧೫ ಅಕ್ಷರಗಳು) ಮಂತ್ರವು ಷೋಡಶಾಕ್ಷರೀ ಮಂತ್ರ ಆಗುವ ಮಂತ್ರೋದ್ಧಾರ ಕ್ರಮವನ್ನು ವಿವರಿಸಿರುವರು.

ಇಲ್ಲಿ ಮೊದಲು ಹೇಳಿರುವ ೪ ಅಕ್ಷರಗಳು (ಕ,ಏ,ಈ,ಲ) ಒಂದು ಖಂಡವೆಂತಲೂ ಅನಂತರ ೫ ಅಕ್ಷರಗಳು (ಕ ಸ ಕ ಹ ಲ) ಒಂದು ಖಂಡವೆಂತಲೂ ಭಾಗ ಮಾಡಿಕೊಂಡು, ಪ್ರತಿಯೊಂದು ಖಂಡದ ಕೊನೆಗೂ ಹ್ರೀಂ ಎಂಬ ಹೃಲ್ಲೇಖಾ ಬೀಜವನ್ನು ಸೇರಿಸಬೇಕು. ಅನಂತರ ಇದು ಪಂಚದಶಾಕ್ಷರೀ ಮಂತ್ರವಾಗುವುದು (ಕ,ವ,ಈ,ಲ ಹ್ರೀಂ (೫) ಹಸಕಹಲ ಹ್ರೀಂ (೬)-ಸ,ಕ,ಲ,ಹ್ರೀಂ) (೪)=೧೫ ಇದರ ಕೊನೆಗೆ ಶ್ರೀವಿದ್ಯಾಬೀಜವನ್ನು ಸೇರಿಸಿದರೆ ಷೋಡಶಾಕ್ಷರೀ ಮಂತ್ರವಾಗುವುದು.

ಪದ್ಯಾನುವಾದ

ಶಿವಶಕ್ತಿ ಕಾಮ ಧರೆ ಬಳಿಕ ರವಿ ಶೀತಕಿರಣ
ಸ್ಮರಹಂಸ ಶಕ್ರರು ಬಳಿಕ ಪರಾ ಮಾರ ಹರಿಯು
ಈ ಮೂರು ನಾಮಖಂಡಗಳ ವರ್ಣಗಳ ಕಡೆಯೆಡೆ ಕೂಡಲು
ಮೂರು ಹೃಲ್ಲೇಖಗಳು ನಿನ್ನ ನಾಮಾವಯವವಹವು ಜನನಿ ॥ ೩೨ ॥

ಟಿಪ್ಪಣಿಗಳು

೧. ಕಏಈಲಹ್ರೀಂ (೫) ಹಸಕಹಲಹ್ರೀಂ (೬) ಸಕಲಹ್ರೀಂ (೪) ಈ ೧೫ ಅಕ್ಷರ ಸ್ವರೂಪಳಾದ ದೇವಿಯನ್ನು ಪಂಚದಶಾಕ್ಷರೀ ಮಂತ್ರಸ್ವರೂಪಿಣೀ ಎಂದು ಕರೆಯುತ್ತಾರೆ. ಇದರ ಕೊನೆಗೆ ಶ್ರೀವಿದ್ಯಾಬೀಜವನ್ನು [ಶ್ರೀ ಎಂಬುದನ್ನು] ಸೇರಿಸಿದರೆ ಷೋಡಶಾಕ್ಷರೀ ಮಂತ್ರಸ್ವರೂಪಿಣಿ (ತ್ರಿಪುರಸುಂದರೀದೇವಿ) ಎನಿಸಿಕೊಳ್ಳುವಳು.

೨. ಈ ಪಂಚದಶೀ ಮಂತ್ರವು (ಟಿಪ್ಪಣಿ ೧ ರಲ್ಲಿ ಹೇಳಿದಂತೆ) ೧೫ ಅಕ್ಷರಗಳ ಮಂತ್ರವು 'ಕ' ಅಕ್ಷರದಿಂದ ಪ್ರಾರಂಭವಾಗುತ್ತದೆ (ಕಏಈಲ ಹ್ರೀಂ–ಹಸಕಹಲಹ್ರೀಂ–ಸಕಲ ಹ್ರೀಂ) ಆದ್ದರಿಂದ ಇದನ್ನು ಕಾದಿವಿದ್ಯೆ ಎಂದು ಕರೆಯುತ್ತಾರೆ.

೩. ಇನ್ನು ಕೆಲವರು ಈ ಶ್ಲೋಕವು ಹಾದಿ ವಿದ್ಯೆಯನ್ನು ಹೇಳುತ್ತದೆ ಎನ್ನುತ್ತಾರೆ. ಅದಕ್ಕೆ ಅವರು ಕೊಡುವ ವಿವರಣೆ ಹೀಗಿದೆ: ಹ (ಶಿವ), ಸ (ಶಕ್ತಿ), ಕ (ಕಾಮ), ಲ (ಕ್ಷಿತಿ) ಈ ನಾಲ್ಕು ಒಂದು ವರ್ಗ ಎಂದರೆ **ಹಸಕಲ ವರ್ಗ** ಹ (ರವಿ) ಸ (ಶೀತಕಿರಣ) ಕ (ಸ್ಮರಃ) ಹ (ಹಂಸಃ) ಲ (ಶಕ್ತಃ) ಈ ಐದೂ ಒಂದು ವರ್ಗ ಎಂದರೆ **ಹಸಕಹಲ ವರ್ಗ**. ಸ (ಪರಾ), ಕ (ಮಾರ), ಲ (ಹರಿ) ಈ ಮೂರೂ ಒಂದು ವರ್ಗ ಅಂದರೆ **ಸಕಲವರ್ಗ** ಈ ಮೂರು ವರ್ಗಗಳಿಗೆ ಹ್ರೀಂ ಬೀಜಾಕ್ಷರ ಸೇರಿಸಿದರೆ ಹಸಕಲ ಹ್ರೀಂ (೫) ಹಸಕಹಲ ಹ್ರೀಂ (೬) ಸಕಲ ಹ್ರೀಂ (೪) ಪಂಚದಶಾಕ್ಷರಿ ಮಂತ್ರವಾಗುತ್ತದೆ. ಈ ಮಂತ್ರದಲ್ಲಿ ಮೊದಲಕ್ಷರ 'ಹ' ಕಾರವಿರುವುದರಿಂದ ಇದನ್ನು ಹಾದಿ ವಿದ್ಯಾ ಎಂದು ಕರೆಯುತ್ತಾರೆ. ಈ ಮಂತ್ರವನ್ನು ಲೋಪಾಮುದ್ರೆ ಆರಾಧಿಸಿದಳು ಎಂದು ಹೇಳುತ್ತಾರೆ.

೪. **ಪಂಚದಶೀ ಮಂತ್ರದ ಅರ್ಥ:**

"ಹೃದಯ ಕಮಲದಲ್ಲಿ ವಾಸಿಸುವ ಹಾಗೂ ಪ್ರಜ್ವಲಿಸುವ ಬೆಂಕಿಯಂತೆ ಹೊಳೆಯುವ ಆ ಪ್ರಜ್ಞೆಯ ಶಕ್ತಿಯು ಸತತವಾದ ಆನಂದವನ್ನು ನೀಡುವುದರ ಜತೆಗೆ ಐಶ್ವರ್ಯ ಹಾಗೂ ಖ್ಯಾತಿಯನ್ನು ತಂದುಕೊಟ್ಟು ಇತರ ತೊಂದರೆಗಳಿಂದ ರಕ್ಷಿಸುತ್ತದೆ ಎನ್ನುವುದೇ ಪಂಚದಶೀ ಮಂತ್ರದ ಅರ್ಥ."

(ಶ್ರೀವಿದ್ಯೆಯ ಸಾರಗ್ರಂಥ ಅನು: ಎಂ.ವಿ. ನರಸಿಂಹಮೂರ್ತಿ–ಪುಟ ೪೦)

೫. **ಷೋಡಶಾಕ್ಷರೀ ಮಂತ್ರದ ಅರ್ಥ:**

ಇದಕ್ಕೆ ರಾಜರಾಜೇಶ್ವರೀವಿದ್ಯೆ ಎಂದು ಹೆಸರಿದೆ. ಇದರರ್ಥ ಹೀಗಿದೆ: ಇಲ್ಲೊಂದು ಕಂಚಿನಪಾತ್ರೆ ಇದೆ ಎಂದು ಊಹಿಸಿಕೊಳ್ಳಿ. ಅದರಲ್ಲಿ ನಿರ್ಮಲ ನೀರಿದೆ. ಅದರಲ್ಲಿ ಅದಕ್ಕೆ ಅಂಟಿಕೊಂಡಿರುವಂತೆ ಸ್ಫಟಿಕವಿದೆ. ದೇವತೆಯು ಸ್ಫಟಿಕದಂತೆ ಇದ್ದು ಅದಕ್ಕೆ ೩ ಗುಣಗಳಿವೆ. ಅವಳು ವಸ್ತುವಿನ ರೂಪವನ್ನು ಧರಿಸಿ ೩೬ ಗುಣಗಳ ಮಹತ್ತನ್ನು ಸೃಷ್ಟಿಸಲು ಚಿಗುರು ಒಡೆಯುತ್ತದೆ.

ಅಹಂತನವನ್ನು ಶಬ್ದ ಹಾಗೂ ಒತ್ತಡದ ಮೂಲಕ ಆಕೆ ಪಡೆಯುತ್ತಾಳೆ. ಇದು ಆಗುವಾಗ ಆಕೆ ಪಾರ್ವತೀ–ಪರಮೇಶ್ವರ, ವಾಣೀ–ಹಿರಣ್ಯಗರ್ಭ, ಲಕ್ಷ್ಮೀ–ನಾರಾಯಣ, ಅಗ್ನಿ–ಸೋಮ, ಪಂಚಭೂತಗಳು ಮೊದಲಾದ ರೂಪಗಳನ್ನು ಆ ಪಾತ್ರೆಯ ಪ್ರತಿಬಿಂಬದಿಂದ ಪಡೆಯುತ್ತಾಳೆ. ಮೂಲಭೂತ ಬ್ರಹ್ಮನ್ ಅನ್ನು ಅರಿವು ಮಾಡಿಕೊಳ್ಳುವ ಹಾಗೂ ಮಾಯೆಯ ರೂಪವನ್ನು ಧರಿಸುವ ಶಕ್ತಿಯುಳ್ಳ ಆ ಹೊಳೆಯುವ ಪ್ರತಿಬಿಂಬ ನನ್ನ ಅಜ್ಞಾನವನ್ನು ನಾಶಮಾಡಿ ನೇರವಾಗಿ ಬ್ರಹ್ಮನ್ ಅನ್ನು ಅನುಭವಿಸುವಂತೆ ಮಾಡಲಿ ಆ ಮೂಲಭೂತ ತತ್ವ ಎಂದು ಪ್ರಾರ್ಥಿಸಲಾಗುವುದು.

(‘ಶ್ರೀ ವಿದ್ಯೆಯಸಾರ’ ಗ್ರಂಥ ಅನು:
ಅನು: ಎ.ವಿ. ನರಸಿಂಹಮೂರ್ತಿ ಪುಟ ೪೦)

೬. (ಸೌಂದರ್ಯ ಲಹರಿ ಅನುವಾದಕರಾದ ಶ್ರೀ ಬಿ.ಎಸ್. ಕಪನೀಪತಯ್ಯನವರು ಈ ಶ್ಲೋಕದ ವಿವರಣೆಯನ್ನು, ನಕ್ಷೆ ರೂಪದಲ್ಲಿ ಶ್ಲೋಕ ೯ರ ಟಿಪ್ಪಣಿಯಲ್ಲಿ ಕೊಟ್ಟಿದ್ದಾರೆ. ಮುಂದಿನ ಪುಟ ನೋಡಿ). ನಕ್ಷೆಯಲ್ಲಿ ತೋರಿಸಿರುವಂತೆ, ೧. ಅಗ್ನಿಖಂಡ ೨. ಸೂರ್ಯಖಂಡ ೩. ಚಂದ್ರಖಂಡಗಳೆಂಬ ಮೂರು ಖಂಡಗಳಿವೆ.

ಷೋಡಶಾಕ್ಷರಿಯಲ್ಲಿರುವ ಹ್ರೀಂಕಾರವು ರುದ್ರಗ್ರಂಥಿ, ವಿಷ್ಣುಗ್ರಂಥಿ ಬ್ರಹ್ಮಗ್ರಂಥಿ ಸ್ಥಾನಗಳಾಗಿರುವುವು.

ಈ ಮೂರು ಖಂಡಗಳು ಜ್ಞಾನಶಕ್ತಿ ಇಚ್ಛಾಶಕ್ತಿ ಕ್ರಿಯಾಶಕ್ತಿಸ್ವರೂಪಗಳಾಗಿಯೂ ಜಾಗೃತ್, ಸ್ವಪ್ನ, ಸುಷುಪ್ತಿ ಎಂಬ ಅವಸ್ಥಾತ್ರಯಗಳಿಂದಾಗಿಯೂ ಆ ಅವಸ್ಥಾತ್ರಯಗಳ ಅಭಿಮಾನಿಗಳಾದ ವಿಶ್ವ, ತೈಜಸಾ, ಪ್ರಾಜ್ಞ ಸ್ವರೂಪಿಗಳಾಗಿಯೂ ಇರುವುವು.

ಶಿರಸ್ಸು	ಸಹಸ್ರದಳಪದ್ಮ		ಚಂದ್ರಸ್ಥಾನ (ಚಂದ್ರ ಖಂಡ)
ಹುಬ್ಬಿನ ಮಧ್ಯೆ	ಆಜ್ಞಾಚಕ್ರ	ಬ್ರಹ್ಮಗ್ರಂಥಿ	
ಕಂಠ	ವಿಶುದ್ಧಚಕ್ರ		ಸೂರ್ಯಸ್ಥಾನ (ಸೂರ್ಯಖಂಡ)
ಎದೆ	ಅನಾಹತಚಕ್ರ	ವಿಷ್ಣುಗ್ರಂಥಿ	
ನಾಭಿ	ಮಣಿಪೂರಚಕ್ರ		ಅಗ್ನಿಸ್ಥಾನ (ಅಗ್ನಿಖಂಡ)
ಕಿಬ್ಬೊಟ್ಟೆ	ಸ್ವಾಧಿಷ್ಠಾನಚಕ್ರ	ರುದ್ರಗ್ರಂಥಿ	
ಗುದದ್ವಾರ	ಮೂಲಾಧಾರಚಕ್ರ		

೭. ಷೋಡಶಾಕ್ಷರೀ ಮಂತ್ರಕ್ಕೆ ಭುವನೇಶ್ವರೀ ಮಂತ್ರವೆಂದೂ ತ್ರಿಪುರ ಸುಂದರೀ ಮಂತ್ರವೆಂದೂ ಶ್ರೀವಿದ್ಯೆಯೆಂದೂ ಹೆಸರು. ಈ ಮಂತ್ರದಲ್ಲಿರುವ ೧೬ ಅಕ್ಷರಗಳು ೧೬ ಚಂದ್ರಕಲಾ ಸ್ವರೂಪಗಳಾಗಿ ಇರುವುವು. ಅವು ಯಾವುವು ಎಂದರೆ

೧) ತ್ರಿಪುರಸುಂದರೀ ೨) ಕಾಮೇಶ್ವರೀ ೩) ಭಗಮಾಲಿನೀ
೪) ನಿತ್ಯಕ್ಲಿನ್ನಾ ೫) ಭೇರುಂಡಾಖ್ಯಾ ೬) ವಹ್ನಿವಾಸಿನೀ
೭) ಮಹಾವಿದ್ಯಾ ೮) ರೌದ್ರೀ ೯) ತ್ವರಿತಾ
೧೦) ಕುಲಸುಂದರೀ ೧೧) ನೀಲಪತಾಕಾ ೧೨) ವಿಜಯಾಖ್ಯಾ
೧೩) ಸರ್ವಮಂಗಳಾ ೧೪) ಜ್ವಾಲಾಖ್ಯಾ ೧೫) ಮಾಲಿನ್ಯಾಖ್ಯಾ
೧೬) ಚಿದ್ರೂಪಕಲಾ

ಹೀಗೆಂಬ ಕಲೆಗಳು ಪಾಡ್ಯ ಮೊದಲೊಂದು ೧೫ ದಿನಗಳಲ್ಲೂ ಉಪಾಸ್ಯಗಳಾಗಿವೆ. ಈ ಚಿದ್ರೂಪಕಲೆಯನ್ನು ಪ್ರತಿದಿನದಲ್ಲೂ ಉಪಾಸನೆ ಮಾಡಬೇಕು.

ಶ್ರೀಚಕ್ರದ ವಿಶುದ್ಧಿ ಚಕ್ರದಲ್ಲಿರುವ ೧೬ ದಳಗಳಲ್ಲೂ ಈ ೧೬ ಕಲೆಗಳನ್ನು ಆವಾಹನೆ ಮಾಡಿಕೊಂಡು ಧ್ಯಾನಮಾಡಬೇಕು. ಈ ಮಂತ್ರದ ೧೬ನೇ ಬೀಜಾಕ್ಷರವನ್ನು (ಹ್ರೀಂ) ಗುರುಮುಖದಿಂದಲೇ ತಿಳಿಯಬೇಕು.

ಈ ಶ್ಲೋಕದಲ್ಲಿ ತಿಳಿಯಬೇಕಾದ ಅಂಶಗಳು ಇನ್ನೂ ಬಹಳವಾಗಿ ಇರುವುವು.

(K)

೮. ದೇವಿಯ ಅವಯವಗಳ ಸಂಕೇತವಾದ ಈ ಪಂಚದಶೀ ಮಂತ್ರವನ್ನು ದೇವಿಯ ನಿಜರೂಪದ ಪ್ರತೀಕವಾದ ಷೋಡಶೀ ಮಂತ್ರಕ್ಕೆ ಪರಿವರ್ತಿಸಿ, ಸೌಮ್ಯ ಖಂಡವನ್ನು ಚಂದ್ರಕಲಾಖಂಡವನ್ನಾಗಿ ಮಾರ್ಪಡಿಸುವ ೧೬ನೇ ಏಕವರ್ಣದ ಮಂತ್ರವನ್ನು (ಹ್ರೀಂ) ಗುರುಮುಖದಿಂದ ತಿಳಿಯಬೇಕೆಂಬ ನಿಯಮವಿದೆ.

ಈ ನಿಯಮಗಳನ್ನು ಗುಣಶಾಲಿಯೂ, ಶ್ರದ್ಧಾವಂತನೂ ಆದ ಸತ್‌ಶಿಷ್ಯನಿಗೆ ಮಾತ್ರ ಬೋಧಿಸಬೇಕೆಂದು ಶಾಸ್ತ್ರ ಒತ್ತಿ ಹೇಳುತ್ತದೆ. ಈ ನಿಯಮಗಳನ್ನು ಪಾಲಿಸುವುದು ಕಠಿಣವೆಂದೂ ಶ್ರೀವಿದ್ಯಾಪ್ರಸಾರಕ್ಕೆ ತಡೆಯಾಗುವುದೆಂದೂ ತಿಳಿದು ಲಕ್ಷ್ಮೀಧರ ದೇಶಿಕರು ಸೂಚಿಸುವ ಪರಿಹಾರ ಹೀಗಿದೆ.

"ಯಾರು ನನ್ನ ಈ ಗ್ರಂಥವನ್ನು ಓದಿ ಆ ಕಲೆಯನ್ನು ತಿಳಿದುಕೊಳ್ಳುವರೋ ಅವರು ನನ್ನ ಶಿಷ್ಯರೇ ಆಗಿರುವರು. ಆದ್ದರಿಂದ ಅವರಲ್ಲಿ ನನ್ನ ಅನುಗ್ರಹ ಎಂದು ಹೇಳಿ ಆ ಏಕವರ್ಣ ಮಂತ್ರವನ್ನು ಮೊದಲಲ್ಲಿ ಶಕಾರ ರೇಫ ಈಕಾರ ಕೊನೆಯಲ್ಲಿ ಬಿಂದು ಇದೇ ಚಂದ್ರಕಲಾವರ್ಣ" ಎಂದು ಹೇಳಿದ್ದಾರೆ.

೯. ಗುರುಸೇವೆ, ಪಾದವಂದನೆ, ಹಸ್ತಮಸ್ತಕಸಂಯೋಗ (ಮಂತ್ರದಾನ) ಇವೊಂದೂ ಇಲ್ಲದೆ ಅವರು ನಿಮ್ಮ ಶಿಷ್ಯರಾಗುವುದು ಹೇಗೆ? ಎಂಬ ಪೂರ್ವಪಕ್ಷಕ್ಕೆ, ಲಕ್ಷ್ಮೀಧರ ದೇಶಿಕರ ಉತ್ತರವಿದು

"ನನ್ನ ಗ್ರಂಥವನ್ನು ಓದುವುದರಿಂದ ಮಂತ್ರರಹಸ್ಯವನ್ನು ತಿಳಿಯಬಲ್ಲ ಜಿಜ್ಞಾಸುಗಳಿಗೆ ನನ್ನ ಶಿಷ್ಯತ್ವ ಅಪರೋಕ್ಷವಾಗಿ ದೊರಕುತ್ತದೆ. ತಿಳಿಯಲಾರದವರಿಗೆ ಮಂತ್ರದಾನದ ಪ್ರಶ್ನೆಯೇ ಇಲ್ಲ. ವರ್ತಮಾನಕಾಲದ ಜಿಜ್ಞಾಸುಗಳಂತೆ ಭವಿಷ್ಯದಲ್ಲಿಯೂ ಇಂತಹ ಶ್ರೇಷ್ಠವರ್ಗದ ಜಿಜ್ಞಾಸುಗಳಿಗೆ ಮಂತ್ರದ ದಾನರೂಪವಾದ ನನ್ನ ಅನುಗ್ರಹ ಇದ್ದೇ ಇರುತ್ತದೆ."

(ಪು–ಪುಟ ೮೭)

೧೦. ಪಂಚದಶಾಕ್ಷರೀ ಮಂತ್ರದಲ್ಲಿ ಮೂರು ಕೂಟಗಳನ್ನು (ಖಂಡಗಳು) ಶ್ರೀದೇವಿಯ ಶರೀರದ ೩ ಭಾಗಗಳಿಗೆ ಹೋಲಿಸಲಾಗುತ್ತದೆ.

ಕೂಟ ಒಂದು: **ವಾಗ್ಭವಕೂಟ** ಕ–ಏ–ಈ–ಲ–ಹ್ರೀಂ ಬೀಜಾಕ್ಷರಗಳು ದೇವಿಯ ಮುಖವನ್ನು ಸೂಚಿಸುತ್ತದೆ.

ಕೂಟ ಎರಡು: **ಕಾಮರಾಜಕೂಟ** ಹಸಕಲಹಹ್ರೀಂ ದೇವಿಯ ಕಂಠದಿಂದ ಹಿಡಿದು ಕಟಿ(ಸೊಂಟ)ಯವರೆಗೆ ಇರುವ ಶರೀರಭಾಗವನ್ನು ಸೂಚಿಸುತ್ತದೆ.

ಕೂಟ ಮೂರು: **ಪರಾಕೂಟ** ಸಕಲಹ್ರೀಂ ಕಟಿಪ್ರದೇಶದಿಂದ ಹಿಡಿದು ಕೆಳಭಾಗದವರೆಗೆ ಸೂಚಿಸುತ್ತದೆ.

ವಾಗ್ಭವಕೂಟ ಸಕಲವಿದ್ಯಾಪ್ರದವನ್ನೂ ಕಾಮರಾಜಕೂಟವು ಸಕಲಾರ್ಥ ಸಿದ್ಧಿಯನ್ನು ಪರಾಕೂಟವು ಮೋಕ್ಷದಾಯಿತ್ವವನ್ನು ಸೂಚಿಸುತ್ತದೆ.

(ಪೋ–ಪುಟ ೧೬೫)

೧೧. ಈ ತ್ರಿಕೂಟಗಳನ್ನು ಲಲಿತಾ ಸಹಸ್ರನಾಮದಲ್ಲಿ
೧ ಶ್ರೀಮದ್ವಾಗ್ಭವಕೂಟೈಕಸ್ವರೂಪಮುಖಪಂಕಜಾಯೈ ನಮಃ (೮೫)
೨ ಕಂಠಾಧಃ ಕಟಿಪರ್ಯಂತ ಮಧ್ಯಕೂಟಸ್ವರೂಪಿಣ್ಯೈ ನಮಃ (೮೬)
೩ ಶಕ್ತಿಕೂಟೈಕತಾಪನ್ನ ಕಟ್ಯಧೋಭಾಗಧಾರಿಣ್ಯೈ ನಮಃ (೮೭) ಎಂದು ವರ್ಣಿಸಲಾಗಿದೆ.

(ಪೋ–ಪುಟ ೧೬೭)

೧೨. ಶ್ರೀವಿದ್ಯಾ ಎಂಬ ಮಾತಿನಲ್ಲಿ ಶ್ರೀ ಎಂದರೆ ಲಕ್ಷ್ಮಿ ಎಂಬ ಅರ್ಥ ಪ್ರಚಲಿತವಾಗಿದ್ದರೂ ಅದರ ಮೂಲಾರ್ಥ **ಮಹಾತ್ರಿಪುರಸುಂದರೀ** ಎಂದೇ ಆಗಿದೆ. ಮಹಾತ್ರಿಪುರಸುಂದರೀ ತತ್ತ್ವ ಪ್ರತಿಪಾದಕವಾದ ವಿದ್ಯೆಯೇ ಶ್ರೀವಿದ್ಯೆ. ಇದರ ಗಮ್ಯವು ಆತ್ಮಜ್ಞಾನಪ್ರಾಪ್ತಿ, ಇತರ ಅನುಷ್ಠಾನಗಳಲ್ಲಿ ಭೋಗೇಚ್ಛೆ ತ್ಯಜಿಸಬೇಕೆಂದು ನಿರ್ದೇಶನವಿದ್ದರೆ ಶ್ರೀವಿದ್ಯಾಸಾಧನೆಯಲ್ಲಿ ಮೋಕ್ಷ ಮತ್ತು ಸಾತ್ತ್ವಿಕಭೋಗ ಎರಡರ ಸಿದ್ಧಿಗೆ ದಾರಿ ಆಗಿದೆ.

(ಶ್ರೀ ಲಲಿತಾಮಹಿಮಾ ಗ್ರಂಥ ಪುಟ ೩೬)

ಹ್ರೀಂ ಬೀಜಾಕ್ಷರದ ಹಿರಿಮೆ

೧೩. ಪಂಚದಶಾಕ್ಷರೀ ಮಂತ್ರದಲ್ಲಿ ಹಸಕಲ, ಹಸಕಹಲ, ಸಕಲ ಎಂಬ ಬೀಜಾಕ್ಷರಗಳಿಗೆ ಹ್ರೀಂ ಎಂಬುದು ಸೇರಿ ಪಂಚದಾಶಾಕ್ಷರೀ ಆಗುತ್ತದೆ ಎಂದು ಹೇಳಲಾಗಿದೆ. 'ಹ್ರೀಂ' ಬೀಜಾಕ್ಷರದ ಹಿರಿಮೆ ಏನು ಎಂಬುದನ್ನು 'ಶ್ರೀಲಲಿತಾಮಹಿಮಾ' ಗ್ರಂಥದಲ್ಲಿ ಹೀಗೆ ಹೇಳಿದೆ.

"ವೈದಿಕ ಹಾಗೂ ವೇದಾಂತ ವಿವೇಚನೆಯಲ್ಲಿ ಓಂಕಾರಕ್ಕೆ ಯಾವ ಮಹತ್ವವಿದೆಯೋ ಹ್ರೀಂಕಾರಕ್ಕೆ ತಂತ್ರಶಾಸ್ತ್ರದಲ್ಲಿ ಅದೇ ಮಹತ್ವವಿದೆ. ಅದು ತಾಂತ್ರಿಕ ಪ್ರಣವವೆಂದೇ ಹೆಸರಾಗಿದೆ. ಹ್ರೀಂ ದಶಮಹಾವಿದ್ಯಾದೇವಿಯರಲ್ಲಿ ಒಬ್ಬಳಾದ ಭುವನೇಶ್ವರಿಯ ಮಂತ್ರವಾಗಿದೆ. ಹ್ರೀಂ ಅನ್ನು ಲಜ್ಜಾಬೀಜವೆಂದು ಕರೆಯಲಾಗಿದೆ. ಹ್ರೀಂ ದಶಮಹಾವಿದ್ಯೆಗಳಲ್ಲಿ ಒಬ್ಬಳಾದ ಭುವನೇಶ್ವರಿಯ

ಮಂತ್ರವಾಗಿದೆ. ಹ್ರೀಂ, ಹೃದಯದಿಂದ ಹೊರಬಂದ ರೇಖಾ (ಲೇಖಾ) ಆಗಿರುವುದರಿಂದ ಹೃಲ್ಲೇಖಾ ಎಂದು ಅದನ್ನು ಕರೆಯುತ್ತಾರೆ. ಹ್ರೀಂ ಪದದಿಂದ ಪ್ರಪಂಚ ಸೃಷ್ಟಿಯಾಗಿದೆ.

ಮೂರು ವರ್ಗಗಳ ಅಕ್ಷರಗಳ ಕೊನೆಗೆ ಸೇರುವ ೩ ಹ್ರೀಂ ಅಕ್ಷರ ಪ್ರಾಪಂಚಿಕ, ದೈವ, ಜೀವಾತ್ಮಗ್ಗಳನ್ನು ಕ್ರಮವಾಗಿ ಪ್ರತಿಪಾದಿಸುತ್ತದೆ.

(ಶ್ರೀಲಲಿತಾ ಮಹಿಮಾ ಗ್ರಂಥಿ–ಪುಟ ೩೫)

ಯಂತ್ರಾರಾಧನೆ (ಶ್ಲೋಕ–೩೨)



ಯಂತ್ರರಚನೆ : ಚಿನ್ನದ ಅಥವಾ ತಾಮ್ರದ ತಗಡಿನಲ್ಲಿ ಯಂತ್ರ ರಚಿಸಬೇಕು. ಅದರಲ್ಲಿ ಚಿತ್ರದಲ್ಲಿ ತೋರಿಸಿರುವಂತೆ ಯಂತ್ರಲೇಖನವಿರಬೇಕು.

ಪೂಜೆ : ಉತ್ತರಾಭಿಮುಖವಾಗಿ ಕುಳಿತುಕೊಂಡು ಪೂಜಿಸಬೇಕು. ಲಲಿತಾ ತ್ರಿಶತಿ ಕುಂಕುಮಾರ್ಚನೆ ಮಾಡಬೇಕು.

ಜಪ : ೪೫ ದಿನಗಳ ಕಾಲ ೧೦೦೦ ಬಾರಿ ಶ್ಲೋಕವನ್ನು (೩೨) ಜಪಿಸಬೇಕು.

ನೈವೇದ್ಯ : ಮೊಸರನ್ನ, ಉದ್ದಿನವಡೆ, ಹಣ್ಣುಗಳು.

ಫಲ : ಸಕಲವಿದ್ಯಾಸಿದ್ಧಿ; ರಸಸಿದ್ಧಿ.

ಶ್ಲೋಕ–೩೩

ದೇವೀ ಮಂತ್ರೋಪಾಸನೆಯ ಕ್ರಮ

ಸ್ಮರಂ ಯೋನಿಂ ಲಕ್ಷ್ಮೀಂ [೧]ತ್ರಿತಯಮಿದಮಾದೌ ತವ ಮನೋಃ
ನಿಧಾಯೈಕೇ ನಿತ್ಯೇ ನಿರವಧಿಮಹಾಭೋಗರಸಿಕಾಃ ।
[೨]ಭಜಂತಿ ತ್ವಾಂ [೩]ಚಿಂತಾಮಣಿಗುಣನಿಬದ್ಧಾಕ್ಷವಲಯಾಃ
[೪]ಶಿವಾಗ್ನೌ [೫]ಜುಹ್ವಂತಸ್ಸುರಭಿಘೃತಧಾರಾಹುತಿಶತೈಃ ॥ ೩೩ ॥

ಪಾಠಾಂತರ

೧. (ತ್ರಿತಯಮಿದಮಾದೌ)=ತ್ರಿತಯಮಿದಮಾಧ್ಯೈ (ಸು)
೨. (ಭಜಂತಿ) = ಜಯಂತಿ
೩. (ಚಿಂತಾಮಣಿಗುಣನಿಬದ್ಧಾಕ್ಷವಲಯಾಃ)=ಚಿಂತಾಮಣಿಗುಣನಿಬದ್ಧಾಕ್ಷರಲಯಾಃ (ಸು)
೪. (ಶಿವಾಗ್ನೌ)=ಶಿವಾಗೌ್ರ(ಸು)
೫. (ಜುಹ್ವಂತಃ ಸುರಭಿ)=ಜುಹ್ವಂತಸ್ಸುರಭಿ(ಸು)

ಪದವಿಭಾಗ

ಸ್ಮರಂ, ಯೋನಿಂ, ಲಕ್ಷ್ಮೀಂ, (ತ್ರಿತ್ರಯಮಿದಮಾದೌ)= ತ್ರಿತಯಂ+ಇದಂ+ಆದೌ, ತವ, ಮನೋಃ, (ನಿಧಾಯೈಕೇ)= ನಿಧಾಯ + ಏಕೇ, ನಿತ್ಯೇ, ನಿರವಧಿಮಹಾಭೋಗರಸಿಕಾಃ, ಭಜಂತಿ, ತ್ವಾಂ, (ಚಿಂತಾಮಣಿಗುಣನಿಬದ್ಧಾಕ್ಷವಲಯಾಃ) = ಚಿಂತಾಮಣಿಗುಣನಿಬದ್ಧ+ಅಕ್ಷವಲಯಾಃ, (ಶಿವಾಗ್ನೌ),= ಶಿವ+ಅಗ್ನೌ, ಜುಹ್ವಂತಃ, (ಸುರಭಿಘೃತಧಾರಾಹುತಿಶತೈಃ)= ಸುರಭಿಘೃತಧಾರಾ+ಆಹುತಿಶತೈಃ

ಅನ್ವಯಾರ್ಥ

(ಹೇ) ನಿತ್ಯೇ	ಆದ್ಯಂತನಿತ್ಯಳಾದ ಎಲೈ ದೇವಿಯೇ,
ಸ್ಮರಂ	(ಕ್ಲೀಮ್) ಕಾಮಬೀಜವನ್ನು
ಯೋನಿಂ	ಶಕ್ತಿಬೀಜವಾದ ಹ್ರೀಂಕಾರವನ್ನು
ಲಕ್ಷ್ಮೀಂ	ಲಕ್ಷ್ಮೀಬೀಜವಾದ ಶ್ರೀಮ್ ಎಂಬುದನ್ನು
ಇದಂ ತ್ರಿತಯಂ }	ಈ ಮೂರನ್ನು

ತವ ಮನೋ ಆದೌ	ನಿನ್ನ–ಮಂತ್ರದ–ಮೊದಲಿನಲ್ಲಿ
ನಿಧಾಯ	ಸೇರಿಸಿಕೊಂಡು
ನಿರವಧಿಮಹಾಭೋಗ ರಸಿಕಾಃ	ಕೊನೆಯೇ ಇಲ್ಲದ– ಮಹಾಸುಖದಲ್ಲಿ
ಏಕೇ	(ಬ್ರಹ್ಮಾನಂದದಲ್ಲಿ)–ಆಸಕ್ತರಾದ ಕೆಲವು ಯೋಗಿಗಳು [ಸಮಯಿಗಳು]
ಚಿಂತಾಮಣಿ ಗುಣ–	(ಚಿಂತಾಮಣಿ + ಗುಣನಿಬದ್ಧಾ + ಅಕ್ಷವಲಯಾಃ)
ನಿಬದ್ಧಾಕ್ಷವಲಯಾಃ	ಚಿಂತಾಮಣಿಯೆಂಬ ರತ್ನಗಳ ಸಮೂಹದಿಂದ –ಮಾಡಲ್ಪಟ್ಟ–ಜಪಮಾಲಿಕೆವುಳ್ಳವರಾಗಿ
ಶಿವಾಗ್ನೌ	ಶಕ್ತಿ ದೇವತೆಯೆಂಬ ಅಗ್ನಿಯಲ್ಲಿ
ಸುರಭಿ ಘೃತ ಧಾರಾಹುತಿ ಶತೈಃ	(ಸುರಭಿ+ಘೃತ+ಧಾರಾ+ಆಹುತಿ+ಶತೈಃ) ಕಾಮಧೇನುವಿನ–ತುಪ್ಪದ– ಧಾರಾರೂಪನಾಗಿರುವ–ನೂರಾರು ಆಹುತಿಗಳಿಂದ
ಜುಹ್ವಂತಃ	ಹೋಮ ಮಾಡುತ್ತಾ
ತ್ವಾಂ	ನಿನ್ನನ್ನು
ಭಜಂತಿ	ಸೇವಿಸುತ್ತಾರೆ.

ತಾತ್ಪರ್ಯ

ಆದ್ಯಂತರಹಿತಳಾದ ದೇವಿಯೇ, ನಿನ್ನ ಮಂತ್ರದ ಮೊದಲಲ್ಲಿ ಮನ್ಮಥ (ಕ್ಲೀಂ), ಯೋನಿ (ಹ್ರಿಂ), ಲಕ್ಷ್ಮೀ (ಶ್ರೀ), ಈ ಮೂರು ಬೀಜಗಳನ್ನು ಸೇರಿಸಿಕೊಂಡು ಅಪರಿಮಿತವಾದ ಆನಂದವನ್ನು ಅನುಭವಿಸುವ ಕೆಲವೇ ಮಂದಿ ಯೋಗಿಗಳು (ಸಮಯಿಗಳು), ಚಿಂತಾಮಣಿಗಳನ್ನು ದಾರದಲ್ಲಿ ಸೇರಿಸಿ ಪೋಣಿಸಿದ ಜಪಮಾಲಿಕೆಯನ್ನು ಹೊಂದಿ, ಬೀಜಾಕ್ಷರಗಳ ಮಂತ್ರವನ್ನು ಜಪಿಸುತ್ತಾ ಶಿವಾಗ್ನಿಯಲ್ಲಿ ಬೈಂದವಸ್ಥಾನವಾದ ತ್ರಿಕೋಣದಲ್ಲಿ ಸ್ವಾಧಿಷ್ಠಾನ ಅಗ್ನಿಯನ್ನು ಆರಾಧಿಸುತ್ತಾ, ಕಾಮಧೇನುವಿನ ತುಪ್ಪದ ಧಾರೆಗಳಿಂದ ಹೋಮಿಸುತ್ತಾ ನಿನ್ನನ್ನು ಸೇವಿಸುತ್ತಾರೆ.

ಪದ್ಯಾನುವಾದ

ನೀ ನಿತ್ಯೆ, ಪಾರವಿಲ್ಲದ ನಿತ್ಯ ಸುಖವನನು–
ಭೋಗಿಸುವ ಮನವುಳ್ಳ ನಿನ್ನ ಭಕ್ತರು ಕೆಲರು
ಸ್ಮರಯೋನಿ ಲಕ್ಷ್ಮೀತ್ರಿತಯವಿದನು ನಿನ್ನ ಮಂತ್ರದ ಮೊದಲಿನಲ್ಲಿರಿಸುವ

ಚಿಂತಾಮಣಿಗಳ ಕೋದಕ್ಷಮಾಲೆಯ ಪಿಡಿದು
ಸುರಭಿಘೃತದಿಂದ ಧಾರಾಕಾರವಾಗಿ ಶತ–
ಸಂಖ್ಯೆಯಲಿ ಶಿವೆಯಗ್ನಿಗಾಹುತಿಯನರ್ಪಿಸುತ ನಿನ್ನನಾರಾಧಿಸುವರು ॥ ೩೩॥

ಟಿಪ್ಪಣಿಗಳು

೧. **ಸ್ಮರಂ ಯೋನಿಂ ಲಕ್ಷ್ಮೀಂ ತ್ರಿತಯಮಿದಮಾದೌ ತವ ಮನೋನಿಧಾಯ**

ಇಲ್ಲಿ ಸ್ಮರಂ ಎಂದರೆ ಮನ್ಮಥ. ಕಾಮರಾಜಬೀಜ ಕ್ಲೀಂ, ಯೋನಿಂ ಎಂದರೆ ಭುವನೇಶ್ವರೀ ಬೀಜ, ಹ್ರೀಂ. ಲಕ್ಷ್ಮೀಂ ಅಂದರೆ ಲಕ್ಷ್ಮೀಬೀಜ ಶ್ರೀಂ. ಈ ಮೂರೂ ಪಂಚದಶಾಕ್ಷರಿ ಮಂತ್ರಕ್ಕೆ ಮೊದಲು ಕ್ಲೀಂ ಹ್ರೀಂ ಶ್ರೀಂ ಎಂಬ ೩ ಬೀಜಾಕ್ಷರಗಳು ಸೇರಿ ಅಷ್ಟದಶಾಕ್ಷರಿ ಮಂತ್ರವಾಗುತ್ತದೆ.

ಕಏಈಲಹ್ರೀಂ (೫) ಹಸಕಹಲಹ್ರೀಂ (೬) ಸಕಲಹ್ರೀಂ (೪) = ಪಂಚದಶಾಕ್ಷರಿ ಇದಕ್ಕೆ ಕ್ಲೀಂ, ಹ್ರೀಂ, ಶ್ರೀಂ ಸೇರಿದರೆ ಅಷ್ಟಾದಶಾಕ್ಷರಿ ಆಗುತ್ತದೆ ಇದನ್ನು ಜಪಿಸಬೇಕು.

(ಪೋ–ಪುಟ ೧೭೨)

೨. **ನಿರವಧಿಮಹಾಭೋಗರಸಿಕಾಃ**

ಕೊನೆಯಿಲ್ಲದ ನಿರಂತರವಾದ ಮೋಕ್ಷವನ್ನು ನಿರವಧಿ ಮಹಾಭೋಗ ಎನ್ನುತ್ತಾರೆ. ಭಾಗವತದಲ್ಲಿ ಶ್ರೀ ಕೃಷ್ಣನ ವೇಣುಗಾನವನ್ನು ಆಲಿಸಿ ಪರವಶರಾದ ಗೋಪಿಕೆಯರ ಸುಖಸ್ಥಿತಿಯನ್ನು ತನ್ಮಯಸುಖವೆನ್ನುತ್ತಾರೆ. ಶ್ರೀವಿದ್ಯಾ ಸಂಪ್ರದಾಯದಲ್ಲಿ ಮಹಾಭೋಗವೆಂದರೆ ಒಂದು ಬಗೆಯ ಮೋಕ್ಷಾನಂದಸ್ಥಿತಿ. ಈ ಬಗೆಯ ಮೋಕ್ಷಾನಂದವನ್ನು ಬಯಸುವರು ರಸಿಕರು.

೩. ಸಮಯಾಚಾರಿಗಳಿಗೆ ಮಂತ್ರದ ಪುರಶ್ಚರಣ ಜಪ, ಬಾಹ್ಯವಾದ ಹೋಮ ಇತ್ಯಾದಿ ಬಾಹ್ಯಪೂಜೆಯ ವಿಧಿಗಳಂತು ಇಲ್ಲವೇ ಇಲ್ಲ. ಆದಕಾರಣ ಹೃದಯ ಕಮಲದಲ್ಲಿಯೇ ಸಮಸ್ತವನ್ನು ಅನುಷ್ಠಾನ ಮಾಡಬೇಕು.

೪. ಈ ಶ್ಲೋಕದಲ್ಲಿ ಮೂಲಮಂತ್ರ, ಜಪಧ್ಯಾನ, ಅಂತರ್ಯಾಗವನ್ನು ಕುರಿತು ಹೇಳಲಾಗಿದೆ.

ಲೋಕದಲ್ಲಿ ಇಂದ್ರಪದವಿಯಂಥ ಭೋಗಗಳನ್ನು ಅಪೇಕ್ಷಿಸುವ ಭೋಗಾಕಾಂಕ್ಷಿಗಳೇ ಹೆಚ್ಚು. ಮೋಕ್ಷಾಕಾಂಕ್ಷಿಗಳು ಅಪರೂಪ. ಮೋಕ್ಷಾಕಾಂಕ್ಷಿಗಳು ಹೇಗೆ ದೇವಿಯನ್ನು ಆರಾಧಿಸುತ್ತಾರೆ ಎಂಬುದನ್ನು ಈ ಶ್ಲೋಕದಲ್ಲಿ ಸಾಂಕೇತಿಕವಾಗಿ ಹೇಳಲಾಗಿದೆ. "ನಿರವಧಿಕಭೋಗ ರಸಿಕರಾದವರು ಮನ್ಮಥಬೀಜ (ಐಂ) ಭುವನೇಶ್ವರೀ ಬೀಜ (ಹ್ರೀಂ) ಲಕ್ಷ್ಮೀ ಬೀಜ (ಶ್ರೀಂ) ಈ ಮೂರನ್ನು ಸೇರಿಸಿ ಐಂ, ಹ್ರೀಂ ಶ್ರೀಂ ಎಂಬ ತ್ರ್ಯಕ್ಷರೀಮಂತ್ರವನ್ನು ಜಪಿಸುತ್ತಾ ತಮ್ಮ ಭೋಗಗಳಿಗೆ ತಕ್ಕಂತೆ ಚಿಂತಾಮಣಿ ಅಕ್ಷಮಾಲೆಯನ್ನು ಕೈಯಲ್ಲಿ ತಿರುಗಿಸುತ್ತಾ ಮಾನಸಿಕವಾಗಿ ಶಿವಾಗ್ನಿಯಲ್ಲಿ (ಆಜ್ಞಾಚಕ್ರದಲ್ಲಿ ಈಶ್ವರರೂಪವನ್ನು ಸ್ಥಾಪಿಸಿ) ಈಶ್ವರಪ್ರೀತಿಗಾಗಿ ಮಾನಸಿಕಹೋಮ ಮಾಡುತ್ತಾ ತಮ್ಮೊಳಗಿನ ಆಲೋಚನೆಗಳನ್ನೇ ಸಮಿತ್ತುಗಳಾಗಿ ತಮ್ಮೊಳಗಿನ ಸರ್ವರಸಗಳನ್ನು ಕಾಮಧೇನುವಿನ ಘೃತಧಾರೆಯಂತೆ ಭಾವಿಸುತ್ತಾ ಅಂತರ್ಯಾಗವನ್ನು (ಮಾನಸಿಕ ಪೂಜಾಯಾಗವನ್ನು) ಮಾಡುತ್ತಾರೆ."

(ಪ–ಪುಟ ೨೯೨)

೫. ಚಿಂತಾಮಣಿ ಗುಣನಿಬದ್ಧಾಕ್ಷವಲಯಾಃ

ಇಚ್ಛಿಸಿದುದನ್ನು ಕೊಡತಕ್ಕದ್ದಾದುದರಿಂದಲೇ ಚಿಂತಾಮಣಿ ಎಂದು ಅನ್ವರ್ಥವಾಗಿ ಕರೆಯಿಸಿಕೊಳ್ಳುವ ಮಣಿಗಣ ವಿಶೇಷದಿಂದಲೇ ಪೋಣಿಸಲ್ಪಟ್ಟಂತಿರುವ ಅಕ್ಷಮಾಲೆಯುಳ್ಳವರು (=ಮಂತ್ರಾಕ್ಷರಮಾಲೆ ಎಂದರೆ ಚಿಂತಾಮಣಿಯ ಅಕ್ಷಮಾಲೆ ಎಂದು ಭಾವ)


(ತೋ–ಪುಟ ೨೯೩)

೬. ಸುರಭಿಘೃತ ಧಾರಾಹುತಿಶತೈಃ ಶಿವಾಗ್ನೌ ಜುಹ್ವಂತಃ

ತಮ್ಮ ಕಾಮನೆಗಳನ್ನು ಶಿವ–ಶಕ್ತಿ ರೂಪವಾದ ಅಂತಸ್ಥ ಅಗ್ನಿಯಲ್ಲಿ ಕಾಮಧೇನುವಿನ ತುಪ್ಪವನ್ನು ಹೋಮಾಗ್ನಿಯಲ್ಲಿ ಎರೆದು ಹೋಮಿಸುವಂತೆ ಹೋಮಿಸುವ ಮಂತ್ರಯಜ್ಞ ರಸಿಕರಿವರು.

(ತೋ–ಪುಟ ೨೯೩)

ಯಂತ್ರಾರಾಧನೆ (ಶ್ಲೋಕ–೩೩)



ಯಂತ್ರರಚನೆ : ಈ ಯಂತ್ರವನ್ನು ಚಿನ್ನದ ತಗಡಿನಲ್ಲಿ ರಚಿಸಬೇಕು ಸಮಚತುರಶ್ರದ ೪ ಕೋಣಗಳ ತುದಿಗಳಲ್ಲಿ ಕರ್ಣಿಕೆಯಂತಿರುವ ವಲಯಗಳಿರಬೇಕು. ನಡುವೆ ಶ್ರೀಂಕಾರವಿರಬೇಕು.

ಪೂಜೆ : ಕಮಲದಳಗಳಿಂದ ಅಥವಾ ಕೆಂಪುಗುಲಾಬಿದಳಗಳಿಂದ ಲಕ್ಷ್ಮೀಸಹಸ್ರನಾಮ ಹೇಳಿ ಅರ್ಚನೆ ಮಾಡಬೇಕು.

ನೈವೇದ್ಯ : ಮುದ್ರಾನ್ನ (ಹುಗ್ಗಿ) ಮತ್ತು ಜೇನುತುಪ್ಪ.

ಜಪ : ೪೫ ದಿನಗಳ ಕಾಲ ದಿನಕ್ಕೆ ೧೦೦೦ ಬಾರಿ ಈ ಶ್ಲೋಕವನ್ನು ಜಪಿಸಬೇಕು ಚಿನ್ನದ ಅಥವಾ ಬೆಳ್ಳಿಯ ನಾಣ್ಯವನ್ನು ಮುಷ್ಠಿಯಲ್ಲಿ ಇಟ್ಟುಕೊಂಡು ಜಪಮಾಡಬೇಕು.

ಫಲ : ಐಶ್ವರ್ಯವೃದ್ಧಿ.

ಶ್ಲೋಕ–೩೪

ಶಿವ-ಶಕ್ತಿಗಳ ಐಕ್ಯವರ್ಣನೆ

ಶರೀರಂ ತ್ವಂ ಶಂಭೋಶ್ಶಶಿಮಿಹಿರವಕ್ಷೋರುಹಯುಗಂ
ತವಾತ್ಮಾನಂ ಮನ್ಯೇ ಭಗವತಿ [1]ನವಾತ್ಮಾನಮನಘಮ್ ।
ಅತಶ್ಶೇಷಃ ಶೇಷೀತ್ಯಯಮುಭಯಸಾಧಾರಣತಯಾ
ಸ್ಥಿತಸ್ಸಂಬಂಧೋ ವಾಂ[2] ಸಮರಸಪರಾನಂದಪರಯೋಃ ॥ ೩೪ ॥

ಪಾಠಾಂತರ

೧. (ನವಾತ್ಮಾನಮನಘಮ್)=ಭವಾತ್ಮಾನಮನಘಂ (ಸು)

೨. (ಸಮರಸಪರಾನಂದಪರಯೋಃ)=ಸಮರಸಪರಾನಂದ ಪದಯೋಃ (ಸು)

ಪದವಿಭಾಗ

ಶರೀರಂ, ತ್ವಂ, (ಶಂಭೋಶ್ಶಶಿಮಿಹಿರವಕ್ಷೋರುಹಯುಗಂ) = ಶಂಭೋಃ + ಶಶಿಮಿಹಿರವಕ್ಷೋರುಹಯುಗಂ, (ತವಾತ್ಮಾನಂ)= ತವ+ಆತ್ಮಾನಂ, ಮನ್ಯೇ, ಭಗವತಿ, (ನವಾತ್ಮಾನಮನಘಮ್) = ನವ+ಆತ್ಮಾನಂ+ಅನಘಮ್, ಅತಃ, ಶೇಷಃ, (ಶೇಷೀತ್ಯಯಮುಭಯಸಾಧಾರಣತಯಾ) = ಶೇಷೀ+ಇತಿ+ ಅಯಂ+ ಉಭಯಸಾಧಾರಣತಯಾ, ಸ್ಥಿತಃ, (ಸಂಬಂಧೋ) ಸಂಬಂಧಃ, ವಾಂ, (ಸಮರಸಪರಾನಂದಪರಯೋಃ.) = ಸಮರಸಪರ + ಆನಂದಪರಯೋಃ.

ಅನ್ವಯಾರ್ಥ

ಹೇ ಭಗವತಿ	ಎಲೈ ಪೂಜ್ಯಳೇ
ಶಶಿಮಿಹಿರವಕ್ಷೋರುಹಯುಗಂ	ಚಂದ್ರ, ಸೂರ್ಯರೆಂಬ ಎರಡು ಸ್ತನಗಳುಳ್ಳ
ತ್ವಂ	ನೀನು
ಶಂಭೋಃ	ಶಂಭುವಿನ (ಆನಂದ ಭೈರವನ)
ಶರೀರಂ	ಶರೀರ ರೂಪಳು
(ಭವಸೀ)	ಆಗಿರುತ್ತೀಯೆ
ತವ	(ಆನಂದಭೈರವೀಸ್ವರೂಪಳಾದ) ನಿನ್ನ
ಆತ್ಮಾನಂ	ಶರೀರವನ್ನು

ಅನಘಂ	ದೋಷಶೂನ್ಯವಾದ
ನವಾತ್ಮಾನಂ	(ಕಾಲ, ವ್ಯೂಹಾದಿ) ೯ ರೂಪಗಳುಳ್ಳ (ಈಶ್ವರನನ್ನಾಗಿ)
ಮನ್ಯೇ	ತಿಳಿದಿರುತ್ತೇನೆ.
ಅತಃ	ಈ ಕಾರಣದಿಂದ
ಶೇಷಃ	ಪರಾಧೀನವಾದ ವಸ್ತುವು
ಶೇಷೀ	ಸ್ವತಂತ್ರವಾದ ವಸ್ತುವೂ
ಇತಿ	ಹೀಗೆಂಬ
ಅಯಂ ಸಂಬಂಧಃ	ಈ ಸಂಬಂಧವು
ಸಮರಸ	(ಅನುಗುಣವಾದ) ಸಾಮರಸ್ಯದಿಂದ ಕೂಡಿದ
ಪರಾನಂದಪರಯೋಃ	ಆನಂದಭೈರವೀ ಸ್ವರೂಪರಾದ
ವಾಂ	ನಿಮ್ಮ
ಉಭಯ ಸಾಧಾರಣತಯಾ	ಇಬ್ಬರಿಗೂ ಸಮಾನವಾಗಿ
ಸ್ಥಿತಃ	ಇರುವುದು

ತಾತ್ಪರ್ಯ

ಓ ಭಗವತಿ! ನೀನು ಆನಂದಭೈರವೀಸ್ವರೂಪಳೂ ಈಶ್ವರನ, ಚಂದ್ರ ಸೂರ್ಯರೆಂಬ ಸ್ತನದ್ವಂದ್ವವುಳ್ಳ ಶರೀರರೂಪಳೂ ಆಗಿರುತ್ತೀಯೆ. ಆನಂದಭೈರವೀಸ್ವರೂಪಳಾದ ನಿನ್ನ ಶರೀರವನ್ನು ನಿರ್ದೋಷವಾದ ನವವ್ಯೂಹರೂಪದ ಆನಂದಭೈರವನನ್ನಾಗಿ ತಿಳಿಯುತ್ತೇನೆ. ಆದ್ದರಿಂದ ಪ್ರಧಾನ ಮತ್ತು ಅಪ್ರಧಾನ ಎಂಬ ರೂಪವಾದ ಸಂಬಂಧವು ಸಾಮರಸ್ಯದಿಂದ ಕೂಡಿದ ಆನಂದಭೈರವ ಮತ್ತು ಚಿಚ್ಛಕ್ತಿ ಕಲೆಯಾದ ಆನಂದಭೈರವೀ ಎಂದು ನಿಮ್ಮಿಬ್ಬರಿಗೂ ಸಮಾನವಾಗಿ ಇದೆ.

ಪದ್ಯಾನುವಾದ

ಹೇ ಭಗವತಿ! ಶಂಭುವಿನ ದೇಹವಾಗಿರುವ
ನಿನಗೆ ಕುಚಯುಗ್ಮವಾಗಿಹರು ಶಶಿ ದಿನಕರರು,
ನಿರ್ದೋಷವಹ ನಿನ್ನ ದೇಹವು ನವಾತ್ಮಹ ಶಂಭುವೆಂದರಿವೆ;
ಅದುವೆ ಕಾರಣದಿಂದ ಶೇಷಶೇಷೀ ಭಾವ–
ರೂಪದೀ ಸಂಬಂಧ ಸಮರಸಪರಾನಂದ–
ಪರರೆನಿಪ ನಿಮ್ಮಿರ್ವರೊಳಗುಭಯ ಸಾಧಾರಣತ್ವದಲಿ ನೆಲಸಿರುವುದು
॥ ೩೪ ॥

ಟಿಪ್ಪಣಿಗಳು

೧. **ಶರೀರ ತ್ವಂ ಶಂಭೋಃಶ್ಶಶಿಮಿಹಿರವಕ್ಷೋರುಹಯುಗಂ**

(ಓ ಭಗವತಿ! ಚಂದ್ರಸೂರ್ಯರೂಪಸ್ತನದ್ವಂಯುವುಳ್ಳ ನೀನು ಶಂಭುವಿನ ಶರೀರವೇ ಆಗಿದ್ದೀಯೆ? ಶಂಭುವಿನ ಶರೀರವೇ ಆಗಿದ್ದೀಯೆ)

"ಸೂರ್ಯಚಂದ್ರರೇ ದೇವಿಯ ಸ್ತನಗಳು: ಸೂರ್ಯ ಚಂದ್ರರೇ ದೇವಿಯ ನೇತ್ರಗಳು, ಅವರಿಬ್ಬರೇ ದೇವಿಯ ಎರಡು ಕರ್ಣಾಭರಣಗಳು (ತಾಟಂಕಗಳು)" ಎಂಬುದಾಗಿ ವೇದದಲ್ಲಿ ಶ್ರುತವಾಗಿರುವುದರಿಂದ ಭಗವತಿಯು ಶಂಭುವಿನ ಅಂಗವಾಗಿದ್ದಾಳೆ.

೨. **ತವಾತ್ಮಾನಾಂ ಮನ್ಯೇ ಭಗವತಿ! ನವಾತ್ಮಾನಮನಘಂ**

ಶಿವನು ಸರ್ವಾತ್ಮನು, ಅನಘನು. ನವಾತ್ಮನು ಎಂದರೆ ನವವ್ಯೂಹವುಳ್ಳವನು. ಅನಘನು ಎಂದರೆ ದೋಷರಹಿತನು. ಅಂಥ ಶಿವನು ಭಗವತಿಗೆ ಆತ್ಮಾನಾಂ ಎಂದರೆ ಶರೀರನಾಗಿದ್ದಾನೆ. ಭಗವತಿಯಾದ ದೇವಿ ಶಿವನಿಗೆ ಆತ್ಮಸ್ವರೂಪಿಣಿ ಆಗಿದ್ದಾಳೆ ಎಂದರೆ ಶಿವನ ಸೃಷ್ಟಿಕಾರ್ಯಕ್ಕೆ ನೆರವಾಗುವಳು ಭಗವತಿ. ಇಲ್ಲಿ ಭಗವತಿ ಎಂದರೆ "ಸಮಸ್ತ ಭೂತಗಳ ಉತ್ಪತ್ತಿ ಮೊದಲಾದುದನ್ನು ತಿಳಿದವಳು" ಎಂದರ್ಥ. "ಭೂತಗಳ (ಜೀವರಾಶಿಗಳ) ಉತ್ಪತ್ತಿ–ವಿನಾಶ, ಆಗಮನ–ನಿರ್ಗಮನ, ವಿದ್ಯೆ–ಅವಿದ್ಯೆ ಈ ಆರನ್ನು ತಿಳಿದವನು ಭಗವಾನ್ ಎನ್ನಿಸುತ್ತಾನೆ" ಎಂದು ಸ್ಮೃತಿಯಲ್ಲಿ ಹೇಳಲಾಗಿದೆ. ಭಗ ಎಂದರೆ ಈ ಆರರ ಉತ್ಪತ್ತಿಯನ್ನು ತಿಳಿಸುವುದು ಇಂತಹ ಜ್ಞಾನ ಉಳ್ಳವಳು ದೇವಿ. ಆದ್ದರಿಂದ ಭಗವತೀ ಎನ್ನಿಸುತ್ತಾಳೆ. ಇನ್ನೊಂದು ಅರ್ಥದಲ್ಲಿ "ಇಂದುಕಲಾವಿದ್ಯೆ ನವಯೋನಿರೂಪವಾಗಿ ಇರುವುದರಿಂದ ನವಯೋನಿಯನ್ನು ಹೊಂದಿರುವವಳು ಭಗವತಿಯು" (ನವಯೋನಿ ರೂಪವೆಂದರೆ ನವವ್ಯೂಹರೂಪ).

(ಶೇ–ಪುಟ ೧೩೫)

ತವಾತ್ಮಾನಂ ಮನ್ಯೇ ಭಗವತಿ ನವಾತ್ಮಾನಮನಘಂ

ಶಿವನು ನವಾತ್ಮನು. ಅನಘನು. ನವವ್ಯೂಹವುಳ್ಳವನಾದ್ದರಿಂದ ನವಾತ್ಮನು ಆಗಿದ್ದಾನೆ.

ಶಿವನು ನವಾತ್ಮನು ಎಂದರೆ ನವವ್ಯೂಹರೂಪನು ಎಂದರ್ಥ. ಆ ನವ ವ್ಯೂಹರೂಪಗಳು ಇವು :–

೧ ಕಾಲವ್ಯೂಹ, ೨ ಕುಲವ್ಯೂಹ, ೩ ನಾಮವ್ಯೂಹ, ೪ ಜ್ಞಾನವ್ಯೂಹ, ೫ ವಿತ್ತವ್ಯೂಹ, ೬ ನಾದವ್ಯೂಹ, ೭ ಬಿಂದುವ್ಯೂಹ, ೮. ಕಲಾವ್ಯೂಹ, ೯ ಜೀವವ್ಯೂಹ– ಇವೇ ನವವ್ಯೂಹಗಳು.

ಇನ್ನು ಭಗವತಿಯು ನವಾತ್ಮಳಾಗಿದ್ದಾಳೆ. ಹೇಗೆಂದರೆ "ವಾಮಾ, ಜ್ಯೇಷ್ಠಾ ರೌದ್ರೀ, ಅಂಬಿಕಾ ಎಂಬ ೪ ಶಕ್ತಿಗಳು ಶ್ರೀ ಚಕ್ರದಲ್ಲಿ ಅಂತರ್ಗತವಾಗಿರುವ ಕೆಳಮುಖವಾಗಿರುವ ೪ ಯೋನಿ ರೂಪಗಳು. ಇಚ್ಛಾ, ಜ್ಞಾನ, ಕ್ರಿಯಾ, ಶಾಂತ, ಪರಾ ಎಂಬ ೫ ಶಕ್ತಿಗಳು ಶ್ರೀ ಚಕ್ರದಲ್ಲಿ ಅಂತರ್ಗತವಾಗಿರುವ ಊರ್ಧ್ವಮುಖವಾಗಿರುವ ಶಕ್ತಿಯೋನಿಗಳ ರೂಪವಾಗಿವೆ. ಹೀಗೆ ನವವ್ಯೂಹರೂಪವಾದ ಈ ಶಕ್ತಿಗಳಿಂದ ಭಗವತಿಯು ನವಾತ್ಮಳಾಗಿದ್ದಾಳೆ ಎಂದು ಹೇಳಲಾಗಿದೆ."

(ಶೇ–ಪುಟ ೧೩೭–೧೩೮)

೩. **ಶೇಷಶ್ಶೇಷೀ ತ್ಯಯಮುಭಯಸಾಧಾರಣತಯಾ ಸ್ಥಿತಃ ಸಂಬಂಧಃ**

ಅವರವರ ಶರೀರವು ಅವರವರ ಅಧೀನವಾಗಿರುವುದು ಎಂಬುದು ಪ್ರಸಿದ್ಧವಾಗಿರುವುದು. ಈ ಶ್ಲೋಕದಲ್ಲಿ ಪಾರ್ವತಿಯು ಈಶ್ವರನ ಶರೀರ ರೂಪಳೆಂದೂ, ಈಶ್ವರನು ಪಾರ್ವತಿಯ ಶರೀರರೂಪನೆಂದೂ ಹೇಳಿರುವುದು. ಇದರಿಂದ ಪಾರ್ವತಿಯ ಅಧೀನನು ಈಶ್ವರನೆಂದೂ, ಈಶ್ವರನ ಅಧೀನಳು ಪಾರ್ವತಿಯೆಂದೂ ಹೇಳಿದಂತಾಯಿತು. ಶಾಸ್ತ್ರದಲ್ಲಿ ಅಧೀನವಸ್ತುವಿಗೆ ಶೇಷವೆಂದೂ ಸ್ವತಂತ್ರವಸ್ತುವಿಗೆ ಶೇಷಿಯೆಂದೂ ಹೇಳಿರುವುದು. ಇಲ್ಲಿ ಪಾರ್ವತೀ ಪರಮೇಶ್ವರರಿಬ್ಬರೂ ಸಂದರ್ಭವಿಶೇಷದಲ್ಲಿ ಸ್ವತಂತ್ರರೂ, ಪರಸ್ಪರಾಧೀನರೆಂದು ಹೇಳಿರುವುದರಿಂದ ಶೇಷಶೇಷೀಭಾವ ಸಂಬಂಧವು ಉಭಯರಲ್ಲೂ ಸಮವಾಗಿ ಇರುವುದೆಂದೂ ಹೇಳಿರುವುದು.

(ಕ–ಹಸ್ತಪ್ರತಿ ಪುಟ ೬೮)

೪. ಭಗವತಿ ಎಂದರೆ ಪರಮೇಶ್ವರಿಯು. ಐಶ್ವರ್ಯ, ಧರ್ಮ, ಯಶಸ್ಸು ಹಾಗೂ ಜ್ಞಾನ, ಶ್ರೀ, ವಿಜ್ಞಾನ ಇವುಗಳಿಗೆ ಭಗ ಎನ್ನುತ್ತಾರೆ ಇವುಗಳನ್ನು ಹೊಂದಿರುವುದರಿಂದ ಹಾಗೂ ಕೃಪಾಕರಿಸುವುದರಿಂದ ದೇವಿಯನ್ನು ಭಗವತಿ ಎನ್ನುತ್ತಾರೆ. ಭಜ್ ಎಂದರೆ ಪೂಜೆ, ಸೇವೆ ಇತ್ಯಾದಿ ಅರ್ಥವಾಗುತ್ತದೆ. ಎಲ್ಲಾ ದೇವತೆಗಳಿಂದ ಪೂಜಿಸಲ್ಪಡುವವಳು, ಸೇವಿಸಲ್ಪಡುವಳು ಭಗವತಿ.

(ಶ್ರೀ–೨೦೮–೨೦೯)

ಯಂತ್ರಾರಾಧನೆ (ಶ್ಲೋಕ–೩೪)



ಯಂತ್ರರಚನೆ : ಚಿನ್ನದ ತಗಡಿನಲ್ಲಿ ಯಂತ್ರ ರಚಿಸಬೇಕು. ತ್ರಿಶೂಲಗಳಿಂದ ಕೂಡಿದ ಸಮಭುಜ ತ್ರಿಕೋಣವನ್ನು ಬರೆಯಬೇಕು.

ಪೂಜೆ : ಪೂರ್ವಾಭಿಮುಖವಾಗಿ ಕುಳಿತು ಲಲಿತಾತ್ರಿಶತೀ ಕುಂಕುಮಾರ್ಚನೆ ಮಾಡಬೇಕು.

ಜಪ : ೪೫ ದಿನಗಳ ಕಾಲ ದಿನಕ್ಕೆ ೧೦೦೦ ಬಾರಿ ಜಪಿಸಿ ಯಂತ್ರವನ್ನು ಧರಿಸಬೇಕು.

ನೈವೇದ್ಯ : ಜೇನುತುಪ್ಪ

ಫಲ : ಮಹಾಬುದ್ಧಿವಂತನಾಗುವನು.

ಶ್ಲೋಕ–೩೫

ದೇವಿಯ ತತ್ತ್ವಾತ್ಮಿಕತೆ

ಮನಸ್ತ್ವಂ ವ್ಯೋಮ ತ್ವಂ ಮರುದಸಿ ಮರುತ್ಸಾರಥಿರಸಿ
ತ್ವಮಾಪಸ್ತ್ವಂ ಭೂಮಿಸ್ತ್ವಯಿ ಪರಿಣತಾಯಾಂ ನ ಹಿ ಪರಮ್
ತ್ವಮೇವ ಸ್ವಾತ್ಮಾನಂ ಪರಿಣಮಯಿತುಂ ವಿಶ್ವವಪುಷಾ
ಚಿದಾನಂದಾಕಾರಂ [1]ಶಿವಯುವತಿಭಾವೇನ ಬಿಭೃಷೇ ॥ ೩೫ ॥

ಪಾಠಾಂತರ

೧. ಶಿವಯುವತಿಭಾವೇನ = ಹರಮಹಿಷಿ ಭಾವೇನ (ಪೋ)

ಪದವಿಭಾಗ

(ಮನಸ್ತ್ವಂ)=ಮನಃ+ತ್ವಂ, ವ್ಯೋಮ, ತ್ವಂ, (ಮರುದಸಿ) = ಮರುತ್ + ಅಸಿ, (ಮರುತ್ಸಾರಥಿರಸಿ) = ಮರುತ್+ಸಾರಥಿಃ+ಅಸಿ, (ತ್ವಮಾಪಸ್ತ್ವಂ)=ತ್ವಂ+ ಆಪಃ+ತ್ವಂ, (ಭೂಮಿಸ್ತ್ವಯಿ) = ಭೂಮಿಃ + ತ್ವಯಿ, ಪರಿಣತಾಯಾಂ, ನ,ಹಿ, ಪರಂ, (ತ್ವಮೇವ) =ತ್ವಂ+ಏವ, (ಸ್ವಾತ್ಮಾನಂ)=ಸ್ವ+ಆತ್ಮಾನಂ, ಪರಿಣಮಯಿತುಂ, ವಿಶ್ವವಪುಷಾ, (ಚಿದಾನಂದಾಕಾರಂ)= ಚಿತ್+ಆನಂದ+ಆಕಾರಂ, ಶಿವಯುವತಿ, ಭಾವೇನ, ಬಿಭೃಷೇ.

ಅನ್ವಯಾರ್ಥ

(ಹೇ ಭಗವತಿ)	ಎಲೈ ಪೂಜ್ಯಳೇ,
ಮನಸ್ತ್ವಂ	(ಮನಃ+ತ್ವಂ) [ಆಜ್ಞಾಚಕ್ರದಲ್ಲಿರುವ] ಮನಸ್‌ತತ್ತ್ವವು ನೀನೇ
ವ್ಯೋಮ ತ್ವಂ	[ವಿಶುದ್ಧಿ ಚಕ್ರದಲ್ಲಿರುವ] ಆಕಾಶತತ್ತ್ವವು ನೀನೇ
ಮರುತ್ ಅಸಿ	[ಅನಾಹತವೆಂಬ ಹೆಸರುಳ್ಳ ಸಂವಿತ್ ಚಕ್ರದಲ್ಲಿರುವ] ವಾಯುತತ್ತ್ವವೂ ನೀನೇ
ಮರುತ್ಸಾರಥಿರಸಿ	(ಮರುತ್‌ಸಾರಥಿಃ+ಅಸಿ) [ಸ್ವಾಧಿಷ್ಠಾನ ಚಕ್ರದಲ್ಲಿ ವಾಯುವನ್ನು ಸಹಾಯಕನಾಗಿ ಉಳ್ಳ] ಅಗ್ನಿ-ತತ್ತ್ವವೂ ನೀನೇ.
ತ್ವಮಾಪಃ	(ತ್ವ+ಆಪಃ [ಮಣಿಪೂರ ಚಕ್ರದಲ್ಲಿರುವ] ಉದಕತತ್ತ್ವವು ನೀನೇಯೆ

ಭೂಮಿಃ ತ್ವಂ	[ಮೂಲಾಧಾರಚಕ್ರದಲ್ಲಿರುವ] ಭೂಮಿತತ್ತ್ವವೂ ನೀನೇಯೇ ಆಗಿರುವೆ.
ತ್ವಯಿ ಪರಿಣತಾಯಾಂ	ನೀನು ಈ ರೀತಿ ಪ್ರಪಂಚಾಕಾರವನ್ನು ಹೊಂದಲಾಗಿ
ಪರಂ ನ ಹಿ	ನಿನಗಿಂತ ಮತ್ತೊಂದು ವಸ್ತು ಇಲ್ಲವೇ ಇಲ್ಲ.
ತ್ವಮೇವ ಸ್ವಾತ್ಮಾನಂ	ನೀನೆ ನಿನ್ನ ಶರೀರವನ್ನು
ವಿಶ್ವವಪುಷಾ	ಪ್ರಪಂಚಾಕಾರದಿಂದ
ಪರಿಣಮಯಿತಂ	ರೂಪಾಂತರವುಳ್ಳದ್ದನ್ನಾಗಿ ಮಾಡುವುದಕ್ಕೋಸ್ಕರ
ಶಿವಯುವತಿಭಾವೇನ	ಈಶ್ವರನ ಪತ್ನೀಭಾವದಿಂದ
ಚಿದಾನಂದಾಕಾರಂ	ಚಿತ್ ಮತ್ತು ಆನಂದರೂಪನಾದ (ಸಗುಣ ಬ್ರಹ್ಮರೂಪವನ್ನು) ಶಬಲ ಬ್ರಹ್ಮರೂಪವನ್ನು
ಬಿಭೃಷೇ	ಧರಿಸಿರುತ್ತೀಯೆ.

ತಾತ್ಪರ್ಯ

ಓ ಭಗವತಿ! ಆಜ್ಞಾಚಕ್ರದಲ್ಲಿರುವ ಮನಸ್ತತ್ವವೂ ನೀನೇ; ಸ್ವಾಧಿಷ್ಠಾನಚಕ್ರದಲ್ಲಿ ವಾಯುವಿಗೆ ಸಹಾಯಕವಾಗಿ ಇರುವ ಅಗ್ನಿತತ್ವವೂ ನೀನೇ; ಮಣಿಪೂರಚಕ್ರದಲ್ಲಿರುವ ಉದಕತತ್ವವೂ ನೀನೇ, ಮೂಲಾಧಾರಚಕ್ರದಲ್ಲಿರುವ ಭೂಮಿತತ್ವವೂ ನೀನೇ ಆಗಿರುವೆ. ನೀನು ಈ ರೀತಿ ಪಂಚಭೂತಾತ್ಮಕವಾಗಿ ಪಂಚತತ್ವ ರೂಪಿಯಾಗಿ ಪ್ರಪಂಚಕಾರವನ್ನು ಹೊಂದಿರುವಾಗ ನಿನಗಿಂತ ಬೇರೆಯಾದುದು ಯಾವುದೇ ಇಲ್ಲ. ನೀನೇ ನಿನ್ನ ಶರೀರವನ್ನು ಪ್ರಪಂಚಾಕಾರದಿಂದ ರೂಪಾಂತರವುಳ್ಳದ್ದನ್ನಾಗಿ ಮಾಡುವುದಕ್ಕಾಗಿ ಈಶ್ವರನ ಪತ್ನೀ ರೂಪದಿಂದ ಶಬಲೀಕರಿಸಿದ ರೂಪವನ್ನು (ಸಗುಣ ಬ್ರಹ್ಮರೂಪವನ್ನು) ಹೊಂದಿರುತ್ತೀಯೆ.

ಪದ್ಯಾನುವಾದ

ಹೇ ಶಿವನ ಯುವಪತ್ನಿ! ನೀ ಮನಸು, ಆಕಾಶ
ನೀನು, ಮಾರುತನು ನೀನಗ್ನಿ ನೀಭೂಮಿ ನೀ-
ನಾಪ ನೀನಿಂತಿವೆಲ್ಲವು ನೀನೆಯಾಗಿರಲು ಪರಿಣಮಿಸಿ, ನಿನ್ನ
ಹೊರತಾವುದಿಲ್ಲ;
ವಿಶ್ವರೂಪದಲಿ ಪರಿಣಮಿಸುವಿಚ್ಛೆಯ ತಳೆದು
ಚಿಚ್ಛಕ್ತಿರೂಪವಾನಂದರೂಪಗಳನ್ನು
ಕಾರ್ಯಕಾರಣವೆನಿಪ್ಪುಭಯ ಸ್ವರೂಪವನು ನಿನ್ನೊಳಗೆ ನೀ ಧರಿಸಿಹೆ
॥ ೩೫ ॥

ಟಿಪ್ಪಣಿಗಳು

೧. ಈ ಶ್ಲೋಕದ ಭಾವವನ್ನು ಚತುಶ್ಶತಿ ಗ್ರಂಥದಲ್ಲಿ ಹೀಗೆ ಹೇಳಿದೆ:-

"ಓ ಮಹೇಶ್ವರಿ ! ತ್ರಿಪುರಾಸ್ವರೂಪಳೂ, ಪರಮಳೂ, ಆದಿಭೂತಳೂ ಆದ ಶಕ್ತಿಯಾದ ನೀನು ಸ್ಥೂಲ-ಸೂಕ್ಷ್ಮ ವಿಭಾಗದಿಂದ ಮೂರುಲೋಕಗಳ ಉತ್ಪತ್ತಿಯ ಮಾತೃಕೆ ಆಗಿದ್ದೀಯೆ ಸಮಸ್ತ ತತ್ತ್ವಸಮೂಹವನ್ನು ಶಬಳೀಕರಿಸಿರುವ ಸ್ವರೂಪದವಳಾಗಿದ್ದೀಯೆ. (ಕಾರಣರೂಪದಿಂದ ತನ್ನಲ್ಲಿ ಲಯಗೊಳಿಸಿಕೊಂಡಿದ್ದಾಳೆ. ಘಟವು ಮಣ್ಣಿನಲ್ಲಿ ಲೀನವಾಗುವಂತೆ) ಎಂದರೆ ಕಾರ್ಯಗಳನ್ನು ಕಾರಣದಲ್ಲಿ (ಲಯಗೊಳಿಸಿ) ತಾನು ಸ್ವತಃ ಕಾರಣಸ್ವರೂಪ ಳಾಗಿರುವಳು ಆಗಿದ್ದೀಯೆ.

(ಶೇ-ಪುಟ ೧೪೩)

೨. ಭವಾನೀ ಭುಜಂಗಪ್ರಯಾತ ಸ್ತೋತ್ರದಲ್ಲಿ (ಶ್ಲೋಕ೧೨) ಈ ಶ್ಲೋಕದ ಭಾವವೇ ವ್ಯಕ್ತವಾಗಿದೆ.

"ಅಮ್ಮ ಭವಾನಿ, ನೀನೇ ಸೂರ್ಯ, ಅಗ್ನಿ, ಚಂದ್ರ, ಜಲ, ವಾಯು, ಆಕಾಶ ರೂಪಿಣಿಯಾಗಿ, ಪಂಚಭೂತಾತ್ಮಿಕೆಯಾಗಿ ಸರ್ವಮಹತ್ತೂ ಆಗಿದ್ದೀಯೆ. ನಿನಗಿಂತ ಬೇರೆಯಾದದ್ದು ಈ ಪ್ರಪಂಚದಲ್ಲಿ ಯಾವುದೂ ಇಲ್ಲ. ಸರ್ವವೂ ನೀನೇ। ಸಂವಿತಾನಂದ ಎಂದರೆ ಮಹರ್ಷಿಗಳು, ಮಹಾಯೋಗಿಗಳು ಬ್ರಹ್ಮವಿಷ್ಣು ಮಹೇಶ್ವರರೇ ಆದಿಯಾಗಿ ಸರ್ವವೇದ ಸಮೂಹ, ಸರ್ವರೂ ಯಾವ ಪರಮಾನಂದವನ್ನು ಕೋರಿ ಯುಗಗಳ ಪರ್ಯಂತ ತಪಸ್ಸನ್ನು ಆಚರಿಸಿ ಅಂತಹ ಆನಂದವನ್ನು ಅನುಭವಿಸುತ್ತಾರೋ ಅಂಥ ಆ ಸಂವಿತಾನಂದರೂಪಿಣಿ, ಸಚ್ಚಿದಾನಂದ ಚಿತ್ಸ್ವರೂಪ ಚಿದಾನಂದರೂಪಿಣಿ ನೀನೇ ತಾಯಿ!


(ಪ-ಪುಟ ೩೫೫)

೩. ದೇವಿಯ ಷಟ್‌ತತ್ತ್ವ ಸ್ವರೂಪವನ್ನು ಷಟ್‌ಚಕ್ರಗಳನ್ನು ಸಮನ್ವಯಿಸಿ ಹೀಗೆ ತೋರಿಸಬಹುದು.

ದೇವರು	ಚಕ್ರ	ಲೋಕ	ತತ್ವ
ಪರಾಶಕ್ತಿ	ಸಹಸ್ರಾರ	ಸತ್ಯಲೋಕ	–
೧ ಶಿವ	ಆಜ್ಞಾ	ತಪೋಲೋಕ	ಮನಸ್
೨ ಸದಾಶಿವ	ವಿಶುದ್ಧಿ	ಜನಲೋಕ	ಆಕಾಶ
೩ ಮಹೇಶ್ವರ	ಅನಾಹತ	ಮಹರ್‌ಲೋಕ	ವಾಯು
೪ ರುದ್ರ	ಸ್ವಾಧಿಷ್ಠಾನ	ಸುವರ್‌ಲೋಕ	ತೇಜಸ್
೫ ವಿಷ್ಣು	ಮಣಿಪೂರ	ಭುವರ್‌ಲೋಕ	ಜಲ
೬ ಬ್ರಹ್ಮನ್	ಮೂಲಾಧಾರ	ಭೂಲೋಕ	ಪೃಥ್ವೀ

(ಸು-ಪುಟ ೧೪೩)

ಯಂತ್ರಾರಾಧನೆ (ಶ್ಲೋಕ-೩೫)



ಯಂತ್ರರಚನೆ : ಚಿನ್ನದಲ್ಲಿ ಯಂತ್ರವನ್ನು ಚಿತ್ರದಲ್ಲಿ ತೋರಿಸಿರುವಂತೆ ರಚಿಸಬೇಕು ನಡುವೆ ಕ್ಷಾಂ, ಕ್ಷೀಂ, ಕ್ಷೂಂ, ಕ್ಷುಂ ಬೀಜಾಕ್ಷರಗಳಿರಬೇಕು.

ಪೂಜೆ : ತೊಳೆದ ಎಳ್ಳಿನಿಂದ ಯಂತ್ರದ ಎಡಗಡೆ ರುದ್ರತ್ರಿಶತೀ ಹೇಳಿ ಅರ್ಚನೆ ಮಾಡಬೇಕು.

ನೈವೇದ್ಯ : ಜೇನುತುಪ್ಪ, ಹಾಲುಕೀರು

ಜಪ : ಈ ಶ್ಲೋಕವನ್ನು ೪೫ ದಿನಗಳ ಕಾಲ ಪ್ರತಿದಿನ ೧೦೦೦ ಬಾರಿ ಜಪಿಸಬೇಕು.

ಫಲ : **ಕ್ಷಯರೋಗ ನಿವಾರಣೆ.**

ಶ್ಲೋಕ–೩೬

ಆಜ್ಞಾಚಕ್ರದಲ್ಲಿ ದೇವಿಯ ಧ್ಯಾನಕ್ರಮ

ತವಾಜ್ಞಾಚಕ್ರಸ್ಥಂ ತಪನಶಶಿಕೋಟಿದ್ಯುತಿಧರಂ
ಪರಂ ಶಂಭುಂ ವಂದೇ ಪರಿಮಿಲಿತಪಾರ್ಶ್ವಂ ಪರಚಿತಾ ।
[1]ಯಮಾರಾಧ್ಯನ್ ಭಕ್ತ್ಯಾ ರವಿಶಶಿಶುಚೀನಾಮವಿಷಯೇ
[2]ನಿರಾಲೋಕೇऽಲೋಕೇ ನಿವಸತಿ ಹಿ [3]ಭಾಲೋಕಭುವನೇ ॥ ೩೬ ॥

ಪಾಠಾಂತರ

೧. (ಯಮಾರಾಧ್ಯನ್) = ಯಮಾರಾದ್ಧುಂ (ಸು)
೨. (ನಿರಾಲೋಕೇऽಲೋಕೇ) = ನಿರಾತಂಕೇ ಲೋಕೇ (ಸು)
೩. (ಭಾಲೋಕಭುವನೇ) = ಭಾಲೋಕಭವನೇ (ಸು)

ಪದವಿಭಾಗ

(ತವಾಜ್ಞಾಚಕ್ರಸ್ಥಂ)= ತವ+ಆಜ್ಞಾಚಕ್ರಸ್ಥಂ, ತಪನಶಶಿಕೋಟಿದ್ಯುತಿಧರಂ, ಪರಂ, ಶಂಭುಂ, ವಂದೇ, ಪರಿಮಿಲಿತಪಾರ್ಶ್ವಂ, ಪರಚಿತಾ, (ಯಮಾರಾಧ್ಯನ್)=ಯಮ್ + ಆರಾಧ್ಯನ್, ಭಕ್ತ್ಯಾ, (ರವಿಶಶಿಶುಚೀನಾಮವಿಷಯೇ) = ರವಿಶಶಿಶುಚೀನಾಮ್+ ಅವಿಷಯೇ, (ನಿರಾಲೋಕೇऽಲೋಕೇ) = ನಿಃ+ಆಲೋಕೇ + ಅಲೋಕೇ, ನಿವಸತಿ, ಹಿ, ಭಾಲೋಕಭುವನೇ.

ಅನ್ವಯಾರ್ಥ

(ಹೇ ಭಗವತಿ)	ಎಲೈ ಪೂಜ್ಯಳೇ
ತವಾಜ್ಞಾಚಕ್ರಸ್ಥಂ	ತವ+ಆಜ್ಞಾಚಕ್ರಸ್ಥಂ (ಹುಬ್ಬುಗಳ ಮಧ್ಯಭಾಗದಲ್ಲಿರುವ) ನಿನ್ನ ಆಜ್ಞಾಚಕ್ರದಲ್ಲಿರುವ
ತಪನಶಶಿಕೋಟಿದ್ಯುತಿಧರಂ	ಕೋಟ್ಯಂತರ ಸೂರ್ಯ, ಚಂದ್ರರ ಕಾಂತಿಯನ್ನು ಧರಿಸಿರುವ
ಪರಂ	ಪರತತ್ತ್ವ ಸ್ವರೂಪನಾದ
ಶಂಭುಂ	ಈಶ್ವರನನ್ನು

ಪರಚಿತಾ	ಶ್ರೇಷ್ಠಳಾದ ಚಿಚ್ಛಕ್ತಿಯಿಂದ
ಪರಿಮಿಲಿತ ಪಾರ್ಶ್ವಂ	ಸುವಾಸನೆಯಿಂದ ಯುಕ್ತವಾದ–ಎಡಭಾಗವುಳ್ಳ [ದಕ್ಷಿಣೋತ್ತರ ಪಾರ್ಶ್ವಗಳುಳ್ಳವನಾದ ಶಂಭುವನ್ನು]
ವಂದೇ	ನಮಸ್ಕರಿಸುತ್ತೇನೆ.
ಯಂ	ಯಾರನ್ನು (ಈಶ್ವರನನ್ನು)
ಭಕ್ತ್ಯಾ	ಭಕ್ತಿಯಿಂದ
ಆರಾಧ್ಯನ್	ಪೂಜಿಸುತ್ತಿರುವವನು
ರವಿಶಶಿಶುಚೀನಾಂ	ಸೂರ್ಯ ಚಂದ್ರ ಅಗ್ನಿಗಳಿಗೆ
ಅವಿಷಯೇ	ಗೋಚರವಲ್ಲದ
ನಿರಾಲೋಕೇ	ಇತರ ಪ್ರಕಾಶವಿಲ್ಲದ
ಅಲೋಕೇ	ವಿಜನವಾದ (ಏಕಾಂತದಲ್ಲಿ)
ಭಾಲೋಕಭುವನೇ	(ಬೆಳುದಿಂಗಳಿಂದಲೇ ತುಂಬಿರುವ) ಜ್ಯೋತ್ಸ್ನಾಮಯವಾದ ಲೋಕದಲ್ಲಿ
(ತ್ವತ್‌ಸಾಯುಜ್ಯಂ ಪ್ರಾಪ್ಯ)	(ನಿನ್ನ ಸಾಯುಜ್ಯಪದವಿಯನ್ನು ಹೊಂದಿ)
ನಿವಸತಿ ಹಿ	ಖಂಡಿತ ವಾಸಮಾಡುತ್ತಾನೆ

ತಾತ್ಪರ್ಯ

ಎಲೈ ಪೂಜ್ಯಳೇ, ಹುಬ್ಬುಗಳ ಮಧ್ಯದಲ್ಲಿರುವ ನಿನ್ನ ಆಜ್ಞಾಚಕ್ರದಲ್ಲಿರುವ ಅಸಂಖ್ಯಾತ ಸೂರ್ಯ ಚಂದ್ರರ ಕಾಂತಿಯನ್ನು ಧರಿಸಿರುವ ಮತ್ತು ಶ್ರೇಷ್ಠ ಚಿಚ್ಛಕ್ತಿಯಿಂದ ದಕ್ಷಿಣೋತ್ತರ ಪಾರ್ಶ್ವಗಳುಳ್ಳವನಾದ ಶಂಭುವನ್ನು ನಮಸ್ಕರಿಸುತ್ತೇನೆ. ಯಾವನು ಈಶ್ವರನನ್ನು ಭಕ್ತಿಯಿಂದ ಪೂಜಿಸುತ್ತಿರುವನೋ ಆ ಭಕ್ತನು, ಸೂರ್ಯ, ಚಂದ್ರ, ಅಗ್ನಿಗಳಿಗೆ ಗೋಚರವಲ್ಲದ ಇತರ ಪ್ರಕಾಶವಿಲ್ಲದ ಏಕಾಂತದಲ್ಲಿ ಎಂದರೆ ಬೆಳದಿಂಗಳೇ ತುಂಬಿದ ಜ್ಯೋತ್ಸ್ನಾಮಯವಾದ ಲೋಕದಲ್ಲಿ ನಿನ್ನ ಸಾಯುಜ್ಯ ಪದವಿಯನ್ನು ಹೊಂದಿ ವಾಸಮಾಡುತ್ತಾನೆ.

ಪದ್ಯಾನುವಾದ

ಹೇ ದೇವಿ! ನಿನ್ನಯಾಜ್ಞಾ ಚಕ್ರದಲ್ಲಿರುವ
ಕೋಟಿಸೂರ್ಯೇಂದು ಸಮಕಾಂತಿಯನು ಧರಿಸಿರುವ
ಪಾರ್ಶ್ವದಲ್ಲಿ ಚಿಚ್ಛಕ್ತಿಯನು ಕೂಡಿಕೊಂಡಿರುವ ಪರಶಿವನ ವಂದಿಸುವೆನು;
ಭಕ್ತಿಯಿಂದವನಾನಾರಾಧಿಸುವ ಭಕ್ತನವ
ನಲ್ಲಿ ರವಿಶಶಿಯಗ್ನಿ ಕಾಣಿಸದ ನಿರ್ಜನದ
ನಮ್ಮಿಳೆಯ ಬೆಳಕಿರದಿನಿ ಬೆಳ್ದಿಂಗಳಿಹ ಲೋಕದಲಿ ವಾಸಿಸುವನು ॥ ೩೬ ॥

ಟಿಪ್ಪಣಿಗಳು

೧. ತವಾಜ್ಞಾಚಕ್ರಸ್ಥಂ

ಇಲ್ಲಿ ತವ (ನಿನ್ನ) ಎಂಬ ಶಬ್ದದಿಂದ ಸಾಧಕನ ಭ್ರೂಮಧ್ಯದ ಒಳಗಿರುವ ಶ್ರೀಚಕ್ರಾಂತರ್ಗತವಾದ ನಾಲ್ಕು ಶಿವಚಕ್ರಗಳು ಉಕ್ತವಾಗುತ್ತವೆ. ಆದರೆ ದ್ವಿದಳ ಪದ್ಮವಲ್ಲ; ಏಕೆಂದರೆ ತವ ಎಂಬ ಪದಕ್ಕೆ ಅದು ಅನ್ವಯವಾಗುವುದಿಲ್ಲ. ಏಕೆಂದರೆ ಸ್ವಾಧಿಷ್ಠಾನದ ತುದಿಯಲ್ಲಿ ಅಗ್ನಿಮಂಡಲವಿದೆ, ಅನಾಹತಚಕ್ರದ ತುದಿಯಲ್ಲಿ ಸೂರ್ಯಮಂಡಲವಿದೆ. ಆಜ್ಞಾಚಕ್ರದ ತುದಿಯಲ್ಲಿ ಚಂದ್ರಮಂಡಲವಿದೆ. ಆದಕಾರಣ ಅಗ್ನಿ-ಸೂರ್ಯ-ಚಂದ್ರರ ೩೬೦ ಕಿರಣಗಳು ಆಧಾರಚಕ್ರ ಮೊದಲ್ಗೊಂಡು ಆಜ್ಞಾಚಕ್ರ ಪರ್ಯಂತವಾಗಿಯೇ ಸಂಚರಿಸುತ್ತವೆ. ಆಜ್ಞಾಚಕ್ರದಲ್ಲಿರುವ ಚಂದ್ರನಿಗಿಂತ ಬೇರೆಯಾದ ಸಹಸ್ರ ಕಮಲದಲ್ಲಿರುವ ಚಂದ್ರನು ಶ್ರೀ ಚಕ್ರಾತ್ಮಕನೂ ನಿತ್ಯಕಲಾರೂಪನೂ ಆಗಿದ್ದಾನೆ.

(ಶೇ-ಪುಟ ೧೪೫-೧೪೬)

೨. ಪರಂ ಶಂಭುಂ ವಂದೇ ಪರಿಮಿಲಿತಪಾರ್ಶ್ವಂ ಪರಚಿತಾ

ಆಜ್ಞಾಚಕ್ರದಲ್ಲಿ ಧ್ಯಾನಿಸಲ್ಪಡುವ ಶಂಭುವನ್ನು ಪರಶಂಭು ಎನ್ನುತ್ತಾರೆ. ಪರಶಂಭು ಧ್ಯಾನಿಸುವ ದೇವಿಯನ್ನು ಚಿತ್ಪರಾಂಬ ಎಂದು ಕರೆಯುತ್ತಾರೆ. ಪರಚಿತಾ ಅಂದರೆ 'ಪರ' ಎಂಬ ಚಿತ್ಸ್ವರೂಪ. ಅದನ್ನು ಹೊಂದಿದವಳು ಚಿತ್ಪರಾಂಬ. ಪರಚಿತಾ ಜತೆಗೆ ಕೂಡಿಕೊಂಡದ್ದು ಎಂದರೆ ಎಡಗಡೆ ದೇವಿ ಬಲಗಡೆ ಶಂಭು ಇರುವ ಅರ್ಧನಾರೀಶ್ವರ ಶಿವ ಎಂದರ್ಥ. ಅಂಥ ಅರ್ಧನಾರೀಶ್ವರನಿಗೆ ನಾನು ವಂದಿಸುತ್ತೇವೆ. (ಪೋ-ಪುಟ ೧೯೦)

೩. ರವಿಶಶಿಶುಚೀನಾಮವಿಷಯೇ ನಿರಾಲೋಕೇಽಲೋಕೇ ನಿವಸತಿ ಹಿ ಭಾಲೋಕಭುವನೇ

ಭಾಲೋಕಭುವನೇ ಅಂದರೆ ಬೆಳದಿಂಗಳಿನ ಲೋಕ ಅಂದರೆ ಸಹಸ್ರಾರ ಕಮಲದಲ್ಲಿ ಚಂದ್ರಬಿಂಬ ಇರುತ್ತದೆ. ಇದು ರವಿಶಶಿಅಗ್ನಿಗಳಿಗೆ ಗೋಚರವಾಗದ ಲೋಕ. ಸಹಸ್ರಾರವು ಗಿರಾ ಲೋಕವು, ಅಲೋಕವೂ ಆಗಿರುತ್ತದೆ ಅಂದರೆ ಅಗೋಚರವಾದುದು, ಏಕಾಂತವು ಆಗಿರುತ್ತದೆ. ಪರಶಂಭು-ಚಿತ್ಪರಾಂಬ ಸ್ವರೂಪವಾದ ಅರ್ಧನಾರೀಶ್ವರ ಶಂಭುವನ್ನು ಆರಾಧಿಸುವ ಉಪಾಸಕನು ಈ ಸಹಸ್ರಾರದಲ್ಲಿ ವಾಸಿಸುವ ಅಂದರೆ ಬ್ರಹ್ಮಸಾಕ್ಷಾತ್ಕಾರದ ಸಾಯುಜ್ಯ ಹೊಂದುತ್ತಾನೆ. (ಪೋ-ಪುಟ ೧೯೦-೧೯೧)

೪. ತವಾಜ್ಞಾಚಕ್ರಸ್ಥಂ... ಎಂದು ಇಲ್ಲಿ ಹೇಳಿರುವ ಭಾವವನ್ನೇ ಲಲಿತಾಸಹಸ್ರನಾಮದಲ್ಲಿ ಆಜ್ಞಾಚಕ್ರಾಂತರಾಲಸ್ಥಾ (೧೦೩) (ವಿಷ್ಣುಗ್ರಂಥಿವನ್ನು ಭೇದಿಸಿಕೊಂಡು, ಆಜ್ಞಾಚಕ್ರದಲ್ಲಿರುವವಳು) ಎಂದು ಹೇಳಿದೆ.

೫. ಶ್ಲೋಕ ೩೬ ರಿಂದ ೪೧ ರವರೆಗೆ ದೇವಿಯನ್ನು ಷಟ್‌ಚಕ್ರಸ್ಥಿತೇ (ಆಜ್ಞಾ, ವಿಶುದ್ಧ, ಅನಾಹತ, ಸ್ವಾಧಿಷ್ಠಾನ, ಮಣಿಪೂರಕ, ಮೂಲಾಧಾರ) ಎಂದು ವರ್ಣಿಸಲಾಗಿದೆ.

೬. ತವಾಜ್ಞಾಚಕ್ರಸ್ಥಂ ಎಂಬಲ್ಲಿ ಚಕ್ರ ಶಬ್ದವು ಸಾಂಕೇತಿಕ. ಸಾಧಕನ ಹುಬ್ಬುಗಳ ನಡುವಿನ ಶ್ರೀಚಕ್ರದ ೪ ಶಿವಚಕ್ರವನ್ನು ಸೂಚಿಸುತ್ತದೆ. ಆಜ್ಞಾಚಕ್ರದ ಸಹಜ ರೂಪವಾದ ಎರಡು ದಳದ ಪದ್ಮವನ್ನಲ್ಲ.

(ಪು-ಪುಟ ೯೧)

೭. ಲಲಿತಾಸಹಸ್ರನಾಮದಲ್ಲಿ (೫೯ನೇ ನಾಮ) ಮಹಾಪದ್ಮಾಟವೀ ಸಂಸ್ಥಾ ಎಂದು ಹೇಳಿದೆ. "ಮಹತ್ತರವಾದ ಕಮಲಪುಷ್ಪಗಳ ವನಮಧ್ಯದಲ್ಲಿ ವಾಸಮಾಡುವವಳು. ನಮ್ಮ ಶಿರಸ್ಸಿನಲ್ಲಿರುವ ಸಹಸ್ರಾರ ಕಮಲವು ಅನಂತವಾದ ಕಮಲಪುಷ್ಪಗಳ ತತ್ತ್ವವನ್ನು ಒಳಗೊಂಡಿರುವುದರಿಂದ ಅದಕ್ಕೆ ಸಹಸ್ರಾರಕಮಲವೆಂದು ಹೆಸರು ಬಂದಿದೆ. ಇಂಥ ಸಹಸ್ರಾರ ಕಮಲದಲ್ಲಿ ವಾಸಮಾಡುವವಳು.

(ಲ-ಯ ಪುಟ ೮೯)

೮. ಈ ಶ್ಲೋಕದಲ್ಲಿ **ತಪನಶಶಿಕೋಟಿದ್ಯುತಿಧರಂ ಪರಂ ಶಂಭುಂ** ಎಂಬಲ್ಲಿ ಕೋಟಿ ಎಂದರೆ ಸಂಖ್ಯಾವಾಚಕ ಪದವಲ್ಲ. ಪರಶಿವನ ಪರಾಕಾಷ್ಠತೆಗೆ ಕೋಟಿ ಪದ ಸೂಚಕವಾಗಿದೆ. ಲಕ್ಷ್ಮೀಧರ ವ್ಯಾಖ್ಯಾನಕಾರ ಸಾಧಕನ ಹುಬ್ಬುಗಳ ನಡುವೆ ಇರುವ ಶ್ರೀ ಚಕ್ರದ ನಾಲ್ಕು ಶಿವಚಕ್ರಗಳನ್ನು ಸಂಕೇತಿಸುವುದಲ್ಲದೆ ಆಜ್ಞಾಚಕ್ರದ ಸಹಜರೂಪವಾದ ದ್ವಿದಳ ಪದ್ಮವನ್ನಲ್ಲ ಎಂದು ಹೇಳುತ್ತಾನೆ. ಆದರೆ ಈ ಮಾತನ್ನು ಭಾಷ್ಯಕಾರ ಕಾಮೇಶ್ವರ ಸೂರಿ ಒಪ್ಪುವುದಿಲ್ಲ. ಆತ ಇದು ಆಜ್ಞಾಚಕ್ರದ ದ್ವಿದಳ ಪದ್ಮವನ್ನೇ ಸೂಚಿಸುವುದೆಂದೂ ಹಾಗಿಲ್ಲದಿದ್ದರೆ ತವಾ ಎಂಬ ಪದವು ಇಲ್ಲಿ ಅನಾವಶ್ಯಕವೂ ಅರ್ಥಹೀನವೂ ಆಗುತ್ತದೆ ಎಂದಿದ್ದಾನೆ.

(ಶ್ರೀ-ಪುಟ ೨೧೪)


೯. ಪರಶಂಭುನಾಥ ಮತ್ತು ಚಿತ್ಪರಾಂಬೆಯರು (ಅರ್ಧನಾರೀಶ್ವರ ಶಂಭುವು) ೬೪ ಮಾನಸ ಮಯೂಖಗಳ (ಕಿರಣಗಳ) ನಡುವೆ ಇರುವರೆಂದು ತಿಳಿದು ಧ್ಯಾನಿಸಬೇಕು.

೬೪ ಮಾನಸಮಯೂಖಗಳು :

೧ ಪರ
೨ ಪರಾ
೩ ಭರ
೪ ಭರಾ
೫ ಚಿತ್
೬ ಚಿತ್ಪರಾ
೭ ಮಹಾಮಾಯಾ
೮ ಮಹಾಮಯಾಪರಾ
೯ ಸೃಷ್ಟಿ
೧೦ ಸೃಷ್ಟಿಪರಾ
೧೧ ಇಚ್ಛಾ
೧೨ ಇಚ್ಛಾಪರಾ
೧೩ ಸ್ಥಿತಿ
೧೪ ಸ್ಥಿತಿಪರಾ
೧೫ ನಿರೋಧ
೧೬ ನಿರೋಧಪರಾ
೧೭ ಮುಕ್ತಿ
೧೮ ಮುಕ್ತಿಪರಾ
೧೯ ಜ್ಞಾನ
೨೦ ಜ್ಞಾನಪರಾ
೨೧ ಸತ್
೨೨ ಸತ್ಪರಾ
೨೩ ಅಸತ್
೨೪ ಅಸತೀಪರಾ
೨೫ ಸದಸತ್
೨೬ ಸದಸತೀಪರಾ
೨೭ ಕ್ರಿಯಾ
೨೮ ಕ್ರಿಯಾಪರಾ
೨೯ ಆತ್ಮನ್
೩೦ ಆತ್ಮಪರಾ
೩೧ ಇಂದ್ರಿಯಾಶ್ರಯ
೩೨ ಇಂದ್ರಿಯಾಶ್ರಯಪರಾ
೩೩ ಗೋಚರ
೩೪ ಗೋಚರಪರಾ
೩೫ ವೇದವತ್
೩೬ ವೇದವತ್ಪರಾ
೩೭ ಸಂವಿದ್
೩೮ ಸಂವಿತ್ಪರಾ
೩೯ ಲೋಕಮುಖ್ಯ
೪೦ ಲೋಕಮುಖ್ಯಪರಾ
೪೧ ಕುಂಡಲಿನೀ
೪೨ ಕುಂಡಲಿನೀಪರಾ
೪೩ ಶೌಶುಮ್ನಿ
೪೪ ಶೌಶುಮ್ನೀಪರಾ
೪೫ ಪ್ರಾಣಸೂತ್ರ
೪೬ ಪ್ರಾಣಸೂತ್ರಪರಾ
೪೭ ಸ್ಯಂದ
೪೮ ಸ್ಯಂದಪರಾ
೪೯ ಮಾತೃಕಾ
೫೦ ಮಾತೃಕಾಪರ
೫೧ ಸ್ವರೋದ್ಭವ
೫೨ ಸ್ವರೋದ್ಭವಾಪರಾ
೫೩ ವರ್ಣಜ
೫೪ ವರ್ಣಜಪರಾ
೫೫ ಶಬ್ದಜ
೫೬ ಶಬ್ದಜಪರಾ
೫೭ ವರ್ಣಜಜ್ಞಾತ
೫೮ ವರ್ಣಜಜ್ಞಾತಪರಾ
೫೯ ವರ್ಗಜ
೬೦ ವರ್ಗಜಾಪರಾ
೬೧ ಸಂಯೋಗಜ
೬೨ ಸಂಯೋಗಜಾಪರಾ
೬೪ ಮಂತ್ರವಿಗ್ರಹಾಪರಾ

(ಸು–ಪುಟ ೧೪೬)

ಯಂತ್ರಾರಾಧನೆ (ಶ್ಲೋಕ-೩೭)



ಯಂತ್ರರಚನೆ : ಚಿನ್ನದ ರೇಕಿನಲ್ಲಿ ಯಂತ್ರವನ್ನು ತಯಾರಿಸಬೇಕು ವೃತ್ತವನ್ನು ರಚಿಸಿ ಅದರಲ್ಲಿ ಚಿತ್ರದಲ್ಲಿ ತೋರಿಸಿರುವಂತೆ ದುಂ ದುಂ ದುಂ ಠಷಶ ಬೀಜಾಕ್ಷರಗಳನ್ನು ರಚಿಸಬೇಕು.

ಪೂಜೆ : ಲಲಿತ ಸಹಸ್ರನಾಮ ಕುಂಕುಮಾರ್ಚನೆ ಮಾಡಬೇಕು.

ನೈವೇದ್ಯ : ಜೇನುತುಪ್ಪ, ಉದ್ದಿನವಡೆ

ಜಪ : ಪೂರ್ವಾಭಿಮುಖವಾಗಿ ಕುಳಿತು ದಿನಕ್ಕೆ ೧೦೦೦ ಬಾರಿಯಂತೆ ಈ ಶ್ಲೋಕವನ್ನು ೪೫ ದಿನಗಳ ಕಾಲ ಜಪಿಸಬೇಕು.

ಫಲ : **ಯಂತ್ರವನ್ನು ತೊಳೆದು ಜಲವನ್ನು (ನಿವೃತ್ತಿ ಜಲವನ್ನು) ಮಂತ್ರಿಸಿ ಕುಡಿದರೆ ನಾನಾ ವಿಧ ಕಠಿಣ ರೋಗ ನಿವಾರಣೆ ಆಗುತ್ತದೆ.**

ಶ್ಲೋಕ–೩೭

ವಿಶುದ್ಧಿಚಕ್ರದಲ್ಲಿ ದೇವಿಯ ಧ್ಯಾನ

ವಿಶುದ್ಧೌ ತೇ ಶುದ್ಧಸ್ಫಟಿಕವಿಶದಂ [1]ವ್ಯೋಮಜನಕಂ
ಶಿವಂ ಸೇವೇ ದೇವೀಮಪಿ [2]ಶಿವಸಮಾನವ್ಯವಸಿತಾಮ್ ।
ಯಯೋಃ ಕಾಂತ್ಯಾ ಯಾಂತ್ಯಾಶ್ಶಶಿಕಿರಣಸಾರೂಪ್ಯ[3]ಸರಣೇಃ
ವಿಧೂತಾಂತರ್ಧ್ವಾಂತಾ ವಿಲಸತಿ ಚಕೋರೀವ ಜಗತೀ ॥ ೩೭ ॥

ಪಾಠಾಂತರ

೧. (ವ್ಯೋಮಜನಕಂ) = ವ್ಯೋಮಸದೃಶಂ (ಸು)
೨. (ಶಿವಸಮಾನ ವ್ಯವಸಿತಾಮ್) = ಸಮಾನವ್ಯವಸಿನಿನೀಂ (ಸು)
೩. (ಸರಣೇಃ)=ಸರಣೀಂ; ಸರಣೀ (ಸು)

ಪದವಿಭಾಗ

ವಿಶುದ್ಧೌ, ತೇ, ಶುದ್ಧಸ್ಫಟಿಕವಿಶದಂ, ವ್ಯೋಮಜನಕಂ, ಶಿವಂ, ಸೇವೇ, (ದೇವೀಮಪಿ) = ದೇವೀಂ+ಅಪಿ; (ಶಿವಸಮಾನವ್ಯವಸಿತಾಂ,) = ಶಿವಸಮಾನ + ವಿ + ಅವಸಿತಾಂ ಯಯೋಃ, ಕಾಂತ್ಯಾ, (ಯಾಂತ್ಯಾ ಶ್ಶಶಿಕಿರಣಸಾರೂಪ್ಯಸರಣೇಃ) = ಯಾಂತ್ಯಾಃ + ಶಶಿಕಿರಣಸಾರೂಪ್ಯಸರಣೇಃ, (ವಿಧೂತಾಂತಃ+ರ್ಧ್ವಾಂತಾ) = ವಿಧೂತ+ಅಂತರ್ಧ್ವಾಂತಾ, ವಿಲಸತಿ, (ಚಕೋರೀವ) = ಚಕೋರೀ + ಇವ, ಜಗತೀ.

ಅನ್ವಯಾರ್ಥ

(ಹೇ ಭಗವತಿ)	ಎಲೈ ಪೂಜ್ಯಳಾದ ದೇವಿಯೆ,
ತೇ ವಿಶುದ್ಧೌ	ನಿನ್ನ (ಕಂಠದಲ್ಲಿರುವ) ವಿಶುದ್ಧಿಚಕ್ರದಲ್ಲಿ
ಶುದ್ಧಸ್ಫಟಿಕವಿಶದಂ	ನಿರ್ಮಲವಾದ–ಸ್ಫಟಿಕಮಣಿಯಂತೆ ಶುದ್ಧನಾದ
ವ್ಯೋಮಜನಕಂ	ಆಕಾಶಕ್ಕೆ (ತತ್ತ್ವಕ್ಕೆ) ಕಾರಣನಾದ
ಶಿವಂ	ಪರಮೇಶ್ವರನನ್ನೂ
ಶಿವಸಮಾನ ವ್ಯವಸಿತಾಂ	ಈಶ್ವರನೊಡನೆ–ಸಮವಾದ–ಪ್ರಯತ್ನವುಳ್ಳವಳಾದ

ದೇವೀಮಪಿ	(ದೇವೀಂ+ಅಪಿ) ಪಾರ್ವತೀದೇವಿಯನ್ನೂ
ಸೇವೇ	ಸೇವಿಸುತ್ತೇನೆ
ಯಯೋಃ	ಯಾವ ಪಾರ್ವತೀ ಪರಮೇಶ್ವರರಿಬ್ಬರ
ಯಾಂತ್ಯಾಃ	ಹರಡುತ್ತಿರುವ
ಸರಣೀಃ ಶಶಿಕಿರಣಸಾರೂಪ್ಯ	ಬೆಳುದಿಂಗಳಿಗೆ–ಸಮಾನವಾದ–ಬೆಳಕುಳ್ಳ
ಕಾಂತ್ಯಾ	ಕಾಂತಿಯ ದೆಸೆಯಿಂದ
ಜಗತೀ	ಮೂರುಲೋಕವೂ
ವಿಧೂತಾಂತರ್ಧ್ವಾಂತಾ	(ವಿಧೂತ+ಅಂತರ್ಧ್ವಾಂತಾ) ಅಜ್ಞಾನವೆಂಬ ಕತ್ತಲೆಯನ್ನು ಕಳೆದುಕೊಂಡ
ಚಕೋರೀವ	(ಚಕೋರೀ+ಇವ) ಹೆಣ್ಣು ಚಕೋರ ಪಕ್ಷಿಯಂತೆ
ವಿಲಸತಿ	(ಮೂರುಲೋಕಗಳು) ಪ್ರಕಾಶಿಸುತ್ತವೆಯೋ (ಅದೇ ರೀತಿ ಶಿವ ಶಿವೆಯರ ಪ್ರಭೆಯಿಂದ ಅಜ್ಞಾನವೆಂಬ ಕತ್ತಲೆಯನ್ನು ಸಾಧಕ ಜನರು ಕಳೆದುಕೊಳ್ಳುತ್ತಾರೆ).

ತಾತ್ಪರ್ಯ

ಓ ಭಗವತಿ, ನಿನ್ನ ಕಂಠದಲ್ಲಿರುವ ವಿಶುದ್ಧಿಚಕ್ರದಲ್ಲಿ ನಿರ್ಮಲವಾದ ಸ್ಫಟಿಕಮಣಿಯಂತೆ ಶುದ್ಧವಾದ ಆಕಾಶತತ್ತ್ವಕ್ಕೆ ಜನಕನಾದ ಪರಮೇಶ್ವರನನ್ನೂ ಈಶ್ವರನೊಡನೆ ಸಮಾನವಾದ ಪ್ರಯತ್ನವುಳ್ಳ ಪಾರ್ವತೀದೇವಿಯನ್ನೂ ಉಪಾಸಿಸುತ್ತೇನೆ. ಬೆಳದಿಂಗಳಿನಿಂದ ಸಂತುಷ್ಟವಾದ ಹೆಣ್ಣು ಚಕೋರಪಕ್ಷಿಯಂತೆ ಪಾರ್ವತೀ ಪರಮೇಶ್ವರರಿಂದ ಹೊಮ್ಮುತ್ತಿರುವ ಬೆಳದಿಂಗಳಿಗೆ ಸದೃಶವಾಗಿರುವ ಕಾಂತಿಯಿಂದ ಮೂರು ಲೋಕವೂ ಅಜ್ಞಾನವೆಂಬ ಕತ್ತಲೆಯನ್ನು ಕಳೆದುಕೊಳ್ಳುವುದರಿಂದ ನಾನು ಸಂತುಷ್ಟನಾಗುತ್ತೇನೆ.

ಪದ್ಯಾನುವಾದ

ಹೇ ದೇವಿ! ನಿನ್ನಯ ವಿಶುದ್ಧಿಚಕ್ರದಲಿರುವ
ಶುದ್ಧಸ್ಫಟಿಕ ವಿಶದನಾಕಾಶಜನಕನಹ
ಶಿವನನಂತೆಯೆ ಶಿವಸಮಾನಪ್ರಯತ್ನಳಹ ದೇವಿಯನು ಸೇವಿಸುವೆನು;
ಶಶಿಕಿರಣಕನುರೂಪಕಾಂತಿಯನು ಹೊಂದಿರುವ
ಶಿವಶಕ್ತಿಗಳ ಕಾಂತಿಯಲಿ ಮಿಂದು ಮೂಲೋಕ
ತನ್ನೊಳಗಿನಜ್ಞಾನತಮವ ನೀಗುತ ನಲಿಯುವುದು ಚಕೋರಿಯ ತೆರದಲಿ
॥ ೩೭ ॥

ಟಿಪ್ಪಣಿಗಳು

೧. **ಈ ಶ್ಲೋಕದಲ್ಲಿರುವ ಅಂತರಾರ್ಥ ಹೀಗಿದೆ :**
ಹೆಣ್ಣು ಚಕೋರಪಕ್ಷಿಯು ಬೆಳುದಿಂಗಳನ್ನು ಪಾನಮಾಡಿ ಹೇಗೆ ಸಂತುಷ್ಟ ಚಿತ್ತವುಳ್ಳದ್ದಾಗಿ ಆಗುತ್ತದೆಯೋ ಹಾಗೆಯೇ, ಶಿವ-ಶಿವೆಯರ ಜ್ಯೋತ್ಸ್ನಾ ಸದೃಶವಾದ ಪ್ರತಿಭೆಯಿಂದ ಅಜ್ಞಾನಾಂಧಕಾರವನ್ನು ಕಳೆದುಕೊಂಡು ಸಾಧಕ ಜನರು ಸಂತುಷ್ಟಚಿತ್ತವುಳ್ಳವರಾಗುತ್ತಾರೆ. ವಿಶುದ್ಧಿಚಕ್ರದ ಪೂಜೆಯಲ್ಲಿ ಸೂರ್ಯಚಂದ್ರರ ನಿರೋಧವಾಗುವುದರಿಂದ ಷೋಡಶಾರದಲ್ಲಿರುವ ಶ್ರೀ ತ್ರಿಪುರಸುಂದರೀ ಮೊದಲಾದ ೧೬ ಕಲೆಗಳ ಚಂದ್ರಿಕೆಯು ಶೋಷಣ ವಾಗುವುದರಿಂದ ಆ ಚಕ್ರದಲ್ಲಿರುವ ಶಿವ-ಶಿವೆಯರ ಪ್ರಭೆಯಿಂದಲೇ ಚಂದ್ರಿಕೆಯ ಕಾರ್ಯವು ಉಂಟಾಗುತ್ತದೆ. (ಶೇ-ಪುಟ ೧೪೭)

೨. "ವಿಶುದ್ಧಿಚಕ್ರ ಆಕಾಶತತ್ತ್ವ ಇದು ಶಬ್ದಪ್ರಧಾನ ಚಕ್ರ. ಇಲ್ಲಿಯೇ ಮನುಷ್ಯರಲ್ಲಿ ನಾದರೂಪ ಆಲೋಚನೆಗಳು ವೈಖರೀ ರೂಪದಲ್ಲಿ ಶಬ್ದವಾಗಿ, ಕವಿತ್ವವಾಗಿ, ಗಾನ, ಉಪನ್ಯಾಸಗಳಾಗಿ, ಸ್ಪಷ್ಟವಾಗಿ ರೂಪುಗೊಂಡು ಅವರಿಗೆ ಗೌರವಯಶಸ್ಸುಗಳನ್ನು ಪ್ರಸಾದಿಸುತ್ತದೆ. ಈ ವಿಶುದ್ಧಿಚಕ್ರವನ್ನು ಅದರಲ್ಲಿನ ಶಿವ-ಶಕ್ತಿಯನ್ನು ಧ್ಯಾನಿಸುವ ಸಾಧಕರು ಅವರಲ್ಲಿನ ನಾದಬ್ರಹ್ಮಸ್ವರೂಪವನ್ನು ದೈವವಾಣಿಯಾಗಿ ಕೇಳಬಲ್ಲರು.

(ಪ-ಪುಟ ೩೦೭)

೩. ಆಕಾಶತತ್ತ್ವದ ವಿಶುದ್ಧಿಚಕ್ರದಲ್ಲಿ ಪ್ರತಿಷ್ಠಿತ ಶಿವಾಶಿವದಂಪತಿಗಳನ್ನು ಇಲ್ಲಿ ವರ್ಣಿಸಿದೆ. ಶಿವನ ವಿನಾ ಶಿವೆಯನ್ನು, ಶಿವೆಯ ವಿನಾ ಶಿವನನ್ನು ಪೂಜಿಸಿದರೆ ಶಿವಸಾಯುಜ್ಯ ದೊರಕದು ಅನ್ನುವುದನ್ನು ಸ್ಕಂದಪುರಾಣದಲ್ಲಿ ಹೇಳಲಾಗಿದೆ.

ತ್ವಾಮಾಶ್ರಿತಾ ಮಹಾಭಾಗೇ ಪ್ರಾಪ್ನುವಂತ್ಯಚಿರೇಣ
ಮಾಂ ಕೇವಲಂ ತ್ವಾಂನಾದೃತ್ಯ ಮಾಂ ಭಜಂತೌ
ವಿಚೇತನಾರಂತಿ ಮಯ ಸಾಯುಜ್ಯಂ ಬ್ರಹ್ಮಕಲ್ಪಶತೈರಪಿ ॥

(ಓ ಪಾರ್ವತೀ ನಿನ್ನನ್ನು ಆಶ್ರಯಿಸಿದವರು ನನ್ನನ್ನು (ಶಿವನನ್ನು) ಹೊಂದುತ್ತಾರೆ ನಿನ್ನನ್ನು ಒಲ್ಲದೆ ನನ್ನನ್ನು ಆರಾಧಿಸುವ ಅಜ್ಞಾನಿಗಳು ೧೦೦ ಬ್ರಹ್ಮಕಲ್ಪಕಾಲ ಆರಾಧಿಸಿದರೂ ನನ್ನ ಸಾಯುಜ್ಯ ಹೊಂದುವುದಿಲ್ಲ).
(ಸ್ಕಂದಪುರಾಣದಲ್ಲಿ ಪರಮಶಿವ ಪಾರ್ವತಿಗೆ ಹೇಳಿದ ಮಾತು)

(ಭ-ಪುಟ ೪೪)

೪. **ವ್ಯೋಮಜನಕಂ**

ಆಕಾಶತತ್ತ್ವವನ್ನು ಉತ್ಪಾದನೆ ಮಾಡುವವನು. ತೈತ್ತಿರೀಯ ಉಪನಿಷತ್ (೨-೧)ನಲ್ಲಿ ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಸ್ಸಂಭೂತಃ ಆ ಆತ್ಮನ ದೆಸೆಯಿಂದ ಆಕಾಶವು ಉತ್ಪನ್ನವಾಯಿತು ಎಂದು ಹೇಳಿದೆ. ಆಜ್ಞಾಚಕ್ರದಲ್ಲಿ ಆತ್ಮತತ್ತ್ವದಿಂದ ಆಕಾಶತತ್ತ್ವವು ಉತ್ಪನ್ನವಾಗುತ್ತದೆ. ಎಂಬುದಾಗಿ ಅರ್ಥ. ಇಲ್ಲಿ ಆತ್ಮಶಬ್ದವು ಮನಸ್ಸು ಎಂಬುದರ ಪರ್ಯಾಯ ವಾಚಕವಾದುದು.

(ಶೇ - ಪುಟ ೧೪೬)

೫. **ಶಿವಸಮಾನವ್ಯವಸಿತಾಂ**

(ಶಿವನೊಡನೆ ಸಮಾನವಾಗಿರುವ ಪ್ರಯತ್ನವುಳ್ಳ ಭಗವತಿಯನ್ನು) ಹೇಗೆಂದರೆ ಭಗವತಿಯು ತಾನೂ ಕೂಡ ಶಿವಶಬ್ದದಿಂದ ವಾಚ್ಯಳಾದವಳು ಎಂಬುದಾಗಿ ಅರ್ಥ.

೬. ಈ ಶ್ಲೋಕದಲ್ಲಿ (೩೮) ಸಾಂಕೇತಿಕ ಅರ್ಥ ಹೀಗಿದೆ: ಪರಮಹಂಸರಾದ ಯೋಗೀಶ್ವರರುಗಳ ಮನಸ್ಸೆಂಬ ಸರೋವರದಲ್ಲಿ ವಿಹರಿಸುವ ಪರದೇವಿ ದೇವರಸಂಮಿಳಿತ ರೂಪವು ಹಂಸಮಿಥುನವೆಂಬ ೨೬ ತತ್ತ್ವಗಳನ್ನು ಒಳಗೊಂಡಿರುತ್ತದೆ. ಈ ೨೬ ತತ್ತ್ವಗಳನ್ನು ೧೮ ವಿದ್ಯೆಗಳ ಮೂಲಕ (ಅಷ್ಟಾದಶವಿದ್ಯೆಗಳಿಂದ) ಆರಾಧಿಸಬೇಕು. ಪರಿಪೂರ್ಣವಾದ ಪರದೇವತಾ ಸ್ವರೂಪ ತಿಳಿಯಲು ಸಾಮಾನ್ಯರಿಗೆ ಸಾಧ್ಯವಿಲ್ಲ. ಆದಕಾರಣ ಅಷ್ಟಾದಶವಿದ್ಯೆಗಳಿಂದ ಒಂದು ಹಂತದವರೆಗೆ ಸಾಧನೆ ಶಕ್ಯ. ಅನಂತರ ಸ್ವಾನುಭವದಿಂದಲೇ ದೇವೀಸ್ವರೂಪವನ್ನು ಪೂರ್ಣವಾಗಿ ಅರಿಯಬೇಕು.

೭. ಅಷ್ಟಾದಶವಿದ್ಯೆಗಳ ವಿವರಹೀಗಿದೆ.

೧. ಶಿಕ್ಷಾ, ೨. ಕಲ್ಪಂ, ೩. ವ್ಯಾಕರಣ, ೪. ನಿರುಕ್ತಂ, ೫. ಜ್ಯೋತಿಷ್ಯಂ, ೬. ಛಂದಸ್ಸು, ೭. ಋಗ್ವೇದಂ, ೮. ಯಜುರ್ವೇದಂ, ೯. ಸಾಮವೇದಂ, ೧೦. ಅಥರ್ವಣ ವೇದಂ, ೧೧. ಮೀಮಾಂಸಾ, ೧೨. ನ್ಯಾಯಶಾಸ್ತ್ರಂ, ೧೩. ಧರ್ಮಶಾಸ್ತ್ರಂ, ೧೪. ಪುರಾಣ, ೧೫. ಆಯುರ್ವೇದಂ, ೧೬. ಧನುರ್ವೇದಂ, ೧೭. ಗಾಂಧರ್ವವೇದಂ ೧೮. ಅರ್ಥಶಾಸ್ತ್ರಂ

(ಪಂ-ಪುಟ ೨೫೨)

೮. ಈ ಶ್ಲೋಕದಲ್ಲಿರುವ ದೇವತೆಯರೆಂದರೆ, ವ್ಯೋಮೇಶ್ವರ ಮತ್ತು ವ್ಯೋಮೇಶ್ವರಿ ಇವರನ್ನು ೭೨ ನಾಭಸ (ಆಕಾಶೀಯ) ಮಯೂಖಗಳ

(ಕಿರಣಗಳ) ಮಧ್ಯೆ ವಿರಾಜಮಾನರೆಂದು ತಿಳಿದು ಆರಾಧಿಸಬೇಕು. ಈ ೭೨ ಮಯೂಖಗಳ ವಿವರ ಹೀಗಿದೆ.

೧. ಹೃದಯ
೨. ಕೌಲಿಕೀ
೩. ಧರ
೪. ಕಾಂತಾ
೫. ಭೋಗ
೬. ವಿಶ್ವ
೭. ಭಯ
೮. ಯೋಗಿನಿ
೯. ಮಹ
೧೦. ಬ್ರಹ್ಮಸಾರಾ
೧೧. ಶವ
೧೨. ಶಬರಿ
೧೩. ದ್ರವ
೧೪. ಕಾಲಿಕಾ
೧೫. ರಸ
೧೬. ಜುಷ್ಟಚಂಡಾಲಿ
೧೭. ಮೋಹ
೧೮. ಅಘೋರೇಶಿ
೧೯. ಮನೋಭವ
೨೦. ಹಲಾ
೨೧. ಕಲಾ
೨೨. ಮಹಾರಕ್ತಾ
೨೩. ಜ್ಞಾನಗುಹ್ಯ
೨೪. ಕುಬ್ಜಿಕಾ
೨೫. ಖರ
೨೬. ಡಾಕಿನೀ
೨೭. ಜ್ವಲನಾ
೨೮. ಶಾಕಿನೀ
೨೯. ಮಹಾಕುಲ
೩೦. ಲಾಕಿನೀ
೩೧. ಭಯೋಜ್ಯ್ವಲಾ
೩೨. ಕಾಕಿನೀ
೩೩. ತೇಜಸ್
೩೪. ಸಾಕಿನೀ
೩೫. ಮೂರ್ಧನ್
೩೬. ಹಾಕಿನೀ
೩೭. ವಾಮು
೩೮. ನಪಘ್ನೀ
೩೯. ಕುಲಾ
೪೦. ಸಿಂಹಿ
೪೧. ಸಂಹಾರ
೪೨. ಕುಲಾಂಬಿಕಾ
೪೩. ವಿಶ್ವಂಭರಾ
೪೪. ಕಾಮಾ
೪೫. ಕೌಟಿಲ
೪೬. ಕೂಣಮಾತಾ
೪೭. ಗಾಲವ
೪೮. ಕಂಕಾಳೀ
೪೯. ವ್ಯೋಮ
೫೦. ವ್ಯೋಮಾ
೫೧. ಶ್ವಸನ
೫೨. ನಾದಾ
೫೩. ಖೇಚರ
೫೪. ಮಹಾದೇವಿ
೫೫. ಬಾಹುಲ
೫೬. ಮಹತ್ತರೀ
೫೭. ತಾತ
೫೮. ಕುಂಡಲಿನೀ
೫೯. ಕುಲಾತೀತ
೬೦. ಕುಲೇಶಿ
೬೧. ಅಜ
೬೨. ಈಧಿಕಾ
೬೩. ಅನಂತ
೬೪. ದೀಪಿಕಾ
೬೫. ಈಶ
೬೬. ರೇಚಿಕಾ
೬೭. ಶಿಖಾ
೬೮. ಮೋಚಿಕಾ
೬೯. ಪರಮ
೭೦. ಪರಾ
೭೧. ಪರ
೭೨. ಚಿತ್

(ಸು–ಪುಟ ೧೪೪೮)

೯. **ವಿಶುದ್ಧೌ ತೇ**

ದೇವಿಯ ವಿಶುದ್ಧಿ ಚಕ್ರನಿಲಯೆ. ಈ ಚಿತ್ರದಲ್ಲಿ ದೇವಿಯು ಷೋಡಶದಳ ಕರ್ಣಿಕೆಯಲ್ಲಿ ಡಾಕಿನೀಶಕ್ತಿರೂಪದಿಂದ ಸ್ಥಿತಳಾಗಿರುವಳು. ಈ ಶಕ್ತಿರೂಪ ದೇವತೆಯು ರಕ್ತವರ್ಣವುಳ್ಳವಳಾಗಿ, ಮೂರು ಕಣ್ಣುಗಳನ್ನು ಉಳ್ಳವಳಾಗಿ, ಖಟ್ವಾಂಗಾದಿ ಆಯುಧಗಳನ್ನು ಧರಿಸಿ ಏಕಮುಖಳಾಗಿ ಪಾಯಸಾನ್ನ ಪ್ರಿಯಳಾಗಿ ತ್ವಗಿಂದ್ರಿಯದಲ್ಲಿರುವವಳೂ ಅಜ್ಞಾನಿಗಳಿಗೆ ಭಯವುಂಟುಮಾಡುವವಳೂ ಅಮೃತಾದಿ ಮಹಾಶಕ್ತಿಗಳಿಂದ ಸಂವೃತ್ತಳಾಗಿರುವವಳೂ ಆಗಿದ್ದಾಳೆ. ವಿಶುದ್ಧಿ ಚಕ್ರವು ಆಕಾಶತತ್ವಕ್ಕೆ ಪ್ರಧಾನವಾಗಿಯೂ ಸಪ್ತವ್ಯಾಹೃತಿಗಳಲ್ಲಿ ಜನಃ ಸೂಚಕವಾಗಿಯೂ, ಸಪ್ತಮಾತೃಕೆಯರಲ್ಲಿ ಕೌಮಾರೀ ಅಧಿದೇವತೆಯಾಗಿಯೂ ಸಪ್ತಸ್ವರಗಳಲ್ಲಿ ಗಾಂಧಾರಸ್ವರಕ್ಕೆ ಪ್ರಧಾನಸ್ಥಳವಾಗಿಯೂ ಮನೋಮಯಕೋಶದ ಪ್ರಧಾನಸ್ಥಾನವಾಗಿಯೂ ಇರುವುದು.

(ಶ್ರೀ–ಪುಟ ೧೭)

೧೦. **ಡಾಕಿನೀದೇವಿ**

ಡಾಕಿನೀದೇವಿಯು ಏಕಮುಖ ಉಳ್ಳವಳು. ಏಕೆಂದರೆ ವಿಶುದ್ಧಿಚಕ್ರವು ಆಕಾಶ ತತ್ತ್ವವಾದ್ದರಿಂದ ಒಂದೇ ಮುಖದವಳು.

ಭವದಾನಾಯ ಆಕೃತಿ ಕುಟಿಲಾ ಗಚ್ಛತಿ ಇತಿ ಡಾಕಿನೀ (ಭಯವನ್ನು ಉಂಟುಮಾಡುವುದಕ್ಕಾಗಿ ವಕ್ರವಾಗಿ ಹೋಗುವವಳು) ವಿಶುದ್ಧ ಚಕ್ರವು ಆಕಾಶತತ್ತ್ವವಾಗಿ ಇಂದ್ರಿಯ ಮತ್ತು ಪ್ರಾಣ ಚೇಷ್ಟೆಗಳಿಗೆ ಅತೀತವಾಗಿ ಇಂದ್ರಿಯಕಾರ್ಯಗಳಾದ ಅವಿದ್ಯೆಯನ್ನು ನಾಶಮಾಡುವ ಸ್ವರೂಪವುಳ್ಳದ್ದಾಗಿರುವುದು.

೧೧. **ಕೌಮಾರಿ** "ಕುಮಾರಿ ಎಂದರೆ, ಕುತ್ಸಿತಾನ್ ಶತ್ರುನ್ ಮಾರಯತೀತಿ ಕುಮಾರೀ" (ಕುತ್ಸಿತರಾದ ಶತ್ರುಗಳನ್ನು ಧ್ವಂಸ ಮಾಡುವವಳು) ಅಲ್ಲದೆ, ಕುತ್ಸಿತೋ ಮಾರೋಯಯಾಸಾ ಇತಿ ಕುಮಾರೀ (ಮನ್ಮಥನನ್ನು ತಿರಸ್ಕರಿಸುವಳು ಎಂದರೆ ಬಾಲ್ಯಾವಸ್ಥೆಯಲ್ಲಿರುವವಳು) ಶತ್ರುಗಳನ್ನು ನಿಗ್ರಹ ಮಾಡುವ ಡಾಕಿನೀ ಸ್ವರೂಪವಾದ ಶಕ್ತಿಗಳಿಗೆಲ್ಲಾ ಕೌಮಾರಿಯು ನಾಥಳಾಗಿರುವಳು.


(ಶ್ರೀ–ಪುಟ ೨೧೮)

೧೨. **ವಿಶುದ್ಧೌ ತೇ ಶುದ್ಧಸ್ಫಟಿಕವಿಶದಂ ವ್ಯೋಮಜನಕಂ**

"ಆಕಾಶ ತತ್ತ್ವಾತ್ಮಕವಾದ ವಿಶುದ್ಧಿ ಚಕ್ರದಲ್ಲಿ (ವಿಶೇಷವಾಗಿ ಶುದ್ಧವಾಗಿರುವುದರಿಂದ ವಿಶುದ್ಧಿ' ಎಂಬ ಹೆಸರು) ಶುದ್ಧ ಸ್ಫಟಿಕದಂತೆ ಪ್ರವೇಶ ಹೊಂದಿರುವ ಆಕಾಶ ರಚನಾತ್ಮಕಳಾದ (ಆ-ಕಾಶ ಎಂಬ ಹೆಸರೂ ಹೀಗೆ: ಕಾಶ ಎಂದರೆ ಬೆಳಕು, ಶುಭ್ರತೆ. ಶುದ್ಧವಾದ ಬೆಳಕಿಗೆ ಪ್ರ-ಕಾಶ ಪ್ರ-ದೀಪ ಎನ್ನುವುದುಂಟು) ಶಕ್ತ್ಯಾತ್ಮಕಳಾದ ದೇವಿಯನ್ನು ಆಕಾಶದ ಶಕ್ತಿ (Power) ಮೂಲಕ ದರ್ಶಿಸಿ ಸೇವಿಸಬೇಕು. ಅಲ್ಲಿರುವ ಶಬ್ದಾತ್ಮಕ ನಾದಶಕ್ತಿಯನ್ನು ಕಾಣಬೇಕು. ನಾದದಲ್ಲಿ ಅಂಥ ಅದ್ಭುತಶಕ್ತಿ ಇದೆ. ನಾದೋಪಾಸನೆಯೇ ವೇದೋಪಾಸನೆ"

(ರ-ಪುಟ ೪೫)

ಯಂತ್ರಾರಾಧನೆ (ಶ್ಲೋಕ-೩೭)



ಯಂತ್ರರಚನೆ : ಬೆಳ್ಳಿರೇಖೆಯಲ್ಲಿ 'ರ' ಬೀಜಾಕ್ಷರದೊಡನೆ ಚಿತ್ರದಲ್ಲಿ ತೋರಿಸುವಂತೆ ಯಂತ್ರವನ್ನು ರಚಿಸಬೇಕು.

ಪೂಜೆ : ದುರ್ಗಾಸಹಸ್ರನಾಮ ಕುಂಕುಮಾರ್ಚನೆ ಮಾಡಬೇಕು

ನೈವೇದ್ಯ : ಬೆಲ್ಲದಪಾಯಸ, ಬಾಳೆಹಣ್ಣು, ತೆಂಗಿನಕಾಯಿ

ಜಪ : ೫೦೦೦ ಬಾರಿ ಈ ಶ್ಲೋಕವನ್ನು ಜಪಿಸಬೇಕು. ಜಲವನ್ನು ಅಭಿಮಂತ್ರಿಸಿ ಕುಡಿಯಬೇಕು.

ಫಲ : ಬ್ರಹ್ಮರಾಕ್ಷಸಬಾಧೆ ನಿವೃತ್ತಿ ಆಗುವುದು.

ಶ್ಲೋಕ–೩೮

ಅನಾಹತಚಕ್ರದಲ್ಲಿ ದೇವಿಯ ಧ್ಯಾನ

ಸಮುನ್ಮೀಲತ್ಸಂವಿತ್ಕಮಲಮಕರಂದೈಕರಸಿಕಂ
ಭಜೇ ಹಂಸದ್ವಂದ್ವಂ ಕಿಮಪಿ ಮಹತಾಂ ಮಾನಸಚರಮ್ ।
ಯದಾಲಾಪಾದಷ್ಟಾದಶಗುಣಿತ [೧]ವಿದ್ಯಾಪರಿಣತಿಃ
[೨]ಯದಾದತ್ತೇ ದೋಷಾದ್ಗುಣಮಖಿಲಮದ್ಭ್ಯಃ ಪಯ ಇವ ॥ ೩೮ ॥

ಪಾಠಾಂತರ

೧. (ವಿದ್ಯಾ ಪರಿಣತಿಃ) = ವಿದ್ಯಾ ಪರಿಣತಿಂ (ಸು)
೨. (ಯದಾದತ್ತೇ) = ಸಮಾಧತ್ತೇ (ಸು)

ಪದವಿಭಾಗ

(ಸಮುನ್ಮೀಲತ್ಸಂವಿತ್ಕಮಲಮಕರಂದೈಕರಸಿಕಂ) = ಸಂ+ಉನ್ಮಿಲತ್ + ಸಂವಿತ್+ಕಮಲ ಮಕರಂದ + ಏಕರಸಿಕಂ, ಭಜೇ, ಹಂಸದ್ವಂದ್ವಂ, (ಕಿಮಪಿ) = ಕಿಂ+ಅಪಿ, ಮಹತಾಂ, ಮಾನಸಚರಮ್, (ಯದಾಲಾಪಾದಷ್ಟಾದಶಗುಣಿತವಿದ್ಯಾಪರಿಣತಿಃ) = ಯತ್ +ಆಲಾಪಾತ್+ಅಷ್ಟಾದಶ ಗುಣಿತ ವಿದ್ಯಾ ಪರಿಣತಿಃ, (ಯದಾದತ್ತೇ) = ಯತ್ + ಆದತ್ತೇ, (ದೋಷಾದ್ಗುಣಮಖಿಲಮದ್ಭ್ಯಃ) = ದೋಷಾತ್ + ಗುಣಮ್+ಅಖಿಲಮ್+ ಅದ್ಭ್ಯಃ, (ಪಯ ಇವ) = ಪಯಃ + ಇವ

ಅನ್ವಯಾರ್ಥ

(ಹೇ ಭಗವತಿ)	ಎಲೈ ಪೂಜ್ಯಳಾದ ದೇವಿಯೆ,
ಯದಾಲಾಪಾತ್	(ಯತ್+ಆಲಾಪಾತ್)=ಯಾವ (ಹಂಸದಂಪತಿಗಳ) ಮಾತುಗಳದೆಸೆಯಿಂದ
ಅಷ್ಟಾದಶಗುಣಿತ	ಹದಿನೆಂಟರಿಂದ – ಹೆಚ್ಚಿಸಲ್ಪಟ್ಟ
ವಿದ್ಯಾ ಪರಿಣತಿಃ	೧೮ ವಿದ್ಯೆಗಳ–ಪರಿಣಾಮವು
(ಅಭವತ್)	ಉಂಟಾಯಿತೋ
ಯತ್	ಯಾವ (ಪಾರ್ವತೀಪರಮೇಶ್ವರರೆಂಬ)

ಅದ್ಭ್ಯಃ ಪಯಂ ಆದತ್ತೇ	ನೀರನ್ನು ಬಿಟ್ಟು – ಹಾಲನ್ನೇ – ಸ್ವೀಕರಿಸುವ
ದೋಷಾತ್ ಅಖಿಲಂ ಗುಣಂ	ಭಕ್ತರ ದೋಷವನ್ನು ಬಿಟ್ಟು ಸಂಪೂರ್ಣವಾದ – ಭಕ್ತರ ಸುಗುಣವನ್ನೇ
(ಆದತ್ತೇ)	ಸ್ವೀಕರಿಸುತ್ತದೆಯೋ (ಅಂಥ ಪಾರ್ವತೀ ಪರಮೇಶ್ವರನ್ನು ಧ್ಯಾನಮಾಡುತ್ತೇನೆ)
ಸಮ್ಮುನ್ಮೀಲತ್ಸಂವಿತ್	(ಸಮುನ್ಮೀಲತ್+ಸಂವಿತ್) ಚೆನ್ನಾಗಿ ಅರಳಿದಂಥಾ– ಜ್ಞಾನವೆಂಬ
ಕಮಲಮಕರಂದೈಕರಸಿಕಂ	(ಕಮಲಮಕರಂದಃ+ಏಕರಸಿಕಂ) = ಕಮಲದ (ಅನಾಹತ ಚಕ್ರವೆಂಬ) ಪುಷ್ಪರಸದಲ್ಲಿ – ಮುಖ್ಯವಾಗಿ ಆಸಕ್ತವಾದ
ಮಹತಾಂ	ಮಹಾತ್ಮರ
ಮಾನಸ ಚರಂ	ಮನಸ್ಸೆಂಬ ಮಾನಸ ಸರೋವರದಲ್ಲಿ– ಸಂಚರಿಸುತ್ತಿರುವ
(ತತ್)	(ಮನಸ್ಸಿನಲ್ಲಿ)
ಕಿಮಪಿ	(ಕಿಂ+ಅಪಿ) ಹೀಗೆಂದು ಹೇಳಲು ಅಸಾಧ್ಯವಾದ ಯಾವುದೋ ಒಂದು
ಹಂಸದ್ವಂದ್ವಂ	ಪಾರ್ವತೀ ಪರಮೇಶ್ವರರೆಂಬ ಹಂಸದಂಪತಿಗಳನ್ನು
ಭಜೇ	ಧ್ಯಾನಮಾಡುತ್ತೇನೆ

ತಾತ್ಪರ್ಯ

ಎಲೈ ಪೂಜ್ಯಳಾದ ದೇವಿಯೆ, ಅರಳಿದಂಥಾ ಜ್ಞಾನವೆಂಬ ಅನಾಹತ ಚಕ್ರದಲ್ಲಿ ಕಮಲದ ಮಕರಂದವನ್ನೇ ಮುಖ್ಯವಾಗಿ ರಸಾಸ್ವಾದಮಾಡುತ್ತಿರುವ (ಹೀರುತ್ತಿರುವ) ಹಾಗೂ ಮಹಾತ್ಮರ ಮನಸ್ಸೆಂಬ ಮಾನಸ ಸರೋವರದಲ್ಲಿ ವಿಹರಿಸುತ್ತಿರುವ ಅನಿರ್ವಚನೀಯವಾದ ಪಾರ್ವತೀ ಪರಮೇಶ್ವರರೆಂಬ ಹಂಸದಂಪತಿಯನ್ನು (ಶಿವಶಕ್ತಿ ಸಂಪುಟತತ್ತ್ವವನ್ನು) ಧ್ಯಾನಮಾಡುತ್ತೇನೆ. ಆ ಹಂಸಜೋಡಿಯ ಆಲಾಪದಿಂದ (ಮಾತುಕಥೆಗಳ ದೆಸೆಯಿಂದ) ಹದಿನೆಂಟು ವಿದ್ಯೆಗಳು ಪರಿಣಾಮಗೊಂಡಿವೆ. ಇಂಥ ಪಾರ್ವತೀ ಪರಮೇಶ್ವರರೆಂಬ ಹಂಸಜೋಡಿಯು ಭಕ್ತರ ದೋಷವನ್ನು (ನೀರನ್ನು) ಬಿಟ್ಟು ಅವರ ಸುಗುಣವೆಂಬ ಹಾಲನ್ನು ಸ್ವೀಕರಿಸುತ್ತದೆ. ಇಂಥ ವಿಶಿಷ್ಟಗುಣದ ಹಂಸ ಜೋಡಿಯನ್ನು ನಾನು ಭಜಿಸುತ್ತೇನೆ.

ಪದ್ಯಾನುವಾದ

ಚೆನ್ನರಲ್ದ ಸುಜ್ಞಾನಕಮಲಮಕರಂದವನು
ಸೇವಿಸುತ ಯೋಗೀಶ್ವರರ ಮಾನಸದಲಿ ಸಂ-
ಚರಿಪ ಹಂಸದ್ವಂದ್ವವನು ನಾನು ಭಜಿಸುವೆನು, ಹೇ ದೇವಿ, ಭಕ್ತಿಯಿಂದ;
ಯಾವ ಹಂಸದ್ವಯದ ಸಲ್ಲಾಪದಿಂದಹುದೊ
ಹದಿನೆಂಟು ವಿದ್ಯೆಗಳ ಪರಿಣತಿಯು, ನೀರುಳಿಸಿ
ಪಾಲುಣುವ ತೆರದಿ ದೋಷವವನುಳಿದು ಗುಣವನೇ ಕೊಳುವ ಆ ಹಂಸಗಳನು
॥ ೩೮ ॥

ಟಿಪ್ಪಣಿಗಳು

೧. **ಅಷ್ಟಾದಶಗುಣಿತ ವಿದ್ಯಾಪರಿಣತಿಃ ಅಭವತ್**
(ಹದಿನೆಂಟು ವಿದ್ಯೆಗಳ ಪರಿಣಾಮವು ಉಂಟಾಗಿವೆ)
ಹದಿನೆಂಟು ವಿದ್ಯೆಗಳ ವಿವರ ಹೀಗಿದೆ;
೧. ಶಿಕ್ಷಾ ೨. ಕಲ್ಪ ೩. ವ್ಯಾಕರಣ ೪. ನಿರುಕ್ತ ೫ ಜ್ಯೋತಿಷಂ ೬. ಛಂದಸ್ ೭. ಋಗ್ವೇದ ೮. ಯಜುರ್ವೇದ ೯. ಸಾಮವೇದ ೧೦. ಅಥರ್ವಣವೇದ ೧೧. ಪೂರ್ವಮೀಮಾಂಸಾ ೧೨. ನ್ಯಾಯಶಾಸ್ತ್ರ ೧೩. ಪುರಾಣ ೧೪. ಧರ್ಮಶಾಸ್ತ್ರ ೧೫. ಆಯುರ್ವೇದ ೧೬. ಧನುರ್ವೇದ ೧೭. ಗಂಧರ್ವವೇದ ೧೮. ಅರ್ಥಶಾಸ್ತ್ರ.

೨. **ಸಮುನ್ಮೀಲತ್ಸಂವಿತ್ಕಮಲಮಕರಂದೈಕರಸಿಕಂ**
ಸಮುನ್ಮೀಲತ್ ಎಂದರೆ ಚೆನ್ನಾಗಿ ವಿಕಾಸಗೊಳ್ಳುತ್ತಿರುವ ಎಂದರ್ಥ. ಸಂವಿತ್ ಎಂದರೆ ಜ್ಞಾನ. ಕಮಲಂ ಎಂದರೆ ಆ ಜ್ಞಾನರೂಪವಾದ ತಾವರೆ. ಮಕರಂದೈಕರಸಿಕಂ ಎಂದರೆ ಅದರಲ್ಲಿರುವ ಪುಷ್ಪರಸವೊಂದೇ ಮುಖ್ಯ ಎಂದರ್ಥ.

(ಶೇ-ಪುಟ ೧೪೮)

೩. **ಹಂಸದ್ವಂದ್ವಂ ಕಿಮಪಿ**
ಶಿವ-ಶಕ್ತಿ ಸಂಪುಟಿತವಾದ ೨೬ನೆಯ ತತ್ವವೇ ಹಂಸ ಜೋಡಿ ಎಂದರ್ಥ. ಹಂಸ ಎಂಬ ಶಬ್ದದಲ್ಲಿ 'ಹ' ಕಾರವು ಶಿವನನ್ನೂ 'ಸ' ಅಕ್ಷರವು ಶಕ್ತಿಯನ್ನು ನಿರ್ದೇಶಿಸುತ್ತದೆ. ಆದ್ದರಿಂದ ಹಂಸಶಬ್ದವು

ಶಿವಶಕ್ತಿಯರ ಸಂಯೋಗವನ್ನು ಸೂಚಿಸುತ್ತದೆ. ಈ ಜೋಡಿಯನ್ನು ಮಹಾತ್ಮರ ಮನಸ್ಸಿನಲ್ಲಿ ಮಾನಸಸರೋವರದಲ್ಲಿ ವಿಹರಿಸುತ್ತಿರುವ ಜೋಡಿಯೆಂದು ಆಲಂಕಾರಿಕವಾಗಿ ಹೇಳಿದೆ. ಈ ದೇವತಾದ್ವಯರು ಛಂದಸ್ಸು ಮತ್ತು ಲಯತರಂಗಗಳನ್ನು (ಸತ್ತ್ವಗುಣವನ್ನು) ಮಧುರಾಲಾಪರೂಪದಲ್ಲಿ ಯೋಗಿಗಳ ಹೃದಯದಲ್ಲಿ ಶಾಸ್ತ್ರ ರೂಪದಲ್ಲಿ, ೧೮ ವಿದ್ಯೆಗಳ ಸ್ವರೂಪದಲ್ಲಿ ಕಾಣಿಸಿಕೊಳ್ಳುತ್ತಾರೆ. ಹಂಸವು ಹಾಲು ಮತ್ತು ನೀರನ್ನು ಬೇರ್ಪಡಿಸುವ ಹಾಗೆ ಶಿವಪಾರ್ವತಿಯರು ವಸ್ತುವಿನ ಗುಣದೋಷಗಳನ್ನು ಬೇರ್ಪಡಿಸುವ ಹಂಸಮಿಥುನರಾಗಿದ್ದಾರೆ.

(ಶೇ–ಪುಟ ೯೩)

೪. **ರೂಪಕಾಲಂಕಾರ**

ಹಂಸದ್ವಂದ್ವಂ ಎಂದಲ್ಲಿ ರೂಪಕಾಲಂಕಾರವಿದೆ. ಪರಮ ಹಂಸಸ್ವರೂಪರಾದ ಶಿವಶಿವೆಯರನ್ನು ಹಂಸವೆಂಬುದಾಗಿ ರೂಪಕ ಮಾಡಿಕೊಂಡಿರುವುದು ಸಂವಿತ್ತನ್ನು (ಜ್ಞಾನವನ್ನು) ಕಮಲವೆಂಬುದಾಗಿ ರೂಪಕವಮಾಡಲು ಕಾರಣವಾಗಿದೆ. ಆದುದರಿಂದ ಜ್ಞಾನವು ಕಮಲವೆಂಬುದಾಗಿ ರೂಪಕವಾಗಿಸಿದ್ಧವಾಗುವುದರಿಂದ ಆನಂದ ರೂಪರಸಕ್ಕೆ ಅಭೇದ ಆರೋಪಿತವಾಗಿ ರೂಪಕವಾಗುತ್ತದೆ ಎಂದರೆ ಇದು ರೂಪಕಾಲಂಕಾರವಾಗುತ್ತದೆ.

(ಶೇ–ಪುಟ ೧೪೪)

೫. ಈ ಶ್ಲೋಕದ ಬಗ್ಗೆ ಎರಡು ಪಂಗಡದವರಲ್ಲಿ ಎರಡು ಬಗೆಯ ಅಭಿಪ್ರಾಯಗಳಿವೆ.

೧. ಸಮಯಮತದವರ ಅಭಿಪ್ರಾಯ ಹೀಗಿದೆ:
ಉಪಾಸಕರು ಪರಮಹಂಸಮಿಥುನವನ್ನು ಅನಾಹತಚಕ್ರವೆಂಬ ಸಂವಿತ್ ಕಮಲದಲ್ಲಿ ಉಪಾಸಿಸುತ್ತಾರೆ.

೨. ಶಂಕರಭಗವತ್ಪಾದರ ಮತ ಹೀಗಿದೆ:
ಅಗ್ನಿಜ್ವಾಲಾರೂಪವಾದ ಪರಮೇಶ್ವರನು ಅಗ್ನಿರೂಪಳೇ ಆದ ತನ್ನ ಶಕ್ತಿಯಿಂದ ಒಂದುಗೂಡಿದವನಾಗಿ ಅನಾಹತಚಕ್ರದಲ್ಲಿ ದೀಪಾಂಕುರದಂತೆ ತೋರಿ ಬೆಳಗುತ್ತಾನೆ.

೬. 'ಸುಭಗೋದಯ'ವೆಂಬ ವ್ಯಾಖ್ಯಾನದಲ್ಲಿ ಭಗವತ್ಪಾದರ ಅಭಿಪ್ರಾಯವನ್ನೇ ಹೀಗೆ ಹೇಳಿದೆ : ಲಕ್ಷ್ಮೀಧರನ ಅಭಿಪ್ರಾಯವೂ ಇದೇ ಆಗಿದೆ.

ಶಿಖಿಜ್ವಾಲಾರೂಪಃ ಸಮಯ ಇಹ ಸೈವಾತ್ರ ಸಮಯಾ
ತಯಾ ಸಂಭೇದೋ ಮೇ ವಿಶತು ಹೃದಯಾಬ್ಜೈಕನಿಲಯಃ

"ಸಮಯನು (ಪರಮೇಶ್ವರನು) ಅಗ್ನಿ ಜ್ವಾಲಾರೂಪನಾಗಿದ್ದಾನೆ ಸಮಯಾದೇವಿಯು (ಪರಮೇಶ್ವರಿಯು) ಅಗ್ನಿರೂಪಳೇ ಆಗಿದ್ದಾಳೆ. ಹೃದಯಕಮಲವನ್ನೇ ಮುಖ್ಯ ನೆಲೆಯಾಗುಳ್ಳ ಆ ಶಿವಶಿವೆಯರ ಸಂಪುಟವು (ಒಟ್ಟುಗೂಡಿರುವ ಹಂಸಜೋಡಿ) ನನಗೆ ಶ್ರೇಯಸ್ಸನ್ನು ನೀಡಲಿ".

(ತು–ಪುಟ ೨೪೫)

೭. **ಅನಾಹತಚಕ್ರದಲ್ಲಿರುವ ದೇವಿಯ 'ರಾಕಿಣೀ' ಸ್ವರೂಪ**

ಪರಮೇಶ್ವರಿಯು ಅನಾಹತಾಬ್ಜನಿಲಯೆ. ಅನಾಹತಚಕ್ರದಲ್ಲಿ ರಾಕಿಣ್ಯಾಂಬಾ ಸ್ವರೂಪಿಣಿಯಾಗಿ ಇರುವಳು. ಈಕೆ ಅನಾಹತಚಕ್ರದಲ್ಲಿ ದ್ವಾದಶದಳ ಕಮಲದಲ್ಲಿ ನೆಲೆಸಿದ್ದು ಶ್ಯಾಮವರ್ಣದವಳೂ ಎರಡು ಮುಖವುಳ್ಳವಳೂ ಕೋರೆದಾಡೆಗಳಿಂದ ಉಜ್ವಲಳಾಗಿರುವಳು, ಅಕ್ಷಮಾಲಾದಿ ಧರಿಸಿದವಳೂ, ರುಧಿರದಲ್ಲಿ ಸ್ಮಿತಳೂ ಕಾಲರಾತ್ರ್ಯಾದಿಶಕ್ತಿಗಳಿಂದ ಆವೃತಳಾಗಿರುವಳೂ ಸ್ನಿಗ್ಧಾಹಾರದಲ್ಲಿ ಆಸಕ್ತಿ ಉಳ್ಳವಳೂ ಮಹಾವೀರೇಂದ್ರರಿಗೆ ವರಗಳನ್ನು ಕೊಡುವವಳು ಆಗಿರುವಳು. ರಾಕಿಣಿಗೆ ಎರಡು ಮುಖಗಳು ಎಂದರೆ ಅನಾಹತಚಕ್ರವು ವಾಯುತತ್ತ್ವಕ್ಕೆ ಪ್ರಧಾನವಾಗಿರುವುದರಿಂದಲೂ ವಾಯುವು ಆಕಾಶತತ್ತ್ವದಿಂದ ಉತ್ಪತ್ತಿಯಾಗಿರುವುದಿಂದಲೂ, ಆಕಾಶ–ವಾಯುತತ್ತ್ವಗಳೆರಡರ ಸೂಚಕವಾಗಿ ಅನಾಹತಚಕ್ರದ ದೇವತೆಗೆ ರಾಕಿಣಿ ಎಂದು ಹೆಸರು. ಅನಾಹತಚಕ್ರವು ವಾಯುತತ್ತ್ವದ್ದಾಗಿ ಪ್ರಾಣಮಯಕೋಶಕ್ಕೆ ಪ್ರಧಾನವಾಗಿರುವುದರಿಂದ ಪ್ರಾಣಸೌಖ್ಯದಿಂದ ಉಂಟಾಗುವ ದೇಹ ಸೌಖ್ಯವನ್ನೂ ಪರಾಕ್ರಮವನ್ನೂ ಅನುಗ್ರಹಿಸುವ ದೇವಿಯಾಗಿರುವಳು. ಪರಮಾಧಿಕವಾದ ಸೌಖ್ಯ ಎಂದರೆ ಪ್ರಾಣವು ಪ್ರಣವಸ್ವರೂಪವಾಗುವ ಸುಖವನ್ನು ಕೊಡುವಳು.

(ಶ್ರೀ–ಪುಟ ೨೨೧)

೮. **ಹಂಸ ದ್ವಂದ್ವಂ**

ಸೋಽಹಂ = ಹಂಸಃ ಹ= ಶಿವ, ಸಃ = ಶಕ್ತಿ. ಆದ್ದರಿಂದ ಶಿವಶಕ್ತಿಯರನ್ನು ಹಂಸೇಶ್ವರ ಹಂಸೇಶ್ವರಿ ರೂಪದಲ್ಲಿ ಭಜಿಸಲಾಗುತ್ತದೆ. ಆದ್ದರಿಂದ 'ಭಜೇಹಂ ಹಂಸದ್ವಂದ್ವಂ' ಎನ್ನುತ್ತಾರೆ. ಹಂಸದ್ವಂದ್ವವನ್ನು

ಜೀವಾತ್ಮ ಪರಮಾತ್ಮಗಳ ದ್ವಂದ್ವವೆಂದು ತಿಳಿಯಲಾಗಿದೆ. ಹಂಸಮಿಥುನಗಳ ಆಲಾಪದಲ್ಲಿಅಷ್ಟಾದಶವಿದ್ಯೆಗಳು ಅಂತರ್ಗತವಾಗಿವೆ.

(ತು–ಪುಟ ೨೪೬)

೯. ಇಲ್ಲಿ ಹಂಸದ್ವಂದ್ವಂ ಎಂದರೆ ಬೇರೆ ಯಾರೂ ಅಲ್ಲ ಶಿವಶಕ್ತಿಗಳೇ. ಅವರ ಉಚ್ಛ್ವಾಸ ನಿಶ್ವಾಸಗಳೇ, ಅದರಿಂದಲೇ ಅಷ್ಟಾದಶವಿದ್ಯೆಗಳೂ ನಾದರೂಪಜ್ಞಾನದಲ್ಲಿರುವ ಸರ್ವವಿದ್ಯೆಗಳೂ ರೂಪುಗೊಳ್ಳುತ್ತವೆ. ಪ್ರಾಪಂಚಿಕವಾಗಿ ಅರ್ಥಮಾಡಿದರೆ ಮಾನಸಸರೋವರದಲ್ಲಿರುವ ಕಮಲಗಳ ಮಕರಂದವನ್ನೇ ಆಹಾರವಾಗಿ ತೆಗೆದುಕೊಳ್ಳುತ್ತವೆ. ಮಿಕ್ಕ ಪಕ್ಷಿಗಳಂತೆ ಮೀನು ಮುಂತಾದವನ್ನು ತಿನ್ನುವುದಿಲ್ಲ.

ಮಾನಸಸರೋವರವೆಂಬುದು ನಮ್ಮ ಮನಸ್ಸು. ನಮ್ಮ ಹೃದಯವೇ ಸ್ವಚ್ಛ ಕಮಲ. ನಮ್ಮ ಶ್ವಾಸವೇ ಹಂಸದ್ವಯ. ಆ ಶ್ವಾಸವನ್ನು ಕ್ರಮವಾಗಿ ನಡೆಸಿ ಸದಾಲೋಚನೆಗಳಿಂದ ಸದಾಶಯಗಳಿಂದ ಸದ್ಭಾವನೆಗಳಿಂದ ನಮ್ಮಲ್ಲಿನ ಪ್ರಾಪಂಚಿಕ ಪ್ರಲೋಭಗಳನ್ನು ದುರಾಸೆಗಳನ್ನು ಮೋಹಗಳನ್ನು ಕ್ಷೀರದಿಂದ ನೀರನ್ನು ಬೇರ್ಪಡಿಸುವಂತೆ ಬೇರ್ಪಡಿಸಬಲ್ಲೆವಾದರೆ ನಮ್ಮ ಹೃದಯಕಮಲದಲ್ಲಿನ ಮಕರಂದವನ್ನು ಸೇವಿಸುತ್ತಾ ಹಂಸದ್ವಯವು ನಮ್ಮ ಮನೋಕಾಶದಲ್ಲಿ ಕಾಣಿಸಿಕೊಳ್ಳುತ್ತದೆ.

(ಪ–ಪುಟ ೩೧೬)

೧೦. ಹಂಸದ್ವಯ ಎಂದರೆ ಇಲ್ಲಿ ಹಂಸೇಶ್ವರಿ–ಹಂಸೇಶ್ವರ, ತ್ರಿಪುರಸುಂದರ–ತ್ರಿಪುರಸುಂದರಿಯರು, ಆನಂದಭೈರವಿ–ಆನಂದಭೈರವ, ಸಮಯಿನೀ ಸಮಯ, ಶ್ರೀದೇವಿ–ಮಹಾದೇವ, ಜಗನ್ಮಾತಾ–ಜಗತ್ಪಿತಾ ಇತ್ಯಾದಿ ಶಿವ–ಶಕ್ತಿಯರು ಎಂದರ್ಥ.

(ಪ–ಪುಟ ೩೧೬)

೧೧. ಈ ಶ್ಲೋಕದಲ್ಲಿ (೩೮) ಸೂಚಿತವಾಗಿರುವ ಹಂಸಮಿಥುನವನ್ನು (ಶಿವ–ಶಕ್ತಿಯನ್ನು) ಹಂಸೇಶ್ವರ – ಹಂಸೇಶ್ವರಿ ಎಂದು ಗುರುತಿಸುತ್ತಾರೆ.

೧. ಖಗೇಶ್ವರ	೭ ಮೀನ	೧೩. ತೀವ್ರ
೨. ಭದ್ರಾ	೮. ಮಲ್ಲಿಕಾ	೧೪. ಲೀಲಾ
೩. ಕೂರ್ಮ	೯. ಜ್ಞಾನ	೧೫. ಪ್ರಿಯಾ
೪. ಆಧಾರ	೧೦. ವಿಮಲಾ	೧೬. ಕುಮದಾ
೫. ಮೇಷ	೧೧. ಮಹಾನಾದ	೧೭. ಕಾಲಿಕಾ
೬. ಕೋಶ	೧೨. ಶಾರ್ವರೀ	೧೮. ಮೇನಕಾ

೧೯. ಡಾಮರ	೩೧. ಆಧಾರೇಶ	೪೩. ಶಿಖೇಶಾ
೨೦ ಡಾಕಿನೀ	೩೨. ರಾಕಾ	೪೪. ಸರ್ವೇಶಾ
೨೧. ರಾಮರ	೩೩. ಚಕ್ರೇಶ	೪೫. ವರ್ಮನ್
೨೨. ರಾಕಿನೀ	೩೪. ಬಿಂದು	೪೬. ಬಹುರೂಪಾ
೨೩. ಲಾಮರ	೩೫. ಕುಕುರ	೪೭. ಆಸ್ತ್ರೇಶ
೨೪. ಲಾಕಿನಿ	೩೬. ಕುಲಾ	೪೮. ಮಹತ್ತರೀ
೨೫. ಕಾಮರ	೩೭.ಮಾಯಾತ್ರೀಶ	೪೯. ಪರಗುರು
೨೬. ಕಾಕಿನೀ	೩೮. ಕುಬ್ಜಿಕಾ	೫೦. ಮಂಗಲಾ
೨೭. ಸಾಮರ	೩೯. ಹೃದೀಶ	೫೧. ಪರಾಧಿಗುರು
೨೮. ಸಾಕಿನೀ	೪೦. ಕಾಮಕಲಾ	೫೨. ಕೋಶತಾ
೨೯. ಹಾಮರ	೪೧. ಶಿರೀಶ	೫೩. ಪೂಜ್ಯಗುರು
೩೦. ಹಾಕಿನೀ	೪೨. ಕುಲದೀಪಿಕಾ	೫೪. ರಾಮಾ

(ಸು–ಪುಟ ೧೫೧)

೧೨. ಯದಾಲಾಪಾತ್ ಅಷ್ಟಾದಶ ಗುಣಿತ ವಿದ್ಯಾಪರಿಣತಿಃ

ನಮ್ಮೆದೆಯಲ್ಲಿ ಅಡಗಿರುವ ಈ ಹಂಸಮಿಥುನಗಳ ಪರಸ್ಪರ ಆಲಾಪವೇ ಮುಂದೆ ವೇದಾದಿ ೧೮ ವಿದ್ಯಾಸ್ಥಾನಗಳಾಗಿ ಅರಳಿಕೊಂಡವಂತೆ.

ಈ ಮುನ್ನ ಸೂಚಿಸಿದಂತೆ ಚಲನೆ, ಉಸಿರಾಟ ಮತ್ತು ನಾದ ಈ ಮೂರರ ಮುಪ್ಪುರಿಯನ್ನು ಹೃದಯದ ಮಿಡಿತ ಎಂದು ಒಂದಾಗಿ ಬಣ್ಣಿಸಬಹುದು. ಈ ಮುಚ್ಚುರಿಯನ್ನು ಕಾವ್ಯಮಯವಾದ ಹಂಸಗಳ 'ಆಲಾಪ' ಎನ್ನುತ್ತಿದ್ದಾರೆ. ಈ ಆಲಾಪವೇ ನಾದಪ್ರಪಂಚ, ಶಬ್ದಾರ್ಥ ಪ್ರಪಂಚ. ವಾಗರ್ಥ ತರಂಗಗಳೇ ೧೮ ವಿದ್ಯಾಸ್ಥಾನಗಳಾಗಿ (ವೇದಗಳು ೪ ಉಪವೇದಗಳು ೪ ವೇದಾಂಗಗಳು ೬ ಮತ್ತು ಪುರಾಣ ನ್ಯಾಯ, ಮೀಮಾಂಸಾ ಮತ್ತು ಧರ್ಮ ಶಾಸ್ತ್ರಗಳೆಂದು ೧೮ ಪರಿಣಮಿಸಿದವು.)

(ತೋ–ಪುಟ ೩೧೪

ಯಂತ್ರಾರಾಧನೆ (ಶ್ಲೋಕ-೩೮)



ಯಂತ್ರರಚನೆ : ಚಿನ್ನದ ತಗಡಿನಲ್ಲಿ ವೃತ್ತಾಕಾರವನ್ನು ಬರೆದು, ನಡುವೆ ಕಂ ಎಂಬ ಬೀಜಾಕ್ಷರ ಮಂತ್ರವನ್ನು ಬರೆಯಬೇಕು.

ಪೂಜೆ : ಎಳ್ಳೆಣ್ಣೆ ದೀಪಬೆಳಗಿ ಕೆಂಪು ಹೂಗಳಿಂದ ಲಲಿತಾತ್ರಿಶತೀ ಅರ್ಚನೆ, ದುರ್ಗಾ ಅಷ್ಟೋತ್ತರ ಕುಂಕುಮಾರ್ಚನೆಗಳನ್ನು ಮಾಡಬೇಕು.

ನೈವೇದ್ಯ : ಉದ್ದಿನವಡೆ, ತೆಂಗಿನಕಾಯಿ, ಬಾಳೆಹಣ್ಣು, ತಾಂಬೂಲ

ಜಪ : ೪೫ ದಿನಗಳ ಕಾಲ ಪ್ರತಿದಿನ ೧೦೦೦ ಬಾರಿ ಶ್ಲೋಕವನ್ನು ಪಾರಾಯಣ ಮಾಡಬೇಕು. ಮಂತ್ರಿಸಿದ ಜಲವನ್ನು ರೋಗಿಯ ಮೇಲೆ ಪ್ರೋಕ್ಷಿಸಬೇಕು

ಫಲ : **ಬಾಲಾರಿಷ್ಟದೋಷ ನಿವಾರಣೆ.**

ಶ್ಲೋಕ–೩೯

ಸ್ವಾಧಿಷ್ಠಾನಚಕ್ರದಲ್ಲಿ ದೇವಿಯ ಧ್ಯಾನ

ತವ ಸ್ವಾಧಿಷ್ಠಾನೇ ಹುತವಹಮಧಿಷ್ಠಾಯ [೧]ನಿರತಂ
ತಮೀಡೇ ಸಂವರ್ತಂ [೨]ಜನನಿ ಮಹತೀಂ ತಾಂ ಚ ಸಮಯಾಮ್।
ಯದಾಲೋಕೇ ಲೋಕಾನ್ ದಹತಿ ಮಹತಿ [೩]ಕ್ರೋಧಕಲಿತೇ
[೪]ದಯಾದ್ರಾ್ರ ಯಾ ದೃಷ್ಟಿಶ್ಶಿಶಿರಮುಪಚಾರಂ [೫]ರಚಯತಿ ॥ ೩೯ ॥

ಪಾಠಾಂತರ

೧. (ನಿರತಂ) = ನಿಯತ (ಸು)
೨. (ಜನನಿ) = ಜನನೀಂ (ಸು)
೩. (ಕ್ರೋಧ ಕಲಿತೇ) = ಕ್ರೋಧಕಲಿಲೇ (ಸು)
೪. (ದಯಾದ್ರಾ್ರ ಯಾ ದೃಷ್ಟಿಃ) = ದಯಾದ್ರಾ್ರ ದೃಷ್ಟೀ (ಸು)
೫. (ರಚಯತಿ) = ರಚಯಸಿ (ಸು)

ಪದವಿಭಾಗ

ತವ, ಸ್ವಾಧಿಷ್ಠಾನೇ, (ಹುತವಹಮಧಿಷ್ಠಾಯ) = ಹುತವಹಮ್+ಅಧಿಷ್ಠಾಯ, ನಿರತಂ, (ತಮೀಡೇ) = ತಮ್+ಈಡೇ, ಸಂವರ್ತಂ, ಜನನಿ, ಮಹತೀಂ, ತಾಂ, ಚ, ಸಮಯಾಮ್, (ಯದಾಲೋಕೇ) = ಯತ್+ಆಲೋಕೇ, ಲೋಕಾನ್, ದಹತಿ, ಮಹತಿ, ಕ್ರೋಧಕಲಿತೇ, (ದಯಾದ್ರಾ್ರ) = ದಯಾ + ಆದ್ರಾ್ರ, ಯಾ, (ದೃಷ್ಟಿಶ್ಶಿಶಿರಮುಪಚಾರಂ) = ದೃಷ್ಟಿಃ+ಶಿಶಿರಮ್+ಉಪಚಾರಂ, ರಚಯತಿ.

ಅನ್ವಯಾರ್ಥ

(ಹೇ ಜನನಿ)	(ಎಲೈ) ತಾಯಿಯೇ,
ತವ ಸ್ವಾಧಿಷ್ಠಾನೇ	ನಿನ್ನ ಸ್ವಾಧಿಷ್ಠಾನ ಚಕ್ರದಲ್ಲಿ
ಹುತವಹಂ	ಅಗ್ನಿಯನ್ನು
(ಸಂವರ್ತಂ) ಅಧಿಷ್ಠಾಯ	ಪ್ರಳಯ ಕಾಲಾಗ್ನಿಯನ್ನಾಗಿ ಭಾವಿಸಿ
ತಂ	ಆ ಈಶ್ವರನನ್ನು
ನಿರತಂ ಈಡೇ	(ಆ ಅಗ್ನಿಯಲ್ಲಿ) ಸದಾ ಧ್ಯಾನಿಸುತ್ತೇನೆ

ಸಮಯಾಂ ಚ	ಸಮಯ ಎಂಬುವಳನ್ನೂ
ತಾಂ	ಆ ಸಂವರ್ತಾಗ್ನಿ ರೂಪಳಾದ ಅವಳನ್ನು
ಮಹತೀಂ (ಚ)	ಮಹಚ್ಛಬ್ದ ವಾಚ್ಯಳಾದ ದೇವಿಯನ್ನು – (ಕೂಡ)
(ಈಡೇ)	(ಸ್ತೋತ್ರ ಮಾಡುತ್ತೇನೆ)
ಮಹತಿ	ಅತ್ಯಧಿಕವಾದಂಥ
ಯತ್ ಕ್ರೋಧಕಲಿತೇ	ಯಾವ ಕೋಪದಿಂದ–ವ್ಯಾಪ್ತವಾದಂಥಾ
ಆಲೋಕೇ	ಯಾವ ಈಶ್ವರನ ದೃಷ್ಟಿಯು
ಲೋಕಾನ್	ಸಕಲಲೋಕಗಳನ್ನೂ
ದಹತಿ ಸತಿ	ಸುಡುತ್ತಿರಲಾಗಿ
	ಯಾವ (ನಿನ್ನ)
ದಯಾರ್ದ್ರಾ ಯಾ ದೃಷ್ಟಿಃ	(ದಯಾ+ಆರ್ದ್ರಾ) ಕೃಪೆಯಿಂದ – ನೆನೆದ ಕಟಾಕ್ಷವು
ಶಿಶಿರಮುಪಚಾರಂ	(ಶಿಶರಂ+ಉಪಚಾರಂ) ತಂಪಾಗಿರುವ ಉಪಚಾರವನ್ನು
ರಚಯತಿ	ಮಾಡುತ್ತದೆಯೋ
(ಸಾ)	(ಅದು)
(ತ್ವದೀಯಾ)	(ನಿನ್ನ ಸಂಬಂಧಿಯಾದಂಥ)
(ದೃಷ್ಟಿಃ)	(ದೃಷ್ಟಿಯೆಂಬುದಾಗಿ)
(ಜಾನಾಮಿ)	(ತಿಳಿದಿರುತ್ತೇನೆ)

ತಾತ್ಪರ್ಯ

ನಿನ್ನ ಸ್ವಾಧಿಷ್ಠಾನಚಕ್ರದಲ್ಲಿ ಅಗ್ನಿಯನ್ನು ಪ್ರಳಯಕಾಲಾಗ್ನಿಯನ್ನಾಗಿ ಭಾವಿಸಿ ಪ್ರಸಿದ್ಧನಾದ ಸಂವರ್ತಾಗ್ನಿಯೆಂಬ ಆ ಪರಮೇಶ್ವರನನ್ನು ನಾನು ಯಾವಾಗಲೂ ಸ್ತುತಿಸುತ್ತೇನೆ. ಹಾಗೆಯೇ ಮಹತ್ ಎಂಬ ಶಬ್ದದಿಂದ ಕರೆಯಲ್ಪಡುವ ಮಹಾತ್ಮಳಾದ ಸಮಯಾದೇವಿಯನ್ನೂ ಸ್ತುತಿಸುತ್ತೇನೆ. ಪ್ರಳಯಕಾಲದಲ್ಲಿ ಅತ್ಯಂತ ಭಯಂಕರವಾಗಿ ಕ್ರೋಧದಿಂದ ವ್ಯಾಪ್ತನಾದಂಥ ಈಶ್ವರನ ಭೀಕರನೋಟವು ಸಕಲಲೋಕಗಳನ್ನು ಸುಡುತ್ತಿರಲಾಗಿ ದಯಾರ್ದ್ರವಾದ ನಿನ್ನ ದೃಷ್ಟಿಯು ಶೈತ್ಯೋಪಚಾರವನ್ನು ಮಾಡುತ್ತದೆಯೋ ಅಂತಹ ದೃಷ್ಟಿಯ ನಿನ್ನನ್ನು ನಾನು ಸದಾ ಸ್ತುತಿಸುತ್ತೇನೆ.

ಪದ್ಯಾನುವಾದ

ಹೇ ಜನನಿ! ನಿನ್ನ* ಸ್ವಾಧಿಷ್ಠಾನ ಚಕ್ರದಲಿ
ಹುತವಹನನಾಶ್ರಯಿಸಿಪ್ರೊಡನೆ ಸಂವರ್ತನನು
ನುತಿಸುವೆನು ನಿರತ, ಜೊತೆಗಧಿಕಶಕ್ತಿ ಸ್ವರೂಪಳು ಸಮಯೆಯನು ನುತಿಪೆನು
ಯಾವಂದವನ ಮಹಾಕ್ರೋಧಯುಕ್ತಾಲೋಕ–
ವದು ಲೋಕಗಳನೆಲ್ಲ ಸುಡತೊಡಗಲಿಹುದಾಗ
ತಂಪನೆರೆಯುವ ದಯಾಮಯವಾದ ನೋಟ ಬೀರುವ ಸಮಯೆಯನ್ನು
ನುತಿಪೆ ॥ ೩೯ ॥

ಟಿಪ್ಪಣಿಗಳು

೧. **ತವ ಸ್ವಾಧಿಷ್ಠಾನೇ**
ಸ್ವಾಧಿಷ್ಠಾನಚಕ್ರವು ಅಗ್ನಿತತ್ತ್ವದ ಉತ್ಪತ್ತಿ ಸ್ಥಾನವು. ಅಲ್ಲಿ ಉತ್ಪನ್ನನಾದ ಅಗ್ನಿಯನ್ನು ಸಂವರ್ತಾಗ್ನಿ ಎಂದು ತಿಳಿಯಲಾಗುತ್ತದೆ. ಆ ಸಂವರ್ತಾಗ್ನಿಯ ಜ್ವಾಲಾಕಾರವಾದ ಶಕ್ತಿರೂಪವೇ ದೇವಿಯು ಎಂದು ಭಾವಿಸಿ ದೇವಿಯನ್ನು ಧ್ಯಾನಿಸಲಾಗುತ್ತದೆ. ಆಮೇಲೆ (ಶಿವಶಕ್ತಿಯರಿಬ್ಬರ ಆಲೋಕದಿಂದ ಜಗತ್ತುಗಳು ಭಸ್ಮವಾಗುತ್ತವೆ). ಅಂತಹ ಜಗತ್ತುಗಳಿಗೆ ಪುನಃ ಪ್ರಸನ್ನಳಾದ ದೇವಿಯ ಕೃಪಾರಸಪೂರಿತದೃಷ್ಟಿಯು (ಮಣಿಪೂರಚಕ್ರದಲ್ಲಿ) ಶೈತ್ಯೋಪಚಾರವನ್ನು ಮಾಡುತ್ತದೆ. ಇದು ಕೇವಲಸ್ತುತಿಯೇ ಹೊರತು ವಾಸ್ತವವಾಗಿ ಅಲ್ಲ.
(ಶೇ–ಪುಟ ೧೫೧)

೨. ಸ್ವಾಧಿಷ್ಠಾನಚಕ್ರಅಗ್ನಿತತ್ತ್ವವುಳ್ಳದ್ದು. ಪ್ರಳಯಾಗ್ನಿ ರೂಪವಾದ ರುದ್ರನು ಅಲ್ಲಿದ್ದಾನೆ. ಅಗ್ನಿಗೆ ಅಧಿದೇವತೆ ರುದ್ರ. ಸಂವರ್ತವೆನ್ನುವ ಪ್ರಳಯಾಗ್ನಿ ಅದೇ ಲೋಕದಲ್ಲಿ ಸಿದ್ಧರನ್ನು ಹಿಡಿಯುವ ಕೋರಿಕೆಗಳು. ತ್ರಿಲೋಕಾಧಿಪತ್ಯ ಅಂದವಾದ ಸ್ವರ್ಗಸುಂದರಿಯರ ವ್ಯಾಮೋಹ ಮೊದಲಾದವು ಪ್ರಳಯಾಗ್ನಿಯಂತೆ ಸಾಧಕನನ್ನು ಸುತ್ತುವರಿಯುತ್ತವೆ. ಇವೆಲ್ಲಾ ತಾಮಸಿಕ ಅಗ್ನಿಗಳು. ಸಾಧಕನನ್ನು ಮೋಕ್ಷಮಾರ್ಗದಿಂದ ದೂರಮಾಡುವ ಪ್ರಳಯಾಗ್ನಿಗಳು. ಈ ಬಗೆಯ ದುರ್ಮಾರ್ಗಗಳೆಂಬ ಪ್ರಳಯಾಗ್ನಿಯಿಂದ ಹೋಗುತ್ತಿರುವ ಸಾಧಕರು ಸರಿದಾರಿಗೆ ಬರಲು ತನ್ನ ಕರುಣಾಪೂರಿತ

ದೃಷ್ಟಿಯಿಂದ ಆ ಅಗ್ನಿಗಳನ್ನು ಉಪಶಮನ ಮಾಡುತ್ತಾಳೆ. ಅಂತಹ ದಯಾಮಯಿ ದೇವಿಯು

(ಪ–ಪುಟ ೩೧೭–೩೧೮)

೩. ತವ ಸ್ವಾಧಿಷ್ಠಾನೇ ಹುತವಹಂ ಸಂವರ್ತಂ ಅಧಿಷ್ಠಾಯ ನಿರತಂ ತಂ ಈಡೇ = ನಿನ್ನ ಸ್ವಾಧಿಷ್ಠಾನ ಚಕ್ರದಲ್ಲಿ ಶ್ರೀ ಚಕ್ರದ ಪ್ರಥಮ ದಶಾರದಲ್ಲಿ ಅಗ್ನಿತತ್ತ್ವವನ್ನು ಧ್ಯಾನಮಾಡಿ 'ಮಹತೀಂ' ಎಂಬ ಶಬ್ದದಿಂದ ಹೇಳಲ್ಪಡುವ ಸಂವರ್ತಾಗ್ನಿ ರೂಪನಾದ ಸಮಯೆಯನ್ನು ಸದಾಸ್ತೋತ್ರ ಮಾಡೇನು.

(ಜ–ಪುಟ ೫೭)

೪. **ಜನನಿ! ಮಹತೀಂ ತಾಂ ಚ ಸಮಯಾಂ**

ದೇವಿಯನ್ನು ಮಹತೀ, ಸಮಯಾ ಎನ್ನುವ ಹೆಸರುಗಳಿಂದ ಕರೆಯಲಾಗುತ್ತದೆ. ಅಲ್ಲದೆ ಸಂವರ್ತೇಶ್ವರನಾದ ಶಿವನಿಗೂ ದೇವಿಗೂ ೫ ವಿಧಗಳಲ್ಲಿ ಸಮತ್ವ (ಸಾಮ್ಯ) ವಿದೆ–ಅವುಗಳ ವಿವರ ಇದು. ೫ ಸಾಮ್ಯರೂಪಗಳು ೧. ಅಧಿಷ್ಠಾನಸಾಮ್ಯ ೨. ಅನುಷ್ಠಾನಸಾಮ್ಯ ೩. ಅವಸ್ಥಾನಸಾಮ್ಯ ೪. ರೂಪಸಾಮ್ಯ ೫ ನಾಮಸಾಮ್ಯ

೧. **ಅಧಿಷ್ಠಾನಸಾಮ್ಯ** : ಶಿವಶಿವೆಯರಿಬ್ಬರೂ ಸ್ವಾಧಿಷ್ಠಾನ ಚಕ್ರದಲ್ಲೇ ಇರುತ್ತಾರೆ.

೨. **ಅನುಷ್ಠಾನ ಸಾಮ್ಯ:** ಲೋಕದಹನಕಾರ್ಯವನ್ನು ಇಬ್ಬರೂ ಮಾಡುತ್ತಾರೆ. ಆದ್ದರಿಂದ ಇಬ್ಬರಿಗೂ ಅನುಷ್ಠಾನದಲ್ಲಿ ಸೌಮ್ಯವಿದೆ.

೩. **ಅವಸ್ಥಾನಸಾಮ್ಯ** : ಸ್ವಾಧಿಷ್ಠಾನದಲ್ಲಿರುವ ಅಗ್ನಿಗೆ ಇಬ್ಬರೂ ಆಶ್ರಯದಾತರಾದ್ದರಿಂದ ಅವಸ್ಥಾಸಾಮ್ಯ ಕಂಡುಬರುತ್ತದೆ. ಹೀಗೆ ಪಂಚವಿಧ ಸಾಮ್ಯಗಳಿರುವುದರಿಂದ ದೇವಿಯನ್ನು ಸಮಯಾ ಎಂದು ಕರೆಯುತ್ತಾರೆ.

೪. **ರೂಪಸಾಮ್ಯ** : ಇಬ್ಬರೂ ಅಗ್ನಿರೂಪರೇ ಆಗಿದ್ದಾರೆ.

೫. **ನಾಮಸಾಮ್ಯ** : ದೇವಿಯನ್ನು ಮಹತೀ ಎಂದು ಕರೆಯುತ್ತಾರೆ. ಮಹತೀ ಎಂದರೆ ಸಂವರ್ತಾಗ್ನಿರೂಪೆ ಎಂದರ್ಥ. ಇನ್ನು ಶಿವನು ಸಹ ಸಂವರ್ತಾಗ್ನಿರೂಪನಾಗಿದ್ದಾನೆ.

(ಪೋ – ಪುಟ ೨೦೩)

೫. ಶಿವಪುರಾಣದಲ್ಲಿ ಹೀಗೇ ಹೇಳಿದೆ 'ಅಹಮಗ್ನಿಶಿರೋ ನಿಷ್ಠಃ ತ್ವಂ ಸೋಮಶಿರಸಿ ಸ್ಥಿತಾ ಅಗ್ನಿಷ್ಟೋಮಾತ್ಮಕಂ ವಿಶ್ವಮಾವಾಭ್ಯಾಂ ಸಮಧಿಷ್ಠಿತಂ'

(ಈಶ್ವರ ಪಾರ್ವತಿಗೆ ಹೇಳುತ್ತಾನೆ: ನಾನು ಶಿರಸ್ಸಿನಲ್ಲಿ ಅಗ್ನಿಯನ್ನು ಧರಿಸಿದ್ದೇನೆ. ನೀನು ಚಂದ್ರನನ್ನು ಶಿರಸ್ಸಿನಲ್ಲಿ ಧರಿಸಿದ್ದೀಯೆ. ವಿಶ್ವವೆಲ್ಲಾ ಅಗ್ನಿಚಂದ್ರಾತ್ಮಕ ರೂಪದಲ್ಲಿ ಪಾರ್ವತೀ ಪರಮೇಶ್ವರರನ್ನು ಒಳಕೊಂಡಿದೆ. ಶಿವ ಅಗ್ನಿಧಾರಿ. ಆದ್ದರಿಂದ ಲೋಕಗಳು ದಗ್ಧವಾದರೆ, ಶಿವೆ ಚಂದ್ರಧಾರಿಣಿ ಆದ್ದರಿಂದ ದಗ್ಧಲೋಕಗಳನ್ನು ಶೈತ್ಯೋಪಚಾರಗಳಿಂದ ಉದ್ಧರಿಸುತ್ತಾಳೆ.

೬. ಸ್ವಾಧಿಷ್ಠಾನಚಕ್ರದೇವತೆಯರಾದ ಸಂವರ್ತೇಶ್ವರ ಸಮಯಾಂಬೆ ಚಕ್ರದ ಮಧ್ಯದಲ್ಲಿರುತ್ತಾರೆ. ಅವರು ೬೨ ತೈಜಸ (ಅಗ್ನಿ) ಮಯೂಖ (ಕಿರಣಗಳಿಂದ) ಆವರಿಸಲ್ಪಟ್ಟಿರುತ್ತಾರೆ. ಹೀಗೆಂದು ಭಾವಿಸಿ ದೇವಿಯನ್ನು ಧ್ಯಾನಿಸಬೇಕು. ಆ ೬೨ ಕಿರಣಗಳ ಹೆಸರುಗಳು ಹೀಗಿವೆ:

೧. ಪರಾಪರ
೨. ಚಂಡೇಶ್ವರ
೩. ಪರಮ
೪. ಚತುಷ್ಮತಿ
೫. ತತ್ಪರೆ
೬. ಗುಹ್ಯಕಾಳೀ
೭. ಅಪರ
೮. ಸಂವರ್ತಾ
೯. ಚಿದಾನಂದಾ
೧೦. ನೀಲಕುಬ್ಜ
೧೧. ಅಘೋರ
೧೨. ಗಂಧ
೧೩. ಸಮರಸ
೧೪. ರಸಾ
೧೫. ಲಲಿತಾ
೧೬. ಸ್ಮರಾ
೧೭. ಸ್ವಚ್ಛ
೧೮. ಸ್ಪರ್ಶ
೧೯. ಭೂತೇಶ್ವರ
೨೦. ಶಬ್ದ
೨೧. ಆನಂದ
೨೨. ಡಾಕಿನೀ
೨೩. ಅಲಸಾ
೨೪. ರತ್ನಾಡಾಕಿನೀ
೨೫. ಪ್ರಭಾನಂದನ
೨೬. ಚಕ್ರಡಾಕಿನೀ
೨೭. ಯೋಗಾನಂದ
೨೮. ಪದ್ಮಡಾಕಿನೀ
೨೯. ಅತೀತ
೩೦. ಕುಬ್ಜಡಾಕಿನೀ
೩೧. ಸ್ವಾದಾ
೩೨. ಪ್ರಚಂಡಡಾಕಿನೀ
೩೩. ಯೋಗೇಶ್ವರ
೩೪. ಚಂಡ
೩೫. ಪಿತೇಶ್ವರ
೩೬. ಕೋಶಲಾ
೩೭. ಕುಲಕುಲೇಶ್ವರ
೩೮. ಪಾವನೀ
೩೯. ಕುಕೇಶ್ವರ
೪೦. ಸಮಯಾ
೪೧. ಶ್ರೀಕಾಂತ
೪೨. ಕಾಮ
೪೩. ಅನಂತ
೪೪. ರೇವತಿ
೪೫. ಶಂಕರ
೪೬. ಜ್ವಾಲಾ
೪೭. ಪಿಂಗಳ
೪೮. ಕರಾಳಾ
೪೯. ಮದಾಖ್ಯಾ
೫೦. ಕುಬ್ಜಿಕಾ
೫೧. ಕರಾಳರಾತ್ರಿಗುರು

೫೨. ಪರಾ	೫೭. ಶಿವಗುರು	೬೧. ಸಮಯಗುರು
೫೩. ಸಿದ್ಧಗುರು	೫೮. ವಿದ್ಯಾ	೬೨. ನಿವೃತ್ತಿ
೫೪. ಶಾಂತ್ಯತೀತ	೫೯. ಮೇಲಾಗುರು	(ಸು=ಪುಟ ೧೫೩)
೫೫. ರತ್ನಗುರು	೬೦. ಪ್ರತಿಷ್ಠಾ	(ಶ್ರೀ–ಪುಟ ೨೨೩)
೫೬. ಶಾಂತಾ		

೭. **ಸ್ವಾಧಿಷ್ಠಾನಚಕ್ರಸ್ಥಿತೆ ದೇವಿಯ ಸ್ವರೂಪ**

ದೇವಿಯು ಸ್ವಾಧಿಷ್ಠಾನಾಂಬುಜಗತೆ. ಕಾಕಿನೀ ಎಂಬ ರೂಪದಿಂದ ಸ್ವಾಧಿಷ್ಠಾನಚಕ್ರದಲ್ಲಿ ದೇವಿ ನೆಲಸಿರುವಳು. ನಾಲ್ಕು ಮುಖವುಳ್ಳವಳು ಶೂಲಾದ್ಯಾಯುಧ ಸಂಪನ್ನಳು; ಪೀತವರ್ಣವುಳ್ಳವಳು; ಅತಿಗರ್ವಿತಳು, ಮೇಧಸ್ಸಿನ ಅಭಿಮಾನಿದೇವತೆ; ಮಧುಪ್ರಿಯಳು. ಬಂಧಿನೀ ಇತ್ಯಾದಿ ಶಕ್ತಿ ದೇವತೆಗಳಿಂದ ಸಮನ್ವಿತಳು, ದಧ್ನನ್ನದಲ್ಲಿ ಆಸಕ್ತಳು. ಇಂತಹ ಕಾಕಿನೀ ರೂಪಧಾರಿಣಿಯಾದ ಶಕ್ತಿಯನ್ನು ಸ್ವಾಧಿಷ್ಠಾನ ಚಕ್ರದಲ್ಲಿ ಧ್ಯಾನಿಸಬೇಕು.

೮. ಸ್ವಾಧಿಷ್ಠಾನ ಚಕ್ರವು ಜಲತತ್ತ್ವಪ್ರಾಧಾನ್ಯವಾಗಿ ಸಪ್ತವ್ಯಾಹೃತಿಗಳಲ್ಲಿ ಭುವಃ ವ್ಯಾಹೃತಿ ಸೂಚಕವಾಗಿ ಸಪ್ತಮಾತೃಕೆಯರಲ್ಲಿ ಇಂದ್ರಾಣಿ ದೇವತೆಯಾಗಿ ಸಪ್ತಸ್ವರಗಳಲ್ಲಿ ದೈವತಸ್ವರಕ್ಕೆ ಪ್ರಧಾನವಾದ ಸ್ಥಳವಾಗಿರುತ್ತವೆ.

(ಶ್ರೀ–ಪುಟ ೨೨೩)

೯. **ಕಾಕಿನೀದೇವತಾಸ್ವರೂಪ**

ಕಾಕಿನೀ ದೇವತೆಯು ೪ ಮುಖವನ್ನು ಉಳ್ಳವಳು. ಏಕೆಂದರೆ ಸ್ವಾಧಿಷ್ಠಾನ ಚಕ್ರವು ಆಕಾಶ, ವಾಯು, ಅಗ್ನಿ, ಅಪ್‌ತತ್ತ್ವಗಳು ನಾಲ್ಕು ಮುಖಗಳಾಗಿವೆ. ಆಕಾಶತತ್ತ್ವದಿಂದ ಉತ್ಪತ್ತಿಯಾಗುತ್ತದೆ. ವಾಯುತತ್ತ್ವದಿಂದ ಅಗ್ನಿಯೂ ಅಗ್ನಿತತ್ತ್ವದಿಂದ ಅಪ್‌ತತ್ತ್ವವೂ ಉತ್ಪತ್ತಿಯಾಗುತ್ತದೆ. ಕಾಕಿನೀ ಶಬ್ದದಲ್ಲಿರುವ 'ಕಾಕಿ' ಶಬ್ದಕ್ಕೆ ಜೀವ, ಪರಬ್ರಹ್ಮ ಶಬ್ದ, ರೋಗರಹಿತ, ಚಿರಂಜೀವಿ ಇತ್ಯಾದಿ ಅರ್ಥಗಳಿರುವುವು. ಸ್ವಾಧಿಷ್ಠಾನ ಚಕ್ರದ ಕೆಳಗಡೆ ಇರುವ ಕುಂಡಲಿನೀಶಕ್ತಿಯು ತನಗೆ ತಾನೇ ಅಧಿಷ್ಠಾನವಾಗಿರುವುದರಿಂದ ಈ ಚಕ್ರಕ್ಕೆ ಸ್ವಾಧಿಷ್ಠಾನಚಕ್ರವೆನ್ನುವರು. ಏಕೆಂದರೆ ಈ ಸ್ವಾಧಿಷ್ಠಾನ ಚಕ್ರದಲ್ಲಿ ೭೨೦೦೦ ನಾಡೀಶಕ್ತಿಗಳು ಸೇರಿ ಆ ಶಕ್ತಿಗಳಿಗೆಲ್ಲಾ ಶಕ್ತಿರೂಪಳಾದ ಕುಂಡಲಿನಿಯೇ ಅಧಿಷ್ಠಾನವಾಗಿರುವುದರಿಂದ ತನಗೆ ತಾನೇ ಅಧಿಷ್ಠಾನವು.

(ಶ್ರೀ–ಪುಟ ೨೨೪)

ಯಂತ್ರಾರಾಧನೆ (ಶ್ಲೋಕ-೩೯)

ಠಂ	ಪಂ	ಪಃ
ಷಂ	ಸಂ	

ಯಂತ್ರರಚನೆ : ಚಿನ್ನದ ತಗಡಿನಲ್ಲಿ ದೀರ್ಘಚತುರಶ್ರ ಚೌಕವನ್ನು ಬರೆಯಬೇಕು. ಅದರಲ್ಲಿ ಠಂ ಪಂ ಪಃ ಷಂ ಸಂ ಮಂತ್ರಾಕ್ಷರಗಳನ್ನು ಬರೆಯಬೇಕು

ಪೂಜೆ : ಪೂರ್ವಾಭಿಮುಖವಾಗಿ ಕುಳಿತು ಲಲಿತಾ ಅಷ್ಟೋತ್ತರ ಕುಂಕುಮಾರ್ಚನೆಗಳನ್ನು ಮಾಡಬೇಕು.

ನೈವೇದ್ಯ : ಹಾಲು, ಜೇನುತುಪ್ಪ, ಹಾಲುಕೀರು

ಜಪ : ೧೨ ದಿನಗಳ ಕಾಲ ದಿನಕ್ಕೆ ೧೦೮ ಬಾರಿ ಈ ಶ್ಲೋಕವನ್ನು ಜಪಿಸಬೇಕು.

ಫಲ : **ದುಸ್ಸ್ವಪ್ನ ದೋಷನಿವಾರಣೆ**

ಶ್ಲೋಕ–೪೦

ಮಣಿಪೂರ ಚಕ್ರದಲ್ಲಿ ದೇವಿಯ ಧ್ಯಾನ

[೧]ತಟಿತ್ತ್ವಂತಂ ಶಕ್ತ್ಯಾ ತಿಮಿರಪರಿಪಂಥಿಸ್ಫುರಣಯಾ
ಸ್ಫುರನ್ನಾನಾರತ್ನಾಭರಣಪರಿಣದ್ಧೇಂದ್ರ ಧನುಷಮ್ ।
[೨]ತವ ಶ್ಯಾಮಂ ಮೇಘಂ ಕಮಪಿ ಮಣಿಪೂರೈಕಶರಣಂ
ನಿಷೇವೇ ವರ್ಷಂತಂ [೩]ಹರಮಿಹಿರತಪ್ತಂ ತ್ರಿಭುವನಮ್ ॥ ೪೦ ॥

ಪಾಠಾಂತರ

೧. (ತಟಿತ್ತ್ವಂತಂ) = ತಡಿತ್ವಂತಂ (ಸು)
೨. (ತವ ಶ್ಯಾಮಂ) = ತಮಃ ಶ್ಯಾಮಂ (ಸು)
೩. (ಹರಮಿಹಿರತಪ್ತಂ) = ಸ್ಮರಮಿಹಿರ ತಪ್ತಂ (ಸು)

ಪದವಿಭಾಗ

ತಟಿತ್ತ್ವಂತಂ, ಶಕ್ತ್ಯಾ, ತಿಮಿರ ಪರಿಪಂಥಿಸ್ಫುರಣಯಾ, (ಸ್ಫುರನ್ನಾನಾ) = ಸ್ಫುರತ್+ನಾನಾ, (ರತ್ನಾಭರಣ) = ರತ್ನ+ಆಭರಣ, (ಪರಿಣದ್ಧೇಂದ್ರಧನುಷಮ್)=ಪರಿಣದ್ಧ+ಇಂದ್ರ ಧನುಷಮ್, ತವ, ಶ್ಯಾಮಂ, ಮೇಘಂ, (ಕಮಪಿ) = ಕಂ+ಅಪಿ, (ಮಣಿಪೂರೈಕಶರಣಂ) = ಮಣಿಪೂರ+ಏಕಶರಣಂ, ನಿಷೇವೇ, ವರ್ಷಂತಂ, ಹರಮಿಹಿರತಪ್ತಂ, ತ್ರಿಭುವನಮ್

ಅನ್ವಯಾರ್ಥ

(ಹೇ ಭಗವತಿ)	(ಎಲೈ ಪೂಜ್ಯಳಾದ ದೇವಿಯೆ),
ತವ	ನಿನ್ನ
ಮಣಿಪೂರೈಕ ಶರಣಂ	(ಮಣಿಪೂರ+ಏಕಶರಣಂ) ಮಣಿಪೂರ ಚಕ್ರ–ಮುಖ್ಯ ಸ್ಥಾನವಾಗಿಯುಳ್ಳ
ತಿಮಿರಪರಿಪಂಥಿಸ್ಫುರಣಯಾ	ಕತ್ತಲೆಗೆ – ಶತ್ರುವಾದ (ನಾಶಕವಾದ) ಕಾಂತಿಯುಳ್ಳ
ಶಕ್ತ್ಯಾ ತಟಿತ್ವಂತಂ	ಶಕ್ತಿಯೆಂಬ ಮಿಂಚುಳ್ಳ

ಸ್ಫುರನ್ನಾನಾರತ್ನಾಭರಣ	(ಸ್ಫುರತ್+ನಾನಾರತ್ನ+ಆಭರಣ) ಪ್ರಕಾಶಿಸುತ್ತಿರುವ–ಅನೇಕ ವಿಧವಾದ–ರತ್ನಗಳ ಆಭರಣಗಳಿಂದ
ಪರಿಣದ್ಧೇಂದ್ರಧನುಷಮ್	(ಪರಿಣದ್ಧ + ಇಂಧ್ರಧನುಷಂ) = ಉಂಟುಮಾಡಲ್ಪಟ್ಟ – ಕಾಮನಬಿಲ್ಲುವುಳ್ಳ
ಶ್ಯಾಮಂ	ಕಪ್ಪಾಗಿರುವ
ಹರಮಿಹಿರತಪ್ತಂ	ಪ್ರಳಯಕಾಲದ ರುದ್ರನೆಂಬ ಸೂರ್ಯನಿಂದ – ತಾಪವನ್ನು ಹೊಂದಿದ
ತ್ರಿಭುವನಂ	ಮೂರುಲೋಕವನ್ನು ಕುರಿತು
ವರ್ಷಂತಂ	ಮಳೆಹುಯ್ಯುತ್ತಿರುವ
ಕಮಪಿ	(ಅನಿರ್ವಚನೀಯವಾದ) ಬಣ್ಣಿಸಲಾಗದ
ಮೇಘಂ	(ಸದಾಶಿವರೂಪವಾದ) ಮೇಘವನ್ನು
ನಿಷೇವೇ	ಧ್ಯಾನಿಸುತ್ತೇನೆ.

ತಾತ್ಪರ್ಯ

ಓ ಭಗವತಿ! ನಿನ್ನ ಮಣಿಪೂರ ಚಕ್ರವೇ ಮುಖ್ಯ ಸ್ಥಾನವಾಗಿ ಉಳ್ಳ ಮಣಿಪೂರ ಚಕ್ರದ ಅಂಧಕಾರವನ್ನು ಪರಿಹಾರ ಮಾಡುವ ಶಕ್ತಿಯೆಂಬ ಮಿಂಚುಳ್ಳ, ಹೊಳೆಯುತ್ತಿರುವ ನಾನಾ ರತ್ನಾಭರಣಗಳಿಂದ ರಚಿತವಾದ ಇಂದ್ರಧನುಸ್ಸುಳ್ಳವನೂ, ಶ್ಯಾಮವರ್ಣದವನೂ ಪ್ರಳಯಕಾಲದರುದ್ರನೆಂಬ ಶಿವನೆಂಬ ಸೂರ್ಯನಿಂದ ಸುಡಲ್ಪಟ್ಟಿರುವ ಮೂರು ಲೋಕಕ್ಕೂ ಮಳೆ ಸುರಿಸುತ್ತಿರುವ ಅನಿರ್ವಚನೀಯುವಾದ ಮೇಘರೂಪನೂ ಆದ ಸದಾಶಿವರೂಪನಾದ ಪಶುಪತಿಯನ್ನು ಸಂಪೂರ್ಣವಾಗಿ ಧ್ಯಾನಿಸುತ್ತೇನೆ.

ಪದ್ಯಾನುವಾದ

ಹೇ ಜನನಿ! ನಿನ್ನ ಮಣಿಪೂರ ಚಕ್ರದಲಿ ನೆಲ–
ಸಿರುವ ಕತ್ತಲೆಗೆ ಹಗೆಯೆನಿಸಿ ಬೆಳಗುವ ಶಕ್ತಿ
ರೂಪವಹ ಮಿಂಚನೊಡಗೂಡಿರುವ, ಥಳಥಳಿಪ ಬಗೆಬಗೆಯ ರತ್ನದಿಂದ
ಸಮೆದೊಡವೆಗಳ ಬಣ್ಣವೆಳಗು ನಿರ್ಮಿಸಿದಂಥ
ಇಂದ್ರಚಾಪವ ತಳದ ಹರಮಿಹಿರನಿಂದ ಬಲು
ಬೆಂದ ಮೂಲೋಕಕ್ಕೆ ಮಳೆಗೆರದ ನೀಲವೇಷ ಸ್ವರೂಪನ ಸೇವಿಪೆ ॥ ೪೦॥

ಟಿಪ್ಪಣಿಗಳು

೧. **ತಿಮಿರಪರಿಪಂಥಿ ಸ್ಫುರಣಯಾ**

ಇಲ್ಲಿ ಸದಾಶಿವನಿಗೆ ಕಾರ್ಮುಗಿಲ ಸಾಮ್ಯವನ್ನೂ ದೇವಿಗೆ ಮಿಂಚಿನ ಸಾಮ್ಯವನ್ನೂ ಕೊಟ್ಟಿದೆ. ಆ ಕಾರ್ಮುಗಿಲ ಗರ್ಜನೆಯನ್ನು ಮತ್ತು ಅದರಿಂದ ಸಂಭವಿಸುವ ಕಗ್ಗತ್ತಲೆಯನ್ನು ಆ ಕಾರ್ಮುಗಿಲಿನೊಡನೆಯೇ ಇರುವ ಮಿಂಚು ಅಡಗಿಸುವಂತೆ ಸದಾಶಿವನ ಭಯಂಕರವಾದ ಕೋಪವನ್ನು ದೇವಿಯ ಕರುಣೆಯು ಅಡಗಿಸಬಲ್ಲದು. ಅಂದರೆ ಸದಾಶಿವನು ಮಣಿಪೂರಚಕ್ರದಲ್ಲಿ ಮೇಘರೂಪದಿಂದ ನೆಲಸಿದರೆ ದೇವಿಯು ಆ ಮೇಘವನ್ನು ಬಿಡದೆ ಇರುವ ಮಿಂಚಿನಂತೆ ನೆಲೆಸಿರುವಳು. ಸಿದ್ಧಘಟಿಕಾದಲ್ಲಿ ಹೇಳಿರುವ ಮಾತಿದು: ಮಣಿಪೂರೈಕವಸತಿಃ ಪ್ರಾವೃಷೇಣ್ಯಃ ಸದಾಶಿವಃ । ಅಂಬುದಾತ್ಮತಯಾ ಭಾತಿ ಸ್ಥಿರ ಸೌದಾಮಿನೀ ಶಿವಾ ॥

(ಗ–ಪುಟ ೪೬)

(ಶ್ರೀ–ಪುಟ ೧೫೨)

೨. ಈ ಶ್ಲೋಕದಲ್ಲಿ ಶಿವನಿಗೆ ಮೇಘೇಶ್ವರನೆಂದೂ ದೇವಿಗೇ ಸೌದಾಮಿನೀ ಎಂದೂ ಹೆಸರು. ಇವರನ್ನು ಅಮೃತೇಶ್ವರ ಮತ್ತು ಅಮೃತೇಶ್ವರಿ ಎಂದೂ ಕರೆಯುತ್ತಾರೆ. ಇವರನ್ನು ಮಣಿಪೂರ ಚಕ್ರಮಧ್ಯದಲ್ಲಿ ೫೨ ಜಲತತ್ತ್ವದ ಮಯೂಖಗಳಿಂದ ಸುತ್ತುವರೆಯಲ್ಪಟ್ಟಿರುವಂತೆ ಭಾವಿಸಿ ಧ್ಯಾನಿಸಬೇಕೆನ್ನುವರು.

ಮಣಿಪೂರಚಕ್ರವು ಅಗ್ನಿತತ್ತ್ವಕ್ಕೆ ಪ್ರಧಾನವಾಗಿ ಸಪ್ತಸ್ವರಗಳಲ್ಲಿ ಪಂಚಮಸ್ವರಕ್ಕೆ ಪ್ರಾಧಾನ್ಯವಾಗಿ ಸಪ್ತವ್ಯಾಹೃತಿಗಳಲ್ಲಿ 'ಸುವ' ವ್ಯಾಹೃತಿಸೂಚಕವಾಗಿ ಸಪ್ತ ಮಾತೃಕೆಯರಲ್ಲಿ ವಾರಾಹಿ ದೇವತೆಯಾಗಿ ಇರುವಳು.

ಮಣಿಪೂರಚಕ್ರದಲ್ಲಿ ದೇವಿಯು ಲಾಕಿನೀ ಶಕ್ತಿರೂಪದಲ್ಲಿ ನೆಲಸಿರುತ್ತಾಳೆ. ಲಾಕಿನೀ ಎಂದರೆ ತಮಸ್ಸನ್ನು ನಾಶಮಾಡಿ ಶ್ರೇಷ್ಠವಾದ ಸತ್ತ್ವವನ್ನು ಅನುಗ್ರಹಿಸುವವಳು. (ಶ್ರೀ–ಪುಟ ೨೨೬)

೩. **ಲಾಕಿನೀ ದೇವಿಸ್ವರೂಪ**

ಈಕೆಯ ತ್ರಿವದನಯುಕ್ತಳೂ ವಜ್ರಾದಿ ಆಯುಧೋಪೇತಳೂ, ಡಾಮರ್ಯಾದಿ ಶಕ್ತಿಗಳಿಂದ ಆವೃತಳೂ ರಕ್ತವರ್ಣದವಳೂ, ಮಾಂಸದ ಅಭಿಮಾನಿ

ದೇವತೆಯೂ ಗುಡಾನ್ನಪ್ರೀತಳೂ, ಸಮಸ್ತಭಕ್ತರಿಗೆ ಸುಖವನ್ನು ಅನುಗ್ರಹಿಸುವವಳೂ ಆಗಿರುವಳು. ಇಂತಹ ದೇವಿಯನ್ನು ಮಣಿಪೂರ ಚಕ್ರದಲ್ಲಿ ಧ್ಯಾನಿಸಬೇಕು.

(ಶ್ರೀ–ಪುಟ ೨೨೬)

೪. ಮಣಿಪೂರ ಚಕ್ರದಲ್ಲಿ ಮೇಘೇಶ್ವರ – ಸೌದಾಮಿನಿಯನ್ನು ೫೨ ಜಲತತ್ವದ ಮಯೂಖಗಳಿಂದ ಸುತ್ತುವರಿದಂತೆ ಭಾವಿಸಿ ಧ್ಯಾನಿಸಬೇಕು.

೫೨ ಮಯೂಖಗಳ ವಿವರ ಹೀಗಿದೆ :

೧. ಸದ್ಯೋಜಾತ	೨೦. ಗಂಗಾ	೩೯. ಶಂಕರ
೨. ಮಾಯಾ	೨೧. ಮಣಿವಾಹ	೪೦. ರತ್ನಮೇಖಲಾ
೩. ವಾಮದೇವ	೨೨. ಸರಸ್ವತಿ	೪೧. ಪಿಂಗಳಾ
೪. ಶ್ರೀ	೨೩. ಅಂಬುವಾಹ	೪೨. ಯಶೋವತಿ
೫. ಅಘೋರ	೨೪. ಕಮಲಾ	೪೩. ಸಾದಾಖ್ಯ
೬. ಪದ್ಮಾ	೨೫. ತೇಜೋಧೀಶಾ	೪೪. ಹಂಸಾನಂದಾ
೭. ತತ್ಪುರುಷ	೨೬. ಪಾರ್ವತಿ	೪೫. ಪರದಿವ್ಯೌಘ
೮. ಅಂಬಿಕಾ	೨೭. ವಿದ್ಯಾವಾಗೀಶ್ವರ	೪೬. ವಾಮ
೯. ಅನಂತ	೨೮. ಚಿತ್ರಾ	೪೭. ಮಾರದಿವ್ಯೌಘ
೧೦. ನಿವೃತ್ತಿ	೨೯. ಚತುರ್ವಿದೇಶ್ವರ	೪೮. ಜ್ಯೇಷ್ಠ
೧೧. ಅನಾಥ	೩೦. ಸುಖಮಾಲಾ	೪೯. ಪೀತೌಘ
೧೨. ಪ್ರತಿಷ್ಠಾ	೩೧. ಉಮಾಗಂಗೇಶ್ವರ	೫೦. ರೌದ್ರಿ
೧೩. ಜನಾಶ್ರಿತ	೩೨. ಮನ್ಮಥ	೫೧. ಸರ್ವೇಶ್ವರ
೧೪. ವಿದ್ಯಾ	೩೩. ಕೃಷ್ಣೇಶ್ವರ	೫೨. ಸರ್ವಮಯೀ
೧೫. ಅಚಿಂತ್ಯ	೩೪. ಶ್ರಿಯಾ	
೧೬. ಶಾಂತಾ	೩೫. ಶ್ರೀಕಂಠ	
೧೭. ಶಶಿಶೇಖರ	೩೬. ಲಯಾ	
೧೮. ಉಮಾ	೩೭. ಅನಂತ	
೧೯. ತೀವ್ರ	೩೮. ಸತಿ	

೫. **ಮಣಿಪೂರೈಕಶರಣಂ**
(ಮಣಿಪೂರಚಕ್ರವೊಂದೇ ಮುಖ್ಯವಾದ ವಾಸಸ್ಥಾನವಾಗುಳ್ಳ ಶಿವನನ್ನು) ಮಣಿ ಎಂಬ ಶಬ್ದದಿಂದ ಮಣಿಮಯವಾದ ಧನುಸ್ಸು ಉಕ್ತವಾಗುತ್ತದೆ. ಮಣಿಮಯವಾದ ಧನುಸ್ಸಿನ ರೂಪವಾಗಿ ಭಗವತಿಯು ಇರುವುದರಿಂದ ಅಂತಹ ಭಗವತಿಯಿಂದ ತುಂಬಲ್ಪಡುವ ವಾಸಸ್ಥಾನವು ಮಣಿಪೂರವೆಂದು ಕರೆಯಲ್ಪಡುತ್ತದೆ.

(ಶೇ–ಪುಟ ೧೫೨)

೬. **ಮಣಿಪೂರ ಚಕ್ರ**
ಮಣಿಗಳಿಂದ ಕೂಡಿದ್ದೇ ಮಣಿಪೂರಚಕ್ರ. ಮಣಿಗಳು ಎಂದರೆ ಐಶ್ವರ್ಯಗಳು. ಕೆಲವು ಧನಸಂಬಂಧ ಸಿದ್ಧಿಗಳು ಇಲ್ಲಿ ಸಾಧಕನಿಗೆ ಲಭಿಸುತ್ತವೆ. ಆದ್ದರಿಂದಲೇ ಮಣಿಪೂರವೆನ್ನುತ್ತಾರೆ. ನಾಭಿಸ್ಥಾನದಲ್ಲಿರುವ ಚಕ್ರವಿದು.

(ಪ–ಪುಟ ೩೧೯)

೭. **ಷಟ್ಚಕ್ರ ಕ್ರಮ**
ಮೂಲಾಧಾರ, **ಸ್ವಾಧಿಷ್ಠಾನ**, **ಮಣಿಪೂರ**, ಅನಾಹತ, ವಿಶುದ್ಧಿ ಆಜ್ಞಾ –ಹೀಗೆ ಷಟ್ಚಕ್ರ ಕ್ರಮ ಇರುತ್ತದೆ. ಆದರೆ ಸೌಂದರ್ಯಲಹರಿಯಲ್ಲಿ ಆಚಾರ್ಯ ಶಂಕರರೂ, ಎಲ್ಲಿ ಈ ಷಟ್‌ಚಕ್ರಗಳಿಗೆ ಸಂಬಂಧಿಸಿದ ವರ್ಣನೆ ಬಂದರೂ ಮೂಲಾಧಾರ **ಮಣಿಪೂರ ಸ್ವಾಧಿಷ್ಠಾನ** ಅನಾಹತ, ವಿಶುದ್ಧಿ ಆಜ್ಞಾ ಎಂದು ವರ್ಣನೆ ಮಾಡಿದ್ದಾರೆ. ಮಣಿಪೂರ ಸ್ವಾಧಿಷ್ಠಾನಗಳನ್ನು ಅದಲುಬದಲು ಮಾಡಿದ್ದಾರೆ. ಮೊದಲು ಮಣಿಪೂರ ಆಮೇಲೆ ಸ್ವಾಧಿಷ್ಠಾನ ಎಂದು ವರ್ಣಿಸಿದ್ದಾರೆ. ಇದಕ್ಕೆ ಕಾರಣ ತಿಳಿಯದು.


(ಪ–ಪುಟ ೩೧೯)

೮. ಲಲಿತಾಸಹಸ್ರನಾಮದಲ್ಲಿ ದೇವಿಯನ್ನು ಮಣಿಪೂರಾನ್ತರುದಿತಾ (೪೯೫) ಎಂದು ವರ್ಣಿಸಿದೆ.

೯. ಲಲಿತಾ ಸಹಸ್ರನಾಮದಲ್ಲಿ ೪೯೫ರಿಂದ ೫೦೪ನೇ ನಾಮದವರೆಗೆ ಮಣಿಪೂರ ಚಕ್ರದ ವಿವರಣೆ ಇದೆ:
ಮಣಿಪೂರಾಬ್ಜ[೪೯೫]ನಿಲಯಾ । ವದನತ್ರಯ[೪೯೬] ಸಂಯುತಾ
ವಜ್ರಾದಿಕಾಯಂಧೋಪೇತಾ । ಡಾಮರ್ಯಾದಿ[೪೯೮]ಭಿದಾವೃತಾ ॥೧೦೨॥
ರಕ್ತವರ್ಣಾ[೪೯೯] । ಮಾಂಸನಿಷ್ಠಾ[೫೦೦] । ಗುಡಾನ್ನ[೫೦೧] ಪ್ರೀತಮಾನಸಾ
ಸಮಸ್ತ [೫೦೨]ಭಕ್ತಸುಖದಾ । ಲಾಕಿನ್ಯಾಂಬಾ[೫೦೩] ಸ್ವರೂಪಿಣಿ ॥ ೧೦೩ ॥

(ಲ–ಯ ಪುಟ ೧೬೫)

ಯಂತ್ರಾರಾಧನೆ (ಶ್ಲೋಕ-೪೦)



ಯಂತ್ರರಚನೆ : ಚಿನ್ನದ ತಗಡಿನಲ್ಲಿ ತುದಿಗಳಲ್ಲಿ ಎಂಟು ತ್ರಿಶೂಲಗಳಿಂದ ಅಷ್ಟಕೋಣಗಳನ್ನು ಬರೆಯಬೇಕು. ನಡುವೆ ಠಂಬೀಜಾಕ್ಷರ ವಿರಬೇಕು.

ಪೂಜೆ : ಲಲಿತಾ ಸಹಸ್ರನಾಮ ಕುಂಕುಮಾರ್ಚನೆಯನ್ನು ಈಶಾನ್ಯದಿಕ್ಕಿಗೆ ಅಭಿಮುಖವಾಗಿ ಕುಳಿತು ಮಾಡಬೇಕು.

ನೈವೇದ್ಯ : ಜೇನುತುಪ್ಪ, ಹಾಲುಕೀರು, ತಾಂಬೂಲ

ಜಪ : ೪೫ ದಿನಗಳ ಕಾಲ ದಿನಕ್ಕೆ ೧೦೦೦ ಬಾರಿ ಈ ಶ್ಲೋಕವನ್ನು ಜಪಿಸಬೇಕು.

ಫಲ : ಇಷ್ಟಾರ್ಥವು ಸ್ವಪ್ನದಲ್ಲಿ ಕಾಣುವುದು.

ಶ್ಲೋಕ–೪೧

ಮೂಲಾಧಾರಚಕ್ರದಲ್ಲಿ ದೇವಿಯ ಧ್ಯಾನ

ತವಾಧಾರೇ ಮೂಲೇ ಸಹ ಸಮಯಯಾ ಲಾಸ್ಯಪರಯಾ
[೧]ನವಾತ್ಮಾನಂ ಮನ್ಯೇ ನವರಸಮಹಾತಾಂಡವನಟಮ್ ।
[೨]ಉಭಾಭ್ಯಾಮೇತಾಭ್ಯಾಮುದಯವಿಧಿಮುದ್ದಿಶ್ಯ ದಯಯಾ
ಸನಾಥಾಭ್ಯಾಂ ಜಜ್ಞೇ ಜನಕಜನನೀಮಜ್ಜಗದಿದಮ್ ॥ ೪೧ ॥

ಪಾಠಾಂತರ

೧. (ನವಾತ್ಮಾನಂ ಮನ್ಯೇ) = ತವಾತ್ಮಾನಂ ವಂದೇ (ಸು)

೨. (ಉಭಾಭ್ಯಾಮೆ) = ಮುಭಯವಿಧಿ (ಸು)

ಪದವಿಭಾಗ

(ತವಾಧಾರೇ) = ತವ+ಆಧಾರೇ, ಮೂಲೇ, ಸಹ, ಸಮಯಯಾ, ಲಾಸ್ಯಪರಯಾ, (ನವಾತ್ಮಾನಂ), =ನವ+ಆತ್ಮಾನಂ, ಮನ್ಯೇ, ನವರಸಮಹಾತಾಂಡವನಟಮ್, (ಉಭಾಭ್ಯಾಮೇತಾಭ್ಯಾಮುದಯವಿಧಿಮುದ್ದಿಶ್ಯ) = ಉಭಾಭ್ಯಾಂ+ಏತಾಭ್ಯಾಮ್+ಉದಯ ವಿಧಿಮ್ + ಉದ್ದಿಶ್ಯ, ದಯಯಾ, ಸನಾಥಾಭ್ಯಾಂ, ಜಜ್ಞೇ, (ಜನಕಜನನೀ ಮಜ್ಜಗದಿದಮ್) = ಜನಕಜನನೀಮತ್+ ಜಗತ್+ಇದಮ್.

ಅನ್ವಯಾರ್ಥ

(ಹೇ ಭಗವತಿ)	(ಎಲೈ ಪೂಜ್ಯಳಾದ ದೇವಿಯೆ),
ತವ	ನಿನ್ನ
ಮೂಲೇ ಆಧಾರೇ	ಮೂಲಾಧಾರಚಕ್ರದಲ್ಲಿ
ಲಾಸ್ಯ ಪರಯಾ	ಲಾಸ್ಯನರ್ತನದಲ್ಲಿ–ಆಸಕ್ತಿಯುಳ್ಳ
ಸಮಯಯಾ	ಸಮಯಾ ಎಂಬ ಹೆಸರುಳ್ಳ ನಿನ್ನೊಡನೆ
ಸಹ	ಯುಕ್ತನಾಗಿರುವ

ನವರಸಮಹಾ ತಾಂಡವನಟಂ	(ನವರಸ+ಮಹಾ+ತಾಂಡವ+ನಟಂ) (ಶೃಂಗಾರ, ವೀರ ಮುಂತಾದ) ಒಂಭತ್ತು ರಸಗಳಿಂದ–ತುಂಬಿರುವ–ತಾಂಡವ ನರ್ತನವನ್ನು ಅಭಿನಯಿಸುವ
ನವಾತ್ಮಾನಂ	(ಆನಂದಭೈರವನೆಂಬ) ಈಶ್ವರನನ್ನು
ಮನ್ಯೇ	ಧ್ಯಾನಿಸುತ್ತೇನೆ (ಭಾವಿಸುತ್ತೇನೆ)
ಉದಯವಿಧಿಮುದ್ದಿಶ್ಯ	(ಉದಯವಿಧಿಮ್+ಉದ್ದಿಶ್ಯ) = ಜಗತ್ತಿನ ಸೃಷ್ಟಿ ಕಾರ್ಯವನ್ನು – ಕುರಿತು
ಏತಾಭ್ಯಾಂ ಉಭಾಭ್ಯಾಂ	ಈ ನಿಮ್ಮಿಬ್ಬರ (ಆನಂದಭೈರವೀ ಆನಂದಭೈರವ ಇಬ್ಬರಿಂದಲೂ)
ದಯಯಾ	ದಯೆಯಿಂದ
ಇದಂ ಜಗತ್	ಈ ಪ್ರಪಂಚವು
ಸನಾಥಾಭ್ಯಾಂ	ಕಾಪಾಡಲ್ಪಟ್ಟಿದಾಗಿ
ಜನಕ ಜನನೀಮತ್	ತಂದೆತಾಯಿಗಳುಳ್ಳದ್ದಾಗಿ
ಜಜ್ಞೇ	ಆಗಿರುತ್ತದೆ.

ತಾತ್ಪರ್ಯ

ಎಲೈ ಪೂಜ್ಯಳಾದ ದೇವಿಯೆ, ಮೂಲಾಧಾರ ಚಕ್ರದಲ್ಲಿ ಲಾಸ್ಯನರ್ತನದಲ್ಲಿ (ತತ್ಪರಳಾಗಿರುವ) ಆಸಕ್ತಳಾಗಿರುವ ನಿನ್ನ ಸಮಯಾ ಎಂಬ ಹೆಸರುಳ್ಳ ದೇವಿಯ (ನಿನ್ನೊಡನೆ) ಜೊತೆಯಲ್ಲಿ ಯುಕ್ತನಾಗಿರುವ ಶೃಂಗಾರ ವೀರ ಮುಂತಾದ ಒಂಬತ್ತು ರಸಗಳಿಂದ ಅದ್ಭುತವಾದ ತಾಂಡವ ನೃತ್ಯವನ್ನು ಅಭಿನಯಿಸುವ ಆನಂದಭೈರವನೆಂಬ ಈಶ್ವರನನ್ನು ನಾನು ಧ್ಯಾನಿಸುತ್ತೇನೆ.

ಜಗತ್ತಿನ ಸೃಷ್ಟಿಕಾರ್ಯವನ್ನು ಉದ್ದೇಶಿಸಿ ದಯೆಯಿಂದ ಕೂಡಿರುವ ಆನಂದಭೈರವ–ಆನಂದಭೈರವಿಯರಿಂದ ಈ ಪ್ರಪಂಚವು ಉತ್ಪನ್ನವಾಯಿತು. (ಈ ಜಗತ್ತಿಗೆ ಆನಂದ ಭೈರವಿ–ಆನಂದಭೈರವರೆಂಬ ಶಿವಶಿವೆಯರೇ ಸೃಷ್ಟಿಕರ್ತರಾಗಿದ್ದಾರೆ).

ಪದ್ಯಾನುವಾದ

ಓ ತಾಯೆ! ನಿನ್ನ ಮೂಲಾಧಾರ ಚಕ್ರದಲ್ಲಿ
ಲಾಸ್ಯತತ್ಪರೆ ಸಮಯೆಯೊಡನೆ ನವರಸಯುಕ್ತ
ಘನತಾಂಡವವನಾಡುವಾನಟನನಾನಂದ ಭೈರವನೆನುತ ತಿಳಿವೆನು;
ದಗ್ಧಲೋಕವ ಮರಳಿಸೃಷ್ಟಿಸುವ ಬಗೆ ಕುರಿತು
ದಯೆಯಿಂದ ಜೊತೆಗೂಡಲವರಿಬ್ಬರಾವೇಳೆ
ಜನನಿಜನಕರನು ಪಡೆದಂತಾಗಿ ಸಂಭವಿಸಿತೀ ಲೋಕದುತ್ಪತ್ತಿಯು ॥ ೪೧ ॥

ಟಿಪ್ಪಣಿಗಳು

೧. ೧ ರಿಂದ ೪೧ವರೆಗಿನ ಶ್ಲೋಕಗಳಭಾಗಕ್ಕೆ ಆನಂದಲಹರಿ (ಸೌಂದರ್ಯಲಹರಿಯ ಪೂರ್ವಭಾಗ) ಎಂದು ಹೇಳುವರು. ಇಲ್ಲಿಂದ ಮುಂದಕ್ಕೆ ೪೨ ರಿಂದ ೧೦೦ ರವರೆಗಿನ ಶ್ಲೋಕಗಳವರೆಗೆ ದೇವಿಯ ಸೌಂದರ್ಯವರ್ಣನೆಯೇ ಪ್ರಧಾನವಾದುದರಿಂದ ಈ ಭಾಗವನ್ನು ಸೌಂದರ್ಯಲಹರೀ (ಉತ್ತರಭಾಗ) ಎಂದು ಹೇಳುವರು.

೨. ಸೌಂದರ್ಯಲಹರಿಯ ತತ್ತ್ವಪ್ರಧಾನವಾದ ಮೊದಲ ೪೧ (೧-೪೧) ಶ್ಲೋಕಗಳು ಆನಂದಲಹರೀ ಎಂದೂ ವರ್ಣನಾಪ್ರಧಾನವಾದ ಉಳಿದ ೫೯ ಶ್ಲೋಕಗಳನ್ನು (೪೨-೧೦೦) ಸೌಂದರ್ಯಲಹರಿಯೆಂದೂ ಕರೆಯುವ ಅರ್ವಾಚೀನ ವಿಧಾನವನ್ನು ಮೂಲಕರ್ತೃಗಳಾದ ಆದಿಶಂಕರರಾಗಲಿ ವ್ಯಾಖ್ಯಾನಕಾರರಾದ ಲಕ್ಷ್ಮೀಧರದೇಶಿಕರಾಗಲಿ ಹೇಳಿಲ್ಲವಾದ್ದರಿಂದ ಕನ್ನಡ ಅನುವಾದದಲ್ಲಿ (ಹಲವರು) ಅನುಸರಿಸಿಲ್ಲ.

(ಮ-ಪುಟ ೯೬)

೩. ಆನಂದಲಹರಿಯ ಭಾಗದಲ್ಲಿ ಆದಿಶಂಕರರು ಮೂಲಾಧಾರ ಚಕ್ರದಿಂದ ಆರಂಭಿಸಿ ಆಜ್ಞಾಚಕ್ರದವರೆಗೆ ಹೇಳಬೇಕಾದ ಆರೋಹಣ ಕ್ರಮವನ್ನು ಬಿಟ್ಟು ಆಜ್ಞಾಚಕ್ರದಿಂದ (೩೬ನೇ ಶ್ಲೋಕದಿಂದ) ಆರಂಭಿಸಿ ಮೂಲಾಧಾರಚಕ್ರದವರೆಗೆ (೪೧ನೇ ಶ್ಲೋಕದವರೆಗೆ) ಅವರೋಹಣ ಕ್ರಮವನ್ನು ಅನುಸರಿಸಿದ್ದಾರೆ. ಏಕೆಂದರೆ ತೈತ್ತಿರೀಯ ಉಪನಿಷತ್ತಿನಲ್ಲಿ ಹೇಳಿರುವ ಶ್ರೌತ ಕ್ರಮವನ್ನು ಅನುಸರಿಸಿ ಪಂಚಭೂತಗಳ ಸೃಷ್ಟಿಕ್ರಮದಂತೆ ಅವರೋಹಣ ಕ್ರಮವನ್ನು ಅನುಸರಿಸಿದ್ದಾರೆ. (ಟಿಪ್ಪಣಿ ೧೨ ನೋಡಿ).

(ಗ-ಪುಟ ೪೭)

೪. ಸ್ತ್ರೀಯರ ಕೋಮಲನರ್ತನಕ್ಕೆ ಲಾಸ್ಯವೆಂದೂ ಪುರುಷರ ಉದ್ಧತನರ್ತನಕ್ಕೆ ತಾಂಡವವೆಂದೂ ಹೆಸರು. ಇಲ್ಲಿ ಶಿವನ ನೃತ್ಯವನ್ನು ತಾಂಡವನೃತ್ಯವೆಂದೂ ಭಗವತಿಯ ನೃತ್ಯವನ್ನು ಲಾಸ್ಯನೃತ್ಯವೆಂದೂ ಕರೆಯಲಾಗಿದೆ.

೫. ಮೂಲಾಧಾರ ಚಕ್ರದ ಅಧಿದೇವತೆಯರಾದ ಆದಿನಾಥ ಮತ್ತು ಲಾಸ್ಯೇಶ್ವರಿಯನ್ನು ಈ ಚಕ್ರದ ಮಧ್ಯದಲ್ಲಿಟ್ಟು ೫೬ (ಭೂತತ್ತ್ವದ) ಪಾರ್ಥಿವ ಮಯೂಖ (ಕಿರಣಗಳಿಂದ) ಆವರಿಸಲ್ಪಟ್ಟಿರುವರೆಂದು ಭಾವಿಸಿ ಧ್ಯಾನಿಸಬೇಕು.

ಈ ೫೬ ಕಿರಣಗಳ ಹೆಸರುಗಳು ಹೀಗಿವೆ :

೧. ಉಡ್ಡೀಶ್ವರ	೧೬. ಪಾತಾಳದೇವಿ	೩೧. ಆಧಾರೇಶ
೨. ಉಡ್ಡೀಶ್ವರೀ	೧೭. ನಾರದಾಖ್ಯ	೩೨. ರಕ್ತಾ
೩. ಜಲೇಶ್ವರ	೧೮. ನಾದಾ	೩೩. ಚಕ್ರೇಶ
೪. ಜಲೇಶ್ವರೀ	೧೯. ಆನಂದ	೩೪. ಚಂಡಾ
೫. ಪೂರ್ಣೇಶ್ವರ	೨೦. ಡಾಕಿನೀ	೩೫. ಕುರಂಗೀಶ
೬. ಪೂರ್ಣೇಶ್ವರೀ	೨೧. ಆಲಸ್ಯ	೩೬. ಕರಾಳ
೭. ಕಾಮೇಶ್ವರ	೨೨. ಶಾಕಿನೀ	೩೭. ಮದದ್ರೀಶ
೮. ಕಾಮೇಶ್ವರೀ	೨೩. ಮಹಾನಂದ	೩೮. ಮಹೋಚ್ಛುಶ್ಮಾ
೯. ಶ್ರೀಕಾಂತ	೨೪. ಲಾಕಿನೀ	೩೯. ಅನಾದಿವಿಮಲ
೧೦. ಗಗನಾ	೨೫. ಯೋಗ	೪೦. ಮಾತಂಗೀ
೧೧. ಅನಂತ	೨೬. ಕಾಕಿನೀ	೪೧. ಸರ್ವಜ್ಞಾನ ವಿಮಲ
೧೨. ಸ್ವರಸಾ	೨೭. ಅತೀತ	೪೨. ಪುಲಿಂದಾ
೧೩. ಶಂಕರ	೨೮. ಶಾಕಿನೀ	೪೩. ಯೋಗವಿಮಲ
೧೪. ಮತಿ	೨೯. ಪಾದ	೪೪. ಶಂಬರೀ
೧೫. ಪಿಂಗಳ	೩೦. ಹಾಕಿನೀ	೪೫. ಸಿದ್ಧವಿಮಲ

೪೬. ವಾಚಾಪರಾ	೫೦. ಕುಬ್ಜಾ	೫೪. ಕುಲೇಶ್ವರೀ
೪೭. ವಿಮಲ	೫೧. ಉಡ್ಡೀಶ	೫೫. ಕಾರ್ಯಾದೀಶ
೪೮. ಕುಲಾಲಿಕಾ	೫೨. ಲಕ್ಷ್ಮೀ	೫೬. ಅಜಾ
೪೯. ಮಿತ್ರೇಶ	೫೩. ಷಷ್ಠೀಶ	(ಶ್ರೀ – ಪುಟ ೨೨೯)

೬. ವಾಮಕೇಶ್ವರ ತಂತ್ರದಲ್ಲಿ ಆತ್ಮಪೂಜೆಯನ್ನು ವಿಶೇಷವಾಗಿ ಹೀಗೆ ಹೇಳಲಾಗಿದೆ. ಭಗವತಿಯ ಪಾಶ ಅಂಕುಶಗಳು ರಾಗ ಮತ್ತು ದ್ವೇಷ ರೂಪವಾದವು ಆಗಿವೆ. ಶಬ್ದ ಸ್ಪರ್ಶ ಮೊದಲಾದವು ಬಾಣಗಳಾಗಿವೆ. ಮನಸ್ಸು ಅವಳ ಧನುಸ್ಸು ಆಗಿದೆ. ಅವಯವಗಳ ಮತ್ತು ಇಂದ್ರಿಯಗಳ ರೂಪವಾದ ಚಕ್ರದಲ್ಲಿ ಇರುವ ಸಂವಿತ್‌ಸ್ವರೂಪಿಣಿಯಾದ (ಚೈತನ್ಯ ಶಕ್ತಿರೂಪಿಣಿಯಾದ) ದೇವಿಯನ್ನು ವಿಶ್ವಾಹಂಕಾರ ಪುಷ್ಪದಿಂದ ಪೂಜಿಸಬೇಕು. ಹೀಗೆ ಪೂಜಿಸುವವನು ಸಮಸ್ತ ಸಿದ್ಧಿಯನ್ನು ಹೊಂದುತ್ತಾನೆ. ಇದು ಉಪಾಸನಾರೂಪವಾದುದು, ಕ್ರಿಯಾತ್ಮಕವಾದ ಪೂಜಾ ವಿಧಿಯು ಆದರಣೀಯವಾದುದಲ್ಲ.

(ಶೇ – ಪುಟ ೪೮)

೭. ಸಮಯಿಗಳು ಸಹಸ್ರಕಮಲದಲ್ಲಿ ಸಮಯೆ ಎಂಬ ಶಕ್ತಿಯನ್ನು ಸದಾಶಿವನನ್ನು ಪೂಜೆಮಾಡುವರು. ಆ ಶಕ್ತಿಗೆ ಶಿವನಕೂಡ ೫ ವಿಧದಲ್ಲಿ ಸಾಮ್ಯವಿರುವುದರಿಂದ ಸಮಯೆ ಎಂದು ದೇವಿಗೆ ಹೆಸರು. ದೇವಿಯೊಡನೆ ಐದು ವಿಧವಾದ ಸಾಮ್ಯವನ್ನು ಹೊಂದಿರವುದರಿಂದ ಶಂಭುವೂ ಸಮಯ ಎನಿಸುತ್ತಾನೆ. ಆದುದರಿಂದ ಇಬ್ಬರಿಗೂ ಸಮಪ್ರಧಾನ ರೂಪದಿಂದ ಸಾಮ್ಯವಿದೆ ಎಂದು ತಿಳಿಯಬೇಕು.

೮. ಸಮಪ್ರಧಾನರಾದ ಶಿವಶಿವೆಯರಿಬ್ಬರಿಗೂ ೫ ವಿಧವಾದ ಸಾಮ್ಯಗಳಿವೆ. ೧. ಅಧಿಷ್ಠಾನಸಾಮ್ಯ ೨. ಅವಸ್ಥಾನಸಾಮ್ಯ ೩. ಅನುಷ್ಠಾನಸಾಮ್ಯ ೪. ರೂಪಸಾಮ್ಯ ೫. ನಾಮಸಾಮ್ಯ.

೧. ಅಧಿಷ್ಠಾನಸಾಮ್ಯ : "ತವಾಧಾರೇ" ಎಂಬುದಾಗಿ ಅಧಿಷ್ಠಾನಸಾಮ್ಯ ಉಕ್ತವಾಗಿದೆ. ಏಕೆಂದರೆ ಇಬ್ಬರಿಗೂ ಆಧಾರಚಕ್ರವು ಅಧಿಷ್ಠಾನ ರೂಪವಾಗಿದೆ.

೨. **ಅನುಷ್ಠಾನಸಾಮ್ಯ** : 'ಜನಕ ಜನನೀಮಜ್ಜಗದಿದಮ್' ಎಂಬುದರಿಂದ ಪ್ರತಿಪಾದಿತವಾಗಿದೆ. ಏಕೆಂದರೆ ಜಗತ್ತಿನ ಸೃಷ್ಟಿಕಾರ್ಯದಲ್ಲಿ ಇಬ್ಬರೂ ತೊಡಗುತ್ತಾರೆ.

೩. **ಅವಸ್ಥಾನಸಾಮ್ಯ** ಲಾಸ್ಯ, ತಾಂಡವ ಶಬ್ದಗಳಿಂದ ಸೂಚಿತವಾಗಿದೆ. ಲಾಸ್ಯ ತಾಂಡವಗಳು ನೃತ್ಯರೂಪಕದಿಂದ ಒಂದೇ ಆಗಿವೆ.

೪. **ರೂಪಸಾಮ್ಯ** : ಆರುಣ್ಯರೂಪವಾದ ರೂಪಸಾಮ್ಯವನ್ನು ತಂತ್ರಾಂತರದಲ್ಲಿ ಹೀಗೆ ಹೇಳಲಾಗಿದೆ. :ಕೆಂಪು ದಾಸವಾಳದಂತೆ ಇರುವವರೂ ಮದದಿಂದ ಚಂಚಲವಾದ ನೇತ್ರಗಳುಳ್ಳವರೂ ಭೈರವೀ-ಭೈರವ ಸ್ವರೂಪರೂ ಆದ ಜಗತ್ತಿನ ತಾಯಿತಂದೆಗಳನ್ನು ನಮಿಸುತ್ತೇನೆ.

೫. **ನಾಮಸಾಮ್ಯ** : ನವಾತ್ಮಾನಂ ಎಂಬುದರಿಂದ ರೂಪಸಾಮ್ಯದೊಂದಿಗೆ ನಾಮಸಾಮ್ಯವು ಪ್ರತಿಪಾದಿತವಾಗಿದೆ.

(ಶೇ-ಪುಟ ೧೫೫)

೯. ನಾಲ್ಕುಕೈಗಳ ದೇವಿಯ ಆರಾಧನೆ

ಶಂಕರ ಭಗವತ್ಪಾದರ ಮತದಂತೆ ನಾಲ್ಕು ವಿಧವಾದ ಐಕ್ಯಾನುಸಂಧಾನವಾದ ಮೇಲೆ ಮಣಿಪೂರಚಕ್ರದಲ್ಲಿ ಪ್ರತ್ಯಕ್ಷಳಾಗುವ ಭಗವತಿಯ ಸ್ವರೂಪವು ಕ್ಷಣತ್ಕಾಂಚೀದಾಮಾ ಎಂದು ಮೊದಲಾದ ಧ್ಯಾನದಿಂದ ಪ್ರತಿಪಾದಿತವಾಗಿ ಧನಸ್ಸು, ಬಾಣ, ಪಾಶ, ಅಂಕುಶಗಳಿಂದ ಕೂಡಿರುವ ೪ ಕೈಗಳನ್ನು ಉಳ್ಳದ್ದಾಗಿದೆ. ಆ ಪ್ರಕಾರ ಭಗವತಿಯು ಹಾಗೆಯೇ ಗೋಚರವಾಗಿ ಪ್ರಕಾಶಿಸುತ್ತಾಳೆ.

ಹತ್ತು ಕೈಗಳ ದೇವಿಯ ಆರಾಧನೆ

ಆದರೆ ಲಕ್ಷ್ಮೀಧರ ವ್ಯಾಖ್ಯಾನದ ಪ್ರಕಾರ ಆರುವಿಧವಾದ ಐಕ್ಯಾನುಸಂಧಾನವಾದ ಮೇಲೆ ಮೂಲಾಧಾರಾ ಮತ್ತು ಸ್ವಾಧಿಷ್ಠಾನ ಈ ಎರಡು ಚಕ್ರಗಳನ್ನು ಭೇದಿಸಿ ಸಮಣಿಪೂರ ಚಕ್ರದಲ್ಲಿ ಪ್ರಸನ್ನಳಾದ ಭಗವತಿಯ ಧನುಸ್ಸು, ಬಾಣ, ಪಾಶ, ಅಂಕುಶ, ವರದ, ಅಭಯ, ಪುಸ್ತಕ, ಅಕ್ಷಮಾಲ ಮತ್ತು ಎರಡುಕೈಗಳಲ್ಲಿ ವೀಣೆಧರಿಸಿ ಹತ್ತುಭುಜಗಳುಳ್ಳವಳಾಗಿ ಗೋಚರಿಸುತ್ತಾಳೆ.

(ಶೇ-ಪುಟ ೧೬೪)

೧೦. ಲಕ್ಷ್ಮೀಧರರು, ಶಂಕರರ ಅಭಿಪ್ರಾಯ ಮತ್ತು ತಮ್ಮ ಅಭಿಪ್ರಾಯವನ್ನು ಪ್ರತ್ಯೇಕವಾಗಿ ಹೇಳಿದ ಮೇಲೆ ಎರಡೂ ಅಭಿಪ್ರಾಯಗಳೂ ಅಂಗೀಕಾರಯೋಗ್ಯವೆಂದು ತಮ್ಮ ಕರ್ಣಾವತಂಸ ಸ್ತುತಿಯಲ್ಲಿ ಹೇಳಿದ್ದಾರೆ.

ದಶಭುಜದೇವಿ ಓ ಭವಾನಿ! ನೀನು ನಿನ್ನ ಶ್ರೀಯುಕ್ತವಾದ ಕೈಗಳಿಂದ ಸರ್ಪ, ಪಾಶ, ಅಂಕುಶ, ಕಬ್ಬಿನಜಲ್ಲೆಯ ಧನುಸ್ಸು, ಪುಷ್ಪಬಾಣ, ಜಪಮಾಲೆ, ಶ್ರೇಷ್ಠವಾದ ಶುಕ ಅಭಯಮುದ್ರೆ, ವರದಮುದ್ರೆ, ಧರಿಸಿದ ಕೈಗಳವಳೇ ಮತ್ತು ವಕ್ಷಸ್ಥಳದಲ್ಲಿ ಧ್ವನಿಮಾಡುತ್ತಿರುವ ವೀಣೆಯನ್ನು ಎರಡುಕೈಗಳಲ್ಲಿ ಧರಿಸಿರುವ ದಶಭುಜ ದೇವಿಯೇ ನೀನಾಗಿದ್ದೀಯೆ.

೧೧. **ಚತುರ್ಭುಜ ದೇವಿ**

ಸುಭಗೋದಯ ವ್ಯಾಖ್ಯಾನದಲ್ಲಿ ಚತುರ್ಭುಜೆಯಾದ ದೇವಿಯನ್ನು ಆರಾಧಿಸಲಾಗಿದೆ. ಉತ್ತಮ ಸಾಧಕನು ಪಾಶ, ಅಂಕುಶ, ಧನಸ್ಸು ಮತ್ತು ಬಾಣಗಳನ್ನು ಕೈಯಲ್ಲಿ ಹಿಡಿದಿರುವ ಸೂರ್ಯಮಂಡಲದ ಮಧ್ಯದಲ್ಲಿರುವ ತ್ರಿಪುರಸುಂದರೀ ದೇವಿಯನ್ನು ಧ್ಯಾನಿಸಬೇಕು ಇಂತಹ ಸಾಧಕನು ಉತ್ತಮ ನಾರಿಯರ ಸಮೂಹದಿಂದ ಕೂಡಿದ ಮೂರುಲೋಕಗಳನ್ನು ಶೀಘ್ರವಾಗಿ ಮೋಹಗೊಳಿಸಬಲ್ಲನು.

(ಶೇ–ಪುಟ ೧೬೪–೧೬೫)

೧೨. ಆದಿಶಂಕರರು ಷಟ್‌ಚಕ್ರಾರಾಧನೆ ಕುರಿತು ಅವರೋಹಣ ಕ್ರಮದಲ್ಲಿ ಪೂಜಾಪ್ರಕಾಶವನ್ನು ಹೇಳಿದ್ದಾರೆ. ತೈತ್ತಿರೀಯ ಉಪನಿಷತ್ತಿನ (೨–೧) ರಲ್ಲಿ ಹೇಳಿರುವ ಮಾತು ಅವರಿಗೆ ಆಧಾರವಾಗಿದೆ. ಆತ್ಮನಃ ಆಕಾಶಃ ಸಂಭೂತಃ! ಆಕಾಶಾದ್ವಾಯುಃ । ವಾಯೋರಗ್ನಿಃ ಅಗ್ನೇರಾಪಃ । ಆದ್ಭ್ಯಃ ಪೃಥಿವೀ ॥ (ಆತ್ಮನಿಂದ ಆಕಾಶ ಉಂಟಾಯಿತು । ಆಕಾಶದಿಂದ ವಾಯುವು ಉಂಟಾಯಿತು। ವಾಯುವಿನಿಂದ ಅಗ್ನಿಯು ಉಂಟಾಯಿತು, ಅಗ್ನಿಯಿಂದ ಜಲ ಉಂಟಾಯಿತು । ಜಲದಿಂದ ಪೃಥ್ವಿ ಉಂಟಾಯಿತು. ಶ್ರುತಿಯ ಈ ಮಾತನ್ನು ಅನುಸರಿಸಿ ಅವರೋಹಣ ಕ್ರಮದಲ್ಲಿ ಪೂಜಾವಿಧಾನವನ್ನು ಆದಿಶಂಕರರು ಹೇಳಿದ್ದಾರೆ: ಆದುದರಿಂದಲೇ ಸ್ವಾಧಿಷ್ಠಾನದ ಮೇಲಿರುವ ಮಣಿಪೂರಚಕ್ರವನ್ನು ಸ್ವಾಧಿಷ್ಠಾನದ ಕೆಳಗಿನ ಪ್ರದೇಶದಲ್ಲಿ ನಿರೂಪಿಸಿರುವುದು ಯುಕ್ತವಾಗಿದೆ.

(ಶೇ–ಪುಟ ೧೬೭)

೧೩. **ಜನಕಜನನೀಮಜ್ಜಗದಿದಂ**

ಈ ಶ್ಲೋಕದಲ್ಲಿ ಶ್ರೀ ಶಂಕರರು ಮೂಲಾಧಾರವೆನ್ನುವ ವೇದಿಕೆಯ ಮೇಲೆ ಜಗನ್ಮಾತೆ-ಜಗತ್ಪಿತರಾದ ಸಮಯಳು - ಸಮಯನು ಎಂದು ಕರೆಯಲ್ಪಡುವ ಕಾಮೇಶ್ವರೀ-ಕಾಮೇಶ್ವರರು ಲಾಸ್ಯ - ತಾಂಡವಗಳನ್ನು ಅತ್ಯಂತ ಆನಂದದಿಂದ ಪ್ರದರ್ಶಿಸುತ್ತಾ ಅವರಲ್ಲಿನ ಚೈತನ್ಯ-ಪ್ರಕಾಶಗಳೇ ಈ ಸೃಷ್ಟಿಗೆ ।ಮೂಲಕಾರಣವಾಗುತ್ತ ನವವ್ಯೂಹಗಳಿಂದ ಕೂಡಿ, ನವಾತ್ಮಕನಾದ ಪರಮಶಿವತಾಂಡವವಾಡುತ್ತಿರಲು ಹುಬ್ಬು, ಕಣ್ಣು, ನೋಟ, ನೊಸಲು ಕೈಬೆರಳುಗಳ ಮುದ್ರೆಗಳ ಅಭಿನಯ ಕೌಶಲಗಳಿಂದ ಲಾಸ್ಯ ನಾಟ್ಯಮಾಡುವ ಜಗಜ್ಜನನಿ ಈಶ್ವರಿಯಾಗಲು ಆ ಇಬ್ಬರ ಆನಂದದಾಟದಿಂದ ಈ ಸರ್ವಸೃಷ್ಟಿ ಉತ್ಪತ್ತಿಯಾಗುತ್ತಿದೆ. ಸಕಲಕಲೆಗಳೂ ಪ್ರಕಾಶಗೊಳ್ಳುತ್ತಿವೆ. ಸರ್ವವಿದ್ಯೆಗಳೂ ಪ್ರಕಟಗೊಳ್ಳುತ್ತಿವೆ.

(ಪ-ಪುಟ ೨೩೧)

೧೪. **ನವಾತ್ಮಾನಂ ಮನ್ಯೇ ನವರಸಮಹಾತಾಂಡವನಟಂ**

ಈಶ್ವರನನ್ನು ನವಾತ್ಮನು ಎಂದು ಹೇಳುತ್ತಾರೆ. ನವರಸಭರಿತ ತಾಂಡವ ನಾಟ್ಯವಾಡಿದ್ದರಿಂದ ನವಾತ್ಮನೆಂದು ಕೆಲವರು ಹೇಳಿದರೆ. ನವವ್ಯೂಹಾತ್ಮಕನಾದುದರಿಂದ ನವಾತ್ಮನೆಂದು ಕೆಲವರು ಹೇಳುತ್ತಾರೆ. **ನವರಸಗಳು** ಇವು : ಶೃಂಗಾರ-ಕರುಣ-ಅದ್ಭುತ-ಹಾಸ್ಯ ವೀರ-ಭಯಾನಕ - ಭೀಭತ್ಸ -ರೌದ್ರ - ಶಾಂತ.

ನವವ್ಯೂಹಗಳು ಇವು : ಕಾಳವ್ಯೂಹ - ಕುಲವ್ಯೂಹ-ನಾಮವ್ಯೂಹ - ಜ್ಞಾನವ್ಯೂಹ - ಚಿತ್ತವ್ಯೂಹ-ನಾದವ್ಯೂಹ-ಬಿಂದುವ್ಯೂಹ-ಕಲಾವ್ಯೂಹ - ಜೀವವ್ಯೂಹ (೯)

ನವಶಕ್ತಿವ್ಯೂಹಗಳು: ವ್ಯೋಮಾವ್ಯೂಹ-ಜ್ಯೇಷ್ಠಾವ್ಯೂಹ-ರೌದ್ರೀವ್ಯೂಹ-ಅಂಬಿಕಾವ್ಯೂಹ ಇಚ್ಛಾವ್ಯೂಹ-ಜ್ಞಾನವ್ಯೂಹ-ಕ್ರಿಯಾವ್ಯೂಹ-ಶಾಂತಿವ್ಯೂಹ-ಪರವ್ಯೂಹ

ಶ್ರೀ ಚಕ್ರವ್ಯೂಹ : ೪ ಶಿವಚಕ್ರಗಳು ೫ ಶಕ್ತಿಚಕ್ರಗಳು ಸೇರಿ ೯ ಚಕ್ರಗಳನ್ನು ಒಳಗೊಂಡಿರುವುದರಿಂದ ನವಾತ್ಮನು ಎಂದು ಶಿವನನ್ನು ಕರೆಯುತ್ತಾರೆ.

(ಪೋ-ಪುಟ ೨೧೦)

ಯಂತ್ರಾರಾಧನೆ (ಶ್ಲೋಕ-೪೧)

ಯಂ

ಹ್ರೀಂ

ಯಂತ್ರರಚನೆ : ಚಿನ್ನದ ತಗಡಿನಲ್ಲಿ ಸಮಚತುರಶ್ರ ಬರೆದು, ಅದರನಡುವೆ ಯಂ ಹ್ರೀಂ ಬೀಜಾಕ್ಷರಗಳನ್ನು ಲಿಖಿಸಬೇಕು.

ಪೂಜೆ : ಪೂರ್ವಾಭಿಮುಖವಾಗಿ ಕುಳಿತು, ಬಿಲ್ವಪತ್ರೆಗಳಿಂದ ಶಿವಾಷ್ಟೋತ್ತರ ಮತ್ತು ಕುಂಕುಮದಿಂದ ಲಲಿತಾತ್ರಿಶತೀ ಅರ್ಚನೆಗಳನ್ನು ಮಾಡಬೇಕು.

ನೈವೇದ್ಯ : ಜೇನುತುಪ್ಪ

ಜಪ : ೩೦ ದಿನಗಳ ಕಾಲ ದಿನಕ್ಕೆ ೪೦೦೦ ಬಾರಿ ಜಪಿಸಬೇಕು.

ಫಲ : **ಸಕಲ ಉದರರೋಗಗಳ ನಿವಾರಣೆ.**

ಸೌಂದರ್ಯಲಹರೀ ಸ್ತೋತ್ರದೀಪಿಕೆ

(ಉತ್ತರಭಾಗ : ಶ್ಲೋಕ – ೪೨–೧೦೦)

ಸೌಂದರ್ಯಲಹರಿ (ಉತ್ತರ ಭಾಗ) ಪ್ರಾರಂಭ

ಶ್ಲೋಕ–೪೨

ದೇವಿಯ ಕಿರೀಟವರ್ಣನೆ

ಗತ್ರೈರ್ಮಾಣಿಕ್ಯತ್ವಂ ಗಗನಮಣಿಭಿಸ್ಸಾಂದ್ರಘಟಿತಂ
ಕಿರೀಟಂ ತೇ ಹೈಮಂ ಹಿಮಗಿರಿಸುತೇ ಕೀರ್ತಯತಿ ಯಃ ।
[1]ಸ ನೀಡೇ ಯಚ್ಛಾಯಾಚ್ಛುರಣಶಬಲಂ ಚಂದ್ರಶಕಲಂ
ಧನುಶ್ಶೌನಾಸೀರಂ ಕಿಮಿತಿ ನ[2] ನಿಬಧ್ನಾತಿ ಧಿಷಣಾಮ್ ॥ ೪೨ ॥

ಪಾಠಾಂತರ

೧. ಸ ನೀಡೇಯಚ್ಛಾಯಾಚ್ಛುರಣಶಬಲಂ = ...ಚ್ಛುರಣ ಪಟಿಲಂ (ತು)

೨. (ನಿಬಧ್ನಾತಿ ಧಿಷಣಾಮ್) = ಕಿಮಿದಮಿತಿ ಭದ್ನಾತಿ (ಸು)

ಪದವಿಭಾಗ

(ಗತ್ರೈರ್ಮಾಣಿಕ್ಯತ್ವಂ) = ಗತ್ರೈಃ+ಮಾಣಿಕ್ಯತ್ವಂ, ಗಗನಮಣಿಭಿಃ, ಸಾಂದ್ರಘಟಿತಂ, ಕಿರೀಟಂ, ತೇ, ಹೈಮಂ, ಹಿಮಗಿರಿಸುತೇ, ಕೀರ್ತಯತಿ, ಯಃ, (ಸ) = ಸಃ ನೀಡೇ (ಯಚ್ಛಾಯಾಚ್ಛುರಣಶಬಲಂ, ಯತ್ + ಛಾಯಾತ್ + ಚುರಣ ಶಬಲಂ, ಚಂದ್ರಶಕಲಂ, (ಧನುಶ್ಶೌನಾಸೀರಂ) = ಧನುಃ+ಶೌನಾಸೀರಂ, (ಕಿಮಿತಿ) = ಕಿಮ್ + ಇತಿ, ನ, ನಿಬಧ್ನಾತಿ, ಧಿಷಣಾಮ್.

ಅನ್ವಯಾರ್ಥ

(ಹೇ) ಹಿಮಗಿರಿಸುತೆ	(ಎಲೈ) ಪಾರ್ವತಿಯೆ,
ಮಾಣಿಕ್ಯತ್ವಂ	ಪದ್ಮರಾಗಮಣಿಯ ರೂಪವನ್ನು
ಗತ್ರೈಃ	ಹೊಂದಿರುವ
ಗಗನಮಣಿಭಿಃ	ಅಂತರಿಕ್ಷಕ್ಕೆ ರತ್ನಪ್ರಾಯರಾದ ಹನ್ನೆರಡು ಮಂದಿ ಸೂರ್ಯರಿಂದ (ದ್ವಾದಶ ಆದಿತ್ಯರಿಂದ)
ಸಾಂದ್ರಘಟಿತಂ	ಒತ್ತಾಗಿ–ಬಿಗಿಯಲ್ಪಟ್ಟ (ಹುದುಗಿಸಲ್ಪಟ್ಟ)

ಹೈಮಂ	ಚಿನ್ನದ
ತೇ	ನಿನ್ನ
ಕಿರೀಟಂ	ಕಿರೀಟವನ್ನು
ಯಃ ಕೀರ್ತಯತಿ	ಯಾವ ಕವಿಯು ವರ್ಣಿಸುತ್ತಾನೋ
ಸಃ	ಅವನು
ನೀಡೆ ಯಚ್ಛಾಯಾಚ್ಛುರಣಶಬಲಂ	(ನೀಡೆಯತ್ + ಛಾಯಾತ್ + ಛುರಣಶಬಲಂ) ಕಿರೀಟದಲ್ಲಿ ಬಿಗಿಯಲ್ಪಟ್ಟ ರತ್ನಗಳ ಕಾಂತಿಯ–ವ್ಯಾಪ್ತಿಯಿಂದ–ವಿಚಿತ್ರವಾದ ವರ್ಣವುಳ್ಳ
ಚಂದ್ರಶಕಲಂ	ಅರ್ಧಚಂದ್ರನನ್ನು (ಚಂದ್ರಖಂಡವನ್ನು)
ಶೌನಾಸೀರಂ ಧನುರಿತಿ	ಧನುರಿತಿ ಇಂದ್ರಧನುಸ್ಸೆಂದು (ಕಾಮನಬಿಲ್ಲೆಂದು)
ಧಿಷಣಾಂ	ಬುದ್ಧಿಯನ್ನು (ಯೋಚನೆಯನ್ನು)
ಕಿಂ ನ ನಿಬಧ್ನಾತಿ	ಉಂಟುಮಾಡುವುದಿಲ್ಲವೇನು? (ಮುಖ್ಯ ತಾತ್ಪರ್ಯವೇನೆಂದರೆ ಕಿರೀಟದಲ್ಲಿ ಇರತಕ್ಕ ಚಂದ್ರಕಲೆಯನ್ನು ನೋಡಿ ಕಾಮನ ಬಿಲ್ಲೆಂದು ಊಹಿಸುತ್ತಾನೆ)

ತಾತ್ಪರ್ಯ

ಓ ಹಿಮವಂತನ ಪುತ್ರಿ ಪಾರ್ವತಿಯೆ, ಅಂತರಿಕ್ಷಕ್ಕೆ ರತ್ನಪ್ರಾಯರಾದ ದ್ವಾದಶಾದಿತ್ಯರನ್ನೇ ಒತ್ತಾಗಿ ಜೋಡಿಸಲ್ಪಟ್ಟ ನಿನ್ನ ಸುವರ್ಣಮಯವಾದ ಕಿರೀಟವನ್ನು ಯಾವ ಕವಿಯು ಕೀರ್ತಿಸುತ್ತಾನೆಯೋ ಅಂತಹ ಕವೀಂದ್ರನು ನಿನ್ನ ಕಿರೀಟದಲ್ಲಿ ಹುದುಗಿಸಿದ ಮಾಣಿಕ್ಯದ ರತ್ನಗಳ ಸಮೂಹ ಕಾಂತಿಯಿಂದ ವ್ಯಾಪಿಸಿದ ಚಿತ್ರವಿಚಿತ್ರ ಬಣ್ಣಗಳಿಂದ ಕೂಡಿದ ಚಂದ್ರಖಂಡವನ್ನು ಇಂದ್ರನ ಧನುಸ್ಸೇ (ಕಾಮನಬಿಲ್ಲು) ಇದಾಗಿದೆ ಎಂದು ವರ್ಣಿಸುತ್ತಾನೆ. ಒಟ್ಟಿನಲ್ಲಿ ಹೇಳುವುದಾದರೆ ವಿಶ್ವರೂಪಳಾದ ದೇವಿಗೆ ಆಕಾಶವೇ ಕಿರೀಟವಾಗಿದೆ. ದ್ವಾದಶಾದಿತ್ಯರೇ ಕಿರೀಟದಲ್ಲಿರುವ ಕೆಂಪುರತ್ನಗಳು (ಮಾಣಿಕ್ಯಗಳು) ಕಾಮನಬಿಲ್ಲೇ ಕಿರೀಟದಲ್ಲಿ ಇರುವ ಅರ್ಧಚಂದ್ರ ಎಂದು ಈ ಶ್ಲೋಕದಲ್ಲಿ ದೇವಿಯ ಕಿರೀಟ ವರ್ಣನೆ ಮಾಡಲಾಗಿದೆ.

ಪದ್ಯಾನುವಾದ

ಹಿಮಗಿರಿಸುತೇ! ನಿನ್ನ ಹೊನ್ನ ಮುಡಿಯೆಂಥದಹ!
ಮಾಣಿಕ್ಯತನವನ್ನೈದಿದ ಗಗನಮಣಿಗಳೇ
ಸಂಘಟಿಸಿ ಸಾಂದ್ರಗೊಳಿಸಿರುವ ಆ ಮುಡಿಯ ಬಣ್ಣಿಸಲಾರ್ತ ಕವಿಯಾತನು!
ರತ್ನರಶ್ಮಿಗಳ ಬಗೆಬಗೆವರ್ಣಗಳ ಬಲೆಗೆ
ಸಿಲುಕಿ ಬಹುವರ್ಣಗಳ ಶಬಲತೆಯ ಪಡೆದಿರುವ
ಚಂದ್ರಶಕಲವನಿಂದ್ರಚಾಪವೆಂದೇ ಬಗೆದು ವರ್ಣನೆಯ ಮಾಡದಿಹನೇ
॥ ೪೨ ॥

ಟಿಪ್ಪಣಿಗಳು

ಪಂಚಾಲಂಕಾರಗಳು

೧. ಈ ಶ್ಲೋಕದಲ್ಲಿ ೫ ಬಗೆ ಅಲಂಕಾರಗಳಿವೆ.

೧ ಉತ್ಪ್ರೇಕ್ಷಾಲಂಕಾರ: ಚಂದ್ರಖಂಡವನ್ನು ಇಂದ್ರಧನುಸ್ಸು ಎಂದು ಉತ್ಪ್ರೇಕ್ಷೆ ಮಾಡಲಾಗಿದೆ.

೨ ಅಪಹ್ನುವ ಅಲಂಕಾರ : ಇದು ಚಂದ್ರಖಂಡವಲ್ಲ ಆದರೆ ಇಂದ್ರಧನುಸ್ಸು ಎಂಬುದಾಗಿ ಅಪಹ್ನವವು ತೋರುತ್ತದೆ. (ಅಪಹ್ನವ ಎಂದರೆ ಉಪಮೇಯದ ಸ್ವರೂಪವನ್ನು ಮರೆಮಾಡಿ ಉಪಮಾನದ ಸ್ವರೂಪವನ್ನು ಆರೋಪ ಮಾಡುವುದು.)

೩ ಸಂದೇಹ ಅಲಂಕಾರ: ಈ ಕಿರೀಟವು ಇಂದ್ರಧನುಸ್ಸೋ ಚಂದ್ರಖಂಡವೋ ಎಂಬುದಾಗಿ ಸಂದೇಹ ತೋರುತ್ತದೆ.

೪ ಅತಿಶಯೋಕ್ತಿ ಅಲಂಕಾರ: ಚಂದ್ರಖಂಡವನ್ನು ಇಂದ್ರಧನುಸ್ಸಿನ ರೂಪದಿಂದ ಅಧ್ಯವಸಾನ ಮಾಡಲಾಗಿದೆ. ತನ್ನ ಯೋಚನೆಯನ್ನು ಇಂದ್ರಧನುಸ್ಸಿನ ವಿಷಯದಲ್ಲಿ ಹೇಗೆ ತಾನೆ ಮಾಡುವುದಿಲ್ಲ ! ಎಂಬುದಾಗಿ ಸಾಮಾನ್ಯೋಕ್ತಿಯಿದೆ.

೫ ಸಂದೇಹಸಂಕರ ಅಲಂಕಾರ: ಈ ೪ ಅಲಂಕಾರಗಳ ಪೈಕಿ ಒಂದಕ್ಕೆ ಪ್ರಾಧಾನ್ಯವಿದೆ, ಇತರ ಅಲಂಕಾರಗಳಿಗೆ ಅಪ್ರಾಧಾನ್ಯವಿದೆ ಎಂಬುದಾಗಿ ನಿರ್ಣಯ ಮಾಡಲು ಪ್ರಮಾಣ ಇಲ್ಲವಾದ್ದರಿಂದ ಇಲ್ಲಿ ಸಂದೇಹಸಂಕರ ಎಂಬ ಅಲಂಕಾರ ಆಗುತ್ತದೆ.

ಈ ೫ ರಲ್ಲಿ ಸಂದೇಹಸಂಕರ ಅಲಂಕಾರವೇ ಹೆಚ್ಚು ಯುಕ್ತವೆಂದು ಲಕ್ಷ್ಮೀಧರಾ ವ್ಯಾಖ್ಯಾನದಲ್ಲಿ ಹೇಳಲಾಗಿದೆ. ಏಕೆಂದರೆ ಉತ್ಪ್ರೇಕ್ಷಾ, ಅತಿಶಯೋಕ್ತಿ ಅಲಂಕಾರಗಳು

ಸ್ಪಷ್ಟವಾಗಿವೆ. ಅಪಹ್ನುವನ್ನು ತಿಳಿಸುವ ಪದವು ಇಲ್ಲವಾದರೂ "ಹೇಗೆ ತಾನೆ ಯೋಚನೆಯನ್ನು ಮಾಡುವುದಿಲ್ಲ?" ಎಂಬುದಾಗಿ ಅಪಹ್ನುವ ಉಲ್ಲೇಖ ಮಾಡಲು ಸಾಧ್ಯವಿದೆ. ಚಂದ್ರಖಂಡವನ್ನು ನೋಡಿದಾಗ ಇಂದ್ರಧನುಸ್ಸು ಸ್ಮರಣೆಗೆ ಬರುವುದರಿಂದ ಸಂದೇಹವನ್ನು ತಿಳಿಸಲು ಸಾಧ್ಯವಿದೆ. ಆದ್ದರಿಂದ ಸಂದೇಹಸಂಕರ ಅಲಂಕಾರವೆಂದು ಹೇಳುವುದೇ ಹೆಚ್ಚು ಯುಕ್ತವಾಗಿದೆ.

(ಶೇ-ಪುಟ ೧೭೦)

೨. ಗತೈರ್ಮಾಣಿಕ್ಯತ್ವಂ ಗಗನಮಣಿಭಿಸ್ಸಾಂದ್ರಘಟಿತಂ ಕಿರೀಟಂ

ಕುರುವಿಂದಮಣಿಶ್ರೇಣಿ ಕನತ್ಕೋಟೀರ ಮಂಡಿತಾ ಎಂದು (ಲಲಿತಾ ಸಹಸ್ರನಾಮದ ೪ನೇ ಶ್ಲೋಕ ನಾಮ ೧೪) ಹೇಳಿದೆ. "ಪದ್ಮರಾಗಮಣಿ (ಕುರುವಿಂದಮಣಿ) ಗಳಿಂದ ಖಚಿತವಾದ ಸಾಲುಗಳಿಂದ ಪ್ರಕಾಶಮಾನ ವಾದ ಕಿರೀಟವನ್ನು ಧರಿಸಿರುವವಳು" ಎಂದು ದೇವಿಯನ್ನು ವರ್ಣಿಸಲಾಗಿದೆ.

(ಲ-ಕುಂ-ಪುಟ ೮೩)

೩. ಪದ್ಮರಾಗಮಣಿಗಳು ರತ್ನಗಳಲ್ಲೇ ಶ್ರೇಷ್ಠವಾದವು. ಕುರುವಿಂದಗಳು ಎನ್ನುವುದು ಉತ್ತಮದರ್ಜೆಯ ಮಣಿಗಳು. ಕೆಂಪು ಮಾಣಿಕ್ಯಗಳಂತೆ ಪದ್ಮದ ಆಕಾರದಲ್ಲಿ ಹೊಳೆಯುತ್ತಾ ಚಿನ್ನದ ಕಿರೀಟದಲ್ಲಿ ಅಡಕವಾಗಿ ಅಮ್ಮನವರ ಶಿರಸ್ಸಿಗೂ ಹಣೆಗೂ ಪೂರ್ವಶೋಭೆಯನ್ನು ತಂದುಕೊಡುತ್ತದೆ.

(ಲ-ಲ-ಪುಟ ೬೪)

೪. ಕುರುವಿಂದ ಎಂದರೆ ಪದ್ಮರಾಗ. ಕುರುವಿಂದಮಣಿ-ಶ್ರೇಣಿ-ಕಿರೀಟದಿಂದ ಶೋಭಿಸುತ್ತಿರುವ ದೇವಿಯನ್ನು ಧ್ಯಾನಿಸಿದರೆ ಭಕ್ತಿಯೇ ಮೊದಲಾದವು ಹೆಚ್ಚುವುವು ಎಂಬುದು ಧ್ವನ್ಯರ್ಥ.

(ಲ-ಆ ಪುಟ ೫೧)

೫. **ಗಗನಮಣಿಭಿಸ್ಸಾಂದ್ರ ಘಟಿತಂ**
ಅಂತರಿಕ್ಷಕ್ಕೆ ರತ್ನಪ್ರಾಯದ ದ್ವಾದಶಾದಿತ್ಯರಿಂದ ಖಚಿತವಾದದ್ದು ದೇವಿ ಕಿರೀಟ. ಗಗನಮಣಿಗಳಿಂದ ಬಿಗಿಯುವಷ್ಟು ಎಂದರೆ ದ್ವಾದಶಾದಿತ್ಯರು ಕಿರೀಟದಲ್ಲಿನ ಮಣಿಗಳಂತೆ ಬೆಳಗುತ್ತಿದ್ದಾರೆ. ಕಾಮನಬಿಲ್ಲಿನ ಕಾಂತಿಯನ್ನು ಹೊಂದಿದ್ದಾರೆ. **ದ್ವಾದಶಾದಿತ್ಯರು ೧೨ ಮಂದಿ** ೧) ಇಂದ್ರ ೨ ಧಾತಾ ೩ ಪರ್ಜನ್ಯ ೪ ತ್ವಷ್ಟಾ ೫ ಪೂಷ ೬ ಆರ್ಯಮಾ ೭ ಭಗ ೮ ವಿವಸ್ವಂತ ೯ ವಿಷ್ಣು ೧೦ ಅಂಶುಮಂತ ೧೧ ವರುಣ ೧೨ ಮಿತ್ರ. ೧೨ ತಿಂಗಳಲ್ಲಿ ಒಂದೊಂದು ತಿಂಗಳಿಗೆ ಒಬ್ಬೊಬ್ಬ ಆದಿತ್ಯ ಅಧಿಪತಿಯಾಗಿ ಇರುತ್ತಾನೆ. ಆಯಾ ಮಾಸಕ್ಕೆ ಕ್ಷೇಮವನ್ನು ಉಂಟುಮಾಡಲಿರುವ ಅಧಿಪತಿಯಾದ

ಆದಿತ್ಯನನ್ನು ಪೂಜಿಸಿದರೆ ಶುಭಫಲಗಳನ್ನು ಕೊಡುತ್ತಾರೆ. ಮಾನಸಗಳ ಋತುಗಳ ಬದಲಾವಣೆಗೆ ಅವರೇ ಕಾರಣರು.

(ಪ–ಪುಟ ೧೪೪)

೬. **ಶೌನಾಸೀರಂ ಧನುರಿತಿ ಧಿಷಣಾಂ ಕಿಂ ನ ನಿಬಧ್ನಾತಿ**

ದೇವಿಯ ಕೇಶಾದಿಪಾದಾಂತವರ್ಣನಾ ಸ್ತೋತ್ರವನ್ನು ಕೇಶದಪ್ರತೀಕವಾದ ಮಕುಟದಿಂದ ಪ್ರಾರಂಭಿಸಿದೆ. ದ್ವಾದಶಾದಿತ್ಯರು ಮಣಿರೂಪದಿಂದ ಮಕುಟದಲ್ಲಿರುವವರೆಂದು ಅರಿತ ಕವಿ ವರ್ಣನೆಗೆ ತಕ್ಕ ಉಪಮೇಯವನ್ನು ಹುಡುಕುತ್ತಾ ಮಣಿಪ್ರಭೆಯಿಂದ ಕಾಂತಿಗುಂದಿದ ಮಸ್ತಕದ ಚಂದ್ರಲೇಖೆಯನ್ನು ಅನಿಮಿತ್ತ (ಕಾರಣವಿಲ್ಲದೆ) ಕಂಡುಬಂದ ಕಾಮನಬಿಲ್ಲೆಂದು ಭ್ರಮಿಸಿದ್ದಾನೆ.

(ಪು–ಪುಟ ೬೭)

೭. ೪೨ ನೇ ಶ್ಲೋಕದಿಂದ ೧೦೦ ರವರೆಗಿನ ಸೌಂದರ್ಯಲಹರಿಯ ಶ್ಲೋಕಗಳನ್ನು "ಸೌಂದರ್ಯಲಹರಿ"ಯೆಂದೂ ೧–೪೧ ವರೆಗಿನ ಶ್ಲೋಕಗಳನ್ನು "ಆನಂದಲಹರಿ" ಎಂದು ಕರೆಯುವುದು ರೂಢಿಯಲ್ಲಿದೆ. ಸಾಧಕರಲ್ಲಿ ಉತ್ತಮ, ಮಧ್ಯಮ ಅಥವಾ ಅಧಮ ವರ್ಗದ ಅಧಿಕಾರಿಗಳಿದ್ದಾರೆ. ಸ್ಥೂಲರೂಪದಲ್ಲಿ ದೇವಿಯನ್ನು ಕಾಣಲಿಚ್ಛಿಸುವವರಿಗೆ ಶ್ರೀ ದೇವಿಯ ವರ್ಣನೆ ಮಾಡಿದ್ದಾನೆ. ಸೂಕ್ಷ್ಮ ರೂಪದ ವರ್ಣನೆ (೧–೪) ಯನ್ನು ಉತ್ತಮ ಸಾಧಕರಿಗಾಗಿ ಮಾಡಲಾಗಿದೆ.

(ಪೋ–ಪುಟ ೨೧೫)

೮. ಶಂಕರ ಭಗವತ್ಪಾದರು ದೇವಿಯ ವರ್ಣನೆಯನ್ನು ಕಿರೀಟದಿಂದ (ಶಿರಸ್ಸಿನಿಂದ) ಪ್ರಾರಂಭಿಸಿ ಪಾದದವರೆಗೆ (ಕೇಶಾದಿಪಾದಾಂತದವರೆಗೆ) ಮಾಡಿದ್ದಾರೆ. ಶಿರೋಭಾಗದಲ್ಲಿರುವ ಕಿರೀಟ, ಚಂದ್ರರೇಖೆಯನ್ನು ವರ್ಣಿಸಿದ್ದಾರೆ. ಆದರೆ ದೇವತೆಗಳನ್ನು ಪಾದದಿಂದ ಶಿರಸ್ಸಿನವರೆಗೆ ಆರೋಹಣ ಕ್ರಮದಲ್ಲಿ ವರ್ಣಿಸುವುದು ವಾಡಿಕೆ, ಮತ್ತೆ ಶಂಕರರೇಕೆ ಶಿರಸ್ಸಿನಿಂದ ಪಾದದವರೆಗೆ ಅವರೋಹಣದಲ್ಲಿ ವರ್ಣಿಸಿದ್ದಾರೆ. ಇದಕ್ಕೆ ಕಾರಣವನ್ನು ಪೋಚಿನಪೆದ್ದಿ ಕಾಮಸತ್ಯನಾರಾಯಣರು ಹೇಳುವುದು ಹೀಗೆ: ಲಲಿತಾಸಹಸ್ರನಾಮದಲ್ಲಿ ಹೇಳಿದಂತೆ "ಚಿದಗ್ನಿಕುಂಡಸಂಭೂತಾ" ಎಂಬ ನಾಮದ ಪ್ರಕಾರ ಅಗ್ನಿಕುಂಡದಿಂದ ದೇವಿ ಉದ್ಭವಿಸಿ ಬಂದಾಗ ಮೊದಲು ಮೇಲಕ್ಕೆ ಬಂದದ್ದು ಶಿರಸ್ಸು, ಅನಂತರ ಉಳಿದ ಅಂಗಾಂಗಗಳು. ಆದ್ದರಿಂದ ಆದ ಶರೀರ ಅವರೋಹಣ ಕ್ರಮದಲ್ಲಿ ಶಿರಸ್ಸಿನಿಂದ ಪಾದದವರೆಗೆ ದೇವಿಯನ್ನು ವರ್ಣಿಸಿದ್ದಾರೆ.

(ಪೋ–ಪುಟ ೨೧೬)

೯. **ಗತೈರ್ಮಾಣಿಕ್ಯತ್ವಂ ಗಗನಮಣಿಭಿಃ ಸಾಂದ್ರಘಟಿತಂ**

ಈ ಶ್ಲೋಕದಲ್ಲಿ ದೇವಿಯ ರತ್ನಕಿರೀಟವನ್ನು ವರ್ಣಿಸಿದ್ದಾರೆ. ದೇವಿಯ ಬ್ರಹ್ಮಾಂಡ ಸ್ವರೂಪಿಣಿಯಾಗಿ ವಿಶ್ವವಿರಾಟ್ ಶರೀರೆಯಾಗಿದ್ದಾಳೆ. ಅಂಥ ಬೃಹತ್ ಮಹತ್ ಶರೀರೆ ಆದ ಆಕೆಗೆ ಆಕಾಶವೇ ಕಿರೀಟವಾಗಿದೆ. ಆ ಕಿರೀಟಕ್ಕೆ ರತ್ನಗಳು (ನಮ್ಮ ನವರತ್ನಗಳು) ಸೂಕ್ತವಾಗಲಾರವು. ಅದಕ್ಕೆ ಆಕಾಶದಲ್ಲಿ ಬೃಹತ್ ಸ್ವರೂಪದಲ್ಲಿ ಮಣಿಗಳಂತೆ ಪ್ರಜ್ವಲಿಸುತ್ತಿರುವ ದ್ವಾದಶಾದಿತ್ಯರೇ ಕಿರೀಟದಲ್ಲಿರುವ ಮಣಿಗಳಾಗಿದ್ದಾರೆ.

(ಪೋ–ಪುಟ ೨೧೮)

೧೦. ೪೨ನೇ ಶ್ಲೋಕದಿಂದ ಮುಂದಕ್ಕೆ 'ಸೌಂದರ್ಯಲಹರಿ' ಎಂದೂ ಈ ಕೆಲವರು ಕರೆಯುತ್ತಾರೆ. ಮತ್ತು ಕೆಲವು ವ್ಯಾಖ್ಯಾನಕಾರರು 'ಸೌಂದರ್ಯ ಲಹರಿ ಪೂರ್ವಭಾಗ' (೧–೪೧) 'ಆನಂದಲಹರೀ ಸೌಂದರ್ಯ ಲಹರಿ ಉತ್ತರಭಾಗ' (೪೨–೧೦೦) ಎಂದು ಕರೆದಿದ್ದಾರೆ. ಆದರೆ ಲಕ್ಷ್ಮೀಧರ, ಭಾಸ್ಕರರಾಯ, ಕೈವಲ್ಯಾಶ್ರಮ ಮೊದಲಾದ ವ್ಯಾಖ್ಯಾನಕಾರರು ಇಡೀ ಸ್ತೋತ್ರಮಾಲೆಯನ್ನು 'ಸೌಂದರ್ಯಲಹರಿ' ಎಂದೇ ಕರೆದಿದ್ದಾರೆ. ಸಾಮಾನ್ಯವಾಗಿ ಎಲ್ಲರೂ 'ಸೌಂದರ್ಯಲಹರಿ' ಎಂದೇ ಇಡೀ ಸ್ತೋತ್ರವನ್ನು ಕರೆಯುತ್ತಾರೆ.

(ಸು–ಪುಟ ೧೬೬)

ಉದ್ಯದ್ಭಾನು ಸಹಸ್ರಾಭಾ

೧೧. ಲಲಿತಾದೇವಿಯ ಕಿರೀಟವನ್ನು ಉದ್ಯದ್ಭಾನುಸಹಸ್ರಾಭಾ (ಶ್ಲೋಕ ೨ ನಾಮ ೬)

'ಉದಯಿಸುತ್ತಿರುವ ಸಾವಿರಾರು ರತ್ನವರ್ಣದ ಸೂರ್ಯರಂತೆ ಪ್ರಕಾಶವುಳ್ಳವಳು' ಎಂದು ವರ್ಣಿಸಲಾಗಿದೆ. ಇಲ್ಲಿ ದೇವಿಯ ಕಿರೀಟವನ್ನು ದ್ವಾದಶಾದಿತ್ಯರೇ ಕಿರೀಟದಲ್ಲಿ ಮಣಿಗಳೊಡನೆ ಖಚಿತಗೊಂಡು ವಿವಿಧವರ್ಣಗಳಿಂದ ಕಂಗೊಳಿಸುತ್ತದೆ ಎಂದು ಸೌಂದರ್ಯಲಹರಿಯಲ್ಲಿ ಹೇಳಿದೆ. ದ್ವಾದಶಾದಿತ್ಯರ ಮಣಿಕಾಂತಿ ಕಿರೀಟದ ಮೇಲಿರುವ ಚಂದ್ರರೇಖೆಯಲ್ಲಿ ಪ್ರತಿಫಲಿಸಿ ಕಾಮನಬಿಲ್ಲಾಗಿ ಕಾಂತಿ ಕಾಣುತ್ತಿದೆ.

(ಪ–ಪುಟ ೪೯)

೧೨. ದ್ವಾದಶಾದಿತ್ಯರು ದೇವಿಯ ಕಿರೀಟದಲ್ಲಿ ಕೆತ್ತಿದ ಮಣಿಗಳಂತ ಪ್ರಕಾಶಿಸುತ್ತಿರುವ ಚಂದ್ರಲೇಖೆಯಲ್ಲಿ ಕಾಮನಬಿಲ್ಲಿನ ಬಣ್ಣಗಳಾಗಿ ಕಾಣಿಸುವುದನ್ನು ವರ್ಣಿಸಿದ ಈ ಶ್ಲೋಕದಲ್ಲಿನ ದೃಶ್ಯವು ಉಷೋದಯ ಕಾಲದಲ್ಲಿ (ಸೂರ್ಯೋದಯಕ್ಕೆ ಮುಂಚೆ ಆಕಾಶದಲ್ಲಿ ಕೆಂಬಣ್ಣದ ಬೆಳಕು ಪ್ರಸರಿಸಿದ ಅರುಣೋದಯ ಕಾಲ) ಕಾಣಿಸುವ ಪ್ರಕೃತಿ ದೃಶ್ಯವನ್ನು ನೆನಪಿಸುತ್ತದೆ. ಕಾರ್ತಿಕ ಬಹುಳ

ಚತುರ್ದಶಿ ಮತ್ತು ಅಮಾವಾಸ್ಯೆಯ ಸಂಧಿಕಾಲದಲ್ಲಿ ಆಕಾಶದಲ್ಲಿ ಉಷಃ ಕಾಲದ ಈ ಅರುಣಕ್ರಾಂತಿ ಶ್ಲೋಕದಲ್ಲಿ ವರ್ಣಿಸಿದಂತೆ ಇರುತ್ತದೆ. ಈ ಕಾರಣದಿಂದಲೇ ದೇವಿಯ ಈ ಸ್ವರೂಪವನ್ನು ರೂಪಚತುರ್ದಶಿ ಎಂದು ಕರೆಯುತ್ತಾರೆ.

(ಲ–ಲ ಪುಟ ೬೩)


೧೩. (ಲಲಿತಸಹಸ್ರನಾಮ ಶ್ಲೋಕ ೭ ನಾಮ೬) "ಉದ್ಯಾದ್ಭಾನುಸಹಸ್ರಾಭಾ" (ಉದಯಿಸುತ್ತಿರುವ ಸಾವಿರಾರು ರಕ್ತವರ್ಣದ ಸೂರ್ಯರಂತೆ ಪ್ರಕಾಶವುಳ್ಳವಳು) ಎಂದು ಲಲಿತಾ ಸಹಸ್ರನಾಮದಲ್ಲಿ ಹೇಳಲಾಗಿದೆ. ಅತ್ಯಂತ ಕೆಂಪುಬಣ್ಣವುಳ್ಳ ದೇವಿ ಪಾಮರರ ಪಾಲಿಗೆ ಕೈಗಳು ಇತ್ಯಾದಿ ಅಂಗಾಂಗವುಳ್ಳ ದೇವಿಯ ಸಗುಣರೂಪ ಸಾಮಾನ್ಯರೂಪ, ಅನಾದಿಯೂ ಅನಂತವೂ ಆದ ಪರಬ್ರಹ್ಮ ಸ್ವರೂಪವಾಗಿದ್ದು ಸೂಕ್ಷ್ಮರೂಪವಾದುದು ಎಂದು ಹೇಳಲಾಗಿದೆ.

(ಲ–ಲ ಶ್ಲೋಕ ೭, ನಾಮ ೬)

೧೪. ದೇವಿಯನ್ನು 'ಚಂದ್ರಶೇಖರೀ' ಎಂದು ಕರೆಯುವಂತೆ 'ಸೂರ್ಯಶೇಖರೀ' ಎಂದೂ ಕರೆಯುತ್ತಾರೆ. ದ್ವಾದಶಾದಿತ್ಯರು ದೇವಿಯ ಕಿರೀಟದಲ್ಲಿ ಕಂಗೊಳಿಸಿರುತ್ತಾರೆ. ಶಿವನನ್ನು ಸೂರ್ಯಶೇಖರ ಚಂದ್ರಶೇಖರನೆಂದು ಕರೆಯುತ್ತಾರೆ. ಶಿವದೇವಾಲಯಗಳಲ್ಲಿ ಪ್ರಾತಃಕಾಲದ ಸೂರ್ಯನ ಕಿರಣಗಳು ಶಿವಲಿಂಗದ ಮೇಲೆ ಬೀಳುತ್ತದೆ. ಈ ಕಾರಣದಿಂದ ಶಿವನನ್ನು ಭಾನುಶೇಖರನೆಂದೂ ಕರೆಯುವರು.

(ಪಂ–ಪುಟ ೩೧೩)

ಯಂತ್ರಾರಾಧನೆ (ಶ್ಲೋಕ-೪೨)



ಯಂತ್ರರಚನೆ : ಚಿನ್ನದ ತಗಡಿನಲ್ಲಿ ೮ ತ್ರಿಶೂಲಗಳಿಂದ ಕೂಡಿದ ಅಷ್ಟಕೋಣವನ್ನು ನಿರ್ಮಿಸಬೇಕು. ಮಧ್ಯೆ ರಂ ರಂ ರೀಂ ರೀಂ ಬೀಜಾಕ್ಷರಗಳಿರಬೇಕು.

ಪೂಜೆ : ಕೆಂಪು ಹೂಗಳಿಂದ ಲಲಿತಾಸಹಸ್ರನಾಮದ ಅರ್ಚನೆ ಮಾಡಬೇಕು.

ನೈವೇದ್ಯ : ಸಕ್ಕರೆ

ಜಪ : ದಿನಕ್ಕೆ ಸಾವಿರಸಲದ ಹಾಗೆ ೪೫ ದಿನಗಳ ಕಾಲ ಈ ಶ್ಲೋಕವನ್ನು ಜಪಿಸಬೇಕು.

ಫಲ : **ಮಹೋದರವ್ಯಾಧಿ ನಾಶ.**

ಶ್ಲೋಕ–೪೩
ದೇವಿಯ ಕೇಶಪಾಶಗಳ ವರ್ಣನೆ

ಧುನೋತು ಧ್ವಾಂತಂ ನಸ್ತುಲಿತದಲಿತೇಂದೀವರವನಂ
[೧]ಘನಸ್ನಿಗ್ಧಶ್ಲಕ್ಷ್ಣಂ ಚಿಕುರನಿಕುರುಂಬಂ ತವ ಶಿವೇ ।
ಯದೀಯಂ ಸೌರಭ್ಯಂ ಸಹಜಮುಪಲಬ್ಧುಂ ಸುಮನಸೋ
ವಸಂತ್ಯಸ್ಮಿನ್ಮನ್ಯೇ [೨]ಬಲಮಥನವಾಟೀವಿಟಪಿನಾಮ್ ॥ ೪೩ ॥

ಪಾಠಾಂತರ

೧. (ಘನಸ್ನಿಗ್ಧಶ್ಲಕ್ಷ್ಣ) = ಘನಂ ಸ್ನಿಗ್ಧಂ ಶ್ಲಕ್ಷ್ಣ (ಸು)

೨. ಬಲಮಥನವಾಟೀವಿಟಪಿನಾಮ್ = ವಲಮಥನವಾಟೀವಿಟತಪಿನಾಮ್

ಪದವಿಭಾಗ

ಧುನೋತು, ಧ್ವಾಂತುಂ, (ನಸ್ತುಲಿತದಲಿತೇಂದೀವರವನಂ) = ನಃ + ತುಲಿತದಲಿತ ಇಂದೀವರವನಂ, ಘನಸ್ನಿಗ್ಧಶ್ಲಕ್ಷ್ಣಂ, ಚಿಕುರನಿಕುರುಂಬಂ, ತವ, ಶಿವೇ, ಯದೀಯಂ, ಸೌರಭ್ಯಂ, (ಸಹಜಮುಪಲಬ್ಧುಂ) = ಸಹಜಮ್ + ಉಪಲಬ್ಧುಂ, (ಸುಮನಸೋ) = ಸುಮನಸಃ, (ವಸಂತ್ಯಸ್ಮಿನ್ಮನ್ಯೇ) = ವಸಂತಿ + ಅಸ್ಮಿನ್ + ಮನ್ಯೇ, ಬಲಮಥನವಾಟೀವಿಟಪಿನಾಮ್.

ಅನ್ವಯಾರ್ಥ

(ಹೇ) ಶಿವೇ	ಮಂಗಳಕರಳಾದ ದೇವಿಯೆ,
ತುಲಿತದಲಿತೇಂದೀವರವನಂ	(ತುಲಿತ+ದಲಿತ+ಇಂದೀವರವನಂ) ಸಮಾನವಾಗಿ ಮಾಡಿಕೊಂಡ–ಅರಳಿದ–ಕನ್ನೈದಿಲೆಗಳ ವನವುಳ್ಳ
ಘನಸ್ನಿಗ್ಧಶ್ಲಕ್ಷ್ಣಂ	ಒತ್ತಾಗಿಯೂ–ಹೊಳಪಾಗಿಯೂ + ನುಣುಪಾಗಿಯೂ ಇರುವ
ತವ	ನಿನ್ನ
ಚಿಕುರ ನಿಕುರುಂಬಂ	ಕೇಶಗಳ – ಸಮೂಹವು

ನಃ	ನಮ್ಮಗಳ
ಧ್ವಾಂತಂ	(ಅಜ್ಞಾನವೆಂಬ) ಕತ್ತಲೆಯನ್ನು
ಧುನೋತು	ಹೋಗಲಾಡಿಸಲಿ
ಯದೀಯಂ	ಯಾವುದರ
ಸಹಜಂ	ಸ್ವಭಾವಸಿದ್ಧವಾದ
ಸೌರಭ್ಯಂ	ಪರಿಮಳವನ್ನು
ಉಪಲಬ್ಧುಂ	ಹೊಂದುವುದಕ್ಕಾಗಿ
ಅಸ್ಮಿನ್	ಈ ಕೇಶಸಮೂಹದಲ್ಲಿ
ಬಲಮಥನವಾಟೀ ವಿಟಪಿನಾಂ	ಬಲಾಸುರನನ್ನು ಕೊಂದವನ (ಇಂದ್ರನ-ನಂದನವನದ) ಉದ್ಯಾನವನದಲ್ಲಿ - ಕಲ್ಪವೃಕ್ಷಗಳ
ಸುಮನಸಃ	ಪುಷ್ಪಗಳು
ವಸಂತೀತಿ	ವಾಸಮಾಡುತ್ತವೆ ಎಂಬುದಾಗಿ
ಮನ್ಯೇ	ತಿಳಿದಿರುತ್ತೇನೆ.

ತಾತ್ಪರ್ಯ

ಎಲೈ ಮಂಗಳಕರಳಾದ ಶಿವೆಯೇ, ಅರಳಿದ ಕನ್ನೈದಿಲೆ ಹೂಗಳ ಸಮೂಹಕ್ಕೆ ಸಮಾನವಾಗಿರುವ, ಒತ್ತಾಗಿಯೂ, ನುಣುಪಾಗಿಯೂ ಹೊಳಪಾಗಿಯೂ ಇರುವ ನಿನ್ನ ಕೇಶಸಮೂಹವು, ನಮ್ಮ ಅಜ್ಞಾನವೆಂಬ ಕತ್ತಲೆಯನ್ನು ಹೋಗಲಾಡಿಸಲಿ. ಈ ನಿನ್ನ ಕೇಶಪಾಶದಲ್ಲಿ ಬಲಾಸುರನನ್ನು ಕೊಂದ ಇಂದ್ರನ ಉದ್ಯಾನವನದ ಕಲ್ಪವೃಕ್ಷದ ಹೂಗಳು ಬಂದು ನೆಲಸಿವೆ ಎಂದು ತಿಳಿದಿರುತ್ತೇವೆ.

ಪದ್ಯಾನುವಾದ

ದಟ್ಟೈಸಿ ಚೆಲುವಾಂತ ಕನ್ನೈದಿಲೆಯ ವನವ
ಪೋಲ್ವ ಕುರುಳೋಳಿ ನಿನ್ನದು, ಶಿವೇ, ನಮ್ಮ ಅಂ-
ತಃಕರಣದಜ್ಞಾನತಮವ ಪರಿಹರಿಸಿ ಕಾಪಿಡುತಿರಲಿ ನಿರುತ ತಾಯೆ;
ನಿನ್ನ ಈ ಕುರುಳೊಡನೆ ಒಗೆತಂದ ನರುಗಂಪ
ಕೊಳಲೆಂದೆ ಇಂದ್ರನಂದನವನದ ತರುವೃಂದ-
ಸುಮಗಳವು ನಿನ್ನ ಈ ನಲ್ಗುರುಳನಾಶ್ರಯಿಸಿರುವುವೆಂದು ನಾನು ತಿಳಿದಿರುವೆ
ತಾಯೆ ॥ ೪೩ ॥

ಟಿಪ್ಪಣಿಗಳು

೧ **ವಲಮಥನವಾಟೀವಿಟಪಿನಾಂ**

'ವಲಮಥನ' ಎಂದರೆ ಬಲಾರಾತಿಯಾದ ಇಂದ್ರನು. ವಕಾರ ಮತ್ತು ಬಕಾರಗಳಿಗೆ ಅಭೇದವನ್ನು ಕವಿ ಇಲ್ಲಿ ಮಾಡಿರುವುದು (ಎಂದರೆ ಬಕಾರಕ್ಕೆ ಬದಲಾಗಿ ವಕಾರ ಬಳಸಿರುವುದು) ಅನುಪ್ರಾಸಕ್ಕೋಸ್ಕರ ಎಂದು ತಿಳಿಯಬೇಕು. (ಕಪನೀಪತಿಯ್ಯನವರು ಬಲಮಥನ ಎಂದೇ ಪಾಠ ಇಟ್ಟುಕೊಂಡಿದ್ದಾರೆ.)

೨ **ಈ ಶ್ಲೋಕದಲ್ಲಿ ೨ ಅಲಂಕಾರಗಳಿವೆ.**

ಒಂದು ಉತ್ಪ್ರೇಕ್ಷಾಲಂಕಾರ, ಇನ್ನೊಂದು ಉಪಮಾಲಂಕಾರ

ಉತ್ಪ್ರೇಕ್ಷಾಲಂಕಾರದ ಲಕ್ಷಣ ಹೀಗಿದೆ:-

ಉಪಮೇಯವನ್ನು ಉಪಮಾನರೂಪವಾಗಿ ಸಂಭಾವನೆ ಮಾಡುವುದು ಉತ್ಪ್ರೇಕ್ಷಾಲಂಕಾರ. "ನಂದನವನದ ಕಲ್ಪವೃಕ್ಷಗಳ ಪುಷ್ಪಗಳು ತಾವೂ ಕೂಡ ಈ ದೇವಿಯ ಕೇಶಪಾಶದ ಸುವಾಸನೆಯನ್ನು ಹೊಂದುವುದಕ್ಕಾಗಿ ಸೇರಿಕೊಂಡಿವೆಯೋ ಎಂದು ನಾನು ಊಹಿಸುತ್ತೇನೆ" ಎಂದಿದ್ದಾರೆ ಟೀಕಾಕಾರರಾದ ಕಪನಿಪತಯ್ಯನವರು.

(ಕ-ಶ್ಲೋಕ ೪೩)

೩ "ತುಲಿತದಲಿತೇಂದೀವರವನಂ" ಎಂಬಲ್ಲಿ ಉಪಮಾಲಂಕಾರವಿದೆ. ಇಲ್ಲಿ ಎರಡು ಅಲಂಕಾರಗಳಿಗೆ ಸಂಸೃಷ್ಟಿಯಾಗಿದೆ. ಏಕೆಂದರೆ ಎಳ್ಳು ಮತ್ತು ಅಕ್ಕಿಕಾಳುಗಳಂತೆ ಈ ಅಲಂಕಾರಗಳು (ಉತ್ಪ್ರೇಕ್ಷಾಲಂಕಾರ, ಉಪಮಾಲಂಕಾರ) ಮಿಶ್ರವಾಗಿವೆ. ಹಾಲು ನೀರುಗಳಂತೆ ಮಿಶ್ರವಾದರೆ ಸಂಕರವಾಗುತ್ತದೆ.

(ಶೇ-ಪುಟ ೧೭೧)

೪ "ಮಿಶ್ರಾಲಂಕಾರ"ದಲ್ಲಿ ಎರಡು ಬಗೆ. ಒಂದು ಪದ್ಯದಲ್ಲಿ ಅನೇಕ ಅಲಂಕಾರಗಳನ್ನು ಸುಲಭವಾಗಿ ಬೇರ್ಪಡಿಸುವಂತಿದ್ದರೆ ಅದಕ್ಕೆ ಸಂಸೃಷ್ಟಿ ಅಲಂಕಾರವೆಂದು ಹೆಸರು. ಇದನ್ನು ವಿವರಿಸಲು ತಿಲ-ತಂಡುಲನ್ಯಾಯವನ್ನು ಬಳಸುತ್ತಾರೆ. (ಎಳ್ಳು ಅಕ್ಕಿ ಬೆರತಂತೆ) ರುಯ್ಯಕ ಎಂಬ ಅಲಂಕಾರಿಕ "ತಿಲ-ತಂಡುಲ ನ್ಯಾಯೇನ ಮಿಶ್ರತ್ವೇ ಸಂಸೃಷ್ಟಿಃ" ಎನ್ನುತ್ತಾನೆ. "ತುಲಿತ ದಲಿತೇಂದೀವರವನಂ" ಎಂಬಲ್ಲಿ ಸಂಸೃಷ್ಟಿ ಅಲಂಕಾರವಿದೆ ಎಂದರೆ ಉಪಮಾಲಂಕಾರ ಮತ್ತು ಉತ್ಪ್ರೇಕ್ಷಾಲಂಕಾರ ಸೇರಿದೆ.

(ಅಲಂಕಾರ ತತ್ವ: ಎಂಎಂ ಹೆಗ್ಗಡೆ ಪುಟ ೧೯೦-೧೯೧)

೫ ಯದೀಯಂ ಸೌರಭ್ಯಂ ಸಹಜಮುಪಲಬ್ಧುಂ ಸುಮನಸಃ

"ವಸಂತ್ಯಸ್ಮಿನ್‌ಮನ್ಯೇ ಬಲಮಥನವಾಟೀವಿಟಪಿನಾಂ" ಎಂಬಲ್ಲಿ ಅನುಪ್ರಾಸವೆಂಬ ಶಬ್ದಾಲಂಕಾರವೂ ಉತ್ಪ್ರೇಕ್ಷೆಯೂ ಬೆರೆತಿವೆ. ಹೀಗಾದಾಗ ಸಂಸೃಷ್ಟಿ ಸಂಕರಾಲಂಕಾರವೆನ್ನುತ್ತಾರೆ. ಸಂಸೃಷ್ಟಿಯಲ್ಲಿ ಸಂಯೋಗನ್ಯಾಯವಾದರೆ, ಸಂಕರದಲ್ಲಿ ಸಮವಾಯ ನ್ಯಾಯವಿದೆ, ಎಂದರೆ ಕ್ಷೀರ ನೀರ ನ್ಯಾಯ (ಹಾಲು ನೀರು ಬೆರೆತಂತೆ) ಎಂದು ವಿವರಿಸಲಾಗಿದೆ. ರುಯ್ಯಕ-'ಕ್ಷೀರನೀರಾನ್ಯಾಯೇನ ತು ಸಂಕರಃ ಎನ್ನುತ್ತಾನೆ.

(ಅಲಂಕಾರ ತತ್ವ-ಎಂಎಂ ಹೆಗ್ಗಡೆ ಪುಟ ೧೯೦)

"ಸುಮನಸಃ" ಎಂದರೆ ಹೂಗಳು, ದೇವಿಯ ಕೇಶಪಾಶದಲ್ಲಿ ಸಹಜವಾಗಿರುವ ಪರಿಮಳವನ್ನು ಹೊಂದಬೇಕೆಂದು ಕಲ್ಪವೃಕ್ಷದ ಹೂಗಳು ಸೇರಿಕೊಂಡಿವೆ. ಏಕೆಂದರೆ ದೇವಿಯ ಕೇಶಪಾಶದ ಸುಗಂಧವು ಕಲ್ಪವೃಕ್ಷದ ಹೂಗಳಿಗಿಲ್ಲ.

೬ ಬಲಮಥನವಾಟೀವಿಟಪಿನಾಂ

ಬಲಮಥನನೆಂದರೆ ಇಂದ್ರನು ಕೊಂದ ಬಲಾಸುರನು ಎಂದರ್ಥ. ಬಲಮಥನ ಪದ ವಲಮಥನ ಎಂದಾಗಿದೆ. ಏಕೆಂದರೆ 'ವಬಯೋರಭೇದಃ' ಎಂಬ ಸೂತ್ರದಂತೆ ವಕಾರಕ್ಕೂ ಬಕಾರಕ್ಕೂ ಅರ್ಥವ್ಯತ್ಯಾಸವಿಲ್ಲ. ಇಲ್ಲಿ ವಕಾರವನ್ನು ವೃತ್ಯನುಪ್ರಾಸ ಸೌಂದರ್ಯಕ್ಕಾಗಿ ಬಳಸಲಾಗಿದೆ 'ವಲಮಥನವಾಟೀವಿಟಪಿನಾಂ' (ವಕಾರಗಳನ್ನು ಗಮನಿಸಿ)

೭ ವಲಮಥನ

'ವಲಮಥನ' ಎಂದರೆ ವಲಾಸುರನ್ನು ಕೊಂದ ಇಂದ್ರ ಎಂದರ್ಥ. ವಲಾಸುರನು ಬಲಿಚಕ್ರವರ್ತಿಯ ಸೇನಾಧಿಪತಿ. ಬಲಿಚಕ್ರವರ್ತಿ ಜತೆ ಇಂದ್ರ ಯುದ್ಧ ಮಾಡಿದಾಗ ವಲಾಸುರನನ್ನು ಇಂದ್ರನು ಕೊಂದಿದ್ದರಿಂದ ಇಂದ್ರನಿಗೆ ವಲಮಥನ (ಬಲಮಥನ) ಎಂದು ಹೆಸರಾಯಿತು.

(ಪೋ-ಪುಟ ೨೨೩)

೮ ಈ ಶ್ಲೋಕದ ಅಂತರಾರ್ಥವನ್ನು ಪವನಿ ನಿರ್ಮಲ ಪ್ರಭಾವತಿ ಅವರು ತಮ್ಮ ಭವಾನಿ ಸೌಂದರ್ಯಲಹರಿ ವ್ಯಾಖ್ಯಾನದಲ್ಲಿ ಹೀಗೆ ವಿವರಿಸಿದ್ದಾರೆ:-

ನಮ್ಮ ಹೃದಯದಲ್ಲಿ ನಮ್ಮ ತಲೆಯಲ್ಲಿರುವ ಕೂದಲಿನ ಸಂಖ್ಯೆಗಿಂತ ಮಿಗಿಲಾಗಿ ಲೆಕ್ಕವಿಲ್ಲದಷ್ಟು ಕೋರಿಕೆಗಳು ನಿರಂತರವಾಗಿ ಹುಟ್ಟುತ್ತಲೇ ಇರುತ್ತವೆ. ಒಂದು

ತೀರಿದಾಗ ಮತ್ತೊಂದು ಕೋರಿಕೆ ಹುಟ್ಟಿಕೊಳ್ಳುತ್ತಿರುತ್ತದೆ. ಈ ಕೋರಿಕೆಗಳನ್ನು ಎಷ್ಟು ತೀರಿಸಿದರೂ ಅವು ಬೆಳೆಯುತ್ತಲೇ ಇರುತ್ತವೆಯೇ (ಕೇಶರಾಶಿ ಹಾಗೆ) ಹೊರತು ಮುಗಿಯುವುದಿಲ್ಲ. ಕಾರ್ಗತ್ತಲಿನೊಡನೆ, ಕನ್ನೆದಿಲೆಗಳೊಡನೆ, ಮರಿದುಂಬಿಗಳ ಗುಂಪಿನೊಡನೆ ಕೇಶಪಾಶಗಳನ್ನು ಹೋಲಿಸಿದಾಗ (ಕಾರ್ಗತ್ತಲಿನ ಅಜ್ಞಾನಾಂಧಕಾರ, ದುಂಬಿಯ ಅತಿಚಂಚಲತೆ, ಕನ್ನೈದಿಲೆಗಳು ಹಗಲು ಬೆಳಕನ್ನು ನೋಡಲಾಗದೆ ಮುದುರಿಕೊಳ್ಳುವ ಲಕ್ಷಣಗಳ ಗುರುತಿಗೆ ಬರುತ್ತವೆ. ನಮ್ಮ ಮನಸ್ಸು ಈ ಮೂರಕ್ಕೂ ಹದವಾದ ಭೂಮಿಯಂತೆ ಇದೆ.

೮ ತಾಯಿ, ನಿನ್ನ ಕೇಶಪಾಶ ನಮಗೆ ಕ್ಷೇಮವನ್ನು ಉಂಟುಮಾಡಲಿ ಎಂದು ಆದಿಶಂಕರರು ಕೇಳಿಕೊಳ್ಳುವಲ್ಲಿನ ಅರ್ಥವೇನೆಂದರೆ– ನಮ್ಮೊಳಗಿನ ಅಜ್ಞಾನದ ಕೋರಿಕೆಗಳನ್ನು, ಅತಿಯಾಸೆ ಎನ್ನುವ ತಮಸ್ಸನ್ನು ಹೊಡೆದೋಡಿಸಿ ಸತ್ಸಂಸ್ಕಾರವೆಂಬ ಜ್ಞಾನಜ್ಯೋತಿಯನ್ನು ಆ ತಾಯಿಯ ಕೇಶಪಾಶ ನಮ್ಮೆಲ್ಲರಿಗೂ ಪ್ರಸಾದಿಸಲಿ ಎನ್ನುವ ಅಭಿಲಾಷೆ ಆಂತರ್ಗತವಾಗಿದೆ.

(ಪ–ಪುಟ ೫೦–೫೧)

೯ ದೇವಿಯನ್ನು 'ಸುಗಂಧ ಕುಂತಲಾಂಬ' ಎಂದು ಕರೆಯುತ್ತಾರೆ. ಭವಾನೀ ಭುಜಂಗಪ್ರಯಾತ ಸ್ತೋತ್ರದಲ್ಲಿ (೯ನೇ ಶ್ಲೋಕ) "ತಾಯಿ ಭವಾನೀ, ನಿನ್ನ ಮುಖದ ಮೇಲೆ ಕಾಣಿಸುತ್ತಿರುವ ಮುಂಗುರುಳು ಭ್ರಮರಬೃಂದಗಳನ್ನು ನೆನಪಿಗೆ ತರುತ್ತಿವೆ. ನಿನ್ನ ನೀಳವಾದ ಕಪ್ಪುಕಲೆಗಳನ್ನು ಮುಚ್ಚಿಡುವ ಆಭರಣ, ಚಂದ್ರರೇಖೆ, ಕಾರ್ಗತ್ತಲಿನಲ್ಲಿ ಮಿಂಚುತ್ತಿರುವ ವಿದ್ಯುಲ್ಲತೆಗಳನ್ನು ಅರ್ಧಚಂದ್ರ ಬಿಂಬವನ್ನು ನೆನಪಿಗೆ ತರುತ್ತವೆ. ಅಂಥ ನಿನ್ನ ದಿವ್ಯಮುಖಾರವಿಂದಕ್ಕೆ ನನ್ನ ನಮಸ್ಕಾರಗಳು."

(ಪ–ಪುಟ ೩೫೪)

೧೦ ಕೇಶಪಾಶ ಸುಗಂಧಭರಿತವಾಗಿರಲು ಹೂಗಳನ್ನು ನಾರಿಯರು ಭೂಲೋಕದಲ್ಲಿ ಮುಡಿಯುತ್ತಾರೆ. ಆದರೆ ಇಲ್ಲಿ ಅದಕ್ಕೆ ವ್ಯತಿರಿಕ್ತವಾಗಿ ಹೂಗಳೇ ಸುಗಂಧಪೂರಿತ ವಾಗಲು ದೇವಿಯ ಮುಡಿಯನ್ನು ಅಲಂಕರಿಸಿವೆ ಎಂದು ದೇವಿಯ ಕೇಶಪಾಶದ ವಿಶೇಷವನ್ನು ಹೇಳಲಾಗಿದೆ.

(ಸು–ಪುಟ ೧೯೮)

೧೧ ಲಲಿತಾಸಹಸ್ರನಾಮದಲ್ಲಿ (ಶ್ಲೋಕ ೪ ನಾಮ ೧೩) ದೇವಿಯನ್ನು ಚಂಪಕಾಶೋಕ ಪುನ್ನಾಗಸೌಗಂಧಿಕಾಲಸತ್ಕಚಾ ಎಂದು ವರ್ಣಿಸಿದೆ.

[ಸಂಪಿಗೆ, ಅಶೋಕ ಸುರಹೊನ್ನೆ ಸುಗಂಧರಾಜ ಮುಂತಾದ ಪರಿಮಳಯುಕ್ತ ಹೂಗಳನ್ನು ಮುಡಿದಿರುವ ಮುಡಿಯುಳ್ಳ (ಧಮ್ಮಿಲ್ಲ) ವಳಿಗೆ ನಮಸ್ಕಾರ.

೧೨ ಲಲಿತಾಸಹಸ್ರನಾಮದಲ್ಲಿ (ಶ್ಲೋಕ ೪ ನಾಮ ೧೩) ಹೇಳಿರುವ ಹೂಗಳ ವಿಶೇಷವನ್ನು ಹೀಗೆ ವರ್ಣಿಸಿದೆ:– ಜೇನುಹುಳಗಳಿಂದ ಆಕರ್ಷಿಸಲ್ಪಡದೆ ಇರುವುದರಿಂದ ಚಂಪಕ, ಶೋಕವೇ ಇಲ್ಲವೆ ಆನಂದವನ್ನುಂಟು ಮಾಡುವುದರಿಂದ ಅಶೋಕ, ಪೂಜ್ಯವಾಗಿರುವುದರಿಂದ ಪುನ್ನಾಗ, ಪರಿಮಳಯುಕ್ತವಾಗಿರುವುದರಿಂದ ಸೌಗಂಧಿಕಾ. ಇಂಥ ಹೂಗಳನ್ನು ಮುಡಿಯಲ್ಲಿ ದೇವಿಧರಿಸಿದ್ದಾಳೆ ಎಂದು ಲಲಿತಾ ಸಹಸ್ರನಾಮದಲ್ಲಿ ಚಂಪಕಾಶೋಕಪುನ್ನಾಗ ಸೌಗಂಧಿಕಾ ಲಸತ್ಕಚಾ ಎಂದು ಹೇಳಿದೆ.

(ಲ–ಯ ಪುಟ ೮೩)

ಹೀಗೆ ಶ್ರೀಲಲಿತಾ ದೇವಿಯ ವಿರಾಟ್‌ಸ್ವರೂಪದಲ್ಲಿ ಅವಳ ಶಿರಸ್ಸು ವಿಶ್ವದಲ್ಲಿ ವ್ಯಾಪಿಸಿರುವ ಕಲಾಸ್ವರೂಪವಾಗಿದೆ. ವ್ಯಷ್ಟಿಯಲ್ಲಿ ಆನಂದಮಯ ಕೋಶವಾಗಿದೆ. ಪುಷ್ಪಗಳ ತತ್ವಗಳು ಆನಂದಮಯಕೋಶದ ಮತ್ತು ಕಳಾದಲ್ಲಿರುವ ಮಹತ್ವಕ್ಕೆ ಅನ್ವಯವಾಗುವುದು.


ಲಲಿತಾಸಹಸ್ರನಾಮದಲ್ಲಿ ದೇವಿಯ ಕೇಶಪಾಶವನ್ನು ಕುಂತಲನಾಯಿಕಾ, ಭ್ರಮರ ಕುಂತಲಾಂಬ, ನೀಲಕುಂತಲಾಬ, ಕುಂತಲಾಂಬ, ಅಂಜನ ಕುಂತಲಾಂಬ, ಸುಗಂಧ ಕುಂತಲಾಂಬ ಎಂದೂ ತ್ರಿಶತಿಯಲ್ಲಿ 'ಏಲಾಸುಗಂಧಿ ಚಿಕುರಾ' ಎಂದೂ ವರ್ಣಿಸಿದೆ.

೧೩. ಕೇಶಪಾಶದ ಉದ್ದವು ಗಂಡನ ಆಯುಸ್ಸಿನ ದೀರ್ಘಾಯತ್ವಕ್ಕೆ ಸಂಕೇತವಾಗಿದೆ. ಕೇಶಪಾಶ ಉದ್ದವಿದ್ದಷ್ಟು ಪತಿಯ ಆಯುಷ್ಯ ದೀರ್ಘವಾಗಿರುತ್ತದೆ ಎಂದು ಅಂಗಸಾಮುದ್ರಿಕಶಾಸ್ತ್ರ ಹೇಳುತ್ತದೆ. ತಲೆಯಿಂದ ಹಿಡಿದು ಹಿಮ್ಮಡಿವರೆಗೆ ಕೇಶಪಾಶ ಹಬ್ಬಿದ್ದರೆ ಅಂಥ ದೀರ್ಘಕೇಶಿನಿಯ ಪತಿ ದೀರ್ಘಾಯು ಎಂದು ವಾಲ್ಮೀಕಿ ರಾಮಾಯಣದಲ್ಲಿ ಹೇಳಿದ್ದಾನೆ.

"ದೀರ್ಘಶಿರೋಜಭಾಮಿನಿ ಕಾಮಪ್ರದಾಯಿನಿ" ಎಂದು ಕಾಮಶಾಸ್ತ್ರದಲ್ಲಿ ಹೇಳಿದೆ. ಕಾಮಪ್ರದಾಯಿನಿ ಅಂದರೆ ಕೇಳಿದ ಕೋರಿಕೆಗಳನ್ನು ನೆರವೇರಿಸುವವಳು ಎಂದರ್ಥ.

(ಪಂ–ಪುಟ ೩೧೮)

ಯಂತ್ರಾರಾಧನೆ (ಶ್ಲೋಕ–೪೩)



ಯಂತ್ರರಚನೆ : ಚಿನ್ನದ ತಗಡಿನಲ್ಲಿ, ಕೋಣಗಳಲ್ಲಿ ಎರಡೆರಡು ತ್ರಿಶೂಲಗಳಿರುವಂತೆ ಸಮಚತುರಶ್ರವನ್ನು, ಬರೆಯಬೇಕು. ನಡುವೆ 'ಶ್ರೀಂ' ಬೀಜಾಕ್ಷರ ಬರೆದಿರಬೇಕು.

ಪೂಜೆ : ಕೆಂಪು ತಾವರೆದಳಗಳಿಂದ ಲಲಿತಾತ್ರಿಶತೀ ಅರ್ಚನೆ ಮಾಡಬೇಕು.

ನೈವೇದ್ಯ : ಜೇನುತುಪ್ಪ.

ಜಪ : ದಿನಕ್ಕೆ ೩೦೦೦ ಸಾರಿಯಂತೆ ೪೦ ದಿನಗಳ ಕಾಲ ಜಪಿಸಬೇಕು ಯಂತ್ರವನ್ನು ಉಂಗುರಮಾಡಿ ಧರಿಸಬೇಕು.

ಫಲ : **ಸಕಲಜನವಶ್ಯತೆ.**

ಶ್ಲೋಕ–೪೪

ದೇವಿಯ ಬೈತಲೆಯ ವರ್ಣನೆ

ತನೋತು ಕ್ಷೇಮಂ ನಸ್ತವ ವದನಸೌಂದರ್ಯಲಹರೀ–
ಪರೀವಾಹಸ್ರೋತಸ್ಸರಣಿರಿವ ಸೀಮಂತಸರಣಿಃ
ವಹಂತೀ ಸಿಂಧೂರಂ ಪ್ರಬಲಕಬರೀಭಾರತಿಮಿರ –
ದ್ವಿಷಾಂ ಬೃಂದೈರ್ಬಂದೀಕೃತಮಿವ ನವೀನಾರ್ಕಕಿರಣಮ್ ॥ ೪೪ ॥

ಪದವಿಭಾಗ

ತನೋತು, ಕ್ಷೇಮಂ, (ನಸ್ತವ) = ನಃ+ತವ, ವದನಸೌಂದರ್ಯಲಹರೀ (ಪರೀವಾಹಸ್ರೋತಸ್ಸರಣಿರಿವ,) ಪರೀವಾಹ ಸ್ರೋತಃ + ಸರಣಿಃ + ಇವ, ಸೀಮಂತಸರಣಿಃ, ವಹಂತೀ, ಸಿಂಧೂರಂ, ಪ್ರಬಲಕಬರೀ ಭಾರತಿಮಿರದ್ವಿಷಾಂ, ಬೃಂದೈಃ, (ಬಂದೀಕೃತಮಿವ) = ಬಂದೀಕೃತಮ್ + ಇವ, ನವೀನಾರ್ಕಕಿರಣಮ್ = ನವೀನ + ಅರ್ಕಕಿರಣಂ.

ಅನ್ವಯಾರ್ಥ

(ಹೇ ಭಗವತಿ)	(ಎಲೈ ಪೂಜ್ಯಳಾದ ದೇವಿಯೆ)
ತವ	ನಿನ್ನ
ವದನಸೌಂದರ್ಯಲಹರೀ	ಮುಖದ–ಸೌಂದರ್ಯವೆಂಬ ನದಿಯ
ಪರೀವಾಹ	ಪ್ರವಾಹದಲ್ಲಿರುವ
ಸ್ರೋತಸ್ಸರಣಿರಿವ	ಪ್ರವಾಹಮಾರ್ಗದಂತೆ (ಇರುವ)
ತವ	(ನಿನ್ನ)
ಸೀಮಂತಸರಣಿಃ	ಬೈತಲೆಯ ಗೆರೆಯು
ಪ್ರಬಲಕಬರೀಭಾರ	ಅತ್ಯಧಿಕವಾದ–ಕೇಶಗಳ–ಸಮೂಹವೆಂಬ
ತಿಮಿರದ್ವಿಷಾಂ	ಶತ್ರುಗಳಾಗಿರುವ ಕತ್ತಲೆಗಳ
ಬೃಂದೈಃ	ಸೆರೆ ಹಾಕಲ್ಪಟ್ಟ (ಸೆರೆಹಿಡಿಯಲ್ಪಟ್ಟ)
ನವೀನಾರ್ಕಕಿರಣಮಿವ	ಉದಯಸೂರ್ಯನ–ಕಾಂತಿಯೆಂಬ ಹಾಗಿರುವ

ಸಿಂಧೂರಂ	ಸಿಂಧೂರದ ಪುಡಿಯನ್ನು ಧರಿಸಿರುವ
ವಹಂತೀ	ಬೈತಲೆಗೆರೆಯು
ನಃ	ನಮ್ಮಗಳಿಗೆ
ಕ್ಷೇಮಂ ತನೋತು	ಕ್ಷೇಮವನ್ನು ಉಂಟುಮಾಡಲಿ

ತಾತ್ಪರ್ಯ

ಮುಖದ ಸೌಂದರ್ಯವೆಂಬ ಉಕ್ಕೇರಿ ಹರಿಯುವ ನದೀ ಪ್ರವಾಹವು, ಕಾಲುವೆಯಂತಿರುವ ನಿನ್ನ ಬೈತಲೆಯು ಕ್ಷೇಮವನ್ನುಂಟುಮಾಡಲಿ ಮತ್ತು ನಿನ್ನ ಕೇಶಪಾಶಗಳೆಂಬ ಕತ್ತಲೆಗಳಿಂದ ಸೆರೆ ಹಿಡಿಯಲ್ಪಟ್ಟ ಬಾಲಸೂರ್ಯನೋ ಎಂಬ ಹಾಗಿರುವ ಸಿಂಧೂರದ ಪುಡಿಯನ್ನು ಧರಿಸಿಕೊಂಡಿರುವ ನಿನ್ನ ಬೈತಲೆಯು ನಮ್ಮಗಳಿಗೆ ಕ್ಷೇಮವನ್ನುಂಟುಮಾಡಲಿ.

ಪದ್ಯಾನುವಾದ

ನಿನ್ನ ಮುಖಸೌಂದರ್ಯಲಹರೀ ಪ್ರವಾಹವದು
ಹರಿವ ಪಾತ್ರವೊ ಎನುವವೊಲು ಮೆರೆವ ಬಯ್ತಲೆಯು–
ನಿನ್ನ ಕೂದಲಹೊರೆಯ ಇರುಳೆಂಬ ಕಡುವೈರಿ ದಳಕೆ ಸೆರೆಸಿಲುಕಿಹೋಗಿರುವ
ನವಬಾಲಸೂರ್ಯಕಿರಣದ ವೋಲು ಮೆರೆಯುತಿಹ
ಚಾರುಸಿಂದೂರಚೂರ್ಣವ ತಳೆದ ಬಯ್ತಲೆಯು,
ಎಲೆ ತಾಯೆ, ನೀಡುತಿರಲೆಮಗೆ ಸುಕ್ಷೇಮವನ್ನು ಇಂದು ಮುಂದೆಂದೆಂದಿಗೂ
॥ ೪೪ ॥

ಟಿಪ್ಪಣಿ

೧ ಈ ಶ್ಲೋಕದಲ್ಲಿ ಲಹರಿ, ಪರೀವಾಹ, ಸ್ರೋತ, ಸರಣಿ ಎಂಬ ೪ ಪದಗಳನ್ನು ಬಳಸಿದೆ ಸಾಮಾನ್ಯಾರ್ಥದಲ್ಲಿ ಈ ೪ ಪದಗಳ ಅರ್ಥ ಒಂದೇ ಆದರೂ ವ್ಯಾಖ್ಯಾನಕಾರರು ಬೇರೆ ಬೇರೆ ಅರ್ಥಗಳನ್ನು ಈ ಪದಗಳಿಗೆ ಹೇಳಿದ್ದಾರೆ. 'ಲಹರಿ' ಎಂದರೆ ನೀರಿನಮೇಲಿನ ಅಲೆ; 'ಪರೀವಾಹ' ಎಂದರೆ ಪ್ರವಾಹ ಎಂದರ್ಥ; 'ಸ್ರೋತಸ್'ಎಂದರೆ ಕಾಲುವೆ; 'ಸರಣಿ' ಎಂದರೆ

ಅಂಕುಡೊಂಕುಗಳಿಲ್ಲದೆ ನೇರವಾಗಿ ಹರಿಯುವಿಕೆ; ಅಂಬಿಕೆಯ ಬೈತಲೆ (ಸೀಮಂತ) ನೇರವಾಗಿ ಕಾಲುವೆ ಇದ್ದಂತೆ (ಸರಣಿ) ಎಂದು ಹೇಳಲಾಗಿದೆ.

(ಪಂ–ಪುಟ ೩೨೫)

೨ **ಪರೀವಾಹಸ್ರೋತಸ್ಸರಿಣೀರಿವ ಸೀಮಂತ ಸರಣಿಃ**

ಸೀಮಂತ ರೇಖೆ(ಬೈತಲೆ)ಯನ್ನು ಪ್ರವಾಹದಮಾರ್ಗ ಎಂಬುದಾಗಿ ಉತ್ಪ್ರೇಕ್ಷಿಸಿರುವುದರಿಂದ ಇಲ್ಲಿ ಉತ್ಪ್ರೇಕ್ಷಾಲಂಕಾರವಿದೆ. ಪದ್ಯದ ಉತ್ತರಾರ್ಧದಲ್ಲೂ ಉತ್ಪ್ರೇಕ್ಷಾಲಂಕಾರವಿದೆ. ಏಕೆಂದರೆ ಸಿಂಧೂರವನ್ನು ಸೂರ್ಯಕಿರಣರೂಪವಾಗಿ ಉತ್ಪ್ರೇಕ್ಷೆ ಮಾಡಲಾಗಿದೆ.

(ಪಂ–ಪುಟ ೩೨೫)

೩ **ಪ್ರಬಲಕಬರೀಭಾರತಿಮಿರದ್ವಿಷಾಂ**

ಇಲ್ಲಿ ಕಬರೀಭಾರವನ್ನು (ಕೇಶಪಾಶವನ್ನು) ತಿಮಿರ(ಕತ್ತಲೆ) ರೂಪವಾಗಿ ಆರೋಪ ಮಾಡಿರುವುದರಿಂದ ರೂಪಕಾಲಂಕಾರವಿದೆ.


ಈ ರೀತಿಯಾಗಿ ರೂಪಕ ಮತ್ತು ಉತ್ಪ್ರೇಕ್ಷಾಲಂಕಾರಗಳಿಗೆ ಅಂಗಾಂಗಿ ಭಾವರೂಪದಿಂದ ಸಂಕರವಾಗಿದೆ. ಏಕೆಂದರೆ ಉತ್ಪ್ರೇಕ್ಷಾ ಅಲಂಕಾರಕ್ಕೆ ರೂಪಕಾಲಂಕಾರವು ನಿಮಿತ್ತ ಭೂತವಾಗಿದೆ.

(ಶೇ–ಪುಟ ೧೭೩–೧೭೪)

೪ ಕೆಲವು ಕಡೆಗಳಲ್ಲಿ ಈ ಶ್ಲೋಕದ (೪೪) ಉತ್ತರಾರ್ಧವನ್ನು ಮೊದಲನೇ ಪಾದವಾಗಿ ಪೂರ್ವಾರ್ಧವನ್ನು ಎರಡನೇ ಪಾದವನ್ನು ಓದುವ ಹವ್ಯಾಸವಿದೆ ಅಪ್ಪಯ್ಯದೀಕ್ಷಿತರು ತಮ್ಮ ಕುವಲಯಾನಂದ ಗ್ರಂಥದಲ್ಲಿ ಹೀಗೆ ಮಾಡಿದ್ದಾರೆ.

(ಶ್ರೀ–ಪುಟ ೨೪೧)

ಯಂತ್ರಾರಾಧನೆ (ಶ್ಲೋಕ-೪೪)



ಯಂತ್ರರಚನೆ : ಚಿನ್ನದ ತಗಡಿನಲ್ಲಿ ಸಮಚತುರಶ್ರದ ಕೋಣಗಳಲ್ಲಿ ಎರಡೆರಡು ತ್ರಿಶೂಲಗಳಿರುವಂತೆ ನಡುವೆ ಕ್ಲೀಂ ಬೀಜಾಕ್ಷರವನ್ನು ಬರೆಸಬೇಕು.

ಪೂಜೆ : ಲಲಿತಾ ತ್ರಿಶತಿ ಕುಂಕುಮಾರ್ಚನೆ ಮಾಡಬೇಕು.

ನೈವೇದ್ಯ : ಬೆಲ್ಲದ ಪಾಯಸ

ಜಪ : ೧೨ ದಿನಗಳ ಕಾಲ ದಿನಕ್ಕೆ ೧೦೦೦ ಬಾರಿ ಜಪಿಸಬೇಕು. ಕುಂಕುಮ ಅಥವಾ ಅರಶಿನವನ್ನಾದರೂ ಮಂತ್ರಿಸಿ ತಿಲಕವಾಗಿ ಇಟ್ಟುಕೊಳ್ಳಬೇಕು.

ಫಲ : **ಮೂರ್ಛಾದಿ ರೋಗ ಪರಿಹಾರ ಮತ್ತು ಜನವಶೀಕರಣ.**

ಶ್ಲೋಕ-೪೫

ದೇವಿಯ ಮುಖಕಮಲ ವರ್ಣನೆ

ಅರಾಲೈಸ್ಸ್ವಾಭಾವ್ಯಾ[1]ದಲಿಕಲಭಸಶ್ರೀಭಿರಲಕೈಃ
[2]ಪರೀತಂ ತೇ ವಕ್ತ್ರಂ ಪರಿಹಸತಿ ಪಂಕೇರುಹರುಚಿಮ್ ।
ದರಸ್ಮೇರೇ ಯಸ್ಮಿನ್ ದಶನರುಚಿಕಿಂಜಲ್ಕರುಚಿರೇ
ಸುಗಂಧೌ ಮಾದ್ಯಂತಿ [3]ಸ್ಮರದಹನಚಕ್ಷುರ್ಮಧುಲಿಹಃ ॥ ೪೫ ॥

ಪಾಠಾಂತರ

೧. (ದಲಿಕಲಭಸಶ್ರೀಭಿರಲಕೈಃ) = ದಲಿಕುಲಹಸಶ್ರೀಭಿಃ (ಸು)
೨. (ಪರೀತಂ ತೇ ವಕ್ತ್ರಂ ಪರಿಹಸತಿ) = ಪರೀತಂ ಯದ್ವಕ್ತ್ರಂ ತವಹಸತಿ (ಸು)
೩. (ಸ್ಮರದಹನ = ಸ್ಮರಮಥನಂ (ಸು)

ಪದವಿಭಾಗ

(ಅರಾಲೈಸ್ಸ್ವಾಭಾವ್ಯಾದಲಿಕಲಭಸಶ್ರೀಭಿರಲಕೈಃ) = ಅರಾಲೈಃ + ಸ್ವಾಭಾವ್ಯಾತ್ +ಅಲಿಕಲಭಸಶ್ರೀಭಿಃ+ಅಲಕೈಃ, ಪರೀತಂ, ತೇ, ವಕ್ತ್ರಂ, ಪರಿಹಸತಿ, ಪಂಕೇರುಹರುಚಿಮ್, ದರಸ್ಮೇರೇ, ಯಸ್ಮಿನ್ ದಶನರುಚಿಕಿಂಜಲ್ಕರುಚಿರೇ, ಸುಗಂಧೌ ಮಾದ್ಯಂತಿ, (ಸ್ಮರದಹನ ಚಕ್ಷುರ್ಮಧುಲಿಹಃ.) = ಸ್ಮರದಹನ ಚಕ್ಷುಃ + ಮಧುಲಿಹಃ.

ಅನ್ವಯಾರ್ಥ

(ಹೇ ಭಗವತಿ)	(ಎಲೈ ಪೂಜ್ಯಳಾದ ದೇವಿಯೇ)
ಸ್ವಾಭಾವ್ಯಾತ್ ಅರಾಲೈಃ	ಸ್ವಭಾವದ ದೆಸೆಯಿಂದ ವಕ್ರವಾಗಿರುವ
ಅಲಿಕಲಭ ಸಶ್ರೀಭಿಃ	ಮರಿದುಂಬಿಗಳೊಡನೆ-ಸಮಾನಕಾಂತಿಯುಳ್ಳ
ಅಲಕೈಃ ಪರೀತಂ	ಕೇಶಗಳಿಂದ ವ್ಯಾಪ್ತವಾದ
ತೇ ವಕ್ತ್ರಂ	ನಿನ್ನ ಮುಖವು
ಪಂಕೇರುಹರುಚಿಂ	ಕಮಲದ-ಕಾಂತಿಯನ್ನು
ಪರಿಹಸತಿ	ಹಾಸ್ಯಮಾಡುತ್ತದೆ
ದರಸ್ಮೇರೇ	ಮುಗುಳುನಗೆಯುಳ್ಳ

ದಶನರುಚಿಕಿಂಜಲ್ಕರುಚಿರೇ	(ದಶನ–ರುಚಿ–ಕಂಡಲ್ಯ+ರುಚಿರೇ) ಹಲ್ಲುಗಳ–ಕಾಂತಿಗಳೆಂಬ–ಕೇಸರಗಳಿಂದ (ಕಮಲದಲ್ಲಿ ಕರ್ಣಿಕದ ಸುತ್ತಲೂ ಇರುವ ಪದಾರ್ಥ) ಕೇಸರಗಳಿಂದ–ಮನೋಹರವಾದ
ಸುಗಂಧೌ	ಪರಿಮಳಯುಕ್ತವಾದ
ಯಸ್ಮಿನ್	ಯಾವ ನಿನ್ನ ಮುಖವೆಂಬ ಕಮಲದಲ್ಲಿ
ಸ್ಮರದಹನ ಚಕ್ಷುರ್ಮಧುಲಿಹಃ	ಮನ್ಮಥನನ್ನು ದಹಿಸಿದ (ಈಶ್ವರನ) ಕಣ್ಣುಗಳೆಂಬ–ಭ್ರಮರಗಳು
ಮಾದ್ಯಂತಿ	ಸಂತೋಷಪಡುತ್ತವೆ.

ತಾತ್ಪರ್ಯ

ಎಲೈ ಪೂಜ್ಯಳಾದ ದೇವಿಯೆ, ಸ್ವಾಭಾವಿಕವಾಗಿ ವಕ್ರವಾಗಿರುವ (ಗುಂಗುರುಗಳಾಗಿರುವ) ಮರಿದುಂಬಿಗಳಂತೆ ಸಮಾನಕಾಂತಿಯುಳ್ಳ ಕಪ್ಪಾಗಿರುವ ಮುಂಗುರುಳುಗಳು ನಿನ್ನ ಮುಖಕಮಲವನ್ನು ಸುತ್ತುವರೆದಿವೆ. ಇಂತಹ ನಿನ್ನ ಮುಖಮಂಡಲದ ಚೆಲುವಿನ ಮುಂದೆ ಕಮಲದ ಕಾಂತಿ ಪರಿಹಾಸಕ್ಕೆ ಒಳಗಾಗಿದೆ (ಸಪ್ಪೆಯಾಗಿದೆ). ಹಾಗೆಯೇ ನೀನು ಮುಗುಳ್ನಗೆ ಬೀರುವಾಗ ನಿನ್ನ ಹಲ್ಲುಗಳ ಕಾಂತಿಗಳೆಂಬ ಕೇಸರಗಳಿಂದ ಸುಂದರವಾಗಿರುವ ಪದ್ಮದಂತೆ ಪರಿಮಳಭರಿತವಾದ ನಿನ್ನ ಮುಖಕಮಲದಲ್ಲಿ ಮನ್ಮಥನನ್ನು ದಹಿಸಿದ ಈಶ್ವರನ ಕಣ್ಣುಗಳೆಂಬ ಭ್ರಮರಗಳು ನಲಿದಾಡುತ್ತಿವೆ ಎಂದರೆ ಶಿವನು ನಿನ್ನನ್ನು ನೋಡಿ ಮತ್ತೆ ಕಾಮವಶನಾಗಿದ್ದಾನೆ ಎನ್ನುವ ಹಾಗಿದೆ ನಿನ್ನ ಮುಖದ ಚೆಲುವು.

ಪದ್ಯಾನುವಾದ

ತನ್ನತನದಿಂದಲೇ ನೀಲಿಮೆಯನಾಂತ ಮರಿ–
ದುಂಬಿಗಳ ವರ್ಣಸಂಪದವ ಹೊಂದಿರುವ ಮುಂ–
ಗುರುಳು ಬಳಸಿರುವಂಥ ನಿನ್ನ ಮೊಗ ನಗುತ್ತಿರುವುದಲ್ತೆ ತಾವರೆಯ ಹೊಗರ;
ಅದರರಳುನಗೆಯಲಿ ಮೆರೆವ ದಂತಾವಳಿಯ
ಕೇಸರದ ಕಿರಣಕಾಂತಿಯಲಿ ಸೌಗಂಧದಲಿ
ಮದಿಸಿಹುದು ಮನುಮಥನ ಸುಟ್ಟಂಥ ಶಿವನ ಹಣೆಗಣ್ಣೆಂಬ ಮಧುಪಾಯಿಯು
॥ ೪೫ ॥

ಟಿಪ್ಪಣಿ

ಅಲಂಕಾರ

೧ ಈ ಶ್ಲೋಕದಲ್ಲಿ ಉಪಮಾಲಂಕಾರವಿದೆ. ಏಕೆಂದರೆ ಕಮಲದ ಕಾಂತಿಯನ್ನು ನಿನ್ನ ದುಂಬಿಗಳಂತೆ ಕಪ್ಪನೆ ಮುಂಗುರುಳುಗಳಿಂದ ಕೂಡಿದ ಮುಖ ಕಮಲವು ಪರಿಹಾಸ ಮಾಡುತ್ತಿದೆ ಎಂದು ತೋರುತ್ತದೆ. ದುಂಬಿ ಮರಿಗಳಿಗೆ ಸಮಾನವಾದ ಕಾಂತಿಯುಳ್ಳ ಮುಂಗುರುಳುಗಳಿಂದ ಕೂಡಿದ ಮುಖಕಮಲ ಎಂಬಲ್ಲಿ ಉಪಮಾಲಂಕಾರವಿದೆ. ಈ ಎರಡೂ ಅಲಂಕಾರಗಳಿಗೂ ಅಂಗಾಂಗಿ ಭಾವರೂಪದಿಂದ ಸಂಕರವಾಗಿದೆ.

೨ "ದಶನರುಚಿಕಿಂಜಲ್ಕ ರುಚಿರೇ" (ಹಲ್ಲುಗಳ ಕಾಂತಿಗಳೆಂಬ ಕೇಸರಗಳಿಂದ ಕೂಡಿ ಪರಿಮಳಯುಕ್ತವಾದುದು ಮುಖಕಮಲದಲ್ಲಿ) ಎಂಬಲ್ಲಿ ರೂಪಕಾಲಂಕಾರವಿದೆ. ನೇತ್ರಗಳನ್ನು ಭ್ರಮರಗಳೆಂದು ಭಾವಿಸುವುದರಿಂದ ಅದೂ ರೂಪಕಾಲಂಕಾರವಾಗಿದೆ. ಈ ಎರಡೂ ರೂಪಕಾಲಂಕಾರಗಳಿಗೆ ಅಂಗಾಂಗಿ ಭಾವರೂಪವಾದ ಸಂಕರವಾಗಿದೆ.

(ಅಲಂಕಾರ ಶೇ-ಪುಟ ೧೭೫)

೩ ಇಲ್ಲಿರುವ ಎರಡು ಉಪಮಾಲಂಕಾರ, ಎರಡು ರೂಪಕಾಲಂಕಾರಗಳನ್ನು ಸಂಸೃಷ್ಟಿ ಎಂದು ಕರೆಯುತ್ತಾರೆ. ಒಂದು ಪದ್ಯದಲ್ಲಿ ಅನೇಕ ಅಲಂಕಾರಗಳು ಸುಲಭವಾಗಿ ಬೇರ್ಪಡಿಸುವ ಹಾಗಿದ್ದರೆ ಅದಕ್ಕೆ ಸಂಸೃಷ್ಟಿ ಎಂದು ಎನ್ನುತ್ತಾರೆ. ತಂಡುಲ ತಿಲ-ಅಕ್ಕಿಎಳ್ಳು ನ್ಯಾಯದಂತೆ (ಸುಲಭವಾಗಿ ಅಕ್ಕಿಎಳ್ಳು ಸೇರಿದ್ದರೆ ಬೇರ್ಪಡಿಸಬಹುದು ಹಾಗೆ) ಒಂದು ಅಲಂಕಾರವು ಇನ್ನೊಂದರೊಡನೆ ಬೇರ್ಪಡಿಸಲಾಗದಂತೆ ಬೆರೆತಿದ್ದರೆ ಅದನ್ನು ಸಂಕರವೆಂದು ಕರೆಯಲಾಗುತ್ತದೆ, ಕ್ಷೀರ ನೀರನ್ಯಾಯ (ಹಾಲು ನೀರು ಬೆರೆತಂತೆ) ಎಂದು ಕರೆಯಲಾಗುತ್ತದೆ. ಈ ರೀತಿ ಬೆರೆತುಕೊಂಡಿರುವುದಕ್ಕೆ ಅಂಗಾಂಗೀಭಾವ ಎನ್ನುತ್ತಾರೆ.

ಈ ಶ್ಲೋಕದಲ್ಲಿ ಅಲಂಕಾರಗಳು ಸಂಸೃಷ್ಟಿ ಆಗಿವೆ.

(ಎಂಎಂ ಹೆಗ್ಗಡೆ-ಪುಟ ೧೯೦)

೪ ದೇವಿಯ ಮುಖವನ್ನು ಇಲ್ಲಿ ಅರಳಿದ ಕಮಲಕ್ಕೆ ಹೋಲಿಸಲಾಗಿದೆ. ಇದು ಔಚಿತ್ಯಪೂರ್ಣವಾದ ಪೂರ್ಣೋಪಮಾಲಂಕಾರ ಸೌಂದರ್ಯ ಲಹರಿಯಲ್ಲಿ ದೇವಿಯ ಮುಖ ಸೌಂದರ್ಯವನ್ನು ತಾವರೆಗೆ ಹೋಲಿಸಿದ ಸಾದೃಶ್ಯಗಳು ಹೀಗಿವೆ.

೧ ತಾವರೆಗೆ ಅರಳುವ ಗುಣವಿದೆ. ದೇವಿಯ ಮುಗುಳ್ನಗೆ ವಿಕಸಿತ ರೂಪದಲ್ಲಿರುತ್ತದೆ.

೨ ಕಮಲದ ಕೇಸರಗಳು ಶೋಭಿಸುವಂತೆ ದೇವಿಯ ದಂತಪಂಕ್ತಿಗಳ ಕಿರಣಗಳು ಹೊರಹೊಮ್ಮಿ ಕಮಲದ ಕೇಸರಗಳಂತೆ ಶೋಭಾಯಮಾನವಾಗಿ ಬೆಳಗುತ್ತವೆ.

೩ ಕಮಲದಿಂದ ಸುಗಂಧ ಹೊರಹೊಮ್ಮುವಂತೆ ದೇವಿಯ ಮುಖದಿಂದ ಸಹಜ ಸುಗಂಧ ಹೊರಹೊಮ್ಮುತ್ತದೆ. (ಮುಖದಿಂದ ಸುವಾಸನೆ ಹೊರಹೊಮ್ಮುವುದು ದೇವಿಯ ವೈಶಿಷ್ಟ್ಯಗಳಲ್ಲಿ ಒಂದು) ತಾಂಬೂಲದ ಸವಿ ಸುಗಂಧ ಹೊರ ಹೊಮ್ಮುವುದನ್ನು ಕವಿ ದೇವಿಯ ಮುಖಸೌಂದರ್ಯದಿಂದ ಹೊರಹೊಮ್ಮುವ ಪರಿಮಳ ಎಂದು ಭಾವಿಸಿರಬಹುದೇ?

೪ ಕಮಲಕ್ಕೆ ದುಂಬಿಗಳು ಆವರಿಸಿ ಸೊಗಸನ್ನು ನೀಡುತ್ತವೆ. (ಕಪ್ಪು ಕೆಂಪು ಬಣ್ಣದ ಹೊಂದಾಣಿಕೆ ಸೊಗಸನ್ನು ಪಗಡೆಕಾಯಿ, ಸೀರೆಗಳ ವರ್ಣ ಸಂಯೋಜನೆಯಲ್ಲಿ ನೋಡಬಹುದು. ಕಪ್ಪು ಕೆಂಪು ಬಣ್ಣವನ್ನು ಪಗಡೆಬಣ್ಣ ಎನ್ನುತ್ತಾರೆ) ದೇವಿಯ ಮುಖಾರವಿಂದದ ಮೇಲೆ ಮುಂಗುರುಳುಗಳು ಆವರಿಸಿರುವುದು ಕಮಲವನ್ನು ಆವರಿಸಿದ ದುಂಬಿಗಳನ್ನು ಹೋಲುತ್ತವೆ. ಇಲ್ಲಿ ಶಿವನ ಕಣ್ಣುಗಳೆಂಬ ದುಂಬಿಗಳ ನೋಟ ದೇವಿಯೆಂಬ ಮುಖಕಮಲದಲ್ಲಿ ಆವರಿಸಿದೆ.

(ಪೋ–ಪುಟ ೬)

೫ ದರಸ್ಮೇರೇ ಯಸ್ಮಿನ್ ದಶನರುಚಿಕಿಂಜಲ್ಕರುಚಿರೇ

[ಮುಗುಳುನಗೆಯುಳ್ಳ ಹಲ್ಲುಗಳ ಕಾಂತಿಗಳೆಂಬ ಕೇಸರಗಳಿಂದ ಮನೋಹರವಾದ ಮತ್ತು ಪರಿಮಳಯುಕ್ತವಾದ ನಿನ್ನ ಮುಖ ಕಮಲದಲ್ಲಿ)

(ಶ್ಲೋಕ ೪೫)

ಲಲಿತಾ ಸಹಸ್ರನಾಮದ ೧೦ನೇ ಶ್ಲೋಕ (ನಾಮ ೨೫–೨೬) ದಲ್ಲಿ ಸೌಂದರ್ಯಲಹರಿಯ ಭಾವ ಹೀಗೆ ವ್ಯಕ್ತವಾಗಿದೆ.


ಶುದ್ಧವಿದ್ಯಾಂಕುರಾಕಾರ ದ್ವಿಜಪಂಕ್ತಿದ್ವಯೋಜ್ವಲಾ ॥
ಕರ್ಪೂರವೀಟಿಕಾಮೋದ ಸಮಾಕರ್ಷದ್ದಿಗಂತರಾ ॥ ೧೦ ॥

[ಶುದ್ಧವಿದ್ಯೆಯ ಅಂಕುರದಂತೆ ಆಕಾರವುಳ್ಳ ದಂತಪಂಕ್ತಿಗಳಿಂದ ಉಜ್ವಲ ಗಳಾಗಿರುವಳು ತಾಂಬೂಲದ ಪರಿಮಳದಿಂದ ಆಕರ್ಷಿಸಲ್ಪಟ್ಟ ದಿಗಂತರವುಳ್ಳವಳು]

(ಲ–ಆ ಪುಟ ೫೬)

ಸೌಂದರ್ಯ ಲಹರಿಯಲ್ಲಿ ದೇವಿಯ ದಂತಪಂಕ್ತಿಗಳ ಕಾಂತಿಯನ್ನು ಕಮಲದ ಕೇಸರಗಳಿಗೆ ಹೋಲಿಸಿದ್ದರೆ ಇಲ್ಲಿ ಶುದ್ಧವಿದ್ಯೆಯ ಅಂಕುರಗಳಿಗೆ ಹೋಲಿಸಲಾಗಿದೆ. ಪರಿಮಳದ ಮುಖಕಾಂತಿಯನ್ನು ಸೌಂದರ್ಯಲಹರಿಯಲ್ಲಿ ವರ್ಣಿಸಿದ್ದರೆ ಇಲ್ಲಿ ತಾಂಬೂಲ ಪರಿಮಳಯುಕ್ತೆ ಎಂದು ವರ್ಣಿಸಲಾಗಿದೆ.

ಯಂತ್ರಾರಾಧನೆ (ಶ್ಲೋಕ-೪೫)



ಯಂತ್ರರಚನೆ : ಚಿನ್ನದ ತಗಡಿನಲ್ಲಿ ಎಂಟು ತ್ರಿಶೂಲಗಳಿರುವಂತೆ ಸಮಚತುರಶ್ರವನ್ನು ಬರೆಯಬೇಕು. ನಡುವೆ ಸಂ ಸಂ ಸಂ ಎಂಬ ಬೀಜಾಕ್ಷರಗಳನ್ನು ಬರೆಯಬೇಕು.

ಪೂಜೆ : ಪೂರ್ವಾಭಿಮುಖವಾಗಿ ಕುಳಿತು ಲಲಿತಾತ್ರಿಶತೀ ಕುಂಕುಮಾರ್ಚನೆಯನ್ನು ಮಾಡಬೇಕು.

ನೈವೇದ್ಯ : ತ್ರಿಮಧುರ ಮತ್ತು ಜೇನುತುಪ್ಪ

ಜಪ : ಪ್ರತಿದಿನ ೧೦೦೦ ಬಾರಿಯಂತೆ ೪೦ ದಿನ ಜಪಿಸಬೇಕು.

ಫಲ : ವಾಕ್ಸಿದ್ಧಿ.

ಶ್ಲೋಕ–೪೬

ದೇವಿಯ ಹಣೆಯ ವರ್ಣನೆ

ಲಲಾಟಂ ಲಾವಣ್ಯದ್ಯುತಿವಿಮಲಮಾಭಾತಿ ತವ ಯತ್
ದ್ವಿತೀಯಂ ತನ್ಮನ್ಯೇ[1]ಮಕುಟಘಟಿತಂ ಚಂದ್ರಶಕಲಮ್ ।
ವಿಪರ್ಯಾಸನ್ಯಾಸಾ[2]ದುಭಯಮಪಿ ಸಂಭೂಯ ಚ ಮಿಥಃ
[3]ಸುಧಾಲೇಪಸ್ಯೂತಿಃ ಪರಿಣಮತಿ ರಾಕಾಹಿಮಕರಃ ॥ ೪೬ ॥

ಪಾಠಾಂತರ

೧. (ಮಕುಟ ಘಟಿತಂ ಚಂದ್ರ ಶಕಲಂ) = ಮಕುಟಶಶಿಖಂಡಸ್ಯ ಶಕಲಂ (ಸು)
೨. (ದುಭಯಮಪಿ ಸಂಭೂಯ ಚಮಿಥಃ) – ಂದುಭಯಕೃತ ಸಂಧಾನ ಮಯಿತಃ (ಸು)
೩. (ಸುಧಾಲೇಪಸ್ಯೂತಿಃ) ಸುಧಾಲೇಪಸ್ಫೂರ್ತಿಃ

ಪದವಿಭಾಗ

ಲಲಾಟಂ, (ಲಾವಣ್ಯ ದ್ಯುತಿವಿಮಲಮಾಭಾತಿ) = ಲಾವಣ್ಯದ್ಯುತಿ ವಿಮಲಂ + ಆಭಾತಿ, ತವ, ಯತ್, ದ್ವಿತೀಯಂ, (ತನ್ಮನ್ಯೇ) = ತತ್+ಮನ್ಯೇ, ಮಕುಟಘಟಿತಂ, ಚಂದ್ರಶಕಲಮ್, (ವಿಪರ್ಯಾಸನ್ಯಾಸಾದುಭಯಮಪಿ) = ವಿಪರ್ಯಾಸನ್ಯಾಸಾತ್+ ಉಭಯಂ + ಅಪಿ, ಸಂಭೂಯ, ಚ, ಮಿಥಃ, ಸುಧಾಲೇಪಸ್ಯೂತಿಃ, ಪರಿಣಮತಿ, ರಾಕಾಹಿಮಕರಃ.

ಅನ್ವಯಾರ್ಥ

(ಹೇ ಭಗವತಿ)	(ಎಲೈ ಪೂಜ್ಯಳಾದ ದೇವಿಯೆ,)
ತವ ಯತ್	ನಿನ್ನ ಯಾವ
ಲಲಾಟಂ	ಹಣೆಯು
ಲಾವಣ್ಯದ್ಯುತಿ	ಸೊಗಸೆಂಬ – ಬೆಳುದಿಂಗಳಿಂದ
ವಿಮಲಂ ಆಭಾತಿ	ನಿರ್ಮಲವಾಗಿ ಎಲ್ಲಾ ಕಡೆಗಳಲ್ಲೂ ಪ್ರಕಾಶಿಸುತ್ತದೆಯೋ
ತತ್	ಆ ಅರ್ಧಚಂದ್ರಾಕಾರವಾದ ಹಣೆಯನ್ನು
ಮಕುಟಘಟಿತಂ	ಕಿರೀಟದಲ್ಲಿ – ಸಂಬಂಧಿಸಿಕೊಂಡಿರುವ
ದ್ವಿತೀಯಂ	ಎರಡನೆಯ

ಚಂದ್ರಶಕಲಂ	ಚಂದ್ರನಭಾಗವೆಂದು
ಮನ್ಯೇ	ತಿಳಿಯುತ್ತೇನೆ.
(ಯದ್ಯಸ್ಮಾತ್ಕಾರಣಾತ್)	(ಯಾವಕಾರಣದ ದೆಸೆಯಿಂದ)
ಉಭಯಮಪಿ	(ಹಣೆ ಮತ್ತು ಕಿರೀಟದ ಅರ್ಧ ಚಂದ್ರ ಖಂಡವೂ) ಎರಡೂ ಕೂಡ
ವಿಪರ್ಯಾಸನ್ಯಾಸಾತ್	ತಲೆಕೆಳಕಾಗಿ – ಇಡೋಣದರಿಂದ
ಮಿಥಃ	ಅನ್ಯೋನ್ಯವಾಗಿ
ಸಂಭೂಯ	ಸೇರಿಕೊಂಡು
ಸುಧಾಲೇಪಸ್ಯೂತಿಃ	ಅಮೃತರಸದ – ಲೇಪನದ ಸಂಬಂಧವುಳ್ಳ
ರಾಕಾಹಿಮಕರಃ	ಪೂರ್ಣಿಮೆಯ – ಚಂದ್ರನಾಗಿ
ಪರಿಣಮತಿ	ಆಗಿರುತ್ತದೆ

ತಾತ್ಪರ್ಯ

ಎಲೈ ಭಗವತಿಯೇ, ನಿನ್ನ ಯಾವ ಹಣೆಯ ಸೌಂದರ್ಯವೆಂಬ ಕಾಂತಿಯಿಂದ (ಬೆಳುದಿಂಗಳಿನಿಂದ) ಶುಭ್ರವಾಗಿ ಎಲ್ಲ ಕಡೆಗಳಲ್ಲೂ ಪ್ರಕಾಶಿಸುತ್ತದೆಯೋ ಅರ್ಧಚಂದ್ರಾಕಾರವಾದ ಆ ಹಣೆಯನ್ನು ನಿನ್ನ ಕಿರೀಟದಲ್ಲಿ ಸೇರಿಸಿರುವ ಎರಡನೆಯ ಅರ್ಧ ಚಂದ್ರಖಂಡವೆಂದು ತಿಳಿಯುತ್ತೇನೆ (◡) ಏಕೆಂದರೆ ಅರ್ಧ ಚಂದ್ರ ಖಂಡ ಹಣೆ ಮತ್ತು ಕಿರೀಟದ ಅರ್ಧಚಂದ್ರ ಎರಡನ್ನು ತಲೆಕೆಳಕಾಗಿ ಸೇರಿಸುವುದರಿಂದ (◡◠ = ○) ಪರಸ್ಪರವಾಗಿ ಒಟ್ಟಿಗೆ ಸೇರಿಕೊಂಡು ಅಮೃತ ರಸಲೇಪನದಿಂದ ದಟ್ಟವಾಗಿರುವ ಪೂರ್ಣಿಮಾಚಂದ್ರನಾಗಿ ಪರಿಣಮಿಸುತ್ತದೆ.

ಪದ್ಯಾನುವಾದ

ಅಮಲವಹ ಲಾವಣ್ಯಕಾಂತಿಯಿಂದೊಪ್ಪುತಿಹ
ನಿನ್ನಯ ಲಲಾಟಕ್ಕೆ ಪಡಿಯೆನಿಸಿ ಮಕುಟದಲಿ
ನೆಲಸಿರುವ ಚಂದ್ರಾರ್ಧವೆರಡನೆಯ ಅರ್ಧವೆಂದರಿತು ನಾನಿಂತು ಬಗೆವ;
ಈಯೆರಡು ಅರ್ಧಗಳು ತಮ್ಮ ಅಡಿಮೇಲಾಗಿ
ಅಮೃತಲೇಪದ ಬೆಸುಗೆವಡೆದೊಂದೆನಿಸಲಾಹ
ಪೂರ್ಣಚಂದ್ರನೆಯಾಗಿ ಪರಿಣಮಿಸಿ ಪೂರ್ಣಸೌಂದರ್ಯದಿಂದೆಸೆವುದಲ್ತೆ !
||೪೬||

ಟಿಪ್ಪಣಿಗಳು

೧. ಈ ಶ್ಲೋಕದಲ್ಲಿ ಲಲಾಟ (ಹಣೆಯನ್ನು) ಅರ್ಧ ಚಂದ್ರವೆಂದು ಉತ್ಪ್ರೇಕ್ಷೆಮಾಡಿರುವುದರಿಂದ **ಉತ್ಪ್ರೇಕ್ಷಾಲಂಕಾರವಾಗಿದೆ.** ಪದ್ಯದ ಉತ್ತರಾರ್ಧದಲ್ಲಿ ಲಲಾಟ ಮತ್ತು ಕಿರೀಟದಲ್ಲಿನ ಚಂದ್ರಖಂಡ ಇವೆರಡರಿಂದ ಪೂರ್ಣಿಮಾಚಂದ್ರನ ನಿರ್ಮಾಣವಾಗುವುದು ಹೊಂದಿಕೆ ಆಗುವುದಿಲ್ಲ. ಆದರೂ ಕವಿ ಹೊಂದಾಣಿಕೆಮಾಡಿ ಸಂಬಂಧವನ್ನು ಕಲ್ಪಿಸಿದ್ದಾನೆ. ಆದ್ದರಿಂದ **ಸಂಬಂಧಾತಿಶಯೋಕ್ತಿ** ಅಲಂಕಾರವಾಗಿದೆ.

ಇಲ್ಲಿ ವಾಸ್ತವಿಕ ಸೌಂದರ್ಯಕ್ಕೂ ಕವಿಕಲ್ಪಿತವಾದ ಸೌಂದರ್ಯಕ್ಕೂ ಅಭೇದಾ ಅಧ್ಯವಸಾಯವಿದೆ. ಅಧ್ಯವಸಾಯವೆಂದರೆ ನಿಶ್ಚಯಾತ್ಮಕವಾದ ಜ್ಞಾನ. ಅದು ಕವಿಯ ಪ್ರೌಢೋಕ್ತಿಯಿಂದ ಸಿದ್ಧವಾದ ಸಂಗತಿಯೇ ಹೊರತು ವಾಸ್ತವಿಕವಾದ ನಿಶ್ಚಯವಲ್ಲ. (ಶೇ–ಪುಟ ೧೧೭)

೨. ಲಲಿತಾ ಸಹಸ್ರನಾಮದಲ್ಲಿ ದೇವಿಯ ಹಣೆಯನ್ನು ಅಷ್ಟಮೀಚಂದ್ರ ವಿಭ್ರಾಜದಲಿಕಸ್ಥಲ ಶೋಭಿತಾ (ಶ್ಲೋಕ ೫ ನಾಮ ೧೫) (ಅಷ್ಟಮೀಚಂದ್ರನ ಕಾಂತಿಯಂತೆ ಪ್ರಕಾಶಮಾನವಾದ ಹಣೆಯಿಂದ ಬೆಳಗುತ್ತಿರುವವಳು) ಎಂದು ವರ್ಣಿಸಿದೆ.

ಅಷ್ಟದಿಗ್ದೇವತೆಗಳ ದಿವ್ಯಶಕ್ತಿಗಳೂ ಶಿವನ ಎಂಟು ದಿವ್ಯಶಕ್ತಿಗಳೂ ಅರ್ಧಚಂದ್ರನಲ್ಲಿ ಸೇರಿವೆಯಾದ್ದರಿಂದ ಚಂದ್ರನಿಗೆ ಅಷ್ಟಮೀಚಂದ್ರ ಎಂಬ ಸಂಕೇತವಿದೆ (೧ ಭವ್ಯ ೨ ಶರ್ವ ೩ ಈಶಾನ ೪ ಪಶುಪತಿ ೫ ಉಗ್ರ ೬ ರುದ್ರ ೭ ಭೀಮ ೮ ಮಹಾದೇವ ಎಂಬುವು ಶಿವನ ದಿವ್ಯ ಶಕ್ತಿಗಳು) (ಲ–ಕೂ ಪುಟ ೮೪)

೩. "ದೇವಿ ಉಪಾಸಕರು ಉಪಾಸನಾ ಫಲವಾಗಿ ತಮ್ಮ ಲಲಾಟ ಪ್ರದೇಶದಲ್ಲಿ (ಆಜ್ಞಾಚಕ್ರದಲ್ಲಿ) ಪೂರ್ಣಚಂದ್ರಬಿಂಬ ದರ್ಶನ ಪಡೆದು ಅಮೃತಧಾರೆಗಳನ್ನು ಅನುಭವಿಸುತ್ತಾರೆ. ಅಪಾರ ಶಾಂತಿಸಮುದ್ರದಲ್ಲಿ ಓಲಾಡುತ್ತಾರೆ. ಸಾಧನೆಯ ಕೊನೆಮೆಟ್ಟಿಲಿಗೆ ಸೇರುತ್ತಾರೆ. ಆದರೆ ಹುಣ್ಣಿಮೆಯ ಪೂರ್ಣಚಂದ್ರ ದಿನದಿನವೂ ಬರುವುದಿಲ್ಲ ಅಲ್ಲವೇ? ಹಾಗಿದ್ದಾಗ ದಿನದಿನವೂ ಅಮೃತವರ್ಷ ಹೇಗೆಸಾಧ್ಯ? ಅದನ್ನೇ ಈ ಶ್ಲೋಕದಲ್ಲಿ ಆದಿಶಂಕರರು ಆ ತಾಯಿಯ ಕಿರೀಟದ ಕೆಳಗಿನ ತಿರುವನ್ನು ಆ ತಾಯಿಯ ಹಣೆಯ ಕಿರೀಟದ ಕೆಳಗಿನ ಹಣೆಯ ಮೇಲ್ಭಾಗದ ತಿರುವನ್ನು (‿ ⁀) ಸೇರಿಸಿ ಊಹೆಮಾಡಿದರೆ ದೇವಿಯ ಲಲಾಟವೇ ಒಂದು ಪೂರ್ಣ ಚಂದ್ರಬಿಂಬವಾಗಿ ಸಾಧಕರ ಹೃದಯಾಕಾಶದಲ್ಲಿ ಕಾಣುತ್ತದೆ" ಎಂದಿದ್ದಾರೆ. (ಪ–ಪುಟ ೫೪)


೪. ಪಕ್ಷಕ್ಕೆ ೧೫ ತಿಥಿಗಳು (೧ ಕಾಮೇಶ್ವರಿ ೨ ಭಗಮಾಲಿನಿ ೩ ನಿತ್ಯಕ್ಲಿನ್ನ ೪ ಭೌರುಂಡ ೫ ವಹ್ನಿವಾಸಿನಿ ೬ ಮಹಾವಜ್ರೇಶ್ವರಿ ೭ ಶಿವದೂತಿ ೮ ತ್ವರಿತ ೯ ಕುಲಸುಂದರಿ ೧೦ ನಿತ್ಯ ೧೧ ನೀಲಪತಾಕೆ ೧೨ ವಿಜಯ ೧೩ ಸರ್ವಮಂಗಳಾ ೧೪ ಜ್ವಾಲಾಮಾಲಿನೀ ೧೫ ಚಿತ್ರ)

ಈ ಕಡೆ ೭ ಆ ಕಡೆ ೭ ತಿಥಿಗಳ ಮಧ್ಯದಲ್ಲಿನ ತಿಥಿ ಅಷ್ಟಮಿ ಶುಕ್ಲಪಕ್ಷದಲ್ಲಾಗಲಿ, ಕೃಷ್ಣಪಕ್ಷದಲ್ಲಾಗಲಿ ಒಂದೇ ವಿಧವಾದ ಕಲೆಯಲ್ಲಿರುವ ತಿಥಿ ಅಷ್ಟಮಿ. ಅಷ್ಟಮಕಲೆ ದೇವಿಯ ಹಣೆಯಭಾಗವಾಗಿಯು ಪ್ರಕಾಶಿಸುತ್ತದೆ. ಈ ದಿನಕ್ಕೆ ಅಧಿದೇವತೆ ತ್ವರಿತ (ಲ-ಪ: ಪುಟ ೬೫)

೫. ವಿಪರ್ಯಾಸನ್ಯಾಸಾತ್ (ವ್ಯತ್ಯಸ್ತವಾಗಿ)

ದೇವಿಯ ಲಲಾಟವೆಂಬ ಚಂದ್ರಖಂಡವು ಅರ್ಧವಲಯಾಕಾರವಾಗಿ ⌒ ಆಕಾರದಲ್ಲಿ ಕಿರೀಟದಲ್ಲಿರುವ ಚಂದ್ರಬಿಂಬವು ಅರ್ಧವಲಯಾಕಾರವಾಗಿ ‿ ಆಕಾರದಲ್ಲಿ ಇರುತ್ತದೆ ಇವೆರಡೂ ತಲೆ ಕೆಳಕಾಗಿ ಸೇರಿ ◯ ಪೂರ್ಣ ವೃತ್ತವಾಗಿ (ಪೂರ್ಣಚಂದ್ರನಾಗಿ) ಪರಿಣಮಿಸುತ್ತದೆ. (ಪೋ-ಪುಟ ೨೩೪)

ಯಂತ್ರಾರಾಧನೆ (ಶ್ಲೋಕ-೪೬)



ಯಂತ್ರರಚನೆ : ಚಿನ್ನದ ಯಂತ್ರದಲ್ಲಿ ಅಧೋಮುಖವಾದ ಸಮಭುಜ ತ್ರಿಕೋಣವನ್ನು ತ್ರಿಶೂಲಗಳಿಂದ ಕೂಡಿರುವಂತೆ ಬರೆಯಬೇಕು ನಡುವೆ ಹ್ರೀಂ ಬೀಜಾಕ್ಷರ ಬರೆಯಬೇಕು.

ಪೂಜೆ : ಕೆಂಪು ಹೂಗಳಿಂದ ಲಲಿತಾ ತ್ರಿಶತೀ ಅರ್ಚನೆಯನ್ನು ಮಾಡಬೇಕು.

ನೈವೇದ್ಯ : ಹಾಲುಕೀರು ಮತ್ತು ಜೇನುತುಪ್ಪ.

ಜಪ : ೪೫ ದಿನಗಳ ಕಾಲ ಪ್ರತಿದಿನವೂ ೧೦೦೦ ಸಲ ಜಪಿಸಬೇಕು.

ಫಲ : ಭರ್ತೃಸಮಾಗಮ; ಗರ್ಭಧಾರಣೆ.

ಶ್ಲೋಕ–೪೭

ದೇವಿಯ ಹುಬ್ಬುಗಳ ವರ್ಣನೆ

ಭ್ರುವೌ ಭುಗ್ನೇ ಕಿಂಚಿದ್ಭುವನಭಯಭಂಗವ್ಯಸನಿನಿ
ತ್ವದೀಯೇ ನೇತ್ರಾಭ್ಯಾಂ ಮಧುಕರರುಚಿಭ್ಯಾಂ [1]ಧೃತಗುಣಮ್ ।
ಧನುರ್ಮನ್ಯೇ ಸವ್ಯೇತರಕರಗೃಹೀತಂ [2]ರತಿಪತೇಃ
ಪ್ರಕೋಷ್ಠೇ ಮುಷ್ಟೌ ಚ ಸ್ಥಗಯತಿ ನಿಗೂಢಾಂತರಮುಮೇ ॥ ೪೭ ॥

ಪಾಠಾಂತರ

೧. (ಧೃತಗುಣಮ್) = ಧೃತಗುಣೇ (ಸು)

೨. (ರತಿಪತೇಃ) = ರತಿಪತಿಃ (ಸು)

ಪದವಿಭಾಗ

ಭ್ರುವೌ, ಭುಗ್ನೇ, (ಕಿಂಚಿದ್ಭುವನಭಯಭಂಗವ್ಯಸನಿನಿ) = ಕಿಂಚಿತ್ + ಭುವನಭಯಭಂಗವ್ಯಸನನಿ, ತ್ವದೀಯೇ, ನೇತ್ರಾಭ್ಯಾಂ, ಮಧುಕರರುಚಿಭ್ಯಾಂ, ಧೃತಗುಣಂ, (ಧನುರ್ಮನ್ಯೇ) = ಧನುಃ + ಮನ್ಯೇ, (ಸವ್ಯೇತರಕರ ಗೃಹೀತಂ,) = ಸವ್ಯ + ಇತರಕರಗೃಹೀತಂ ರತಿಪತೇಃ, ಪ್ರಕೋಷ್ಠೇ, ಮುಷ್ಟೌ, ಚ, ಸ್ಥಗಯತಿ, (ನಿಗೂಢಾಂತರ ಮುಮೇ)= ನಿಗೂಢಾಂತರಮ್ + ಉಮೇ.

ಅನ್ವಯಾರ್ಥ

(ಹೇ) ಉಮೇ	(ಎಲೈ) ಪಾರ್ವತಿಯೆ,
ಭುವನಭಯಭಂಗವ್ಯಸನಿನಿ	ಹದಿನಾಲ್ಕುಲೋಕಗಳ–ಭಯುವನ್ನು ನಾಶಮಾಡುವ ವಿಷಯದಲ್ಲಿ–(ಅತ್ಯಂತ ಆಸಕ್ತಿಯುಳ್ಳವಳೇ) ಯೋಚನೆಯುಳ್ಳ (ದೇವಿಯೆ)
ತ್ವದೀಯೇ	ನಿನ್ನ
ಕಿಂಚಿತ್‌ಭುಗ್ನೇಭ್ರುವೌ	ಸ್ವಲ್ಪ ಬಾಗಿರುವ–ನಿನ್ನ (ಕಣ್ಣಿನ) ಹುಬ್ಬುಗಳು
ಮಧುಕರ ರುಚಿಭ್ಯಾಂ	ಭ್ರಮರದಂತೆ–ಕಾಂತಿಯುಳ್ಳ

ನೇತ್ರಾಭ್ಯಾಂ	ಎರಡು ಕಣ್ಣುಗಳಿಂದ
ಧೃತಗುಣಂ	ಉಂಟುಮಾಡಲ್ಪಟ್ಟ-ಹೆದೆಯುಳ್ಳ
ರತಿಪತೇಃ	ಮನ್ಮಥನ
ಸವ್ಯೇತರಕರಗೃಹೀತಂ	ಎಡದ-ಕೈಯಲ್ಲಿ-ಹಿಡಿಯಲ್ಪಟ್ಟು
ಪ್ರಕೋಷ್ಠೇ	ಕಂಕಣದ ಕೈಯಲ್ಲಿ
ಮುಷ್ಟೌ ಚ	ಮುಷ್ಟಿಯಲ್ಲಿ ಮತ್ತು
ಸ್ಥಗಯತಿ (ಸತಿ)	ಮುಚ್ಚಲಾಗಿ
ನಿಗೂಢಾಂತರಂ	ಮರೆಯಾದ-ಮಧ್ಯಪ್ರದೇಶವುಳ್ಳ
ಧನುರ್ಮನ್ಯೇ	ಧನುಸ್ಸನ್ನಾಗಿ ತಿಳಿಯುತ್ತೇನೆ

ತಾತ್ಪರ್ಯ

ಎಲೈ ಪಾರ್ವತಿಯೆ, ಹದಿನಾಲ್ಕು ಲೋಕಗಳ ಭಯವನ್ನು ನಾಶಮಾಡುವ ವಿಷಯದಲ್ಲಿ ಅತ್ಯಂತ ಆಸಕ್ತಿಯುಳ್ಳವಳೇ, ನಿನ್ನ ಬಾಗಿರುವ ಹುಬ್ಬುಗಳನ್ನು ಭ್ರಮರಗಳ ಆಕಾರದಂತಿರುವ ಸುಂದರವಾದ ನಿನ್ನ ಎರಡು ಕಣ್ಣುಗಳಿಂದ ಹೆದೆಯನ್ನು ಹೊಂದಿರುವಂಥ (ಎಂದರೆ ನಿನ್ನ ಹುಬ್ಬುಗಳು ಮನ್ಮಥನ ಧನುಸ್ಸಿನಂತಿವೆ). ದುಂಬಿಗಳಂತೆ ಕಪ್ಪಾಗಿರುವ ನಿನ್ನ ಕಣ್ಣುಗಳೇ ಈ ಧನುಸ್ಸಿನ ಹೆದೆಯಾಗಿದೆ (ಬಿಲ್ಲಿನಹಗ್ಗ). ಧನುಸ್ಸನ್ನು ಹಿಡಿದಾಗ ಅದರ ಮಧ್ಯಭಾಗ ಮುಟ್ಟುವುದು ಸಹಜ. ಅದರಂತೆ ಮನ್ಮಥನು ತನ್ನ ಎಡಗೈಯಲ್ಲಿ ಮಣಿಬಂಧ ಮುಷ್ಟಿಗಳಿಂದ ಬಿಲ್ಲಿನ ಮಧ್ಯಭಾಗವನ್ನು ಹಿಡಿದಿರುವುದರಿಂದ ಆ ಭಾಗ ಕಾಣುವುದಿಲ್ಲ ಎಂದು ತಿಳಿಯುತ್ತೇನೆ.

ಪದ್ಯಾನುವಾದ

ಹೇ ಉಮೇ! ಇಳೆಯ ಭಯವನು ಕಳೆವ ಹರಿಬವನು
ಹೊತ್ತವಳೆ, ನಿನ್ನ ನಸುಬಾಗಿರುವ ಹುಬ್ಬೆರಡು
ಕಣ್ಣೆಂಬ ಕದ್ದುಂಬಿಯಿಂದೊಗೆದ ಕಾಂತಿಕಿರಣದ ಹೆದೆಯ ಧರಿಸಿಹುದನು
ರತಿಪತಿಯು ತನ್ನೆಡದ ಕೈಚಾಚಿ ಬಿಗಿಮುಷ್ಟಿ-
ಯಿಂದ ಬಲ್ವಿಡಿದ ಬಲು ಬಿಂಕದಲಿ ನಿಂತಿರಲು
ಮಧ್ಯಭಾಗವದವನ ಹಿಡಿಯಲಡಗಿರುವ ಆತನ ಧನುಸ್ಸೆಂದು ಬಗೆವ.
॥ ೪೭ ॥

ಟಿಪ್ಪಣಿಗಳು

೧. ಈ ಶ್ಲೋಕದಲ್ಲಿ ದೇವಿಯನ್ನು ಉಮೇ ಎಂದು ಸಂಬೋಧಿಸಲಾಗಿದೆ. 'ಉ'ಕಾರವು ಶಿವವಾಚಕವು 'ಮಾ' ಎಂದರೆ ಶಿವನನ್ನು ಪರಿಮಿತಗೊಳಿಸುವುದು ಎಂದರ್ಥ. ಉಮಾ ಶಬ್ದಕ್ಕೆ ಅತಸೀಕುಸುಮ, ಹೈಮವತೀ, ಹರಿದ್ರಾ, ಕೀರ್ತಿ, ಕಾಂತಿ ಮುಂತಾದ ಅರ್ಥಗಳಿವೆ. 'ಉ' ಎಂದರೆ ಪ್ರವೃತ್ತಿ 'ಮಾ' ಎಂದರೆ ಅದಕ್ಕೆ ನಿಷೇಧ ಮಾಡುವುದು ಎಂದೂ ಹೇಳುತ್ತಾರೆ.

(ಶ್ರೀ–ಪುಟ ೨೪೫)

೨. ಇಲ್ಲಿ **ಅತಿಶಯೋಕ್ತಿ ಅಲಂಕಾರವಿದೆ.** ಏಕೆಂದರೆ ದೇವಿಯ ಭ್ರೂಮಧ್ಯಭಾಗ ಮತ್ತು ನಾಸಿಕಾ ಮಧ್ಯಭಾಗಗಳನ್ನು ಮುಷ್ಟಿ (ಹಿಡಿ) ಮತ್ತು ಪ್ರಕೋಷ್ಠ (ಮಣಿಕಟ್ಟು) ಗಳಿಂದ ಮರೆಮಾಡಲ್ಪಟ್ಟಿರುವ ರೀತಿಯಲ್ಲಿ ಅಧ್ಯವಸಾನ ಮಾಡಲಾಗಿದೆ.

ಈ ಶ್ಲೋಕದಲ್ಲಿ **ರೂಪಕಾಲಂಕಾರವೂ ಧ್ವನಿತವಾಗಿದೆ.** ಏಕೆಂದರೆ ಎಡಗೈಹಸ್ತದ ಸ್ವರೂಪದಿಂದ ನಾಸಿಕೆಯನ್ನು (ಮೂಗನ್ನು) ಆರೋಪಣ ಮಾಡಿರುವಂತೆ ತೋರುತ್ತದೆ. ಎಡಗೈ ಕೈನರೂಪವಾಗಿ ಮೂಗನ್ನು ಅಧ್ಯವಸಾನ ಮಾಡಿರುವಂತೆ ತೋರುತ್ತದೆ ಎಂದು ತಿಳಿದರೆ ಅತಿಶಯೋಕ್ತಿ ಅಲಂಕಾರವು ಧ್ವನಿತವಾಗುತ್ತದೆ.

(ಶೇ–ಪುಟ ೧೮೧)

೩. ಈ ಶ್ಲೋಕದಲ್ಲಿ ಹುಬ್ಬುಗಳೇ ಬಿಲ್ಲಿನ ದಂಡವೆಂದು ಕಣ್ಣುಗಳೇ ಹೆದೆಯೆಂದೂ (ಬಿಲ್ಲಿನ ಹಗ್ಗವೆಂದು) ಹುಬ್ಬುಗಳ ಮಧ್ಯಭಾಗ ಮುಷ್ಟಿ ಎಂದೂ ಮೂಗು ಎಂಬುದು ಹಸ್ತದಲ್ಲಿ ಕಂಕಣಕಟ್ಟುವ ಭಾಗವೆಂದೂ ರೂಪಕವಾಗಿ ಹೇಳಲಾಗಿದೆ.

(ಕ–ಪುಟ ೯೧)

೪. **ಸವ್ಯೇತರ ಕರಗೃಹೀತಂ**

ಸಾಮಾನ್ಯವಾಗಿ ಬಿಲ್ಲು ಹಿಡಿದು ಬಲಗೈಯಲ್ಲಿ ಬಾಣವನ್ನು ಹೆದೆಗೆ ಸಿಕ್ಕಿಸಿಬಿಡುತ್ತಾರೆ. ಅದೇ ರೀತಿ ಎಡಗೈಲೂ ಬಾಣ ಹಿಡಿದು ಬಿಡುವವರನ್ನು ಅಂಬರ ಎಂದೂ ಎರಡೂ ಕೈಗಳಲ್ಲಿ ಬಾಣ ಬಿಡುವವರನ್ನು ಸವ್ಯಸಾಚಿ ಎಂದು ಕರೆಯುತ್ತಾರೆ. ಅರ್ಜುನನ್ನು ಸವ್ಯಸಾಚಿ ಎನ್ನುತ್ತಾರೆ. ಇಲ್ಲಿ

ಸವ್ಯೇತರ ಎನ್ನುವುದರಲ್ಲಿ (ಬಲಗೈಯಲ್ಲಿ ಬಿಲ್ಲು ಹಿಡಿದಿರುವ) ಮನ್ಮಥನೂ ಸವ್ಯಸಾಚಿ ಎಂದು ಕಾಣುತ್ತದೆ.

(ಪ–ಪುಟ ೫೬)

೫. ಲಲಿತಾ ಸಹಸ್ರನಾಮದಲ್ಲಿ ದೇವಿಯ ಹುಬ್ಬುಗಳನ್ನು **ವದನಸ್ಮರ ಮಾಂಗಲ್ಯ ಗೃಹತೋರಣ ಚಿಲ್ಲಿಕಾ**

(ಸುಂದರ ಮುಖವೆಂಬ ಮಂಗಳವಾದ ಗೃಹದ ತೋರಣಗಳೇ ಎಂಬಂತಿರುವ ಹುಬ್ಬುಗಳನ್ನು ಉಳ್ಳವಳು.) (ಶ್ಲೋಕ ೬, ನಾಮ ೧೭) ಎಂದು ವರ್ಣಿಸಿದೆ.

(ಲ–ಆ ಪುಟ ೩೦)

ಯಂತ್ರಾರಾಧನೆ (ಶ್ಲೋಕ–೪೭)

ಹ್ರೀಂ ಹ್ರೀಂ ಹ್ರೀಂ

ಯಂತ್ರರಚನೆ : ಚಿನ್ನದ ತಗಡಿನಲ್ಲಿ ಸಮಚತುರಶ್ರವವನ್ನು ಬರೆದು ನಡುವೆ ಹ್ರೀಂ ಬೀಜಮಂತ್ರವನ್ನು ೩ ಸಾರಿ ಬರೆಯಬೇಕು.

ಪೂಜೆ : ಕೆಂಪು ಹೂಗಳಿಂದ ಲಲಿತಾ ತ್ರಿಶತೀ ಅರ್ಚನೆಯನ್ನು ಮಾಡಬೇಕು.

ನೈವೇದ್ಯ : ಜೇನುತುಪ್ಪ ಕದಳೀಫಲ, ನಾರಿಕೇಳಫಲ

ಜಪ : ೨೫ ದಿನಗಳ ಕಾಲ ದಿನಕ್ಕೆ ೭೦೦೦ ಜಪಿಸಬೇಕು ಯಂತ್ರವನ್ನು ಧರಿಸಬೇಕು.

ಫಲ : ವಿಭೂತಿಯನ್ನು ಮಂತ್ರಿಸಿ ಧರಿಸಿದರೆ ಸಕಲಜನರು ವಶರಾಗುವರು ಯಂತ್ರವನ್ನು ಧರಿಸಿದರೆ ದೇವತೆಯರು ವಶವಾಗುವರು.

ಶ್ಲೋಕ–೪೮

ದೇವಿಯ ಕಣ್ಣುಗಳ ವರ್ಣನೆ

ಅಹಸ್ಸೂತೇ ಸವ್ಯಂ ತವ ನಯನಮರ್ಕಾತ್ಮಕತಯಾ
ತ್ರಿಯಾಮಾಂ ವಾಮಂ ತೇ ಸೃಜತಿ [1]ರಜನೀನಾಯಕತಯಾ ।
ತೃತೀಯಾ [2]ತೇ ದೃಷ್ಟಿರ್ದರದಲಿತ ಹೇಮಾಂಬುಜರುಚಿಃ
ಸಮಾಧತ್ತೇ ಸಂಧ್ಯಾಂ ದಿವಸನಿಶಯೋರಂತರಚರೀಮ್ ॥ ೪೮ ॥

ಪಾಠಾಂತರ

೧. (ರಜನೀನಾಯಕತಯಾ) = ರಜನೀಂನಾಯಜಮವಲಂ (ಸು)
೨. (ತೇ ದೃಷ್ಟಿರ್ದರ ದಲಿತ) = ದೃಷ್ಟಿಸ್ತೇ ದರದಲಿತ (ಸು)

ಪದವಿಭಾಗ

(ಅಹಸ್ಸೂತೇ) = ಅಹಃ + ಸೂತೇ, ಸವ್ಯಂ, ತವ, (ನಯನ ಮರ್ಕಾತ್ಮಕತಯಾ) = ನಯನಮ್+ಅರ್ಕ+ಆತ್ಮಕತಯಾ, ತ್ರಿಯಾಮಾಂ, ವಾಮಂ, ತೇ, ಸೃಜತಿ, ರಜನೀನಾಯಕತಯಾ, ತೃತೀಯಾ, ತೇ, (ದೃಷ್ಟಿರ್ದರದಲಿತಹೇಮಾಂಬುಜರುಚಿಃ) = ದೃಷ್ಟಿಃ + ದರದಲಿತ ಹೇಮಾಂಬುಜರುಚಿಃ, (ಸಮಾಧತ್ತೇ) = (ಸಂ + ಆಧತ್ತೇ), ಸಂಧ್ಯಾಂ, (ದಿವಸ ನಿಶಯೋರಂತರಚರೀಮ್) = ದಿವಸನಿಶಯೋ ಃ + ಅಂತರ ಚರೀಮ್

ಅನ್ವಯಾರ್ಥ

(ಹೇ ಭಗವತಿ)	(ಎಲೈ ಪೂಜ್ಯಳಾದ ದೇವಿಯೆ)
ತವ ಸವ್ಯಂ ನಯನಂ	ನಿನ್ನ ಬಲಭಾಗದ ಕಣ್ಣು
ಅರ್ಕಾತ್ಮಕತಯಾ	ಸೂರ್ಯರೂಪದಿಂದ
ಅಹಸ್ಸೂತೇ	(ಅಹಃ + ಸೂತೇ) = ಹಗಲನ್ನು– ಉಂಟುಮಾಡುತ್ತದೆ
ತೇ ವಾಮಂ ನಯನಂ	ನಿನ್ನ ಎಡಭಾಗದ ಕಣ್ಣು
ರಜನೀ ನಾಯಕತಯಾ	(ರಾತ್ರಿಗೆ ಪತಿಯಾದ) ಚಂದ್ರನ ರೂಪದಿಂದ
ತ್ರಿಯಾಮಾಂ	(ಮೂರು ಯಾಮಗಳುಳ್ಳ) ರಾತ್ರಿಯನ್ನು

ಸೃಜತಿ	ಉಂಟುಮಾಡುತ್ತದೆ
ತೇ ತೃತೀಯಾ ದೃಷ್ಟಿಃ	ನಿನ್ನ ಮೂರನೆಯ ಕಣ್ಣು
ದರದಲಿತಹೇಮಾಂಬುಜರುಚಿಃ	ಸ್ವಲ್ಪವಾಗಿ – ಅರಳಿದ – ಚಿನ್ನದ ಕಮಲದ ಕಾಂತಿಯುಳ್ಳದ್ದಾಗಿ
ದಿವಸನಿಶಯೋಃ	ಹಗಲು ಮತ್ತು ರಾತ್ರಿಗಳ
ಅಂತರಚರೀಂ	ಮಧ್ಯದಲ್ಲಿರುವ (ಸಂಧ್ಯಾ ಕಾಲವನ್ನು)
ಸಮಾಧತ್ತೇ	ಚೆನ್ನಾಗಿ ಉಂಟುಮಾಡುತ್ತದೆ.

ತಾತ್ಪರ್ಯ

ಎಲೈ ಪೂಜ್ಯಳಾದ ದೇವಿಯೇ, ನಿನ್ನ ಬಲಗಡೆಯ ಕಣ್ಣು ಸೂರ್ಯರೂಪದಿಂದ ಹಗಲನ್ನು ಉಂಟುಮಾಡುತ್ತದೆ; ನಿನ್ನ ಎಡಗಡೆಯ ಕಣ್ಣು ಚಂದ್ರರೂಪದಿಂದ ಮೂರು ಯಾಮಗಳ ರಾತ್ರಿಯನ್ನು ಉಂಟುಮಾಡುತ್ತದೆ; ಇನ್ನು ನಡುವೆ ಇರುವ ನಿನ್ನ ಮೂರನೆಯ ಕಣ್ಣು ಸ್ವಲ್ಪ ಅರಳಿದ ಕೆಂದಾವರೆಯ (ಚಿನ್ನದ ಕಮಲದ) ಕಾಂತಿಯುಳ್ಳದ್ದಾಗಿ ಹಗಲು ರಾತ್ರಿಗಳ ಮಧ್ಯವರ್ತಿಯಾದ ಸಂಧ್ಯಾಕಾಲವನ್ನು ಉಂಟುಮಾಡುತ್ತದೆ. ಹೀಗೆ ಶ್ರೀ ದೇವಿಯ ಮೂರು ಕಣ್ಣುಗಳನ್ನು ವರ್ಣಿಸಲಾಗಿದೆ.

ಪದ್ಯಾನುವಾದ

ಎಲೆ ದೇವಿ! ನಿನ್ನ ಬಲಗಣ್ಣು ನೇಸರನನೊಳ–
ಗೊಂಡು ಹಗಲಿಗೆ ಹುಟ್ಟು; ನಿನ್ನೆಡದ ಕಣ್ಣಿರುಳಿ–
ಗೊಡೆಯನನ್ನೊಳಗೊಂಡು ಮೂರು ಜಾವದ ಮಾನದಿರುಳ ಸೃಷ್ಟಿಸುತಿಹುದು
ಮೂರನೆಯ ಹಣೆಗಣ್ಣು ಮುಚ್ಚಿಬಿಚ್ಚಿಯುಯಿದ್ದು
ಅರೆಯರಳಿ ಮೆರೆವ ಹೊಂದಾವರೆಯ ಹೊಳಪನ್ನು
ಹಸರಿಸುತ ಹಗಲಿರುಳನಡುವೆ ಸಂಚರಿಪ ಸಂಜೆಯನ್ನುಂಟುಮಾಡುತಿಹುದು.
॥ ೪೮ ॥

ಟಿಪ್ಪಣಿಗಳು

೧. ದೇವಿಯ ತ್ರಿನಯನಗಳು ಸೂರ್ಯ ಚಂದ್ರ ಅಗ್ನಿ ರೂಪವಾದ ಮೂರು ಕಣ್ಣುಗಳೆಂದು ಭಗವತಿಯನ್ನು ವರ್ಣಿಸಲಾಗಿದೆ. ಶಿವ–ಶಕ್ತಿಗಳಿಬ್ಬರೂ ಆದರ್ಶದಂಪತಿಗಳು. ಜಗನ್ಮಾತೆ – ಜಗತ್ಪಿತರು. ತ್ರಿಯಂಬಕದೇವಿಗೆ ಈಶ್ವರನ ಹಾಗೆಯೇ ಅರ್ಧಾಂಗಿಯಾದ ದೇವಿಗೂ ತ್ರಿಲೋಚನವಿದೆ ಇನ್ನು ಇಬ್ಬರಿಗೂ ಪಂಚವಿಧ ಸಾಮ್ಯಗಳು ಇವೆ. (ಅಧಿಷ್ಠಾನ, ಅನುಷ್ಠಾನ, ಅವಸ್ಥಾನ,

ರೂಪ, ನಾಮ ಈ ೫ರ ಸಾಮ್ಯವಿದೆ.) ದೇವಿಯ ತ್ರಿನಯನಗಳು ತ್ರಿಕಾಲಗಳಿಗೆ (ಹಗಲು – ರಾತ್ರಿ–ಸಂಜೆ) ಸಾಕ್ಷಿಯಾಗಿವೆ.

(ಪ–ಪುಟ ೫೮)

೨. ಲಲಿತಾಸಹಸ್ರನಾಮದಲ್ಲಿ (ಶ್ಲೋಕ ೬ ನಾಮ ೧೮) 'ವಕ್ತ್ರಲಕ್ಷ್ಮೀ ಪರೀವಾಹ ಚಲನ್ಮೀನಾಭಲೋಚನಾ' ಎಂದು ಹೇಳಿದೆ (ಮುಖ ಕಾಂತಿಯೆಂಬ ಪ್ರವಾಹದಲ್ಲಿ ಸಂಚರಿಸುತ್ತಿರುವ ಮೀನುಗಳೋ ಎಂಬಂತಿರುವ ಕಣ್ಣುಗಳುಳ್ಳವಳು.)

"ಮೀನುಗಳು ತಮ್ಮ ಮರಿಗಳನ್ನು ವಾತ್ಸಲ್ಯಪೂರ್ಣವಾದ ನೋಟದಿಂದಲೇ ಬೆಳೆಸುತ್ತವೆ. ಸ್ತನ್ಯಾದಿಗಳಿಂದಲ್ಲ" ಎಂದು ಭಾಸ್ಕರಾಚಾರ್ಯರ 'ಸೌಭಾಗ್ಯ ಭಾಸ್ಕರ ಟೀಕಾ'ದಲ್ಲಿ ಹೇಳಿದೆ. ಶ್ರೀ ದೇವಿಯೂ ಸಹ ತನ್ನ ಕೃಪಾದೃಷ್ಟಿಯಿಂದಲೇ ಭಕ್ತರನ್ನು ರಕ್ಷಿಸುತ್ತಾಳೆ ಎಂಬುದು ಇಲ್ಲಿ ಧ್ವನಿತವಾಗುತ್ತದೆ. ಆದ್ದರಿಂದಲೇ ದೇವಿಗೆ ಮೀನಾಕ್ಷಿ ಎಂಬ ಹೆಸರು ಇದೆ.

(ಲ–ಕೂ ಪುಟ ೫೮)

೩. ಹಗಲು ರಾತ್ರಿ ಸಂಧ್ಯಾಕಾಲಗಳು ಅವಸ್ಥಾತ್ರಯಗಳು ಜಾಗ್ರತ ಸುಷುಪ್ತಿ ಸ್ವಪ್ನಗಳ ಮೂಲಕ ಲೋಕದ ಅಜ್ಞಾನವನ್ನು ಹೋಗಲಾಡಿಸುತ್ತಾಳೆ. ಚಂದ್ರಾತ್ಮಕನೇತ್ರ ಕಾಂತಿ, ಜ್ಞಾನಮಯ ಸಮಾಧಿಸ್ಥಿತಿಯನ್ನುಂಟುಮಾಡಿದರೆ ಸಂಧ್ಯಾ ರೂಪವಾದ ಅಗ್ನಿನೇತ್ರ ಸ್ವಪ್ನಾವಸ್ಥೆಯ ಜ್ಞಾನಭೂಮಿಕೆಗೆ ಸೋಪಾನವಾಗಿದೆ, ಹಗಲಿನ ಸೂರ್ಯಾತ್ಮಕ ನೇತ್ರ ಜಾಗ್ರದವಸ್ಥೆಗೆ ಸಾಕ್ಷಿಯಾಗಿದೆ.

(ತು–ಪುಟ ೨೯೪)

೪. ಸೂರ್ಯ, ಚಂದ್ರ, ಅಗ್ನಿನೇತ್ರಗಳು ಜ್ಞಾತೃ, ಜ್ಞಾನ, ಜ್ಞೇಯ ಎಂಬ ಮೂರು ವಿಷಯಗಳಿಗೆ ಸಂಕೇತಗಳಾಗಿವೆ (ಸೂರ್ಯ–ಜ್ಞಾತ ಚಂದ್ರ–ಜ್ಞೇಯ, ಅಗ್ನಿ–ಜ್ಞಾನಗಳಿಗೆ ಸಂಕೇತವಾಗಿದೆ.)

(ಪೋ–ಪುಟ ೨೪೫)

೫. ದೇವಿಯು ತ್ರಿಕಾಲಜನನಿ. ಸರ್ವೇಶ್ವರಿ ಆದ ದೇವಿಯ ನೇತ್ರ ಸೌಂದರ್ಯವನ್ನು ಇಲ್ಲಿ ವರ್ಣಿಸಿದೆ. ಸರ್ವೇಶ್ವರಿಯ ಸೂರ್ಯ ಚಂದ್ರ ಅಗ್ನಿ ನೇತ್ರಗಳು ಹಗಲು ರಾತ್ರಿ ಸಂಧ್ಯೆ ಎಂಬ ತ್ರಿಕಾಲಗಳನ್ನು ಸಂಕೇತಿಸುವುದು. ಈ ಮೂರರಿಂದ ಪಕ್ಷ ಮಾಸ, ಋತು, ಅಯನ, ಸಂವತ್ಸರ, ಯುಗ, ಕಲ್ಪ ಇತ್ಯಾದಿ ಕಾಲೋತ್ಪತ್ತಿ ಆಗುವುದು. ಆದ್ದರಿಂದ ಸರ್ವೇಶ್ವರಿಗೆ ನಿತ್ಯತ್ವ ಎಂಬುದು ಸೂಚನೆ.

(ಶ್ರೀ–ಪುಟ–೨೪೭)

೬. **ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ** ಎಂಬ ಉಕ್ತಿಯಂತೆ ಎಲ್ಲ ಇಂದ್ರಿಯಗಳ ಪೈಕಿ ಕಣ್ಣುಗಳೇ ಪ್ರಧಾನ. ಆದರೆ ದೇವಿಯ ನೇತ್ರಗಳು ಪ್ರಧಾನವಷ್ಟೇ ಅಲ್ಲ, ವಿಶೇಷವೂ ಲೋಕಾನುಗ್ರಹಕಾರಕವೂ ಆಗಿವೆ.

(ಶ್ರೀ–ಪುಟ ೨೪೭)

೭ ೪೮ನೇ ಶ್ಲೋಕದಿಂದ ೫೭ನೇ ಶ್ಲೋಕದವರೆಗೆ ದೇವಿಯ ನೇತ್ರಗಳಿಗೆ ಸಂಬಂಧಿಸಿದಂತೆ ವರ್ಣಿಸಲಾಗಿದೆ.

(ಬು-ಪುಟ ೧೩೪)

ಯಂತ್ರಾರಾಧನೆ (ಶ್ಲೋಕ-೪೮)

ಬು	ಶು	ಚ
ಗು	ರ	ಕು
ರಾ	ಶ	ಕೇ

ಯಂತ್ರರಚನೆ : ಚಿನ್ನದ ತಗಡಿನಲ್ಲಿ ೯ ಚತುರಶ್ರಗಳು ಸೇರಿರುವಂತೆ (೯ ಚೌಕದಮನೆಗಳು) ಈ ನವಗ್ರಹ ಯಂತ್ರವನ್ನು ಬರೆಯಬೇಕು. ಅದರಲ್ಲಿ ಯಂತ್ರದಲ್ಲಿ ತೋರಿಸಿರುವಂತೆ ನವಗ್ರಹಗಳ ಹೆಸರುಗಳನ್ನು ಬರೆಯಬೇಕು

ಪೂಜೆ : ಯಂತ್ರದ ಮುಂದೆ ಎಡಭಾಗದಲ್ಲಿ ಲಲಿತಾ ಅಷ್ಟೋತ್ತರ ಕುಂಕುಮಾರ್ಚನೆ ಮಾಡಬೇಕು.ಆಯಾಗ್ರಹಗಳ ಅಷ್ಟೋತ್ತರ ಅರ್ಚನೆಯನ್ನು ವಿವಿಧ ಪುಷ್ಪ ನೈವೇದ್ಯಗಳಿಂದ ಅರ್ಚಿಸಬೇಕು.

ನೈವೇದ್ಯ : ಚಿತ್ರಾನ್ನ, ಬಾಳೆಹಣ್ಣು, ಜೇನುತುಪ್ಪ

ಜಪ : ೧೯ ದಿನಗಳ ಕಾಲ ಪ್ರತಿದಿನವೂ ಶ್ಲೋಕವನ್ನು ೧೦೦೦ ಸಾರಿ ಜಪಿಸಿ ಯಂತ್ರವನ್ನು ಧರಿಸಬೇಕು.

ಫಲ : **ನವಗ್ರಹದೋಷ ನಿವಾರಣೆ.**

ಶ್ಲೋಕ-೪೯

ದೇವಿಯ ಕಟಾಕ್ಷ ವರ್ಣನೆ

ವಿಶಾಲಾ ಕಲ್ಯಾಣೀ ಸ್ಫುಟರುಚಿರಯೋಧ್ಯಾ ಕುವಲಯೈಃ
ಕೃಪಾಧಾರಾಽಽ ಧಾರಾ ಕಿಮಪಿ ಮಧುರಾಽಽ ಭೋಗವತಿಕಾ ।
ಅವಂತೀ ದೃಷ್ಟಿಸ್ತೇ ಬಹುನಗರವಿಸ್ತಾರವಿಜಯಾ
ಧ್ರುವಂ ತತ್ತನ್ನಾಮವ್ಯವಹರಣಯೋಗ್ಯಾ ವಿಜಯತೇ ॥ ೪೯ ॥

ಪದವಿಭಾಗ

ವಿಶಾಲಾ, ಕಲ್ಯಾಣೀ, (ಸ್ಫುಟರುಚಿರಾಯೋಧ್ಯಾ) = ಸ್ಫುಟರುಚಿಃ + ಅಯೋಧ್ಯಾ, ಕುವಲಯೈಃ (ಕೃಪಾಧಾಽಽಧಾರಾ) = ಕೃಪಾಧಾರಾ + ಆಧಾರಾ, (ಕಿಮಪಿ) ಕಿಮ್ + ಅಪಿ, (ಮಧುರಾಽಽ ಭೋಗವತಿಕಾ) = ಮಧುರಾ + ಆಭೋಗವತಿಕಾ, ಅವಂತೀ, (ದೃಷ್ಟಿಸ್ತೇ) = ದೃಷ್ಟಿಃ + ತೇ, ಬಹುನಗರವಿಸ್ತಾರವಿಜಯಾ, ಧ್ರುವಂ, (ತತ್ತನ್ನಾಮವ್ಯವಹರಣಯೋಗ್ಯಾ) = ತತ್ + ತತ್ + ನಾಮ ವ್ಯವಹರಣಯೋಗ್ಯಾ, ವಿಜಯತೇ.

ಅನ್ವಯಾರ್ಥ

(ಹೇ ಭಗವತಿ)	(ಎಲೈ ಪೂಜ್ಯಳಾದ ದೇವಿಯೆ)
ತೇ ದೃಷ್ಟಿಃ	ನಿನ್ನ ದೃಷ್ಟಿಯು
ವಿಶಾಲಾ	ವಿಸ್ತಾರವಾಗಿಯೂ (ವಿಶಾಲಾ ಎಂಬ ಪಟ್ಟಣವಾಗಿಯೂ)
ಕಲ್ಯಾಣೀ	ಮಂಗಳಕರವಾಗಿಯೂ (ಕಲ್ಯಾಣ ಪಟ್ಟಣವಾಗಿಯೂ)
ಸ್ಫುಟರುಚಿಃ	ಸ್ಪಷ್ಟವಾದಂಥಾ – ಕಾಂತಿಯುಳ್ಳದ್ದಾಗಿಯೂ
ಕುವಲಯೈಃ	ಕನ್ನೈದಿಲೆಗಳಿಂದ
ಅಯೋಧ್ಯಾ	ಜಯಿಸಲು ಅಸಾಧ್ಯವಾಗಿಯೂ (ಅಯೋಧ್ಯ ಪಟ್ಟಣವಾಗಿಯೂ)
ಕೃಪಾಧಾರಾಽಧಾರಾ	ದಯಾರಸದ–ಧಾರೆಗೆ–ಆಶ್ರಯವಾಗಿಯೂ (ಧಾರಾನಗರವಾಗಿಯೂ)

ಕಿಮಪಿ	ಅತಿಶಯವಾಗಿ (ಅನಿರ್ವಚನೀಯವಾಗಿ)
ಮಧುರಾ	ಮಧುರವಾಗಿಯೂ (ಮಧುರಾ ಪಟ್ಟಣವಾಗಿಯೂ (ವಿಜಯಪಟ್ಟಣವಾಗಿ)
ಆಭೋಗವತಿಕಾ	ಬಹಳ ಉದ್ದವಾಗಿರುವಂತೆ (ಭೋಗವತೀ ಪಟ್ಟಣವಾಗಿಯೂ)
ಅವಂತೀ	ಸಂರಕ್ಷಕವಾಗಿಯೂ (ಅವಂತೀ ಪಟ್ಟಣ ವಾಗಿಯೂ)
ಬಹುನಗರವಿಸ್ತಾರವಿಜಯಾ	ಅನೇಕ ಪಟ್ಟಣಗಳ - ಗುಂಪಿನಿಂದ ಜಯವುಳ್ಳದ್ದಾಗಿಯೂ
ತತ್ತನ್ನಾಮವ್ಯವಹರಣಯೋಗ್ಯಾಃ	ಆಯಾನಗರದ ಹೆಸರುಗಳಿಂದ ಹೇಳಿಸಿ ಕೊಳ್ಳುವುದಕ್ಕೆ ಯೋಗ್ಯವಾಗಿಯೂ
ಧ್ರುವಂ ವಿಜಯತೇ	ಸ್ಥಿರವಾಗಿ ಸರ್ವೋತ್ತಮವಾಗಿರುತ್ತದೆ.

ತಾತ್ಪರ್ಯ

ಓ ಭಗವತಿ! ನಿನ್ನ ದೃಷ್ಟಿ ವಿಶಾಲವಾಗಿರುವುದರಿಂದ **ವಿಶಾಲಾ** ಎಂದೂ, ಮಂಗಳಕರವಾದುದರಿಂದ **ಕಲ್ಯಾಣೀ** ಎಂದೂ, ಸ್ಪಷ್ಟವಾಗಿಯೂ, ಕಾಂತಿಯುಳ್ಳದ್ದಾಗಿಯೂ ಕನ್ನೈದಿಲೆಗಳಿಂದ ಜಯಿಸಲು ಅಸಾಧ್ಯವಾಗಿಯೂ ಇರುವುದರಿಂದ **ಅಯೋಧ್ಯಾ** ಎಂದೂ, ದಯಾರಸದಧಾರೆಗೆ ಆಶ್ರಯವಾದುದರಿಂದ **ಧಾರಾ** ನಗರವೆಂದೂ, **ಅನಿರ್ವಚನೀಯವಾಗಿ ಮಧುರವಾಗಿರುವುದರಿಂದ ಮಧುರಾನಗರವಾಗಿಯೂ** ಅತ್ಯಂತ ದೀರ್ಘವಾಗಿರುವುದರಿಂದ **ಭೋಗವತೀ** ಎಂದೂ, ಭಕ್ತರನ್ನು ರಕ್ಷಿಸುವುದರಿಂದ **ಅವಂತೀ** ಪಟ್ಟಣವೆಂದೂ, ಅನೇಕ ಪಟ್ಟಣಗಳ ಗೆಲುವಿನಿಂದ ವಿಜಯಾವೆಂದೂ ಈ ರೀತಿಯಾಗಿ ೮ ಪಟ್ಟಣಗಳ ಹೆಸರುಗಳಿಂದ ಕರೆಸಿಕೊಳ್ಳುತ್ತಾ ವ್ಯವಹರಿಸಲು ಯೋಗ್ಯವಾದುದ್ದಾಗಿ ನಿಶ್ಚಯವಾಗಿಯೂ ಸರ್ವಶ್ರೇಷ್ಠವಾಗಿ ಶೋಭಿಸುತ್ತಿರುವೆ.

ಪದ್ಯಾನುವಾದ

ತಾಯೇ! ವಿಶಾಲ, ಕಲ್ಯಾಣಿ, ಪ್ರಕಾಶೀ ಕು-
ವಲಯಕ್ಕಯೋಧ್ಯಾ, ಕೃಪಾಧಾರೆಗಾಧಾರ,
ಅವ್ಯಕ್ತಮಧುರ, ಆ ಭೋಗವತಿ, ಮೇಲಾಗವಂತೀ, ವಿಜಯವೆನ್ನುವ
ಪೆಸರ್ಗಳಿಂದೆಸೆಯುತಿಹ ಬಹುಸಂಖ್ಯ ನಗರಗಳ
ನಾಮಗಳ ತಳೆಯಲರ್ಹತೆಯ ಹೊಂದಿರುವ ನಿ-
ನ್ನಯ ದೃಷ್ಟಿಯಾನಾಮ ನಿರ್ದಿಷ್ಟ ಗುಣಗಳಿಂದಾವಗಂ ಗೆಲ್ಗೆಗೆಲ್ಗೆ ॥ ೪೯ ॥

ಟಿಪ್ಪಣಿಗಳು

೧. ಅಷ್ಟದೃಷ್ಟಿಗಳ ಅಷ್ಟಕ್ರಿಯೆಗಳು ಅಷ್ಟಭಾವಗಳು ಸೇರಿ ಅಷ್ಟನಗರಗಳು ಸೃಷ್ಟಿಯಾದುದನ್ನು ಈ ಶ್ಲೋಕ ಹೇಳುತ್ತದೆ.

ಕ್ರಸಂ.	ನಗರ	ಈಗಿನ ಹೆಸರು	ದೃಷ್ಟಿ	ಕ್ರಿಯೆ	ಭಾವ
೧.	ವಿಶಾಲ	(ಬದರೀನಾಥ್)	ವಕ್ರದೃಷ್ಟಿ	ಸಂಕ್ಷೋಭಣ	ಅಂತರ್‌ವಿಕಾಸ
೨.	ಕಲ್ಯಾಣಿ	(ಮುಂಬಯಿ–ನಾಸಿಕ್ ನಡುವಿನ ಪ್ರದೇಶ)	ವಿಕಾಸ ದೃಷ್ಟಿ	ಆಕರ್ಷಣ	ವಿಸ್ಮಯ
೩.	ಅಯೋಧ್ಯಾ	(ಉತ್ತರಪ್ರದೇಶ)	ಆಶ್ಚರ್ಯದೃಷ್ಟಿ	ದ್ರಾವಣ	ಮಂದಹಾಸ
೪.	ಧಾರಾ	(ಥಾರ್‌ಪ್ರದೇಶ)	ಆಲಸ್ಯದೃಷ್ಟಿ	ಉನ್ಮಾದನ	ಆಲಸ್ಯಭಾವ
೫.	ಮಥುರಾ	(ಉತ್ತರಪ್ರದೇಶ)	ಸ್ಥಿರದೃಷ್ಟಿ	ವಶ್ಯ	ಚಂಚಲಭಾವ
೬	ಭೋಗವತಿ	(ಆಂಧ್ರಪ್ರದೇಶ)	ಚಂಚಲದೃಷ್ಟಿ	ಉಚ್ಚಾಟ್ಟನ	ಸ್ನಿಗ್ಧಭಾವ
೭.	ವಿಜಯಾ	(ವಿಜಯನಗರ)	ಮುಗ್ಧದೃಷ್ಟಿ	ವಿದ್ವೇಷಣ	ಆಕೇಕರಾ
೮.	ಅವಂತೀ	(ಉಜ್ಜಯಿನಿ, ಮಧ್ಯ ಪ್ರದೇಶ)	ಕೇಕರದೃಷ್ಟಿ	ಮಾರಣ	ಮುಗ್ಧ

೨. ಇಲ್ಲಿರುವ ೮ ದೃಷ್ಟಿಗಳು ಸ್ತ್ರೀಗೆ ಸಂಬಂಧಿಸಿದವು ಆದರೆ ಭಗವತಿಯ ೮ ದೃಷ್ಟಿಗಳು ವಿಶೇಷತರವಾದವು.

೮ ಪಟ್ಟಣಗಳ ಹೆಸರುಗಳಿಗೆ ಕಾರಣವಾಗಿದೆ.

೧. **ವಿಶಾಲಾ** – ಅಂತರಂಗದ ವಿಕಾಸದಿಂದ ಲಭಿಸುವ ಅತೀಂದ್ರಿಯದೃಷ್ಟಿ

೨. **ಕಲ್ಯಾಣೀ** – ಸ್ಫುಟವಾದ ಕಾಂತಿಯಿಂದ ಕೂಡಿದ ಶುಭಕಾರಕ ದೃಷ್ಟಿ

೩. **ಅಯೋಧ್ಯಾ** – ಯಾರಿಂದಲೂ ಎದುರಿಸಲು ಆಗದ ದೃಷ್ಟಿ

೪. **ಧಾರಾ** – ಜನತೆಯಲ್ಲಿ ಅನನ್ಯಕೃತಾಸೂಚಕ ದೃಷ್ಟಿ

೫. **ಮಧುರಾ** – ಸವಿಯಾದ ದೃಷ್ಟಿ

೬. **ಭೋಗವತೀ** – ವಿಲಾಸ, ಉಪಭೋಗಗಳನ್ನು ಒಳಗೊಂಡನಾಗರಿಕರಿಂದ ಕೂಡಿದ ದೃಷ್ಟಿ


೭. **ವಿಜಯಾ** – ಕಣ್ಣುಗುಡ್ಡೆಗಳು ಪಾರ್ಶ್ವ ತಿರುಗಿ ತೃಪ್ತಿಸೂಚಕ ದೃಷ್ಟಿ

೮. **ಅವಂತಿ** – ಮುಗ್ಧತೆಯ ಸರಳದೃಷ್ಟಿ

ಇವು ದೃಷ್ಟಿಭೇದವನ್ನು ಸೂಚಿಸುವ ಪಾರಿಭಾಷಿಕ ನುಡಿಗಳಾಗಿ ಪ್ರಚಾರಕ್ಕೆ ಬಂದು ಆ ಮೇಲೆ ಪ್ರಮುಖ ನಗರಗಳ ಹೆಸರಾದವು.

(ಪು-ಪುಟ ೧೦೦)

ಯಂತ್ರಾರಾಧನೆ (ಶ್ಲೋಕ-೪೯)



ಯಂತ್ರರಚನೆ : ಬೆಳ್ಳಿಯ ತಟ್ಟೆಯಲ್ಲಿ ಅರಶಿನದ ಪುಡಿಹಾಕಿ ಯಂತ್ರವನ್ನು ಬರೆಯಬೇಕು. ಸಮಚತುರಶ್ರದೊಳಗೆ ೪ ಕೋಣಗಳು ಇರುವಂತೆ ಬರೆದು ನಾಲ್ಕು ಮೂಲೆಗಳಲ್ಲಿ, ನಾಲ್ಕು ತ್ರಿಶೂಲಗಳನ್ನು ಬರೆಯಬೇಕು. ೪ ತ್ರಿಕೋಣಗಳ ಒಳಗೆ ಮಕ ಎಂಬ ಬೀಜ ಮಂತ್ರಾಕ್ಷರ ಬರೆಯಬೇಕು.

ಪೂಜೆ : ಉತ್ತರಾಭಿಮುಖವಾಗಿ ಕುಳಿತು ಯಂತ್ರದ ಮಧ್ಯದಲ್ಲಿ ಲಲಿತಾ ಅಷ್ಟೋತ್ತರ ಕುಂಕುಮಾರ್ಚನೆಯನ್ನು ಮಾಡಬೇಕು. ಮೇಲಿನ ತ್ರಿಕೋನದಲ್ಲಿ ಕೆಂದಾವರೆಗಳಿಂದ ಲಕ್ಷ್ಮೀಅಷ್ಟೋತ್ತರ ಅರ್ಚನೆ ಮಾಡಬೇಕು.

ನೈವೇದ್ಯ : ಜೇನುತುಪ್ಪ ಮುದ್ಗಾನ್ನ

ಜಪ : ೨೫ ದಿನಗಳ ಕಾಲ ದಿನಕ್ಕೆ ೧೦೦೦ ಶ್ಲೋಕವನ್ನು ಪಠಿಸಬೇಕು. ಯಂತ್ರ ಬರೆದು ಪೂಜಿಸಿದ ಅರಶಿನ ಪುಡಿಯನ್ನು ಕರಕುಮಾಡಿ ಎಳ್ಳೆಣ್ಣೆಯಲ್ಲಿ ಕಲಸಿ ಲೇಪವನ್ನು ಬೆಕ್ಕಿನ ಕಣ್ಣಿನ (೨೫ ವರ್ಷಕ್ಕಿಂತ) ಕಡಿಮೆ ವಯಸ್ಸಿನ) ಬಾಲಕನ ಕೈಯಲ್ಲಿ ಹಚ್ಚಿ ನೋಡಬೇಕು. ಅಥವಾ ಅಂಜನ ಮಾಡಿ ಅವನ ಕಣ್ಣಿಗೆ ಹಚ್ಚಬೇಕು ಆಗ ನೋಡಿದಾಗ ನಿಧಿದರ್ಶನ ಆಗುತ್ತದೆ.

ಫಲ : ನಿಧಿದರ್ಶನ.

ಶ್ಲೋಕ-೫೦

ದೇವಿಯ ಹಣೆಗಣ್ಣಿನ ವರ್ಣನೆ

ಕವೀನಾಂ ಸಂದರ್ಭಸ್ತಬಕಮಕರಂದೈಕರಸಿಕಂ
ಕಟಾಕ್ಷವ್ಯಾಕ್ಷೇಪಭ್ರಮರಕಲಭೌ ಕರ್ಣಯುಗಲಮ್ ।
ಅಮುಂಚಂತೌ ದೃಷ್ಟ್ವಾತವ ನವರಸಾಸ್ವಾದತರಲೌ
[1]ಅಸೂಯಾಸಂಸರ್ಗಾದಲಿಕನಯನಂ ಕಿಂಚಿದರುಣಮ್ ॥ ೫೦ ॥

ಪಾಠಾಂತರ

೧. (ಅಸೂಯಾಸಂಸರ್ಗಾದಲಿತ = ವಸೂಯಾಸಂಪರ್ಕಾದಲಿಕ (ಸು)

ಪದವಿಭಾಗ

ಕವೀನಾಂ, (ಸಂದರ್ಭಸ್ತಬಕಮಕರಂದೈಕರಸಿಕಂ,) = ಸಂದರ್ಭಸ್ತಬಕ ಮಕರಂದ + ಏಕರಸಿಕಂ, (ಕಟಾಕ್ಷ ವ್ಯಾಕ್ಷೇಪಭ್ರಮರಕಲಭೌ,) = ಕಟಾಕ್ಷ + ವಿ + ಆಕ್ಷೇಪಭ್ರಮರಕಲಭೌ, ಕರ್ಣಯುಗಲಮ್, ಅಮುಂಚಂತೌ, ದೃಷ್ಟ್ವಾ, ತವ, (ನವರಸಾಸ್ವದತರತೌ) = ನವರಸ + ಆಸ್ವಾದತರಲೌ, (ಅಸೂಯಾ ಸಂಸರ್ಗಾದಲಿಕ ನಯನಂ) = ಅಸೂಯಾ ಸಂಸರ್ಗಾತ್ + ಅಲಿಕನಯನಂ, (ಕಿಂಚಿದರುಣಮ್) = ಕಿಂಚಿತ್ + ಅರುಣಮ್.

ಅನ್ವಯಾರ್ಥ

(ಹೇ ಭಗವತಿ)	(ಎಲೈ ಪೂಜ್ಯಳಾದ ದೇವಿಯೆ)
ಕವೀನಾಂ	ಮಹಾಕವಿಗಳ
ಸಂದರ್ಭಸ್ತಬಕಮಕರಂದೈಕರಸಿಕಂ	(ಸಂದರ್ಭ + ಸ್ತಬಕ + ಮಕರಂದ + ಏಕರಸಿಕಂ) = ಕವಿತ್ವವೆಂಬ–ಹೂಗೊಂಚಲಿನಲ್ಲಿರುವ ಪುಷ್ಪರಸದಲ್ಲಿ – ಪ್ರಧಾನವಾಗಿ ಆಸಕ್ತವಾದ (ಕಾವ್ಯಾಮೃತ ರಸದಲ್ಲಿ ಶ್ರವಣಾನಂದ ಪಡೆವ)
ತವ ಕರ್ಣಯುಗಳಂ	ನಿನ್ನ ಎರಡು ಕಿವಿಗಳನ್ನು
ಕಟಾಕ್ಷವ್ಯಾಕ್ಷೇಪ	ಕಟಾಕ್ಷಗಳೆಂಬ ನೆವವುಳ್ಳ

ಭ್ರಮರಕಲಭೌ	ಮರಿದುಂಬಿಗಳೂ (ಭ್ರಮರಪೋತಗಳು)
ನವರಸಾಸ್ವಾದತರಲೌ	(ನವರಸ + ಆಸ್ವಾದ + ತರಲೌ) = ಶೃಂಗಾರಾದಿನವರಸಗಳ – ರುಚಿಯಲ್ಲಿ ಆಸಕ್ತವಾಗಿ
ಅಮುಂಚಂತೌ	ಬಿಡದೇ ಇರುವುದನ್ನು
ದೃಷ್ಟ್ವಾ	ನೋಡಿ
ಅಸೂಯಾಸಂಸರ್ಗಾತ್	ಹೊಟ್ಟೆಕಿಚ್ಚಿನ ಸಂಪರ್ಕದಿಂದ
ಅಲಿಕನಯನಂ	ಹಣೆಯಕಣ್ಣು
ಕಿಂಚಿದರುಣಂ	ಸ್ವಲ್ಪಕೆಂಪು
(ಅಭವತ್)	(ಆಯಿತು.)

ತಾತ್ಪರ್ಯ

ಮಹಾಕವಿಗಳ ಕಾವ್ಯಗಳು ಮಕರಂದದಿಂದ ಕೂಡಿದ ಹೂಗೊಂಚಲುಗಳಿದ್ದಂತೆ, ಶೃಂಗಾರಾದಿ ನವರಸಗಳೆಂಬ ಮಕರಂದರಸ ಆ ಹೂಗುಚ್ಛಗಳಿಂದ ಹೊರಸೂಸುತ್ತಿರುತ್ತವೆ. ಅವುಗಳ ಆಸ್ವಾದನಕ್ಕಾಗಿ ದೇವಿಯ ಕಟಾಕ್ಷಗಳೆಂಬ ಮರಿದುಂಬಿಗಳು (ಎರಡು ಕಣ್ಣುಗಳು) ಆಕೆಯ ಎಡ ಬಲ ಕಿವಿಗಳವರೆಗೆ ಹೋಗಿ ಆಸಕ್ತಿಯಿಂದ ಕಾವ್ಯರಸಾಸ್ವಾದ ಮಾಡುತ್ತಿರುವುದನ್ನು ಕಂಡು ಹಣೆಯಲ್ಲಿದ್ದ ಮೂರನೇ ಕಣ್ಣು ಅಗ್ನಿನೇತ್ರವು ತನಗೆ ಆ ಅವಕಾಶವಿಲ್ಲದೆ ಹೋದದ್ದರಿಂದ ಅಸೂಯೆಯಿಂದ ಕೆಂಪಾಯಿತು. (ಮೂರನೇ ಕಣ್ಣು ಕೆಂಪಗಿರುತ್ತದೆ. ಆ ಕೆಂಪು ಬಣ್ಣವನ್ನು ಕಾವ್ಯರಸ ಹೀರಲಾಗದ ಹೊಟ್ಟೆಕಿಚ್ಚಿಗಾಗಿ ಕೆಂಪಗಾಗಿದೆ (ಕ್ರೋಧಗೊಂಡಿದೆ ಎಂದು ಶಂಕರರು ಚಮತ್ಕಾರಿಕವಾಗಿ ಬಣ್ಣಿಸಿದ್ದಾರೆ) ದೇವಿಯ ನೇತ್ರ ಸೌಂದರ್ಯವನ್ನು ಈ ರೀತಿ ಬಣ್ಣಿಸಿದ್ದಾರೆ.

ಪದ್ಯಾನುವಾದ

ಕವಿಕೃತಿಗಳೆಂಬ ಹೂಗೊಂಚಲಿನ ಮಧುವ ಸವಿ–
ಯುವ ರಸಿಕವೆನಿಸಿರ್ಪ ನಿನ್ನ ಕಿವಿಜೋಡಿಯನು,
ನವರಸಾಸ್ವಾದದಲಿ ನಲಿವ ಕಡೆಗಣ್ಣ ನೋಟಗಳ ಮರಿದುಂಬಿಗಳನು,
ಎಡೆಬಿಡದೆ ನೋಡುತ್ತ ತನಗೆ ದಕ್ಕದ ಸುಖವ
ನೆನೆದಸೂಯಾಪರತೆಯಿಂದ ಕಿಡಿಕಿಡಿವೋಗಿ
ನಿನ್ನ ಹಣೆಗಣ್ಣು ನಸುಗೆಂಪನಾಂತುದು, ತಾಯೆ, ತಾಳಲಾರದೆ ಕೋಪವ
॥ ೫೦ ॥

ಟಿಪ್ಪಣಿಗಳು

ಅಲಂಕಾರ

೧. ಈ ಶ್ಲೋಕದಲ್ಲಿ ಹಲವು ಅಲಂಕಾರಗಳಿವೆ. ಕಣ್ಣುಗಳು ಕರ್ಣಗತವಾದ ಕಾವ್ಯಮೃತರಸಾಸ್ವಾದದ ಸಂಬಂಧವನ್ನು ಹೊಂದಿಲ್ಲವಾದರೂ ಸಂಬಂಧವನ್ನು ವರ್ಣಿಸಲಾಗಿದೆ. ಆದ್ದರಿಂದ **ಅತಿಶಯೋಕ್ತಿ ಅಲಂಕಾರ**ವಿದೆ. ಭ್ರಮರ ಕಲಭೌ ಎಂಬಲ್ಲಿ **ಅಪಹ್ನವಾಲಂಕಾರ**ವಾಗುತ್ತದೆ ಅಥವಾ **ರೂಪಕಾಲಂಕಾರವೂ** ಆಗುತ್ತದೆ.

(ಶೇ–ಪುಟ ೧೮೬)

೨. ದೇವಿಯು ವಾಚಾಂ, ಪರಾ, ದೇವತಾ ಎಂಬಂತೆ ಸಮಸ್ತವಾಕ್ ಸಂಪತ್ತಿಗೂ ಅವಳೇ ಅಧಿದೇವತೆಯಾಗಿದ್ದಾಳೆ. ಆಕೆಯ ಅನುಗ್ರಹದಿಂದ ಕವಿಯು ತಾನು ರಚಿಸಿದ ಕಾವ್ಯಗಳನ್ನು ಓದಿದಾಗ ಆಕೆ ಅದನ್ನು ಆಲಿಸುತ್ತಾಳೆ. ಮೆಚ್ಚುಗೆಯಿಂದ ಅತ್ತಿತ್ತ ಸರಿಯುವ ಆಕೆಯ ಮರಿದುಂಬಿಗಳ ಹಾಗಿರುವ ಕಣ್ಣುಗುಡ್ಡೆಗಳು ಕಾವ್ಯಾಮೃತರಸಾಪಾನ ಮಾಡಲು ಕಿವಿಯತ್ತ ಸಾಗಿದೆ ಎಂದು ಕವಿಯ ಉತ್ಪ್ರೇಕ್ಷಿಸಿದ್ದಾನೆ. ಆದರೆ ದೇವಿಯ ಎಡಬಲಕಣ್ಣುಗಳ ಹಾಗೆ ಹಣೆಗಣ್ಣು ಕಿವಿಯತ್ತ ಹೋಗಲಾಗದ್ದರಿಂದ ಅಸೂಯೆಯಿಂದ ಅದು ಕೆಂಪಾಗಿದೆ ಎಂದು ಕವಿ ಉತ್ಪ್ರೇಕ್ಷೆ ಮಾಡಿದ್ದಾನೆ. ವಾಸ್ತವವಾಗಿ ಹಣೆಗಣ್ಣು ಕೆಂಪಾಗಿರುವುದನ್ನು ಈ ರೀತಿ ಚಮತ್ಕಾರವಾಗಿ ವ್ಯಾಖ್ಯಾನ ಮಾಡಲಾಗಿದೆ.

(ಗ–ಪುಟ ೫೬)

೩. ದೇವಿಯ ಎಡ–ಬಲ ಎರಡು ಕಣ್ಣುಗಳು ಸೋಗೆಯಾಗಿ ಕಿವಿಯ ಪರಿಯಂತರವೂ ಇದೆ. ಮೂರನೇ ಕಣ್ಣು ಅರುಣವರ್ಣದ್ದಾಗಿದೆ. ಇದನ್ನು ಆಚಾರ್ಯರು ಇತರ ಎರಡು ಕಣ್ಣುಗಳಿಗೂ ಕವಿಗಳ ಕಾವ್ಯಮೃತ ರಸಾಸ್ವಾದನ ಮಾಡುವ ಕಿವಿಗಳ ಸಂಬಂಧದಿಂದ ಅಮೃತಪಾನ ಅವುಗಳಿಗೆ ಉಂಟಾಗಿದೆ. ಆ ಭಾಗ್ಯ ತನಗಿಲ್ಲವಲ್ಲಾ ಎಂದು ಮೂರನೆಯ ಹಣೆಗಣ್ಣು ಅಸೂಯಾಪರವಾಗಿ ಕೆಂಪಾಗಿದೆ ಎಂದು ಉತ್ಪ್ರೇಕ್ಷಿಸಿದ್ದಾರೆ.

೪. ಲಲಿತಾ ಸಹಸ್ರನಾಮದಲ್ಲಿ (ಶ್ಲೋಕ ೮೧ ನಾಮ ೩೬೬ ೩೬೭ ೩೬೮ ೩೭೦ ೩೭೧ ೩೭೨) ಹೀಗೆ ಹೇಳಿದೆ:

ಪರಾ । ಪ್ರತ್ಯಕ್‌ಚಿತೀರೂಪಾ । ಪಶ್ಯಂತೀ । ಪರದೇವತಾ ।
ಮಧ್ಯಮಾ । ವೈಖರೀರೂಪಾ । ಭಕ್ತಮಾನಸ ಹಂಸಿಕಾ ।

(ಪರಾರೂಪದಲ್ಲಿ – ಪ್ರತ್ಯಕ್‌ಚಿತೀರೂಪದಲ್ಲಿ – ಪಶ್ಯಂತೀರೂಪದಲ್ಲಿ ಪರಾದೇವತಾರೂಪದಲ್ಲಿ – ಮಧ್ಯಮಾ ರೂಪದಲ್ಲಿ ವೈಖರೀ ರೂಪದಲ್ಲಿ ಭಕ್ತಮಾನಸಹಂಸಿನಿಯಾಗಿ ದೇವಿ ಕಾಣಿಸಿಕೊಳ್ಳುತ್ತಾಳೆ.)

ಶಬ್ದ ಬ್ರಹ್ಮವು ಪರಾ, ಪಶ್ಯಂತೀ, ಮಧ್ಯಮಾ, ವೈಖರೀ ಎಂಬ ನಾಲ್ಕುರೂಪಗಳಲ್ಲಿ ವಾಕ್ ಇರುತ್ತದೆ. ಆದರೆ ಸ್ಥೂಲದೃಷ್ಟಿಯುಳ್ಳ ಮನುಷ್ಯರು ಮೊದಲ ಮೂರು ಬಗೆ ವಾಕ್ಕುಗಳನ್ನು ತಿಳಿಯದೆ ವೈಖರೀಯೊಂದನ್ನೇ ವಾಕ್ಕು ಎಂದು ಹೇಳುತ್ತಾರೆ. ವಾಕ್ಕುಗಳು ನಾಲ್ಕು ವಿಧ ಎಂಬುದನ್ನು ನಿತ್ಯಾತಂತ್ರ, ಋಗ್ವೇದ (೧,೧೬೪,೧೬೫) ಮೊದಲಾದ ಶ್ರುತಿಗಳಲ್ಲಿ ಹೇಳಲಾಗಿದೆ.

(ಲ–ಆ ಪುಟ ೧೧)

ನಾಲ್ಕು ಬಗೆ ವಾಕ್ಕುಗಳನ್ನು ಹೀಗೆ ವಿವರಿಸಿದ್ದಾರೆ ವ್ಯಾಖ್ಯಾನಕಾರರು

೫. **ಪರಾವಾಕ್‌ಸ್ವರೂಪ** ಇದು ಮೂಲಾಧಾರದಲ್ಲಿ ಮೊಟ್ಟಮೊದಲು ಸ್ಪಂದನಗೊಳ್ಳುತ್ತದೆ. "ತನ್ನ ಅಭಿಪ್ರಾಯವನ್ನು ಇತರರಿಗೆ ತಿಳಿಸಬೇಕು. ಮಾತನಾಡಬೇಕು" ಎಂಬ ಇಚ್ಛೆ ಪ್ರಾಣಿಗೆ ಉಂಟಾಗುತ್ತದೆ. ಈ ಇಚ್ಛೆಯನ್ನು ಕಾರಣಬಿಂದು ಎನ್ನುತ್ತಾರೆ. ಈ ಇಚ್ಛೆಯೊಂದಿಗೆ ಅಭಿವ್ಯಕ್ತಗೊಳಿಸುವ ಕಾರ್ಯವೂ ಪ್ರಾರಂಭವಾಗುತ್ತದೆ. ಇದನ್ನು ಕಾರ್ಯಬಿಂದು ಎನ್ನುತ್ತಾರೆ. ಈ ಕಾರಣಬಿಂದು ಕಾರ್ಯಬಿಂದುಗಳ ಸರಿಯೋಗದಿಂದ ಶಬ್ದ ರೂಪುಗೊಳ್ಳುತ್ತದೆ. ನಿರಾಕಾರವಾದ ಈ ಶಬ್ದವನ್ನು ಪರಾವಾಕ್ ಎಂದು ಕರೆಯುತ್ತಾರೆ.

೬. ಪ್ರತ್ಯಕ್‌ಚಿತೀವಾಕ್ ರೂಪ ಮೂಲಾಧಾರದಲ್ಲಿ ನಡೆಯುವ ಇನ್ನೊಂದು ಪ್ರಕ್ರಿಯೆ. ಪರಾರೂಪದ ಶಬ್ದದೊಂದಿಗೆ ಅರ್ಥಸಹಿತವಾದ ಶಬ್ದರೂಪವನ್ನು ಪ್ರತ್ಯಕ್ ಚಿತೀ ಎಂದು ಕರೆಯುತ್ತಾರೆ. ಕಾಳಿದಾಸನು ತನ್ನ ರಘುವಂಶಕಾವ್ಯದಲ್ಲಿ ದೇವಿಯು ಈ ರೂಪವನ್ನೇ "ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ ಜಗತಃ ಪಿತರೌ ವಂದೇ ಪಾರ್ವತೀ ಪರಮೇಶ್ವರೌ" ಎಂದಿದ್ದಾನೆ.

೭. **ಪಶ್ಯಂತೀ ವಾಕ್‌ರೂಪ** "ಮೂಲಾಧಾರದಲ್ಲಿ ರೂಪುಗೊಂಡ ಅರ್ಥಸಹಿತವಾದ ಶಬ್ದವು ಊರ್ಧ್ವಮುಖವಾಗಿ ಚಲಿಸುತ್ತಾ ಮಣಿಪೂರ ಪ್ರದೇಶಕ್ಕೆ ಬರುತ್ತದೆ. ಇಲ್ಲಿ ಅದು ವ್ಯಕ್ತರೂಪದಲ್ಲಿರುವ ಮನಸ್ಸಿನೊಂದಿಗೆ ಸೇರುತ್ತದೆ. ಇದನ್ನು ಶುದ್ಧ ಬ್ರಹ್ಮ ಎಂದೂ ಪಶ್ಯಂತೀವಾಕ್ ಎಂದೂ ಕರೆಯುತ್ತಾರೆ.

೮. **ಪರದೇವತಾವಾಕ್‌ರೂಪ** ಇದು ಮಣಿಪೂರದಲ್ಲಿಯೇ ನಡೆಯುವ ಒಂದು ಪ್ರಕ್ರಿಯೆ. ಪರಾರೂಪವು ಮನಸ್ಸಿನೊಂದಿಗೆ ಬೆರೆತು ಪಶ್ಯಂತೀ ರೂಪವನ್ನು ಪಡೆಯುತ್ತಿರುವಾಗಲೇ ಅದು ರಸಭಾವಗಳಿಗೆ ತಕ್ಕಂತೆ ಅಭಿವ್ಯಕ್ತಿಯ ರೂಪವಿಶೇಷವನ್ನು ಪಡೆಯುತ್ತದೆ. ಇದನ್ನು ಪರದೇವತಾ ವಾಕ್‌ರೂಪ ವೆಂದು ಕರೆಯುತ್ತಾರೆ

೯. **ಮಧ್ಯಮಾವಾಕ್‌ರೂಪ** ಪರದೇವತಾ ರೂಪವಾದ ಶಬ್ದವು ಊರ್ಧ್ವಮುಖವಾಗಿ ಚಲಿಸಿ ಅನಾಹತ ಪ್ರದೇಶವನ್ನು ಸೇರುತ್ತದೆ. ಇಲ್ಲಿ ಇದು ಬುದ್ಧಿಯೊಂದಿಗೆ ಮಿಲನವಾಗುತ್ತದೆ. ಶಬ್ದ ಈ ರೂಪವನ್ನು ಮಧ್ಯಮಾವಾಕ್‌ರೂಪ ಎಂದು ಕರೆಯುತ್ತಾರೆ.

೧೦. **ವೈಖರೀವಾಕ್‌ರೂಪ** ಅನಾಹತ ಪ್ರದೇಶದಿಂದ ಊರ್ಧ್ವಮುಖವಾಗಿ ಹೊರಟ ಮಧ್ಯಮಾರೂಪವಾದ ಶಬ್ದವು ಮುಖಪ್ರದೇಶವನ್ನು ಸೇರಿ ಕಂಠಾದಿ ವಿವಿಧ ಸ್ಥಾನಗಳಲ್ಲಿ ಅಭಿವ್ಯಕ್ತಗೊಂಡು ಶ್ರೋತೃಗಳು ಕೇಳಲು ಯೋಗ್ಯವಾದ ಬೀಜರೂಪವನ್ನು (ಪರ ರೂಪವನ್ನು) ಪಡೆಯುತ್ತದೆ. ಮಾತಿನ ರೂಪವನ್ನು ಪಡೆಯುತ್ತದೆ. ಇದನ್ನು ವೈಖರೀ ರೂಪ ಎಂದು ಕರೆಯುತ್ತಾರೆ.

ಈ ನಾಲ್ಕು ರೂಪಗಳಲ್ಲಿ ಪರಾ, ಪಶ್ಯಂತೀ ಮತ್ತು ಮಧ್ಯಮಾ ರೂಪಗಳು ಅವ್ಯಕ್ತವಾದವು. ಶ್ರೋತೃವಿಗೆ ಕೇಳಿಸುವುದಿಲ್ಲ. ನಾಲ್ಕನೇ ರೂಪವಾದ ವೈಖರೀ ರೂಪಮಾತ್ರ ಕೇಳಿಸುತ್ತದೆ. ಎಂದು ಋಗ್ವೇದದ ವಾಗ್ದೇವಿ ಸೂಕ್ತದಲ್ಲಿ (೧–೧೬೪=೧೬೫) ಹೇಳಿದೆ.

(ಲ–ಕೂ ಪುಟ ೧೬೧–೧೬೨)

೧೧. ಶಬ್ದಬ್ರಹ್ಮನ ನಾಲ್ಕು ರೂಪಗಳನ್ನು (ಪರಾ, ಪಶ್ಯಂತೀ, ಮಧ್ಯಮಾ ವೈಖರೀ ವಾಕ್ಕುಗಳನ್ನು) ನಕ್ಷಾರೂಪದಲ್ಲಿ ಹೀಗೆ ತೋರಿಸಲಾಗಿದೆ.

ಅವಸ್ಥಾತ್ರಯ	ಕಾರಣಬಿಂದು	ಕಾರ್ಯಪರಬಿಂದು	ಸೂಕ್ಷ್ಮಕಾರ್ಯ ಬಿಂದು	ಸ್ಥೂಲನಾದ ಬಿಂದು
ಅಧಿದೈವತ	ಅವ್ಯಕ್ತ, ಶಾಂತಾ ಅಂಬಿಕಾ	ಈಶ್ವರ ವಾಮಾ ಇಚ್ಛಾ	ಹಿರಣ್ಯಾಗರ್ಭ ಜ್ಯೇಷ್ಠಾ ಜ್ಞಾನ	ವಿರಾಟ್ ರೌದ್ರೀ ಕ್ರಿಯಾ
ಅಧಿಭೂತ ಪೀಠ ರೂಪಗಳು	ಕಾಮರೂಪ	ಪೂರ್ಣಗಿರಿ	ಜಾಲಂಧರ	ಉಡ್ಯಾಣ
ಅಧ್ಯಾತ್ಮ	ಪರಾ	ಪಶ್ಯಂತೀ	ಮಧ್ಯಮಾ	ವೈಖರೀ

೧೨. ಲಲಿತಾ ಸಹಸ್ರನಾಮಕ್ಕೂ ಶ್ರೀಚಕ್ರ ಪೂಜೆಗೂ ಏನು ಸಂಬಂಧ ಎಂಬುದನ್ನು ಶ್ರೀ ಚಕ್ರದಲ್ಲಿರುವ ನವಚಕ್ರಗಳಲ್ಲಿ ಶಬ್ದಬ್ರಹ್ಮನ ೪ ರೂಪಗಳು (ಪರಾ ಪಶ್ಯಂತೀ ಮಧ್ಯಮ ವೈಖರೀ) ಹೇಗೆ ಅಂತರ್ಗತವಾಗಿವೆ ಎಂಬುದನ್ನು ಪವನಿ ನಿರ್ಮಲಪ್ರಭಾವತಿ ಅವರು ತಮ್ಮ ತೆಲುಗಿನ ವ್ಯಾಖ್ಯಾನಗ್ರಂಥದಲ್ಲಿ ವಿವರಿಸಿದ್ದಾರೆ. ಲಲಿತಾಶಾಸ್ತ್ರೀ ಅವರ ಕನ್ನಡಾನುವಾದದಲ್ಲಿ (ಪುಟ ೨೧೯–೨೧೬) ಆಸಕ್ತರು ವಿವರಗಳನ್ನು ನೋಡಬಹುದು.


(ಲ–ಪ ೨೧೯–೨೦೬)

೧೩. **ಭ್ರಮರ ಕಲಭೌ** (ಭ್ರಮರಪೋತ, ಮರಿದುಂಬಿ)

ಭ್ರಮರ ಕಲಭೌ ಎಂದರೆ ದೇವಿಯ ಕಟಾಕ್ಷಗಳೇ ವ್ಯಾಜವಾಗುಳ್ಳ ಎರಡು ಭ್ರಮರ ಮರಿಗಳು. ಆದರೆ ಇಲ್ಲಿ ಮರಿ ಎಂಬ ಮಾತಿಗೆ ಕಲಭಶಬ್ದವನ್ನು ಬಳಸಿದೆ. ಕಲಭ ಎಂದರೆ ಆನೆಮರಿ, ಆದರೆ ಮಹಾಕವಿಗಳ ಪ್ರಯೋಗಬಾಹುಳ್ಯದ ಕಾರಣದಿಂದ ಮರಿ ಎಂಬ ಸಾಮಾನ್ಯ ಅರ್ಥದಲ್ಲಿ (ವಿಶೇಷ ಸಾಮಾನ್ಯ ರೂಪವಾಗಿ) ಭ್ರಮರ ಕಲಭೌ ಎಂದು ಪ್ರಯೋಗವಾಗಿದೆ. ಇದನ್ನೇ ಮಹಾಕವಿಗಳ ಪ್ರಯೋಗ ಅನ್ನುತ್ತಾರೆ.

(ಶೇ–ಪುಟ ೧೮೫)

ಯಂತ್ರಾರಾಧನೆ (ಶ್ಲೋಕ-೫೦)



ಯಂತ್ರರಚನೆ : ಚಿನ್ನದ ರೇಖಿನಲ್ಲಿ ಬರೆಯಬೇಕು. ಚಿತ್ರದಲ್ಲಿ ತೋರಿಸುವ ಆಕಾರದಲ್ಲಿ ಯಂತ್ರ ತಯಾರಿಸಬೇಕು.

ಪೂಜೆ : ಕೆಂಪು ಗುಲಾಬಿಗಳಿಂದ ಲಲಿತಾ ತ್ರಿಶತೀ ಅರ್ಚನೆಯನ್ನು ಮಾಡಬೇಕು.

ನೈವೇದ್ಯ : ಸಕ್ಕರೆ, ಕಲ್ಲುಸಕ್ಕರೆ, ಬೆಲ್ಲ, ತೆಂಗಿನಕಾಯಿ, ಜೇನುತುಪ್ಪ ಬಾಳೆಹಣ್ಣು.

ಜಪ : ಪೂರ್ವಾಭಿಮುಖವಾಗಿ ಕುಳಿತು ೪ ದಿನಗಳು ದಿನಕ್ಕೆ ೧೦೦೦ ಬಾರಿ ಈ ಶ್ಲೋಕವನ್ನು ಜಪಿಸಬೇಕು.

ಫಲ: **ಯಂತ್ರದ ಜಲವನ್ನು ಮಂತ್ರಿಸಿ ಕುಡಿಯಬೇಕು. ಮಹಾಮಾರಿಯ ರೋಗ (ಸಿಡುಬು, ಪ್ಲೇಗು ಇತ್ಯಾದಿ) ನಿವಾರಣೆ.**

ಶ್ಲೋಕ–೫೧

ದೇವಾಯ ನವರಸಯುಕ್ತ ನೋಟದ ವರ್ಣನೆ

ಶಿವೇ ಶೃಂಗಾರಾರ್ದ್ರಾ [1]ತದಿತರಜನೇ ಕುತ್ಸನಪರಾ
ಸರೋಷಾ ಗಂಗಾಯಾಂ [2]ಗಿರಿಶಚರಿತೇ ವಿಸ್ಮಯವತೀ ।
ಹರಾಹಿಭ್ಯೋ ಭೀತಾ [5]ಸರಸಿರುಹ[3]ಸೌಭಾಗ್ಯಜಯಿನೀ
ಸಖೀಷು ಸ್ಮೇರಾ ತೇ ಮಯಿ [4]ಜನನಿ ದೃಷ್ಟಿಸ್ಸಕರುಣಾ ॥ ೫೧ ॥

ಪಾಠಾಂತರ

೧. (ತದಿತರಜನೇ) = ತದಿತರಮುಖೇ (ಸು)
೨. (ಗಿರಿಶ ಚರಿತೇ) = ಗಿರಿಶನಯನೇ (ಸು) (ಪೋ)
೩. (ಸೌಭಾಗ್ಯ ಜಯಿನೀ) = ಸೌಭಾಗ್ಯಜನನೀ (ಸು) (ಕ)
೪. (ಜನನಿ) = ಜಯತಿ (ಸು)
೫. ಸರಸಿರುಹ ಸೌಭಾಗ್ಯ ಜನನೀ ಎಂಬದು ಲಕ್ಷ್ಮೀಧರನ ಪಾಠ

ಪದವಿಭಾಗ

ಶಿವೇ, (ಶೃಂಗಾರಾರ್ದ್ರಾ) = ಶೃಂಗಾರ + ಆರ್ದ್ರಾ, (ತದಿತರಜನೇ) = ತತ್ + ಇತರಜನೇ, ಕುತ್ಸನಪರಾ, ಸರೋಷಾ, ಗಂಗಾಯಾಂ, ಗಿರಿಶಚರಿತೇ, ವಿಸ್ಮಯವತೀ, (ಹರಾಹಿಭ್ಯೋ) = ಹರ + ಅಹಿಭ್ಯೋ, ಭೀತಾ, ಸರಸಿರುಹಸೌಭಾಗ್ಯಜಯಿನೀ, ಸಖೀಷು, ಸ್ಮೇರಾ, ತೇ, ಮಯಿ, ಜನನಿ, (ದೃಷ್ಟಿಸ್ಸಕರುಣಾ) = ದೃಷ್ಟಿಃ + ಸಕರುಣಾ.

ಅನ್ವಯಾರ್ಥ

(ಹೇ ಜನನೀ	(ಎಲೈ) ತಾಯಿಯೇ,
ತೇ ದೃಷ್ಟಿಃ	ನಿನ್ನ ಕಟಾಕ್ಷವು (ದೃಷ್ಟಿಯು)
ಶಿವೇ	ಈಶ್ವರನಲ್ಲಿ
ಶೃಂಗಾರಾರ್ದ್ರಾ	(ಶೃಂಗಾರ + ಆರ್ದ್ರಾ) ಶೃಂಗಾರ ರಸದಿಂದ ನೆನೆದಿರುವುದಾಗಿಯೂ
ತದಿತರಜನೇ	(ತತ್ + ಇತರಜನೇ) ಆ ಈಶ್ವರನನ್ನು ಉಳಿದ ಇತರ ಜನರಲ್ಲಿ

ಕುತ್ಸನಪರಾ	ನಿಂದೆಯಲ್ಲಿ ಆಸಕ್ತವಾಗಿಯೂ
ಗಂಗಾಯಾಂ	ಸವತಿಯಾದ ಗಂಗೆಯಲ್ಲಿ
ಸರೋಷಾ	ಕೋಪಗೊಂಡುದಾಗಿಯೂ
ಗಿರಿಶಚರಿತೇ	ಈಶ್ವರನ ಚರಿತೆಯಲ್ಲಿ
ವಿಸ್ಮಯವತೀ	ಆಶ್ಚರ್ಯವುಳ್ಳದ್ದಾಗಿಯೂ
ಹರಾಹಿಭ್ಯೋ	(ಹರಾ+ಅಹಿಭ್ಯೋ) ಈಶ್ವರನ (ಆಭರಣಾರ್ಥವಾದ) ಹಾವುಗಳ ದೆಸೆಯಿಂದ
ಭೀತಾ	ಹೆದರಿದುದಾಗಿಯೂ
ಸರಸಿರುಹಸೌಭಾಗ್ಯಜಯಿನೀ	ಕಮಲಗಳಿಗೆ – ಕೆಂಪು ಬಣ್ಣವನ್ನು ವೀರವನ್ನು ಉಂಟು ಮಾಡುವುದಾಗಿಯೂ
ಸಖೀಷು	ಸ್ನೇಹಿತೆಯರಲ್ಲಿ
ಸ್ಮೇರಾ	ಹಾಸ್ಯವುಳ್ಳದ್ದಾಗಿಯೂ
ಮಯಿ	ಭಕ್ತನಾದ ನನ್ನಲ್ಲಿ
ಸಕರುಣಾ	ದಯಾರಸವುಳ್ಳದ್ದಾಗಿಯೂ
(ಭವತಿ)	(ಆಗಿರುತ್ತದೆ)

ತಾತ್ಪರ್ಯ

ಓ ಜಗಜ್ಜನನೀ, ನಿನ್ನ ದೃಷ್ಟಿಯು ಒಬ್ಬೊಬ್ಬರಲ್ಲಿ ಒಂದೊಂದು ರೀತಿಯಲ್ಲಿ ರಸಭಾವಗಳನ್ನು ತಾಳುತ್ತದೆ.

೧. ಪತಿಯಾದ ಶಿವನಲ್ಲಿ **ಶೃಂಗಾರ** ರಸವನ್ನು ತಾಳುತ್ತದೆ.

೨. ಶಿವನನ್ನು ಬಿಟ್ಟು ಬೇರೆಯವರಲ್ಲಿ (ಶಿವೇತರರಲ್ಲಿ) ಅಸಹ್ಯಕರವಾದ **ಭೀಭತ್ಸ** ರಸಭಾವದಿಂದ ಕೂಡಿರುತ್ತದೆ.

೩. ಸವತಿಯಾದ ಗಂಗೆಯಲ್ಲಿ ಸಿಟ್ಟಿನಿಂದ ಕೂಡಿದ **ರೌದ್ರ**ರಸವನ್ನು ತಳೆದಿರುತ್ತದೆ.

೪. ಶಿವನ ತ್ರಿಪುರವಿಜಯ ಮೊದಲಾದ ಚರಿತ್ರೆಯ ವಿಷಯದಲ್ಲಿ **ಅದ್ಭುತ**ರಸದಿಂದ ಕೂಡಿರುತ್ತದೆ.

೫. ಶರೀರದ ಮೇಲೆ ಹಾವುಗಳನ್ನು ಆಭರಣವನ್ನಾಗಿ ಧರಿಸಿರುವುದರಿಂದ **ಭಯ**ರಸ ವ್ಯಕ್ತವಾಗುತ್ತದೆ.

೬. ಕಮಲಗಳಲ್ಲಿ ರಕ್ತಕಾಂತಿ ಸೌಭಾಗ್ಯವನ್ನು ಉಂಟುಮಾಡುವುದರಿಂದ (ಕೆಂಪು ಬಣ್ಣ ಉಂಟುಮಾಡುವುದರಿಂದ) ವೀರರಸವು ಧ್ವನಿತವಾಗುತ್ತದೆ.

೭. ಗೆಳತಿಯರಲ್ಲಿ ಅಚ್ಚರಿಯ ಕಣ್ಣುಗಳಿಂದ ಹಾಸ್ಯರಸವನ್ನು ಚಿಮ್ಮಿಸುತ್ತದೆ.

೮. ಭಕ್ತನಾದ ನನ್ನಲ್ಲಿ ಕರುಣಾರಸವನ್ನು ಹೊರಸೂಸುತ್ತದೆ. ಹೀಗೆ ದೇವಿಯ ದೃಷ್ಟಿಯು ಅಷ್ಟರಸಗಳನ್ನು ವಿವಿಧ ಜನರಿಗೆ ನೀಡುತ್ತದೆ.

ಪದ್ಯಾನುವಾದ

ತಾಯೆ, ಶಿವನೆಡೆ ನಿನ್ನ ನೋಟವದು ಶೃಂಗಾರ,
ಶಿವನನುಳಿದಿತರರೊಳು ಬೀಭತ್ಸ, ಗಂಗೆಯನು
ಕಂಡೊಡನೆಯೇ ರೌದ್ರ, ಗಿರಿಶನಯನಕೆ ವಿಸ್ಮಯವ ತಳೆದರಳುತಿಹುದು,
ಹರನಹಿಗೆ ಬಹುಭೀತಿ, ಸರಸಿರುಹಸೌಭಾಗ್ಯ-
ವನು ಜಯಿಸುವೆಡೆ ವೀರ, ಸಖಿಯರೊಳು ದರಹಾಸ ;
ಭಕ್ತನಾದೆನ್ನಮೇಲಿಹುದಲ್ತೆ ನಿನ್ನ ಕರುಣಾಪೂರ್ಣ ದೃಷ್ಟಿವೃಷ್ಟಿ ॥ ೫೧ ॥

ಟಿಪ್ಪಣಿಗಳು

ಅಲಂಕಾರ

೧. ಈ ಶ್ಲೋಕದಲ್ಲಿ ವಿರೋಧಾಲಂಕಾರವಿದೆ. ಹೇಗೆಂದರೆ ಪರಸ್ಪರ ವಿರುದ್ಧವಾದ ರಸಗಳನ್ನು ಕಣ್ಣಿನ ದೃಷ್ಟಿಯಲ್ಲಿ ಒಂದೆಡೆ ಸಮಾವೇಶ ಮಾಡಿ ವರ್ಣಿಸಿದೆ. ಅವಸ್ಥಾಭೇದದಿಂದ ಆ ವಿರೋಧದ ಪರಿಹಾರವಾಗುವುದರಿಂದ ವಿರೋಧಕ್ಕೆ ಆಭಾಸಮಾತ್ರ (ತೋರಿಕೆ ಮಾತ್ರ) ಕಂಡುಬರುತ್ತದೆ. ಆದ್ದರಿಂದ ವಿರೋಧಾಭಾಸಾಲಂಕಾರವಾಗಿದೆ.

(ಶೇ–ಪುಟ ೧೮೮)

೨. ರಸಗಳು ಎಂಟೇ ಎಂಬುದು ಭರತಮುನಿಯ ಮಾತು. ಶಾಂತವು ನಿರ್ವಿಕಾರವಾದುದರಿಂದ ಶಾಂತವನ್ನು ರಸವೆಂದು ಭಾವಿಸುವುದಿಲ್ಲ. ಆದ್ದರಿಂದ ಈ ಶ್ಲೋಕದಲ್ಲಿ ಶೃಂಗಾರ (ಶಿವನಲ್ಲಿ) ರೌದ್ರ (ಗಂಗೆಯಲ್ಲಿ) ಭೀಭತ್ಸ

(ಶಿವೇತರರಲ್ಲಿ) ಅದ್ಭುತ (ತ್ರಿಪುರ ವಿಜಯದಲ್ಲಿ) ವೀರರಸ (ಕಮಲದಲ್ಲಿ) ಹಾಸ್ಯ (ಗೆಳತಿಯರಲ್ಲಿ) ಕರುಣೆ (ಭಕ್ತರಲ್ಲಿ) ಭಯ (ದೇಹದಾಭರಣಗಳಲ್ಲಿ ಹಾವು) ಹೀಗೆ ಅಷ್ಟರಸಗಳನ್ನು ದೇವಿಯು ದೃಷ್ಟಿಯಲ್ಲಿ ಹೊಂದಿರುತ್ತಾಳೆ.

(ಶೇ–ಪುಟ ೧೮೮)

೩. ದೇವಿಯ ನೇತ್ರಗಳಲ್ಲಿ ಅಷ್ಟರಸ ದೃಷ್ಟಿ ಇದೆ ಎಂದು ಈ ಶ್ಲೋಕದಲ್ಲಿ ವರ್ಣಿಸಲಾಗಿದೆ.

ಸರಸಿರುಹಸೌಭಾಗ್ಯ ಜಯಿನೀ

ಸರಸಿರುಹ ಸೌಭಾಗ್ಯ ಜನನೀ ಎಂಬುದು ಲಕ್ಷ್ಮೀಧರ ವ್ಯಾಖ್ಯಾನದಲ್ಲಿ ಅಂಗೀಕೃತವಾದ ಪಾಠ. ಕಪನೀಪತಯ್ಯನವರು ಈ ಪಾಠವನ್ನೇ ಇಟ್ಟುಕೊಂಡಿದ್ದಾರೆ. ಆದರೆ ಇದರಲ್ಲಿ ವೀರರಸಾಭಿವ್ಯಕ್ತಿ ಕಂಡು ಬರುವುದಿಲ್ಲವಾದ್ದರಿಂದ ಸರಸಿರುಹಸೌಭಾಗ್ಯಜಯಿನೀ ಎಂಬ ಪಾಠವನ್ನು ಇಲ್ಲಿ ಸ್ವೀಕರಿಸಿದೆ.

ಸೌಭಾಗ್ಯವರ್ಧಿನೀ ಮೊದಲಾದ ವ್ಯಾಖ್ಯೆಗಳಲ್ಲಿ ಜಯಿನೀ ಎಂಬ ಪಾಠವಿದೆ. (ಗ–ಪುಟ ೫೭)

೪. **ಗಿರಿಶ ಚರಿತೇ**

ಈ ಶ್ಲೋಕದ ಗಿರಿಶ ಚರಿತೇ ಎಂಬ ಪಾಠಕ್ಕೆ ಬದಲಾಗಿ ಗಿರಿಶನಯನೇ ಎಂಬ ಪಾಠ ಅನ್ಯತ್ರ ಲಭ್ಯವಿದೆ. ಈ ಪಾಠವು ಕಾಮನನ್ನು ತನ್ನ ಕಣ್ಣುಗಳಿಂದ ಕಮರಿಸಿದ ಎಂಬ ಅರ್ಥದಿಂದ ಅದ್ಭುತ ರಸವನ್ನು ಸೂಚಿಸುತ್ತದೆ ಆದರೆ ಗಿರಿಶ ಚರಿತೇ ಎಂಬ ಪಾಠವೇ ಹೆಚ್ಚು ಪ್ರಸಿದ್ಧವಾದ ವ್ಯಾಖ್ಯಾನಗಳಲ್ಲಿ ಕಂಡುಬರುತ್ತದೆ. ಆದ್ದರಿಂದ ಈ ಪಾಠವನ್ನೇ ಸ್ವೀಕರಿಸಿದೆ ಕಪಿನೀಪತಯ್ಯನವರ ಪದ್ಯದಲ್ಲೂ ಈ ಪಾಠವೇ ಇದೆ.

(ಗ–ಪುಟ ೧೧೬)

೫. **ಶಾಂತರಸದ ವಿಚಾರ**

ಈ ಶ್ಲೋಕದಲ್ಲಿ ಒಂಬತ್ತು ರಸಗಳಿವೆ ಎಂದು ಕೆಲವರ ಅಭಿಪ್ರಾಯವಾಗಿದೆ. ಆದರೆ ಶ್ಲೋಕದಲ್ಲಿ ಸ್ಪಷ್ಟವಾಗಿ ಕಂಡುಬರುವುದು ಎಂಟೇರಸ. ಶಾಂತರಸ ಈ ಶ್ಲೋಕದಲ್ಲಿ ಅಭಿವ್ಯಕ್ತವಾಗಿದೆ ಎನ್ನುವವರ ವಾದ ಹೀಗಿದೆ:

ವೈರಾಗ್ಯ ದ್ಯೋತಕವಾದ ಗಿರಿಶ ಚರಿತೇ ಎಂಬ ಪದದಿಂದ ಶಾಂತರಸದ ಸೂಚನೆ ಇದೆ ಎಂದು ಅರುಣಾಮೋದಿನೀ ವ್ಯಾಖ್ಯಾನದ ಅಭಿಪ್ರಾಯ.

"ತದಿತರಜನೇ ಕುತ್ಸನಪರಾ" ಎಂದು ಅನಾತ್ಮವನ್ನು ತಿರಸ್ಕರಿಸಿರುವುದರಿಂದ ಶಾಂತರಸದ ಸೂಚನೆಯಿದೆ ಎಂದು ಆನಂದಲಹರೀ ವ್ಯಾಖ್ಯಾನದ ಅಭಿಪ್ರಾಯ.

ಶ್ಲೋಕದ ಪ್ರಾರಂಭದಲ್ಲಿರುವ ಶಿವಪದವೂ ಶಾಂತರಸದ ದ್ಯೋತಕವೆನ್ನಲಾಗಿದೆ.

(ಗ–ಪುಟ ೧೧೬)

೬. ಈ ಶ್ಲೋಕದಲ್ಲಿ ಪರಸ್ಪರ ವಿರುದ್ಧ ರಸಗಳಾದ ಶೃಂಗಾರ–ಭೀಭತ್ಸ, ವೀರ, ಭಯಾನಕ, ರೌದ್ರ–ಅದ್ಭುತ, ಹಾಸ್ಯ–ಕರುಣ ಇವುಗಳು ಪರಸ್ಪರ ಬಾಧಿತವಾಗಿರುವುದರಿಂದ ಶಾಂತರಸ ಇಲ್ಲಿ ಬಂದಿಲ್ಲ ಎನ್ನುವವರಿದ್ದಾರೆ.

(ಗ–ಪುಟ ೧೧೬)

೭. ಕಾವ್ಯಾಲಂಕಾರ ಸಂಗ್ರಹದಲ್ಲಿ ನವರಸಗಳನ್ನು ಹೀಗೆ ಹೇಳಿದೆ.

ನವರಸಗಳು : ಶೃಂಗಾರ ಹಾಸ್ಯ ಕರುಣ ರೌದ್ರ ವೀರ ಭಯಾನಕಾಃ ಭೀಭತ್ಸಾದ್ಭುತ ಶಾಂತಾಖ್ಯಾ ರಸಾ ನವ ಸಮೀರಿತಾಃ

ನವಭಾವಗಳು : "ರತಿರ್ಹಾಸಶ್ಚ ಶೋಕಶ್ಚ ಕ್ರೋಧೋತ್ಸಾಹೌ ಭಯಂ ತಥಾ ಜುಗುಪ್ಸಾ ವಿಸ್ಮಯ ಶಮಾಃ ಸ್ಥಾಯಿಭಾವಾಃ ಪ್ರಕೀರ್ತಿತಾಃ" ಈ ಶ್ಲೋಕದಲ್ಲಿ ೮ ರಸಗಳನ್ನೇ ಹೇಳಿ ೯ನೇ ಶಾಂತರಸವನ್ನು ಶಂಕರರು ಹೇಳಿಲ್ಲ ಏಕೆ ಎನ್ನುವುದಕ್ಕೆ ಪೋಚಿನಪೆದ್ದಿ ಕಾಮ ಸತ್ಯನಾರಾಯಣ ಹೇಳುವ ಮಾತಿದು.

ದೇವಿಯ ದೃಷ್ಟಿ ಸಹಜವಾಗಿ ಶಾಂತರಸ ಪೂರ್ಣವಾದುದು. ಉಳಿದವು ವಿವಿಧ ಅವಸ್ಥೆಗಳನ್ನು ವರ್ಣಿಸಿದುವು. ಆದ್ದರಿಂದ ನವರಸಗಳನ್ನು ವರ್ಣಿಸಿದ್ದಾರೆ ಎಂದೇ ತಿಳಿಯಬೇಕು ಎಂದಿದ್ದಾರೆ. ಆದರೆ ೪೧ನೇ ಶ್ಲೋಕದಲ್ಲಿ 'ನವರಸಮಹಾತಾಂಡವನಟಂ' ಎಂದಿದ್ದಾರೆ ಶಂಕರರು. ಅಲ್ಲಿ ನವರಸ ಹೇಳಿ ೫೧ರಲ್ಲಿ ೮ ರಸ ಹೇಳಿದ್ದಾರೆ ಎಂಬುದಕ್ಕೆ ಪೋಚಿನಪೆದ್ದಿ ಅವರು ಕೊಟ್ಟ ವಿವರಣೆ ಇದು.

(ಪೋ–ಪುಟ ೨೫೭)

೮. ಶಾಂತಂ ಪರಮಾನಂದ ಸ್ವರೂಪಂ ಎನ್ನುತ್ತಾರೆ ಹಿರಿಯರು. ಶ್ರೀಮಾತೆ ಸಹಜ ಶಾಂತಸ್ವರೂಪಿಣಿ. ಆದ್ದರಿಂದಲೇ ನವರಸಗಳಲ್ಲಿ ಒಂದಾದ ಶಾಂತರಸನನ್ನು ಪ್ರತ್ಯೇಕವಾಗಿ ಪ್ರದರ್ಶಿಸಬೇಕಾದ ಅವಶ್ಯಕತೆಯಿಲ್ಲ. ಆದ್ದರಿಂದ ಈ ಶ್ಲೋಕದಲ್ಲಿ ೮ ರಸಗಳನ್ನು ಮಾತ್ರ ಪ್ರತ್ಯೇಕವಾಗಿ ವರ್ಣಿಸಿದೆ.

(ಪ–ಪುಟ ೭೧)

೯. ಜೀವನದಲ್ಲಿ ಸೌಂದರ್ಯವನ್ನು ಕಾಣುವ ಮತ್ತು ಅನುಭವಿಸುವ ಪರಮ ರಹಸ್ಯವನ್ನು ಈ ಶ್ಲೋಕ ತಿಳಿಸುತ್ತದೆ.

ಪತಿಯಲ್ಲಿ ಭಕ್ತಿ, ಪ್ರೇಮಭಾವ ಇತರ ಪುರುಷರಲ್ಲಿ ಕುತ್ಸಿತಭಾವ, ಸವತಿಯರಲ್ಲಿ ರೋಷ, ಪತಿಶೌರ್ಯದಲ್ಲಿ ವಿಸ್ಮಯ, ಸಪ್ರೇಮ ಭೀತಿ ಜಗತ್ತನ್ನು ನಿಭಾಯಿಸಬಲ್ಲ ಸಬಲತೆಯ ಲಕ್ಷಣ, ಜನರಲ್ಲಿ ಸವಿನುಡಿ, ಮಕ್ಕಳಲ್ಲಿ ದಯಾದೃಷ್ಟಿ ಇವು ಸೌಂದರ್ಯವೃದ್ಧಿಯ ಲಕ್ಷಣಗಳು ಎಂಬ ಅಂತರಾರ್ಥ ಈ ಶ್ಲೋಕದಲ್ಲಡಗಿದೆ.

(ರ–ಪುಟ ೫೯)

ಯಂತ್ರಾರಾಧನೆ (ಶ್ಲೋಕ ೫೧)

ಕ್ಲೀಂ
ಕ್ಲೀಂ
ಕ್ಲೀಂ

ಯಂತ್ರ ರಚನೆ : ಸುವರ್ಣ ರೇಖೆಯಲ್ಲಿ ಊರ್ಧ್ವಾಧೋರೂಪವಾದ ದೀರ್ಘ ಚತುರಶ್ರವನ್ನು ಬರೆಯಬೇಕು. ಅದರಲ್ಲಿ ಕ್ಲೀಂ ಎಂಬ ಬೀಜಾಕ್ಷರವನ್ನು ೩ ಬಾರಿ ಬರೆದಿರಬೇಕು. ಅಥವಾ ಬೆಳ್ಳಿಯ ತಟ್ಟೆಯಲ್ಲಿ ಶ್ರೀಗಂಧದ ತೇದಿದ ಮೇಲೆ ಬರೆಯಬೇಕು.

ಪೂಜೆ : ಲಲಿತಾ ತ್ರಿಶತಿಯನ್ನು ಹೇಳುತ್ತಾ ಪೂರ್ವಾಭಿಮುಖವಾಗಿ ಕುಳಿತು ಕುಂಕುಮ ಅರ್ಚಿಸಬೇಕು.

ನೈವೇದ್ಯ : ಜೇನುತುಪ್ಪ, ಉದ್ದಿನವಡೆ.

ಜಪ : ಈ ಶ್ಲೋಕವನ್ನು ೪೫ ದಿನಗಳ ಕಾಲ ದಿನಕ್ಕೆ ೧೦೦೦ ಬಾರಿ ಜಪಿಸಬೇಕು.

ಫಲ : ಶ್ರೀ ಚಂದನದಿಂದ ಬರೆದಿದ್ದರೆ ಗಂಧವನ್ನು ಹಣೆ ಮೇಲೆ ತಿಲಕವಾಗಿ ಧರಿಸಬೇಕು. ಯಂತ್ರದಲ್ಲಿ ಬರೆದಿದ್ದರೆ ಯಂತ್ರ ಧರಿಸಬೇಕು ಇದರ ಫಲವಾಗಿ **ಸರ್ವಜನ ವಶರಾಗುವರು.**

ಶ್ಲೋಕ–೫೨

ದೇವಿಯ ನೇತ್ರಗಳ ವರ್ಣನೆ

ಗತೇ ಕರ್ಣಾಭ್ಯರ್ಣಂ ಗರುತ ಇವ ಪಕ್ಷ್ಮಾಣಿ ದಧತೀ
ಪುರಾಂ ಭೇತ್ತುಶ್ಚಿತ್ತ ಪ್ರಶಮರಸವಿದ್ರಾವಣಫಲೇ ।
ಇಮೇ ನೇತ್ರೇ ಗೋತ್ರಾಧರಪತಿಕುಲೋತ್ತಂಸಕಲಿಕೇ
ತವಾಕರ್ಣಾಕೃಷ್ಟಸ್ಮರಶರವಿಲಾಸಂ ಕಲಯತಃ ॥ ೫೨ ॥ಸು)

ಪದವಿಭಾಗ

ಗತೇ, (ಕರ್ಣಾಭ್ಯರ್ಣಂ) = ಕರ್ಣ + ಅಭ್ಯರ್ಣಂ, (ಗರುತ) ಗರುತಃ, ಇವ, ಪಕ್ಷ್ಮಾಣಿ, ದಧತೀ, ಪುರಾಂ, (ಭೇತ್ತುಶ್ಚಿತ್ತ ಪ್ರಶಮರಸವಿದ್ರಾವಣಫಲೇ) = ಭೇತ್ತುಃ + ಚಿತ್ತ ಪ್ರಶಮರಸವಿದ್ರಾವಣಫಲೇ, ಇಮೇ, ನೇತ್ರೇ, (ಗೋತ್ರಾಧರಪತಿ ಕುಲೋತ್ತಂಸಕಲಿಕೇ, ತವಾಕರ್ಣಾಕೃಷ್ಣ ಸ್ಮರಶರ ವಿಲಾಸಂ) ತವ + ಆಕರ್ಣ + ಆಕೃಷ್ಟ ಸ್ಮರತರ ಶರವಿಲಾಸ ಕಲಯತಃ.

ಅನ್ವಯಾರ್ಥ

ಗೋತ್ರಾಧರಪತಿಕುಲೋತ್ತಂಸಕಲಿಕೇ	(ಗೋತ್ರಾಧರ + ಪತಿ + ಕುಲ + ಉತ್ತಂಸ + ಕಲಿಕೇ) = (ಭೂಮಿಯನ್ನು ಧರಿಸಿರುವ) ಪರ್ವತಗಳಿಗೆ – ದೊರೆಯಾದ ಹಿಮವಂತನ ವಂಶಕ್ಕೆ – ಶಿರೋಭೂಷಣವಾಗಿರುವ ಮೊಗ್ಗಿನ ರೂಪವಾಗಿರುವವಳೇ
ತವ ಇಮೇ ನೇತ್ರೇ	ನಿನ್ನ ಈ ಎರಡು ಕಣ್ಣುಗಳು
ಕರ್ಣಾಭ್ಯರ್ಣಂ ಗತೇ	(ಕಿವಿಗಳವರೆಗೂ ಹರಡಿ) ಕಿವಿಗಳ ಸಾಮೀಪ್ಯವನ್ನು ಹೊಂದಿದವುಗಳಾಗಿ
ಪುರಾಂ	ತ್ರಿಪುರಗಳನ್ನು
ಭೇತ್ತುಂ	ನಾಶಪಡಿಸಿದಂಥಾ ಈಶ್ವರನ
ಚಿತ್ತಪ್ರಶಮರಸವಿದ್ರಾವಣಫಲೇ	(ಚಿತ್ತಪ್ರಶಮ ರಸ ವಿದ್ರಾವಣ ಫಲೇ)

	ಮನಸ್ಸಿನಲ್ಲಿ ನಿಸ್ಪೃಹತೆಯೆಂಬ-(ಶಾಂತ) ರಸವನ್ನು-ಕದಡುವುದಕ್ಕಾಗಿಯೇ ಇರುವ
ಆಕರ್ಣಾಕೃಷ್ಟಸ್ಮರಶರವಿಲಾಸಂ	(ಆಕರ್ಣಾ + ಆಕೃಷ್ಟ+ಸ್ಮರಶರ+ ವಿಲಾಸಂ) ಕಿವಿಯವರೆಗೂ ಸೆಳೆಯಲ್ಪಟ್ಟ ಮನ್ಮಥ ಬಾಣದ ರೀತಿಯನ್ನು
ಕಲಯತಃ	ಉಂಟು ಮಾಡುತ್ತಲಿವೆ.

ತಾತ್ಪರ್ಯ

ಪರ್ವತ ರಾಜನಾದ ಹಿಮವಂತನ ವಂಶಕ್ಕೆ ಶಿರೋಭೂಷಣದ ಮೊಗ್ಗಿನ ರೂಪವಾಗಿರುವವಳೇ! ನಿನ್ನ ಎರಡೂ ಕಣ್ಣುಗಳು ಬಾಣದ ಹಿಂಬದಿಯ ಗರಿಗಳಂತಿರುವ ಕಣ್ಣು ರೆಪ್ಪೆಗಳನ್ನು ಹೊಂದಿವೆ, ಕಿವಿಗಳವರೆಗೂ ವ್ಯಾಪಿಸಿವೆ. ತ್ರಿಪುರಗಳನ್ನು ಜಯಸಿದ ಪರಶಿವನ ಚಿತ್ತದ ಶಾಂತಿಯನ್ನು ಕದಡಲು ಅವನ ತಪಸ್ಸನ್ನು ಭಂಗಮಾಡಲು ಆಕರ್ಣಾಂತವಾದ ನಿನ್ನ ಓರೆನೋಟಗಳು ಕಿವಿಯವರೆಗೂ ಎಳೆದು ಸಜ್ಜುಗೊಳಿಸಿದ ಮನ್ಮಥನ ಬಾಣಗಳ ಲೀಲೆಯಂತೆ ತೋರುತ್ತಿವೆ.

ಪದ್ಯಾನುವಾದ

ಹಿಮವಂತಕುಲಕಲಂಕಾರಳಾದವಳೆ, ಶಿವೇ,
ಕಿವಿಯ ಬಳಿಸಾರಿರುವ, ಕಣೆಗರಿಯ ತೆರನ ಕಂ
ಗಳರೆಪ್ಪೆಗಳ ಮೆರೆವ, ಮುನ್ನ ಶಿವನ ಪ್ರಶಮರಸವ ಭಂಗಿಸಿದ ಕೊನೆಯ
ಪಡೆದಿರುವ ಈ ನಿನ್ನ ಕಮನೀಯ ಕಣ್ಣೆರಡು
ಕಿವಿವರೆಗೆ ತೆಗೆದೆಳೆದ ಮನ್ಮಥನ ಬಾಣಗಳ
ರಾಗಭಾವಗಳನುದ್ರೇಕಿಸುವ ಸಿರಿಸೊಬಗನಾವಗಂ ಮೆರೆಯುತಿಹುವು

॥ ೫೨ ॥

ಟಿಪ್ಪಣಿಗಳು

ನಿದರ್ಶನಾಲಂಕಾರ

೧. ಈ ಶ್ಲೋಕದಲ್ಲಿ ನಿದರ್ಶನಾಲಂಕಾರವಿದೆ. ಏಕೆಂದರೆ ಮನ್ಮಥನ ವಿಲಾಸಕ್ಕೆ ಸದೃಶವಾದ ವಿಲಾಸವನ್ನು ಮಾಡುವಿಕೆ ಎಂಬುದು ತೋರುವುದರಿಂದ ಪ್ರತಿಬಿಂಬದ ಪ್ರತೀತಿಯಾಗುತ್ತದೆ.

೨. ದೇವಿಯ ನೇತ್ರಕಮಲಗಳು ಮನ್ಮಥನ ಪುಷ್ಪಬಾಣಗಳ ತುದಿಗೆ ಕಟ್ಟಿದ ಗರಿಗಳು, ದೇವಿಯ ಕಣ್ಣಿನ ರೆಪ್ಪೆಗಳು. ಇನ್ನು ಪರಶಿವನ ಮೇಲೆ ದೇವಿ ತನ್ನ ಕಟಾಕ್ಷ ಬೀರಿದಾಗ ಅವು ಕರ್ಣಪರ್ಯಂತವಾಗಿ ವಿಸ್ತರಿಸಿ ಅವಳು ದೀರ್ಘನಯನೆ ಆಗುತ್ತಾಳೆ ಎಂದು ಕವಿ ಕಲ್ಪನೆಯಾಗಿದೆ.

(ಗ–ಪುಟ ೫೮)

೩. ಮನ್ಮಥನ ಬಾಣಗಳು ಉನ್ಮಾದನ, ತಾಪನ, ಶೋಷಣ ಸ್ತಂಭನ, ಸಮ್ಮೋಹನ ಇವುಗಳನ್ನೇ ಅರವಿಂದ–ಅಶೋಕ–ಚೂತ–ನವಮಲ್ಲಿಕಾ–ನೀಲೋತ್ಪಲ ಹೂಗಳನ್ನು ಪುಷ್ಪ ಬಾಣಗಳನ್ನಾಗಿ ಮಾಡಿಕೊಂಡಿದ್ದಾನೆ. ಈ ಶ್ಲೋಕದಲ್ಲಿ ದೇವಿಯ ಕಟಾಕ್ಷವೇ ಮನ್ಮಥನ ೫ ಬಾಣಗಳಿಗೆ ಸಮಾನವಾಗಿದೆ. ಆದ್ದರಿಂದ ಮನ್ಮಥನಿಗೆ ಸ್ತ್ರೀಯರ ದೃಷ್ಟಿ ೬ನೇ ಬಾಣ ಎನ್ನುವುದು ಸರಿಯಲ್ಲ. ಆಕೆಯ ಕಟಾಕ್ಷ ೫ ಬಾಣಗಳಿಗೆ ಸರಿ ಎಂದು ಹೇಳುವುದೇ ಸೂಕ್ತ.

(ಜ–ಪುಟ ೭೪)

ಯಂತ್ರಾರಾಧನೆ (ಶ್ಲೋಕ ೫೨)

ರಂ

ಯಂತ್ರ ರಚನೆ : ಚಿನ್ನದಲ್ಲಿ ಯಂತ್ರ ತಯಾರಿಸಬೇಕು. ಚತುರಶ್ರ (ಚೌಕ) ಬರೆದು ಅದರಲ್ಲಿ ರಂ ಬೀಜಾಕ್ಷರ ರಚಿಸಬೇಕು.

ಪೂಜೆ : ಈಶಾನ್ಯ ದಿಕ್ಕಿಗೆ ಅಭಿಮುಖಕ್ಕೆ ಕುಳಿತು ಬಿಲ್ವಪತ್ರೆಗಳಿಂದ ರುದ್ರತ್ರಿಶತೀ ಮತ್ತು ಯಂತ್ರದ ಎಡಭಾಗಕ್ಕೆ ಕೆಂಪು ಹೂಗಳಾದ ಲಲಿತಾ ತ್ರಿಶತೀ ಅರ್ಚನೆಗಳನ್ನು ಮಾಡಬೇಕು.

ನೈವೇದ್ಯ : ಎಳ್ಳುಪುಡಿ ಸೇರಿಸಿದ ಅನ್ನ, ಕ್ಷೀರ ಪಾಯಸ.

ಜಪ : ೪೫ ದಿನಗಳ ಕಾಲ ದಿನಕ್ಕೆ ೧೦೦೦ ಬಾರಿಯಂತೆ ಈ ಶ್ಲೋಕವನ್ನು ಜಪಿಸಬೇಕು.

ಫಲ : **ಕಿವಿವ್ಯಾಧಿ ಮತ್ತು ಕಣ್ಣಿನ ರೋಗಗಳು ನಿವಾರಣೆ.**

ಶ್ಲೋಕ-೫೩

ದೇವಿಯ ಕಣ್ಣಿನ ಬಣ್ಣಗಳ ವರ್ಣನೆ

ವಿಭಕ್ತತ್ರೈವರ್ಣ್ಯಂ ವ್ಯತಿಕರಿತ[1]ಲೀಲಾಂಜನತಯಾ
ವಿಭಾತಿತ್ವನ್ನೇ ತ್ರತ್ರಿತಯಮಿದಮೀಶಾನದಯಿತೇ ।
ಪುನ ಸ್ಸ್ರಷ್ಟುಂ ದೇವಾನ್ ದ್ರುಹಿಣಹರಿರುದ್ರಾನುಪರತಾನ್
ರಜಸ್ಸತ್ತ್ವಂ ಬಿಭ್ರತ್ತಮ ಇತಿ ಗುಣಾನಾಂ ತ್ರಯಮಿವ ॥ ೫೩ ॥

ಪಾಠಾಂತರ

೧. (ಲೀಲಾಂಜನತಯಾ) = ನೀಲಾಂಜನತಯಾ (ಸು)
= ನೀಲಾಂಜನರುಚಾ (ಸು)

ಪದವಿಭಾಗ

ವಿಭಕ್ತ ತ್ರೈವರ್ಣ್ಯಂ, (ವ್ಯತಿಕರಿತ ಲೀಲಾಂಜನತಯಾ) = ವ್ಯತಿಕರಿತಲೀಲಾ + ಅಂಜನತಯಾ, ವಿಭಾತಿ, (ತ್ವನ್ನೇತ್ರ ತ್ರಿತಯಮಿದಮೀಶಾನದಯಿತೇ) = ತ್ವತ್ + ನೇತ್ರತ್ರಿತಯಂ + ಇದಮ್ +ಈಶಾನದಯಿತೇ, (ಪುನಸ್ಸಷ್ಟುಂ) = ಪುನಃ + ಸ್ರಷ್ಟುಂ, ದೇವಾನ್, (ದ್ರುಹಿಣ ಹರಿರುದ್ರಾನುಪರತಾನ್) = ದ್ರುಹಿಣಹರಿರುದ್ರಾನ್ + ಉಪರತಾನ್, (ರಜಸ್ಸತ್ತ್ವಂ) = ರಜಃ + ಸತ್ತ್ವಮ್, (ಭಿಭ್ರತ್ತಮ) = ಭಿಭ್ರತ್ + ತಮ, ಇತಿ ಗುಣಾನಾಂ (ತ್ರಯಮಿವ) = ತ್ರಯಮ್ + ಇವ.

ಅನ್ವಯಾರ್ಥ

ಈಶಾನದಯಿತೇ	ಮಹಾದೇವನ ಪ್ರೇಯಸಿಯೇ,
ಇದಂ ತ್ವನ್ನೇತ್ರ ತ್ರಿತಯಂ	ಈ ನಿನ್ನ ಮೂರು ಕಣ್ಣುಗಳು
ವ್ಯತಿಕರಿತಲೀಲಾಂಜನತಯಾ	(ವ್ಯತಿಕರಿತ + ಲೀಲಾ + ಅಂಜನತಯಾ) ಅಂಟಿಕೊಂಡಿರುವ-ಲೀಲಾರ್ಥವಾದ ಕಾಡಿಗೆವುಳ್ಳೋಣದರಿಂದ (ವಿಲಾಸಕ್ಕಾಗಿ ಹಬ್ಬದ ಕಾಡಿಗೆಯಿಂದ.)

ವಿಭಕ್ತತ್ರೈವರ್ಣ್ಯಂ	ಬೇರೆ ಬೇರೆಯಾಗಿ ಕಾಣಲ್ಪಡುತ್ತಿರುವ ಮೂರು (ಕಪ್ಪು, ಬಿಳುಪು, ಕೆಂಪು) ಬಣ್ಣಗಳಿಂದ
ಉಪರತಾನ್	(ತಮ್ಮ ತಮ್ಮ ಕಾರ್ಯವನ್ನು ಬಿಟ್ಟು ನಿನ್ನಲ್ಲಿ) ಸೇರಿಕೊಂಡಿರುವ
ದ್ರುಹಿಣ ಹರಿರುದ್ರಾನ್	ಬ್ರಹ್ಮ, ವಿಷ್ಣು, ಮಹೇಶ್ವರರೆಂಬ (ಪ್ರಳಯಾವಸ್ಥೆಯಲ್ಲಿ ಸೇರಿಸಿಕೊಂಡಿರುವ)
ದೇವಾನ್	ದೇವತೆಗಳನ್ನು
ಪುನಃ	ಮತ್ತೆ
ಸ್ರಷ್ಟುಂ	ಸೃಷ್ಟಿ ಮಾಡುವುದಕ್ಕೋಸ್ಕರ
ರಜಸ್ಸತ್ತ್ವಂ	ರಜೋಗುಣವೂ ಸತ್ತ್ವಗುಣವೂ
ತಮಃ	ತಮೋಗುಣವೂ
ಇತಿ	ಹೀಗೆಂಬ
ಗುಣಾನಾಂ	ಗುಣಗಳನ್ನು
ತ್ರಯಮ್	ಮೂರನ್ನೂ
ಭಿಭ್ರತ್ ಇವ	ಧರಿಸಿಕೊಂಡಿದೆಯೋ ಎಂಬುವ ಹಾಗೆ
ವಿಭಾತಿ	ಪ್ರಕಾಶಿಸುತ್ತಿದೆ

ತಾತ್ಪರ್ಯ

ಹೇ ಮಹಾದೇವನ ಪ್ರೇಯಸಿಯೇ ನೀನು ಕಣ್ಣುಗಳಿಗೆ ಹಚ್ಚಿಕೊಂಡ ಕಾಡಿಗೆಯಿಂದ ವಿಶಾಲನೇತ್ರೆಯಾಗಿ ಕಾಣುತ್ತಿರುವೆ. ಸೂರ್ಯಾತ್ಮಕವಾದ ನಿನ್ನ ಬಲಗಣ್ಣು ಕಾಡಿಗೆಯ ರೇಖೆಯಿಂದ ಮತ್ತಷ್ಟು ಬೆಳ್ಳಗೆ ಹೊಳೆಯುತ್ತಾ ಸತ್ತ್ವಗುಣಕ್ಕೆ ಸಂಕೇತವಾಗಿದೆ. ಚಂದ್ರಾತ್ಮಕವಾದ ನಿನ್ನ ಎಡಗಣ್ಣು ಕಾಡಿಗೆಯ ರೇಖೆಯಿಂದ ಎಳಗೆಂಪು ಬಣ್ಣದಂತಿದ್ದು ರಜೋಗುಣಕ್ಕೆ ಸಂಕೇತವಾಗಿದೆ. ಇನ್ನು ಅಗ್ನಿಸಂಬಂಧವಾದ ಫಾಲನೇತ್ರ ಕಾಡಿಗೆಯ ರೇಖೆಯಿಂದ ಮತ್ತಷ್ಟು ಕಪ್ಪು ಬಣ್ಣದಿಂದ ತಮೋಗುಣಕ್ಕೆ ಸಂಕೇತವಾಗಿ ಇರುವಂತೆ ವಿರಾಜಿಸುತ್ತಿದೆ. ಮಹಾಪ್ರಳಯ ಕಾಲದಲ್ಲಿ ನಿನ್ನಲ್ಲಿಯೇ ಲೀನರಾಗಿ ಹೋದ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಪ್ರಳಯಾನಂತರ ಸೃಷ್ಟಿ ಮಾಡಲು ಸತ್ತ್ವರಜ ತಮೋ ಗುಣಗಳನ್ನು ನಿನ್ನ ಕಾಡಿಗೆ ಹಚ್ಚಿದ ಕಣ್ಣುಗಳು ಧರಿಸಿರುವವೋ ಎಂಬಂತೆ ಕಾಣುತ್ತಿದೆ.

ಪದ್ಯಾನುವಾದ

ಹೇ ಮಹಾದೇವೀ ! ವಿಲಾಸಕೆಂದೇ ನೀನು
ಹಚ್ಚಿಕೊಂಡಿಹ ಕಣ್ಣಕಪ್ಪಿನಿಂದೊಡಗೂಡಿ
ನಿನ್ನ ಕಣ್ಮೂರು ಹೃತ್ಕಮಲದೊಳು ಬೇರ್ಪಟ್ಟ ಮೂಬಣ್ಣವೆನುವ ತೆರದಿ
ಪ್ರಳಯಕಾಲದಿ ನಿನ್ನೊಳೈಕ್ಯರಾದಾ ಬ್ರಹ್ಮ
ಹರಿರುದ್ರ ದೇವರನು ಮರಳಿ ಸೃಷ್ಟಿಸಲೆಂದೆ
ಸತ್ತ್ವ ಮೇಣ್‌ರಜ ತಮೋಗುಣ ಮೂರ ಧರಿಸಿರುವೆಯೋ ಎನಲು
ಹೊಳೆಯುತಿಹುದು ॥ ೫೩ ॥

ಟಿಪ್ಪಣಿಗಳು

೧. ಸತ್ತ್ವಗುಣ ಜ್ಞಾನಶಕ್ತಿಗೆ ಪ್ರತೀಕವಾಗಿದ್ದು ಬಿಳಿಯ ಬಣ್ಣದ್ದಾಗಿರುತ್ತದೆ. ರಜೋಗುಣವು ಇಚ್ಛಾಶಕ್ತಿಗೆ ಪ್ರತೀಕವಾಗಿದ್ದು ಕೆಂಪು ಬಣ್ಣಕ್ಕೆ ಸಂಕೇತವಾಗಿದೆ. ತಮೋಗುಣವು ಕ್ರಿಯಾಶಕ್ತಿಗೆ ಪ್ರತೀಕವಾಗಿದ್ದು ಕಪ್ಪು ಬಣ್ಣದ್ದಾಗಿದೆ. ಹೀಗೆ ನಿನ್ನ ಕಣ್ಣುಗಳು ೩ ಬಣ್ಣಗಳದ್ದು, ೩ ಗುಣಗಳದ್ದು ಉಳ್ಳದ್ದಾಗಿದೆ.

ಕಣ್ಣಿನ ಆಲಿಗಳು ಸುತ್ತಲೂ ಬಿಳಿಯದಾಗಿರುತ್ತದೆ. ಕಣ್ಣುಗುಡ್ಡೆಗಳು ಕಪ್ಪಾಗಿರುತ್ತವೆ. ೩ನೇ ಕಣ್ಣು ಅಗ್ನಿನೇತ್ರ ಕೆಂಪಾಗಿರುತ್ತವೆ. ಸತ್ತ್ವಗುಣಕ್ಕೆ ವಿಷ್ಣು, ರಜೋಗುಣಕ್ಕೆ ಬ್ರಹ್ಮ, ತಮೋಗುಣಕ್ಕೆ ರುದ್ರ ಪ್ರಧಾನರಾಗಿದ್ದಾರೆ. ಈ ಗುಣಗಳಿಂದಲೇ ದೇವಿ ತ್ರಿಮೂರ್ತಿಗಳನ್ನು ಸೃಷ್ಟಿಸಿದ್ದಾಳೆ. ಹೀಗೆಂದು ದೇವಿಯ ೩ ಕಣ್ಣುಗಳನ್ನು ಈ ಶ್ಲೋಕದಲ್ಲಿ ವರ್ಣಿಸಲಾಗಿದೆ.

(ಗ–ಪುಟ ೫೭–೫೮)

೨. ಈ ಶ್ಲೋಕದಲ್ಲಿ ಕಣ್ಣುಗಳಲ್ಲಿರುವ ಬಿಳುಪು, ಕೆಂಪು ಕಪ್ಪು ಬಣ್ಣದ ೩ ರೇಖೆಗಳನ್ನು ಸತ್ತ್ವ, ರಜ, ತಮ ಎಂಬ ಮೂರು ಗುಣಗಳ ರೂಪವಾಗಿ ಉತ್ಪ್ರೇಕ್ಷಿಸಲಾಗಿದೆ. ಆದ್ದರಿಂದ ಉತ್ಪ್ರೇಕ್ಷಾಲಂಕಾರವಿದೆ.

೩. ವಸ್ತುಧ್ವನಿ ಅಲಂಕಾರ ಇಲ್ಲಿದೆ. ಭಗವತಿಯ ನೇತ್ರಗಳ ಕಾಡಿಗೆ ದರ್ಶನದಿಂದಲೇ ಸೃಷ್ಟಿ, ಸ್ಥಿತಿ, ಲಯಗಳು ಆಗುತ್ತವೆ ಎಂಬುದಾಗಿ ಮಹಾ ಅತಿಶಯವು ಧ್ವನಿತವಾಗಿದೆ. ಆದ್ದರಿಂದ ಇದು ವಸ್ತುಧ್ವನಿ ಅಲಂಕಾರ ಇದೆ. (ಶೇ–ಪುಟ ೧೯೨)

೪. ದೇವಿ ಕಣ್ಣು ತೆರೆದರೆ ಸೃಷ್ಟಿ, ಕಣ್ಣು ಮುಚ್ಚಿದರೆ ಲಯ. ಲಲಿತಾ ಸಹಸ್ರ ನಾಮದಲ್ಲಿ (ಶ್ಲೋಕ ೬೬ ನಾಮ ೨೮೧) ಉನ್ಮೇಷ ನಿಮಿಷೋತ್ಪನ್ನ ವಿಪನ್ನ ಭುವನಾವಲಿಃ (ಕಣ್ಣು ಮುಚ್ಚಿ ತೆರೆಯುವುದರೊಳಗಾಗಿ ಜಗತ್ತನ್ನು ಸೃಷ್ಟಿಸುವ ಅಥವಾ ನಾಶಗೈವ ಶಕ್ತಿಯುಳ್ಳವಳು) ಎಂದು ಹೇಳಲಾಗಿದೆ.


(ರ–ಪುಟ ೬೧)

೫. **ಪುನಃಪ್ರಷ್ಟುಂ**

ದೇವಿಯು ಕಣ್ಣು ಬಿಟ್ಟರೆ ಜಗತ್ತಿನ ಸೃಷ್ಟಿ, ಕಣ್ಣು ಮುಚ್ಚಿದರೆ ಜಗತ್ತು ಲಯ ಆಗುತ್ತದೆ. ಆದರೆ ಶ್ರೀಮಾತೆ ಮೀನಾಕ್ಷಿ ಆಗಿ ಜಗತ್ತನ್ನು ರಕ್ಷಿಸುತ್ತಾಳೆ, ಮೀನಿನ ಹಾಗೆ. ಮೀನು ತನ್ನ ದೃಷ್ಟಿಯಿಂದಲೇ ರೆಪ್ಪೆ ಮಿಟುಕಿಸದೇ ತನ್ನ ಮೊಟ್ಟೆಗಳಿಗೆ ಕಾವು ಕೊಟ್ಟು ಮರಿಗಳನ್ನಾಗಿ ಮಾಡುವ ಹಾಗೆ ಆ ತಾಯಿ ತನ್ನ ಮಕ್ಕಳಾದ ಜೀವರಾಶಿಯನ್ನು ಅನಿಮಿಷಳಾಗಿ ರೆಪ್ಪೆ ಮುಚ್ಚದೆ ನೋಡುತ್ತಾ ರಕ್ಷಿಸುತ್ತಾಳೆ. ಆದರೆ ಯಾವಾಗಲೋ ಒಂದು ಯುಗಾಂತದ ಕಾಲ ಜೀವಿಗಳ ಕಾಲ ಪರಿಮಿತಿ ಕೊನೆಗೊಂಡಾಗ ಆ ತಾಯಿಯ ಕಣ್ಣು ರೆಪ್ಪೆ ಮುಚ್ಚಿಕೊಳ್ಳುತ್ತದೆ. ಆ ಕ್ಷಣದಲ್ಲೇ ಜಳಪ್ರಳಯ, ಭೂಕಂಪ, ಚಂಡಮಾರುತ, ಬಡಬಾಗ್ನಿ ಇತ್ಯಾದಿಗಳು ಜರುಗುತ್ತವೆ.

(ಲ–ಪ ಪುಟ ೧೬೮)

ಯಂತ್ರಾರಾಧನೆ (ಶ್ಲೋಕ ೫೩)



ಯಂತ್ರ ರಚನೆ : ಚಿನ್ನದ ರೇಖಿನಲ್ಲಿ ಬರೆದು ನೆಲದ ಮೇಲಿಟ್ಟು ಅದರ ಮೇಲೆ ದೀಪಗಳನ್ನು ಹಚ್ಚಿಡಬೇಕು. ಯಂತ್ರವನ್ನು ಅಧೋಮುಖನಾದ ಸಮಭುಜ ತ್ರಿಕೋಣವನ್ನು ಬರೆದು ಅದರಲ್ಲಿ ಹ್ರೀಂ ಬೀಜಾಕ್ಷರವನ್ನು ಮಧ್ಯೆ ಬರೆಯಬೇಕು.

ಪೂಜೆ : ಪೂರ್ವಾಭಿಮುಖವಾಗಿ ಕುಳಿತು ಯಂತ್ರದ ಬಲಗಡೆ ತುಪ್ಪದ ದೀಪವನ್ನು ಹಚ್ಚಿಡಬೇಕು. ದೀಪ ಪ್ರಕಾಶಮಾನವಾಗಿ ಉರಿದರೆ ಶುಭಶಕುನವೆಂದು ತಿಳಿಯಬೇಕು. ಲಲಿತಾ ಸಹಸ್ರನಾಮ ಹೇಳಿ ಕುಂಕುಮಾರ್ಚನೆ ಮಾಡಬೇಕು.

ನೈವೇದ್ಯ : ಅತಿರಸ, ಉದ್ದಿನವಡೆ, ಕ್ಷೀರಪಾಯಸ.

ಜಪ : ೪೫ ದಿನಗಳ ಕಾಲ ದಿನಕ್ಕೆ ೩೦೦೦ ಸಲದಂತೆ ಈ ಶ್ಲೋಕವನ್ನು ಜಪ ಮಾಡಬೇಕು.

ಫಲ : (ದೀಪ ಪ್ರಜ್ವಲಿಸಿದರೆ) ಕಾರ್ಯಸಿದ್ಧಿ, ಭವಿಷ್ಯ ಜ್ಞಾನ ಸಿದ್ಧಿ.

ಶ್ಲೋಕ–೫೪

ದೇವಿಯ ಕಣ್ಣಿನ ಬಣ್ಣಗಳ ವರ್ಣನೆ

ಪವಿತ್ರೀಕರ್ತುಂ ನಃ [೧]ಪಶುಪತಿಪರಾಧೀನಹೃದಯೇ
ದಯಾಮಿತ್ರೈರ್ನೇತ್ರೈರರುಣಧವಲಶ್ಯಾಮರುಚಿಭಿಃ ।
ನದಶ್ಶೋಣೋ ಗಂಗಾ ತಪನತನಯೇತಿ ಧ್ರುವಮಮುಂ
ತ್ರಯಾಣಾಂ ತೀರ್ಥಾನಾಮುಪನಯಸಿ [೨]ಸಂಭೇದಮನಘಮ್ ॥ ೫೪ ॥

ಪಾಠಾಂತರ

೧. ಪಶುಪತಿ ಪರಾಧೀನ ಹೃದಯೇ = ಪಶುಪತಿ ಹರಾಯುಕ್ತ ಹೃದಯೇ (ಪೋ)
೨. (ಸಂಭೇದಮನಘಮ್) = ಸಂಭೇದಮನಘೇ (ಸು)

ಪದವಿಭಾಗ

ಪವಿತ್ರೀಕರ್ತುಂ, ನಃ, (ಪಶುಪತಿಪರಾಧೀನಹೃದಯೇ) = ಪಶುಪತಿ + ಅಧೀನಹೃದಯೇ (ದಯಾಮಿತ್ರೈರ್ನೇತ್ರೈರರುಣಧವಲಶ್ಯಾಮರುಚಿಭಿಃ) = ದಯಾಮಿತ್ರೈಃ + ನೇತ್ರೈಃ + ಅರುಣಧವಲ ಶ್ಯಾಮರುಚಿಭಿಃ ನದಃ, (ಶೋಣೋ) = ಶೋಣಃ, ಗಂಗಾ, (ತಪನತನಯೇತಿ)=ತಪನತನಯಾ + ಇತಿ, (ಧ್ರುವಮಮುಂ) = ಧ್ರುವಂ + ಅಮುಂತ್ರಯಾಣಾಂ, (ತೀರ್ಥಾನಾಮುಪನಯಸಿ) = ತೀರ್ಥಾನಾಂ +ಉಪನಯಸಿ, (ಸಂಭೇದಮನಘಮ್) = ಸಂಭೇದಮ್ + ಅನಘಂ.

ಅನ್ವಯಾರ್ಥ

ಪಶುಪತಿ ಪರಾಧೀನ ಹೃದಯೇ	ಪಶುಪತಿಯಾದ ಪರಮೇಶ್ವರನಿಗೆ ಸ್ವಾಧೀನವಾದ–ಮನಸ್ಸುಳ್ಳ ದೇವಿಯೇ
ದಯಾಮಿತ್ರೈಃ	ಕೃಪೆಯಿಂದ ಕೂಡಿದ
ಅರುಣಧವಲಶ್ಯಾಮರುಚಿಭಿಃ	ಕೆಂಪಾಗಿಯೂ–ಬಿಳುಪಾಗಿಯೂ ಕಪ್ಪಾಗಿಯೂ–ಕಾಂತಿಯುಳ್ಳ
ನೇತ್ರೈಃ	ಮೂರು ಕಣ್ಣುಗಳಿಂದ
ಶೋಣಃ ನದಃ	(ಹಿರಣ್ಯವಾಹವೆಂಬ ಹೆಸರಿನ ಕೆಂಪು ವರ್ಣದ) ಶೋಣಾ ನದಿಯು

ಗಂಗಾ	(ಬಿಳುಪಾದ ಬಣ್ಣವುಳ್ಳ) ಗಂಗಾ ನದಿಯು
ತಪನತನಯಾ ಇತಿ	(ಕಪ್ಪಾದ ಕಾಳಿಂದೀ ಎಂಬ) ಸೂರ್ಯನ ಮಗಳಾದ ಯಮುನಾ ನದಿಯು ಹೀಗೆಂಬ ಮೂರು ನದಿಗಳ (ತೀರ್ಥಗಳ)
ತ್ರಯಾಣಾಂ ತೀರ್ಥಾನಂ	ಪ್ರತ್ಯಕ್ಷವೂ ಪುಣ್ಯಕರವೂ ಆದ
ಅಮುಂ ಅನಘಂ	ಸಂಗಮವನ್ನು
ಸಂಭೇದಂ	(ನಮ್ಮನ್ನು)
(ನಃ)	
ಪವಿತ್ರೀಕರ್ತುಂ ಧ್ರುವಂ	ಪರಿಶುದ್ಧರನ್ನಾಗಿ ಮಾಡಲು ನಿಶ್ಚಯ ವಾಗಿಯೂ
ಉಪನಯಸಿ	ಸೇರಿಸುತ್ತಿದ್ದಿಯೇ

ತಾತ್ಪರ್ಯ

ಪಶುಪತಿಯಾದ ಪರಮೇಶ್ವರನಿಗೆ ಅಧೀನವಾದ ಮನಸ್ಸುಳ್ಳವಳೇ ನೀನು ದಯಾಭಾವದಿಂದ ಕೂಡಿದವಳು. ನಿನಗೆ ಭಕ್ತರಲ್ಲಿರುವ ದಯಾಭಾವವು ಎಷ್ಟು ಆಳವಾದುದು ಎಂದರೆ, ಆ ದಯಾರಸವೇ ಕರಗಿ ನಿನ್ನ ಕೆಂಪು ಬಿಳುಪು, ಕಪ್ಪು, ಬಣ್ಣಗಳ ಕಾಂತಿಯುಳ್ಳ ಮೂರು ಕಣ್ಣುಗಳಿಂದ ಕ್ರಮವಾಗಿ ಕೆಂಪಾದ ಶೋಣಾ ನದಿಯೂ, ಬಿಳುಪಾದ ಗಂಗಾ ನದಿಯೂ, ಕಪ್ಪಾದ ಕಾಳಿಂದೀ (ಯಮುನಾ) ನದಿಯೂ ಹರಿದು ಬಂದವು. ಭಕ್ತವತ್ಸಲೆಯಾದ ನೀನು ನಮ್ಮನ್ನು ಪವಿತ್ರಗೊಳಿಸುವುದಕ್ಕಾಗಿಯೇ ಪಾಪನಾಶಕಳಾದ ಈ ಮೂರೂ ನದಿಗಳ ಸಂಗಮ ಸ್ಥಾನವಾಗಿದ್ದೀಯೆ. ಈ ಮಾತು ದಿಟವಾದುದು.

ಪದ್ಯಾನುವಾದ

ಪಶುಪತಿ ಪರಾಧೀನ ಹೃದಯೇ, ಶಿವೇ, ನಿನ್ನ
ದಯೆಗೂಡಿದಾ ಕಣ್ಣುಗಳ ಕೆಂಪು ಬಿಳಿಪಿಂದ
ಕಪ್ಪಿಂದ ಶೋಣ ಗಂಗಾಯಮುನೆಯರ ಪುಣ್ಯಕರ ಸಂಗಮವನು ನೆರಹಿ
ಆ ಮೂರು ನದನದೀಗಳ ದಿವ್ಯತೀರ್ಥಗಳು
ನಮ್ಮನೆಲ್ಲಾ ಕಾಲದಲು ಪವಿತ್ರೀಕರಿಸಿ
ಉದ್ಧಾರ ಮಾಡುತಿರುವಂತೆ ಸಂಘಟಿಸಿರುವೆ, ಏನಮ್ಮ ನಿನ್ನ ಕರುಣೇ !

॥ ೫೪ ॥

ಟಿಪ್ಪಣಿಗಳು

೧. ಈ ಶ್ಲೋಕದಲ್ಲಿ ಉತ್ಪ್ರೇಕ್ಷಾಲಂಕಾರವಿದೆ. ಏಕೆಂದರೆ ಸ್ವಭಾವತಃ ಸಹಜವಾಗಿರುವ ಬಿಳುಪು, ಕಪ್ಪು, ಕೆಂಪು ಬಣ್ಣವುಳ್ಳ ಮೂರು ಕಣ್ಣುಗಳಿಂದ ಕೂಡಿದ ಮೂರು ರೇಖೆಗಳನ್ನು ಗಂಗಾ ಯಮುನಾ ಶೋಣಾ ನದಿಗಳ ಸಂಗಮವೆಂದು ಉತ್ಪ್ರೇಕ್ಷೆ ಮಾಡಲಾಗಿದೆ.

(ಶೇ–ಪುಟ ೧೯೩)

೨. ಗಂಗಾ ಯಮುನಾ ಶೋಣಾ ನದಿಗಳ ಸಂಗಮಸ್ಥಾನ ಇದು. ತ್ರಿವೇಣೀ ಸಂಗಮ ಸ್ಥಾನವಾದ ಪ್ರಯಾಗ ಅಲ್ಲ.

ಪ್ರಯಾಗದಲ್ಲಿ ಗಂಗಾನದಿ ಯಮುನಾ ನದಿಯೊಡನೆ ಸೇರುತ್ತದೆ. ಅಲ್ಲಿ ಸರಸ್ವತೀ ನದಿ ಗುಪ್ತಗಾಮಿನಿಯಾಗಿ ಸೇರುತ್ತದೆ. ಗಂಗಾನದಿ ಕಾಶಿಯನ್ನು ದಾಟಿ ಬಿಹಾರ್ ರಾಜ್ಯದಲ್ಲಿ ಸಂಚರಿಸಿದ ನಂತರ ಶೋಣಾ ಭದ್ರ ನದಿ ಗಂಗೆಯೊಡನೆ ಸೇರಿಕೊಳ್ಳುತ್ತದೆ. ಶೋಣಾ ಭದ್ರದೊಡನೆ ಸೇರಿದ ಗಂಗಾ ಯಮುನಾಗಳ ಸಂಗಮ ಸ್ಥಾನ ಅವ್ಯಕ್ತವಾಗಿದೆ. ಈ ಸಂಗಮವನ್ನು ಒಳಗೊಂಡವಳು ದೇವಿ.

(ತು–ಪುಟ ೩೨೩)
(ಪೋ–ಪುಟ ೨೭೧)


೩. **ದಯಾಮಿತ್ರೈಃ ನೇತ್ರೈಃ ಅರುಣಧವಳಶ್ಯಾಮರುಚಿಭಿಃ**

ದೇವಿಯ ನೇತ್ರಗಳು ಕರುಣಾ ದೃಷ್ಟಿಯುಳ್ಳವು. ದೇವಿಯ ತ್ರಿನೇತ್ರಗಳು ತ್ರಿವರ್ಣಗಳಿಂದ ಕೂಡಿವೆ. ಬಲಗಣ್ಣು ರಜೋಗುಣದಿಂದ ಎಡಗಣ್ಣು (ಸತ್ತ್ವಗುಣದಿಂದ) ಹಣೆಗಣ್ಣು (ತಮೋಗುಣದಿಂದ) ಕೂಡಿವೆ. ರಜೋಗುಣ ಕೆಂಪಾಗಿರುವುದು ಶೋಣಾನದಿಗೆ, ಎಡಗಣ್ಣು ಸತ್ತ್ವಗುಣದಿಂದ ಬಿಳುಪಾಗಿಯೂ, ಹಣೆಗಣ್ಣು ತಮೋಗುಣದಿಂದ ಕಪ್ಪಾಗಿಯೂ ಇದೆ. ಇವು ಶೋಣಾನದಿ (ಬಲಗಣ್ಣು) ಗಂಗಾನದಿ (ಎಡಗಣ್ಣು) ಯಮುನಾ ನದಿ (ಹಣೆಗಣ್ಣು) ಪ್ರತಿನಿಧಿಸಿವೆ.

೪. ಶೋಣಾ ನದಿಯನ್ನು 'ನದ'ವೆಂದು (ಗಂಡು ನದಿ) ಕರೆದಿದೆ. ಪೂರ್ವದಿಂದ ಪಶ್ಚಿಮಕ್ಕೆ ಹರಿದು ಸಮುದ್ರ ಸೇರಿದರೆ ನದಿ (ಹೆಣ್ಣು ನದಿ). ಪಶ್ಚಿಮದಿಂದ ಪೂರ್ವಕ್ಕೆ ಹರಿದರೆ ನದ (ಗಂಡು ನದಿ) ಎನ್ನುತ್ತಾರೆ. ಇದು ಸಂಸ್ಕೃತ ಭಾಷೆಯ ಪರಿಭಾಷೆ ಆಗಿದೆ.

(ಪೋ–೨೭೨ ಪುಟ)

ಯಂತ್ರಾರಾಧನೆ (ಶ್ಲೋಕ ೫೪)



ಯಂತ್ರ ರಚನೆ : ಚಿನ್ನದ ರೇಖಿನಲ್ಲಿ ಯಂತ್ರ ತಯಾರಿಸಬೇಕು. ಚಿತ್ರದಲ್ಲಿರುವಂತೆ ಯಂತ್ರ ಲೇಖನ ಮಾಡಬೇಕು. ಒಳವೃತ್ತದಲ್ಲಿ ಸಾಂ ಬೀಜಾಕ್ಷರವನ್ನು ೨ ಬಾರಿ ಬರೆಯಬೇಕು.

ಪೂಜೆ : ಕೆಂಪು ಹೂಗಳಿಂದ ದುರ್ಗಾ ಅಷ್ಟೋತ್ತರ ಮತ್ತು ಕುಂಕುಮಾರ್ಚನೆಯಿಂದ ಲಲಿತಾ ಅಷ್ಟೋತ್ತರ ಅರ್ಚನೆ ಮಾಡಬೇಕು. ಉತ್ತರ ದಿಕ್ಕಿಗೆ ಅಭಿಮುಖವಾಗಿ ಕೂಡಬೇಕು.

ನೈವೇದ್ಯ : ಬೆಲ್ಲದ ಪಾಯಸ.

ಜಪ : ೪೫ ದಿನಗಳು ಪ್ರತಿದಿನ ೧೦೦೦ ಬಾರಿ ಶ್ಲೋಕವನ್ನು ಜಪಿಸಬೇಕು.

ಫಲ : **ಗುಹ್ಯ ರೋಗ ನಿವಾರಣೆ.**

ಶ್ಲೋಕ–೫೫

ದೇವಿಯ ಕಣ್ಮುಚ್ಚುವಿಕೆ ತೆರೆಯುವಿಕೆಗಳ ವರ್ಣನೆ

ನಿಮೇಷೋನ್ಮೇಷಾಭ್ಯಾಂ ಪ್ರಲಯಮುದಯಂ ಯಾತಿ ಜಗತೀ
ತವೇತ್ಯಾಹುಸ್ಸಂತೋ ಧರಣಿಧರರಾಜನ್ಯತನಯೇ ।
ತ್ವದುನ್ಮೇಷಾಜ್ಜಾತಂ ಜಗದಿದಮಶೇಷಂ ಪ್ರಲಯತಃ
ಪರಿತ್ರಾತುಂ ಶಂಕೇ ಪರಿಹೃತನಿಮೇಷಾಸ್ತವ ದೃಶಃ ॥ ೫೫ ॥

ಪದವಿಭಾಗ

(ನಿಮೇಷೋನ್ಮೇಷಾಭ್ಯಾಂ) = ನಿಮೇಷ + ಉನ್ಮೇಷಾಭ್ಯಾಂ, (ಪ್ರಲಯಮುದಯಂ) = ಪ್ರಲಯಂ + ಉದಯಂ, ಯಾತಿ, ಜಗತೀ, (ತವೇತ್ಯಾಹುಃ) = ತವ + ಇತಿ + ಆಹುಃ, (ಸಂತೋ) = ಸಂತಃ, ಧರಣಿಧರರಾಜನ್ಯತನಯೇ, (ತ್ವದುನ್ಮೇಷಾಜ್ಜಾತಂ) = ತ್ವತ್+ಉನ್ಮೇಷಾತ್ + ಜಾತಮ್, (ಜಗದಿದಮಶೇಷಂ) = ಜಗತ್ + ಇದಂ + ಅಶೇಷಂ, ಪ್ರಲಯತಃ, ಪರಿತ್ರಾತುಂ, ಶಂಕೇ, (ಪರಿಹೃತನಿಮೇಷಾಸ್ತವ) = ಪರಿಹೃತನಿಮೇಷಾಃ + ತವ, ದೃಶಃ

ಅನ್ವಯಾರ್ಥ

ಧರಣಿಧರರಾಜನ್ಯತನಯೇ	ಭೂಮಿಯನ್ನು ಧರಿಸಿರುವ ದೊರೆಯಾದ ಹಿಮವಂತನ ಮಗಳೇ (ಎಲೈ ದೇವಿಯೇ)
ತವ	ನಿನ್ನ
ನಿಮೇಷೋನ್ಮೇಷಾಭ್ಯಾಂ	(ನಿಮೇಷ + ಉನ್ಮೇಷಾಬ್ಯಾಂ) = ಕಣ್ಣು ರೆಪ್ಪೆಗಳನ್ನು ಮುಚ್ಚುವುದರಿಂದಲೂ ಬಿಡುವುದರಿಂದಲೂ (ತೆರೆಯುವುದ ರಿಂದಲೂ)
ಜಗತೀ	ಪ್ರಪಂಚವು
ಪ್ರಳಯಮುದಯಂ	(ಪ್ರಳಯಂ + ಉದಯಂ) ಸಂಹಾರವನ್ನು
ಯಾತಿ ಇತಿ	ಸೃಷ್ಟಿಯನ್ನೂ ಪಡೆಯುತ್ತದೆ (ಹೊಂದುತ್ತಿದೆ ಎಂಬುದಾಗಿ)
ಸಂತಃ	ಜ್ಞಾನಿಗಳು

ಆಹುಃ	ಹೇಳುತ್ತಾರೆ.
ಅತಃ	ಈ ಕಾರಣದಿಂದ
ತ್ವದುನ್ಮೇಷಾತ್	(ತ್ವತ್ + ಉನ್ಮೇಷಾತ್) ನೀನು ಕಣ್‌ರೆಪ್ಪೆ ತೆರೆಯುವುದರಿಂದ
ಜಾತಂ	ಹುಟ್ಟಿದ
ಅಶೇಷಂ ಇದಂ ಜಗತ್	ಸಮಸ್ತವಾದ ಈ ಪ್ರಪಂಚವನ್ನು
ಪ್ರಲಯತಃ	ಪ್ರಳಯದ ದೆಸೆಯಿಂದ (ನಾಶವಾಗುವುದರಿಂದ)
ಪರಿತ್ರಾತುಂ	ಕಾಪಾಡುವುದಕ್ಕೋಸ್ಕರ
ತವ ದೃಶಃ	ನಿನ್ನ ಕಣ್ಣುಗಳು
ಪರಿಹೃತನಿಮೇಷಾಃ	ರೆಪ್ಪೆ ಮುಚ್ಚದೇ ಇರುತ್ತವೆ. (ಕಣ್ಣು ಮುಚ್ಚುವುದನ್ನು ತಿರಸ್ಕರಿಸಿರುತ್ತದೆ)
ಶಂಕೇ	ಹೀಗೆಂದು ಊಹಿಸುತ್ತೇನೆ.

ತಾತ್ಪರ್ಯ

ಹೇ ಹಿಮಗಿರಿಸುತೇ, ನೀನು ಕಣ್ಣು ಮುಚ್ಚಿದರೆ (ನಿಮೇಷ) ಅದೇ ಪ್ರಳಯ. ನೀನು ಕಣ್ಣು ಬಿಚ್ಚಿದರೆ ಈ ಜಗತ್ತಿನ ಸೃಷ್ಟಿ ಆಗುತ್ತದೆ. ಈ ಜಗತ್ತಿನ ಸೃಷ್ಟಿ ಲಯಗಳು ನಿನ್ನ ಕಣ್ಣು ಮುಚ್ಚುವುದು ತೆರೆಯುವುದನ್ನು ಅವಲಂಬಿಸಿದೆ. ನೀನು ಸೃಷ್ಟಿಸಿದ (ಈ ಜಗತ್ತನ್ನು ಭಕ್ತರಿರುವ ಪ್ರಪಂಚವನ್ನು ನಾಶ ಮಾಡಬಾರದೆಂದು) ಜಗತ್ತನ್ನು ಪ್ರಳಯಕ್ಕೆ ಒಳಗಾಗದಂತೆ ರಕ್ಷಿಸಬೇಕೆಂದು ಬಯಸಿ ಸದಾ ಕಣ್ಣುರೆಪ್ಪೆ ಮುಚ್ಚದೇ ಇರುತ್ತೀಯೆ ಎಂದರೆ ಅನಿಮೇಷೆಯಾಗಿರುವೆ (ರೆಪ್ಪೆ ಮಿಟುಕಿಸದವಳು) ಎಂದು ಆದಿಶಂಕರರು (ದೇವಿ ಕಣ್ಣು ರೆಪ್ಪೆ ಮಿಟುಕಿಸುವುದಿಲ್ಲ ಎಂಬ ಲಕ್ಷಣವನ್ನು ಗಮನಿಸಿ) ಊಹಿಸಿದ್ದಾರೆ.

ಪದ್ಯಾನುವಾದ

ಹೇ ಹಿಮಾಲಯತನಯೆ ! ಕಣ್ಣು ಮುಚ್ಚಲು ನೀನು
ವಿಲಯ ಹೊಂದುವುದು ಜಗ, ಕಣ್ಣು ತೆರೆಯಲ್ಕೊಡನೆ
ಉದಯಿಸುವುದದು ಮರಳಿ ಎಂದಿಂತು ನುಡಿವರು ಮಹಾಜ್ಞಾನಿಗಳು ಸಂತರು;
ನಿನ್ನ ಕಣ್‌ತೆರೆವಿನಿಂದುದಯಿಸುವ ಈ ಜಗವು
ಪ್ರಲಯಹೊಂದದ ತೆರದಿ ಅದನು ರಕ್ಷಿಸಲೆಂದೆ
ನಿನ್ನ ಕಣ್ಣೆವೆ ಸದಾ ಮುಚ್ಚದೆಯೆ ತೆರದಿಹವುಯೆಂದು ನಾ ಬಗೆವೆ ತಾಯೇ ॥೫೫॥

ಅಲಂಕಾರ

೧. ಈ ಶ್ಲೋಕದಲ್ಲಿ 'ನಿಮೇಷೋನ್ಮೇಷಾಭ್ಯಾಂ' ಎಂಬಲ್ಲಿ ಉತ್ಪ್ರೇಕ್ಷಾಲಂಕಾರವಿದೆ. ಏಕೆಂದರೆ ದೇವತೆಗಳಿಗೆ ನಿಮೇಷವಿಲ್ಲದಿರುವಿಕೆಯು ಸ್ವಭಾವ ಸಿದ್ಧವಾದುದು. ಆದರೆ ಅದನ್ನು ಜಗತ್ತಿನ ಸಂರಕ್ಷಣೆಗೋಸ್ಕರ ಎಂಬುದಾಗಿ ಫಲರೂಪದಿಂದ ಉತ್ಪ್ರೇಕ್ಷೆ ಮಾಡಿರುವುದರಿಂದ ಫಲೋತ್ಪ್ರೇಕ್ಷೆ ಆಗುತ್ತದೆ.

(ಶೇ–ಪುಟ ೧೮೪)

೨. **ಈ ಶ್ಲೋಕದಲ್ಲಿ ವಸ್ತುಧ್ವನಿ ಅಲಂಕಾರ**ವಿದೆ ಹೇಗೆಂದರೆ ನಿಮೇಷ ಹಾಗೂ ಉನ್ಮೇಷಗಳ ಸ್ಥಿತಿಯಲ್ಲಿ ಜಗತ್ತಿನ ಉತ್ಪತ್ತಿ ಲಯಗಳು ಆಗುವುದರಿಂದ ದೇವಿಯ ಮಹಿಮೆ ಮಾತು ಮನಸ್ಸುಗಳಿಗೆ ಗೋಚರವಾಗುವುದಿಲ್ಲ ಎಂಬ ವಸ್ತುವು ಧ್ವನಿತವಾಗುತ್ತದೆ.

(ಶೇ–ಪುಟ ೧೮೪)

೩. ಲಲಿತಾ ಸಹಸ್ರನಾಮದಲ್ಲಿ (ಶ್ಲೋಕ ೬೬ ನಾಮ ೨೮೧) ದೇವಿಯನ್ನು ಕುರಿತು "ಉನ್ಮೇಷ ನಿಮಿಷೋತ್ಪನ್ನ ವಿಪನ್ನ ಭುವನಾವಲಿ" ಎಂದಿದೆ. (ಕಣ್ಣುಚ್ಚಿ ತೆರೆಯುವುದರೊಳಗಾಗಿ ಜಗತ್ತನ್ನು ಸೃಷ್ಟಿಸುವ ಅಥವಾ ನಾಶಗೈಯುವ ಶಕ್ತಿಯುಳ್ಳವಳು.) ಈ ಬಗ್ಗೆ ಕಾಮಸಿದ್ಧಿ ಸ್ತೋತ್ರದಲ್ಲಿ ಹೀಗೆ ಹೇಳಿದೆ :


ಲೋಕಾಶ್ಚತುರ್ದಶ ಮಹೇಂದ್ರ ಮುಖಾಶ್ಚ ದೇವಾಃ
ಮೂರ್ತಿತ್ರಯಂ ಮುನಿಗಣಾಶ್ಚ ವಶಿಷ್ಠ ಮುಖ್ಯಾಃ
ಸದ್ಯೋಭವಂತಿ ನಭವಂತಿ ಸಮಸ್ತ ಮೂರ್ತೇ–
ರುನ್ಮೀಲನೇನ ತವ ದೇವಿ ನಿಮೀಲನೇನ ॥

[ದೇವಿಯ ಕಣ್ಣು ಮುಚ್ಚಿ ತೆಗೆಯುತ್ತಿದ್ದರೆ ದೇವೇಂದ್ರಾದಿ ದೇವತೆಗಳೂ ತ್ರಿಮೂರ್ತಿಗಳೂ ವಶಿಷ್ಠಾದಿ ಋಷಿಗಳೂ ಸೃಷ್ಟಿಗೂ ನಾಶಕ್ಕೂ ಒಳಗಾಗುತ್ತಿರುತ್ತಾರೆ, ಎಂದರೆ ದೇವೀ ಕಣ್ಣು ಮುಚ್ಚಿದರೆ ಇವರೆಲ್ಲಾ ನಾಶವಾಗುತ್ತಾರೆ. ಕಣ್ಣು ತೆರೆದರೆ ಇವರೆಲ್ಲ ಸೃಷ್ಟಿಯಾಗುತ್ತಾರೆ.]

(ಪೋ–ಪುಟ ೨೭೮)

೪. 'ನಮ್ಮ ಭಾಷೆಯಲ್ಲಿ ಅನೇಕ ಬಾರಿ ದೇವರು ಕಣ್ಣು ಬಿಟ್ಟು ನೋಡಬೇಕು, ಆಗ ನಮ್ಮ ಕಷ್ಟಗಳೆಲ್ಲಾ ಪರಿಹಾರವಾಗುತ್ತದೆ. ದೇವರ್‍ಯಾಕೋ ಕಣ್ಮುಚ್ಚಿಕೊಂಡಿದ್ದಾನೆ ಅದಕ್ಕೇ ನಮಗಿಷ್ಟು ತಾಪತ್ರಯ, ಇತ್ಯಾದಿ ಮಾತುಗಳು ದೇವಿಯ ನಿಮೇಷ ಉನ್ಮೇಷಗಳಿಗೆ ಸಂಬಂಧಿಸಿದೆ.

ಯಂತ್ರಾರಾಧನೆ (ಶ್ಲೋಕ ೫೫)



ಯಂತ್ರ ರಚನೆ : ಚಿನ್ನದ ರೇಖಿನಲ್ಲಿ ಸಮಚತುರಶ್ರದ ಮೂಲೆಗಳಲ್ಲಿ ಎರೆಡರಡರಂತೆ ನಾಲ್ಕು ಮೂಲೆಗಳಲ್ಲಿ ೮ ತ್ರಿಶೂಲಗಳನ್ನು ಬರೆಯಬೇಕು. ನಡುವೆ ಬೀಜಾಕ್ಷರ ಬ್ಲೂಂ ಅನ್ನು ೨ ಬಾರಿ ಬರೆಯಬೇಕು.

ಪೂಜೆ : ಆಗ್ನೇಯ ದಿಕ್ಕಿಗೆ ಅಭಿಮುಖವಾಗಿ ಕುಳಿತು ಕುಂಕುಮ ಮಿಶ್ರವಾದ ತಿಲಾಕ್ಷತೆಗಳಿಂದ ಲಲಿತಾ ಸಹಸ್ರನಾಮ ಅರ್ಚನೆಯನ್ನು ಮಾಡಬೇಕು.

ನೈವೇದ್ಯ : ಬಾಳೆಹಣ್ಣು, ಹಾಲುಕೀರು, ಜೇನುತುಪ್ಪ, ತಾಂಬೂಲ.

ಜಪ : ಈ ಶ್ಲೋಕವನ್ನು ೪೫ ದಿನಗಳು ಪ್ರತಿ ದಿನ ೨೫೦೦ ಬಾರಿ ಜಪಿಸಬೇಕು. ಆಮೇಲೆ ಯಂತ್ರವನ್ನು ಧರಿಸಬೇಕು.

ಟಿಪ್ಪಣಿ : ಕೇರಳದ ಕಡೆಯ ಗ್ರಂಥಗಳಲ್ಲಿ ಯಂತ್ರದ ಬೀಜಾಕ್ಷರಗಳನ್ನು ಬ್ಲೂಂ ಬ್ಲೂಂಗೆ ಬದಲಾಗಿ ಬಂಲಾ ಸಂಲಾ ಎಂದು ಬರೆದಿದೆ.

ಫಲ : **ಅಂಡವ್ಯಾಧಿ ನಿವಾರಣೆ.**

ಶ್ಲೋಕ–೫೬

ದೇವಿಯ ನೇತ್ರಗಳ ಸೌಭಾಗ್ಯ ವರ್ಣನೆ

ತವಾಪರ್ಣೇ ಕರ್ಣೇ ಜಪನಯನಪೈಶುನ್ಯಚಕಿತಾಃ
ನಿಲೀಯಂತೇ ತೋಯೇ ನಿಯತಮನಿಮೇಷಾಶ್ಶಫರಿಕಾಃ ।
ಇಯಂ ಚ ಶ್ರೀರ್ಬದ್ಧಚ್ಛದಪುಟಕವಾಟಂ ಕುವಲಯಂ
ಜಹಾತಿ ಪ್ರತ್ಯೂಷೇ ನಿಶಿ ಚ ವಿಘಟಯ್ಯ ಪ್ರವಿಶತಿ ॥ ೫೬ ॥

ಪದವಿಭಾಗ

(ತವಾಪರ್ಣೇ) = ತವ + ಅಪರ್ಣೇ, ಕರ್ಣೇ ಜಪನಯನ ಪೈಶುನ್ಯ ಚಕಿತಾಃ, ನಿಲೀಯಂತೇ, ತೋಯೇ, (ನಿಯತಮನಿಮೇಷಾಶ್ಶಫರಿಕಾ) = ನಿಯತಮ್ + ಅನಿಮೇಷಾಃ + ಶಫರಿಕಾಃ, ಇಯಂ, ಚ, (ಶ್ರೀರ್ಬದ್ಧಚ್ಛದಪುಟಕವಾಟಂ) = ಶ್ರೀಃ + ಬದ್ಧಚ್ಛದಪುಟಕವಾಟಂ, ಕುವಲಯಂ, ಜಹಾತಿ, ಪ್ರತ್ಯೂಷೇ, ನಿಶಿ, ಚ, ವಿಘಟಯ್ಯ, ಪ್ರವಿಶತಿ.

ಅನ್ವಯಾರ್ಥ

(ಹೇ) ಅಪರ್ಣೇ	(ಹೇ) ಪಾರ್ವತೀದೇವಿಯೆ
ತವ	ನಿನ್ನ
ಕರ್ಣೇ ಜಪನಯನಪೈಶುನ್ಯಚಕಿತಾಃ	ಕಿವಿಯಲ್ಲಿ–(ಚಾಡಿ ಹೇಳುತ್ತಿರುವ) ಕಣ್ಣುಗಳ ದೆಸೆಯಿಂದ ಉಂಟಾದ–ಚಾಡಿಗೆ –ಹೆದರಿದ
ಶಫರಿಕಾಃ	ಹೆಣ್ಣು ಮೀನುಗಳು
ಅನಿಮೇಷಾಃ ತೋಯೇ	ರೆಪ್ಪೆ ಮುಚ್ಚದೆ ನೀರಿನಲ್ಲಿ
ನಿಲೀಯಂತೇ	ಔತುಕೊಂಡಿವೆ (ಅಡಗಿಕೊಂಡಿವೆ)
ನಿಯತಂ	ಇದು ನಿಶ್ಚಯವಾದ ಸಂಗತಿ
(ಕಿಂಚ)	(ಮತ್ತು)
ಇಯಂ ಚ ಶ್ರೀಃ	ಈ ನಿಮ್ಮ ಕಣ್ಣುಗಳ ಕಾಂತಿಯು
ಬದ್ಧಚ್ಛದಪುಟಕವಾಟಂ	ಮುಚ್ಚಿದ ದಳಗಳೆಂಬ ಬಾಗಿಲುಗಳ

ಕುವಲಯಂ	ಕನ್ನೈದಿಲೆಯನ್ನು (ನೀಲೋತ್ಪಲವನ್ನು)
ಪ್ರತ್ಯೂಷೇ ಜಹಾತಿ	ಪ್ರಾತಃ ಕಾಲದಲ್ಲಿ ಬಿಡುತ್ತದೆ.
ನಿಶಿ ಚ	ರಾತ್ರಿಯಲ್ಲಾದರೋ
ತತ್ ವಿಘಟಯ್ಯ	ಆ (ನೀಲೋತ್ಪಲಗಳನ್ನು) ಬಾಗಿಲು ತೆರೆದು
ಪ್ರವಿಶತಿ	ಪ್ರವೇಶ ಮಾಡುತ್ತವೆ.

ತಾತ್ಪರ್ಯ

ಹೇ ಅಪರ್ಣೆ, ನಿನ್ನ ಕಣ್ಣುಗಳು ಕಿವಿಯವರೆಗೂ ಚಾಚಿಕೊಂಡಿವೆ. ಈ ನೋಟವನ್ನು ನೋಡಿದ ಹೆಣ್ಣು ಮೀನುಗಳು, ತಾವು ದೇವಿಯ ಕಣ್ಣಿನ ಸೌಂದರ್ಯವನ್ನು ಕದ್ದಿರುವ ಬಗ್ಗೆ ಚಾಡಿ ಹೇಳಲು ಈ ಕಣ್ಣುಗಳು ಕಿವಿಯ ಹತ್ತಿರ ಹೋಗಿವೆ ಎಂದು ಹೆದರಿಕೊಂಡು, ನೀರಿನಲ್ಲಿ ತಮ್ಮ ಕಣ್ಣು ರೆಪ್ಪೆಮುಚ್ಚದೆ ಅಡಗಿಕೊಂಡಿವೆ. ಇದು ಖಚಿತದ ಮಾತು. ಅಲ್ಲದೆ ನಿನ್ನ ಕಣ್ಣುಗಳ ಕಾಂತಿಯು ರಾತ್ರಿಯಲ್ಲಿ ಅರಳುವ ಕನ್ನೈದಿಲೆಯ ದಳಗಳೆಂಬ ಬಾಗಿಲುಗಳನ್ನು ತೆರೆದು ಒಳಗೆ ಪ್ರವೇಶಿಸಿ ಮತ್ತೆ ಪ್ರಾತಃಕಾಲದಲ್ಲಿ ಆ ದಳಗಳೆಂಬ ಬಾಗಿಲುಗಳು ಮುಚ್ಚಲ್ಪಡುವ ಕನ್ನೈದಿಲೆಯನ್ನು ತೊರೆದು ಬಿಡುತ್ತವೆ.

ಇಲ್ಲಿ ದೇವಿಯ ಕಣ್ಣುಗಳನ್ನು ಮೀನಾಕ್ಷಿ ಎಂದೂ ನೀಲೋತ್ಪಲ ಎಂದೂ ಕವಿಗಳು ವರ್ಣಿಸುವುದರ ಬಗ್ಗೆ ಕಲ್ಪನೆಗಳನ್ನು ಮಾಡಲಾಗಿದೆ. ಭಗವತಿಯ ಕಣ್ಣುಗಳು ಕಿವಿಯವರೆಗೆ ಹಬ್ಬಿರುವುದನ್ನು ಕಂಡು ದೇವಿಯ ಕಿವಿಗಳಲ್ಲಿ ಚಾಡಿ ಹೇಳಲು ಬಂದಿವೆ ಎಂದು ಮೀನುಗಳು ಹೆದರಿ ನೀರಿನಲ್ಲಿ ಅಡಗಿಕೊಂಡಿವೆ. ಇನ್ನು ಲಕ್ಷ್ಮಿಯು ರಾತ್ರಿ ಹೊತ್ತು ನೀಲಕಮಲಗಳಲ್ಲಿ ಇದ್ದವಳು ಹಗಲು ಹೊತ್ತು ನೀಲ ಕಮಲಗಳನ್ನು ತ್ಯಜಿಸಿ ಎಲ್ಲಿಗೋ ಹೋಗಿ ಬಿಡುತ್ತಾಳೆ. ರಾತ್ರಿ ಹೊತ್ತು ದಳಗಳೆಂಬ ಕೋಟೆಯ ಬಾಗಿಲುಗಳನ್ನು ತೆರೆದು ನೀಲೋತ್ಪಲದಲ್ಲಿ ಬಂದು ಸೇರಿಕೊಳ್ಳುತ್ತಾಳೆ.

ಪದ್ಯಾನುವಾದ

ತಾಯೇ, ಅಪರ್ಣಾ ! ಸಮೀಪಕರ್ಣಾಂತವಹ
ನಿನ್ನ ನಯನದ ಚಾಡಿಕೋರತನಕಳುಕುತ್ತ
ಶಫರಮೀನ್ಗಳು ತೆರೆದೆ ಕಣ್ಣು ತೆರೆದಂತೆ ನೀರೊಳು ಮುಳುಗಿರುವುವು ಲೇಸು;
ಮೇಣೆತ್ತ ನೈದಿಲೆಯ ಅಂದಚೆಂದದ ಸಿರಿಯು,
ಮುಚ್ಚಿಕೊಳಲೆಸಳ ಬಾಗಿಲು, ಹೂವ ತೊರೆಯುತ್ತ
ಮತ್ತಿರುಳಿನಲಿ ಎಸಳ ಬೆಸುಗೆಯನು ಬಿಡಿಸುತ್ತ ಒಳಸೇರಿಕೊಂಡಿಹುದು
॥ ೫೬ ॥

ಟಿಪ್ಪಣಿಗಳು

೧. ಈ ಶ್ಲೋಕದಲ್ಲಿ ದೇವಿಯ ಕಣ್ಣುಗಳು ಕಿವಿಗಳವರೆಗೆ ಹಬ್ಬಿ ವಿಶಾಲವಾಗಿವೆ, ಮೀನಿನಂತೆ ಸುಂದರವಾಗಿವೆ, ಮೀನಾಕ್ಷಿ ಎನಿಸಿಕೊಂಡಿದ್ದಾಳೆ, ಕನ್ನೈದಿಲೆ ಹೂವಿನ ಸೌಂದರ್ಯದಂತೆ ಆಕೆಯ ಕಣ್ಣುಗಳು ಇರುವುದರಿಂದ ನೀಲೋತ್ಪಲಾಕ್ಷಿ ಎನಿಸಿಕೊಂಡಿದ್ದಾಳೆ ಎಂದು ದೇವಿಯ ಕಣ್ಣಿನ ಸೌಂದರ್ಯವನ್ನು ವರ್ಣಿಸಲಾಗಿದೆ. ದೇವಿಯ ಕಣ್ಣಿನ ಸೌಂದರ್ಯದ ಅತಿಶಯವನ್ನು ಕಂಡು ಮೀನುಗಳು ನೀರಿನಲ್ಲಿ ಮುಳುಗಿವೆ. ಕನ್ನೈದಿಲೆಗಳು ಹಗಲಿನಲ್ಲಿ ಮುದುಡಿವೆ. ದೇವಿಯ ಕಣ್ಣುಗಳು ಮುದುಡದೆ ಮುಳುಗದೆ ಕಾಂತಿಯುಕ್ತವಾಗಿ ನಿರಂತರ ವಾಗಿ ಬೆಳಗುತ್ತಿವೆ. ಆದ್ದರಿಂದ ಮೀನುಗಳಿಗೆ ಕನ್ನೈದಿಲೆಗಳಿಗೆ ಹೋಲಿಸುವುದು ತರವಲ್ಲ ಏಕೆಂದರೆ ಅವುಗಳ ಚಲನ ಸೌಂದರ್ಯ (ಮೀನಿನದು), ಶಾಂತಿ ಸೌಂದರ್ಯ (ನೀಲ ಕಮಲದ್ದು) ಗಳಿಗಿಂತ ದೇವಿಯ ನಯನ ಸೌಂದರ್ಯ ಅತಿಶಯವಾದುದು ಎಂದು ಆದಿಶಂಕರರು ಈ ಶ್ಲೋಕದಲ್ಲಿ ಹೇಳುತ್ತಿದ್ದಾರೆ.

೨. ಮೀನಿನ ಕಣ್ಣಿಗೆ ರೆಪ್ಪೆ ಇಲ್ಲ. ಅದು ಸದಾ ತೆರೆದಿರುವುದು. ಆದರೂ ಅದಕ್ಕೂ ಕೂಡ ಸೌಂದರ್ಯ ಬಂದಿರುವುದು ದೇವಿಯ ಅನುಗ್ರಹದಿಂದಲೇ. ಆದ್ದರಿಂದ ದೇವಿಯ ಕಣ್ಣಿನ ಅಂದರೆ ಕೃಪಾದೃಷ್ಟಿಯ ಚೆಲುವು ಇನ್ನೂ ಅಪ್ರತಿಮ ಅನುಪಮ ಎಂಬುದು ಕವಿಯ ಅಭಿಪ್ರಾಯ.

ಕನ್ನೈದಿಲೆಯು ರಾತ್ರಿಯಲ್ಲಿ ಅರಳಿ ಹಗಲಲ್ಲಿ ಬಾಡುತ್ತದೆ. ಆದರೆ ದೇವಿಯ ಪದ್ಮನಯನಗಳು ನಿರಂತರವಾಗಿ ಸದಾ ಸೌಭಾಗ್ಯ ದಾಯಕವಾಗಿ ಅರಳಿರುವುವು.

(ರ–ಪುಟ ೬೪)

೩. ಈ ಶ್ಲೋಕದಲ್ಲಿ ದೇವಿಯನ್ನು ಅಪರ್ಣೆ ಎಂದು ಕರೆದಿದೆ. "ಅಪರ್ಣಾನಾಮ" ಲಲಿತಾ ಸಹಸ್ರನಾಮದ ೧೪೫ನೇ ಶ್ಲೋಕದಲ್ಲಿ ೭೫೪ನೇ ನಾಮವಾಗಿದೆ.

ಅಪರ್ಣಾ ಎಂದರೆ ತಪಸ್ಸಿನ ಕಾಲದಲ್ಲಿ ಎಲೆಯನ್ನೂ ತಿನ್ನದವಳು. ದೇವಿಯು ಶಿವನನ್ನು ಒಲಿಸಿಕೊಳ್ಳಲು ತಪಸ್ಸು ಮಾಡುತ್ತಿದ್ದಾಗ ಮರದಿಂದ ಒಣಗಿದ ಎಲೆಗಳನ್ನೂ ತಿನ್ನುತ್ತಿರಲಿಲ್ಲ. ಅದನ್ನು ಕಂಡು ದೇವತೆಗಳು ಅವಳನ್ನು ಅಪರ್ಣಾ ಎಂದು ಕರೆದರು.

(ಕಾಳಿಕಾ ಪುರಾಣ)

ಋಣ = ಸಾಲವನ್ನು ಅಪ = ಹೋಗಲಾಡಿಸುವಳು ಅಪರ್ಣಾ ಅಂದರೆ ಜೀವನ್ಮುಕ್ತನಾದವನಿಗೆ ದೇವಋಣ, ಪಿತೃಋಣ, ಋಷಿಋಣ ಎಂಬೀ ಋಣಶೇಷಗಳೂ ಶೇಷಾಂಶವೂ ಉಳಿಯುವುದಿಲ್ಲ, ಆ ರೀತಿ ಋಣವನ್ನು ದೇವಿ ಹೋಗಲಾಡಿಸುವುದರಿಂದ ಅವಳು ಅಪರ್ಣಾ.

ದೇವಿಪ್ರಪಂಚವನ್ನು ಲಯ ಮಾಡುವಾಗ ಕಾಪಾಡುವವರೇ ಇಲ್ಲವಾಗಿ ಶೇಷಾಂಶವೇ ಉಳಿಯದ ಸ್ಥಿತಿ ಉಂಟು ಮಾಡುವುದರಿಂದ ಅಪರ್ಣೆ ಎಂದು ಹೆಸರು.

ಪರ್ಣ ಎಂಬ ಶಬ್ದಕ್ಕೆ ಪತನ ಎಂದು ಅರ್ಥವಿದೆ. ಅಪರ್ಣ ಎಂದರೆ ಪತನವಿಲ್ಲದವಳು, ಶಾಶ್ವತ ರೂಪಿ ಎಂದರ್ಥ


(ಲ–ಕೂ ಪು ೨೨೫)

(ಲ–ಯ ೨೩೦)

೪. **ಈ ಶ್ಲೋಕದ ಪೂರ್ವಾರ್ಧದಲ್ಲಿ ಉತ್ಪ್ರೇಕ್ಷಾಲಂಕಾರವಿದೆ.** ಏಕೆಂದರೆ ಹೆಣ್ಣು ಮೀನುಗಳು ನೀರಿನಲ್ಲಿರುವುದು ಮತ್ತು ನಿಮೇಷ ರಹಿತವಾದುದು ಸ್ವಭಾವ ಸಿದ್ಧವಾಗಿದೆ. ಅದನ್ನು ಬೇರೆ ಪ್ರಕಾರದಿಂದ ಉತ್ಪ್ರೇಕ್ಷೆ ಮಾಡಲಾಗಿದೆ. ಇನ್ನು **ಪದ್ಯದ ಉತ್ತರಾರ್ಧದಲ್ಲಿ ಅತಿಶಯೋಕ್ತಿ ಅಲಂಕಾರವಿದೆ.** ಏಕೆಂದರೆ ನೇತ್ರಕಾಂತಿಯು ನೇತ್ರವನ್ನು ಬಿಟ್ಟು ಕನ್ನೈದಿಲೆಗಳಲ್ಲಿ ಪ್ರೀತ್ಯತಿಶಯದ ಕಾರಣದಿಂದ ರಾತ್ರಿ ಕಾಲದಲ್ಲಿ ಅವುಗಳ ರಕ್ಷಣೆಗಾಗಿ ಅವುಗಳ ಒಳಗೆ ಹೋಗಿ ಇರುವಿಕೆ ಮತ್ತು ಹಗಲು ನೈದಿಲೆಯನ್ನು ಬಿಟ್ಟು ನೇತ್ರದಲ್ಲಿಯೇ ಇರುವಿಕೆ ಎಂಬುದು ಅಸಂಭವವಾದುದು. ಹೀಗೆ ಸಂಬಂಧವಿಲ್ಲದಿದ್ದರೂ ಸಂಬಂಧ ಕಲ್ಪಿಸಿ ವರ್ಣನೆ ಮಾಡಲಾಗಿದೆ. ನೀಲೋತ್ಪಲವು ರಾತ್ರಿಯಲ್ಲಿ ವಿಕಾಸಗೊಳ್ಳುವುದು ಸ್ವಭಾವಸಿದ್ಧವಾದುದು ಮತ್ತು ಮುದುಡಿಕೊಳ್ಳುವುದೂ ಸಹಜವಾದುದು. ಇದು ಸಖಿಯಾದ ಲಕ್ಷ್ಮೀ ಕಾಂತಿಯಿಂದ ಕೃತವಾದುದು ಎಂದು ಸಂಬಂಧವಿಲ್ಲದಿದ್ದರೂ ಸಂಬಂಧವನ್ನು ಕಲ್ಪಿಸಿ ವರ್ಣನೆ ಮಾಡಿರುವುದರಿಂದ ಮತ್ತೊಂದು ಅತಿಶಯೋಕ್ತಿ ಅಲಂಕಾರವಾಗಿದೆ. ಈ ಎರಡಕ್ಕೂ ಅನುಸೃಷ್ಟಿಯಾಗಿದೆ.

(ಶೇ. ಪುಟ ೧೮೬)

ಯಂತ್ರಾರಾಧನೆ (ಶ್ಲೋಕ ೫೬)



ಯಂತ್ರ ರಚನೆ : ಚಿನ್ನದ ರೇಖೆಯಲ್ಲಿ ಪ್ರಶ್ನಾರ್ಥಕ ಚಿಹ್ನೆಯನ್ನು ಹೋಲುವ ರೀತಿಯ ಯಂತ್ರವನ್ನು ಚಿತ್ರದಲ್ಲಿರುವಂತೆ ಬರೆಯಬೇಕು. ನಡುವೆ ಯಂ ಎಂಬ ಬೀಜಾಕ್ಷರವನ್ನು ೩ ಬಾರಿ ಒಂದರ ಕೆಳಗೆ ಒಂದನ್ನು ಬರೆಯಬೇಕು. ಚಿನ್ನದ ರೇಖೆಗೆ ಬದಲಾಗಿ ಮೊಸಳೆ ಇಲ್ಲವೇ ಮೀನಿನ ಬುರುಡೆ ಅಥವಾ ದಂತದ ಮೇಲೆ ಯಂತ್ರವನ್ನು ಬರೆದು ಪೂಜಿಸಬಹುದು.

ಪೂಜೆ : ಈಶಾನ್ಯ ದಿಕ್ಕಿಗೆ ಅಭಿಮುಖವಾಗಿ ಕುಳಿತು ಕೆಂಪು ಹೂಗಳಿಂದ ಲಲಿತಾ ತ್ರಿಶತೀ ಅರ್ಚನೆಯನ್ನು ಮಾಡಬೇಕು.

ನೈವೇದ್ಯ : ಜೇನುತುಪ್ಪ.

ಜಪ : ೪೫ ದಿನಗಳ ಕಾಲ ಪ್ರತಿದಿನ ೨೦೦೦ ಸಲ ಜಪಿಸಿ ಯಂತ್ರವನ್ನು ಧರಿಸಬೇಕು.

ಫಲ : **ದೇವಲೋಕಕ್ಕೆ ಪ್ರವೇಶಾವಕಾಶ; ಅನಾವೃಷ್ಟಿ ನಿವಾರಣೆ.**

ಶ್ಲೋಕ–೫೭

ದೇವಿಯ ಕೃಪಾಕಟಾಕ್ಷ ವರ್ಣನೆ

ದೃಶಾ ದ್ರಾಘೀಯಸ್ಯಾ ದರದಲಿತನೀಲೋತ್ಪಲರುಚಾ
ದವೀಯಾಂಸಂ ದೀನಂ ಸ್ನಪಯ ಕೃಪಯಾ ಮಾಮಪಿ ಶಿವೇ ।
ಅನೇನಾಯಂ ಧನ್ಯೋ ಭವತಿ ಚ ತೇ ಹಾನಿರಿಯತಾ
ವನೇ ವಾ ಹರ್ಮ್ಯೇ ವಾ ಸಮಕರನಿಪಾತೋ ಹಿಮಕರಃ ॥ ೫೭ ॥

ಪದವಿಭಾಗ

ದೃಶಾ, ದ್ರಾಘಿಯಸ್ಯಾ, (ದರದಲಿತನೀಲೋತ್ಪಲರುಚಾ) = ದರದಲಿತನೀಲ + ಉತ್ಪಲರುಚಾ, ದವೀಯಾಂಸಂ, ದೀನಂ, ಸ್ನಪಯ, ಕೃಪಯಾ, (ಮಾಮಪಿ) = ಮಾ + ಅಪಿ, ಶಿವೇ, (ಅನೇನಾಯಂ) = ಅನೇನ + ಅಯಂ, (ಧನ್ಯೋ) = ಧನ್ಯಃ, ಭವತಿ, ನ, ಚ, ತೇ, (ಹಾನಿರಿಯತಾ) = ಹಾನಿಃ + ಇಯತಾ, ವನೇ, ವಾ, ಹರ್ಮ್ಯೇ ವಾ, (ಸಮಕರನಿಪಾತೋ) = ಸಮಕರನಿಪಾತಃ, ಹಿಮಕರಃ

ಅನ್ವಯಾರ್ಥ

ಶಿವೇ	ಸರ್ವೇ ಮಂಗಳೇ
ದ್ರಾಘೀಯಸ್ಯಾ	ಅತ್ಯಂತ ದೀರ್ಘವಾದ
ದರದಲಿತನೀಲೋತ್ಪಲರುಚಾ	ಸ್ವಲ್ಪವಾಗಿ ಅರಳಿದ – ಕನ್ನೈದಿಲೆಯ ಕಾಂತಿದೇವಿಯಂತೆ ಸೌಂದರ್ಯವುಳ್ಳ
ದೃಶಾ	ನಿನ್ನ ಕಟಾಕ್ಷದಿಂದ
ದೀನಂ	ದರಿದ್ರನಾದ
ಮಾಮಪಿ ಕೃಪಯಾ	ನನ್ನನ್ನು ಕೂಡ ದಯೆ ತೋರಿ
ಸ್ನಪಯ	ಸ್ನಾನ ಮಾಡಿಸು (ನೆನೆಯಿಸು)
ಅಯಂ	ಇವನು (ನಾನು)
ಅನೇನ	ಹೀಗೆ ಸ್ನಾನ ಮಾಡಿಸೋಣದರಿಂದ
ಧನ್ಯೋ ಭವತಿ	ಪುಣ್ಯಶಾಲಿಯಾಗುತ್ತಾನೆ
ಇಯತಾ	ಇಷ್ಟಮಾತ್ರದಿಂದ
ತೇ	ನಿನಗೆ

ಹಾನಿಃ	ನಷ್ಟವು
ನ ಚ	ಇಲ್ಲವೇ ಇಲ್ಲ
ತಥಾ ಹಿ	ಹಾಗೆಯೇ ಸರಿ (ಏಕೆಂದರೆ)
ಹಿಮಕರಃ	ಶೀತ ಕಿರಣನಾದ ಚಂದ್ರನು
ವನೇ	ಕಾಡಿನಲ್ಲಾದರೂ
ಹರ್ಮ್ಯೆ ವಾ	ಉಪ್ಪರಿಗೆ ಮನೆಯಲ್ಲಾದರೂ
ಸಮಕರನಿಪಾತಃ	ಸಮಾನವಾದ ಕಿರಣಗಳ ಹರಡುವಿಕೆ ಯುಳ್ಳವು
ಭವತಿ (ಹಿ)	ಆಗಿದ್ದಾನೆಯಷ್ಟೆ

ತಾತ್ಪರ್ಯ

ಹೇ ಸರ್ವಮಂಗಳೆ, ಸ್ವಲ್ಪವೇ ಅರಳಿದ ಕಪ್ಪು ನೈದಿಲೆಯಂತೆ ಕಾಂತಿಯುಳ್ಳ ನಿನ್ನ ಸುಂದರವಾದ ಕಣ್ಣುಗಳ ಕಟಾಕ್ಷದಿಂದ ಕರುಣಾರಸ ದೃಷ್ಟಿ ಬೀರಿ ಬಹು ದೂರದಲ್ಲಿರುವ ದರಿದ್ರನಾದ ನನ್ನ ಮೇಲೆ ದಯಾವರ್ಷವನ್ನು ಸುರಿಸು. ಅಷ್ಟು ಮಾತ್ರ ನೀನು ದಯೆ ತೋರಿದರೆ ನಿನಗೆ ನಷ್ಟವೇನು ಆಗದು. ಏಕೆಂದರೆ ಶೀತಕಿರಣನಾದ ಚಂದ್ರನು ಕಾಡಾಗಲಿ, ಉಪ್ಪರಿಗೆ ಮನೆಯಾಗಲಿ ಸಮಾನವಾಗಿ ಅವುಗಳ ಮೇಲೆ ತನ್ನ ಬೆಳದಿಂಗಳನ್ನು ಹರಡುತ್ತಾನೆ. ಇದರಿಂದ ಚಂದ್ರನ ಕಾಂತಿಗೇನೂ ಕುಂದಿಲ್ಲ.

ಪದ್ಯಾನುವಾದ

ಹೇ ಶಿವೇ! ಅರೆಯರಳ್ದ ನೀಳ ಕನ್ನೈದಿಲೆಯ
ಕಮನೀಯತೆಯ ನಿನ್ನ ಕಡೆಗಣ್ಣ ನೋಟದಾ
ಕಾಂತಿ ಬಲು ದೂರವಿಹ ದೀನನೆನ್ನನು ಕೃಪಾರಸದ ಮಜ್ಜನಗೈಸಲಿ;
ಅದರಿಂದ ನಾ ಧನ್ಯನಾಗುವೆನು, ನಿನಗಿನಿತು
ಹಾನಿಯಾಗದು, ತಾಯೆ; ಎಂತೆನಲು ತಂಗದಿರ
ತನ್ನ ತಂಬೆಳಕನುಪ್ಪರಿಗೆಯಡವಿಗಳಲ್ಲಿ ಸಮನಾಗಿ ಸುರಿವನಲ್ತೆ ॥ ೫೭ ॥

ಟಿಪ್ಪಣಿಗಳು

ಅಲಂಕಾರ

೧. ಈ ಶ್ಲೋಕದಲ್ಲಿ ಅರ್ಥಾಂತರನ್ಯಾಸಾಲಂಕಾರವಿದೆ. ಏಕೆಂದರೆ ಸಾಮಾನ್ಯ ವೃತ್ತಾಂತದಿಂದ ವಿಶೇಷ ವೃತ್ತಾಂತವನ್ನು ಸಮರ್ಥನೆ ಮಾಡಲಾಗಿದೆ. ಸರ್ವ ಸಾಧಾರಣವಾಗಿ ನೋಡುವುದು ದೇವಿಯ

ಸರ್ವೋತ್ಕರ್ಷಕ್ಕೆ ಹೇತುವಾಗಿರುವುದರಿಂದ ತನ್ನವನು ಎಂಬುದಾಗಿ ಭಾವಿಸಿ ನೋಡಬೇಕಾದ ಅವಶ್ಯಕತೆ ಇಲ್ಲವೆಂಬುದಾಗಿ ಧ್ವನಿತವಾಗುತ್ತದೆ.

(ಶೇ. ಪುಟ ೧೯೮)

೨. ಇಲ್ಲಿ ಸ್ವಭಾವೋಕ್ತಿ ಅಲಂಕಾರವಿದೆ. ಶ್ರೀ ದೇವಿಯ ಮೂರು ನೇತ್ರಗಳಲ್ಲಿ ಒಂದರ ರೂಪ ಚಂದ್ರ. ಆದ್ದರಿಂದ ಶ್ರೀದೇವಿಗೆ ಇದ್ದ ಹಾಗೆ ಸರ್ವಸಮಭಾವ ಚಂದ್ರನಿಗೂ ಸಹಜ. ಆದ್ದರಿಂದ ಸ್ವಭಾವೋಕ್ತಿ ಅಲಂಕಾರ.

(ತು–ಪುಟ ೩೩೪)

೩. ಲಲಿತಾ ಸಹಸ್ರನಾಮದಲ್ಲಿ ದೇವಿಯನ್ನು ದಯಾಮೂರ್ತಿ (೫೮೧) ಕೃಪಾರಸ ಸಾಗರಾ ಸಾಂದ್ರಕರುಣಾ ಇತ್ಯಾದಿಯಾಗಿ ಕರೆಯಲಾಗಿದೆ.

(ಲ–ಆ–ಪುಟ ೧೧೩)

ಯಂತ್ರಾರಾಧನೆ (ಶ್ಲೋಕ ೫೭)

ಶ್ರೀಂ

ಶ್ರೀಂ

ಯಂತ್ರ ರಚನೆ : ಚಿನ್ನದ ರೇಖೆನಲ್ಲಿ ತಯಾರಿಸಬೇಕು. ದೀರ್ಘ ಚತುರಶ್ರವನ್ನು ಬರೆದು ಅದರಲ್ಲಿ 'ಶ್ರೀಂ' ಬೀಜಾಕ್ಷರವನ್ನು ೨ ಬಾರಿ ಒಂದರ ಕೆಳಗೆ ಒಂದನ್ನು ಬರೆಯಬೇಕು.

ಪೂಜೆ : ಪೂರ್ವಾಭಿಮುಖವಾಗಿ ಕುಳಿತು ಯಂತ್ರದ ಮೇಲಿನ ಮಧ್ಯಭಾಗದಲ್ಲಿ ಕೆಂಪು ಹೂಗಳಿಂದ ಲಲಿತಾ ತ್ರಿಶತೀ ಅರ್ಚನೆಯನ್ನು ಯಂತ್ರದ ಕೆಳಗಿನ ಮಧ್ಯಭಾಗದಲ್ಲಿ ತಾವರೆ ದಳಗಳಿಂದ ಲಕ್ಷ್ಮೀ ಅಷ್ಟೋತ್ತರ ಅರ್ಚನೆಯನ್ನು ಮಾಡಬೇಕು.

ನೈವೇದ್ಯ : ಹಾಲುಕೀರು, ಜೇನುತುಪ್ಪ.

ಜಪ : ೬ ದಿನಗಳ ಕಾಲ ೧೦೦೦ ಬಾರಿ ಪ್ರತಿದಿನ ಶ್ಲೋಕವನ್ನು ಜಪಿಸಬೇಕು.

ಫಲ : **ಬಹುಭಾಗ್ಯ ಲಾಭ.**

ಶ್ಲೋಕ–೫೮

ದೇವಿಯ ಪಾಲಿಗಳ ವರ್ಣನೆ

ಅರಾಲಂ ತೇ ಪಾಲೀಯುಗಲಮಗರಾಜನ್ಯತನಯೇ
ನ ಕೇಷಾಮಾಧತ್ತೇ ಕುಸುಮಶರಕೋದಂಡಕುತುಕಮ್ ।
ತಿರಶ್ಚೀನೋ ಯತ್ರ ಶ್ರವಣಪಥಮುಲ್ಲಂಘ್ಯ ವಿಲಸನ್
ಅಪಾಂಗವ್ಯಾಸಂಗೋ ದಿಶತಿ ಶರಸಂಧಾನಧಿಷಣಾಮ್ ॥ ೫೮ ॥

ಪದವಿಭಾಗ

ಅರಾಲಂ, ತೇ, (ಪಾಲೀಯುಗಲಮಗರಾಜನ್ಯತನಯೇ) = ಪಾಲೀಯುಗಲಮ್ + ಅಗರಾಜನ್ಯತನಯೇ, ನ, (ಕೇಷಾಮಾಧತ್ತೆ) = ಕೇಷಾಮ್ + ಆಧತ್ತೇ, ಕುಸುಮಶರಕೋದಂಡಕುತುಕಮ್, (ತಿರಶ್ಚೀನೋ)=ತಿರಶ್ಚೀನಃ, ಯತ್ರ, (ಶ್ರವಣಪಥಮುಲ್ಲಂಘ್ಯ) = ಶ್ರವಣಪಥಮ್ + ಉಲ್ಲಂಘ್ಯ, ವಿಲಸನ್, (ಅಪಾಂಗ ವ್ಯಾಸಂಗೋ) = ಅಪಾಂಗ ವ್ಯಾಸಂಗಃ, ದಿಶತಿ, ಶರಶಂಧಾನಧಿಷಣಾಮ್.

ಅನ್ವಯಾರ್ಥ

ಅಗರಾಜನ್ಯ ತನಯೇ	ಪರ್ವತಗಳಿಗೆ–ದೊರೆಯಾದವನ (ಹಿಮವಂತನ) ಮಗಳೆ,
ತೇ	ನಿನ್ನ
ಅರಾಲಂ ಪಾಲೀಯುಗಲಂ	ಡೊಂಕಾದ (ಬಾಗಿದ) – ಕಪೋಲಗಳು (ಕಿವಿ–ಕಣ್ಣುಗಳ ಮಧ್ಯ ಪ್ರದೇಶ)
ಕುಸುಮಶರ ಕೋದಂಡ ಕುತುಕಮ್	ಮನ್ಮಥನ – ಬಿಲ್ಲೆಂಬ – ಭ್ರಾಂತಿಯನ್ನು
ಕೇಷಾಂ	ಯಾರಿಗೆ ತಾನೇ
ನ ಆಧತ್ತೇ	ಉಂಟು ಮಾಡುವುದಿಲ್ಲ ? (ಎಲ್ಲರಿಗೂ ಉಂಟು ಮಾಡುತ್ತದೆ.)
(ಯದ್ಯಸ್ಮಾತ್)	(ಯಾವ ಕಾರಣದ ದೆಸೆಯಿಂದ)
ಯತ್ರ ತಿರಶ್ಚೀನಃ	ಎಲ್ಲಿ (ಯಾವ ಕಿವಿಗಳ ಅಂಚಿನಲ್ಲಿ)
ವಿಲಸನ್	(ಅಡ್ಡಲಾಗಿ) ಪ್ರಕಾಶಿಸುತ್ತಿರುವ

ಅಪಾಂಗ ವ್ಯಾಸಂಗ	ದೀರ್ಘ ಕಟಾಕ್ಷವು (ಕಡೆಗಣ್ಣಿನ ನೋಟವು)
ಶ್ರವಣಪಥಮುಲ್ಲಂಘ್ಯ	(ಶ್ರವಣಪಥಂ + ಉಲ್ಲಂಘ್ಯ) ಕಿವಿಯ ದಾರಿಯನ್ನು ಉಲ್ಲಂಘಿಸಿ
ಶರಸಂಧಾನಧಿಷಣಾಂ	ಬಾಣ ಸಂಯೋಜನೆಯೆಂಬ ಭ್ರಮೆಯನ್ನು (ಬಿಲ್ಲಿಗೆ ಬಾಣ ಹೂಡಿದನೆನಪನ್ನು
	ಕೊಡುತ್ತದೆ
ದಿಶತಿ	(ಉಂಟುಮಾಡುತ್ತದೆ)

ತಾತ್ಪರ್ಯ

ಓ ಪರ್ವತರಾಜ ಪುತ್ರಿಯೇ, ನಿನ್ನ ಕಪೋಲಗಳೇ (ಪಾಲಿಗಳು) ಮನ್ಮಥನ ಬಿಲ್ಲು. ಕಿವಿಯವರೆಗೂ ಹರಡಿರುವ ಕಡೆಗಣ್ಣೋಟವೇ ಬಿಲ್ಲಿನಲ್ಲಿ ಹೂಡಿದ ಬಾಣ. ಬಾಗಿರುವ ನಿನ್ನೆರಡು ಸುಂದರವಾದ ಕಿವಿಯಾಭರಣಗಳ ಪ್ರದೇಶದ ಪಾಲಿ (ಕಪೋಲ) ವನ್ನು ಗಮನಿಸಿದರೆ ಕಿವಿಯೆಂಬ ಗಡಿಯನ್ನು ದಾಟಿ ಮುಂದೆ ಹೋಗಲು ಯತ್ನಿಸುವ ಕಡೆಗಣ್ಣೋಟ, ಬಿಲ್ಲಿನಲ್ಲಿ ಹೂಡಿದ ಬಾಣವೋ ಎಂಬ ಭ್ರಮೆಯನ್ನು ಉಂಟು ಮಾಡುತ್ತಿದೆ.

ಪದ್ಯಾನುವಾದ

ಹೇ ನಗಾಧಿಪತನಯೆ! ನಿನ್ನ ಕಿವಿಹಾಲೆಗಳ
ವಕ್ರತಾವೈಖರಿಯು ಕುಸುಮಶರನಿಕ್ಷುಕೋ-
ದಂಡಸೌಭಾಗ್ಯವನ್ನಾರಿಗಾದರು ತಾನು ಮಾಡದಿರುವುದೆ ನೋಡಲು ?
ಆ ಹಾಲೆಗಳ ನಡುವೆ ಹಾಯ್ದು ಬೆಳಗುತ್ತಿರುವ
ನಿನ್ನ ಕಡೆಗಣ್‌ನೋಟ ತಾನಲ್ಲಿ ಕೂಡುವೆಡೆ
ಅಂಬಹೂಡುವ ತೋರಿಕೆಯ ತೆರನ ನೋಡುವರ ಮನಕೆ
ತೋರ್ಪಂತಿರುವುದು ॥ ೫೮ ॥

ಟಿಪ್ಪಣಿಗಳು

ಪಾಲೀಯುಗಲಂ

೧. ಎರಡು ಕಣ್ಣುಗಳಿಗೂ ಎರಡು ಕಿವಿಗಳಿಗೂ ಮಧ್ಯಭಾಗದಲ್ಲಿರುವ ಕೆನ್ನೆಯ ಭಾಗ. ಇದನ್ನು ಕಣತಲ (ತಮ್ಮಲು) ಎಂದು ಕರೆಯುತ್ತಾರೆ ಎಂದು ತೆಲುಗು ವ್ಯಾಖ್ಯಾನಕಾರರು ಹೇಳುತ್ತಾರೆ.
(ಪಂ–ಪುಟ ೩೫೬)

೨. ಕಪೋಲಗಳಿಗೆ ಸೇರಿದ ಭಾಗ (ಕಣ್ಣು-ಕಿವಿಗಳ ಮಧ್ಯಪ್ರದೇಶ (ಪ-ಪುಟ ೮೭)

ಎರಡು ಕಿವಿಗಳ ಬಾಗು (ಜ-ಪು ೭೮) ಎರಡು ಕಿವಿಗಳ ಎರಡು ಕಣ್ಣುಗಳ ಮಧ್ಯಭಾಗ (ಶೇ-ಪು ೧೯೮) ಕಿವಿಯ ಬಾಗಿದ ಅಂಚುಗಳು (ಶಂ-ಪು. ೫೫) ಕಿವಿಯ ಒಡವೆಗಳೆರಡು (ಗ-ಪು ೬೪) ಇತ್ಯಾದಿಯಾಗಿ ಕನ್ನಡ ವ್ಯಾಖ್ಯಾನಕಾರರು ಅರ್ಥೈಸಿದ್ದಾರೆ.

೩. ಗಣೇಶ ಹೋಬಳಿ ಅವರು ಈ ಬಗ್ಗೆ ಕೊಟ್ಟಿರುವ ಟಿಪ್ಪಣಿ ಹೀಗಿದೆ: “ಪಾಲೀ ಶಬ್ದಕ್ಕೆ ಕಿವಿಯ ಅಂಚುಗಳೆಂದೂ ಹುಬ್ಬುಗಳೆಂದೂ” ವ್ಯಾಖ್ಯಾನಕಾರರು ಅರ್ಥ ಹೇಳಿದ್ದಾರೆ. ಆ ಶಬ್ದಕ್ಕೆ ಹುಬ್ಬು ಎಂಬ ಅರ್ಥವು ಕೋಶಗಳಲ್ಲೆಲ್ಲಿಯೂ ಇಲ್ಲ. ಉಳಿದ ಅರ್ಥಗಳು ಹೊಂದುವುದಿಲ್ಲ. ಪಾಲಿ ಎಂದರೆ ಡೊಂಕಾದ ಕರ್ಣಾಭರಣ ವಿಶೇಷ. “ಪಾಲೀಪ್ರವಾಲೀ ಕರ್ಣಾಂಗೀ ಕರ್ಣಕೋಟೀ ವಿಭೂಷಣೇ” ಎಂದು ವಿಶ್ವಪ್ರಕಾಶ ಕೋಶದಲ್ಲಿದೆ. ಅರುಣಾಮೋದಿನೀ, ಆನಂದಗಿರಿಯ ಡಿಂಡಿಮ ಭಾಷ್ಯ ಎಂಬ ವ್ಯಾಖ್ಯಾನಗಳು ಕರ್ಣಾಭರಣಗಳೆಂದೇ ಅರ್ಥವನ್ನು ಹೇಳಿವೆ. (ಗ-ಪುಟ ೬೫).

೪. ಪಾಲೀ ೧) ಅಂಚು, ತುದಿ, ೨) ಪಂಕ್ತಿ, ಸಾಲು, ಶ್ರೇಣೀ, ಕಿವಿಯ ಅಗ್ರಭಾಗ, ಕಿವಿಯ ತುದಿ ಕಿವಿಯ ಹಾಲೆ ಎಂಬ ಅರ್ಥವನ್ನು ಪ್ರಶಂಸೆ, ಹೊಗಳಿಕೆ ಸೇತುವೆ, ಪ್ರಸ್ಥ, ತೊಡೆ ಮೊದಲಾದ ಇತರ ಅರ್ಥಗಳನ್ನು ಶಬ್ದಾರ್ಥ ಕೌಸ್ತುಭ ಶಬ್ದಕೋಶದಲ್ಲಿ (ಪುಟ ೧೭೮೧) ಹೇಳಿದೆ.

ಹೀಗಾಗಿ ಪಾಲಿ ಎಂಬ ಪದವನ್ನೇ ಕನ್ನಡದಲ್ಲಿ ಬಳಸಿದೆ. ಎರಡು ಕಿವಿಗಳಿಗೂ ಎರಡು ಕಣ್ಣುಗಳ ತುದಿಗೂ ನಡುವೆ ಇರುವ ಕಪೋಲಕ್ಕೆ ಸೇರಿದ ಭಾಗ ಎಂಬ ವಿವರಣೆ ಇದೆಯೇ ಹೊರತು ಕನ್ನಡದಲ್ಲಿ ಇದಕ್ಕೆ ಸ್ವತಂತ್ರ ಪದ ಇದ್ದಂತೆ ಕಾಣದು.

–ಅನಾಜಿ ಟಿಪ್ಪಣಿ

೫. ಈ ಶ್ಲೋಕದಲ್ಲಿ ದೇವಿಯ ಕಣ್ಣಿನ ವರ್ಣನೆ ಇದೆ. ಕಣ್ಣು ಹಾಗೂ ಕಿವಿಗಳ ಮಧ್ಯದ ಪಾಲೀಯುಗವು ಬಾಗಿರುವ ಮನ್ಮಥನ ಬಿಲ್ಲಾದರೆ ಕಿವಿಯವರೆಗೂ ಮುಟ್ಟಿರುವ ಕಣ್ಣು ಬಿಲ್ಲಿನಲ್ಲಿ ಹೂಡಿದ ಬಾಣ ಎಂದು ಭಾವ.


(ಶ್ರೀ-ಪುಟ ೨೬೧)

ಅಲಂಕಾರ

೬. ಕಡೆಗಣ್ಣೋಟವು ಮನ್ಮಥನ ಬಾಣ ಎಂಬ ಭ್ರಮೆಯನ್ನುಂಟು ಮಾಡುವುದರಿಂದ ಇಲ್ಲಿ **ಭ್ರಾಂತಿಮದಲಂಕಾರವಿದೆ.** ಪಾಲ್ಕೀಯುಗಳದ ಆಕಾರ ಮನ್ಮಥನ ಬಿಲ್ಲು ಎಂಬ ಸಂಶಯ ಪೂರ್ವಕವಾದ ಭಾವ ಉಂಟಾಗುವುದರಿಂದ **ಸಂದೇಹಾಲಂಕಾರ ವಿದೆ.**

(ಶೇ–ಪುಟ ೧೯೯)

ಯಂತ್ರಾರಾಧನೆ (ಶ್ಲೋಕ ೫೮)



ಯಂತ್ರ ರಚನೆ : ಬೆಳ್ಳಿಯ ತಟ್ಟೆಯಲ್ಲಿ ಕುಂಕುಮದಿಂದ ಬರೆಯಬೇಕು. ಆರು ಮೂಲೆಗಳಲ್ಲಿ ತ್ರಿಶೂಲಗಳಿರುವಂತೆ ಷಟ್ಕೋಣ ಬರೆದು, ಮಧ್ಯದಲ್ಲಿ 'ಶ್ರೀಂ' ಬೀಜಾಕ್ಷರವನ್ನು ಷಟ್ಕೋಣಗಳ ಮಧ್ಯೆ ಕ್ಲೀಂ ಬೀಜಾಕ್ಷರವನ್ನು ಬರೆಯಬೇಕು.

ಪೂಜೆ : ಲಲಿತಾ ಸಹಸ್ರನಾಮ ಕುಂಕುಮಾರ್ಚನೆ ಮಾಡಬೇಕು.

ನೈವೇದ್ಯ : ಜೇನುತುಪ್ಪ.

ಜಪ : ೪೫ ದಿನಗಳ ಕಾಲ ಪ್ರತಿ ದಿನ ೧೦೦೦ ಆವರ್ತಿ ಈ ಶ್ಲೋಕವನ್ನು ಜಪಿಸಬೇಕು.

ಫಲ : **ಸಕಲರಾಜವಶ್ಯತೆ. ಸರ್ವವ್ಯಾಧಿ ನಾಶ.**

ಶ್ಲೋಕ–೫೯

ದೇವಿಯ ಬೆಂಡೋಲೆಗಳ ವರ್ಣನೆ

ಸ್ಫುರದ್ಗಂಡಾಭೋಗಪ್ರತಿಫಲಿತತಾಟಂಕಯುಗಲಂ
ಚತುಶ್ಚಕ್ರಂ ಮನ್ಯೇ ತವ ಮುಖಮಿದಂ ಮನ್ಮಥರಥಮ್ ।
[೧]ಯಮಾರುಹ್ಯ ದ್ರುಹ್ಯತ್ಯವನಿರಥಮರ್ಕೇಂದುಚರಣಂ
ಮಹಾವೀರೋ ಮಾರಃ ಪ್ರಮಥಪತಯೇ ಸಜ್ಜಿತವತೇ ॥ ೫೯ ॥

ಪಾಠಾಂತರ

೧. (ಯಮಾರುಹ್ಯ) = ಯಮಾಶ್ರಿತ್ಯ (ಸು)

ಪದವಿಭಾಗ

(ಸ್ಫುರದ್ಗಂಡಾಭೋಗ) = ಸ್ಫುರತ್ + ಗಂಡ + ಆಭೋಗ, ಪ್ರತಿಫಲಿತತಾಟಂಕ ಯುಗಲಂ, ಚತುಶ್ಚಕ್ರಂ = ಚತುಃ + ಚಕ್ರಂ, ಮನ್ಯೇ, ತವ, (ಮುಖಮಿದಂ) = ಮುಖಮ್ + ಇದಮ್, ಮನ್ಮಥರಥಮ್, (ಯಮಾರುಹ್ಯ) = ಯಮ್ + ಆರುಹ್ಯ, (ದ್ರುಹ್ಯತ್ಯವನಿರಥಮರ್ಕೇಂದುಚರಣಂ) = ದ್ರುಹ್ಯತಿ + ಅವನಿರಥಮ್ + ಅರ್ಕ+ಇಂದುಚರಣಂ, (ಮಹಾವೀರೋ) = ಮಹಾವೀರಃ, ಮಾರಃ, ಪ್ರಮಥಪತಯೇ, ಸಜ್ಜಿತವತೇ.

ಅನ್ವಯಾರ್ಥ

(ಹೇ ಭಗವತೀ)	(ಎಲೈ ಪೂಜ್ಯಳಾದ ದೇವಿಯೇ)
ಸ್ಫುರದ್ಗಂಡಾಭೋಗ	(ಸ್ಫುರತ್ + ಗಂಡಾಭೋಗ) ಹೊಳೆಯುತ್ತಿರುವ ಕೆನ್ನೆಗಳಲ್ಲಿ
ಪ್ರತಿಫಲಿತ ತಾಟಂಕಯುಗಲಂ	ಪ್ರತಿಬಿಂಬಿತವಾಗಿ ಹೊಳೆಯುತ್ತಿರುವ ಚಕ್ರಾಕಾರವಾದ ಎರಡು ಕರ್ಣಾಭರಣಗಳನ್ನು (ಜೋಡಿ ಬೆಂಡೋಲೆಗಳನ್ನು)
ತವ ಇದಂ ಮುಖಂ	ನಿನ್ನ ಈ ಮುಖವನ್ನು

ಚತುಶ್ಚಕ್ರಂ ಮನ್ಮಥ ರಥಂ	ನಾಲ್ಕು ಚಕ್ರಗಳುಳ್ಳ ಮನ್ಮಥನ ರಥವನ್ನಾಗಿ
ಮನ್ಯೇ	ತಿಳಿಯುತ್ತೇನೆ.
ಯಮಾರುಹ್ಯ	ಯಂ+ಆರುಹ್ಯ ಯಾವ ರಥವನ್ನು ಹತ್ತಿ
ಮಾರಃ	ಮನ್ಮಥನು
ಮಹಾವೀರಃ (ಸನ್)	ಬಹಳ ಪರಾಕ್ರಮವುಳ್ಳವನಾಗಿ (ಮಹಾ ವೀರನಾಗಿ)
ಅವನಿರಥಂ ಅರ್ಕೇಂದುಚರಣಂ	ಭೂಮಿಯೆಂಬ ರಥವನ್ನು ಸೂರ್ಯಚಂದ್ರರ ಗಾಲಿಗಳನ್ನಾಗಿಯೂ
ಸಜ್ಜಿತವತೇ	ಸಿದ್ಧ ಮಾಡುತ್ತಿರುವ
ಪ್ರಮಥಪತಯೇ	ಪ್ರಮಥ ಗಣಗಳಿಗೆ - ಅಧಿಪತಿಯಾದ ಈಶ್ವರನನ್ನು ಸ್ವಾಧೀನಮಾಡಿಕೊಳ್ಳುತ್ತಾನೋ
ದ್ರುಹ್ಯತಿ	ದ್ರೋಹವೆಸಗುತ್ತಾನೆ. (ಶಿವನಿಗೆ ಬಾಣವನ್ನು ಹೊಡೆಯಲು ತೊಡಗುತ್ತಾನೆ)

ತಾತ್ಪರ್ಯ

ಓ ಭಗವತಿ ಪರಿಶುಭ್ರವಾಗಿ ಹೊಳೆಯುತ್ತಿರುವ ನಿನ್ನ ಕೆನ್ನೆಗಳಲ್ಲಿ ನಿನ್ನ ಕಿವಿಯ ಚಕ್ರಾಕಾರವಾದ ಎರಡು ಬೆಂಡೋಲೆಗಳು (ತಾಟಂಕಗಳು) ಪ್ರತಿಫಲಿತವಾಗಿ ನಾಲ್ಕು ಚಕ್ರಗಳಾಗಿವೆ. ಹೀಗೆ ನಾಲ್ಕು ಚಕ್ರಗಳ ಮನ್ಮಥ ರಥವನ್ನು ನಿನ್ನ ಮುಖ ಹೋಲುತ್ತದೆ. ಹೀಗೆ ೪ ಚಕ್ರಗಳಿಂದ ಕೂಡಿದ ನಿನ್ನ ಮುಖವೆಂಬ ರಥವನ್ನೇರಿ ಮಹಾವೀರನೆನಿಸಿದ ಮನ್ಮಥನು ವಿಜಯಯಾತ್ರೆಗೆ ಹೊರಡುತ್ತಾನೆ. ಸೂರ್ಯ ಚಂದ್ರರನ್ನೇ ರಥದ ಎರಡು ಚಕ್ರಗಳನ್ನಾಗಿ ಉಳ್ಳ ಭೂಮಿ ರೂಪವಾದ ರಥವನ್ನು ಸಜ್ಜುಗೊಳಿಸಿದ ಪರಮೇಶ್ವರನಿಗೆ ಬಾಣ ಪ್ರಯೋಗ ಮಾಡುವ ದ್ರೋಹವೆಸಗುತ್ತಾನೆ.

ಪದ್ಯಾನುವಾದ

ಹೇ ದೇವಿ! ನಿನ್ನ ಚೆನ್ನನ್ನ ಕೆನ್ನೆಯ ಕನ್ನ-
ಡಿಯಲಿ ಮಾರ್ಪೊಳೆಯುತಿಹ ರನ್ನದೋಲೆಗಳೆರಡ-
ರಿಂದೆಸೆವ ಮೊಗವನ್ನ ಮನ್ಮಥನ ರಥವೆಂದೆನುತ ನಾನು ತಿಳಿದಿರುವೆನು;
ಆ ರಥವನೇರಿ ಮಾರನು ಮಹಾವೀರನೆನಿ-
ಸುತ, ಸೂರ್ಯ ಚಂದ್ರ ಚಕ್ರಯುತ ಭೂ-
ರಥವನಣಿಗೈದು ಸಜ್ಜಾಗಿಹ ಪ್ರಮಥಪತಿ ಶರ್ಮನನ್ನೆದುರಿಸುವನು ॥ ೫೯ ॥

ಅಲಂಕಾರ

೧. ಪರಮೇಶ್ವರನು ತ್ರಿಪುರಸಂಹಾರಕ್ಕೆ ಹೊರಟ ರಥಕ್ಕೆ ಸೂರ್ಯ ಚಂದ್ರರೆಂಬ ಎರಡು ಚಕ್ರಗಳಿವೆ. ಆದರೆ ಇಲ್ಲಿ ದೇವಿಯ ಕೆನ್ನೆಗಳು ಕನ್ನಡಿಗಳಂತೆ ಹೊಳಪನ್ನು ಹೊಂದಿ ಕಿವಿಯ ತಾಟಂಕಗಳನ್ನು ಪ್ರತಿಬಿಂಬಿಸಿ ನಾಲ್ಕು ಚಕ್ರಗಳನ್ನು ಒಳಗೊಂಡ ಮನ್ಮಥನು ಎರಡು ಚಕ್ರಗಳ ರಥವುಳ್ಳ ಪ್ರಮಥ ಗಣಾಧಿಪತಿಯಾದ ಈಶ್ವರನನ್ನು ಎದುರಿಸುವ ಅಪರಾಧ ಮಾಡುತ್ತಾನೆ (ಈಶ್ವರನೊಡನೆ ಯುದ್ಧ ಮಾಡುವ ಸಾಹಸ ಮಾಡುತ್ತಾನೆ)

ಮನ್ಮಥನು ಇಲ್ಲಿ ಈಶ್ವರನೊಡನೆ ಯುದ್ಧ ಮಾಡುವ ಸಾಹಸ ಮಾಡಿದನೆಂಬ ಸಂಗತಿ ಪ್ರಸ್ತುತವಾಗದಿದ್ದರೂ ಪ್ರಸ್ತುತವೆಂಬಂತೆ ವರ್ಣಿಸಿರುವುದರಿಂದ **ಅತಿಶಯೋಕ್ತಿ ಅಲಂಕಾರವೆನಿಸಿದೆ.**

ದೇವಿಯ ಮುಖವನ್ನು ಅಲ್ಲಿ ಹೊಳೆವ ತಾಟಂಕಗಳನ್ನು ರಥದ ಚಕ್ರಗಳೆಂದು ಉತ್ಪ್ರೇಕ್ಷಿಸಿರುವುದರಿಂದ **ಉತ್ಪ್ರೇಕ್ಷಾಲಂಕಾರವಾಗಿದೆ.**

(ಶೇ–ಪುಟ ೨೦೧)

೨. ಈಶ್ವರನು ದ್ವಿಚಕ್ರ ರಥ ಹೊಂದಿದ್ದರೆ ಮನ್ಮಥನು ನಾಲ್ಕು ಚಕ್ರಗಳ ರಥವನ್ನು ಹೊಂದಿರುವುದರಿಂದ ದ್ವಿಚಕ್ರ ರಥದ ಈಶ್ವರನಿಗೆ ಸೋಲು ಎಂಬರ್ಥದಲ್ಲಿ ಮನ್ಮಥನು ಈಶ್ವರನನ್ನು ಎದುರಿಸುವ ಸಾಹಸ ಮಾಡುತ್ತಾನೆ ಎಂದು ಹೇಳಲಾಗಿದೆ.

ಶ್ರೀದೇವಿಯ ಮುಖವೆಂಬ ರಥವನ್ನು ಮನ್ಮಥ ಆರೋಹಿಸಿದ್ದಾನೆ ಎಂದು ಹೇಳುತ್ತಿರುವುದರಿಂದ ಇಲ್ಲಿ **ದೀಪಕಾಲಂಕಾರವಿದೆ.** ಈಶ್ವರನು ಸೂರ್ಯ ಚಂದ್ರರೆಂಬ ಎರಡು ಚಕ್ರಗಳ ರಥವನ್ನೇರಿದ್ದಾನೆ ಎಂಬಲ್ಲೂ **ದೀಪಕಾಲಂಕಾರವಿದೆ.**

(ತು–ಪುಟ ೩೪೦)

೩. ಸೂರ್ಯ ಚಂದ್ರಾಗ್ನಿ ನಯನಗಳುಳ್ಳ ದೇವಿಯ ಮುಖಾರವಿಂದದಲ್ಲಿ ಕಾಣುವ ನಾಲ್ಕು ಚಕ್ರಗಳ ರಥವೇರಿ ತ್ರಿನೇತ್ರಧಾರಿಯಾದ ಶಿವನನ್ನು ಎದುರಿಸಲು ಹೊರಟ ಮನ್ಮಥನು ಪಾರ್ವತಿಯನ್ನೇ ಶಿವನ ವಿರುದ್ಧ ಎತ್ತಿ ಕಟ್ಟಿದಂತಾಗಿ ಶಿವನಿಗೆ ದ್ರೋಹವೆಸಗುತ್ತಿದ್ದಾನೆ ಎಂದು ಅರ್ಥೈಸುತ್ತಾರೆ.

೪. ಲಲಿತಾ ಸಹಸ್ರನಾಮದಲ್ಲಿ (ಶ್ಲೋಕ ೯ ನಾಮ ೨೨) **ತಾಟಂಕಯುಗಲೀ ಭೂತ ತಪನೋಡುಪಮಂಡಲಾ** (ಸೂರ್ಯ ಮಂಡಲದಂತೆ ಮತ್ತು ಚಂದ್ರಮಂಡಲದಂತೆ ಇರುವ ಓಲೆಗಳನ್ನು ಧರಿಸುವಳು) ಎಂದು ಹೇಳಿದೆ.

ಸೂರ್ಯ ಮಂಡಲ ಸಚರಾಚರ ವಸ್ತುಗಳಿಗೆ ಚೇತನೋತ್ಸಾಹಗಳನ್ನು ಉಂಟುಮಾಡಿದರೆ, ಚಂದ್ರಮಂಡಲ ಆಹ್ಲಾದ ನೆಮ್ಮದಿಗಳನ್ನು ಉಂಟು ಮಾಡುತ್ತವೆ. ನಿನ್ನ ಓಲೆಗಳ ದರ್ಶನದಿಂದಲೇ ಭಕ್ತನಿಗೆ ಚೇತನೋತ್ಸಾಹ, ಆಹ್ಲಾದ ನೆಮ್ಮದಿ ದೊರಕುತ್ತದೆ.

(ಲ-ಕೂ ಪುಟ ೮೬)

೫. ಶ್ರುತಿಯಲ್ಲಿ ಸೂರ್ಯ ಚಂದ್ರರೇ ದೇವಿಯ ಎರಡು ಸ್ತನಗಳು ೨ ಕಣ್ಣುಗಳು ಮತ್ತು ಎರಡು ಕಿವಿಯಾಭರಣಗಳು ಎಂದು ಹೇಳಿದೆ. ಈ ಶ್ಲೋಕದಲ್ಲಿ (೫೯) ಎರಡು ರಥದ ಚಕ್ರಗಳಿಗೆ ಹೋಲಿಸಿದೆ.

(ಲ-ಆ ಪುಟ ೫೨)

ಯಂತ್ರಾರಾಧನೆ (ಶ್ಲೋಕ ೫೯)

ಐಂ
ಕ್ಲೀಂ
ಸೌಃ

ಯಂತ್ರ ರಚನೆ : ಚಿನ್ನದ ರೇಖಿನಲ್ಲಿ ಕೆತ್ತಬೇಕು. ದೀರ್ಘ ಚತುರಶ್ರ ಬರೆದು ನಡುವೆ ಐಂ ಕ್ಲೀಂ ಸೌಃ ಬೀಜಾಕ್ಷರಗಳನ್ನು ಒಂದರ ಕೆಳಗೆ ಒಂದನ್ನು ಬರೆಯಬೇಕು.

ಪೂಜೆ : ಐಂ ಬೀಜಾಕ್ಷರದ ಮಧ್ಯೆ ಕೆಂಪು ಹೂಗಳಿಂದ ಲಲಿತಾಷ್ಟೋತ್ತರ ಅರ್ಚನೆ ಮಾಡಬೇಕು. ಸೌಃ ಬೀಜಾಕ್ಷರದ ಮಧ್ಯೆ ಬಿಳಿ ಹೂಗಳಿಂದ ದುರ್ಗಾ ಅಷ್ಟೋತ್ತರ ಪೂಜೆಯನ್ನು ಮಾಡಬೇಕು.

ನೈವೇದ್ಯ : ಸಿಹಿ ಪೊಂಗಲ್, ಜೇನುತುಪ್ಪ.

ಜಪ : ೪೫ ದಿನಗಳ ಕಾಲ ಪ್ರತಿ ದಿನ ೧೦೦೦ ಬಾರಿ ಈ ಶ್ಲೋಕವನ್ನು ಜಪಿಸಬೇಕು.

ಫಲ : **ಸಕಲ ಜನವಶ್ಯತೆ.**

ಶ್ಲೋಕ–೬೦

ದೇವಿಯ ಮಧುರಾಲಾಪ ವರ್ಣನೆ

ಸರಸ್ವತ್ಯಾಸ್ಸೂಕ್ತೀರಮೃತಲಹರೀಕೌಶಲಹರೀಃ
ಪಿಬಂತ್ಯಾಃ ಶರ್ವಾಣಿ ಶ್ರವಣಚುಲುಕಾಭ್ಯಾ[೧]ಮವಿರಲಮ್ ।
ಚಮತ್ಕಾರಶ್ಲಾಘಾಚಲಿತಶಿರಸಃ ಕುಂಡಲಗಣೋ
ಝಣತ್ಕಾರೈಸ್ತಾರೈಃ ಪ್ರತಿವಚನಮಾಚಷ್ಟ ಇವ ತೇ ॥ ೬೦ ॥

ಪಾಠಾಂತರ

೧. (ಮವಿರಲಮ್) = ಂಮವಿರತಮ್ (ಸಂ)

ಪದವಿಭಾಗ

(ಸರಸ್ವತ್ಯಾಸ್ಸೂಕ್ತೀರಮೃತಲಹರೀಕೌಶಲಹರೀಃ) = ಸರಸ್ವತ್ಯಾಃ + ಸೂಕ್ತೀಃ + ಅಮೃತ ಲಹರೀ + ಕೌಶಲ ಹರೀಃ, ಪಿಬಂತ್ಯಾಃ, ಶರ್ವಾಣಿ, (ಶ್ರವಣಚುಲಕಾಭ್ಯಾಮವಿರಲಮ್) = ಶ್ರವಣ ಚುಲುಕಾಭ್ಯಾಮ್ + ಅವಿರಲಮ್, (ಚಮತ್ಕಾರಶ್ಲಾಘಾಚಲಿತಶಿರಸಃ) = ಚಮತ್ಕಾರಶ್ಲಾಘ + ಆಚಲಿತಶಿರಸಃ (ಕುಂಡಲಗಣೋ) = ಕುಂಡಲಗಣಃ (ಝಣತ್ಕಾರೈಸ್ತಾರೈಃ) = ಝಣತ್ಕಾರೈಃ + ತಾರೈಃ (ಪ್ರತಿವಚನಮಾಚಷ್ಟ) = ಪ್ರತಿವಚನಮ್ + ಆಚಷ್ಟ, ಇವ, ತೇ.

ಅನ್ವಯಾರ್ಥ

(ಹೇ) ಶರ್ವಾಣಿ	(ಪರಮೇಶ್ವರನ ಪತ್ನಿಯೇ,)
ಅಮೃತಲಹರೀ	ಅಮೃತದ–ಪ್ರವಾಹದ
ಕೌಶಲಹರೀ	ಜಾಣತನವನ್ನು–ಅಪಹರಿಸುತ್ತಿರುವುದಕ್ಕೆ ಸನಿಹವಾದ
(ತೇ) ಸೂಕ್ತೀಃ	(ನಿನ್ನ) ಒಳ್ಳೆಯ ಮಾತುಗಳು
ಶ್ರವಣ ಚುಲುಕಾಭ್ಯಾಂ	ಕಿವಿಗಳೆಂಬ ಅರ್ಧ ಬೊಗಸೆಗಳಿಂದ (ಸೇರೆಗಳಿಂದ)
ಅವಿರಲಂ	ಸ್ವಲ್ಪವೂ ಬಿಡದೆ
ಪಿಬಂತ್ಯಾಃ	ಕುಡಿಯುತ್ತಿರುವ

ಚಮತ್ಕಾರಶ್ಲಾಘಾಚಲಿತಶಿರಸಃ	(ಚಮತ್ಕಾರ-ಶ್ಲಾಘಾ-ಚಲಿತಶಿರಸಃ) = ಚಮತ್ಕಾರವನ್ನು ಶ್ಲಾಘನೆ ಮಾಡುತ್ತಿರುವ ಕಾಲದಲ್ಲಿ-ತಲೆದೂಗುತ್ತಿರುವ ತಲೆಯ
ಸರಸ್ವತ್ಯಾಃ	ಸರಸ್ವತೀ ದೇವಿಯ
ಕುಂಡಲಗಣಃ	ಕರ್ಣಾಭರಣ (ಕಿವಿಯೋಲೆಗಳ) ಸಮೂಹವು
ತಾರೈಃ	ತಾರಸ್ಥಾಯಿಯಾದ (ಅತಿ ಹೆಚ್ಚಾದ)
ಝಣತ್ಕಾರೈಃ	ಝಣಝಣವೆಂಬ ಶಬ್ದಗಳಿಂದ
ಪ್ರತಿವಚನಂ	ಪ್ರತ್ಯುತ್ತರವನ್ನು
ಆಚಷ್ಟ ಇವ	ಹೇಳುತ್ತದೆಯೋ ಎಂಬಂತಿದೆ

ತಾತ್ಪರ್ಯ

ಹೇ ಪರಮೇಶ್ವರನ ಪತ್ನಿಯೇ (ಶರ್ವಾಣಿಯೇ), ನಿನ್ನ ಮುಖದಿಂದ ಹೊರಸೂಸುವ ಮಾತುಗಳು ಅಮೃತರಸದ ಪ್ರವಾಹಕ್ಕಿಂತಲೂ ಮಿಗಿಲಾಗಿದೆ. ನಿನ್ನ ಸವಿನುಡಿಯ ಮಾತುಗಳನ್ನು ಸರಸ್ವತಿಯು ಕಿವಿಗಳೆಂಬ ಅರ್ಧಬೊಗಸೆಗಳಿಂದ ಎಡಬಿಡದೆ ಪಾನಮಾಡುತ್ತಿದ್ದಾಳೆ. ಮತ್ತು ನಿನ್ನ ಮಧುರನುಡಿಗಳ ಚಮತ್ಕಾರಕ್ಕೆ ಸರಸ್ವತಿ ತಲೆದೂಗುತ್ತಿರುವ ಪರಿಣಾಮವಾಗಿ ಆಕೆಯ ಕಿವಿಯೋಲೆಗಳು ಝಣ ಝಣತ್ಕಾರದ ಧ್ವನಿಯಿಂದ ಅತಿ ಹೆಚ್ಚಾದ ಧ್ವನಿಮಾಡುತ್ತಾ (ಓಲೆಗಳು ಜೋರಾಗಿ ಅಲ್ಲಾಡುತ್ತಾ) ನಿನ್ನ ಮಾತುಗಳನ್ನು ಮೆಚ್ಚಿ ಪ್ರತ್ಯುತ್ತರವನ್ನು ಹೇಳುತ್ತಿದೆ ಎಂದು ತೋರುತ್ತಿದೆ.

ಪದ್ಯಾನುವಾದ

ತಾಯೆ, ಶರ್ವಾಣಿ, ಅಮೃತವ ಹೊನಲ ಸುಭಗತೆಯ
ಹೊನಲ ಹರಿಸುವ ನಿನ್ನ ಸೂಕ್ತಿಗಳ ಸಾರವನು
ಕಿವಿಬೊಗಸೆಯೊಡ್ಡಿ ಕುಡಿಕುಡಿದು ನುಡಿಗಳ ಬೆಡಂಗನು ಮೆಚ್ಚುತ
ಬೆರಗಿನಿಂದ ತಲೆದೂಗಲು ಸರಸ್ವತಿಯ ಕರ್ಣ-
ಕುಂಡಲಗಣದ ಝಣತ್ಕಾರ ತಾರಧ್ವನಿಯ
ಮಾರ್ನುಡಿಗಳೆನಲೆಸುವುದಾ ಸೂಕ್ತಿಮುಕ್ತಾಫಲಗಳು ನಿನ್ನಯಾ ಕರುಣೆಯು
॥ ೬೦ ॥

ಟಿಪ್ಪಣಿಗಳು

ಅಲಂಕಾರ

೧. ಸರಸ್ವತಿಯು ಕಿವಿಯೋಲೆಗಳು ತಲೆದೂಗುವುದರಿಂದ ಅಲ್ಲಾಡುವುದನ್ನು ದೇವಿಯ ಮಾತುಗಳನ್ನು ಕೇಳಿ ಮೆಚ್ಚುಗೆಯನ್ನು ಸರಸ್ವತಿ ಸೂಚಿಸುತ್ತಿದ್ದಾಳೆ ಎಂದು ಉತ್ಪ್ರೇಕ್ಷೆ ಮಾಡಿರುವುದರಿಂದ ಇಲ್ಲಿ ಉತ್ಪ್ರೇಕ್ಷಾಲಂಕಾರವಾಗಿದೆ. ಪದ್ಯದ ಉತ್ತರಾರ್ಧದಲ್ಲಿ ಸರಸ್ವತಿಯು ತಲೆದೂಗುತ್ತಿದ್ದಾಳೆ ಎಂದು ಅತಿಶಯೋಕ್ತಿಯಲ್ಲಿ ಹೇಳಲಾಗಿದೆ. ಆದ್ದರಿಂದ **ಅತಿಶಯೋಕ್ತಿ ಅಲಂಕಾರವಿದೆ.**

(ಶೇ–ಪುಟ ೨೦೩)

೨. ಸಕಲ ಶಬ್ದರಾಶಿಯೂ ದೇವಿಯ ಅಧೀನವಾದುದರಿಂದ ಇವಳ ವಚನಾಮೃತಕ್ಕೆ ಕಿವಿಗೊಟ್ಟು ಸರಸ್ವತಿ ತಲೆದೂಗುತ್ತಾಳೆ ಎಂಬುದು ಲಕ್ಷ್ಮೀಧರ ವ್ಯಾಖ್ಯಾನಕಾರನ ಅಭಿಪ್ರಾಯವಾದರೆ, ಉಳಿದ ಬಹು ಮಂದಿ ವ್ಯಾಖ್ಯಾನಕಾರರು "ಸರಸ್ವತಿಯ ಮಾತಿಗೆ ದೇವಿಯೇ ತಲೆದೂಗುತ್ತಾಳೆ" ಎಂಬ ಅರ್ಥವನ್ನು ಹೇಳಿದ್ದಾರೆ. ಆದ್ದರಿಂದ ಈ ಶ್ಲೋಕದಲ್ಲಿರುವಂತೆ ತ್ರಿಪುರಸುಂದರಿದೇವಿಯ ಸೂಕ್ತಿಗಳನ್ನು ಸರಸ್ವತಿಯು ಆಲಿಸುತ್ತಾಳೋ, ಅಥವಾ ಸರಸ್ವತಿಯ ಸೂಕ್ತಿಗಳನ್ನು ತ್ರಿಪುರಸುಂದರಿ ದೇವಿಯೇ ಆಲಿಸಿ ತಲೆದೂಗುತ್ತಾಳೋ ಖಚಿತವಾಗಿ ಹೇಳುವುದು ಕಷ್ಟವಾಗಿದೆ.

(ಗ–ಪುಟ ೬೭)


೩. ಶ್ರೀಮಾತೆಯ ವಾಕ್ಕೇ ಸರಸ್ವತೀ ರೂಪ. ಯಾರು ಇಂಪಾಗಿ ಮೆಲ್ಲಗೆ ಶಾಂತವಾಗಿ ಮೃದುವಾಗಿ ಮಿತಸುಸ್ವರಗಳಿಂದ ಮಾತನಾಡ ಬಲ್ಲರೋ ಅವರ ನಾಲಗೆ ಸರಸ್ವತೀನಿಲಯ ಎನ್ನುತ್ತಾರೆ. ಹಾಗೆಯೇ ಮಕರಂದ ಸಾರವರ್ಷಿಣೀ ನಮಶ್ಶಿವಾಯ ಎಂದು ಶಿವನ ವಾಕ್ಕನ್ನು ಕುರಿತು ಶಿವಪಂಚಾಕ್ಷರೀ ನಕ್ಷತ್ರಮಾಲಾ ಸ್ತೋತ್ರದಲ್ಲಿ ಹೇಳಿದೆ.

(ಪ–ಪುಟ ೯೦)

೪. ಲಲಿತಾ ಸಹಸ್ರನಾಮದಲ್ಲಿ "ಸಚಾಮರ ರಮಾವಾಣೀ ಸವ್ಯ ದಕ್ಷಿಣ ಸೇವಿತಾ" (ಶ್ಲೋಕ ೧೨೩ ನಾಮ ೬೧೪) (ಚಾಮರಗಳನ್ನು ಎಡಬಲಗಳಲ್ಲಿ ಹಿಡಿದು ನಿಂತಿರುವ ಲಕ್ಷ್ಮೀ–ಸರಸ್ವತಿಯರಿಂದ ಸೇವಿಸಲ್ಪಡುತ್ತಿರುವವಳು) ಎಂದು ಹೇಳಿದೆ. ಲಕ್ಷ್ಮೀ ಸರಸ್ವತಿಯರಿಗಿಂತ ಶ್ರೀದೇವಿ ಶ್ರೇಷ್ಠಳೆಂದು ಇಲ್ಲಿ ಪ್ರತಿಬಿಂಬಿತವಾಗಿದೆ.

(ಲ–ಕೂ–ಪುಟ ೨೦೩)

ಯಂತ್ರಾರಾಧನೆ (ಶ್ಲೋಕ ೬೦)



ಯಂತ್ರ ರಚನೆ : ಚಿನ್ನದ ತಗಡಲ್ಲಿ ರಚಿಸಬೇಕು. ಮೂರು ತ್ರಿಶೂಲಗಳನ್ನು ಮೂಲೆಗಳಲ್ಲಿ ಹೊಂದಿರುವಂತೆ ಅಧೋಮುಖವಾದ ಸಮಭುಜ ತ್ರಿಕೋಣವನ್ನು ರಚಿಸಿ ಅದರ ನಡುವೆ ಶ್ರೀಂ ಎಂಬ ಬೀಜಾಕ್ಷರವನ್ನು ಬರೆಯಬೇಕು.

ಪೂಜೆ : ಬಿಳಿ ಹೂಗಳಿಂದ ಲಲಿತಾ ಸಹಸ್ರನಾಮ ಅರ್ಚನೆ ಮಾಡಬೇಕು.

ನೈವೇದ್ಯ : ಬಾಳೆಹಣ್ಣು, ತೆಂಗಿನಕಾಯಿ, ಜೇನುತುಪ್ಪ.

ಜಪ : ೮ ದಿನಗಳ ಕಾಲ ಪ್ರತಿದಿನ ೧೨೦೦೦ ಸಲ ಈ ಶ್ಲೋಕವನ್ನು ಜಪಿಸಬೇಕು.

ಫಲ : ಈ ಯಂತ್ರವನ್ನು ಸ್ತ್ರೀಯರು ಆಭರಣಗಳೊಡನೆ ಧರಿಸಿದರೆ ಸಕಲ ಪುರುಷರೂ ವಶರಾಗುವರು.

ಪುರುಷ ವಶೀಕರಣ.

ಶ್ಲೋಕ–೬೧

ದೇವಿಯ ನಾಸಾಪುಟ ವರ್ಣನೆ

ಅಸೌ ನಾಸಾವಂಶಸ್ತುಹಿನಗಿರಿ[1]ವಂಶಧ್ವಜಪಟೀ
ತ್ವದೀಯೋ ನೇದೀಯಃ ಫಲತು ಫಲಮಸ್ಮಾಕಮುಚಿತಮ್ ।
ವಹತ್ಯಂತರ್ಮುಕ್ತಾಃಶಿಶಿರಕರನಿಃಶ್ವಾಸಗಲಿತಂ
ಸಮೃದ್ಧ್ಯಾ [4]ಯತ್ತಾಸಾಂ ಬಹಿರಪಿ ಚ ಮುಕ್ತಾಮಣಿಧರಃ ॥ ೬೧ ॥

ಪಾಠಾಂತರ

೧. (ಮಾಧ್ವಜ ಪಟಿ) = ವಂಶಧ್ವಜ ಜಪಟೀ (ಪೋ)
೨. (ವಹತ್ಯಂತರ್ಮುಕ್ತಾಃ) ವಹನ್ನಂತ ಮುಕ್ತಿಶಕ್ತಿ (ಸಂ)
೩. (ಶಿಶಿರತರ) = ಶಿಶಿರಕರ (ಸು)
೪. (ಯತ್ತಾಸಾಂ = ಯಸ್ತಾಸಾಂ (ಸು)
೫. ಮುಕ್ತಾಮಣಿ ಧರಃ = ಮುಕ್ತಾ ಮಣಿ ಮಧಾತ್ (ಓ)

ಪದವಿಭಾಗ

ಅಸೌ, (ನಾಶವಂಶಸ್ತುಹಿನಗಿರಿ ವಂಶಧ್ವಜಪಟೀ) = ನಾಸಾವಂಶಃ + ತುಹಿನಗಿರಿವಂಶಧ್ವಜಪಟೀ, (ತ್ವದೀಯೋ) = ತ್ವದೀಯಃ ನೇದೀಯಃ, ಫಲತು, (ಫಲಮಸ್ಮಾಕಮುಚಿತಮ್) = ಫಲಮ್ + ಅಸ್ಮಾಕಮ್ + ಉಚಿತಮ್, (ವಹತ್ಯಂತರ್ಮುಕ್ತಾಃ) = ವಹತಿ + ಅಂತರ್‌ಮುಕ್ತಾಃ, ಶಿಶಿರಕರನಿಶ್ವಾಸಗಲಿತಂ, ಸಮೃದ್ಧ್ಯಾ, (ಯತ್ತಾಸಾಂ) = ಯತ್ + ತಾಸಾಂ, (ಬಹಿರಪಿ) = ಬಹಿಃ + ಅಪಿ, ಚ, ಮುಕ್ತಾಮಣಿಧರಃ

ಅನ್ವಯಾರ್ಥ

(ಹೇ) ತುಹಿನಗಿರಿವಂಶಧ್ವಜಪಟೀ	(ಎಲೈ) – ಹಿಮವಂತನ – ವಂಶವೆಂಬ ಧ್ವಜದಂಡಕ್ಕೆ – ಧ್ವಜದ ವಸ್ತ್ರ ಪ್ರಾಯದವಳೇ, ನಿನ್ನ ಸಂಬಂಧಿಯಾದ

ತ್ವದೀಯೋ	ಈ ಬಿದಿರಿನ ಕೋಲಿನಂತಿರುವ ಮೂಗು (ಮೂಗೆಂಬ ಬಿದಿರಿನ ಕೋಲು)
ಅಸೌ ನಾಸಾವಂಶಃ	ನಮ್ಮಗಳಿಗೆ
ಅಸ್ಮಾಕಂ	ಯೋಗ್ಯವಾದ
ಉಚಿತಂ	ಬಹಳ ಸಮೀಪದಲ್ಲೇ ಉಂಟಾಗುವ
ನೇದೀಯಃ	ಇಷ್ಟಾರ್ಥವನ್ನು
ಫಲಂ	ಕೊಡಲಿ
ಫಲತು	(ಯಾವ ನಾಸಾದಂಡವು)
(ಸಃ)	(ಅಂತಃ + ಮುಕ್ತಾ) ಒಳ ಭಾಗದಲ್ಲೂ
ಅಂತರ್ಮುಕ್ತಾಃ	ಮುತ್ತುಗಳನ್ನು
ವಹತಿ	ವಹಿಸಿಕೊಂಡಿದೆ (ಧರಿಸಿದೆ)
(ಯದ್ಯಸ್ಮಾತ್ ಕಾರಣಾತ್)	(ಯಾವ ಕಾರಣದ ದೆಸೆಯಿಂದ)
ತಾಸಾಂ ಸಮೃದ್ಧ್ಯಾ	ಆ ಮುತ್ತುಗಳ ಆಧಿಕ್ಯದಿಂದ (ಹೆಚ್ಚಾದಾದರಿಂದ)
ಶಿಶಿರಕರನಿಶ್ವಾಸಗಲಿತಂ	ಚಂದ್ರನಾಡೀ ಸಂಬಂಧಿಯಾದ (ಎಡ ಮೂಗಿನ ಸ್ವರದ) ವಾಯುವಿನಿಂದ– ಜಾರಿದ
ಬಹಿರಪಿ ಚ	ಹೊರಗೂ ಕೂಡ
ಮುಕ್ತಾಮಣಿಧರಃ	ಮುಕ್ತಾಮಣಿಗಳನ್ನು (ಧರಿಸಿದೆ)
(ಅಧಾತ್)	(ಧರಿಸಿಕೊಂಡಿದೆಯೋ)

ತಾತ್ಪರ್ಯ

ಪರ್ವತರಾಜ ಹಿಮವಂತನಿಗೆ ಮಗಳಾಗಿ ಹುಟ್ಟಿ ಆ ವಂಶಕ್ಕೆ ಕೀರ್ತಿಯ ಧ್ವಜಪಟವಾಗಿದ್ದೀಯೆ (ವಂಶಕ್ಕೆ ಕೀರ್ತಿ ತಂದಿರುವೆ). ನಿನ್ನ ಸುಂದರವಾದ ಮೂಗು (ನಾಸಾದಂಡ) ನಮ್ಮ ಆಶೋತ್ತರಗಳನ್ನು ಆದಷ್ಟು ಶೀಘ್ರವಾಗಿ ಸಲ್ಲಿಸಲಿ ಎಂದು ಪ್ರಾರ್ಥಿಸುತ್ತೇನೆ. ಈ ನಿನ್ನ ನಾಸಾವಂಶವು (ಮೂಗೆಂಬ ಎಳೆ ಬಿದರಿನಲ್ಲಿ) ಒಳಗಡೆ ಅಧಿಕವಾದ ಮುತ್ತುಗಳನ್ನು ಹೊಂದಿದೆ. ಹೀಗೆ ಸಮೃದ್ಧವಾಗಿ ತುಂಬಿದ ಮುತ್ತುಗಳಲ್ಲಿ ಒಂದು ಮುತ್ತು ಚಂದ್ರನಾಡಿಯೆಂಬ ಎಡಮೂಗಿನಿಂದ ವಾಯುವಿನ ಆಶ್ವಾಸದಿಂದ ಹೊರಗೆ ಬಂದು ಕಾಣಿಸಿಕೊಂಡಿದೆ. ಅದನ್ನೇ ನಾಸಾದಂಡದ ಎಡಭಾಗವು ಧರಿಸಿದೆ. (ಎಡಮೂಗಿನಲ್ಲಿರುವ ಮುತ್ತಿನ ಮಣಿಯನ್ನು ವರ್ಣಿಸುವುದರ ಮೂಲಕ ಮತ್ತು ಮೂಗನ್ನು ವಂಶಧ್ವಜವೆಂದು ವರ್ಣಿಸುವುದರ ಮೂಲಕ ದೇವಿಯ ನಾಸಿಕದ ಚೆಲುವನ್ನು ಈ ಶ್ಲೋಕದಲ್ಲಿ ವರ್ಣಿಸಿದೆ.)

ಪದ್ಯಾನುವಾದ

ತಾಯೆ, ಹಿಮಗಿರಿ ಕುಲಪತಾಕಾಸ್ವರೂಪೆ, ನೇರ್-
ಬಂಚದೊಲು ನೀಳವಹ ನಿನ್ನನಾಸಿಕ ಕೊಡುಗೆ
ನನ್ನಂತರಂಗಕೆ ಸಮೀಪತಮವಾದ ಸಮುಚಿತವೆನಿಪ ಫಲವನಿರತ;
ನಾಸಿಕದ ಆ ಬಂಚ ಮುತ್ತುಗಳನೊಳಕೊಂಡು
ಚಾಂದ್ರನಿಃಶ್ವಾಸದೊತ್ತರದಿಂದ ಆ ಮುತ್ತು
ಜಗುಳೆ ನಾಸಿಕವು ಮುತ್ತಿನಮಣಿಯ ಮೂಗುತಿಯ ಧರಿಸಿ ಶೋಭಿಸುತಿರುವುದು
॥ ೬೧ ॥

ಟಿಪ್ಪಣಿಗಳು

ದೇವಿಯ ಮೂಗಿನ ವರ್ಣನೆ

೧. (ಬಿ.ಎಸ್. ಕಪನೀಪತಯ್ಯನವರು ತಮ್ಮ ಹಸ್ತಪ್ರತಿಯಲ್ಲಿ ಅಲ್ಲಲ್ಲಿ ಕೆಲವು ಶ್ಲೋಕಗಳಿಗೆ ತಾತ್ಪರ್ಯವನ್ನು, ಕೆಲವು ಶ್ಲೋಕಗಳಿಗೆ ಟಿಪ್ಪಣಿಯನ್ನು ಬರೆದಿದ್ದಾರೆ. ಶೇ. ೭೫ಕ್ಕಿಂತ ಹೆಚ್ಚು ಶ್ಲೋಕಗಳಿಗೆ ತಾತ್ಪರ್ಯವನ್ನಾಗಲೀ ಟಿಪ್ಪಣಿಯನ್ನಾಗಲೀ ಬರೆದಿಲ್ಲ. ಕೇವಲ ಶ್ಲೋಕಗಳಿಗೆ ಅನ್ವಯಾರ್ಥ ಬರೆದಿದ್ದಾರೆ. ಅವರ ಹಸ್ತಪ್ರತಿಯಲ್ಲಿರುವ ತಾತ್ಪರ್ಯ-ಟಿಪ್ಪಣಿಗಳು ಯಾವ ಸ್ವರೂಪದ್ದು ಎಂದು ತಿಳಿಸಲು ಅವುಗಳನ್ನು ಆಯಾ ಶ್ಲೋಕದಡಿ ಉದ್ಧರಿಸಲಾಗಿದೆ)

ಬಿ.ಎಸ್. ಕಪನೀಪತಯ್ಯನವರ ತಾತ್ಪರ್ಯ

(ಶ್ಲೋಕ ೬೧)

ಕವಿಯು ಮುತ್ತಿನ ಬುಲಾಕನ್ನು ಇಟ್ಟುಕೊಂಡಿರುವ ಭಗವತಿಯ ಮೂಗನ್ನು ವರ್ಣಿಸುತ್ತಾನೆ:

ಎಲೈ ದೇವಿಯೇ, ಬಿದಿರು ಕೋಲಿನಂತಿರುವ ಈ ನಿನ್ನ ಮೂಗು ನಮ್ಮಗಳಿಗೆ ಯೋಗ್ಯವಾದ ನಿನ್ನ ಅತ್ಯಂತ ಸಮೀಪ ಸ್ಥಿತಿರೂಪವಾದ ಮನೋಭೀಷ್ಟವನ್ನುಂಟು ಮಾಡಲಿ.

"ಆದರೆ ನಿನ್ನ ಮೂಗೆಂಬ ಬಿದಿರುಕೋಲು ಒಳಗೆ ಅನೇಕ ಮುತ್ತುಗಳುಳ್ಳದುದಾಗಿದೆ ಎಂದು ತೋರುತ್ತದೆ. ಆದುದರಿಂದಲೇ ಪೊಚ್ಚಾದ ಮುತ್ತುಗಳು ನಿನ್ನ ಎಡಗಡೆಯ ಮೂಗಿನ ಹೊಳ್ಳೆಯ ಕೆಳಭಾಗದಲ್ಲಿ ಹೊರಟುಬಂದಿದೆ. ಇದು ನಿಜವಾದ ವಿಷಯವು. ತಿಳಿಯದವರು ಬುಲಾಕಿನ ಮುತ್ತುಗಳೆಂದು ಹೇಳಿಕೊಳ್ಳುತ್ತಾರೆ. ಇಲ್ಲಿ ಕವಿಯು ಬುಲಾಕಿನ ಮುತ್ತುಗಳನ್ನು

ನೋಡಿ ಮೂಗಿನಲ್ಲಿ ಬಿದಿರಿನ ಕೋಲಿನ ರೂಪವನ್ನು ಆರೋಪಿಸಿ ವರ್ಣಿಸಿರುತ್ತಾರೆ ಮತ್ತು ಆನೆ, ಮೇಘ, ಹಾವಿನ ಹೆಡೆ, ಸಮುದ್ರ, ಬಿದಿರು, ಹಂದಿ ಇವುಗಳು ಮುತ್ತು ಹುಟ್ಟುವ ಸ್ಥಳಗಳೆಂದು ಶಾಸ್ತ್ರ ಪ್ರಸಿದ್ಧವಾಗಿವೆ. ವಂಶ ಎಂಬ ಶಬ್ದಕ್ಕೆ ಬಿದಿರು ಮತ್ತು ಕುಲ ಎಂದು ಎರಡರ್ಥಗಳುಂಟು"

(ಹಸ್ತಪ್ರತಿ–ಪುಟ ೧೨೨)

ಮುಕ್ತಾಮಣಿಧರಃ ಪಾಠ ವಿಚಾರ

೨. "ಮುಕ್ತಾಮಣಿಧರಃ" ಎಂಬುದಕ್ಕೆ ಮುಕ್ತಾಮಣಿಮಧಾತ್ ಸರಿಯಾದ ಪಾಠ ಎಂದು ಲಕ್ಷ್ಮೀಧರರ ವ್ಯಾಖ್ಯಾನದಲ್ಲಿ ಹೇಳಲಾಗಿದೆ. ಆದರೆ ಎಲ್ಲ ಹಸ್ತಪ್ರತಿಗಳಲ್ಲಿ 'ಮುಕ್ತಾಮಣಿಧರ' ಪಾಠವೇ ಇದೆ.

(ಶೇ–ಪುಟ ೨೦೪)

ಅಲಂಕಾರ

೩. ದೇವಿಯ ಮೂಗನ್ನು ಬಿದಿರನ ಕೋಲು (ನಾಸಾದಂಡ) ಎಂದು ಆರೋಪಿಸಿರುವುದರಿಂದ ಇಲ್ಲಿ ರೂಪಕಾಲಂಕಾರವಿದೆ. ಬಿದಿರನ ದಂಡೆಯಲ್ಲಿ ಮುತ್ತುಗಳು ಉತ್ಪತ್ತಿಯಾಗುತ್ತವೆ ಎಂಬಲ್ಲಿ ಕವಿ ಸಮಯವಿದೆ. ಮೂಗು ವಂಶದಂಡಾಕಾರವಾಗಿರುವುದರಿಂದ ನಾಸಾದಂಡದೊಳಗೆ ತುಂಬಿರುವ ಮುತ್ತುಗಳು ಹೊರಗಡೆಗೆ ಬಂದು ಕಾಣಿಸಿವೆ ಎಂಬುದು ಕವಿ ಕಲ್ಪನೆಯಾಗಿದೆ.

(ಗ–ಪುಟ ೬೮)

೪. ಕಾವ್ಯಲೋಕದಲ್ಲಿ ಎರಡು ಸತ್ಯಗಳಿವೆ. ಒಂದು ಕಾವ್ಯಸತ್ಯ, ಇನ್ನೊಂದು ಲೋಕಸತ್ಯ. ಲೋಕಸತ್ಯದಲ್ಲಿ ನಾವು ಕಾಣುವ ಪ್ರಪಂಚದ ವಾಸ್ತವ ಸಂಗತಿಗಳ ನಿರೂಪಣೆ ಇರುತ್ತದೆ. ಕಾವ್ಯಸತ್ಯ ಎಂದರೆ ಕವಿಗಳು ಕಾವ್ಯಸೌಂದರ್ಯಕ್ಕಾಗಿ ಕೆಲವು ಕಲ್ಪನೆಗಳನ್ನು ಮಾಡಿರುತ್ತಾರೆ. ಆ ಕಲ್ಪನೆಗಳು ಪ್ರಸಿದ್ಧವಾಗಿ ಲೋಕದಲ್ಲಿ ಜನಜನಿತವಾಗಿರುತ್ತದೆ. ಇಂತಹ ಕಾವ್ಯಸತ್ಯಗಳಲ್ಲಿ (ಕವಿ ಸಮಯಗಳಲ್ಲಿ) ಬಿದಿರಿನಿಂದ ಮುತ್ತುಗಳು ಹುಟ್ಟುತ್ತವೆ ಎಂಬ ಕಲ್ಪನೆಯೂ ಒಂದು.

(ಅನಾಜಿ ಟಿಪ್ಪಣಿ)

೫. ಕೆಲ ಲೌಕಿಕ ವಸ್ತುಗಳಲ್ಲಿ ಮುತ್ತುಗಳು ಹುಟ್ಟುವುವು ಎಂಬ ಕಾವ್ಯ ಸತ್ಯಗಳು ಕೆಲವು ಪ್ರಸಿದ್ಧವಾಗಿವೆ. ಕರೀಂದ್ರ, ಜೀಮೂತ, ವರಾಹ, ಶಂಖ, ಮತ್ಸ್ಯಾಹಿಶುಕ್ತ್ಯುದ್ಭವವೇಣುಜಾನಿ ಮುಕ್ತಾಫಲಾನಿ ಪ್ರಥಿತಾನಿ ಲೋಕೇತೇಷಾಂತು ಶುಕ್ತ್ಯುದ್ಭವಮೇವ ಭೂರಿ [ಆನೆಯ ಕುಂಭಸ್ಥಲ,

ಮೋಡ, ಕಾಡುಹಂದಿ, ಶಂಖ, ಮೀನು, ಸರ್ಪದ ಹೆಡೆ ಮುತ್ತಿನ ಚಿಪ್ಪು, ಬಿದಿರು ಇವುಗಳಲ್ಲಿ ಮುತ್ತುಗಳು ಹುಟ್ಟುತ್ತವೆ.] ಹೆಚ್ಚಾಗಿ ಮುತ್ತಿನ ಚಿಪ್ಪುಗಳಿಂದ ಮುತ್ತುಗಳು ಹುಟ್ಟುವವು ಪ್ರಸಿದ್ಧವಾಗಿವೆ.

(ಗ–ಪುಟ ೬೯)

ನಾಸಿಕಾಭರಣ

೬. ಲಲಿತಾ ಸಹಸ್ರನಾಮದಲ್ಲಿ ದೇವಿಯ ನಾಸಿಕವನ್ನು ಹೀಗೆ ವರ್ಣಿಸಿದೆ

(ಶ್ಲೋಕ ೭ ನಾಮ ೧೯ ಮತ್ತು ೨೦)

ನವಚಂಪಕ ಪುಷ್ಪಾಭನಾಸಾದಂಡ ವಿರಾಜಿತಾ
ತಾರಕಾಂತಿತಿರಸ್ಕಾರಿನಾಸಾಭರಣಭಾಸುರಾ

[ಆಗತಾನೇ ಅರಳುತ್ತಿರುವ ಸಂಪಿಗೆಯ ಆಕೃತಿಯಂತಹ ನೀಳವಾದ ಮೂಗುಳ್ಳವಳು ಎಂದು ದೇವಿಯ ಮೂಗನ್ನು ವರ್ಣಿಸಲಾಗಿದೆ (ನಾಮ ೧೯) ಮತ್ತು ನಕ್ಷತ್ರಗಳ ಕಾಂತಿಯನ್ನು ತಿರಸ್ಕರಿಸುವಂತಹ ಹೊಳಪುಳ್ಳ ಮೂಗುಬೊಟ್ಟನ್ನು ಧರಿಸಿದ್ದಾಳೆ (ಕೆಲವರು ಇದು ಬುಲಾಕು ಎಂದಿದ್ದಾರೆ) (ನಾಮ ೨೦).

(ಲ–ಕೂ–ಪುಟ ೮೫)

೭. ಭಾರತೀಯ ಸಂಪ್ರದಾಯದಲ್ಲಿ ಸ್ತ್ರೀಯರು ನವರತ್ನಯುಕ್ತ ಆಭರಣಗಳನ್ನು ಧರಿಸುವುದು ವಾಡಿಕೆ. ನವರತ್ನಗಳು ನವಗ್ರಹ ಸಂಕೇತಗಳಾಗಿರುವುದರಿಂದ ಕಾಲುಷ್ಯಹಾರಿಗಳಾಗಿ ಅವುಗಳನ್ನು ಧರಿಸುತ್ತಾರೆ. ೧) ಕೇತು–ವೈಡೂರ್ಯ, ೨) ಗುರು–ಪುಷ್ಯರಾಗ, ೩) ಬುಧ–ಪಚ್ಚೆ, ೪) ಶನಿ–ನೀಲ, ೫) ರವಿ–ಕೆಂಪು, ೬) ಶುಕ್ರ–ವಜ್ರ, ೭) ರಾಹು–ಗೋಮೇಧಿಕ, ೮) ಕುಜ–ಪಗಡೆ, ೯) ಚಂದ್ರ–ಮುತ್ತು. ಹೀಗೆ ಅವರವರ ಜನ್ಮನಕ್ಷತ್ರಗಳಿಗೆ, ಆರ್ಥಿಕಸ್ಥಿತಿಗೆ ಅನುಗುಣವಾಗಿ ದೋಷ ಪರಿಹಾರಗಳನ್ನು ಧರಿಸುತ್ತಾರೆ. ಆದರೆ ಇಲ್ಲಿ ದೇವಿಯ ಅನುಪಮ ಸೌಂದರ್ಯವನ್ನು ವರ್ಣಿಸಲು ಆಕೆಯ ನಾಸಿಕಾಭರಣವನ್ನು ವರ್ಣಿಸಲಾಗಿದೆ.

(ಪ–ಪುಟ ೯೪)

೮. ಅಂಗಾರಕ, ಶುಕ್ರ ಗ್ರಹಗಳ ಪ್ರತೀಕವಾದ ಕೆಂಪು ಮಾಣಿಕ್ಯ, ಬಿಳಿ ಬಣ್ಣ ಅಧಿಕ ಶಾಂತಿಯಿಂದ ಕೂಡಿದ್ದರೂ ದೇವಿಗೆ ವಜ್ರದ ಮೂಗುತಿಯೇ ಶೋಭಾಯಮಾನವಾಗಿದೆ.


(ಭ–ಪುಟ ೬೫)

೯. ಮುಕ್ತಾಮಣಿ ಎನ್ನಲು ಕನ್ನಡದಲ್ಲಿ ಅನುವಾದಕರು ಒಂದೊಂದು ತೆರ ಅನುವಾದಿಸಿದ್ದಾರೆ. ಮುತ್ತು ಮತ್ತು ಮೂಗುತಿ, ತೂಗುಬಟ್ಟು, ಬುಲಾಕು, ಕರ್ಣಾಭರಣ ಇತ್ಯಾದಿಯಾಗಿ.

೧೦. ಶ್ರೀದೇವಿಯ ಕಣ್ಣುಗಳ ಮಹಿಮೆ ಮತ್ತು ಸೊಬಗನ್ನು ಈ ಹಿಂದಿನ ೧೦ ಶ್ಲೋಕಗಳಲ್ಲಿ ಬಣ್ಣಿಸಿ ಈ ಮುಂದಿನ ಪದ್ಯದಲ್ಲಿ ಅದರ ಮಹತ್ತನ್ನು ಮತ್ತಷ್ಟು ವರ್ಣಿಸಿ ಕವಿಯು ಅದನ್ನು ಸಮಾಪ್ತಿಗೊಳಿಸಿದ್ದಾನೆ

(ಬು–ಪುಟ ೧೫೬)

ಯಂತ್ರಾರಾಧನೆ (ಶ್ಲೋಕ ೬೧)



ಯಂತ್ರ ರಚನೆ : ಚಿನ್ನದಲ್ಲಿ ಯಂತ್ರ ಮಾಡಬೇಕು ತುದಿಗಳಲ್ಲಿ ಮೂರು ತ್ರಿಶೂಲಗಳನ್ನು ಹೊಂದಿರುವ ಹಾಗೆ ಕೆಳಮುಖವಾದ ಸಮಭುಜ ತ್ರಿಕೋಣವನ್ನು ಬರೆದು ನಡುವೆ ಹ್ರೀಂ ಎಂಬ ಬೀಜಾಕ್ಷರವನ್ನು ಬರೆಯಬೇಕು.

ಪೂಜೆ : ಪೂರ್ವಾಭಿಮುಖವಾಗಿ ಕುಳಿತು ಲಲಿತಾ ಸಹಸ್ರನಾಮ ಕುಂಕುಮಾರ್ಚನೆಯನ್ನು ಮಾಡಬೇಕು.

ನೈವೇದ್ಯ : ತೆಂಗಿನಕಾಯಿ, ಬಾಳೆಹಣ್ಣು ಮತ್ತು ಜೇನುತುಪ್ಪ.

ಜಪ : ೮ ದಿನಗಳ ಕಾಲ ಪ್ರತಿದಿನ ೧೨೦೦೦ ಸಲದಂತೆ ಜಪಿಸಿ ಈ ಯಂತ್ರವನ್ನು ಸ್ತ್ರೀಯರು ಆಭರಣಗಳೊಡನೆ ಧರಿಸಬೇಕು.

ಫಲ : **ಸಕಲ ಪುರುಷವಶ್ಯತೆ.**

ಶ್ಲೋಕ–೬೨

ದೇವಿಯ ತುಟಿಗಳ ವರ್ಣನೆ

ಪ್ರಕೃತ್ಯಾऽऽರಕ್ತಾಯಾಸ್ತವ ಸುದತಿ ದಂತಚ್ಛದರುಚೇಃ
ಪ್ರವಕ್ಷ್ಯೇ ಸಾದೃಶ್ಯಂ ಜನಯತು ಫಲಂ ವಿದ್ರುಮಲತಾ ।
[೧]ನ ಬಿಂಬಂ [೨]ತದ್ಬಿಂಬಪ್ರತಿಫಲನರಾಗಾದ[೩]ರುಣಿತಂ
ತುಲಾಮಧ್ಯಾರೋಢುಂ ಕಥಮಿವ [೪]ವಿಲಜ್ಜೇತ ಕಲಯಾ ॥ ೬೨ ॥

ಪಾಠಾಂತರ

೧. (ನ ಬಿಂಬಂ) = ಕ್ವ ಬಿಂಬಂ (ಸು)
೨. (ತದ್ಬಿಂಬ) = ತದ್ಬಿಂಬಂ ; ದೃಗ್ಬಿಂಬಂ (ಸು)
೩. (ಅರುಣಿತಂ) = ಅರುಣಿಮ
೪. (ವಿಲಜ್ಜೇತ) = ನ ಲಜ್ಜೇತ (ಸು)

ಪದವಿಭಾಗ

(ಪ್ರಕೃತ್ಯಾऽऽರಕ್ತಾಯಾಸ್ತವ) = ಪ್ರಕೃತ್ಯಾ + ಆರಕ್ತಾಯಾಃ, + ತವ, ಸುದತಿ, ದಂತಚ್ಛದರುಚೇಃ, ಪ್ರವಕ್ಷ್ಯೇ, ಸಾದೃಶ್ಯಂ, ಜನಯತು, ಫಲಂ, ವಿದ್ರುಮಲತಾ, ನ, ಬಿಂಬಂ, (ತದ್ಬಿಂಬಪ್ರತಿಫಲನರಾಗಾದರುಣಿತಂ) = ತದ್ಬಿಂಬಪ್ರತಿಫಲನ ರಾಗಾತ್ + ಅರುಣಿತಂ, (ತುಲಾಮ ಧ್ಯಾರೋಢುಂ) = ತುಲಾಂ + ಅಧಿ+ಆರೋಢುಂ, (ಕಥಮಿವ) = ಕಥಂ + ಇವ, ವಿಲಜ್ಜೇತ, ಕಲಯಾ.

ಅನ್ವಯಾರ್ಥ

(ಹೇ) ಸುದತಿ	ಸುಂದರವಾದ ದಂತಪಂಕ್ತಿಯುಳ್ಳವಳೇ
ತವ	ನಿನ್ನ
ಪ್ರಕೃತ್ಯಾ	ಸ್ವಭಾವದಿಂದ
ಆರಕ್ತಯಾ	ಬಹಳ ಕೆಂಪಾಗಿರುವ
ದಂತಚ್ಛದರುಚೇಃ	(ಹಲ್ಲುಗಳಿಗೆ ಮುಚ್ಚಳದಂತಿರುವ) ತುಟಿಗಳ ಕಾಂತಿಗೆ
ಸಾದೃಶ್ಯಂ	ಹೋಲಿಕೆಯನ್ನು

ಪ್ರವಕ್ಷ್ಯೇ	ಮುಂದೆ ಹೇಳುವೆನು
ವಿದ್ರುಮಲತಾ	ಹವಳದ ಬಳ್ಳಿಯು
ಫಲಂ	ಹಣ್ಣನ್ನು
ಜನಯತು	ಬಿಡಲಿ
ಬಿಂಬಂ ಪುನಃ	ಇನ್ನು ತೊಂಡೆಹಣ್ಣಾದರೋ
ತದ್ಬಿಂಬ	ಆ ತುಟಿಯ ಆಕಾರದ
ಪ್ರತಿಫಲನ	ನೆರಳಿನಿಂದವುಂಟಾದ
ರಾಗಾದರುಣಿತಂ	ಸಂಬಂಧದಿಂದ ಕೆಂಪು ಬಣ್ಣವುಳ್ಳದ್ದಾಗಿ
ಕಲಯಾ	ಸ್ವಲ್ಪಭಾಗದಲ್ಲಾದರೂ
ತುಲಾಮಧ್ಯಾರೋಢುಂ	(ತುಲಾಂ + ಅಧ್ಯಾರೋಢುಂ) ಹೋಲಿಕೆಯನ್ನು ಹೊಂದುವುದಕ್ಕೆ
ಕಥಮಿವ	(ಕಥಂ + ಇವ) ಹೇಗೆ ತಾನೇ
ವಿಲಜ್ಜೇತ	ನಾಚಿಕೆಪಡುವುದಿಲ್ಲ !

ತಾತ್ಪರ್ಯ

ಹೇ ಸುದತಿಯೇ, (ಸುಂದರವಾದ ಹಲ್ಲಿನ ಸಾಲುಳ್ಳವಳೇ) ಸಹಜವಾಗಿಯೇ ಸುಂದರ ದಂತಪಂಕ್ತಿಯುಳ್ಳ ನಿನ್ನ ತುಟಿಗಳು ಕೆಂಪಾದ ಕಾಂತಿಯಿಂದ ಕೂಡಿವೆ. ಈ ನಿನ್ನ ಕೆಂಪುತುಟಿಗಳಿಗೆ ಹೋಲಿಕೆಯನ್ನು ಹೇಳಬೇಕಾದರೆ, ಹವಳದ ಬಳ್ಳಿ ಹಣ್ಣು ಬಿಟ್ಟರೆ ಆ ಹಣ್ಣಿನ ಕೆಂಪುಬಣ್ಣ ನಿನ್ನ ತುಟಿಗಳ ಕೆಂಪು ಕಾಂತಿಗೆ ಸರಿದೂಗುತ್ತದೆ. ಅಷ್ಟೇ ಹೊರತು ಕೇವಲ ಹವಳದಬಳ್ಳಿ ನಿನ್ನ ತುಟಿಗಳ ಕೆಂಪಿಗೆ ಸರಿಸಮಾನವಾಗದು. ಇನ್ನು ನಿನ್ನ ತುಟಿಗಳ ಕೆಂಪು ಸಹಜವಾಗಿ ನಿನ್ನದೇ ಆದುದರಿಂದ ಬಿಂಬಫಲ (ತೊಂಡೆಹಣ್ಣು) ದ ಕೆಂಪು ನಿನ್ನ ತುಟಿಗಳ ಕೆಂಪುಬಣ್ಣಕ್ಕೆ ಸಾಟಿಯಾಗದು, ನಿನ್ನ ತುಟಿಗಳ ಕೆಂಪು ಬಣ್ಣ ಪ್ರತಿಬಿಂಬಿಸುವುದರಿಂದಲೇ ತೊಂಡೆಹಣ್ಣು ಬಿಂಬಫಲ ಎನ್ನಿಸಿತು. ಆದರೆ ಅದಕ್ಕೆ ದೇವಿಯ ತುಟಿಯ ಕೆಂಪು ಸಾಟಿಯಾಗದೆ ತೊಂಡೆಹಣ್ಣು ನಾಚುತ್ತಿದೆ. ಯಾವ ರೀತಿಯಲ್ಲೂ ದೇವಿಯ ತುಟಿಗಳಿಗೆ ಲೋಕದಲ್ಲಿ ತೊಂಡೆಹಣ್ಣಾಗಲಿ ಹವಳದ ಕೆಂಪಾಗಲಿ ಸಾಟಿಯಿಲ್ಲ ಎಂಬುದು ಈ ಶ್ಲೋಕದ ಸಾರ.

ಪದ್ಯಾನುವಾದ

ಹೇ ಸುದತಿ, ಸಹಜವಾಗಿಯೆ ರಕ್ತವರ್ಣವನು
ತಳೆದಿರುವ ನಿನ್ನ ತುಟಿಗಳ ಕೆಂಪುಕಾಂತಿಗೆಣೆ-
ಯನು ಪೇಳ್ವೆ; ಹವಳಬಳ್ಳಿಯು ತಾನು ಹಣ್ಣುಬಿಟ್ಟಿದೆಯೆಂದು ಹೇಳಲುಂಟು;
ನಿನ್ನ ತುಟಿಗಳ ಕೆಂಪು ಪ್ರತಿಬಿಂಬಿಸಲು ಬಿಂಬ-
ವೆಂಬ ಹೆಸರನು ತೊಂಡೆಹಣ್ಣು ತಳೆದಿರಲೇನು?
ನಿನ್ನ ತುಟಿಗೆಣೆ ನಾನು ಎಂದೆನಲು ನಾಚಿಕೊಳದಿರುವುದೇ ತೊಂಡೆ ತಾನು?
॥ ೬೨ ॥

ಟಿಪ್ಪಣಿಗಳು

ಅಲಂಕಾರ

೧. ಈ ಶ್ಲೋಕದಲ್ಲಿ ಅತಿಶಯೋಕ್ತಿ ಅಲಂಕಾರವಿದೆ. ಪದ್ಯದ ಉತ್ತರಾರ್ಧದಲ್ಲಿ ಸಂಬಂಧವಿಲ್ಲದಿದ್ದರೂ ಸಂಬಂಧವನ್ನು ಕಲ್ಪಿಸಿ ವರ್ಣನೆ ಮಾಡಿರುವ ಪ್ರಯುಕ್ತ ಅತಿಶಯೋಕ್ತಿ ಅಲಂಕಾರವಾಗುತ್ತದೆ.

(ಶೇ–ಪುಟ ೨೦೬)

ತೊಂಡೆಹಣ್ಣಿನ ಹೋಲಿಕೆ

೨. ಲಲಿತಾ ಸಹಸ್ರನಾಮದಲ್ಲಿ (ಶ್ಲೋಕ ೯ ನಾಮ ೨೪) "ನವವಿದ್ರುಮಬಿಂಬ ಶ್ರೀನ್ಯಕ್ಕಾರಿರದನಚ್ಛದಾ" ಎಂದು ಹೇಳಿದೆ. (ಹೊಸಹವಳದ ಮತ್ತು ತೊಂಡೆಹಣ್ಣಿನ ಕಾಂತಿಯನ್ನು ತಿರಸ್ಕರಿಸುವಂತಹ ಕಾಂತಿಯುಕ್ತವಾಗಿರುವ ತುಟಿಗಳು ಉಳ್ಳವಳು.)

೩. "ಸಾಮಾನ್ಯವಾಗಿ ಸ್ತ್ರೀಯರ ತುಟಿಯನ್ನು ಕವಿಗಳು ತೊಂಡೆಹಣ್ಣಿಗೆ ಹೋಲಿಸುವರು. ಆದರೆ ತುಟಿಯ ಸೌಂದರ್ಯವೇ ಅನುಪಮ. ತೊಂಡೆಹಣ್ಣು ಎಷ್ಟೇ ಸುಂದರವಾಗಿದ್ದರೂ 'ಇದು ನೋಡು ಒಳ್ಳೆಯ ಸ್ತ್ರೀಯರ ತುಟಿ ಇದ್ದ ಹಾಗಿದೆ' ಎಂದು ಯಾರೂ ಹೇಳುವುದಿಲ್ಲ. ಆದರೆ ಪ್ರಕೃತಿಯ ಸೃಷ್ಟಿಯಲ್ಲಿ ಅತಿಶ್ರೇಷ್ಠವಾಗಿರುವ ದೇವೀ ಶರೀರ ಸೌಂದರ್ಯವನ್ನು ಜಗತ್ತಿನ ಯಾವುದೇ ವಸ್ತುವಿಗೆ ಹೋಲಿಸಲಾಗದು"

(ರ–ಪುಟ ೭೦)

೪. ಸಾಮಾನ್ಯವಾಗಿ ತುಟಿಗಳ ಕೆಂಪು ಚೆಲುವನ್ನುಹವಳದ ಬಳ್ಳಿಗೆ ತೊಂಡೆಹಣ್ಣನ್ನು ಹೋಲಿಸುವರು. ಆದರೆ ದೇವಿಯ ವಿಚಾರದಲ್ಲಿ ಇದು ಸಾಧ್ಯವಿಲ್ಲ. ಏಕೆಂದರೆ ಹವಳದ ಬಳ್ಳಿಗೆ ಹಣ್ಣು ಬಿಟಿದ್ದರೆ ಹೋಲಿಸಬಹುದು. ಆದರೆ ಬಳ್ಳಿ ಹೇಗೆ ದೇವಿಯ ತುಟಿ ಚೆಲುವಿಗೆ ಸಾಟಿಯಾದೀತು? ಇನ್ನು ತೊಂಡೆಹಣ್ಣಿನ

ಕೆಂಪು ದೇವಿಯ ಕೆಂಪು ತುಟಿಗಳ ಪ್ರತಿಬಿಂಬದಿಂದಲೇ ಅಷ್ಟು ಕೆಂಪಾಗಿರುವುದರಿಂದ ಕಲಾ ಮಾತ್ರ (ಚಂದ್ರನ ಕಲೆಯ ೧/೧೬ ಭಾಗದಷ್ಟು) ಹೋಲಿಸಲು ಸಾಧ್ಯವಿಲ್ಲ. ಹೀಗಾಗಿ ಲೋಕದಲ್ಲಿ ದೇವಿಯ ತುಟಿಗಳ ಚೆಲುವಿನಿಂದಲೇ ಹವಳದ ಬಳ್ಳಿಗೆ ತೊಂಡೆಹಣ್ಣಿಗೆ ಕೆಂಪು ಶೋಭೆ ಬಂದಿದೆ ಹೊರತು ಅವುಗಳಿಂದ ಅಲ್ಲ. ಅಂಥ ಅನುಪಮ ಸೌಂದರ್ಯ ದೇವಿಯದು.

೫. ತೊಂಡೆಯ ಹಣ್ಣಿಗೆ ಬಿಂಬ ಫಲವೆಂದು ಹೆಸರು. ಇಲ್ಲಿ ಬಿಂಬ ಶಬ್ದಕ್ಕೆ ಪ್ರತಿಬಿಂಬವೆಂಬ ತಾತ್ಪರ್ಯವು. ಅಂದರೆ ಯಾವುದೋ ಒಂದು ವಸ್ತುವಿಗೆ ಪ್ರತಿಬಿಂಬವಾದ ಫಲವೆಂಬುದಕ್ಕೆ ಪ್ರತಿಯಾಗಿ ಬಿಂಬಫಲವೆಂದು ಹೆಸರುಂಟಾಗಿದೆ. ಇಲ್ಲಿ ದೇವಿಯ ತುಟಿಗೆ ಪ್ರತಿಬಿಂಬವಾದುದರಿಂದ ಬಿಂಬಫಲವೆಂದು ಹೆಸರು ಬಂದಿದೆಯೆಂದು ಕವಿಗಳು ಕಲ್ಪಿಸಿಕೊಂಡು ವರ್ಣಿಸುತ್ತಾರೆ (K).

ಯಂತ್ರಾರಾಧನೆ (ಶ್ಲೋಕ ೬೨)

ಮಂ

ಮಂ

ಮಂ

ಯಂತ್ರ ರಚನೆ : ಚಿನ್ನದ ತಗಡಿನಲ್ಲಿ ಯಂತ್ರ ರಚಿಸಬೇಕು. ದೀರ್ಘ ಚತುರಶ್ರ (ಆಯಾಕಾರದ ಚೌಕ) ರಚಿಸಿ ಅದರ ಮಧ್ಯೆ 'ಮಂ' ಬೀಜಾಕ್ಷರ ೩ ಬಾರಿ ಒಂದರ ಕೆಳಗೊಂದು ಬರುವಂತೆ ಬರೆಯಬೇಕು.

ಪೂಜೆ : ಗರಿಕೆ (ದೂರ್ವಾ)ಗಳಿಂದ ಲಲಿತಾಷ್ಟೋತ್ತರ ಅರ್ಚನೆ ಮಾಡಬೇಕು.

ನೈವೇದ್ಯ : ಉದ್ದಿನವಡೆ ಮತ್ತು ಜೇನುತುಪ್ಪ.

ಜಪ : ಪ್ರತಿದಿನ ೮೦೦೦ ಬದಿ ೮ ದಿನಗಳ ಕಾಲ ಈಶಾನ್ಯದಿಕ್ಕಿಗೆ ಅಭಿಮುಖವಾಗಿ ಕುಳಿತು ಜಪಿಸಬೇಕು.

ಫಲ : (ನಿದ್ರೆ ಬಾರದಿರುವವರ ತಲೆದಿಂಬಿನ ಕೆಳಗೆ ಈ ಪೂಜಿಸಿದ ಯಂತ್ರವನ್ನು ಇಟ್ಟರೆ. ಸುಖನಿದ್ರೆ ಬರುತ್ತದೆ.

ಸುಖನಿದ್ರಾಲಾಭ.

ಶ್ಲೋಕ-೬೩

ದೇವಿಯ ವದನಬಿಂಬ ವರ್ಣನೆ

ಸ್ಮಿತಜ್ಯೋತ್ಸ್ನಾಜಾಲಂ ತವ ವದನಚಂದ್ರಸ್ಯ ಪಿಬತಾಂ
ಚಕೋರಾಣಾಮಾಸೀದತಿರಸತಯಾ ಚಂಚುಜಡಿಮಾ ।
ಅತಸ್ತೇ ಶೀತಾಂಶೋರಮೃತಲಹರೀ[೧]ಮಾಮ್ಲರುಚಯಃ
ಪಿಬಂತಿ ಸ್ವಚ್ಛಂದಂ ನಿಶಿ ನಿಶಿ ಭೃಶಂ ಕಾಂಜಿಕಧಿಯಾ ॥ ೬೩ ॥

ಪಾಠಾಂತರ

೧. (ಮಾಮ್ಲರುಚಯಃ) = ಮಮ್ಲರುಚಯಃ (ಸು)

ಪದವಿಭಾಗ

ಸ್ಮಿತಜ್ಯೋತ್ಸ್ನಾಜಾಲಂ, ತವ, ವದನಚಂದ್ರಸ್ಯ, ಪಿಬತಾಮ್, (ಚಕೋರಾಣಾಮಾಸೀದತಿರಸತಯಾ) = ಚಕೋರಾಣಾಮ್ + ಆಸೀತ್ + ಅತಿರಸತಯಾ ಚಂಚುಜಡಿಮಾ, (ಅತಸ್ತೇ) = ಅತಃ + ತೇ, (ಶೀತಾಂಶೋರಮೃತಲಹರೀಮಾಮ್ಲರುಚಯಃ) = ಶೀತಾಂಶೋಃ + ಅಮೃತಲಹರೀಂ + ಆಮ್ಲರುಚಯಃ, ಪಿಬಂತಿ, ಸ್ವಚ್ಛಂದಂ, ನಿಶಿ, ನಿಶಿ, ಭೃಶಂ, ಕಾಂಜಿಕಧಿಯಾ.

ಅನ್ವಯಾರ್ಥ

(ಹೇ ಭಗವತಿ)	(ಓ ಪೂಜ್ಯಳಾದ ದೇವಿಯೆ,)
ತವ	ನಿನ್ನ
ವದನ ಚಂದ್ರಸ್ಯ	ಮುಖವೆಂಬ ಚಂದ್ರನ
ಸ್ಮಿತಜ್ಯೋತ್ಸ್ನಾಜಾಲಂ	ಮುಗುಳುನಗೆಯೆಂಬ-ಬೆಳುದಿಂಗಳ ಸಮೂಹವನ್ನು
ಪಿಬತಾಂ	ಪಾನ ಮಾಡುತ್ತಿರುವ
ಚಕೋರಾಣಾಂ	ಚಕೋರಪಕ್ಷಿಗಳಿಗೆ
ಅತಿರಸತಯಾ	ಬಹಳ ಸಿಹಿಯಾಗಿರುವುದರಿಂದ
ಚಂಚುಜಡಿಮಾ	ಕೊಕ್ಕುಗಳಲ್ಲಿ (ನಾಲಿಗೆಯಲ್ಲಿ) ಅರುಚಿಯು (ಜಡತೆಯು)

ಆಸೀತ್	ಉಂಟಾಗಿರಬಹುದು
ಅತಸ್ತೇ	(ಅತಃ + ತೇ) ಈ ಕಾರಣದಿಂದಲೇ ಆ ಪಕ್ಷಿಗಳು
ಆಮ್ಲರುಚಯಃ	ಹುಳಿಯಲ್ಲಿ ಆಶೆಯುಳ್ಳವುಗಳಾಗಿ
ಶೀತಾಂಶೋರಮೃತಲಹರೀಂ	ತಂಪಾದ ಕಿರಣಗಳ ಚಂದ್ರನ ಅಮೃತರಸದ ಧಾರೆಯನ್ನು
ಕಾಂಜಿಕಧಿಯಾ	ಹುಳಿಗಂಜಿ ಎಂಬ ಭ್ರಮೆಯಿಂದ
ಸ್ವಚ್ಛಂದಂ	ಯಥೇಚ್ಛವಾಗಿ
ನಿಶಿ ನಿಶಿ	ಪ್ರತಿ ರಾತ್ರಿಯಲ್ಲೂ
ಭೃಶಂ	ಅಧಿಕವಾಗಿ
ಪಿಬಂತಿ	ಪಾನ ಮಾಡುತ್ತವೆ

ತಾತ್ಪರ್ಯ

ಕವಿಯು ದೇವಿಯ ಮುಗುಳುನಗೆಯನ್ನು ಹೀಗೆ ವರ್ಣಿಸುತ್ತಾನೆ.

ಎಲೈ ಪೂಜ್ಯಳಾದ ದೇವಿಯೇ ನಿನ್ನ ಮುಖವೆಂಬುದೇ ಕಮಲವು; ಮುಗುಳುನಗೆ ಎಂಬುದೇ ಚಂದ್ರಿಕೆ (ಬೆಳದಿಂಗಳು). ಬಹಳ ಸಿಹಿಯಾದ ಈ ಬೆಳುದಿಂಗಳನ್ನು ಕುಡಿದು ಕುಡಿದು ಚಕೋರ ಪಕ್ಷಿಗಳಿಗೆ ನಾಲಿಗೆಯಲ್ಲಿ (ಕೊಕ್ಕು ಎಂಬುದೇ ಪಕ್ಷಿಗಳಿಗೆ ನಾಲಿಗೆ) ಅರುಚಿಯು ಹುಟ್ಟಿರಬಹುದೆಂದು ತೋರುತ್ತದೆ. ಆದುದರಿಂದಲೇ ಚಕೋರ ಪಕ್ಷಿಗಳು ಹುಳಿಯಾದ ಪದಾರ್ಥಕ್ಕೆ ಆಸೆಪಟ್ಟು, ಪ್ರತಿದಿನದ ರಾತ್ರಿಯಲ್ಲೂ ಆಕಾಶದಲ್ಲಿ ಪುರಾತನಕಾಲದಿಂದಲೂ ಇರುವ ಚಂದ್ರನ ಬೆಳದಿಂಗಳನ್ನು ಹುಳಿ ಹಿಡಿದಿರುವ ಗಂಜಿಯೆಂದು ಕುಡಿಯುತ್ತಾ ಇವೆ.

ಲೋಕದಲ್ಲಿ ಸಿಹಿ ಪದಾರ್ಥವನ್ನು ವಿಶೇಷವಾಗಿ ತಿಂದವರು ಮಧ್ಯ ಮಧ್ಯದಲ್ಲಿ ಹುಳಿ ಅಥವಾ ಖಾರವಾದ ಪದಾರ್ಥವನ್ನು ಉಪಯೋಗಿಸುವ ಹಾಗೆ ಈ ಚಕೋರ ಪಕ್ಷಿಗಳು ಯಾವಾಗಲೂ ದೇವಿಯ ಮುಖಚಂದ್ರನ ಮುಗುಳುನಗೆಯೆಂಬ ಅತ್ಯಂತ ಸಿಹಿಯಾದ ಚಂದ್ರಿಕೆಯನ್ನು ಕುಡಿದು ಕುಡಿದು ಕೊಕ್ಕಿನಲ್ಲಿ ಅರುಚಿಯುಂಟಾದಾಗ ಪುರಾತನ ಚಂದ್ರನ ಚಂದ್ರಿಕೆಯನ್ನು (ದ್ರವ ಪದಾರ್ಥವು ಬಹಳ ಕಾಲ ಕಳೆದು ಹೋದರೆ ಹುಳಿಯಾಗುವುದು ಸ್ವಭಾವವು ಈ ಭಾವವನ್ನು ಮನಸ್ಸಿನಲ್ಲಿಟ್ಟುಕೊಂಡು) ಹುಳಿಯಾದ ಗಂಜಿ ಎಂಬ ಅಭಿಪ್ರಾಯದಿಂದ ಕುಡಿಯುತ್ತವೆ.

(K).

ಪದ್ಯಾನುವಾದ

ಹೇ ಮಾತೆ, ನಿನ್ನ ಮೊಗ ಚಂದಿರವ ಸುಧೆಗರೆವ
ಬೆಳ್ದಿಂಗಳನು ಪಾನಮಾಡಿದ ಚಕೋರಗಳ
ನಾಲಗೆಯು ಮಧುರರಸದತಿಯಿಂದ ವೆಗಟುಗೊಂಡಿಹುದರೋಚಕತೆಯಿಂದ;
ಅದರಿಂದಲಾ ಚಕೋರಗಳು ಹುಳಿಗಂಜಿಯನು
ಕುಡಿವೆಣಿಕೆಯಿಂದಾಮ್ಲರುಚಿಯುಳ್ಳ ಹಿಮಕರನ
ಅಮೃತಲಹರಿಯನಧಿಕವಾಗಿಷ್ಟಬಂದಂತೆ ಇರುಳಿರುಳು ಹೀರುತಿಹವು ॥ ೬೩ ॥

ಟಿಪ್ಪಣಿಗಳು

ಅಲಂಕಾರ

೧. ನಾಲಿಗೆಯ ಜಡತೆಯ ಕಾರಣದಿಂದ ಬೆಳುದಿಂಗಳನ್ನು ಪಾನ ಮಾಡುವಿಕೆಯ ಸಂಬಂಧ ಇಲ್ಲದಿದ್ದರೂ ಅಂತಹ ಸಂಬಂಧವನ್ನು ಕಲ್ಪಿಸಿ ವರ್ಣನೆ ಮಾಡಲಾಗಿದೆ. ಆದ್ದರಿಂದ ಇಲ್ಲಿ ಅತಿಶಯೋಕ್ತಿ ಅಲಂಕಾರವಿದೆ.

(ಶೇ–ಪುಟ ೨೦೭)

೨. ದೇವಿಯ ಮುಖವು ಚಂದ್ರನಿಗಿಂತ ಅತಿ ಸುಂದರವಾಗಿದೆ. ಅದರ ಕಾಂತಿಯ ಮಾಧುರ್ಯದ ಎದುರು ಬೆಳುದಿಂಗಳು ಹುಳಿಗಂಜಿ ಇದ್ದಂತೆ.

(ಗ–ಪುಟ ೭೧)

ಬೆಳುದಿಂಗಳಪಾನ

೩. "ನಿಜವಾಗಿಯೂ ಚಕೋರ ಪಕ್ಷಿಗಳು ಎಲ್ಲ ಪರ್ವತ ಶಿಖರಗಳ ಮೇಲೆ ಗಿಡ ಮರಗಳಲ್ಲಿ ಇರುತ್ತವೆ ಎನ್ನುತ್ತಾರೆ. ಕಾವ್ಯಗಳಲ್ಲಿ ಮಹರ್ಷಿಗಳು (ರಾಮಾಯಣದಲ್ಲಿ ಮಹೇಂದ್ರಗಿರಿಯ ಮೇಲೆ ಚಕೋರ ಪಕ್ಷಿಗಳನ್ನು ವಾಲ್ಮೀಕಿ ವರ್ಣಿಸಿದ್ದಾನೆ.) ಅವು ಬೆಳುದಿಂಗಳನ್ನು ಕುಡಿಯುವುದಿಲ್ಲ. ಶರತ್ಕಾಲದ ಬೆಳುದಿಂಗಳ ರಾತ್ರಿಯಲ್ಲಿ ಗಿಡಗಳ ಎಲೆಗಳ ಮೇಲಿಂದ ಉದುರುವ ಹಿಮಬಿಂದುಗಳನ್ನು ಆ ಎಲೆಗಳ ಕೆಳಗೆ ಕೊಕ್ಕನ್ನಿಟ್ಟು ಕುಡಿಯುತ್ತವೆ. ಬೆಳುದಿಂಗಳಲ್ಲಿ ಹಿಮಬಿಂದುಗಳು ಬೆಳುದಿಂಗಳನ್ನು

ಪ್ರತಿಬಿಂಬಿಸುವುದರಿಂದ ಬೆಳುದಿಂಗಳ ಹಾಗೆ ಕಾಣಿಸುತ್ತದೆ. ಆದುದರಿಂದ ಚಕೋರಪಕ್ಷಿಗಳು ಬೆಳುದಿಂಗಳನ್ನು ಕುಡಿಯುತ್ತವೆ ಎಂಬ ಭಾವ ಬಂದುಬಿಟ್ಟಿದೆ"

(ಪ–ಪುಟ ೯ಲ)

೪. ಸರ್ವೇಶ್ವರಿಯ ಮುಖಚಂದ್ರನ ಪಾನಮಾಡಿದ ಚಕೋರಿಗಳಿಗೆ ಷೋಡಶಕಲಾಚಂದ್ರನ ಕಿರಣಗಳು ಹುಳು ಎಂಬುದರಿಂದ ಅತಿಶಯೋಕ್ತಿ ಅಲಂಕಾರ (ಟಿಪ್ಪಣಿ ೧ ಹೋಲಿಸಿ)

(ಜ–ಪುಟ ೮೨)

೫. ಲಲಿತಾ ಸಹಸ್ರನಾಮದಲ್ಲಿ (ಶ್ಲೋಕ ೩೪ ನಾಮ ೮೫) **ಶ್ರೀಮದ್ವಾಗ್ಭವಕೂಟೈಕಸ್ವರೂಪ ಮುಖಪಂಕಜಾ** (ವಾಗ್ಭವಕೂಟದ (ಕ.ಏ. ಈ ಲ ಹ್ರೀಂ) ಬೀಜಾಕ್ಷರಗಳ ಶಕ್ತಿಯನ್ನೇ (ಮುಖವಾಗಿ ಉಳ್ಳವಳು) ಎಂದು ಹೇಳಿದೆ. ಪದ್ಮದಂತಿರುವ ಮುಖವು ವಾಣಿಯನ್ನುಂಟುಮಾಡುವ ಮಾತೃಕಾ (ಅಕ್ಷರಗಳ) ಶಕ್ತಿಯ ರೂಪವಾದ ಹ್ರೀಂಕಾರ ಅಥವಾ ಓಂಕಾರದ ಕಳಾರೂಪ ವಾಗಿರುವುದು.

(ಲ–ಯ ಪುಟ ೯೫)

೬. ದೇವಿಯ ಮುಖಪಂಕಜವು (ಪಂಚದಶಾಕ್ಷರೀ ಮಂತ್ರದ) ಶ್ರೀ ಮದ್ವಾಗ್ಭವಕೂಟವನ್ನು ಹೊಂದಿದೆ. ದೇವಿಯ ಸೂಕ್ಷ್ಮರೂಪವು ಮೂರು ವಿಧ. ೧. ಸೂಕ್ಷ್ಮ ೨ ಸೂಕ್ಷ್ಮತರ ೩. ಸೂಕ್ಷ್ಮತಮ ಇವುಗಳಿಗೆ ಕ್ರಮವಾಗಿ ಪಂಚದಶೀ, ವಿದ್ಯಾ, ಕಾಮಕಲಾ ಕುಂಡಲಿನೀ ಎಂಬ ಹೆಸರುಗಳಿವೆ. ಇವುಗಳಲ್ಲಿ ಮೊದಲನೆಯದನ್ನು ೩ ನಾಮಗಳಿಂದ ಹೇಳಿದೆ. ಪಂಚದಶಾಕ್ಷರೀ ಮಂತ್ರಕ್ಕೆ ವಾಗ್ಭವಕೂಟ, ಕಾಮರಾಜಕೂಟ, ಶಕ್ತಿಕೂಟ ಎಂಬ ಮೂರು ಕೂಟಗಳುಂಟು. ಸಮಯಾಚಾರದ ಪ್ರಕಾರ ಈ ಮಂತ್ರವು ದೇವಿಯ ಸೂಕ್ಷ್ಮರೂಪ. ಶ್ರೀಮತ್ ಎಂದರೆ ಜ್ಞಾನಪ್ರದಾಯಕತ್ವವೇ ಮೊದಲಾದ ಮಹಾತ್ಮ್ಯನನ್ನು ಹೊಂದಿರುವುದು ಯಾವುದರಿಂದ ವಾಕ್ಕು ಉಂಟಾಗುವುದೋ ಅದು ವಾಗ್ಭವ ಈ ಕೂಟದಲ್ಲಿ ೫ ಅಕ್ಷರಗಳಿವೆ (ಕ, ಏ, ಈ, ಲ, ಹ್ರೀಂ) (ಲಲಿತಾ ಸಹಸ್ರನಾಮ ೮೫ ನೋಡಿ)


(ಲ–ಆದಿ ಪುಟ ೬೭)

೭. ಶ್ರೀದೇವಿಗೆ ಸ್ಥೂಲ, ಸೂಕ್ಷ್ಮ, ಸೂಕ್ಷ್ಮತರ, ಸೂಕ್ಷ್ಮತಮ ಎಂಬ ೪ ರೂಪಗಳಿವೆ. ಆಕೆಯ ಜಗನ್ಮೋಹನರೂಪ ಸ್ಥೂಲವಾದುದು, ಪಂಚದಶೀ ಮಂತ್ರವು ಆಕೆಯ ಸೂಕ್ಷ್ಮರೂಪ, ಕಾಮಕಲಾಕ್ಷರವು (ಸೂಕ್ಷ್ಮತರ ರೂಪ), ಪರರೂಪವು (ಕುಂಡಲಿನೀ ರೂಪ) ಸೂಕ್ಷ್ಮತಮವಾದುದು. ಲಲಿತಾ ತ್ರಿಶತಿಯಲ್ಲಿ ಮೊದಲ ೧೦೦ ನಾಮಗಳು ವಾಗ್ಭವ ಕೂಟದ ವಿವರಣೆ ಎನ್ನುತ್ತಾರೆ.

೮. ಮೂಕ ಪಂಚಶಿತಿಯಲ್ಲಿ ದೇವಿಯ ನಗುವು ಬೆಳುದಿಂಗಳಿನ ಹಾಗೆ ಕೇವಲ ಶರೀರತಾಪವನ್ನು ಹೋಗಲಾಡಿಸುವುದಿಲ್ಲ. ಭಕ್ತರ, ಅಂತಸ್ತಾಪವನ್ನು ಹೋಗಲಾಡಿಸಿ ವಾಕ್‌ಶಕ್ತಿ ಅನುಗ್ರಹಿಸುತ್ತದೆ ಎಂದು ಹೇಳಿದೆ.

(ಭ–ಪುಟ ೬೭)

ಯಂತ್ರಾರಾಧನೆ (ಶ್ಲೋಕ ೬೩)



ಯಂತ್ರ ರಚನೆ : ಚಿನ್ನದಲ್ಲಿ ಯಂತ್ರ ಮೂಡಿಸಬೇಕು. ದೀರ್ಘ ಚತುರಶ್ರ (ಆಯಾಕಾರದ ಚೌಕ) ನಕ್ಷೆಮಾಡಿ ಮಧ್ಯದಲ್ಲಿ ಹ್ರೀಂ ಬೀಜಾಕ್ಷರ ಬರೆಸಿ ಪೂರ್ತಿ ಶ್ಲೋಕವನ್ನು ಯಂತ್ರದಲ್ಲಿ ಬರೆಸಬೇಕು.

ಪೂಜೆ : ಲಲಿತಾಷ್ಟೋತ್ತರ ಅರ್ಚನೆಯನ್ನು ಮಾಡಬೇಕು.

ನೈವೇದ್ಯ : ತೆಂಗಿನಕಾಯಿ.

ಜಪ : ೩೦ ದಿನಗಳ ಕಾಲ ದಿನಕ್ಕೆ ೩೦೦೦ ಬಾರಿ ಈ ಶ್ಲೋಕವನ್ನು ಜಪಿಸಬೇಕು.

ಫಲ : **ತಾನು ಹೇಳಿದಂತೆ ಎಲ್ಲರೂ ಕೇಳುವರು.**

ಟಿಪ್ಪಣಿ : ಕೇರಳದ ಮಲೆಯಾಳ ಭಾಷೆಯ ಗ್ರಂಥದಲ್ಲಿ ಯಂತ್ರ ಕಂಡುಬರುವುದಿಲ್ಲ.

ಶ್ಲೋಕ–೬೪

ದೇವಿಯ ಜಿಹ್ವಾಗ್ರ ವರ್ಣನೆ

ಅವಿಶ್ರಾಂತಂ ಪತ್ಯುರ್ಗುಣಗಣಕಥಾಮ್ರೇಡನಜಪಾ
ಜಪಾಪುಷ್ಪಚ್ಛಾಯಾ ತವ ಜನನಿ ಜಿಹ್ವಾ ಜಯತಿ ಸಾ ।
ಯದಗ್ರಾಸೀನಾಯಾಸ್ಸ್ಫಟಿಕದೃಷದಚ್ಛ[1]ಚ್ಛವಿಮಯೀ
ಸರಸ್ವತ್ಯಾ ಮೂರ್ತಿಃ ಪರಿಣಮತಿ ಮಾಣಿಕ್ಯವಪುಷಾ ॥ ೬೪ ॥

ಪಾಠಾಂತರ

೧. (ಚ್ಛವಿಮಯೀ) = ಚ್ಛವಿರುಚಿಃ (ಸು)

ಪದವಿಭಾಗ

ಅವಿಶ್ರಾಂತಂ, (ಪತ್ಯುರ್ಗುಣಗಣಕಥಾಮ್ರೇಡನಜಪಾ) = ಪತ್ಯುಃ + ಗುಣಗಣಕಥಾ + ಆಮ್ರೇಡನಜಪಾ, ಜಪಾಪುಷ್ಪಚ್ಛಾಯಾ, ತವ, ಜನನಿ, ಜಿಹ್ವಾ, ಜಯತಿ, ಸಾ, (ಯದಗ್ರಾಸೀನಾಯಾಃ) = ಯತ್ + ಅಗ್ರ+ಆಸೀನಾಯಾಃ, (ಸ್ಫಟಿಕ ದೃಷದಚ್ಛವಿಮಯೀ = ಸ್ಫಟಿಕದೃಷತ್ + ಅಚ್ಛಚ್ಛವಿಂ + ಅಯೀ, (ಸರಸ್ವತ್ಯಾ) ಸರಸ್ವತ್ಯಾಃ, ಮೂರ್ತಿಃ, ಪರಿಣಮತಿ, ಮಾಣಿಕ್ಯವಪುಷಾ.

ಅನ್ವಯಾರ್ಥ

(ಹೇ) ಜನನೀ	(ಎಲೈ) ತಾಯಿಯೇ
ತವ ಸಾ ಜಿಹ್ವಾ	ನಿನ್ನ ಆ ನಾಲಗೆಯು
ಅವಿಶ್ರಾಂತಂ	ನಿರಂತರವಾಗಿ
ಪತ್ಯುಃ	ಪತಿಯಾದ (ಗಂಡನಾದ) ಪರಮೇಶ್ವರನ
ಗುಣಗಣಕಥಾಮ್ರೇಡನಜಪಾ	ಗುಣಗಳ ಸಮೂಹಗಳ ಸಮಾಚಾರವನ್ನು ಬಾರಿ ಬಾರಿಗೂ (ಹೇಳೋಣವೆಂಬ) ಪಠಿಸುವ ಜಪವಾಗಿದೆ
ಜಪಾಪುಷ್ಪಚ್ಛಾಯಾ	ದಾಸವಾಳದ ಹೂವಿನಂತೆ ಕಾಂತಿಯುಳ್ಳದ್ದಾಗಿ

ಜಯತಿ	ಸರ್ವೋತ್ಕೃಷ್ಟವಾಗಿದೆ (ಶೋಭಿಸುತ್ತದೆ)
ಯದಗ್ರಾಸೀನಾಯಾಃ	(ಯತ್ + ಅಗ್ರ + ಆಸೀನಾಯಾಃ) ಯಾವ ನಾಲಿಗೆಯ ತುದಿಯಲ್ಲಿ ಕುಳಿತುಕೊಂಡಿರುವ
ಸರಸ್ವತ್ಯಾಃ	ಸರಸ್ವತೀ ದೇವಿಯ
ಸ್ಫಟಿಕದೃಷದಚ್ಛಚ್ಛವಿಮಯಿಾ	(ಸ್ಫಟಿಕದೃಷತ್ - ಅಚ್ಛಚ್ಛ ವಿಮಯಿಾ) = ಸ್ಫಟಿಕದ ಶಿಲೆಯಂತೆ ನಿರ್ಮಲವಾದ ಕಾಂತಿಯಿಂದ
ಮೂರ್ತಿಃ	ಕೂಡಿದ ಶರೀರವು
ಮಾಣಿಕ್ಯವಪುಷಾ	ಕೆಂಪುರತ್ನದಂತೆ ಇರುವ-ಆಕಾರದಂತೆ
ಪರಿಣಮತಿ	ಪರಿಣಾಮಗೊಳ್ಳುತ್ತದೆ (ರೂಪಾಂತರ ಗೊಳ್ಳುತ್ತದೆ)

ತಾತ್ಪರ್ಯ

ಕವಿಯು ದೇವಿಯ ನಾಲಿಗೆಯನ್ನು ವರ್ಣಿಸುತ್ತಾನೆ : ಎಲೈ ತಾಯೇ, ನಿನ್ನ ಆ ನಾಲಗೆಯು ನಿರಂತರವಾಗಿ ನಿನ್ನ ಗಂಡನಾದ ಪರಮೇಶ್ವರನ ತ್ರಿಪುರದಹನ, ಅಂಧಕಾಸುರನ ಸಂಹಾರ, ವಿಷಪಾನ ಮುಂತಾದ ಸಾಹಸಕೃತ್ಯಗಳ ಕಥೆಗಳ ಜಪಮಾಡುತ್ತಾ ಜಪಾಪುಷ್ಪದಂತೆ (ಕೆಂಪು ದಾಸವಾಳದ ಹೂವಿನಂತೆ) ಬಹಳ ಕೆಂಪಾಗಿ ಪ್ರಕಾಶಮಾನವಾಗಿ ಸರ್ವೋತ್ಕೃಷ್ಟವಾಗಿದೆ.

ಯಾವ ನಾಲಿಗೆಯ ತುದಿಯಲ್ಲಿ ಕುಳಿತುಕೊಂಡಿರುವ ಸರಸ್ವತಿಯ ಶುಭ್ರವಾದ ಸ್ಫಟಿಕದಂತಿರುವ ಶರೀರವು ಈ ನಾಲಿಗೆಯ ಕಾಂತಿಯಿಂದ ವ್ಯಾಪ್ತವಾಗಿ, ನೋಡುವವರಿಗೆ ಪದ್ಮರಾಗಮಣಿಯಂತೆ (ಕೆಂಪು ಹರಳಿನಂತೆ) ಕೆಂಪಗೆ ಕಾಣುತ್ತಿದೆ. ನಾಲಿಗೆಯ ತುದಿಯಲ್ಲಿ ವಾಗಿಂದ್ರಿಯವು ಇರುವುದು. ಅಂದರೆ ಜಿಹ್ವಾಗ್ರದಿಂದ ಹೊರಡುವ ಶಬ್ದಗಳೆಲ್ಲಾ ಸರಸ್ವತೀ ಸ್ವರೂಪಗಳೆಂದು ಭಾವಿಸಿ ಅಲ್ಲಿ ಸರಸ್ವತಿಯು ಇರುವಳೆಂದು ವರ್ಣಿಸಲಾಗಿದೆ (K).

ಪದ್ಯಾನುವಾದ

ಹೇ ಜನನಿ! ನಿನ್ನ ಆ ನಾಲಗೆಯು ಎಡೆಬಿಡದೆ
ಪತಿಯಾ ಪ್ರಸಿದ್ಧ ಗುಣಗಣದ ಕಥನದ ಜಪಾ-
ಸಕ್ತಿಯಿಂದಾನುತ ಜಪಾಕುಸುಮವರ್ಣವನು ಮೆರೆದು ಗೆಲುವಾಂತಿರುವುದು;
ನಿನ್ನ ನಾಲಗೆಯ ತುದಿಪೀಠದಲ್ಲಿ ಕುಳಿತಿರುವ
ಪಳಿಕುಗಲ್ಲಿನ ಶುದ್ಧ ಧವಳಕಾಂತಿಯಿನೆಸೆವ
ಶಾರದೆಯ ವಿಗ್ರಹವು ಮಾಣಿಕ್ಯಮಯಮೂರ್ತಿಯಾಗಿ ಪರಿಣಮಿಸಿರುವುದು
॥ ೬೪ ॥

ಟಿಪ್ಪಣಿಗಳು

ನಾಲಿಗೆ ವರ್ಣನೆ

೧. ಪತಿಯ ಗುಣಗಳನ್ನು ಹೊಗಳಿ ಹೊಗಳಿ ದೇವಿಯ ನಾಲಿಗೆಯು ಕೆಂಪಾಗಿದೆ ಎಂದು ಈ ಶ್ಲೋಕದ ಅಭಿಪ್ರಾಯ

(ಗ–ಪುಟ ೭೨)

೨. ನಾಲಿಗೆಯಲ್ಲಿ ಕೆಂಪು ಬಣ್ಣ ಮಾತ್ರ ಇರುವುದಷ್ಟೇ ಅಲ್ಲ, ಬಳಿಯಲ್ಲಿರುವ ಪದಾರ್ಥಗಳನ್ನು ಕೆಂಪುಗೊಳಿಸುವ ಶಕ್ತಿಯೂ ಕೂಡ ನಾಲಿಗೆಯ ಕೆಂಪಿಗಿದೆ. ಆದುದರಿಂದಲೇ ಸರ್ವಾತಿಶಯ ವಾಗಿ ಶೋಭಿಸುತ್ತದೆ ಎಂದು ವರ್ಣಿಸಲಾಗಿದೆ. ಇಲ್ಲಿ ತದ್ಗುಣಾ ಲಂಕಾರವಿದೆ. "ತನ್ನ ಗುಣವನ್ನು ಬಿಟ್ಟು ಇನ್ನೊಂದರ ಉತ್ಕೃಷ್ಟ ಗುಣವನ್ನು ಹೊಂದುವುದು ತದ್ಗುಣಾಲಂಕಾರ" ದೇವಿಯ ವದನಕಮಲದಲ್ಲಿ ಸದಾ ಸರಸ್ವತೀ ತನ್ನ ಸ್ವರೂಪದಿಂದ ವಾಸಿಸುತ್ತಾಳೆ.

(ಶೇ–ಪುಟ ೨೦೯)


೩. ಲಲಿತಾ ಸಹಸ್ರನಾಮ (ಶ್ಲೋಕ ೧೩೮ ನಾಮ ೭೦೯) ದಲ್ಲಿ ಸದಾಶಿವ ಪತಿವ್ರತಾ ಎಂದು ಹೇಳಿದೆ (ಸದಾಶಿವನೇ ತನ್ನ ಪತಿ ಎಂಬ ನಿಷ್ಠೆಯುಳ್ಳವಳು). ನಾದ ಮತ್ತು ವಿದ್ಯಾಸ್ವರೂಪಿಣಿಯಾದ ಶ್ರೀ ಸರಸ್ವತೀದೇವಿಯ ಪತಿದೇವನಾದ ಸದಾಶಿವನೆಂದರೆ ಪರಬ್ರಹ್ಮವನ್ನೇ ಅನುವರ್ತಿಸಿಕೊಂಡಿರುವಳು. ಅಂದರೆ ವಿದ್ಯೆಯು ಪರಬ್ರಹ್ಮಕ್ಕೆಂದರೆ ಮೋಕ್ಷಕ್ಕೆ ಅನುಸಾರವಾಗಿದ್ದರೆ, ವಿದ್ಯೆಯೆನಿಸಿಕೊಳ್ಳುವುದೇ ಹೊರತು ಇತರ ವಿದ್ಯೆಗಳು ವಿದ್ಯೆಗಳು ಎನ್ನಿಸಿಕೊಳ್ಳುವುದಿಲ್ಲ. ಅಲ್ಲದೆ ಷಣ್ಮುಖೀ ಮುದ್ರೆಯಿಂದ ಕೇಳುವ ಓಂಕಾರನಾದವು ಪರಬ್ರಹ್ಮನನ್ನು ಅನುವರ್ತಿಸಿಕೊಂಡು ಹೋಗಿ ಪರಬ್ರಹ್ಮತ್ವವನ್ನೇ ಕೂಡುವುದರಿಂದ ನಾದಬ್ರಹ್ಮ ಸ್ವರೂಪಿಣಿಯಾದ ಶ್ರೀದೇವಿಯು ಸದಾಶಿವಪತಿ ವ್ರತಾರೂಪಿಣಿಯಾಗಿದ್ದಾಳೆ.

(ಲ–ಯ ಪುಟ ೨೨೦–೨೨೧)

೪. ಸರ್ವೇಶ್ವರಿಯ ಜಿಹ್ವಾಗ್ರದಲ್ಲಿ ಇದ್ದ ಶ್ವೇತವರ್ಣದ ಸರಸ್ವತಿಯು ದೇವಿಯ ನಾಲಿಗೆಯ ಕೆಂಪಿನ ವರ್ಣದಿಂದ ಕೆಂಪಾದಳು ಎಂಬುದರಿಂದ ತದ್ಗುಣಾಲಯದ ಸರ್ವೇಶ್ವರಿಯ ನಾಲಿಗೆಯಲ್ಲಿ ಸರ್ವದಾ ಸರಸ್ವತಿ ಇರುವಳು ಎಂಬುದು ಆಗಮರಹಸ್ಯವಾಗಿದೆ

(ಜ–ಪುಟ ೮೨)

ಯಂತ್ರಾರಾಧನೆ (ಶ್ಲೋಕ ೬೪)



ಯಂತ್ರ ರಚನೆ : ಈ ಯಂತ್ರವನ್ನು ಕುಂಕುಮದಲ್ಲಿ ರಚಿಸಬೇಕು. ೬ ಮೂಲೆ ತುದಿಗಳಲ್ಲಿ ೬ ತ್ರಿಶೂಲಗಳಿರುವ ಷಟ್ಕೋಣವನ್ನು ಬರೆದು ಅದರಲ್ಲಿರುವ ೬ ತ್ರಿಭುಜಗಳಲ್ಲಿ 'ಶ್ರೀಂ' ಬೀಜಾಕ್ಷರ ಬರೆಯಬೇಕು ಷಟ್ಕೋಣದ ಮಧ್ಯದಲ್ಲಿ ಕ್ಲೀಂ ಬೀಜಾಕ್ಷರವನ್ನು ಬರೆಯಬೇಕು.

ಪೂಜೆ : ಲಲಿತಾ ಸಹಸ್ರನಾಮ ಹೇಳಿ ಕುಂಕುಮಾರ್ಚನೆ ಮಾಡಬೇಕು.

ನೈವೇದ್ಯ : ಜೇನುತುಪ್ಪ, ಬೆಲ್ಲದ ಪಾಯಸ.

ಜಪ : ೮ ದಿನಗಳ ಕಾಲ ದಿನಕ್ಕೆ ೧೦೦೦ ಸಲದಂತೆ ಜಪಿಸಬೇಕು.

ಫಲ : **ಸಕಲ ಜನವಶ್ಯತೆ.**

ಶ್ಲೋಕ–೬೫

ದೇವಿಯ ತಾಂಬೂಲದ ಪವಿತ್ರತಾ ವರ್ಣನೆ

ರಣೇ ಜಿತ್ವಾ [1]ದೈತ್ಯಾನಪಹೃತಶಿರಸ್ತ್ರೈಃ ಕವಚಿಭಿಃ
ನಿವೃತ್ತೈಶ್ಚಂಡಾಂಶತ್ರಿಪುರಹರನಿರ್ಮಾಲ್ಯವಿಮುಖೈಃ ।
ವಿಶಾಖೇಂದ್ರೋಪೇಂದ್ರೈ [2]ಶ್ಶಶಿವಿಶದಕರ್ಪೂರಶಕಲಾಃ
[3]ವಿಲೀಯಂತೇ ಮಾತಸ್ತವ ವದನತಾಂಬೂಲಕಬಲಾಃ ॥ ೬೫ ॥

ಪಾಠಾಂತರ

೧. (ದೈತ್ಯಾನಪಹೃತ) = ದೈತ್ಯಾನುಪಹೃತಂ (ಸು)
೨. (ಶಶಿವಿಶದ) = ಶಶಿಶಿಶಿರ (ಸು)
೩. (ವಿಲೀಯಂತೇ) = ವಿಲಿಪ್ಯಂತೇ, ವಿಲುಂಪ್ಯಂತೇ (ಸು)

ಪದವಿಭಾಗ

ರಣೇ, ಜಿತ್ವಾ, (ದೈತ್ಯಾನಪಹೃತಶಿರಸ್ತ್ರೈಃ) = ದೈತ್ಯಾನ್ + ಅಪಹೃತಶಿರಸ್ತ್ರೈಃ, ಕವಚಿಭಿಃ, (ನಿವೃತ್ತೈಶ್ಚಂಡಾಂಶತ್ರಿಪುರಹರ ನಿರ್ಮಾಲ್ಯ ವಿಮುಖೈಃ) = ನಿವೃತ್ತೈಃ + ಚಂಡಾಂಶ ತ್ರಿಪುರ ಹರ ನಿರ್ಮಾಲ್ಯ ವಿಮುಖೈಃ, ವಿಶಾಖೇಂದ್ರೋಪೇಂದ್ರೈಃ = ವಿಶಾಖ + ಇಂದ್ರ + ಉಪೇಂದ್ರೈಃ, ಶಶಿವಿಶದಕರ್ಪೂರಶಕಲಾಃ, ವಿಲೀಯಂತೇ, (ಮಾತಸ್ತವ) = ಮಾತಃ + ತವ, ವದನತಾಂಬೂಲಕಬಲಾಃ

ಅನ್ವಯಾರ್ಥ

(ಹೇ) ಮಾತಃ	(ಎಲೈ) ತಾಯಿಯೇ
ರಣೇ ದೈತ್ಯಾನ್ ಜಿತ್ವಾ	ಯುದ್ಧದಲ್ಲಿ ರಾಕ್ಷಸರನ್ನು ಜಯಿಸಿ
ನಿವೃತ್ತೈಃ	ಹಿಂದಿರುಗಿ ಬಂದು
ಅಪಹಹೃತ ಶಿರಸ್ತ್ರೈಃ	ತೆಗೆದು ಇರಿಸಲ್ಪಟ್ಟ (ಕಳಚಿದ) ಕಿರೀಟ ಗಳುಳ್ಳ (ಶಿರೋವೇಷ್ಟನಗಳುಳ್ಳ) ಕವಚಧಾರಿಗಳಾದ

ಕವಚಿಭಿಃ	ಚಂಡನೆಂಬ ಪ್ರಮಥನಿಗೆ ಸೇರಿದ ಶಿವ
ಚಂಡಾಂಶ ತ್ರಿಪುರಹರ ನಿರ್ಮಾಲ್ಯ ವಿಮುಖೈಃ	ನಿರ್ಮಾಲ್ಯದ ವಿಷಯದಲ್ಲಿ ಸ್ವೀಕರಿಸದೇ ಇರುವ
ವಿಶಾಖೇಂದ್ರೋಪೇಂದ್ರೈಃ	(ವಿಶಾಖ + ಇಂದ್ರ + ಉಪೇಂದ್ರೈಃ) ಕುಮಾರಸ್ವಾಮಿ ಇಂದ್ರ ವಿಷ್ಣು ಇವರು ಗಳಿಂದ
ಶಶಿವಿಶದಕರ್ಪೂರಶಕಲಾಃ	ಚಂದ್ರನಂತೆ ಶುಭ್ರವಾಗಿರುವ ಪಚ್ಚ ಕರ್ಪೂರದ ಚೂರುಗಳುಳ್ಳ
ತವ ವದನ ತಾಂಬೂಲಕಬಲಾಃ	ನಿನ್ನ ಮುಖದಲ್ಲಿರುವ ತಾಂಬೂಲದ ಉಂಡೆಗಳನ್ನು (ತುತ್ತುಗಳನ್ನು)
ವಿಲೀಯಂತೇ	ಸ್ವೀಕರಿಸುತ್ತಾರೆ.

ತಾತ್ಪರ್ಯ

ದೇವಿಯ ಬಾಯಿಯಲ್ಲಿರುವ ತಾಂಬೂಲದ ಉಂಡೆಯನ್ನು ಕವಿಯು ವರ್ಣಿಸುತ್ತಾನೆ. ಎಲೈ ತಾಯೇ, ಕುಮಾರಸ್ವಾಮಿ, ವಿಷ್ಣು, ಇಂದ್ರ, ಇವರುಗಳು ಕವಚ ಕಿರೀಟಗಳನ್ನು ಧರಿಸಿ, ಯುದ್ಧಕ್ಕೆ ಹೋಗಿ ಅಲ್ಲಿ ದೈತ್ಯರನ್ನು ಗೆದ್ದು, ಹಿಂತಿರುಗಿ ಬಂದು ಕಿರೀಟವನ್ನು ಕಳೆದಿರಿಸಿ, ಕುಮಾರಸ್ವಾಮಿಯನ್ನು ಮುಂದು ಮಾಡಿಕೊಂಡು ನಿನಗೆ ನಮಸ್ಕಾರ ಮಾಡಲು, ನೀನು ಪ್ರಸನ್ನಳಾಗಿ ಅರ್ಧಮಾತ್ರ ಅಗಿದಿದ್ದ ಪಚ್ಚಕರ್ಪೂರದ ಹಳುಕುಗಳು ಬೆರೆತಿದ್ದ ತಾಂಬೂಲದ ಕವಳಗಳನ್ನು (ಉಂಡೆಗಳನ್ನು) ಅವರಿಗೆ ನೀಡಿದಾಗ ಅವರು ಮಹಾಪ್ರಸಾದವೆಂದು ಭಕ್ಷಿಸಿದರು.

ಪರಮೇಶ್ವರನಿಗೆ ನಿವೇದಿಸಲ್ಪಟ್ಟ ಪದಾರ್ಥಗಳು ಚಂಡಿಕೇಶ್ವರನಿಗೆ ಸೇರಿದುದು ಆದ್ದರಿಂದ ವಿಷ್ಣು ಇಂದ್ರಾದಿಗಳಿಗೆ ಪಡೆಯಲು ಬಾಧ್ಯತೆ ಇಲ್ಲ. ಆದರೂ ದೇವಿಯ ತಾಂಬೂಲ ರೂಪವಾದ ಪ್ರಸಾದವು ಇವರಿಗೆ ಉಂಟಾಯಿತು ಎಂದು ವರ್ಣನೆ ಮಾಡಲಾಗಿದೆ (K).

ಪದ್ಯಾನುವಾದ

ಎಲೆ ತಾಯೆ, ಯುದ್ಧದಲ್ಲಿ ಜಯಿಸಿ ರಾಕ್ಷಸರನ್ನು,
ತಮ್ಮ ತಲೆಗಾಪು ಮೈಜೋಡುಗಳ ತೆಗೆದಿಟ್ಟು
ಚಂಡಾಂಶ ತ್ರಿಪುರಹರ ನಿರ್ಮಾಲ್ಯವನು ಮನ್ನಿಸದೆ ಕಡೆಗಣಿಸುತ ತಾವು

ಷಣ್ಮುಖೇಂದ್ರೋಪೇಂದ್ರರೈತರಲು ಸನ್ನಿಧಿಗೆ
ಶಶಿಯಂತೆ ಶುಭ್ರವಹ ಕರ್ಪೂರ ಖಂಡಗಳು
ಬೆರೆತ ಬಾಯ್ದಂಬುಲದ ತುತ್ತುಗಳು ಕರಗಿಹೋದುವುವವರ ಬಾಯ್ಗಳಲಿ
॥ ೬೫ ॥

ಟಿಪ್ಪಣಿಗಳು

೧. **ತ್ರಿಪುರಹರ ನಿರ್ಮಾಲ್ಯ:**

ಶಿವನಿಗೆ ಅರ್ಪಿತವಾಗಿ, ಶಿವನಿಂದ ಸ್ವೀಕೃತವಾಗಿ, ಉಳಿದಿರುವ ಗಂಧ ತಾಂಬೂಲಾದಿ ವಸ್ತುವು 'ಹರನಿರ್ಮಾಲ್ಯಂ ಪರಿತ್ಯಾಜ್ಯವ್' (ಶಿವನಿರ್ಮಾಲ್ಯವು ಪರಿತ್ಯಾಜ್ಯವಾದುದು) ಎಂದು ಮುಂತಾದ ಸ್ಮೃತಿ ವಚನಗಳು ಚಂಡನ ಭಾಗವಾದ ಶಿವನಿರ್ಮಾಲ್ಯವನ್ನು ಮಾತ್ರ ನಿಷೇಧಿಸುವುದು ಎಂದು ಹೇಳುತ್ತವೆ. (ಶೇ–ಪುಟ ೨೧೦)

೨. ಷಣ್ಮುಖ, ಇಂದ್ರ, ವಿಷ್ಣು, ಇವರೆಲ್ಲರೂ ದೇವಿಯ ಮಕ್ಕಳಾದ್ದರಿಂದ ಉಚ್ಛಿಷ್ಟವನ್ನು ಪ್ರಸಾದವೆಂದು ಸ್ವೀಕರಿಸುತ್ತಾರೆ.
(ಗ–ಪುಟ ೭೩)

೩. ರಣೇಜಿತ್ವಾ ದೈತ್ಯಾನಪಹೃತ ಶಿರಸ್ತ್ರೈಃ ಕವಚೇಭಿಃ ನಿವೃತ್ತೈಃ (ಯುದ್ಧದಲ್ಲಿ ದೈತ್ಯರನ್ನು ಗೆದ್ದು ಕುಮಾರಸ್ವಾಮಿ, ಇಂದ್ರ, ವಿಷ್ಣು ಮೂರು ಜನವೂ ನಿನಗೆ ಕೃತಜ್ಞತೆಯಿಂದ ನಮಿಸಿ ಆಶೀರ್ವಾದ ಪಡೆಯಲು ತಮ್ಮ ಶಿರಸ್ತ್ರಾಣಗಳನ್ನು ತೆಗೆದಿಡುವರು) ದೊಡ್ಡವರನ್ನು ದರ್ಶಿಸುವಾಗ ತಲೆಯ ಮೇಲಿರುವ ಕಿರೀಟ, ಪೇಟಾ, ಉಕ್ಕಿನ ಪೇಟ ಇತ್ಯಾದಿ ಏನೇ ಇದ್ದರೂ ತೆಗೆದಿರಿಸಿ ಹಿರಿಯರಿಗೆ ನಮಸ್ಕರಿಸಬೇಕೆಂಬುದು ಪದ್ಧತಿ.

೪. ಲಲಿತಾ ಸಹಸ್ರನಾಮದಲ್ಲಿ ''ಕರ್ಪೂರವೀಟಿಕಾಮೋದ ಸಮಾಕರ್ಷದ್ದಿಗಂತರಾ" (ಶ್ಲೋಕ ೧೦ ನಾಮ ೨೬) (ಕರ್ಪೂರ ವೀಟಿಕೆಯಿಂದ ಕೂಡಿದ ತಾಂಬೂಲದ ಪರಿಮಳದಿಂದ ದಿಗಂತಗಳನ್ನು ತನ್ನೆಡೆಗೆ ಆಕರ್ಷಿಸುತ್ತಿರುವಳು) (ಲ–ಕೂ ಪುಟ ೮೬)

೫. 'ಕರ್ಪೂರವೀಳ್ಯ, ಎಂಬುದು ಒಂದು ಬಗೆಯ ತಾಂಬೂಲ, 'ಏಲಾಲವಂಗ ಕರ್ಪೂರ ಕಸ್ತೂರಿ ಕೇಸರಾದಿಭಿಃ ಜಾತೀಫಲದಲೈಃ ಪೂಗೈಃ ಲಾಂಗೂಲ್ಯೂಷಣ ನಾಗಕೈಃ ಚೂರ್ಣೈಃ ಖದಿರಸಾರೈಶ್ಚಯುಕ್ತ ಕರ್ಪೂರವೀಟಿಕಾ' ಎಂದು ಕರ್ಪೂರವೀಳ್ಯವನ್ನು ವರ್ಣಿಸಿದೆ.


೬ ಲಲಿತಾ ಸಹಸ್ರನಾಮದಲ್ಲಿ (ಶ್ಲೋಕ ೧೧೪ ನಾಮ ೫೫೯) ತಾಂಬೂಲ ಪೂರಿತಮುಖೀ (ತಾಂಬೂಲ ಚರ್ವಣದಿಂದ ಸಂತೋಷಗೊಂಡ (ಬಾಯಿ) ಮುಖವುಳ್ಳವಳು) ಎಂದು ವರ್ಣಿಸಲಾಗಿದೆ

(ಲ–ಕೂ ಪುಟ ೧೯೩)

೭ 'ಕರ್ಪೂರ ವೀಳ್ಯ' ಎಂದರೆ ಲವಂಗ, ಏಲಕ್ಕಿ, ನಾಗಕೇಶರ ಜಾಜಿಕಾಯಿ, ವಿಳ್ಳೇದೆಲೆ, ಸುಣ್ಣ, ಕೊಬ್ಬರಿ, ಮೆಣಸು, ಒಣಶುಂಠಿ ಮೊದಲಾದ ಸುಗಂಧ ವಸ್ತುಗಳನ್ನು ಸೇರಿಸಿ ಸಿದ್ಧಪಡಿಸುವ ತಾಂಬೂಲ.

(ಭ–ಪುಟ ೬೯)

ಯಂತ್ರಾರಾಧನೆ (ಶ್ಲೋಕ ೬೫)



ಯಂತ್ರ ರಚನೆ : ಚಿನ್ನದಲ್ಲಿ ಯಂತ್ರ ಮಾಡಿಸಬೇಕು. ಒಂದು ವೃತ್ತದಲ್ಲಿ ಪಂಚಕೋಣಗಳಿರುವ ಹಾಗೆ ನಕ್ಷತ್ರಾಕಾರ ಚಿಹ್ನೆ ರಚಿಸಬೇಕು. ೫ ಹೊರ ತ್ರಿಕೋಣಗಳ ನಡುವೆ ಹ್ರೀಂ ಬೀಜಾಕ್ಷರವನ್ನು ತ್ರಿಕೋಣಗಳ ಒಳಗೆ ಶ್ರೀಂ ಬೀಜಾಕ್ಷರವನ್ನು ಮಧ್ಯದಲ್ಲಿ ಕ್ಲೀಂ ಬೀಜಾಕ್ಷರವನ್ನು ಕೆಂಬಣ್ಣದ ಹೂಗಳಿಂದ ಕೆತ್ತಿಸಬೇಕು.

ಪೂಜೆ : ಯಂತ್ರದ ಜೊತೆಗೆ ಶ್ರೀ ಚಕ್ರವನ್ನು ಪೂಜಿಸುವ ಹಾಗೆ ಲಲಿತಾ ಸಹಸ್ರನಾಮ ಕುಂಕುಮಾರ್ಚನೆಯನ್ನು ಮಾಡಬೇಕು. ಗುಗ್ಗುಳದ ಧೂಪ ಹಾಕಬೇಕು.

ನೈವೇದ್ಯ : ಜೇನುತುಪ್ಪ.

ಜಪ : ೪೫ ದಿನಗಳ ಕಾಲ ಪ್ರತಿನಿತ್ಯ ೧೦೦೦ ಬಾರಿ ಜಪಿಸಿ ಯಂತ್ರವನ್ನು ಧರಿಸಬೇಕು.

ಫಲ : **ಸಕಲ ಜನವಶೀಕರಣ.**

ಶ್ಲೋಕ–೬೬

ದೇವಿಯ ಕಂಠಮಾಧುರ್ಯ ವರ್ಣನೆ

ವಿಪಂಚ್ಯಾ ಗಾಯಂತೀ ವಿವಿಧ[1]ಮಪದಾನಂ ಪಶುಪತೇಃ
ತ್ವಯಾಽಽರಬ್ಧೇ ವಕ್ತುಂ [2]ಚಲಿತಶಿರಸಾ ಸಾಧುವಚನೇ ।
ತದೀಯೈರ್ಮಾಧುರ್ಯೈರಪಲಪಿತತಂತ್ರೀಕಲರವಾಂ
ನಿಜಾಂ ವೀಣಾಂ ವಾಣೀ ನಿಚುಲಯತಿ ಚೋಲೇನ ನಿಭೃತಮ್
॥ ೬೬ ॥

ಪಾಠಾಂತರ

೧. ಅಪದಾನಂ = ಅವದಾನಂ (ಸ)
೨. (ಪಶುಪತೇ) = ಪುರರಿಪೋ (ಸು)
೩. (ಚಲಿತಶಿರಸಾ) = ಸ್ಖಲಿತವಚಸಾ ; ಲಲಿತವಚಸಾ (ಸು)
೪. (ತದೀಯೈ) = ತೃದೀಯೈ (ಪೋ)

ಪದವಿಭಾಗ

ವಿಪಂಚ್ಯಾ, ಗಾಯಂತೀ, (ವಿವಿಧಮಪದಾನಂ) = ವಿವಿಧಂ + ಅಪದಾನಂ, ಪಶುಪತೇಃ, (ತ್ವಯಾರಬ್ಧೇ) = ತ್ವಯಾ + ಆರಬ್ಧೇ, ವಕ್ತುಂ, ಚಲಿತಶಿರಸಾ, ಸಾಧುವಚನೇ, (ತದೀಯೈರ್ಮಾಧುರ್ಯೈರಪಲಪಿತ ತಂತ್ರೀ ಕಲರವಾಂ) = ತದೀಯೈಃ + ಮಾಧುರ್ಯೈಃ + ಅಪಲಪಿತ ತಂತ್ರೀ ಕಲರವಾಂ, ನಿಜಾಂ, ವೀಣಾಂ, ವಾಣೀ, ನಿಚುಲಯತಿ, ಚೋಲೇನ, ನಿಭೃತಮ್.

ಅನ್ವಯಾರ್ಥ

(ಹೇ ಭಗವತಿ)	(ಎಲೈ ಪೂಜ್ಯಳಾದವಳೇ)
ಪಶುಪತೇಃ	(ಬ್ರಹ್ಮಾದಿಗಳಿಗೆ ಅಧಿಪತಿಯಾದ) ಪರಮೇಶ್ವರನ
ವಿವಿಧಂ ಅಪದಾನಂ	ಅನೇಕವಾದ (ನಾನಾ ರೀತಿಯ) ಪೂರ್ವ ಚರಿತ್ರೆಯನ್ನು)
ವಿಪಂಚ್ಯಾ	ವೀಣೆಯಿಂದ

ಗಾಯಂತೀ	(ನುಡಿಸಿ) ಗಾನ ಮಾಡುತ್ತಿರುವ (ಹಾಡುತ್ತಿರುವ)
ತ್ವಯಾ ವಕ್ತುಂ	ನಿನಗೆ (ಶ್ಲಾಘನೆಯನ್ನು) ಹೇಳುವುದಕ್ಕೆ
ಚಲಿತಶಿರಸಾ	ತಲೆಯಲ್ಲಾಡಿಸುವುದರಿಂದ (ಅಲ್ಲಾಡಿಸಲ್ಪಟ್ಟ ತಲೆಯುಳ್ಳವಳಾಗಿ)
ಸಾಧು ವಚನೇ	ಶ್ಲಾಘನೆಯ ಮಾತು
ಆರಬ್ಧೇ (ಸತಿ)	ಪ್ರಾರಂಭಿಸಲು
ತದೀಯೈಃ	ಆ ಮಾತುಗಳ ದೇವಿಯ
ಮಾಧುರ್ಯೈಃ	ಮಾಧುರ್ಯದಿಂದ
ಅಪಲಪಿತ	ಧಿಕ್ಕರಿಸಲ್ಪಟ್ಟ
ತಂತ್ರೀಕಲರವಾಂ	ವೀಣೆಯ ತಂತಿಗಳ–(ಸೊಗಸಾದ ಮಧುರ ಧ್ವನಿಯುಳ್ಳ)
ನಿಜಾಂ	ತನ್ನ
ವೀಣಾಂ ವಾಣೀ	ವೀಣೆಯನ್ನು ಸರಸ್ವತಿಯು
ಚೋಲೇನ	ಗವುಸಿನಿಂದ (ವೀಣೆಯ ಹೊದಿಕೆಯಿಂದ)
ನಿಭೃತಂ	ಚೆನ್ನಾಗಿ
ನಿಚುಲಯತಿ	ಮುಚ್ಚಿಬಿಡುತ್ತಾಳೆ

ತಾತ್ಪರ್ಯ

"ಕವಿಯು ದೇವಿಯ ವಾಕ್ಕನ್ನು, ಹೀಗೆ ವರ್ಣಿಸುತ್ತಾನೆ : ಸರಸ್ವತಿಯು ಪರಮೇಶ್ವರನ ಕಥೆಯನ್ನು ಗೀತರೂಪದಿಂದ ವೀಣೆಯಲ್ಲಿ ದೇವಿಯ ಇದಿರಾಗಿ ನುಡಿಯಿಸುವುದಕ್ಕೆ ಪ್ರಾರಂಭಿಸಲು, ಶಿವನು ತಲೆದೂಗುತ್ತಾನೆ. ಆಗ ದೇವಿಯು ಶ್ಲಾಘನೆಯ ಸೂಚನೆಗಾಗಿ ತಲೆಯನ್ನು ಅಲ್ಲಾಡಿಸಿ ಬಹಳ ಚೆನ್ನಾಗಿದೆ, 'ಬಹಳ ಚೆನ್ನಾಗಿದೆ' ಎಂದು ಶ್ಲಾಘಿಸುತ್ತಾರೆ. ಸರಸ್ವತಿಯು ದೇವಿಯ ಮಾತನ್ನು ಕೇಳಿ, ಆ ಮಾತಿನ ಮಾಧುರ್ಯವು ತನ್ನ ವೀಣೆಯ ಧ್ವನಿಯಲ್ಲಿ ಉಂಟಾಗುವುದಿಲ್ಲವಲ್ಲಾ ಎಂದು ನಾಚಿಕೆಯಿಂದ ವೀಣೆಗೆ ಮುಸುಕನ್ನು ಹಾಕಿಬಿಟ್ಟಳು. ಅಂದರೆ ದೇವಿಯ ವಾಕ್ಕು ಬಹಳ ಇಂಪಾಗಿರುವುದೆಂದು ತಾತ್ಪರ್ಯ" (K).

ಪದ್ಯಾನುವಾದ

ಪಶುಪತಿಯ ವಿವಿಧ ಸಚ್ಚರಿತೆಯನು ವೀಣೆಯಲಿ
ನೀನು ನುಡಿಸುತ್ತಿರಲು, ಓ ತಾಯೆ, ಆ ಗಾನ
ನಿನ್ನದೆಂಬೊಲವಿಂದ ಲೇಸು ಲೇಸೆಂದೆನುತ ಶಿವನು ತಲೆ ತೂಗುತಿರಲು

ನಿನ್ನ ವೀಣಾಗಾನ ಮಾಧುರ್ಯದಪಹಾಸ-
ಕಾಗ ಗುರಿಯಾಗೆ ತನ್ನಯ ವೀಣೆತಂತಿಗಳ
ಕಲರವವು, ವಾಣಿಯೊಡನೆಯ ತನ್ನ ವೀಣೆಯನು ಮುಚ್ಚಿದಳು
ಹೊದಿಕೆತೊಡಿಸಿ ॥ ೬೬ ॥

ಟಿಪ್ಪಣಿಗಳು

೧. **ವಿವಿಧಂ ಅಪದಾನಂ (ನಾನಾ ಬಗೆಯ ಪೂರ್ವ ಚರಿತ್ರೆಯನ್ನು)**

ಪರಮೇಶ್ವರನ ಪೂರ್ವ ಸಾಹಸ ಕಥೆಗಳನ್ನು ಎಂದರೆ ತ್ರಿಪುರ ವಿಜಯ, ದಕ್ಷಯಾಗಧ್ವಂಸ, ಹಾಲಾಹಲ ವಿಷಪಾನ ಮಾಡಿ ಕಂಠದಲ್ಲಿ ಧರಿಸಿದ್ದು, ಜಲಂಧರನ ಸಂಹಾರ, ಗಜಾಸುರ ವಧೆ ಮುಂತಾದ ಸಾಹಸಗಳನ್ನು ವೀಣೆಯಲ್ಲಿ ನುಡಿಸಿದಳು.

೨. ಇಲ್ಲಿ ಅತಿಶಯೋಕ್ತಿ ಅಲಂಕಾರವಿದೆ. ಏಕೆಂದರೆ ವೀಣೆಯನ್ನು ಗಸಣಿಕೆಯಿಂದ ಮುಚ್ಚುವಿಕೆಯ ಸಂಬಂಧವಿಲ್ಲದಿದ್ದರೂ ಆ ರೀತಿ ಸಂಬಂಧವನ್ನು ಕಲ್ಪಿಸಿ ವರ್ಣನೆ ಮಾಡಲಾಗಿದೆ. ವೀಣಾವಾದನದಲ್ಲಿ ಪರಾಜಯವನ್ನು ಹೊಂದಿ ತನ್ನ ವೀಣೆಯನ್ನು ಗವಸಣಿಗೆಯಿಂದ ಮುಚ್ಚುವ ವೈಣಿಕನಿಗೂ ಸರಸ್ವತಿಗೂ ಅಭೇದಾಧ್ಯವಸಾಯದ ಪ್ರತೀತಿಯು ಉಂಟಾಗುತ್ತದೆ.

(ಶೇ-ಪುಟ ೨೧೩)


೩. ಲಲಿತಾ ಸಹಸ್ರನಾಮದಲ್ಲಿ (ಶ್ಲೋಕ ೧೧ ನಾಮ ೨೭)

ನಿಜಸಲ್ಲಾಪ ಮಾಧುರ್ಯವಿನಿರ್ಭತ್ಸಿತಕಚ್ಛಪೀ

(ತನ್ನ ಮಾತಿನ ಇಂಪಿನಿಂದ ದೇವಿಯು ಕಚ್ಛಪ ಎಂಬ ವೀಣೆಯ ನಾದದ ಇಂಪನ್ನು ನಾಚಿಸುತ್ತಿರುವಳು. (ಸರಸ್ವತೀ ಕೈಯಲ್ಲಿರುವ ವೀಣೆಗೆ ಕಚ್ಛಪೀ ಎಂದು ಹೆಸರು. ನಾರದನ ವೀಣೆಗೆ ಮಹತೀ ಎಂದೂ ತುಂಬರುವಿನ ವೀಣೆಗೆ ಕಲಾವತೀ ಎಂದೂ ವಿಶ್ವಾವಸುವಿನ ವೀಣೆಗೆ ಬೃಹತೀ ಎಂದು ಹೆಸರಿದೆ)

(ಲ-ಆದಿ ಪುಟ ೫೩)

ಯಂತ್ರಾರಾಧನೆ (ಶ್ಲೋಕ ೬೬)



ಯಂತ್ರ ರಚನೆ : ಚಿನ್ನದ ರೇಖಿನಲ್ಲಿ ಯಂತ್ರವನ್ನು ರಚಿಸಬೇಕು. ಚಿತ್ರದಲ್ಲಿ ತೋರಿಸಿರುವಂತೆ (ಒಂದು ಸಮ ಚೌಕಾಕಾರ) ಇನ್ನೊಂದು ಎರಡು ಆಯಾಕಾರ ಚೌಕಗಳು) ಸೇರುವಂತೆ ಬರೆಯಬೇಕು. ನಡುವೆ ಒಂದರ ಕೆಳಗೆ ಒಂದು ಬರುವಂತೆ ಶ್ರೀಂ ಬೀಜಾಕ್ಷರವನ್ನು ೩ ಬಾರಿ ಬರೆಯಬೇಕು.

ಪೂಜೆ : ಬಿಲ್ವಪತ್ರೆಗಳಿಂದ ಲಲಿತಾ ತ್ರಿಶತೀ ಅರ್ಚನೆಯನ್ನು ಮಾಡಬೇಕು.

೪ ಜಪ : ೪೫ ದಿನಗಳ ಕಾಲ ಪ್ರತಿದಿನ ೧೦೦೦ ಬಾರಿಯಂತೆ ಶ್ಲೋಕವನ್ನು ಜಪಿಸಬೇಕು.

ನೈವೇದ್ಯ : ಬೆಲ್ಲದ ಪಾಯಸ ಮತ್ತು ಜೇನುತುಪ್ಪ.

ಫಲ : **ವೀಣಾದಿ ಸಂಗೀತ ವಿದ್ಯಾಕುಶಲನಾಗುತ್ತಾನೆ.**

ಶ್ಲೋಕ-೬೭

ದೇವಿಯ ಗಲ್ಲದ ವರ್ಣನೆ

ಕರಾಗ್ರೇಣ ಸ್ಪೃಷ್ಟಂ ತುಹಿನಗಿರಿಣಾ ವತ್ಸಲತಯಾ
ಗಿರೀಶೇನೋದಸ್ತಂ ಮುಹುರಧರಪಾನಾಕುಲತಯಾ ।
ಕರಗ್ರಾಹ್ಯಂ ಶಂಭೋರ್ಮುಖಮುಕುರವೃಂತಂ ಗಿರಿಸುತೇ
ಕಥಂಕಾರಂ ಬ್ರೂಮಸ್ತವ [1]ಚುಬುಕಮೌಪಮ್ಯರಹಿತಮ್ ॥ ೬೭ ॥

ಪಾಠಾಂತರ

೧. (ಚುಬುಕ) = ಚಿಬುಕ (ಸು)

ಪದವಿಭಾಗ

(ಕರಾಗ್ರೇಣ) = ಕರ + ಅಗ್ರೇಣ, ಸ್ಪೃಷ್ಟಂ, ತುಹಿನಗಿರಿಣಾ, ವತ್ಸಲತಯಾ, (ಗಿರೀಶೇನೋದಸ್ತಂ) = ಗಿರೀಶೇನ + ಉದಸ್ತಂ (ಮುಹುರಧರಪಾನಾಕುಲತಯಾ) = ಮುಹುಃ + ಅಧರಪಾನ + ಆಕುಲತಯಾ, ಕರಗ್ರಾಹ್ಯಂ, (ಶಂಭೋರ್ಮುಖ ಮುಕುರವೃಂತಂ) = ಶಂಭೋಃ + ಮುಖಮುಕುರವೃಂತಂ, ಗಿರಿಸುತೇ, ಕಥಂಕಾರಂ, (ಬ್ರೂಮಸ್ತವ) = ಬ್ರೂಮಃ + ತವ, (ಚುಬುಕಮೌಪಮ್ಯರಹಿತಮ್ = ಚುಬುಕಂ + ಔಪಮ್ಯರಹಿತಮ್.

ಅನ್ವಯಾರ್ಥ

(ಹೇ) ಗಿರಿಸುತೇ	(ಹೇ) ಹಿಮವಂತನ ಮಗಳೇ ದೇವಿಯೇ
ತುಹಿನಗಿರಿಣಾ	(ತಂದೆಯಾದ) ಹಿಮವಂತನಿಂದ
ವತ್ಸಲತಯಾ	(ಮಗಳು ಎಂಬ) ಪ್ರೀತಿಯಿಂದ
ಕರಾಗ್ರೇಣ	ಕೈ (ಬೆರಳುಗಳ) ತುದಿಯಿಂದ
ಸ್ಪೃಷ್ಟಂ	ಗ್ರಹಿಸಲ್ಪಡುತ್ತಿದ್ದ
ಗಿರೀಶೇನ	(ಪತಿಯಾದ) ಪರಮೇಶ್ವರನಿಂದ
ಅಧರಪಾನಾಕುಲತಯಾ	(ಅಧರಪಾನ + ಆಕುಲತಯಾ) = ತುಟಿಯಲ್ಲಿರುವ ಅಮೃತರಸವನ್ನು-ಪಾನ ಮಾಡುವ-ಆಸಕ್ತಿಯಿಂದ

ಮುಹುರುದಸ್ತಂ	(ಮುಹುಃ + ಉದಸ್ತಂ) ಬಾರಿಬಾರಿಗೂ ಮೇಲಕ್ಕೆತ್ತಲ್ಪಟ್ಟ
ಶಂಭೋಃ	ಈಶ್ವರನ
ಕರಗ್ರಾಹ್ಯಂ	ಕೈಯಿಂದ-ಗ್ರಹಿಸಲು ಯೋಗ್ಯವಾದ
ಔಪಮ್ಯರಹಿತಂ	ಹೋಲಿಕೆಯಿಲ್ಲದ
ತವ	ನಿನ್ನ
ಮುಖಮುಕುರವೃಂತಂ	ಮುಖವೆಂಬ ಕನ್ನಡಿಗೆ-ಹಿಡಿಯಾಗಿರುವ
ಚುಬುಕಂ	ಗಲ್ಲವನ್ನು
ಕಥಂಕಾರಂ	ಏನೆಂದು
ಬ್ರೂಮಃ	ವರ್ಣಿಸೋಣ

ತಾತ್ಪರ್ಯ

"ಕವಿಯು ದೇವಿಯ ಮುಖದ ಕೆಳಭಾಗವನ್ನು (ಗದ್ದವನ್ನು) ವರ್ಣಿಸುತ್ತಾನೆ:

ಎಲೈ ಪಾರ್ವತಿಯೆ, ನಿನ್ನ ತಂದೆಯಾದ ಹಿಮವಂತನು ನಿನ್ನ ಬಾಲ್ಯದಲ್ಲಿ ಗಲ್ಲವನ್ನುಹಿಡಿದು ಪ್ರೀತಿಯಿಂದ ಮುದ್ದಾಡುತ್ತಿದ್ದನು. ಅದೇ ಗಲ್ಲವನ್ನು ನಿನ್ನ ಗಂಡನಾದ ಪರಮೇಶ್ವರನು ಅಧರಾಮೃತಪಾನ ಮಾಡುವುದಕ್ಕೆ ಆಗಿಂದಾಗ ಕೈಯಿಂದ ಎತ್ತುತ್ತಿದ್ದ. ಈಶ್ವರನ ಕೈಯಿಂದ ಹಿಡಿಯುವುದಕ್ಕೆ ಯೋಗ್ಯವಾದ ಮುಖವೆಂಬ ಕನ್ನಡಿಗೆ ಕೈ ಹಿಡಿಯಂತಿರುವ ಉಪಮಾನವಿಲ್ಲದ ನಿನ್ನ ಗಲ್ಲವನ್ನು ಏನೆಂದು ವರ್ಣಿಸೋಣ" (K).

ಪದ್ಯಾನುವಾದ

ಗಿರಿಸುತೇ, ಹಿಮವಂತ ವಾತ್ಸಲ್ಯದಿಂದ ಕೈ
ತುದಿಯಿಂದ ಹಿಡಿದ, ನಿನ್ನಧರಪಾನವ ಬಯಸು-
ತದ ಸವಿದು ತುಷ್ಟಿವಡೆಯದೆ ಮತ್ತೆ ಸವಿವಾಕುಲತೆಯಿಂದ ಕೈಲಿ ಹಿಡಿದ
ತನ್ನ ಮುಖದಂದವನು ನೋಡಿಕೊಳಲೆಳಸುತ್ತ
ನಿನ್ನ ಪತಿಪರಮೇಶ್ವರನು ಹಿಡಿಯುವಾ ರನ್ನ-
ಗನ್ನಡಿಯ ಹಿಡಿಯಾದ, ಉಪಮೆಗೆಟುಕದ, ನಿನ್ನ ಗಲ್ಲವನು ಹೊಗಳಲೆಂತು?
॥ ೬೭ ॥

ಟಿಪ್ಪಣಿಗಳು

ಅಲಂಕಾರ

೧. ಈ ಶ್ಲೋಕದಲ್ಲಿ ಅನನ್ವಯಾಲಂಕಾರವಿದೆ. ಏಕೆಂದರೆ ಸರ್ವಪ್ರಕಾರವಾದ ಸಾದೃಶ್ಯವನ್ನು ನಿಷೇಧ ಮಾಡಿರುವುದರಿಂದ ಪಾರ್ವತಿಯ ಗಲ್ಲವು ತನಗೆ ತಾನೇ ಸದೃಶವಾದುದು ಎಂಬುದಾಗಿ ಅನನ್ವಯಾಲಂಕಾರವು ಧ್ವನಿಮಾರ್ಗದಿಂದ ಸೂಚಿತವಾಗಿದೆ.

(ಶೇ–ಪುಟ ೨೧೪)

೨. **ವತ್ಸಲತಯಾ**

(ವಾತ್ಸಲ್ಯದಿಂದ) ತಂದೆ–ತಾಯಿ ಮುಂತಾದವರಿಗೆ ಪುತ್ರಾದಿಗಳ ಬಗ್ಗೆ ಇರುವ ಪ್ರೀತಿಯನ್ನು ವಾತ್ಸಲ್ಯ ಶಬ್ದದಿಂದ ಕರೆಯುತ್ತಾರೆ.

(ಶೇ–ಪುಟ ೨೧೨)

೩. ಸರ್ವಜ್ಞ ಸೋಮೇಶ್ವರನು ಹೇಳಿರುವ ಮಾತಿದು : ಪುತ್ರಾದಿಗಳ ವಿಷಯದಲ್ಲಿರುವುದು ವಾತ್ಸಲ್ಯವಾಗುತ್ತದೆ. ಪತ್ನಿ ಮೊದಲಾದವರ ಬಗ್ಗೆ ಇರುವ ಭಾವವು ಪ್ರೇಮವೆನಿಸುತ್ತದೆ. ಶಿಷ್ಯ ಮೊದಲಾದವರ ಬಗ್ಗೆ ಇರುವ ಭಾವವು ಅನುಗ್ರಹವಾಗುತ್ತದೆ. ಅಣ್ಣ ಮೊದಲಾದ ಹಿರಿಯರ ಬಗ್ಗೆ ಇರುವ ಭಾವವು ಭಕ್ತಿ ಆಗುತ್ತದೆ.


(ಶೇ–ಪುಟ ೨೧೩)

೪. ಲಲಿತಾ ಸಹಸ್ರನಾಮದಲ್ಲಿ (ಶ್ಲೋಕ ೧೨ ನಾಮ ೨೯) **ಅನಾಕಲಿತ ಸಾದೃಶ್ಯಚುಬುಕಶ್ರೀವಿರಾಜಿತಾ** (ಹೋಲಿಕೆಯಿಲ್ಲದ ಕಾಂತಿಯುಕ್ತವಾದ ಗಲ್ಲಪ್ರದೇಶವುಳ್ಳವಳು)

೫. ವಾತ್ಸಲ್ಯ, ಪ್ರೇಮ, ಅನುಗ್ರಹ, ಭಕ್ತಿಭಾವಗಳನ್ನು, ಗೌಣಪುತ್ರ, ಗೌಣಪತ್ನಿ, ಗೌಣಶಿಷ್ಯ, ಗೌಣ ಅಗ್ರಜರಲ್ಲೂ ತೋರಿಸಬೇಕು. ಗೌಣಪುತ್ರ ಎಂದರೆ ಪುತ್ರರೂಪದಿಂದ ಕಲ್ಪಿತ ಸಂಬಂಧವುಳ್ಳವನು (ಹಣ ಕೊಟ್ಟುಕೊಂಡರೆ ದತ್ತು ತೆಗೆದುಕೊಂಡರೆ ನಿಜ ಪುತ್ರನೇ ಆಗುತ್ತಾನೆ ಗೌಣ ಪುತ್ರ ಆಗುವುದಿಲ್ಲ), ಗೌಣಪತ್ನೀ ಎಂದರೆ ದಾಸಿ (ಪರಿಚಾರಿಕೆ), ಗೌಣಶಿಷ್ಯ ಶಿಷ್ಯರೂಪದಿಂದ ಕಲ್ಪಿತ ಸಂಬಂಧವುಳ್ಳವನೇ ಹೊರತು (ಗುರುವಾದವನಿಂದ ವೇದಮಂತ್ರ ಸ್ವೀಕರಿಸಿದವನಲ್ಲ), ಗೌಣ ಅಗ್ರಜ ಎಂದರೆ ತಾಯಿ ತಂದೆಯರಿಗೆ ಜನಿಸಿದವನು ಅಲ್ಲ. ಅಗ್ರಜ ರೂಪದಿಂದ ಕಲ್ಪಿತ ಸಂಬಂಧ ವುಳ್ಳವನು.

(ಶೇ–ಪುಟ ೨೧೩)

ಯಂತ್ರಾರಾಧನೆ (ಶ್ಲೋಕ ೬೨)



ಯಂತ್ರ ರಚನೆ : ಯಂತ್ರವನ್ನು ಚಿನ್ನದಲ್ಲಿ ರಚಿಸಬೇಕು ಚಿತ್ರದಲ್ಲಿ ತೋರಿಸಿರುವಂತೆ ಎರಡು ವೃತ್ತಗಳನ್ನು ಆಯಾಕಾರದ ಗೆರೆಗಳಿಂದ ಸೇರುವಂತೆ ನಕ್ಷೆ ಬರೆದು ನಡುವೆ ಕ್ಲೀಂ ಬೀಜಾಕ್ಷರವನ್ನು ಬಂದರ ಕೆಳಗೆ ಒಂದರಂತೆ ಕೇಂದ್ರದಲ್ಲಿ ೩ ಬಾರಿ ಬರೆಯಬೇಕು.

ಪೂಜೆ : ಕೆಂಪು ಹೂಗಳಿಂದ, ಲಲಿತಾ ಸಹಸ್ರನಾಮವನ್ನು ಪಠಿಸುತ್ತಾ ಪೂರ್ವಾಭಿಮುಖವಾಗಿ ಪತ್ನಿಯೊಡನೆ ಕುಳಿತು ಅರ್ಚನೆ ಮಾಡಬೇಕು.

ನೈವೇದ್ಯ : ಬೆಲ್ಲದ ಪಾಯಸ ಮತ್ತು ಜೇನುತುಪ್ಪ, ತಾಂಬೂಲ.

ಜಪ : ಪತ್ನಿಸಮೇತ ಕುಳಿತು, ದಿನಕ್ಕೆ ೪೫ ದಿನಗಳ ಕಾಲ, ದಿನಕ್ಕೆ ೧೦೦೦ ಬಾರಿ ಈ ಶ್ಲೋಕವನ್ನು ಜಪಿಸಬೇಕು. ಅನಂತರ ಯಂತ್ರವನ್ನು ಧರಿಸಬೇಕು.

ಫಲ : **ಸಕಲ ಸ್ತ್ರೀಯರೂ ವಶರಾಗುವರು.**

ಶ್ಲೋಕ–೬೮

ದೇವಿಯ ಕಂಠದ ವರ್ಣನೆ

ಭುಜಾಶ್ಲೇಷಾನ್ನಿತ್ಯಂ ಪುರದಮಯಿತುಃ ಕಂಟಕವತೀ
ತವ ಗ್ರೀವಾ ಧತ್ತೇ ಮುಖಕಮಲನಾಲಶ್ರಿಯಮಿಯಮ್ ।
ಸ್ವತಶ್ಶ್ವೇತಾ ಕಾಲಾಗರುಬಹುಲಜಂಬಾಲಮಲಿನಾ
ಮೃಣಾಲೀಲಾಲಿತ್ಯಂ ವಹತಿ [೧]ಯದಧೋ ಹಾರಲತಿಕಾ ॥ ೬೮ ॥

ಪಾಠಾಂತರ

೧. (ಯದಧೋ) = ಯದಹೋ (ಸು)

ಪದವಿಭಾಗ

(ಭುಜಾಶ್ಲೇಷಾನ್ನಿತ್ಯಂ) = ಭುಜ+ಆಶ್ಲೇಷಾತ್ + ನಿತ್ಯಂ, ಪುರದಮಯಿತುಃ, ಕಂಟಕವತೀ, ತವ, ಗ್ರೀವಾ, ಧತ್ತೇ, (ಮುಖಕಮಲನಾಲ ಶ್ರಿಯಮಿಯಮ್) = ಮುಖಕಮಲ ನಾಲಶ್ರಿಯಂ + ಇಯಂ (ಸ್ವತಶ್ಶ್ವೇತಾ) ಸ್ವತಃ+ಶ್ವೇತಾ (ಕಾಲಾಗುರು) = ಕಾಲ + ಅಗರು, ಬಹುಲ ಜಂಬಾಲಮಲಿನಾ, ಮೃಣಾಲೀಲಾಲಿತ್ಯಂ, ವಹತಿ, (ಯದಧೋ) = ಯತ್ + ಅಧಃ, ಹಾರಲತಿಕಾ.

ಅನ್ವಯಾರ್ಥ

(ಹೇ ಭಗವತೀ)	ಎಲೈ ಪೂಜ್ಯಳಾದ ದೇವಿಯೇ
ತವ	ನಿನ್ನ
ಇಯಂ ಗ್ರೀವಾ	ಈ (ಕೊರಳು) ಕೊರಳನ್ನು
ಪುರದಮಯಿತುಃ	ತ್ರಿಪುರಾಸುರನ ಪಟ್ಟಣಗಳನ್ನು ನಾಶ ಮಾಡಿದ ಈಶ್ವರನು
ಭುಜಾಶ್ಲೇಷಾನ್ನಿತ್ಯಂ	(ಭುಜಾಶ್ಲೇಷಾತ್ + ನಿತ್ಯಂ) = ಯಾವಾಗಲೂ ಬಾಹುವಿನಿಂದ ತಬ್ಬಿಕೊಳ್ಳುವುದರಿಂದ

ಕಂಟಕವತೀ	ರೋಮಾಂಚನವುಳ್ಳದ್ದಾಗಿ
ಮುಖಕಮಲನಾಲಶ್ರಿಯಂ	ತಾವರೆ ದಂಟಿನ ಸೊಗಸನ್ನು
ಧತ್ತೇ	ಧರಿಸುತ್ತದೆ
ಯತ್	ಯಾವ ಕಾರಣದ ದೆಸೆಯಿಂದ
ಅಧಃ	ಕತ್ತಿನ ಕೆಳಗಿರುವ
ಸ್ವತಃಶ್ವೇತಾ	(ಸ್ವತಃ+ಶ್ವೇತಾ) ಸಹಜವಾಗಿ ಶುಭ್ರವಾಗಿರುವ
ಕಾಲಾಗರುಬಹುಲ	(ಕಾಲಾಗರು + ಬಹುಲ + ಜಂಬಾಲ + ಮಲಿನಾ) ಕೃಷ್ಣಾಗರು ಎಂಬ ಸುಗಂಧ ದ್ರವ್ಯದ
ಜಂಬಾಲಮಲಿನಾ	– ಅಧಿಕವಾದ ಕೆಸರಿನಿಂದ ಮಾಸಲು ಬಣ್ಣ ಹೊಂದಿದ
ಹಾರಲತಿಕಾ	ಮುತ್ತಿನ ಕಂಠಿಯು
ಮೃಣಾಲೀ	ತಾವರೇದಂಟಿನ
ಲಾಲಿತ್ಯಂ	ಸೊಗಸನ್ನು
ವಹತಿ	(ವಹಿಸುತ್ತದೆ) ಹೊಂದುತ್ತದೆ

ತಾತ್ಪರ್ಯ

"ಕವಿಯು ದೇವಿಯ ಕತ್ತನ್ನು ವರ್ಣಿಸುತ್ತಾನೆ: ಎಲೈ ದೇವಿಯೇ, ನಿರಂತರದಲ್ಲೂ ಈಶ್ವರನು ತನ್ನ ಬಾಹುಗಳಿಂದ ನಿನ್ನ ಕತ್ತನ್ನು ತಬ್ಬಿಕೊಳ್ಳುವುದರಿಂದ ರೋಮಾಂಚನವುಳ್ಳದ್ದಾಗಿರುವುದು. ಈ ಕತ್ತು ರೋಮಾಂಚನವುಳ್ಳ ಮುಖಕಮಲಕ್ಕೆ ನಾಳವಾಗುವುದು (ಕಂಠದ ಮೇಲಿನ ರೋಮಾಂಚಗಳು ತಾವರೆದಂಟಿನ ಮೇಲಿರುವ ಮುಳ್ಳುಗಳಿಗೆ ಸಮಾನವಾಗಿವೆ ಎಂದು ಅಭಿಪ್ರಾಯ.) ಕಮಲದ ನಾಳವು ಉದ್ದವಾಗಿರುವುದು ಸ್ವಭಾವವಾಗಿದೆ. ಇಲ್ಲಿ ಹೇಗೆಂದರೆ ಕತ್ತಿನ ಕೆಳಗಿರುವ ಸ್ವಭಾವದಿಂದ ಶುಭ್ರವಾದ ಮುತ್ತಿನ ಹಾರವು ಎದೆಗೆ ಲೇಪಿಸಿರುವ ಕೃಷ್ಣಾಗುರುವಿನ (ಕರಿಗಂಧದ) ಬಗ್ಗಡ ಸಂಬಂಧದಿಂದ ಸ್ವಲ್ಪ ಕಪ್ಪಾಗಿರುವುದು ಈ ರೀತಿಯಿರುವ ಮುತ್ತಿನ ಹಾರವೆಂಬುವುದೇ ಕೆಳಗಿನ ದಂಟೆಂದು ಭಾವಿಸಬೇಕು. (K).

ಪದ್ಯಾನುವಾದ

ತ್ರಿಪುರಹರ ಪರಶಿವನ ತೋಳುತಬ್ಬಿನಲಿರುತ
ಅನುದಿನವು ಮುಳ್ಳುಗಳ ತಳೆದ ಮೊಗದಾವರೆಯ
ದಂಟನಾನಲ್‌ಸೊಬಗ ಸಿರಿಯನಾನುವುದಲ್ತೆ ನಿನ್ನ ಕೋಮಲವಾದ
ಕೊಳಲುಗೊರಳು;

ಆ ಕೊರಳಕೆಳಗೆ ಕಾಳಾಗರುವಿನಧಿಕವಹ
ಕೆಸರಮಲಿನತೆಯಿಂದ ಹುಟ್ಟುಬಿಳಿ ಬಣ್ಣದಾ
ಹಾರಲತಿಕೆಯು ತಾನು ತಾವರೆಯ ದಂಟಸೊಬಗನು ಧರಿಸಿ ಮೆರೆಯುತಿಹುದು
॥ ೬೮ ॥

ಟಿಪ್ಪಣಿಗಳು

ಅಲಂಕಾರ

೧. ಪದ್ಯದ ಪೂರ್ವಾರ್ಧದಲ್ಲಿ ನಿದರ್ಶನಾಲಂಕಾರವಿದೆ. ಏಕೆಂದರೆ ಮುಖ ಕಮಲನಾಳದ ಸೊಬಗನ್ನು ಎಂಬಲ್ಲಿ ಅಂತಹ ಸೊಬಗಿನ ಸದೃಶವಾದ ಸೊಬಗು ಎಂಬುದಾಗಿ ಪ್ರತಿಬಿಂಬದ ಪ್ರತೀತಿಯು ಉಂಟಾಗುತ್ತದೆ. ಪದ್ಯದ ಉತ್ತರಾರ್ಧದಲ್ಲಿಯೂ ನಿದರ್ಶನಾಲಂಕಾರವಿದೆ. ಮೃಣಾಲೀಲಾಲಿತ್ಯಮ್ ಎಂಬಲ್ಲಿ ಲಾಲಿತ್ಯ ಸದೃಶವಾದ ಲಾಲಿತ್ಯ ಎಂಬುದಾಗಿ ಪ್ರತಿಬಿಂಬದ ಪ್ರತೀತಿಯು ಉಂಟಾಗುತ್ತದೆ. ಈ ಎರಡೂ ನಿದರ್ಶನ ಅಲಂಕಾರಗಳೂ ಅಂಗಾಂಗೀಭಾವದಿಂದ ಸಂಕರವಾಗಿದೆ.

(ಶೇ–ಪುಟ ೨೧೫)

೨. ಈ ಪದ್ಯದಲ್ಲಿ **ರೂಪಕಾಲಂಕಾರವೂ** ಇದೆ. ಮುಖಕಮಲ ಎಂಬಲ್ಲಿ ಮುಖದಲ್ಲಿ ಕಮಲದ ರೂಪವು ರೂಪಿತವಾಗಿದೆ.

ಜಗನ್ಮಾತೆಯ ಕಂಠ ಸೌದರ್ಯ

೩. ಈ ಶ್ಲೋಕದಲ್ಲಿ ಜಗನ್ಮಾತೆಯ ಕಂಠದ ಸೌಂದರ್ಯವನ್ನು ಹೀಗೆ ವರ್ಣಿಸಿದ್ದಾರೆ: ಕಪ್ಪು ಅಗರುಗಂಧ (ಕೃಷ್ಣಾಗರು) ಶರೀರದ ತಾಪವನ್ನು ಕಳೆದು ಶೀತಲತೆಯನ್ನು ತರುತ್ತದೆ. ಈಶ್ವರನು ಪ್ರೇಮದಿಂದ ಜಗನ್ಮಾತೆಯನ್ನು ಆಲಿಂಗಿಸಿಕೊಂಡಾಗ ಆ ಫಾಲಾಕ್ಷನ ಫಾಲನೇತ್ರದ ಬಿಸಿ ಆಕೆಯ ಶರೀರವನ್ನು ಬಾಧಿಸದಂತೆ ಅಗರುಗಂಧ ತಣ್ಣಗಿಡುತ್ತದೆ. ಅಗರುಗಂಧ ಆಕೆಯ ಬಿಳಿಯ ಮುತ್ತಿನಹಾರದೊಡನೆ ಕಲೆತಾಗ ಗರಳಕಂಠನಾದ ಈಶ್ವರನ ಕತ್ತಿನ ನೀಲಿಬಣ್ಣ ಕೂಡ

ಅಮ್ಮನವರ ಬಿಳಿಯ ಮುತ್ತಿನ ಹಾರಗಳಲ್ಲಿ ಪ್ರತಿಫಲಿಸಿ ಆ ಬಿಳಿಯ ಮುತ್ತುಗಳು ನೀಲಿಬಣ್ಣ–ಎಲೆ ಹಸುರು ಕಲೆತ ಶ್ಯಾಮವರ್ಣವಾಗಿ ಮಾರ್ಪಟ್ಟು ತಾವರೆಯ ನಾಳವನ್ನು ಗುರುತಿಗೆ ತರುತ್ತಿದೆ.

(ಪ–ಪುಟ ೧೦೮)

ಯಂತ್ರಾರಾಧನೆ (ಶ್ಲೋಕ ೬೮)



ಯಂತ್ರ ರಚನೆ : ಬೆಳ್ಳಿಯ ತಟ್ಟೆಯಲ್ಲಿ ಕುಂಕುಮವನ್ನು ಹರಡಿ ಯಂತ್ರವನ್ನು ರಚಿಸಬೇಕು. ಮೂರು ತ್ರಿಶೂಲಗಳನ್ನು ತ್ರಿಕೋಣದ ತುದಿಗಳಲ್ಲಿ ಇರುವಂತೆ ಬರೆದು ಅಧೋಮುಖವಾದ ತ್ರಿಕೋಣವನ್ನು ಬರೆಯಬೇಕು ನಡುವೆ ಹ್ರೀಂ ಬೀಜಾಕ್ಷರವನ್ನು ಬರೆಯಬೇಕು.

ಪೂಜೆ : ಸುಗಂಧ ಮತ್ತು ಹೂಗಳಿಂದ ಶ್ರೀ ಚಕ್ರದಂತೆ ಲಲಿತಾಸಹಸ್ರನಾಮ ಅರ್ಚನೆಯನ್ನು ಮಾಡಬೇಕು.

ನೈವೇದ್ಯ : ಜೇನುತುಪ್ಪ, ತಾಂಬೂಲ.

ಜಪ : ೪೫ ದಿನಗಳ ಕಾಲ ದಿನಕ್ಕೆ ೧೦೦೦ ಸಲ ಜಪಿಸಬೇಕು. ಕುಂಕುಮವನ್ನು ಧರಿಸಬೇಕು.

ಫಲ : **ಸಕಲ ರಾಜರೂ ವಶರಾಗುವರು.**

ಶ್ಲೋಕ–೪೯

ದೇವಿಯ ಕಂಠದ ವಲಿತ್ರಯ ವರ್ಣನೆ

ಗಲೇ ರೇಖಾಸ್ತಿಸ್ರೋ ಗತಿಗಮಕಗೀತೈಕನಿಪುಣೇ
[೧]ವಿವಾಹವ್ಯಾನದ್ಧಪ್ರಗುಣಗುಣಸಂಖ್ಯಾಪ್ರತಿಭುವಃ ।
ವಿರಾಜಂತೇ ನಾನಾವಿಧಮಧುರರಾಗಾಕರಭುವಾಂ
ತ್ರಯಾಣಾಂ ಗ್ರಾಮಾಣಾಂ ಸ್ಥಿತಿನಿಯಮಸೀಮಾನ ಇವ ತೇ ॥ ೪೯ ॥

ಪಾಠಾಂತರ

೧. (ವಿವಾಹ ವ್ಯಾನದ್ಧ) = ಂನದ್ಧತ್ರಿಗುಣಂ (ಸು)

ಪದವಿಭಾಗ

ಗಲೇ, (ರೇಖಾಸ್ತಿಸ್ರೋ) = ರೇಖಾಃ + ತಿಸ್ರಃ, (ಗತಿಗಮಕ ಗೀತೈಕನಿಪುಣೇ) = ಗತಿ ಗಮಕಗೀತ + ಏಕನಿಪುಣೇ, (ವಿವಾಹವ್ಯಾನದ್ಧಪ್ರಗುಣಗುಣ) = ವಿವಾಹ ವಿ+ ಆನದ್ಧ + ಪ್ರಗುಣಗುಣ, ಸಂಖ್ಯಾಪ್ರತಿಭುವಃ, ವಿರಾಜಂತೇ, (ನಾನಾವಿಧ ಮಧುರರಾಗಾಕರಭುವಾಂ) = ನಾನಾವಿಧ ಮಧುರರಾಗ + ಆಕರಭುವಾಂ ತ್ರಯಾಣಾಂ, ಗ್ರಾಮಾಣಾಂ, ಸ್ಥಿತಿನಿಯಮ ಸೀಮಾನ ಇವ ತೇ.

ಅನ್ವಯಾರ್ಥ

(ಹೇ ಭಗವತೀ)	(ಎಲೈ ಪೂಜ್ಯಳಾದ ದೇವಿಯೇ)
ಗತಿಗಮಕಗೀತೈಕನಿಪುಣೇ	(ದೇಸೀ ಮತ್ತು ಮಾರ್ಗ ಎಂಬ) ಗತಿಗಳಲ್ಲೂ ಸ್ವರಗಳ ಕಂಪನಗಳಲ್ಲೂ ಗಾನದಲ್ಲೂ (ಮುಖ್ಯ ಪ್ರಾಜ್ಞಳಾದ) ದೇವಿಯೇ
ತೇ	ನಿನ್ನ
ಗಲೇ	ಕತ್ತಿನಲ್ಲಿರುವ
ರೇಖಾಸ್ತಿಸ್ರೋ	(ರೇಖಾಃ + ತಿಸ್ರಃ) ಮೂರು ಗೆರೆಗಳು

ವಿವಾಹವ್ಯಾನದ್ಧಪ್ರಗುಣಗುಣ ಸಂಖ್ಯಾಪ್ರತಿಭುವಃ	ಮದುವೆಯ ಕಾಲದಲ್ಲಿ ಕತ್ತಿಗೆ ಸೇರಿಸಿ ಕೊಳ್ಳುವ ಹಾಗೆ ಕಟ್ಟಿದ ಹೊಸೆದ ದಾರಗಳ ಲೆಖ್ಖವನ್ನು ಸೂಚಿಸುವುಗಳಾಗಿಯೂ
ನಾನಾವಿಧ	ಅನೇಕ ಪ್ರಕಾರವಾದ
ಮಧುರರಾಗಾಕರಭುವಾಂ	(ಮಧುರ + ರಾಗ + ಆಕರಭುವಾಂ) ಇಂಪಾದ ಮಧ್ಯಮಾವತಿ ಮುಂತಾದ ರಾಗಗಳಿಗೆ ಗಣಿಯಾದ (ಆಶ್ರಯಂ)
ತ್ರಯಾಣಾಂ ಗ್ರಾಮಾಣಾಂ	ಷಡ್ಜ ಮಧ್ಯಮ ಗಾಂಧಾರಗಳೆಂಬ ಮೂರು ಗ್ರಾಮಗಳ (ಸ್ವರ ಸಮೂಹಗಳ)
ಸ್ಥಿತಿ ನಿಯಮಸೀಮಾನಂ ಇವ	(ಸ್ಥಿತಿ ನಿಯಮ + ಸೀಮಾನಂ + ಇವ) = ಇರುವಿಕೆಗೆ – ಎಲ್ಲೆ ಕಟ್ಟಾಗಿ ಇರುವ (ಪ್ರದೇಶವೋ ಎನ್ನುವ ಹಾಗಿರುವ ಪರಸ್ಪರ ಸಂಕರವು ಗ್ರಾಮಗಳಿಗೆ ಆಗಬಾರದೆಂಬ ಉದ್ದೇಶದಿಂದ ಅವುಗಳ ಕೊನೆಯಲ್ಲಿ ರಚಿತವಾದ ಸೀಮಾರೇಖೆಗಳೇ ಎಂಬಂತೆ)
ವಿರಾಜಂತೇ	ಶೋಭಿಸುತ್ತಿವೆ.

ತಾತ್ಪರ್ಯ

"ಕವಿಯು ದೇವಿಯ ಕತ್ತಿನಲ್ಲಿ ಕಾಣಿಸುವ ತ್ರಿವಳಿಗಳನ್ನು (ಮಧ್ಯದಲ್ಲಿರುವ ಮೂರು ಗೆರೆಗಳನ್ನು) ವರ್ಣಿಸುತ್ತಾನೆ. ಗತಿ, ಗಮಕ, ಗೀತಿ ಇವುಗಳಲ್ಲಿ ಚದುರೆಯಾದ ಎಲೈ ದೇವಿಯೇ, ನಿನ್ನ ಕತ್ತಿನಲ್ಲಿ ತ್ರಿವಳಿಗಳ ಮಧ್ಯದಲ್ಲಿರುವ ಮೂರು ರೇಖೆಗಳು ವಿವಾಹ ಕಾಲದಲ್ಲಿ ಪರಮೇಶ್ವರನು ಮಂಗಳಾರ್ಥವಾಗಿ ಕಟ್ಟಿದ ಮೂರು ಎಳೆಗಳಿದ್ದ ಸ್ಥಾನಗಳನ್ನು ಸೂಚಿಸುತ್ತಾ ಇವೆಯೋ ಮತ್ತು ಅನೇಕ ಮಧುರವಾದ ರಾಗಗಳಿಗೆ ಉತ್ಪತ್ತಿ ಸ್ಥಾನವಾದ ಷಡ್ಜ, ಮಧ್ಯಮ, ಗಾಂಧಾರಗಳೆಂಬ ಗ್ರಾಮಗಳ ಎಲ್ಲೆಯನ್ನು ಅಂದರೆ ಇಲ್ಲಿಂದ ಇಲ್ಲಿಯವರೆಗೆ ಗ್ರಾಮವೂ ಇಲ್ಲಿಂದ ಇಲ್ಲಿಯವರೆಗೆ ಮಧ್ಯಮ ಷಡ್ಜ ಗ್ರಾಮವೂ ಇಲ್ಲಿಂದ ಇಲ್ಲಿಯವರೆಗೆ ಗಾಂಧಾರ ಗ್ರಾಮವೂ ಇರುವುವು ಎಂಬುದನ್ನು ಸೂಚಿಸುತ್ತಾ ಇವೆಯೋ ಎನ್ನುವ ಹಾಗೆ ಪ್ರಕಾಶಿಸುತ್ತಾ ಇವೆ. (K).

ಪದ್ಯಾನುವಾದ

ಗತಿಗಮಕಯುಕ್ತ ಸಂಗೀತನಿಪುಣೇ, ಶಿವೇ,
ವೈವಾಹಸಮಯದಲಿ ನಿನ್ನ ಕೊರಳಿಗೆ ಶಿವನು
ತಾನೆ ಕಟ್ಟಿರುವ ಮೂರೆಳೆಯ ಮಂಗಳಸೂತ್ರವೋ, ವಿವಿಧ ರೀತಿಯಲಿಹ
ಮಧುರ ಸಂಗೀತರಾಗಾವಳಿಗೆ ಮೂಲವಹ
ತಿಸ್ರಸ್ವರಗ್ರಾಮಗಳ ನಿಯಮಿತ ಸ್ಥಳವ
ಸೂಚಿಸುವ ಸೀಮೆಗಳೂ ಎನೆ ನಿನ್ನ ಕೊರಳಲ್ಲಿ ಗೆರೆಮೂರು ಶೋಭಿಸುತಿವೆ
॥ ೬೯ ॥

ಟಿಪ್ಪಣಿ: (ಪಾ) ತಾನೆ ಕಟ್ಟಿಹ ಮೂರು ಎಳೆಯ ಎಂಬ ಪಾಠಕ್ಕೆ ಬದಲಾಗಿ ಸೂಚಿಸಿರುವ ಮೇಲ್ಕಂಡ ಪಾಠವನ್ನು ಪದ್ಯದಲ್ಲಿ ಇಟ್ಟುಕೊಂಡಿದೆ.

ಟಿಪ್ಪಣಿಗಳು

೧. ಉತ್ತಮ ಸ್ತ್ರೀ ಪುರುಷರಿಗೆ ಹಣೆ, ಕತ್ತು, ನಾಭಿಯ ಕೆಳಭಾಗ, ಇವುಗಳಲ್ಲಿ ತ್ರಿವಳಿಗಳು ಇರುತ್ತವೆ ಎಂಬುದಾಗಿ ಹಸ್ತಸಾಮುದ್ರಿಕ ಶಾಸ್ತ್ರದಲ್ಲಿದೆ. ಮತ್ತು ಹಾಗೆ ಇರುವವರು ಪುಣ್ಯವಂತರೂ ಭಾಗ್ಯಶಾಲಿಗಳೂ ಆಗಿರುತ್ತಾರೆ. ಕೆಲವು ದೇಶಗಳಲ್ಲಿ ಮಾಂಗಲ್ಯವನ್ನು ಕಟ್ಟಿದ ಮೇಲೆ ಕೈಗೆ ಕಂಕಣ ಸೂತ್ರವನ್ನು ಕಟ್ಟುವಂತೆ ಕತ್ತಿಗೂ ಕಟ್ಟುವುದೂ ಉಂಟು. ಇವೆರಡನ್ನೂ ತಾತ್ಪರ್ಯದಲ್ಲಿಟ್ಟುಕೊಂಡು ಕವಿಯು ವರ್ಣಿಸಿರುತ್ತಾನೆ.

(ಕ–ಪುಟ ೩೮)

೨. ಗತಿ, ಗಮಕ, ಗೀತ, ರಾಗ, ಗ್ರಾಮ ಈ ಶಬ್ದಗಳಿಗೆ ಸಂಗೀತ ಶಾಸ್ತ್ರದಲ್ಲಿ ವಿವರಣೆ ಇರುವುದು ಹೇಗೆಂದರೆ :

ಗತಿ : ಮಾರ್ಗ, ದೇಸಿಯೆಂದು ಸಂಗೀತದ ಗತಿಯು ಎರಡು ವಿಧವಾಗಿದೆ.

ಗಮಕ : ಸ್ವರಗಳ ಕಂಪನಕ್ಕೆ ಗಮಕವೆಂದು ಹೆಸರು. ಈ ಸ್ವರಕಂಪವು ೫ ವಿಧವಾಗಿರುವುದು.

ಗೀತ : ಗಾನ ಮಾಡುವುದಕ್ಕೆ ಯೋಗ್ಯವಾದ ಕೃತಿಗಳು.

ರಾಗ : ಮಧ್ಯಮಾವತಿ, ಮಾಳವಿ, ಶ್ರೀಭೈರವಿ, ವಸಂತ, ಧನ್ಯಾಸಿ ಮೊದಲಾದವು.

ಗ್ರಾಮಾ : ಎಲ್ಲಾ ಸ್ವರಗಳು ಮೂರು ಪ್ರಕಾರದಿಂದ ಸೇರಿಕೊಂಡಿವೆ. ಗ್ರಾಮಗಳು ಷಡ್ಜಗ್ರಾಮ, ಮಧ್ಯಮಗ್ರಾಮ ಗಾಂಧಾರಗ್ರಾಮವೆಂದು ಮೂರು

ಪ್ರಕಾರವಾಗಿವೆ. ಷಡ್ಜ, ಮಧ್ಯಮಗಳು ಭೂಲೋಕದಲ್ಲಿ ಪ್ರಚಾರವಿರುವುದು ಗಾಂಧಾರಗ್ರಾಮ ದೇವಲೋಕದಲ್ಲಿ ಪ್ರಚಾರವಿರುವುದು.

ಮೂರ್ಛನಾ : ಸಪ್ತಸ್ವರಗಳ ಆರೋಹಣ ಅವರೋಹಣಗಳಿಗೆ ಮೂರ್ಛನಾ ಎಂದು ಹೆಸರು. (ಕ–ಪುಟ ೧೩೮)

೩. ಮಾತು : ವಾಗ್ರೂಪವಾದುದು
ಧಾತು : ಗೇಯರೂಪವಾದುದು

(ಶೇ–ಪುಟ ೨೧೬)

೪. **ವಿವಾಹವ್ಯಾನದ್ಧಪ್ರಗುಣಗುಣಸಂಖ್ಯಾಪ್ರತಿಭುವಃ**

(ವಿವಾಹ ಸಮಯದಲ್ಲಿ ವಿಶೇಷ ರೂಪವಾಗಿ ಮಂಗಳಸೂತ್ರವನ್ನು ಕಟ್ಟಿದ ಮೇಲೆ ಅದರ ಬಳಿಯಲ್ಲಿ ಕುತ್ತಿಗೆಯ ಸುತ್ತಲೂ ಪೂರ್ತಿಯಾಗಿ ಆವರಿಸಿ ಕಟ್ಟಲ್ಪಟ್ಟ ಪ್ರಗುಣ ಗುಣಗಳು ಎಂದರೆ ಅನೇಕ ತಂತುಗಳಿಂದ ನಿರ್ಮಿತವಾದ ಸೂತ್ರಗಳು ಎಂಬುದು ಇರುತ್ತದೆ.)

"ಈ ಮಾಂಗಲ್ಯ ತಂತುವಿನೊಡನೆ ಮಂಗಳಸೂತ್ರವನ್ನು ಕಟ್ಟಿ ಎಡಗೈಯಲ್ಲಿ ಸರವನ್ನು (ಕಂಕಣವನ್ನು) ಕಟ್ಟಿ ಕುತ್ತಿಗೆಯಲ್ಲಿ ತ್ರಿಸರವನ್ನು (ಮೂರು ಸೂತ್ರದ ಸರವನ್ನು) ಕಟ್ಟಬೇಕು ಎಂದು ಗೃಹ್ಯಸೂತ್ರದಲ್ಲಿ ಹೇಳಿದೆ"

(ಶೇ–ಪ್ರ ೨೧೬)

೫. **ಪ್ರತಿಭೂಗಳು** "ಎಂದರೆ ಜ್ಞಾಪಕವಾದವು (ದೇವಿಯ ಕಂಠದಲ್ಲಿರುವ ಮೂರು ರೇಖೆಗಳು). ಪ್ರತಿಭೂ ಅಂದರೆ ಜಾಮೀನು ಆದವನು ಸಾಲ ಕೊಟ್ಟವನಿಗೆ ಸಾಲ ತೆಗೆದುಕೊಂಡವನನ್ನು ಜ್ಞಾಪಿಸಿ ಕೊಡುತ್ತಾನೆ. ಅಂತೆಯೇ ಆ ಮೂರು ಎಂಬ ಸಂಖ್ಯೆಯನ್ನು ಜ್ಞಾಪಿಸಿ ಕೊಡುವುದಾದ್ದರಿಂದ ಕಂಠದಲ್ಲಿನ ೩ ರೇಖೆಗಳನ್ನು ಪ್ರತಿಭೂಗಳು ಎಂದು ಕರೆಯಲಾಗಿದೆ,

(ಶೇ–ಪುಟ ೨೧೭)

೬. **ನಾನಾವಿಧಮಧುರರಾಗಾಕರಭುವಾಂ**

"ಅನೇಕ ಪ್ರಕಾರವಾದ ಮನೋಹರವಾದ ರಾಗಗಳ ಸ್ವರಸ್ಥಾನ ರೂಪವಾದ ಆಶ್ರಯ ಪ್ರದೇಶಗಳು.

೫ ಗೀತೆಗಳು ಅವುಗಳಿಂದ ಉಂಟಾಗುವ ೩೦ ಗ್ರಾಮರಾಗಗಳು ೮ ಉಪರಾಗಗಳು ೨೦ ರಾಗಗಳು ೧೫ ಜನಕ ರಾಗಗಳು ೯೬

ಭಾಷಾ ರಾಗಗಳು ೨೦ ವಿಭಾಷಾ ರಾಗಗಳು ಮತ್ತು ೩ ಅಂತರಭಾಷೆಗಳನ್ನು ಕುರಿತು ಹೇಳಲಾಗಿದೆ" ಎಂಬುದಾಗಿ ರಾಗಾಧ್ಯಾಯ ಗ್ರಂಥದಲ್ಲಿದೆ.

(ಶೇ-ಪುಟ ೨೧೭)

೭. ಪದ್ಯದ ಉತ್ತರಾರ್ಧದಲ್ಲಿ ಉತ್ಪ್ರೇಕ್ಷಾಲಂಕಾರವಿದೆ. ಭಗವತಿಯ ಕಂಠದಲ್ಲಿರುವ ತ್ರಿವಳಿಯನ್ನು (೩ ರೇಖೆಗಳನ್ನು) ಕಂಠದಲ್ಲಿರುವ ಮೂರು ಸ್ವರಗ್ರಾಮಗಳ ಜ್ಞಾಪಕಚಿಹ್ನೆಗಳ ರೂಪವಾಗಿ ಉತ್ಪ್ರೇಕ್ಷೆ ಮಾಡಲಾಗಿದೆ.

(ಶೇ-ಪುಟ ೨೧೮)

೮. ಅನುಮಾನಾಲಂಕಾರದ ಲಕ್ಷಣ ಹೀಗಿದೆ : "ಹೇತುವು ಪಕ್ಷದಲ್ಲಿ ಇರುವುದು ಮಾತ್ರ ಸಾಕು; ವ್ಯಾಪ್ತಿಯು ಇರುವುದಿಲ್ಲ. ಹೇತುವು ಪಕ್ಷದಲ್ಲಿ ಇರುವುದು ಮತ್ತು ವ್ಯಾಪ್ತಿ ಈ ಎರಡೂ ಇದ್ದರೆ ಲೌಕಿಕವಾದ ಅನುಮಾನವೇ ಆಗಿರುತ್ತದೆ." ಇದಕ್ಕೆ ನಿದರ್ಶನವಾಗಿ ಪದ್ಯದ ಪೂರ್ವಾರ್ಧದಲ್ಲಿ ಅನುಮಾನಾಲಂಕಾರವಿದೆ. ಮೂರು ಸಂಖ್ಯೆಯು ಮಂಗಳಸರದ ಮೂರು ಸಂಖ್ಯೆಯ ಅನುಮಾಪಕ ವಾಗಿದೆ. ಲೌಕಿಕ ಅಲಂಕಾರ ಕಾಂತ ವಿಲಕ್ಷಣವಾಗಿರುವುದರಿಂದ ಅನುಮಾನವು ಇಲ್ಲಿ ಚಮತ್ಕಾರಾತ್ಮಕವಾಗಿದೆ."

(ಶೇ-ಪುಟ ೨೧೯)

೯. ಮೇಲಿನ ವಿಚಾರವನ್ನೇ (ಟಿಪ್ಪಣಿ ೮) ಬಿ ಪುಟ್ಟಸ್ವಾಮಯ್ಯನವರು ಹೀಗೆ ವಿವರಿಸಿದ್ದಾರೆ. "ಸಂಗೀತದ ಗತಿ ಗಮಕ ಗೀತಗಳ ರಹಸ್ಯವನ್ನು ತಿಳಿದಿರುವ ಪ್ರತೀಕ ನಿನ್ನ ಕೊರಳಿನ ಮೂರು ರೇಖೆಗಳು ಮದುವೆಯಲ್ಲಿ ಧರಿಸಿದ ಮಂಗಳಸೂತ್ರದ ಮೂರೆಳೆಯಂತೆ ಕಂಡರೂ ರಾಗರಂಜಿತ ರಸಭಾವಗಳನ್ನು ವ್ಯಕ್ತಪಡಿಸಲು ಷಡ್ಜ, ಮಧ್ಯಮ, ಗಾಂಧಾರಗಳೆಂಬ ಮೂರು ಶೃತಿಗಳಿಗೂ ಸರಿಯಾದ ತುಂಬು ಧ್ವನಿಯನ್ನು ಪಡೆದಿತ್ತು"

(ಪು-ಪುಟ ೧೧೦)

೧೦. ಕಾಮೇಶಬದ್ಧ ಮಾಂಗಲ್ಯ ಸೂತ್ರ ಶೋಭಿತಕಂಧರಾ
(ಶ್ಲೋಕ ೧೨ ನಾಮ ೩೦) ಲಲಿತಾ ಸಹಸ್ರನಾಮದಲ್ಲಿ (ಕಂಠದಲ್ಲಿ ತನ್ನ ಪತಿಯಾದ ಕಾಮೇಶನಿಂದ ಕಟ್ಟಲ್ಪಟ್ಟ ಮಂಗಳಸೂತ್ರ ವುಳ್ಳವಳು.) ಎಂದು ಹೇಳಿದೆ.


ಮಾಂಗಲ್ಯ (ಮಂಗಳಸೂತ್ರ) ಎಂದರೆ ಜೀವನದ ಗುರಿಯನ್ನು ಸಾಧಿಸುವ ಉದ್ದೇಶದಿಂದ ಧರಿಸುವ ಸೌಭಾಗ್ಯ ಸೂಚಕವಾದ ಆಭರಣವನ್ನು ಮಾಂಗಲ್ಯ ಎಂದು ಕರೆಯುತ್ತಾರೆ.

(ಲ-ಕೂ ಪುಟ ೮೮)

೧೧. ಮಾಂಗಲ್ಯ ಸೌಭಾಗ್ಯಾಭರಣ ಏಕೆಂದರೆ ಶಿವನು ಪಾರ್ವತಿಯ ಕುತ್ತಿಗೆಗೆ ಅಲಂಕರಿಸಿದ ಆಭರಣವಿದು. ಕಂಠವು ಪ್ರಣವೋತ್ಪತ್ತಿ ಸ್ಥಾನ. ಪ್ರಣವವು ಬ್ರಹ್ಮಸ್ವರೂಪ. ಅದೇ ವಿಶುದ್ಧಿ ಚಕ್ರಸ್ಥಾನ. ಮಾಂಗಲ್ಯ ಸೂತ್ರ ಕಟ್ಟುವ ಸ್ಥಾನವು ಕುತ್ತಿಗೆ ಅಂದರೆ ವಿಶುದ್ಧಿ ಚಕ್ರಸ್ಥಾನ.

(ಭ-ಪುಟ ೭೩)

ಯಂತ್ರಾರಾಧನೆ (ಶ್ಲೋಕ ೬೯)



ಯಂತ್ರ ರಚನೆ : ಚಿನ್ನದಲ್ಲಿ ಯಂತ್ರ ರಚಿಸಬೇಕು. ಒಂದು ದೀರ್ಘ ತ್ರಿಕೋಣದಲ್ಲಿ ಮತ್ತೊಂದು ಚಿಕ್ಕ ತ್ರಿಕೋಣವನ್ನು ಬರೆಯಬೇಕು. ಮೊದಲ ತ್ರಿಕೋಣದ ಭಾಗದಲ್ಲಿ ಕ್ಷಂ ಬೀಜಾಕ್ಷರವನ್ನು ಮಧ್ಯದ ತ್ರಿಕೋಣದಲ್ಲಿ ಮೂಂ ಎಂಬ ಬೀಜಾಕ್ಷರವನ್ನು ಚಿತ್ರದಲ್ಲಿ ತೋರಿಸಿರುವಂತೆ ಬರೆಯಬೇಕು.

ಪೂಜೆ : ಲಲಿತಾ ತ್ರಿಶತಿ ಕುಂಕುಮಾರ್ಚನೆಯನ್ನು ಪತ್ನಿಯ ಜತೆಗೆ ಆಗ್ನೇಯ ದಿಕ್ಕಿಗೆ ಅಭಿಮುಖವಾಗಿ ಕುಳಿತುಮಾಡಬೇಕು.

ನೈವೇದ್ಯ : ಜೇನುತುಪ್ಪ.

ಜಪ : ೪೫ ದಿನಗಳ ಕಾಲ ಪ್ರತಿನಿತ್ಯ ಈ ಶ್ಲೋಕವನ್ನು ೧೦೦೦ ಬಾರಿ ಜಪಿಸಬೇಕು.

ಫಲ : ಸಂಪಿಗೆ ಹೂವನ್ನು ಮಂತ್ರಿಸಿ ತನಗೆ ಇಷ್ಟವಾದ ಸ್ತ್ರೀಗೆ ಕೊಟ್ಟರೆ ಅವಳು ವಶವಾಗುತ್ತಾಳೆ.

(ಸ್ತ್ರೀವಶೀಕರಣ)

ಶ್ಲೋಕ–೨೦

ದೇವಿಯ ಭುಜಗಳ ವರ್ಣನೆ

ಮೃಣಾಲೀಮೃದ್ವೀನಾಂ ತವ ಭುಜಲತಾನಾಂ ಚತಸೃಣಾಂ
ಚತುರ್ಭಿಸ್ಸೌಂದರ್ಯಂ ಸರಸಿಜಭವಸ್ತೌತಿ ವದನೈಃ ।
ನಖೇಭ್ಯಸ್ಸಂತ್ರಸ್ಯನ್ [೧]ಪ್ರಥಮಮಥನಾದಂಧಕರಿಪೋಃ
ಚತುರ್ಣಾಂ [೨]ಶೀರ್ಷಾಣಾಂ ಸಮಮಭಯಹಸ್ತಾರ್ಪಣಧಿಯಾ ॥ ೨೦॥

ಪಾಠಾಂತರ

೧. (ಪ್ರಥಮಮಥನಾ) = (ಪ್ರಥಮದಮನಾ (ಸು)

೨. (ಶೀರ್ಷಾಣಾಂ) = ವಕ್ತ್ರಾಣಾಂ (ಸು)

ಪದವಿಭಾಗ

ಮೃಣಾಲೀ, ಮೃದ್ವೀನಾಂ, ತವ, ಭುಜಲತಾನಾಂ, ಚತಸೃಣಾಂ, (ಚತುರ್ಭಿಸ್ಸೌಂದರ್ಯಂ) = ಚತುರ್ಭಿಃ+ಸೌಂದರ್ಯಂ, ಸರಸಿಜಭವಃ, ಸ್ತೌತಿ, ವದನೈಃ, (ನಖೇಭ್ಯಸ್ಸಂತ್ರಸ್ಯನ್) = ನಖೇಭ್ಯಃ + ಸಂತ್ರಸ್ಯನ್, (ಪ್ರಥಮ ಮಥನಾದಂಧಕರಿಪೋಃ) = ಪ್ರಥಮ, ಮಥನಾತ್ + ಅಂಧಕರಿಪೋಃ ಚತುರ್ಣಾಂ, ಶೀರ್ಷಾಣಾಂ, (ಸಮಮಭಯ ಹಸ್ತಾರ್ಪಣಧಿಯಾ) = ಸಮಮ್ + ಅಭಯ ಹಸ್ತ+ಅರ್ಪಣಧಿಯಾ.

ಅನ್ವಯಾರ್ಥ

(ಹೇ ಭಗವತೀ)	ಎಲೈ ಪೂಜ್ಯಳಾದ ದೇವಿಯೇ
ಸರಸಿಜಭವ	(ಕಮಲದಲ್ಲಿ ಜನಿಸಿದ) ಬ್ರಹ್ಮನು
ಪ್ರಥಮಮಥನಾತ್	ಈ ಮೊದಲನೆಯ ತನ್ನ ತಲೆಯನ್ನು ಚಿವುಟಿ ಹಾಕಿದ (ಕತ್ತರಿಸಿರುವ)
ಅಂಧಕರಿಪೋಃ	ಅಂಧಕಾಸುರನಿಗೆ ಶತ್ರುವಾದ ಈಶ್ವರನ
ನಖೇಭ್ಯಃ	ಉಗುರುಗಳಿಗೆ
ಸಂತ್ರಸ್ಯನ್	ಹೆದರಿದವನಾಗಿ
ಸಮಂ	ಏಕಕಾಲದಲ್ಲಿ

ಚತುರ್ಣಾಂ ಶೀರ್ಷಾಣಾಂ	ನಾಲ್ಕಾದ ತಲೆಗಳಿಗೂ
ಅಭಯಹಸ್ತಾರ್ಪಣಧಿಯಾ	ಅಭಯಹಸ್ತವನ್ನು ಪಡೆಯಬೇಕೆಂಬ (ಪ್ರಾರ್ಥನೆಯ) ಬುದ್ಧಿಯಿಂದ
ತವ	ನಿನ್ನ
ಮೃಣಾಲೀಮೃದ್ವೀನಾಂ	ಕಮಲದ ದಂಟಿನಂತೆ-ಕೋಮಲವಾದ
ಚತಸೃಣಾಂ	ನಾಲ್ಕಾದ
ಭುಜಲತಾನಾಂ	ಲತೆಯಂತಿರುವ ಬಾಹುಗಳ
ಸೌಂದರ್ಯಂ	ಸೊಗಸನ್ನು
ಚತುರ್ಭಿವದನೈಃ	ನಾಲ್ಕು ಮುಖಗಳಿಂದಲೂ
ಸ್ತೌತಿ	ಹೊಗಳುತ್ತಾನೆ.

ತಾತ್ಪರ್ಯ

ಕವಿಯು ಕಾಮೇಶ್ವರೀ ರೂಪಳಾದ ದೇವಿಯ ನಾಲ್ಕು ಭುಜಗಳನ್ನು ವರ್ಣಿಸುತ್ತಾನೆ:

ಎಲೈ ದೇವಿಯೇ, ಹಿಂದೆ ಈಶ್ವರನು ಕೋಪಗೊಂಡು ಬ್ರಹ್ಮನ ಐದನೆಯ ತಲೆಯನ್ನು ಉಗುರುಗಳಿಂದ ಕತ್ತರಿಸಿಬಿಟ್ಟನು (ಚಿವುಟಿದನು). ಅದಕ್ಕಾಗಿ ಬ್ರಹ್ಮನು ಹೆದರಿ ನನ್ನ ಮೂಲಕ ತನಗಿರುವ ನಾಲ್ಕು ತಲೆಗಳಿಗೆ ಈಶ್ವರನ ಉಗುರುಗಳಿಂದ ಅಪಾಯ ಸಂಭವಿಸದೆ ಇರಲಿ ಎನ್ನುವ ಹಾಗೆ ನಾಲ್ಕು ಮುಖಗಳಿಂದಲೂ ತಾವರೆ ದಂಟಿನಂತೆ ಮೃದುವಾದ ನಿನ್ನ ನಾಲ್ಕು ಭುಜಗಳ ಸೌಂದರ್ಯವನ್ನು ಏಕಕಾಲದಲ್ಲಿ ಹೊಗಳುತ್ತಾ ಇದ್ದಾನೆ. [ಪೂರ್ವದಲ್ಲಿ ಬ್ರಹ್ಮನಿಗೆ ಇದ್ದ ೫ ತಲೆಗಳಲ್ಲಿ ಈಶ್ವರನು ತನ್ನ ಉಗುರಿನಿಂದ ಒಂದನ್ನು ಚಿವುಟಿ ಹಾಕಲು ಈಗ ಬ್ರಹ್ಮನು ಹೆದರಿ ಮಿಕ್ಕ ೪ ತಲೆಗಳನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಈಶ್ವರನ ಪತ್ನಿಯಾದ ಪಾರ್ವತಿಯನ್ನು ಹೊಗಳಿ, ಅಭಯವನ್ನು ಈಶ್ವರನಿಂದ ಪಡೆದನು.]

[ಕ-ಪುಟ ೧೪೦]

ಪದ್ಯಾನುವಾದ

ತನ್ನೈದನೆಯ ತಲೆಯ ಚಿವುಟಿ ತೆಗೆದಂಧಕಾ-
ಸುರವೈರಿಯಾ ಉಗುರುಗಳಿಗಂಜುತಿನ್ನುಳಿದ
ನಾಲ್ಕು ತಲೆಗಳ ಉಳಿವಿಗಭಯ ಹಸ್ತವ ನೀಡಬೇಕೆನುತ ಬೇಡಿಕೊಳಲು
ನಾಲ್ಮೊಗನು ತನ್ನ ನಾಲ್ಕೂ ಮುಖಗಳಿಂದೇಕ
ಕಾಲದಲಿ ತಾವರೆಯದಂಟಿನೊಲು ಮೃದುವಾದ
ನಿನ್ನ ನಾಲ್ದೋಳುಬಳ್ಳಿಯ ಬಂಧುರತೆಯ ನುತಿಸುತ್ತಿರುವನಲ್ತೆ ದೇವಿ

॥ ೭೦ ॥

ಟಿಪ್ಪಣಿಗಳು

೧. **ಪೂರ್ವಕಥೆ :** ಪೂರ್ವದಲ್ಲಿ ಬ್ರಹ್ಮನಿಗೂ ಈಶ್ವರನಂತೆ ೫ ತಲೆಗಳಿದ್ದವು. ಒಂದಾನೊಂದು ಕಾಲದಲ್ಲಿ ಬ್ರಹ್ಮ-ವಿಷ್ಣುವಿಗೆ ನಾನು ಶ್ರೇಷ್ಠನು, ನಾನು ಶ್ರೇಷ್ಠನು ಎಂದು ಅಹಂಭಾವದಿಂದ ಕಲಹ ವುಂಟಾಯಿತು. ಆಗ ಈಶ್ವರನು ತೇಜೋರೂಪನಾಗಿ ಇವರುಗಳ ಮಧ್ಯದಲ್ಲಿ ನಿಂತುಕೊಂಡನು. ಆಗ ಬ್ರಹ್ಮನು ಈಶ್ವರನನ್ನು ಕುರಿತು "ನೀನು ನನ್ನ ಹಣೆಯ ಬೆವರಿನಿಂದ ಹುಟ್ಟಿದವನಲ್ಲವೇ ! ನನ್ನ ಮಗನಲ್ಲವೇ ಶರಣಾಗತನಾಗು ರಕ್ಷಿಸುತ್ತೇನೆ" ಎಂದು ಹೇಳಲು, ಈಶ್ವರನು ಕುಪಿತನಾಗಿ ತನ್ನ ಅಂಶದಲ್ಲಿ ಜನಿಸಿದ ಕಾಲಭೈರವನಿಂದ ಬ್ರಹ್ಮನ ಐದನೆಯ ತಲೆಯನ್ನು ಕತ್ತರಿಸಿಸಿದನು.

[ಕ-ಪುಟ ೧೪೦]

೨. ಬ್ರಹ್ಮನಿಗೆ ೫ ತಲೆಗಳಲ್ಲಿ ಒಂದು ತಲೆ ಹೋದದ್ದರ ಬಗ್ಗೆ ಹಲವಾರು ಕಥೆಗಳಿವೆ. ಅದರಲ್ಲಿ ಇದೊಂದು ಕಥೆ : "ಬ್ರಹ್ಮನಿಗೆ ಈಶ್ವರನಿಗೆ ಇದ್ದಂತೆಯೇ ೫ ತಲೆಗಳಿದ್ದವು. ತಾನೂ ಶಿವನಿಗೆ ಸಮಾನನೆಂದು ಜಂಭದಿಂದ ಮೆರೆಯುತ್ತಿದ್ದನು, ಇದನ್ನು ಕಂಡ ಶಿವನು ಬ್ರಹ್ಮನ ಒಂದು ತಲೆಯನ್ನು ಚಿವುಟಿಹಾಕಿದನು."

(ಶ್ರೀ-ಪುಟ ೨೮೧)

೩. ಈ ಶ್ಲೋಕದಲ್ಲಿ ವಾಕ್ಯಾರ್ಥ ಹೇತುಕವಾದ ಕಾವ್ಯಲಿಂಗಾಕಾರಾ ಲಂಕಾರವಿದೆ. ಬ್ರಹ್ಮನು ನಿಯತವಾಗಿ ಮಾಡುವ ಸ್ತೋತ್ರ ಕಾರ್ಯವನ್ನು (ಶಿವನ) ಕೈ ಉಗುರುಗಳ ದೆಸೆಯಿಂದ ಹೆದರಿದವನಾಗಿ...ಎಂದು ಮುಂತಾದ ಕಾರಣಗಳಿಂದ ಸಮರ್ಥನೆ ಮಾಡಲಾಗಿದೆ.

(ಶೇ-ಪುಟ ೨೨೧)


೪. ದೇವಿಯ ಭುಜಲತೆಗಳ ವರ್ಣನೆಯಲ್ಲಿ ಬ್ರಹ್ಮನಿಗೆ ಮಾತ್ರ ಅಧಿಕಾರವಿದೆಯೇ ಹೊರತು ಬೇರೆ ರೂವಾರಿಗೆ ಅಲ್ಲ ಎಂಬುದಾಗಿ ವಸ್ತುವನ್ನು ಕಾವ್ಯಲಿಂಗದಿಂದ ಧ್ವನಿತಗೊಳಿಸಿರುವುದರಿಂದ **ವಸ್ತುಧ್ವನಿ ಅಲಂಕಾರವಾಗಿದೆ.**

(ಶೇ-ಪುಟ ೨೨೧)

೫. ಲಲಿತಾ ಸಹಸ್ರನಾಮದಲ್ಲಿ (ಶ್ಲೋಕ ೧೩ ನಾಮ ೩೧) **ಕನಕಾಂಗದ ಕೇಯೂರ ಕಮನೀಯಾ ಭುಜಾನ್ವಿತಾ** (ತೋಳುಬಂದಿ ಮತ್ತು ಭುಜಕೀರ್ತಿಗಳಿಂದ ಅಲಂಕೃತವಾದ ಸುಂದರಭುಜಗಳುಳ್ಳವಳು) ಎಂದು ಹೇಳಿದೆ. ಬ್ರಹ್ಮೋತ್ತರ ಪುರಾಣದಲ್ಲಿ "ದಧಾನಂ ನಾಗವಲಯ, ಕೇಯೂರಾಂಗದ ಮುದ್ರಿಕಾಃ' (ನಾಗವಲಯ, ಕೇಯೂರ ಅಂಗದ ಮುದ್ರಿಕೆಗಳನ್ನು ದೇವಿ ಧರಿಸಿದ್ದಾಳೆ) ಎಂದು ಹೇಳಲಾಗಿದೆ.

(ಭ-ಪುಟ ೭೪)

ಯಂತ್ರಾರಾಧನೆ (ಶ್ಲೋಕ ೭೦)



ಯಂತ್ರ ರಚನೆ : ಚಿನ್ನದ ರೇಖೆಯಲ್ಲಿ ಲಿಖಿಸಬೇಕು. ಸಮಚತುರಶ್ರವನ್ನು (ಚಚ್ಚೌಕ) ಬರೆದು ನಾಲ್ಕು ಕೋಣಗಳಲ್ಲಿ ವೃತ್ತಗಳನ್ನು ಸೇರಿಸಿ ಬರೆಯಬೇಕು. ಚೌಕದ ನಡುವೆ ಕ್ಲೀಂ ಎಂದು ಅದರ ಕೆಳಗೆ ಶ್ರೀಂ ಎಂದು ಬರೆಯಬೇಕು.

ಪೂಜೆ : ಪೂರ್ವಾಭಿಮುಖವಾಗಿ ಕುಳಿತು ಲಲಿತಾ ಸಹಸ್ರನಾಮದೊಂದಿಗೆ ಕುಂಕುಮಾರ್ಚನೆಯನ್ನು ಮಾಡಬೇಕು.

ನೈವೇದ್ಯ : ತೆಂಗಿನಕಾಯಿ ಮತ್ತು ಜೇನುತುಪ್ಪ.

ಜಪ : ೪೫ ದಿನಗಳ ಕಾಲ ದಿನಕ್ಕೆ ೧೦೦೦ ಬಾರಿ ಈ ಶ್ಲೋಕವನ್ನು ಜಪಿಸಿ ಯಂತ್ರವನ್ನು ಧರಿಸಬೇಕು.

ಫಲ : ಸಕಲ ಪುರುಷರು ವಶವಾಗುವರು.

ಶ್ಲೋಕ–೭೧

ದೇವಿಯ ಮುಂಗೈಗಳ ವರ್ಣನೆ

ನಖಾನಾಮುದ್ಯೋತೈರ್ನವನಲಿನರಾಗಂ ವಿಹಸತಾಂ
ಕರಾಣಾಂ ತೇ ಕಾಂತಿಂ ಕಥಯ ಕಥಯಾಮಃ ಕಥಮುಮೇ ।
ಕಯಾಚಿದ್ವಾ ಸಾಮ್ಯಂ ಭಜತು ಕಲಯಾ ಹಂತ ಕಮಲಂ
ಯದಿ ಕ್ರೀಡಲ್ಲಕ್ಷ್ಮೀಚರಣತಲ[೧]ಲಾಕ್ಷಾರಸಚಣಮ್ ॥ ೭೧ ॥

ಪಾಠಾಂತರ

೧. (ಲಾಕ್ಷಾರಸಚಣಮ್)= ಲಾಕ್ಷಾರುಣದಲಮ್ (ಸು) (ಪೋ)

ಲಾಕ್ಷಾರಸಚರಮ್ (ವ)

ಪದವಿಭಾಗ

(ನಖಾನಾಮುದ್ಯೋತೈರ್ನವನಲಿನರಾಗಂ) = ನಖಾನಾಮ್ + ಉದ್ಯೋತೈಃ + ನವನಲಿನರಾಗಂ, ವಿಹಸತಾಂ, ಕರಾಣಾಮ್, ತೇ, ಕಾಂತಿಂ, ಕಥಯ, ಕಥಯಾಮಃ, (ಕಥಮುಮೇ) = ಕಥಂ + ಉಮೇ, (ಕಯಾಚಿದ್ವಾ) = ಕಯಾಚಿತ್ + ವಾ, ಸಾಮ್ಯಂ, ಭಜತು, ಕಲಯಾ, ಹಂತ, ಕಮಲಂ, ಯದಿ, (ಕ್ರೀಡಲ್ಲಕ್ಷ್ಮೀ) = ಕ್ರೀಡತ್ + ಲಕ್ಷ್ಮೀ, ಚರಣ ತಲಲಾಕ್ಷಾರಸಚಣಮ್

ಅನ್ವಯಾರ್ಥ

(ಉಮೇ)	(ಎಲೈ ಪಾರ್ವತೀ ದೇವಿಯೆ)
ನಖಾನಾಮುದ್ಯೋತೈಃ	(ನಖಾನಾಂ+ಉದ್ಯೋತೈಃ) ಉಗುರುಗಳಿಂದ ಹೊರಹೊಮ್ಮಿರುವ ಕಾಂತಿಯಿಂದ
ನವನಲಿನರಾಗಂ	(ನವ + ನಲಿನ + ರಾಗಂ) (ಆಗತಾನೇ ಅರಳಿದ) ಹೊಸದಾದ ಕಮಲದ–ಕೆಂಪು ಬಣ್ಣವನ್ನು
ವಿಹಸತಾಂ	ಹಾಸ್ಯ ಮಾಡುತ್ತಿರುವ

ತೇ	ನಿನ್ನ
ಕರಾಣಾಂ ಕಾಂತಿಂ	ಹಸ್ತಗಳ ಕಾಂತಿಯನ್ನು
ಕಥಮ್	ಹೇಗೆ
ಕಥಯಾಮಃ	ವರ್ಣಿಸೋಣ
ಕಥಯ	ಹೇಳು?
ಕಮಲಂ	ತಾವರೆಯ
ಕ್ರೀಡಲ್ಲಕ್ಷ್ಮೀ	ಸಂಚರಿಸುತ್ತಿರುವ-ಲಕ್ಷ್ಮೀದೇವಿಯ
ಚರಣತಲ	ಅಂಗಾಲಿನ
ಲಾಕ್ಷಾರಸಚಣಂ	ಅರಗಿನ ರಸದಿಂದ – ಯುಕ್ತವಾಗಿ
(ಭವತಿ)ಯದಿ	ಆದದ್ದೇ ಆದರೆ
(ತದಾ)	ಆಗ
ಕಲಯಾ ಅಪಿ	ಯಾವುದೋ ಒಂದಂಶದಲ್ಲಿ
ಸಾಮ್ಯಂ	ಹೋಲಿಕೆಯನ್ನು
ಕಯಾಚಿದ್ವಾ	ಯಾವುದೋ ಒಂದು ಪ್ರಕಾರದಿಂದ
ಭಜತು	ಹೊಂದಬಹುದು
ಹಂತ!	ಅಹೋ! (ಅಯ್ಯೋ!)

ತಾತ್ಪರ್ಯ

"ಕವಿಯು ಭಗವತಿಯ ಕೈಗಳನ್ನು ವರ್ಣನೆ ಮಾಡುತ್ತಾನೆ. ಉಮಾದೇವಿಯೇ, ಆಗತಾನೇ ಅರಳಿದ ಕೆಂದಾವರೆಯನ್ನು ಉಗುರುಗಳ ಕಾಂತಿಯಿಂದ ತಿರಸ್ಕರಿಸುತ್ತಿರುವ ನಿನ್ನ ನಾಲ್ಕು ಕೈಗಳ ಕಾಂತಿಯನ್ನು ಹೇಗೆ ವರ್ಣಿಸೋಣ ಹೇಳು. ಒಂದು ಸಮಯ ಆ ಕಮಲವು ತನ್ನಲ್ಲಿ ವಾಸವಾಗಿರುವ ಲಕ್ಷ್ಮೀದೇವಿಯ ಕಾಲಿನ ಅರಗಿನ ರಸದಿಂದ ಕೂಡಿಕೊಂಡುದ್ದೇ ಆದರೆ ಆಗ ಆ ಕಮಲವು ಯಾವುದಾದರೂ ಒಂದಂಶದಲ್ಲಿ ದೇವಿಯ ಕೈಗಳಿಗೆ ಸಮಾನವಾದರೂ ಆಗಬಹುದು."

ಲಕ್ಷ್ಮೀದೇವಿಗೆ ಕಮಲವು ವಾಸಸ್ಥಾನವಾಗಿರುವುದು. ಆದುದರಿಂದಲೇ ಇವಳಿಗೆ 'ಪದ್ಮಾಲಯೆ' ಎಂದು ಹೆಸರು. ಉತ್ತಮ ಸ್ತ್ರೀಯರಿಗೆ ಉಗುರುಗಳು ಕೆಂಪಗಿರಬೇಕೆಂದು ಸಾಮುದ್ರಿಕಾಶಾಸ್ತ್ರದಲ್ಲಿ ಹೇಳಿರುವುದು. ಇಲ್ಲಿ ಉಗುರುಗಳನ್ನು ಕಮಲದಳಗಳಿಗೆ ಹೋಲಿಕೆ ಮಾಡಿದೆ.

(K).

ಪದ್ಯಾನುವಾದ

ಹೇ ಉಮೇ, ಉಗುರ್ವೆಳಗಿನಿಂದ ಹೊಸ ತಾವರೆಯ
ಕೆಂಪನುಪಹಾಸಗೈಯುವ ನಿನ್ನ ಕೈಗಳಾ
ಕಾಂತಿಯನು ಹೇಗೆ ಬಣ್ಣಿಸೆ ಸೊಗಸು ಆ ಪರಿಯನೆಮಗೆ ನೀನರುಹುತಾಯೆ;
ತುಸುವಾದರೂ ಅವುಗಳೊಡನೆ ತಾವರೆ ತಾನು
ಸಮವೆನಿಸಿಕೊಳಬಲ್ಲುದೇ, ಸಾಧ್ಯವಾಗದದು;
ತನ್ನಲ್ಲಿಕ್ರೀಡಿಸುವ ಲಕುಮಿಯಡಿಯಲತಿಕೆಯ ಕೊಳಲಾಗಸಾಧ್ಯವೇನೋ
॥ ೭೧ ॥

ಟಿಪ್ಪಣಿಗಳು

೧. **ಹಂತ (ಅಹೋ)**
ಇಲ್ಲಿ ಹಂತ ಶಬ್ದವು ವಾಕ್ಯಾಲಂಕಾರವಾಗಿ ಬಂದಿದೆ. ಅಮರ ಕೋಶದಲ್ಲಿ ಹೀಗೆ ಹೇಳಿದೆ:
ಹರ್ಷ, ಅನುಕಂಪಾ, ವಾಕ್ಯಾರಂಭ, ವಿಷಾದ – ಈ ಅರ್ಥಗಳಲ್ಲಿ ಹಂತ ಶಬ್ದವು ಇದೆ.

(ಶೇ – ಪುಟ ೨೨೧)

೨. ಪದ್ಯದ ಪೂರ್ವಾರ್ಧದಲ್ಲಿ **ತದ್ಗುಣಾಲಂಕಾರವಿದೆ.** ಉಗುರುಗಳ ಕಾಂತಿಗಳಿಂದ ಕೈಗಳು ಅತ್ಯಂತ ಕೆಂಪಾಗಿದೆ ಎಂದು ವರ್ಣಿಸಲಾಗಿದೆ. ನವನಲಿನರಾಗಂ ವಿಹಸತುಂ (ಈಗ ತಾನೇ ಅರಳಿದ ತಾವರೆಯನ್ನು ನಗೆಗೀಡು ಮಾಡುವ) ಎಂಬಲ್ಲಿ ಉಪಮಾಲಂಕಾರವಿದೆ.

(ಶೇ–ಪುಟ ೨೨೨)

೩. ಲಲಿತಾ ಸಹಸ್ರ ನಾಮದಲ್ಲಿ (ಶ್ಲೋಕ ೩೨ ನಾಮ ೮೦)
ಕರಾಂಗುಲಿ ನಖೋತ್ಪನ್ನ ನಾರಾಯಣ ದಶಾಕೃತಿಃ
(ನಾರಾಯಣನು ತನ್ನ ಹತ್ತು ಅವತಾರಗಳಿಂದ ರಾಕ್ಷಸರನ್ನು ಸಂಹಾರ ಮಾಡಿದಂತೆ ಭಂಡಾಸುರನ ಸೈನ್ಯವನ್ನು ನಾಶಮಾಡಲು ತನ್ನ ಕೈಬೆರಳುಗಳ ಉಗುರುಗಳಿಂದ ವೀರರನ್ನು ಸೃಷ್ಟಿಸಿದಳು.)

(ಲ–ಕೂ–ಪುಟ ೯೯)

೪. ಲಲಿತಾ ಸಹಸ್ರನಾಮ ಶ್ಲೋಕ ೧೯ ನಾಮ ೪೪ರಲ್ಲಿ ಹೀಗೆ ಹೇಳಿದೆ :
ನಖದೀಧಿತಿ ಸಂಛನ್ನನಿಮಜ್ಜನತಮೋಗುಣಾ
(ಶರಣಾಗತನಾದ ಭಕ್ತನ ಅಜ್ಞಾನವನ್ನು ನಾಶಮಾಡುವಂಥ ಉಗುರುಗಳ ಕಾಂತಿಯುಳ್ಳವಳು)

(ಲ–ಕೂ ಪುಟ ೯೧)

೫. ಪದದ್ವಯ ಪ್ರಭಾಜಾಲ ಪರಾಕೃತ ಸರೋರುಹಾ (ತಾವರೆ) ಪುಷ್ಪವನ್ನು ತಿರಸ್ಕರಿಸುವ ಪ್ರಭೆಯುಳ್ಳ ಎರಡು ಪದಗಳುಳ್ಳವಳು.

(೮-ಯ ಪುಟ ೮೩)

ಯಂತ್ರಾರಾಧನೆ (ಶ್ಲೋಕ ೭೧)



ಯಂತ್ರರಚನೆ: ಚಿನ್ನದ ತಗಡಿನಲ್ಲಿ ಯಂತ್ರ ತಯಾರಿಸಬೇಕು. ಚಿತ್ರದಲ್ಲಿರುವಂತೆ ವೃತ್ತದೊಳಗೆ ಸೇರಿಕೊಂಡಿರುವ ಪಂಚಕೋಣಗಳುಳ್ಳ ನಕ್ಷೆ ಬರೆಯಬೇಕು. ಅದರಲ್ಲಿ ಪಂಚಕೋಣಗಳಲ್ಲಿ ಶ್ರೀಂ ಬೀಜಾಕ್ಷರವನ್ನು ವೃತ್ತದೊಳಗಿನ ಪಂಚಕೋಣಗಳ ನಡುವಣ ಜಾಗದಲ್ಲಿ ಕ್ಲೀಂ ಬೀಜಾಕ್ಷರವನ್ನು ೫ ಕಡೆಗಳಲ್ಲಿ ಬರೆಯಬೇಕು. ಮಧ್ಯಭಾಗದಲ್ಲಿ ಕ್ಲೀಂ ಬೀಜಾಕ್ಷರವನ್ನು ಬರೆಯಬೇಕು.

ಪೂಜೆ: ಆಗ್ನೇಯದಿಕ್ಕಿಗೆ ಅಭಿಮುಖವಾಗಿ ಕೂತು 'ಲಲಿತಾ ತ್ರಿಶತೀ' ಶ್ಲೋಕವನ್ನು ಪಠಿಸುತ್ತಾ ಕೆಂಪು ಹೂಗಳಿಂದ ಅರ್ಚನೆ ಮಾಡಬೇಕು.

ನೈವೇದ್ಯ: ಜೇನುತುಪ್ಪ

ಜಪ: ೪೫ ದಿನಗಳ ಕಾಲ ಪ್ರತಿದಿನಕ್ಕೆ ೧೦೦೦ ಬಾರಿ ಈ ಶ್ಲೋಕವನ್ನು, ಅರಳಿಮರದ ಕೆಳಗೆ (ವಟವೃಕ್ಷ) ಕುಳಿತು ಜಪಿಸಬೇಕು.

ಫಲ: ಯಕ್ಷಿಣೀ ವಶೀಕರಣ

ಶ್ಲೋಕ ೭೨

ದೇವಿಯ ಕುಚಗಳ ವರ್ಣನೆ

ಸಮಂ ದೇವಿ! ಸ್ಕಂದದ್ವಿಪವದನಪೀತಂ ಸ್ತನಯುಗಂ
ತವೇದಂ ನಃ ಖೇದಂ ಹರತು ಸತತಂ ಪ್ರಸ್ನುತಮುಖಮ್ ।
ಯದಾಲೋಕ್ಯಾಶಂಕಾಕುಲಿತಹೃದಯೋ ಹಾಸಜನಕಃ
ಸ್ವಕುಂಭೌ ಹೇರಂಭಃ ಪರಿಮೃಶತಿ ಹಸ್ತೇನ ಝಡಿತಿ ॥ ೭೨ ॥

ಪದವಿಭಾಗ

ಸಮಂ ದೇವಿ! ಸ್ಕಂದದ್ವಿಪವದನಪೀತಂ, ಸ್ತನಯುಗಂ, (ತವೇದಂ)=ತವ+ಇದಂ, ನಃ, ಖೇದಂ, ಹರತು, ಸತತಂ, ಪ್ರಸ್ನುತ ಮುಖಮ್, (ಯದಾಲೋಕ್ಯಾಶಂಕಾಕುಲಿತಹೃದಯೋ) = ಯತ್ + ಆಲೋಕ್ಯ + ಆಶಂಕ+ಆಕುಲಿತ ಹೃದಯಃ, ಹಾಸಜನಕಃ, ಸ್ವಕುಂಭೌ, ಹೇರಂಬಃ ಪರಿಮೃಶತಿ, ಹಸ್ತೇನ, ಝಡಿತಿ.

ಅನ್ವಯಾರ್ಥ

(ಹೇ ದೇವೀ)	(ಎಲೈ) ದೇವಿಯೆ
ಸಮಂ	ಏಕ ಕಾಲದಲ್ಲಿ
ಸ್ಕಂದ ದ್ವಿಪವದನ ಪೀತಂ	ಕುಮಾರಸ್ವಾಮಿಯಿಂದಲೂ–ಗಜಮುಖನಿಂದಲೂ ಪಾನಮಾಡಲ್ಪಟ್ಟ
ತವ	ನಿನ್ನ
ಇದಂ ಸ್ತನಯುಗಂ	ಈ ಎರಡು ಸ್ತನಗಳು
ಪ್ರಸ್ನುತಮುಖಮ್	ಹಾಲು ಸುರಿಸುವ–ಅಗ್ರಭಾಗ (ಚೂಚುಕ)ವುಳ್ಳದ್ದಾಗಿ
ನಃ ಖೇದಂ	ನಮ್ಮಗಳ ಕಷ್ಟವನ್ನು
ಸತತಂ	ಯಾವಾಗಲೂ
ಹರತು	ಪರಿಹಾರ ಮಾಡಲಿ
ಯದಾಲೋಕ್ಯ	(ಯತ್+ಆಲೋಕ್ಯ) ಯಾವ ಸ್ತನಯುಗ್ಮವನ್ನು ನೋಡಿ

ಆಶಂಕಾಕುಲಿತ ಹೃದಯಃ	ನನ್ನದೇ ಕುಂಭಸ್ಥಳಗಳು ಎಂಬ ಊಹೆಯಿಂದ – ಚಿಂತಾಕ್ರಾಂತವಾದ– ಮನಸ್ಸುಳ್ಳ
ಹೇರಂಬಃ	ಗಣಪತಿಯು
ಹಾಸಜನಕಃ	(ನೋಡುವ ಜನಗಳಿಗೆ) ಹಾಸ್ಯವನ್ನುಂಟು ಮಾಡುವನಾಗಿ
ಹಸ್ತೇನ	ತನ್ನ ಸೊಂಡಿಲಿನಿಂದ
ಝಡಿತಿ	ತಕ್ಷಣವೇ
ಸ್ವಕುಂಭೌ	ತನ್ನ ತಲೆಯ ಮೇಲ್ಭಾಗವನ್ನು
ಪರಿಮೃಶತಿ	ಮುಟ್ಟಿಕೊಳ್ಳುತ್ತಾನೆ

ತಾತ್ಪರ್ಯ

"ಎಲೈ ದೇವಿಯೆ, ಗಣಪತಿ, ಕುಮಾರಸ್ವಾಮಿ ಇವರಿಬ್ಬರೂ ಏಕಕಾಲದಲ್ಲಿ ಸ್ತನ್ಯಪಾನ ಮಾಡುತ್ತಿರಲು ಅಗ್ರಭಾಗದಿಂದ (ಚೂಚುಕದಿಂದ) ಹಾಲನ್ನು ಸುರಿಸುತ್ತಿರುವ ನಿನ್ನ ಸ್ತನಗಳೆರಡೂ ನಮ್ಮ ಕಷ್ಟವನ್ನು ಯಾವಾಗಲೂ ಪರಿಹಾರ ಮಾಡಲಿ (ಎಂದು ಪ್ರಾರ್ಥನೆಯು). ಅವರಿಬ್ಬರಲ್ಲಿ ಗಣಪತಿಯು ಮಾತ್ರ ಹಾಲು ಕುಡಿಯುವಾಗ ತನ್ನ ಕುಂಭಸ್ಥಳದಂತಿರುವ ತಾಯಿಯ ಸ್ತನಗಳನ್ನು ನೋಡಿದಾಗಲೆಲ್ಲ, ನನ್ನ ಕುಂಭಸ್ಥಳವನ್ನು ಇವಳು ಕದ್ದು ಇರಿಸಿಕೊಂಡಿರಬಹುದೆಂದು ಆಶಂಕೆಪಟ್ಟು, ಗಾಬರಿಯಿಂದ ತನ್ನ ಕುಂಭಸ್ಥಳಗಳನ್ನು ಸೊಂಡಿಲಿನಿಂದ ನೋಡಿಕೊಳ್ಳುತ್ತಾ ಇದ್ದನಂತೆ. ಈ ಸ್ಥಿತಿಯನ್ನು ನೋಡಿದ ಜನಗಳಿಗೆ ನಗುವುಂಟಾಗುವುದು ಸ್ವಭಾವ ಸಿದ್ಧವಾದುದು."

(K).

ಪದ್ಯಾನುವಾದ

ಓ ದೇವಿ! ಕುಚಯುಗದ ತೊಟ್ಟು ಪಾಲ್ತೊರೆಯುತಿರೆ
ಸಮವಾಗಿ ಗಜಮುಖ ಸ್ಕಂದರಿಬ್ಬರು ಕುಡಿಯ–
ಲವರ ತಣಿಸಿದ ನಿನ್ನ ಕುಚವೆರಡು ನಮ್ಮ ಖೇದವ ಸತತ ಪರಿಹರಿಸಲಿ;
ಕುಚಯುಗವ ನೋಡಿ ನೆನೆಯುತ ತನ್ನ ಕುಂಭಗಳ
ಕಸಿದುಕೊಂಡಳೊ ತಾಯಿ ಎಂದು ಶಂಕಾಕುಲಿತ–
ನಾಗಿ ಸೊಂಡಿಲಿನಿಂದ ತಡವರಿಸಿಕೊಳೆ ತಲೆಯ, ನಗೆಹುಟ್ಟಿಸಿದನು ತಾಯ್ಗೆ!
॥ ೭೨ ॥


ಟಿಪ್ಪಣಿಗಳು

೧. ವಿನಾಯಕನ ಕುಂಭಸ್ಥಳದಂತಿರುವ ತಾಯಿಯ ಸ್ತನಗಳನ್ನು ನೋಡಿ ನನ್ನ ಕುಂಭಪ್ರದೇಶಕ್ಕೆ ಸಮನವಾಗಿದೆ ಎಂದು ತನ್ನ ಸೊಂಡಿಲಿನಿಂದ ಪರಿಶೀಲಿಸಿಕೊಳ್ಳುತ್ತಾನೆ ಎಂಬಲ್ಲಿ ಉಪಮೆಯೋಪಮಾಲಂಕಾರವಿದೆ. (ಶೇ. ಪುಟ ೨೨೪)

೨. ಭಗವತಿಯ ಕುಚಕುಂಭಗಳ ಸಾದೃಶ್ಯ ಒಂದು ವೇಳೆ ಇರುವುದಾದರೆ ವಿನಾಯಕನ ಕುಂಭಪ್ರದೇಶಗಳ ಸಾದೃಶ್ಯವೇ ಎಂಬುದಾಗಿ ಅತಿಶಯೋಕ್ತಿ ಅಲಂಕಾರವು ಕಂಡುಬರುತ್ತದೆ. (ಶೇ. ಪುಟ ೨೨೪)

೩. ತಾಯಿಯ ಎದೆ ಹರವನ್ನು ಗಣಪನಿಗೆ ಆನೆಯ ಗಂಡಸ್ಥಲದ ನೆನಪಾಗಿ ತಲೆ ಸವರಿಕೊಂಡು ತಂದೆ ತಾಯಿಗಳ ನಗೆಗೆ ಈಡಾದನು. (ಪು–ಪುಟ ೧೧೨)

ಯಂತ್ರಾರಾಧನೆ (ಶ್ಲೋಕ ೭೨)



ಯಂತ್ರರಚನೆ : ಚಿನ್ನದ ತಗಡಿನಲ್ಲಿ ಲಿಖಿಸಬೇಕು. ಮೂಲೆಗಳಲ್ಲಿ ತ್ರಿಶೂಲ ಗಳಿಂದ ಕೂಡಿರುವ ಅಧೋಮುಖವಾದ ಸಮಭುಜ ತ್ರಿಕೋಣವನ್ನು ಬರೆಯಬೇಕು. ತ್ರಿಭುಜದ ನಡುವೆ ಸಮಂದೇವಿ–ಕ್ಲೀಂ–ಹ್ರೀಂ ಬೀಜಾಕ್ಷರಗಳನ್ನು ಒಂದರ ಕೆಳಗೆ ಒಂದರಂತೆ ಶುದ್ಧ ರೂಪದಲ್ಲಿ ಬರೆಯಬೇಕು.

ಪೂಜೆ : ಈಶಾನ್ಯ ದಿಕ್ಕಿಗೆ ಅಭಿಮುಖವಾಗಿ ಕುಳಿತು ೫ ಬಿಲ್ವಪತ್ರಗಳಿಂದ ದುರ್ಗಾ ಅಷ್ಟೋತ್ತರ ಅರ್ಚನೆಯನ್ನು ಮಾಡಬೇಕು.

ನೈವೇದ್ಯ : ಜೇನುತುಪ್ಪ

ಜಪ : ೪೫ ದಿನಗಳ ಕಾಲ ದಿನಕ್ಕೆ ೧೦೦೦ ಬಾರಿಯಂತೆ ಈ ಶ್ಲೋಕವನ್ನು ಜಪಿಸಿ ಯಂತ್ರವನ್ನು ಧರಿಸಬೇಕು.

ಫಲ : ಈ ಯಂತ್ರ ಧರಿಸಿದರೆ **'ನಿರ್ಭಯ ವಿಶ್ವಸಂಚಾರ'** ಶಕ್ಯ.

ಶ್ಲೋಕ ೭೩

ದೇವಿಯ ಸ್ತನ್ಯ ವರ್ಣನೆ

ಅಮೂ ತೇ ವಕ್ಷೋಜಾವಮೃತರಸ[1]ಮಾಣಿಕ್ಯಕುತುಪೌ
ನ ಸಂದೇಹಸ್ಪಂದೋ ನಗಪತಿಪತಾಕೇ ಮನಸಿ ನಃ ।
ಪಿಬಂತೌ ತೌ ಯಸ್ಮಾದವಿದಿತ[2]ವಧೂಸಂಗರಸಿಕೌ
ಕುಮಾರಾವದ್ಯಾಪಿ ದ್ವಿರದವದನಕ್ರೌಂಚದಲನೌ ॥ ೭೩ ॥

ಪಾಠಾಂತರ

೧. (ಮಾಣಿಕ್ಯ ಕುತುಪೌ) = ಮಾಣಿಕ್ಯ ಕಲಶೌ (ಸು)
೨. (ವಧೂಸಂಗ ರಸಿಕೌ) = ವಧೂಸಂಗವರಸೌ (ಸು)

ಪದವಿಭಾಗ

ಅಮೂ, ತೇ, (ವಕ್ಷೋಜಾವಮೃತರಸಮಾಣಿಕ್ಯ ಕುತುಪೌ) ವಕ್ಷೋಜೌ + ಅಮೃತರಸಮಾಣಿಕ್ಯ ಕುತಪೌ, ನ, (ಸಂದೇಹಸ್ಪದೋ) = ಸಂದೇಹಾಸ್ಪಂದಃ, ನಗಪತಿ ಪತಾಕೇ! ಮನಸಿ, ನಃ, ಪಿಬಂತೌ, ತೌ, (ಯಸ್ಮಾದವಿದಿತವಧೂ ಸಂಗರಸಿಕೌ) = ಯಸ್ಮಾತ್ + ಅವಿದಿತವಧೂಸಂಗರಸಿಕೌ, (ಕುಮಾರಾವದ್ಯಾಪಿ) = ಕುಮಾರೌ + ಆದ್ಯ + ಅಪಿ, ದ್ವಿರದ ವದನಕ್ರೌಂಚದಲನೌ

ಅನ್ವಯಾರ್ಥ

(ಹೇ) ನಗಪತಿ ಪತಾಕೇ	(ಎಲೈ) ಪರ್ವತರಾಜನಿಗೆ ಧ್ವಜಪ್ರಾಯಳಾದವಳೇ
ಅಮೂ ತೇ	ಈ ನಿನ್ನ
ವಕ್ಷೋಜೌ	(ವಕ್ಷೇ+ಜ = ಎದೆಯಲ್ಲಿ +ಹುಟ್ಟಿದ್ದು) ಸ್ತನಗಳೆರಡು
ಅಮೃತರಸ	ಅಮೃತರಸದಿಂದ ತುಂಬಿದ
ಮಾಣಿಕ್ಯಕುತುಪೌ	ಪದ್ಮರಾಗಮಣಿಯ – ಬುದ್ದಲಿಗಳು ಆಗಿವೆ

(ಅಸ್ಮಿನ್ನರ್ಥೇ)	(ಈ ಅರ್ಥದಲ್ಲಿ)
ನಃ	ನಮ್ಮ
ಮನಸಿ	ಮನಸ್ಸಿನಲ್ಲಿ
ಸಂದೇಹಸ್ಪಂದೋಃ	ಸಂಶಯದ ಚೂರು
ನ	ಇಲ್ಲ
ಯಸ್ಮಾತ್	ಯಾವ ಕಾರಣದಿಂದ – ಆ ಕುಚಗಳಿಂದ
ಪಿಬಂತೌ	ಪಾನ ಮಾಡುತ್ತಿರುವ
ಅವಿದಿತ	ತಿಳಿಯಲ್ಪಡದೇ ಇರುವ
ವಧೂಸಂಗರಸಿಕೌ	ಸ್ತ್ರೀ ಸಹವಾಸವಿಲ್ಲದ, ರಸಜ್ಞರಲ್ಲದ (ವಿವಾಹವಿಲ್ಲದ)
ದ್ವಿರದವದನ	(ದ್ವಿ+ರದ = ಎರಡು ಹಲ್ಲುಗಳುಳ್ಳನಾದ) ಗಣಪತಿಯು
ಕ್ರೌಂಚದಲನೌ	(ಕ್ರೌಂಚಪರ್ವತವನ್ನು+ಕತ್ತರಿಸಿದವನು) ಕುಮಾರಸ್ವಾಮಿಯು
ತೌ	ಇಬ್ಬರೂ
ಅದ್ಯಾಪಿ	ಈಗಲೂ ಕೂಡ
ಕುಮಾರೌ	ಅವಿವಾಹಿತರಾಗಿಯೇ
(ಭವತಃ)	(ಇರುತ್ತಾರೆ)

ತಾತ್ಪರ್ಯ

ಪರ್ವತರಾಜನಿಗೆ ಬಾವುಟದಂತಿರುವ ಎಲೈ ದೇವಿಯೇ, ಈ ನಿನ್ನ ಸ್ತನಗಳು ಅಮೃತರಸದಿಂದ ತುಂಬಿದ ಕೆಂಪುಮಣಿಯ ಬುದ್ದಲಿಗಳೆಂದು ಹೇಳುವುದರಲ್ಲಿ ನನಗೆ ಸ್ವಲ್ಪವೂ ಸಂದೇಹವಿಲ್ಲ. ನಿನ್ನ ಸ್ತನದಲ್ಲಿ ಅಮೃತರಸವಿದ್ದುದರಿಂದಲೇ ಅದನ್ನು ಪಾನ ಮಾಡಿದ ಮತ್ತು ಮದುವೆಯೆಂಬುದನ್ನೇ ಅರಿಯದ ಕುಮಾರಸ್ವಾಮಿ ಮತ್ತು ಗಣಪತಿ ಇವರಿಬ್ಬರೂ ಈಗಲೂ ಕೂಡ ಕುಮಾರರೆಂದು ಹೇಳಿಸಿಕೊಳ್ಳುತ್ತಾ ಇದ್ದಾರೆ. ಅಮೃತಪಾನ ಮಾಡಿದವರಿಗೆ ಮುಪ್ಪು ಬರುವುದೇ ಇಲ್ಲ. ಅದಕ್ಕೆ ಗುರುತು ಇವರಿಬ್ಬರೂ ಹುಡುಗರಾಗಿರುವುದೇ ಆಗಿದೆ. ಸ್ತನಗಳು ಕೆಂಪಗಿರುವುದರಿಂದ ಮಾಣಿಕ್ಯ ಕುತುಪವೆಂದು ಕವಿಯು ಹೇಳಿರುತ್ತಾನೆ.

(K).

ಪದ್ಯಾನುವಾದ

ತಾಯೆ, ಹಿಮವಂತಪರ್ವತಪತಾಕೇ, ನಿನ್ನ
ಈ ಸ್ತನದ್ವಯವಮೃತರಸವು ನೆರೆ ತುಂಬಿರುವ
ಮಾಣಿಕ್ಯಕಲಶವೆರಡೆನ್ನುವೆಡೆ ನಮಗಿಲ್ಲ ಸಂದೇಹದಿನಿತು ಸುಳಿವು;
ಅದರಿನಲ್ಲವೆ ಯಿಂದಿಗೂ ಗಣಪ ಷಣ್ಮುಖರು
ನವವಧೂಸಂಗರಾಸಿಕ್ಯವನ್ನರಿಯದರು
ತಾಯ ಮೊಲೆವಾಲ್ಕುಡಿಯುತುಳಿದಿಹರು ಕೌಮಾರಭಾವದಲಿ ನಲಿನಲಿಯುತ
॥ ೭೩ ॥

ಟಿಪ್ಪಣಿಗಳು

೧. ಶ್ಲೋಕ ೭೨, ೭೩ರಲ್ಲಿ ದೇವಿಯ ಸ್ತನ್ಯಪಾನದ ಪೌಷ್ಟಿಕತೆ ಮತ್ತು ಜ್ಞಾನಸಮೃದ್ಧಿಯನ್ನು ಹೇಳಿದೆ. ತಾಯಿಯ ಎದೆಹಾಲನ್ನು ಕುಡಿದು ಬೆಳೆದ ಗಣಪ-ಷಣ್ಮುಖರಿಬ್ಬರೂ ಭೋಗದ ಸ್ತ್ರೀಯರ ಸಂಗವನ್ನೇ ಅರಿಯದ ಸಾಹಿತ್ಯಾರಾಧಕ ಜ್ಞಾನಾರಾಧಕರಾದರು.

(ಪು. ಪುಟ ೧೧೨)

೨. **ಅಮೃತರಸಮಾಣಿಕ್ಯಕುತುಪೌ** (ಅಮೃತರಸದಿಂದ ತುಂಬಿದ ಚೀಲಗಳಾಗಿವೆ) ಕುತುಪ ಎಂದರೆ ಚರ್ಮದಿಂದ ನಿರ್ಮಿತವಾಗಿ ತುಪ್ಪ, ಎಣ್ಣೆ ಮುಂತಾದ ದ್ರವವಸ್ತುಗಳಿಗೆ ಆಧಾರವಾಗಿರುವ ಗಡಿಗೆಯಂತಿರುವ ಪಾತ್ರೆಯನ್ನು (ಚೀಲವನ್ನು) ಬುದ್ದಲಿ ಎನ್ನುತ್ತಾರೆ. ಅಂತಹ ಚರ್ಮದ ಬುದ್ದಲಿಗೆ ಭಗವತಿಯ ಸ್ತನಗಳನ್ನು ಹೋಲಿಕೆ ಮಾಡಲು ಸಾಧ್ಯವಿಲ್ಲವಾದುದರಿಂದ ಇಲ್ಲಿ ಅವುಗಳನ್ನು ಮಾಣಿಕ್ಯದಿಂದ ನಿರ್ಮಿತವಾಗಿವೆ ಎಂದು ಹೇಳಲ್ಪಟ್ಟಿದೆ.

(ಶೇ-ಪುಟ ೨೨೪)

೩. **ನಿಶ್ಚಯಾಂತ ಸಂದೇಹಾಲಂಕಾರ** ಈ ಶ್ಲೋಕದ ಮಾಣಿಕ್ಯ ಕುತುಪೌ ಎಂಬ ಮಾತಿನಲ್ಲಿದೆ. ಇವುಗಳು ಕುಚಗಳೋ ಅಥವಾ ಮಾಣಿಕ್ಯದಿಂದ ರಚಿತವಾದ ಬಿಂದಿಗೆಗಳೋ ಎಂಬ ಸಂದೇಹ ಮೊದಲಿಗೆ ಉಂಟಾಗುತ್ತದೆ. ಆದರೆ ಇವು ಮಾಣಿಕ್ಯ ರಚಿತವಾದ ಬಿಂದಿಗೆಗಳೇ ಎಂದೇ ನಿಶ್ಚಯವಾಗುತ್ತದೆ. ಏಕೆಂದರೆ ಅಮೃತರಸಪಾನದಿಂದ ಗಣಪತಿ-ಷಣ್ಮುಖರಿಗೆ ಶಿಶುತ್ವಾವಸ್ಥೆಯೇ ಸ್ಥಿರವಾದರೂ ಸಾಮಾನ್ಯವಾಗಿ ಶಿಶುತ್ವಾವಸ್ಥೆ

ನಂತರದ ಕುಮಾರಾವಸ್ಥೆಯೂ ಇರಬೇಕಾಗುತ್ತದೆ. ಆದರೆ ಇವರಿಬ್ಬರೂ ಸರ್ವದಾ ಶೈಶವಾವಸ್ಥೆ ಇರುವುದು ಭಗವತಿಯ ಅಮೃತರಸದ ಪಾನದ ಕಾರಣದಿಂದಲೇ ಎಂಬುದು ಸದ್ಯದ ಉತ್ತರಾರ್ಧದಿಂದ ಪ್ರತಿಪಾದಿತ ವಾಗುವುದರಿಂದ ನಿಶ್ಚಯುತ ಸಂದೇಹಾಲಂಕಾರ ಇಲ್ಲಿದೆ.

(ಶೇ–ಪುಟ ೨೨೬)

ಸಮಾಸವ್ಯಾಸವಿಧಾನ

೪. ಈ ಶ್ಲೋಕದಲ್ಲಿ ಸಮಾಸವ್ಯಾಸ ವಿಧಾನ ಕಂಡುಬರುತ್ತದೆ. "ಕವಿತ್ವ ರಚನೆಯಲ್ಲಿ ಒಂದೇ ವಿಷಯವನ್ನು ಹೃದಯಕ್ಕೆ ತಟ್ಟುವಂತೆ ವಿವಿಧ ಉಪಮಾನ ಉದಾಹರಣೆಗಳಿಂದ ಮತ್ತೆ ಮತ್ತೆ ಬೋಧಿಸುವುದನ್ನು ಸಮಾಸವ್ಯಾಸ" ಎನ್ನುತ್ತಾರೆ. ಶಂಕರರು ದೇವಿಯ ಸ್ತನಯುಗ್ಮ ಸೌಂದರ್ಯವನ್ನು, ಮಹಾತ್ಮೆಯನ್ನು, ಅಮೃತಪ್ರಸಾದವನ್ನು ೫–೬ ಶ್ಲೋಕಗಳಲ್ಲಿ ಮತ್ತೆ ಮತ್ತೆ ವರ್ಣಿಸಿದ್ದಾರೆ.

(ಭ–ಪುಟ ೧೨೨)

೫. ದೇವಿಯ ಸ್ತನಯುಗ್ಮವನ್ನು ಆಕೆಯ ಅಮೃತ ಕ್ಷೀರಧಾರೆಗಳನ್ನು ನಿಲ್ಲಿಸಿಕೊಳ್ಳುವಂತಹ ಮಾಣಿಕ್ಯಬಿಂದಿಗೆಗಳನ್ನಾಗಿ ಶಂಕರರು ವರ್ಣಿಸಿದ್ದಾರೆ. ಪರ್ವತಗಳಲ್ಲಿ ಮಾಣಿಕ್ಯ, ಪದ್ಮರಸದ ಮಣಿ ಹೇರಳವಾಗಿ ಲಭಿಸುತ್ತದೆ. ಪರ್ವತರಾಜ ಪುತ್ರಿಯಾದ ಪಾರ್ವತಿಯ ದೇಹವು ಸಹಜವಾಗಿ ಮಾಣಿಕ್ಯ ಪದ್ಮರಾಗ ಮಣಿಗಳಂತಹ ಸೌಂದರ್ಯವುಳ್ಳದ್ದು, ಕಠಿಣವಾದದ್ದು, ಬೆಲೆ ಉಳ್ಳದ್ದು, ಮಾಹಾತ್ಮ್ಯೆ ಒಳಗೊಂಡಿದ್ದು ಆಗಿದೆ.

(ಭ–ಪುಟ ೧೨೩)

ಭ್ರಾಂತಿಮಾತ್ರ ದಾಂಪತ್ಯ

೬. ಪುರಾಣಗಳಲ್ಲಿ ವಿನಾಯಕನಿಗೆ ಸಿದ್ಧಿ–ಬುದ್ಧಿ ಪತ್ನಿಯರು, ಷಣ್ಮುಖನಿಗೆ ವಲ್ಲಿ–ದೇವಸೇನೆ ಎಂಬ ಪತ್ನಿಯರು ಇದ್ದಾರೆಂದು ಹೇಳಿದೆ. ಆದರೆ ಈ ಶಬ್ದಗಳು ಸ್ತ್ರೀಲಿಂಗ ಶಬ್ದಗಳಾಗಿದ್ದು ಶಕ್ತಿಗಳ ಪ್ರತೀಕಗಳಾಗಿವೆಯೇ ಹೊರತು ದೈಹಿಕ ಸುಖಭೋಗ ನೀಡುವ ಸ್ತ್ರೀಯರಲ್ಲ, ಆದ್ದರಿಂದ ಇವರಿಬ್ಬರ ದಾಂಪತ್ಯವನ್ನು ಭ್ರಾಂತಿ ಮಾತ್ರ ದಾಂಪತ್ಯವೆಂದು ಕರೆಯಲಾಗಿದೆ.

(ಪೋ. ಪುಟ ೩೫೮)

ಯಂತ್ರರಚನೆ (ಶ್ಲೋಕ ೭೩)



ಯಂತ್ರರಚನೆ : ಚಿನ್ನದಲ್ಲಿ ಯಂತ್ರ ತಯಾರಿಸಬೇಕು. ಸಮಚತುರಶ್ರ ರಚಿಸಿ (ಚಚ್ಚೌಕ ಬರೆದು) ನಡುವೆ 'ಹಾಂ' 'ಬೀಜಾಕ್ಷರ ಬರೆಯಬೇಕು.

ಪೂಜೆ : ಪೂರ್ವಾಭಿಮುಖವಾಗಿ ಕುಳಿತು ಕಮಲದಳಗಳಿಂದ ಲಕ್ಷ್ಮೀ ಅಷ್ಟೋತ್ತರದೊಂದಿಗೆ ಅರ್ಚನೆ ಮಾಡಬೇಕು.

ನೈವೇದ್ಯ : ಜೇನುತುಪ್ಪ ಮತ್ತು ಹಾಲು

ಜಪ : ೭ ದಿನಗಳು ಪ್ರತಿದಿನಗಳಲ್ಲಿ ಒಂದು ಸಾವಿರ ಸರ್ತಿ ಜಪಿಸಬೇಕು.

ಫಲ : **ಈ ಯಂತ್ರವನ್ನು ಧರಿಸಿದ ಸ್ತ್ರೀಯರಿಗೆ ಸ್ತನ್ಯಸಮೃದ್ಧಿ ಮತ್ತು ಹಸುಗಳಲ್ಲಿ ಕ್ಷೀರವೃದ್ಧಿ ಆಗುತ್ತದೆ.**

ಶ್ಲೋಕ ೭೪

ದೇವಿಯ ಮುತ್ತಿನಹಾರದ ವರ್ಣನೆ

ವಹತ್ಯಂಬ ಸ್ತಂಬೇರಮದನುಜಕುಂಭಪ್ರಕೃತಿಭಿಃ
ಸಮಾರಬ್ಧಾಂ ಮುಕ್ತಾಮಣಿಭಿರಮಲಾಂ ಹಾರಲತಿಕಾಮ್ ।
ಕುಚಾಭೋಗೋ ಬಿಂಬಾಧರರುಚಿಭಿರಂತಶ್ಶಬಲಿತಾಂ
ಪ್ರತಾಪವ್ಯಾಮಿಶ್ರಾಂ [1]ಪುರದಮಯಿತುಃ ಕೀರ್ತಿಮಿವ ತೇ ॥ ೭೪ ॥

ಪಾಠಾಂತರ

೧. (ಪುರದಮಯಿತುಃ) = ಪುರವಿಜಯಿನಃ (ಸು)

ಪದವಿಭಾಗ

(ವಹತ್ಯಂಬ) = ವಹತಿ + ಅಂಬ, ಸ್ತಂಬೇರಮದನುಜ ಕುಂಭಪ್ರಕೃತಿಭಿಃ, (ಸಮಾರಬ್ಧಾಂ) = ಸಂ + ಆರಬ್ಧಾಂ, (ಮುಕ್ತಾಮಣಿಭಿರಮಲಾಂ)= ಮುಕ್ತಾಮಣಿಭಿಃ + ಅಮಲಾಂ, ಹಾರಲತಿಕಾವ್, (ಕುಚಾಭೋಗೋ) = ಕುಚ + ಆಭೋಗಃ, (ಬಿಂಬಾಧರಶುಚಿಭಿರಂತಶ್ಶಬಲಿತಾಂ) = ಬಿಂಬಾಧರರುಚಿಭಿಃ + ಅಂತಃ + ಶಬಲಿತಾಂ, (ಪ್ರತಾಪವ್ಯಾಮಿಶ್ರಾಂ)=ಪ್ರತಾಪ ವಿ+ ಆಮಿಶ್ರಾಂ ಪುರದಮಯಿತುಃ, (ಕೀರ್ತಿಮಿವ) = ಕೀರ್ತಿಮ್+ಇವ, ತೇ.

ಅನ್ವಯಾರ್ಥ

(ಹೇ) ಅಂಬ	(ಎಲೈ) ತಾಯಿಯೇ
ತೇ	ನಿನ್ನ
ಕುಚಾಭೋಗಃ	ಭವ್ಯವಾದ ಸ್ತನಗಳು
ಸ್ತಂಬೇರಮದನುಜ	ಗಜಾಸುರನ
ಕುಂಭ ಪ್ರಕೃತಿಭಿಃ	ಕುಂಭಸ್ಥಳಗಳಲ್ಲಿ ಹುಟ್ಟಿದ
ಮುಕ್ತಾಮಣಿಭಿಃ	ಮುತ್ತಿನ ಮಣಿಗಳಿಂದ
ಸಮಾರಬ್ಧಾಂ	ಸೇರಿಸಲ್ಪಟ್ಟ

ಅಮಲಾಂ	ನಿರ್ಮಲವಾದ
ಹಾರಲತಿಕಾಂ	ಲತೆಯಂತಿರುವ ಹಾರವನ್ನು
ಬಿಂಬಾಧರರುಚಿಭಿಃ	(ಬಿಂಬ+ಅಧರ+ರುಚಿಭಿಃ) ತೊಂಡೆ ಹಣ್ಣಿನಂತಿರುವ ಕೆಳತುಟಿಯ ಕಾಂತಿಗಳಿಂದ
ಅಂತಶ್ಶಬಲಿತಾಂ	ಒಳಭಾಗದಲ್ಲಿ – ಚಿತ್ರವರ್ಣವುಳ್ಳದ್ದಾಗಿರುವ (ಕೆಂಪು ಬಣ್ಣ)
ಪ್ರತಾಪ ವ್ಯಾಮಿಶ್ರಾಂ	ಪ್ರತಾಪದಿಂದ – ಯುಕ್ತವಾದ
ಪುರದಮಯಿತುಃ	ತ್ರಿಪುರ ಹರನಾದ ಈಶ್ವರನ
ಕೀರ್ತಿಮ್	(ಕೀರ್ತಿಂ+ಇವ) ಕೀರ್ತಿ ಎಂಬುದನ್ನು
ವಹತಿ – ಇವ	ವಹಿಸಿಕೊಂಡು ಇದೆಯೋ ಎನ್ನುವ ಹಾಗಿದೆ.

ತಾತ್ಪರ್ಯ

ಎಲೈ ತಾಯೇ, ನಿನ್ನ ಸ್ತನಗಳ ಪ್ರದೇಶದ ಮೇಲೆ ಗಜಾಸುರನ ಕುಂಭಸ್ಥಳದ ಮುತ್ತುಗಳಿಂದ ರಚಿತವಾದ, ಅತ್ಯಂತ ಶುಭ್ರವಾದ ಮುತ್ತಿನ ಸರವು ಆವರಿಸಿಕೊಂಡು ಪ್ರಕಾಶಿಸುತ್ತಿರುವುದು. ಅಲ್ಲದೆ ನಿನ್ನ ಕೆಂದುಟಿಯ ಕಾಂತಿಯಿಂದ ವ್ಯಾಪ್ತವಾದ ಅದೇ ಮುತ್ತಿನ ಸರವು ಈಶ್ವರನ ಪ್ರತಾಪದಿಂದ ಕೂಡಿದ ಕೀರ್ತಿಯೋ ಎನ್ನುವ ಹಾಗೆ ಸ್ತನದ ಮೇಲೆ ಪ್ರಕಾಶಿಸುತ್ತಾ ಇರುವುದು. ಕವಿಗಳು ಕೀರ್ತಿಯನ್ನು ಶುಭ್ರವಾಗಿಯೂ, ಪ್ರತಾಪವನ್ನು ಕೆಂಪಾಗಿಯೂ ವರ್ಣಿಸುವುದು ವಾಡಿಕೆಯಲ್ಲಿದೆ.

(K).

ಪದ್ಯಾನುವಾದ

ಹೇ ಅಂಬ! ಗಜದನುಜ ಕುಂಭದೆಡೆಯಲಿ ದೊರೆತ
ಮುಕ್ತಾಮಣಿಗಳಿಂದ ಕೋದ ನಿರ್ಮಲಹಾರ–
ಲತಿಕೆಯನು, ಬಿಂಬಾಧರದ ಕಾಂತಿಯಿಂದೊಳಗೆ ಕೆಂಪಾಗಿ ಶೋಭಿಪುದನು,
ತ್ರಿಪುರಹರ ಶಿವನಪ್ರತಾಪಮಿಶ್ರಿತವಾದ
ಕೀರ್ತಿಯನು ತಾನು ತಳೆದಿರುವುದೋ ಎನುವಂತೆ
ನಿನ್ನ ಕುಚಯುಗದ ಮೇಲ್ಗಡೆಯ ಚೆಂದದ ಎಡೆಯ ಹರಹು
ಧರಿಸಿರುವುದದನು ॥ ೭೪ ॥

ಟಿಪ್ಪಣಿಗಳು

೧. **ಸ್ತಂಬೇರಮದನುಜಕುಂಭಪ್ರಕೃತಿಭಿಃ** (ಗಜಾಸುರನ ಕುಂಭಸ್ಥಳಗಳಿಂದ ಉದ್ಭವಿಸಿದ) [೧]"ಆನೆಗಳ ಕುಂಭಪ್ರದೇಶಗಳಲ್ಲಿ [೨]ಬಿದಿರುಗಳಲ್ಲಿ, [೩]ಸರ್ಪಗಳ ಹೆಡೆಯಲ್ಲಿ [೪]ಮೋಡಗಳಲ್ಲಿ [೫]ಕಪ್ಪೆಚಿಪ್ಪಿನಲ್ಲಿ (ಮುತ್ತಿನ ಚಿಪ್ಪಿನಲ್ಲಿ) [೬]ಕಬ್ಬಿನ ಜಲ್ಲೆಯಲ್ಲಿ – ಹೀಗೆ ೬ ವಿಧವಾಗಿ ಮುತ್ತಿನ ಮಣಿಗಳು ಉತ್ಪತ್ತಿಯಾಗುತ್ತವೆ. ಆರು ವಿಧಗಳ ಮುತ್ತಿನ ಮಣಿಗಳ ವಿವರ:

೧. ಆನೆಗಳ ಕುಂಭ ಪ್ರದೇಶದಲ್ಲಿ ನಾನಾ ವರ್ಣದ ಮುತ್ತುಗಳು ಉಂಟಾಗುತ್ತವೆ.
೨. ಬಿದಿರಿನಲ್ಲಿ ಕೆಂಪು ಬಿಳುಪು ಬಣ್ಣದ ಮುತ್ತುಗಳು ಉಂಟಾಗುತ್ತವೆ.
೩. ವಾಸುಕಿ ಸರ್ಪದ ಹೆಡೆಗಳಲ್ಲಿ ಮಾತ್ರ ನೀಲವರ್ಣದ ಮುತ್ತುಗಳು ಇರುತ್ತವೆ.
೪. ಮೋಡದಲ್ಲಿ ಜ್ಯೋತಿಯ ವರ್ಣದ ಮುತ್ತುಗಳು ಇರುತ್ತವೆ.
೫. ಮುತ್ತಿನ ಚಿಪ್ಪಿನಲ್ಲಿ ಶುಭ್ರವರ್ಣದ ಮುತ್ತುಗಳು ಇರುತ್ತವೆ.
೬. ಕಬ್ಬಿನ ಜಲ್ಲೆಯಲ್ಲಿ ಹಳದಿ ಬಣ್ಣದ ಮುಕ್ತಾಮಣಿಗಳು ಇರುತ್ತವೆ.

(ಶೇ–ಪುಟ ೨೨೬)

೨. ಈ ಶ್ಲೋಕದಲ್ಲಿ ಉತ್ಪ್ರೇಕ್ಷಾಲಂಕಾರವಿದೆ. ಏಕೆಂದರೆ ಮುತ್ತಿನ ಹಾರವನ್ನು ಪ್ರತಾಪಯುಕ್ತವಾದ ಕೀರ್ತಿಯೋ ಎಂಬಂತೆ ಉತ್ಪ್ರೇಕ್ಷೆ ಮಾಡಲಾಗಿದೆ.

ಬಿಂಬಾಧರ ರುಚಿಭಿಃ ಎಂಬಲ್ಲಿಯೂ ಉತ್ಪ್ರೇಕ್ಷೆಯಿದೆ. ಏಕೆಂದರೆ ಸ್ವಾಭಾವಿಕವಾಗಿ ರಕ್ತವರ್ಣವುಳ್ಳವುಗಳಲ್ಲಿ ಬಿಂಬಾಧರದ ಕಾಂತಿಗಳಿಂದ (ಪ್ರತಿಫಲಿತವಾಗಿ) ಮಿಶ್ರವಾಗಿರುವುದರಿಂದಲೇ ಎಂಬಂತೆ ಉತ್ಪ್ರೇಕ್ಷೆಯನ್ನು ಮಾಡಲಾಗಿದೆ.

(ಶೇ–ಪುಟ ೨೨೮)

೩. **ರತ್ನಗ್ರೈವೇಯ ಚಿಂತಾಕಲೋಲಮುಕ್ತಾ ಫಲಾನ್ವಿತಾ** (ರತ್ನಗಳಿಂದ ಮಾಡಿದ ಹಾರದ ನಡುವೆ ತೂಗಾಡುತ್ತಿರುವ ಮುತ್ತಿನ ಪದಕವಿರುವ ಕಂಠೀಹಾರವನ್ನು ಧರಿಸಿದವಳು). ಲಲಿತಾ ಸಹಸ್ರನಾಮ (ಶ್ಲೋಕ ೧೩ ನಾಮ ೩೨) ಇಲ್ಲಿ ಗ್ರೀವವನ್ನೇ ಎಂದರೆ ಕಂಠವನ್ನೇ, ಧ್ಯಾನಿಸುವವರಿಗೆ ಗ್ರೈವೇಯ ಚಿಂತಕರೆಂದು ಹೆಸರು. ಇವರು ಹೃದಯಾಕಾಶದಲ್ಲಿ ದೇವಿಯನ್ನು ಧ್ಯಾನಿಸಲು ಸಮರ್ಥರಲ್ಲದುದರಿಂದ ಬಾಹ್ಯೋಪಾಸಕರಾಗಿರುವರು. ಇವರು


ಮಧ್ಯಮಾಧಿಕಾರಿಗಳು ಲೋಲಾ (ಜೋತಾಡುತ್ತಿರುವ) ಎಂದರೆ ತೃಷ್ಣೆಯುಳ್ಳವರು ಎಂದರ್ಥ. ಇವರು ಅಧಮಾಧಿಕಾರಿಗಳು ಲೋಲಾಃ ಎಂದರೆ ಚಂಚಲವುಳ್ಳದ್ದು, ಆಸೆಯುಳ್ಳದ್ದು ಎಂದು ಅಮರಕೋಶ ಹೇಳುತ್ತದೆ. ಮುಕ್ತಾಃ ಎಂದರೆ ಉತ್ತಮಾಧಿಕಾರಿಗಳು ಈ ಮೂರು ವರ್ಗದ ಉಪಾಸಕರಿಗೂ ಇವಳು ಫಲಪ್ರದಳು.

(ಲ–ಆ: ಪುಟ ೫೪)

೪. ದೇವಿಯ ಕೊರಳಲ್ಲಿ ಮೂರೆಳೆಯ ಹಾರವಿದೆ. ಒಂದೆಳೆ ನವರತ್ನಗಳಿಂದ ಕೂಡಿದೆ. ಎರಡನೇ ಎಳೆಯಲ್ಲಿ ಮುತ್ತುಗಳಿವೆ, ಮೂರನೇ ಎಳೆ ಚಿನ್ನದಿಂದ ಮಾಡಿದ್ದು. ಚಿಂತಾಕವು (ಪದಕವು) ಭಕ್ತರ ಪಾಲಿಗೆ ಚಿಂತಾಮಣಿಯಾಗಿದೆ. ಈ ಮೂರೆಳೆಗಳನ್ನು ಸೇರಿಸಿದೆ.

(ಲ–ರ ಪುಟ ೭೭)

ಯಂತ್ರಾರಾಧನೆ (ಶ್ಲೋಕ ೭೪)



ಯಂತ್ರರಚನೆ : ಚಿನ್ನದ ರೇಖಿನಲ್ಲಿ ಅಧೋಮುಖವಾದ ಸಮಭುಜ ತ್ರಿಕೋಣವನ್ನು ಬರೆಯಬೇಕು. ನಡುವೆ ಐಂ ಕ್ಲೀಂ ಸೌಃ ಎಂಬ ೩ ಬೀಜಾಕ್ಷರಗಳನ್ನು ಒಂದರ ಕೆಳಗೆ ಒಂದನ್ನು ಬರೆಯಬೇಕು.

ಪೂಜೆ : ಉತ್ತರ ದಿಕ್ಕಿಗೆ ಅಭಿಮುಖವಾಗಿ ಕುಳಿತು, ಯಂತ್ರದ ಮೇಲ್ಭಾಗದಲ್ಲಿ ಬಿಲ್ವಪತ್ರೆಗಳಿಂದ ಶಿವಾಷ್ಟೋತ್ತರ ಅರ್ಚನೆಯನ್ನು, ಮಧ್ಯದಲ್ಲಿ ಅಂದರೆ ಕ್ಲೀಂ ಬೀಜಾಕ್ಷರದ ಸ್ಥಾನದಲ್ಲಿ ಲಲಿತಾ ಅಷ್ಟೋತ್ತರ ಕುಂಕುಮಾರ್ಚನೆಯನ್ನು ಮಾಡಬೇಕು.

ನೈವೇದ್ಯ : ಹಾಲುಕೀರು ಮತ್ತು ಜೇನುತುಪ್ಪ

ಜಪ : ೪೫ ದಿನಗಳ ಕಾಲ ದಿನಕ್ಕೆ ೧೦೮ ಆವರ್ತಿ ಜಪಿಸಿ ಈ ಯಂತ್ರವನ್ನು ಧರಿಸಬೇಕು.

ಫಲ : ಕೀರ್ತಿಲಾಭ.

ಶ್ಲೋಕ ೭೫

ದೇವಿಯ ಸ್ತನ್ಯದ ಮಹಿಮೆ

ತವ ಸ್ತನ್ಯಂ ಮನ್ಯೇ [1]ಧರಣಿಧರಕನ್ಯೇ ಹೃದಯತಃ
[2]ಪಯಃ ಪಾರಾವಾರಃ ಪರಿವಹತಿ [3]ಸಾರಸ್ವತಮಿವ ।
ದಯಾವತ್ಯಾ ದತ್ತಂ ದ್ರವಿಡಶಿಶುರಾಸ್ವಾದ್ಯ ತವ ಯತ್
ಕವೀನಾಂ ಪ್ರೌಢಾನಾಮಜನಿ ಕಮನೀಯಃ ಕವಯಿತಾ ॥ ೭೫ ॥

ಪಾಠಾಂತರ

೧. (ಧರಣೀಧರ ಕನ್ಯೇ) = ತುಹಿನಗಿರಿ ಕನ್ಯೇ (ಸು)
೨. ಪಯಃ ಪಾರಾವಾರಃ = ಸುಧಾಧಾರಾ ಸಾರಃ (ಶೇ)
೩. (ಸಾರಸ್ವತ ಮಿವ) = ಸಾರಸ್ವತ ಮಿತ್ರ (ಸು)

ಪದವಿಭಾಗ

ತವ, ಸ್ತನ್ಯಂ, ಮನ್ಯೇ, ಧರಣಿಧರಕನ್ಯೇ, ಹೃದಯತಃ, ಪಯಃಪಾರಾವಾರಃ, ಪರಿವಹತಿ, (ಸಾರಸ್ವತಮಿವ) = ಸಾರಸ್ವತಮ್+ಇವ, ದಯಾವತ್ಯಾ, ದತ್ತಂ, (ದ್ರವಿಡಶಿಶುರಾಸ್ವಾದ್ಯ) = ದ್ರವಿಡಶಿಶುಃ + ಆಸ್ವಾದ್ಯ, ತವ, ಯತ್, ಕವೀನಾಂ, (ಪ್ರೌಢಾನಾಮಜನಿ) = ಪ್ರೌಢಾನಾಂ + ಅಜನಿ, ಕಮನೀಯಃ ಕವಯಿತಾ.

ಅನ್ವಯಾರ್ಥ

ಧರಣಿಧರಕನ್ಯೇ	ಪರ್ವತರಾಜನ ಮಗಳೇ (ದೇವಿಯೇ)
ತವ ಸ್ತನ್ಯಂ	ನಿನ್ನ ಸ್ತನದ ಹಾಲು
(ತವ) ಹೃದಯತಃ	(ನಿನ್ನ) ಎದೆಯಿಂದ
(ಉದ್ಧಿತಃ)	(ಹೊರಟಂಥ)
ಪಯಃ ಪಾರಾವಾರಃ	ಹಾಲಿನ–ಸಮುದ್ರವಾಗಿ
ಸಾರಸ್ವತಮಿವ	ಸರಸ್ವತೀ (ನದಿ)ಗೆ ಸಂಬಂಧವುಳ್ಳದ್ದಾಗಿಯೋ ಎನ್ನುವ ಹಾಗೆ
ಪರಿವಹತಿ	ಹರಿಯುತ್ತದೆ
ಇತಿ ಮನ್ಯೇ	ಎಂದು ತಿಳಿಯುತ್ತೇನೆ

(ಯದ್ಯಾಸ್ಮಾತ್)	(ಯತ್ + ಅಸ್ಮಾತ್) ಯಾವ (ಕಾರಣದ ದೆಸೆಯಿಂದ)
ದಯಾವತ್ಯಾ	ದಯೆಯುಳ್ಳಂಥಾ
ತ್ವಯಾ ದತ್ತಂ	ನಿನ್ನಿಂದ ಕೊಡಲ್ಪಟ್ಟ (ಸ್ತನ್ಯವನ್ನು)
ಯತ್ ತವ	(ಯತ್ + ತವ) ಯಾವ ನಿನ್ನ
ಸ್ತನ್ಯಂ	ಎದೆ ಹಾಲನ್ನು
ದ್ರವಿಡ ಶಿಶುಃ	ದ್ರಾವಿಡ ಜಾತಿಯಲ್ಲಿ ಜನಿಸಿದ
ಆಸ್ವಾದ್ಯ	ಬಾಲಕನು (ಶಂಕರಾಚಾರ್ಯರು) ಕುಡಿದು
ಪ್ರೌಢಾನಾಂ ಕವೀನಾಂ	ಸಮರ್ಥರಾದ ಕವಿಗಳೊಳಗೆ
ಕಮನೀಯಃ	ಬಹಳ ಮನೋಹರನಾದ (ಉತ್ಕೃಷ್ಟನಾದ)
ಕವಯಿತಾ	ಕವಿಯಾಗಿ
ಅಜನಿ	ಆಗಿರುವನು

ತಾತ್ಪರ್ಯ

ಎಲೈ ದೇವಿಯೇ ನಿನ್ನ ಸ್ತನ್ಯವು (ಎದೆ ಹಾಲು) ಎದೆಯಿಂದ ಹೊರಟ ಕ್ಷೀರಸಮುದ್ರವೋ ಎನ್ನುವ ಹಾಗೆ ಹರಿಯುತ್ತಿರುವುದು ಮತ್ತು ಈ ಸ್ತನ್ಯವು ಸರಸ್ವತಿಯ ಸ್ವರೂಪವೇ ಆಗಿರುವುದೆಂದು ಹೇಳಬೇಕಾಗಿದೆ. ಯಾವ ಕಾರಣದಿಂದ ದ್ರಾವಿಡ ಜಾತಿಯ ೩–೪ ವರ್ಷದ ಮಗುವು (ಶಂಕರಾಚಾರ್ಯರು) ನೀನು ದಯೆಯಿಟ್ಟು ಕೊಟ್ಟ ಸ್ತನ್ಯವನ್ನು ಪಾನಮಾಡಿ ಪ್ರೌಢಕವಿಗಳೊಂದಿಗೆ ಗಣನೆಗೆ ಬಂದುದರಿಂದ ನಿನ್ನ ಸ್ತನ್ಯವನ್ನು ಸರಸ್ವತಿಯ ಸ್ವರೂಪವೆಂದೇ ಹೇಳಬಹುದಾಗಿರುವುದು.

(K).

ಪದ್ಯಾನುವಾದ

ಹೇ ಧರಣಿಧರಕನ್ಯೆ! ನಿನ್ನ ಹೃದಯದೊಳುಕ್ಕಿ
ಹರಿವ ಹಾಲ್ಗಡಲಾದ ನಿನ್ನಯೆದೆಹಾಲನ್ನು
ಸಾರಸ್ವತಸ್ವರೂಪಾವತಾರವದೆಂದೆ ನಾನು ತಿಳಿದಿರುವೆ ತಾಯೆ;
ನೀ ದಯಾಮಯಿಯಾಗಿ ನೀಡಿದಾಯೆದೆ ಹಾಲ–
ನೀದ್ರವಿಡಶಿಶು ಸವಿದು ಕವಿವರರ ಮಧ್ಯದಲಿ
ತಾನೊರ್ವ ಕಮನೀಯಕವಿಯಾಗಿ ಪರಿಣಮಿಸಿ ಕೊಂಡಾಡುವನು ನಿನ್ನನು
॥ ೭೫ ॥

ಟಿಪ್ಪಣಿಗಳು

೧. **ಸಾರಸ್ವತಮಿವ**

(ಸರಸ್ವತೀಮಯವಾದುದನ್ನಾಗಿಯೋ ಎಂಬಂತೆ) ಸ್ತನ್ಯವು ಬಿಳಿಯ ಬಣ್ಣದ್ದಾಗಿರುವುದರಿಂದ ಸರಸ್ವತೀಮಯವಾದುದನ್ನಾಗಿಯೋ ಎಂಬಂತೆ ಉತ್ಪ್ರೇಕ್ಷೆ ಮಾಡಲಾಗಿದೆ. ಮಾಧುರ್ಯದ ಕಾರಣದಿಂದ ಸುಧಾರೂಪವಾಗಿಯೂ ಉತ್ಪ್ರೇಕ್ಷೆ ಮಾಡಲಾಗಿದೆ. (ಸುಧಾಧಾರಾ ಸಾರಃ ಎಂಬ ಪಾಠ ಗಮನಿಸಿದಲ್ಲಿ) ಈ ಶ್ಲೋಕದಲ್ಲಿ **ಉತ್ಪ್ರೇಕ್ಷಾಲಂಕಾರವಿದೆ.**

(ಶೇ–ಪುಟ ೨೨೮)

೨. ದ್ರವಿಡ ಶಿಶುವೆಂದರೆ ಶ್ರೀ ಶಂಕರಾಚಾರ್ಯರು ಎಂದೇ ಕೆಲವರು ಹೇಳುತ್ತಾರೆ. ಮತ್ತೆ ಕೆಲವರು ತಮಿಳುನಾಡಿನ ತಿರುಜ್ಞಾನ ಸಂಬಂಧರ್ ಎಂದು ಹೇಳುತ್ತಾರೆ. ಅರುಣಾಮೋದಿನಿ ವ್ಯಾಖ್ಯೆಯಲ್ಲಿ ದ್ರವಿಡ ಶಿಶು ಎಂದರೆ ಶಂಕರಾಚಾರ್ಯರು ಎಂದು ಆ ಬಗ್ಗೆ ಕಥೆ ಹೇಳಲಾಗಿದೆ.

(ಪ–ಪುಟ ೧೨೯–೧೩೦)

೩. ಶಂಕರ ಭಗವತ್ ಪೂಜ್ಯಪಾದರು ಈ ಪದ್ಯದಲ್ಲಿ ತಮ್ಮನ್ನು ದ್ರವಿಡ ಶಿಶು ಎಂದು ಪರಿಚಯಿಸಿಕೊಂಡು ಸುಧಾಸಾರಸ್ವತ ಸಾರಸರ್ವಸ್ವವಾದ ದೇವಿಯ ಎದೆಹಾಲನ್ನು ಪಾನಮಾಡಿ ಭಾವುಕರಾಗಿ ಕವಿಯ ಪ್ರತಿಭೆ, ಅತೀಂದ್ರಿಯ ಅನುಭವಿಯ ವಾಗ್ವಿಲಾಸವನ್ನು ಪಡೆದೆನೆಂದು ಹೇಳಿಕೊಂಡಿದ್ದಾರೆ. ಆದಿಶಂಕರರ ಕಾಲ ಕರ್ತೃತ್ವಗಳ ಬಗೆಗೆ ಈ ಪದ್ಯವು ಆಧಾರವೆಂದು ಸಂಶೋಧಕರ ಅಭಿಮತ.

(ಪು–ಪುಟ ೧೧೩)

೪. ಮಂತ್ರಶಾಸ್ತ್ರ ಗ್ರಂಥಗಳಲ್ಲಿ ಸರಸ್ವತೀ ಸಿದ್ಧಿಗೆ (ವಾಗ್ವೈಖರೀ ವಿಲಾಸ ಸಿದ್ಧಿಗೆ) ಹಲವಾರು ತಂತ್ರಗಳನ್ನು ಹೇಳಲಾಗಿದೆ. ೪ ತೊಲೆ ಜ್ಯೋತಿಷ್ಮತೀ ತೈಲವನ್ನು ಗ್ರಹಣಸಮಯದಲ್ಲಿ ನೆಟ್ಟಗೆ ನಿಂತು ಅಭಿಮಂತ್ರಿಸಿ ಕುಡಿದವರು ವಾಚಸ್ಪತಿ ಆಗುತ್ತಾರೆ ಎಂದು ಹೇಳಲಾಗಿದೆ.

ಇನ್ನೊಂದು ವಿಧಾನ ಎಂದರೆ ವಚೋಸಿದ್ಧಿಗೆ ೧೬ ಮಂದಿ ಸರಸ್ವತೀ ಶಕ್ತಿದೇವತೆಯರಿದ್ದಾರೆ. ೧) ಮುಗ್ಧ ೨) ಶ್ರೀ ೩) ಕುರುಕುಲ್ಲಾ ೪) ತ್ರಿಪುರ ೫) ಪ್ರಿಯ ೬) ರತಿ ೭) ಪ್ರೀತಿ ೮) ಬಾಲಾ ೯) ಸುಮುಖಿ ೧೦) ಶ್ಯಾಮಲಾಲಿ ೧೧) ಪಿಶಾಚಿ ೧೨) ವಿಧಾರಿ ೧೩) ಶೀತಲ ೧೪) ಭದ್ರಯೋಗಿನೀ ೧೫) ಸರ್ವೇಶ್ವರಿ ೧೬) ತ್ರೋಟಿಲ ಈ ಶಕ್ತಿಗಳನ್ನು ಪ್ರತ್ಯೇಕವಾಗಿ ಷೋಡಶೋಪಚಾರಗಳಿಂದ ಆರಾಧಿಸಬೇಕು.

(ಭ–ಪುಟ ೮೦)

೫. ದಯಾವತ್ಯಾ ದತ್ತಂ ದ್ರವಿಡ ಶಿಶುರಾಸ್ವಾದ್ಯ (ಕರುಣಾಮಯಳಾದ ನೀನು ನನಗೆ ನಿನ್ನೆದೆಯ ಹಾಲನ್ನು ಕುಡಿಸಿದೆ. ಅದರ ಪ್ರಭಾವದಿಂದ ದ್ರವಿಡ ಶಿಶುವಾದ ನಾನು ಪ್ರೌಢ ಕವಿಯಾದೆ) ಇಲ್ಲಿ ಉತ್ಪ್ರೇಕ್ಷಾಲಂಕಾರವಿದೆ.

(ತು–ಪುಟ ೩೯೩)


೬. ತಾಯಿ ಮಗುವಿಗೆ ಸ್ತನ್ಯಪಾನ ಮಾಡಿಸುವಾಗ ಆಕೆಯ ಪ್ರೀತಿಯೇ ಹಾಲಾಗಿ ಹರಿಯುವುದು. ಆಕೆ ಅಳವಡಿಸಿಕೊಂಡ ಗುಣವೇ ಹಾಲಿನ ರೂಪದಲ್ಲಿ ಮಗುವಿನಲ್ಲೂ ಹರಿಯುವುದು. ಆದ್ದರಿಂದಲೇ "ತಾಯಿಯಂತೆ ಮಕ್ಕಳು...." ಎಂದು ಗಾದೆ. ತಾಯಿಯು ಹಾಲಿನ ಮೂಲಕ ಜ್ಞಾನವನ್ನೇ ಧಾರೆಯೆರೆಯುತ್ತಿರುತ್ತಾಳೆ.

(ರ–ಪುಟ ೮೩)

೭. ಸರಸ್ವತೀ ದೇವಿಯ ಮೈಬಣ್ಣ ಬಿಳುಪು (ಯಾ ಕುಂದೇಂದು ತುಷಾರಹಾರಧವಳಾ ಯಾ ಶುಭ್ರ ವಸ್ತ್ರಾನ್ವಿತಾ...) ಕ್ಷೀರಸಮುದ್ರದ ಬಣ್ಣವೂ ಬಿಳುಪು, ಶುದ್ಧಜ್ಞಾನವೂ ಬಿಳುಪು ಇಲ್ಲಿ ಕವಿಯ ವರ್ಣನೆಯಲ್ಲಿ ಔಚಿತ್ಯವನ್ನು ಕಾಣುತ್ತೇವೆ.

(ಬು–ಪುಟ ೧೯೬)

ಯಂತ್ರಾರಾಧನೆ (ಶ್ಲೋಕ ೭೫)



ಯಂತ್ರರಚನೆ : ಚಿನ್ನದ ರೇಖಿನಲ್ಲಿ ಬರೆಯಬೇಕು. ೬ ತ್ರಿಶೂಲಗಳು ತುದಿಗಳಲ್ಲಿರುವ ಹಾಗೆ ಷಟ್ಕೋಣವನ್ನು ಚಿನ್ನದ ರೇಖಿನಲ್ಲಿ ಬರೆಯಬೇಕು. ಆ ಷಟ್ಕೋಣಗಳನ್ನು ಮೇಲ್ಭಾಗದ ಕೋಣದಲ್ಲಿ ಐಂ ಬೀಜಾಕ್ಷರ, ಕೆಳಭಾಗದ ಕೋಣದಲ್ಲಿ ಸೌಃ ಬೀಜಾಕ್ಷರ ಎಡಭಾಗದ ಎರಡು ಕೋಣಗಳಲ್ಲಿ ಐಂ ಕ್ಲೀಂ ಬೀಜಾಕ್ಷರಗಳನ್ನು ಬಲಭಾಗದ ಎರಡು ಕೋಣಗಳಲ್ಲಿ ಕ್ಲೀಂ ಸೌಃ ಎಂಬ ಬೀಜಾಕ್ಷರಗಳನ್ನು ಬರೆಯಬೇಕು. ನಡುವೆ ಸಂ ಬೀಜಾಕ್ಷರ ವಿರಬೇಕು.

ಪೂಜೆ : ಲಲಿತಾ ತ್ರಿಶತೀ ಹೇಳಿಕೊಂಡು ಕುಂಕುಮಾರ್ಚನೆ ಮಾಡಬೇಕು

ನೈವೇದ್ಯ : ಬಾಳೆಹಣ್ಣು, ಜೇನುತುಪ್ಪ

ಜಪ : ಮೂರು ದಿನಗಳ ಕಾಲ ದಿನಕ್ಕೆ ೧೦೦೦ ಸಲ ಈ ಶ್ಲೋಕವನ್ನು ಜಪಿಸಬೇಕು.

ಫಲ : **ಕವಿತಾಶಕ್ತಿ ಲಭ್ಯ (ದೊಡ್ಡ ಕವಿಯಾಗುವನು).**

ಶ್ಲೋಕ ೭೬

ದೇವಿಯ ರೋಮಾವಳಿ ವರ್ಣನೆ

ಹರಕ್ರೋಧಜ್ವಾಲಾವಲಿಭಿರವಲೀಢೇನ ವಪುಷಾ
ಗಭೀರೇ ತೇ ನಾಭೀಸರಸಿ ಕೃತಸಂಗೋ ಮನಸಿಜಃ ।
ಸಮುತ್ತಸ್ಥೌ ತಸ್ಮಾದಚಲತನಯೇ [1]ಧೂಮಲತಿಕಾ
ಜನಸ್ತಾಂ ಜಾನೀತೇ ತವ ಜನನಿ ರೋಮಾವಲಿರಿತಿ ॥ ೭೬ ॥

ಪಾಠಾಂತರ

೧. ಧೂಮಲತಿಕಾ – ಧೂಮತಿಲಕ (ಪೋ)

ಪದವಿಭಾಗ

(ಹರಕ್ರೋಧಜ್ವಾಲಾವಲಿಭಿರವಲೀಢೇನ) = ಹರಕ್ರೋಧಜ್ವಾಲಾ + ಆವಲಿಭಿಃ + ಅವಲೀಢೇನ, ವಪುಷಾ, ಗಭೀರೇ, ತೇ, ನಾಭೀಸರಸಿ, ಕೃತಸಂಗೋ, ಮನಸಿಜಃ, (ಸಮುತ್ತಸ್ಥೌ) = ಸಂ + ಉತ್ + ತಸ್ಥೌ, (ತಸ್ಮಾದಚಲತನಯೇ)= ತಸ್ಮಾತ್+ಅಚಲ ತನಯೇ, ಧೂಮಲತಿಕಾ, (ಜನಸ್ತಾಂ) = ಜನಃ + ತಾಂ, ಜಾನೀತೇ, ತವ, ಜನನಿ, (ರೋಮಾವಲಿರಿತಿ)= ರೋಮಾವಲಿಃ + ಇತಿ

ಅನ್ವಯಾರ್ಥ

(ಹೇ) ಅಚಲತನಯೇ	(ಎಲೈ) ಪರ್ವತರಾಜನ ಮಗಳೇ
ಮನಸಿಜಃ	ಮನ್ಮಥನು
ಹರಕ್ರೋಧ	ಈಶ್ವರನ – ಕೋಪಾಗ್ನಿಯ
ಜ್ವಾಲಾವಲಿಭಿಃ	ಉರಿಗಳ ಸಮೂಹಗಳಿಂದ
ಅವಲೀಢೇನ	ವ್ಯಾಪ್ತವಾದ
ವಪುಷಾ	ಶರೀರದಿಂದ
ಗಭೀರೇ	ಆಳವಾದ
ತೇ	ನಿನ್ನ
ನಾಭೀ ಸರಸಿ	ಹೊಕ್ಕಳು ಎಂಬ ಸರೋವರದಲ್ಲಿ

ಕೃತಸಂಗಃ (ಅಭೂತ್)	ಮಾಡಲ್ಪಟ್ಟ ಸಂಬಂಧವುಳ್ಳವನಾಗಿ (ಮುಳುಗಿದವನಾಗಿ) ಆದನು
ತಸ್ಮಾತ್ ಧೂಮಲತಿಕಾ	ಆ ಸರೋವರದ ದೆಸೆಯಿಂದ – ಲತಾಕಾರವಾದ ಹೊಗೆಯು
ಸಮುತ್ತಸ್ಥೌ	ಮೇಲೆದ್ದಿತು
(ಹೇ) ಜನನಿ	(ಎಲೈ) ತಾಯಿಯೇ
ತಾಂ	ಆ ಧೂಮಲತೆಯನ್ನು
ಜನಃ	ಜನ
ತವ	ನಿನ್ನ
ರೋಮಾವಲಿಃ ಇತಿ	ರೋಮಪಂಕ್ತಿ ಎಂಬುದಾಗಿ
ಜಾನೀತೇ	ತಿಳಿದಿರುತ್ತದೆ

ತಾತ್ಪರ್ಯ

ಕವಿಯು ದೇವಿಯ ರೋಮಾವಳಿಯ ವರ್ಣನೆಯನ್ನು ಮಾಡುತ್ತಾನೆ. ಎಲೈ ಪಾರ್ವತಿಯೇ, ಈಶ್ವರನ ಕೋಪಾಗ್ನಿಯ ಉರಿಗಳಿಂದ ವ್ಯಾಪ್ತವಾದ ಶರೀರವುಳ್ಳ ಮನ್ಮಥನು ಆ ಉರಿಯನ್ನು ಹೋಗಲಾಡಿಸಿಕೊಳ್ಳಬೇಕೆಂದು ಬೇಗನೆ ಬಂದು ಬಹಳ ಆಳವಾದ ನಾಭಿ ಎಂಬ ಸರೋವರದಲ್ಲಿ ಮುಳುಗಿದನು. ಆಗ ಅವನ ದೇಹದಿಂದ ಹೊರಟ ಲತೆಯಂತಿರುವ ಹೊಗೆಯನ್ನು ತಿಳಿಯದೆ ರೋಮಾವಳಿಯೆಂದು ಹೇಳಿಕೊಳ್ಳುತ್ತಾನೆ. ಲೋಕದಲ್ಲಿ ಬೆಂಕಿಕೊಳ್ಳಿಯನ್ನು ನೀರಿನಲ್ಲಿ ಅದ್ದಿದರೆ ಹೊಗೆಯುಂಟಾಗುವುದನ್ನು ನೋಡಿ ಕವಿ ಈ ವರ್ಣನೆಯನ್ನು ಮಾಡಿರುವನು.

ಇಲ್ಲಿ ಮನ್ಮಥನ ಕಾರ್ಯವನ್ನು ಹೇಳಿದುದರಿಂದ ನಾಭಿಯು ಮೋಹಜನಕವಾಗಿತ್ತೆಂದು ತಾತ್ಪರ್ಯ.

(K).

ಪದ್ಯಾನುವಾದ

ಹೇ ಅಚಲತನಯೇ, ಹರನ ಕೋಪಜ್ವಾಲೆ
ಬಾಚಿ ತಬ್ಬುತಲಿರಲು ಬೇಯುವೊಡಲಿನ ಮದನ
ನಿನ್ನ ಗಂಭೀರವಹ ನಾಭೀಸರಸಿಯ ಸಂಗವ ಬೆಳಸಿಕೊಂಡನಲ್ತೆ;

ಅದುವೆ ಕಾರಣವಾಗಳಲ್ಲಿಂದ ತೆಳ್ಳನೆಯ
ಹೊಗೆಬಳ್ಳಿಕೊನರಿ ಕುಡಿವರಿದು ಹಬ್ಬಿತು ನೇರ;
ಜನವದನು, ಎಲೆ ತಾಯೆ, ನಿನ್ನ ರೋಮಾವಲೀ
ಲೇಖೆಯೆಂದರಿಯುತಿಹುದು ॥ ೭೬ ॥

ಟಿಪ್ಪಣಿಗಳು

೧. **ಧೂಮಲತಿಕಾ ಎಂಬಲ್ಲಿ ಉತ್ಪ್ರೇಕ್ಷಾಲಂಕಾರವಿದೆ.** ಧೂಮಮಾಲೆಯನ್ನು ರೋಮಾವಲಿಯ ರೂಪವಾಗಿ ಉತ್ಪ್ರೇಕ್ಷೆ ಮಾಡಲಾಗಿದೆ.

ಇಲ್ಲಿ ಭ್ರಾಂತಿಮದಲಂಕಾರವು ತೋರುತ್ತದೆ. ಏಕೆಂದರೆ ಆ ಧೂಮ ಪಂಕ್ತಿಯ ದರ್ಶನವು ಧೂಮಮಾಲೆಯೆಂಬ ಭ್ರಾಂತಿಗೆ ಕಾರಣವಾಗಿದೆ. ಲೋಕದ ಜನ ಆ ರೋಮಾವಳಿಯನ್ನು ಅಧ್ಯವಸಾನ ಮಾಡುತ್ತದೆ ಎಂಬ ಕಾರಣದಿಂದ **ಅತಿಶಯೋಕ್ತಿ ಅಲಂಕಾರವಾಗುತ್ತದೆ.**

ಧೂಮಮಾಲೆಯನ್ನು ಲೋಕವು ರೋಮಾವಳಿ ಎಂದು ನಿಶ್ಚಯಿಸುತ್ತದೆ ಎಂಬ ಕಾರಣದಿಂದ **ಸಂದೇಹಾಲಂಕಾರವಾಗುತ್ತಿದೆ.**

ಈ ರೀತಿಯಾಗಿ ನಾಲ್ಕು ಅಲಂಕಾರಗಳು ಜಾನೀತೇ ಎಂಬ ಒಂದು ಪದದಿಂದ ಉಂಟಾಗಿರುವುದರಿಂದ ಏಕವಾಚಕನುಪ್ರವೇಶಸಂಕರವಾಗಿ ಪದವೇ ಬಳಕೆ ಆಗಿದೆ.

(ಶೇ–ಪುಟ ೨೩೦)

೨. **ಗಭೀರೇ ತೇ ನಾಭೀಸರಸಿ ಕೃತಸಂಗೋ ಮನಸಿಜಃ**

ಹೊಕ್ಕಳು (ನಾಭಿ) ಎಂಬ ಸರೋವರದಲ್ಲಿ (ಈಶ್ವರ ಮನ್ಮಥನನ್ನು ಸುಟ್ಟಾಗ ಆ ಉರಿ ಶರೀರವನ್ನು ಆವರಿಸಿದಾಗ) ಮನ್ಮಥ ದಿಕ್ಕು ತೋಚದೆ (ಜಗನ್ಮಾತೆಯ) ನಾಭೀ ಸರೋವರದಲ್ಲಿ ಧುಮುಕಿದಾಗ ಬೆಂಕಿ ಆರಿತು. ಅದರಿಂದ ಮೇಲಕ್ಕೆದ್ದ ಹೊಗೆ ಅಮ್ಮನವರ ನಾಭೀ ಸುತ್ತಲೂ ಇರುವ ರೋಮಾವಳಿ ಎಂಬ ಭ್ರಾಂತಿಯನ್ನು ಉಂಟುಮಾಡಿತು.

(ಪ–ಪುಟ ೧೩೧)

೩. ಭಜಗೋವಿಂದಂ ಸ್ತೋತ್ರದಲ್ಲಿ ಆದಿಶಂಕರರು ನಾರೀ ಸ್ತನಭರ ನಾಭೀ ದೇಶಂ – ದೃಷ್ಟ್ವಾ ಮಾ ಗಾ ಮೋಹಾವೇಶಂ । ಏತನ್ಮಾಂಸ ವಸಾದಿ

ವಿಕಾರಂ – ಮನಸಿ ವಿಚಿಂತಯ ವಾರಂ ವಾರಂ ॥ ಎಂದಿದ್ದಾರೆ.

೪. ನಾಭಿ ಆಳವಾಗಿದ್ದರೆ ಸ್ತ್ರೀಯರಿಗೆ ಸೌಭಾಗ್ಯ ಎಂದೂ ಸ್ತ್ರೀಯರು ಹಣ ಉಳಿತಾಯ ಮಾಡುವವರು ಎಂದೂ ಹಿರಿಯರು ಹೇಳುತ್ತಾರೆ.

(ಪ–ಪುಟ ೧೩೨)

೫. ನಾಭಿಯನ್ನು ಸರೋವರಕ್ಕೆ ಹೋಲಿಸುತ್ತಾರೆ. ಏಕೆಂದರೆ ಜಲಚಕ್ರವಾದ ಮಣಿಪೂರಕ ಚಕ್ರಕ್ಕೆ ಗುರುತು. ಮನ್ಮಥ ಉರಿಯುತ್ತಾ ನಾಭಿ ಎಂಬ ಸರೋವರದಲ್ಲಿ ಧುಮುಕುತ್ತಾನೆ ಎಂದರೆ ಅದರರ್ಥ– ಕೊನೆಯೇ ಇಲ್ಲದೆ ಕೋರಿಕೆಗಳು ಎಂಬ ಬೆಂಕಿ ನಮ್ಮನ್ನು ದಹಿಸುತ್ತಿರುವಾಗ ಸಾಧಕ ದಿಕ್ಕು ತೋಚದೆ ದೇವಿಯನ್ನು ಮಂತ್ರಜಪಗಳಿಂದ, ಸ್ತೋತ್ರ ಧ್ಯಾನಗಳಿಂದ ಮಣಿಪೂರಕ ಚಕ್ರದಲ್ಲಿ ಶ್ವಾಸ ನಿಲ್ಲಿಸಿ ಆ ಕೋರಿಕೆಗಳೆಂಬ ಅಗ್ನಿಯನ್ನು ಆರಿಸಬೇಕು.

(ಪ–ಪುಟ ೧೩೨)

೬. ಸ್ತ್ರೀಯರಿಗೆ ನಾಭಿಯಿಂದ ಕೆಳಗಿರುವ ಮೂರು ಚರ್ಮದ ಮಡಿಕೆಗಳನ್ನು ವಲಿತ್ರಯ ಎನ್ನುತ್ತಾರೆ. (ದಟ್ಟ ಕೂದಲ ಗುಂಪನ್ನು) ನಾಭಿ ಎಂಬ ಮಡಿಯಿಂದ ಮೇಲಕ್ಕೆ ಹಬ್ಬಿರುವ ರೋಮಾವಲಿಯನ್ನು ಬಾಸೆ (ರೋಮರಾಜಿ) ಎನ್ನುತ್ತಾರೆ. ಈ ಶ್ಲೋಕದಲ್ಲಿ ರೋಮರಾಜಿಯನ್ನು, ವರ್ಣಿಸಲಾಗಿದ ತೆಲುಗಿನಲ್ಲಿ 'ಸೂಗಾರು' ಎಂದು ಕರೆಯುತ್ತಾರೆ.

(ಲ–ಕೂ ಪುಟ ೮೫)

೭. ಲಲಿತಾ ಸಹಸ್ರನಾಮದಲ್ಲಿ (ಶ್ಲೋಕ ೧೪ ನಾಮ ೩೪) (ಶ್ಲೋಕ ೧೪ ನಾಮ ೩೪) **ನಾಭ್ಯಾಲವಾಲ ರೋಮಾಲಿ ಲತಾಫಲ ಕುಚದ್ವಯೀ** ನಾಭಿ ಎಂಬ ಮುಡಿಯಿಂದ ಮೇಲಕ್ಕೆ ಹಬ್ಬಿರುವ ರೋಮರಾಜಿ ಎಂಬ ಬಳ್ಳಿಯಲ್ಲಿ ಬಿಟ್ಟಿರುವ ಹಣ್ಣುಗಳೋ ಎಂಬಂತಿರುವ ಕುಚದ್ವಯಗಳನ್ನು ಹೊಂದಿರುವಳು) ಇಲ್ಲಿ ನಾಭಿ, ರೋಮರಾಜಿ, ಕುಚದ್ವಯಗಳನ್ನು ವರ್ಣಿಸಲಾಗಿದೆ.


ಲಕ್ಷ ರೋಮಲತಾಧಾರ ತಾಸಾಮುನ್ನೇಯ ಮಧ್ಯಮಾ (ಶ್ಲೋಕ ೧೫ ನಾಮ ೩೫)

ರೋಮಲತೆಯು ಮೇಲಕ್ಕೆ ಹಬ್ಬಲು ಆಧಾರವಾಗಿದೆಯೋ ಎಂಬಂತಿರುವ ಸೊಂಟವುಳ್ಳವಳು ಎಂದು ಹೇಳಲಾಗಿದೆ.

(ಲ–ಕೂ ಪುಟ ೯೦)

೮. ಜಪಮಾಡುವ ಕಾಲದಲ್ಲಿ ಅನೇಕ ಬಗೆ ಆಲೋಚನೆಗಳು ಬರುತ್ತವೆ. ಆ ಸಮಯದಲ್ಲಿ ಕಾಮಪ್ರೇರಣೆಯ ಭಾವನೆಗಳು ಬಂದು ಮನಸ್ಸು ಚಂಚಲವಾಗುತ್ತದೆ. ಆಗ ಭೌತಿಕ ಆಲೋಚನೆಗಳನ್ನು ಹೋಗಲಾಡಿಸಲು ಭ್ರೂಮಧ್ಯದಲ್ಲಿ ಧ್ಯಾನವನ್ನು ನಿಲ್ಲಿಸಿದರೆ ಕಾಮತಾಪ ಕೆಳಕ್ಕಿಳಿದು ನಾಭೀ ಎಂಬ ಸರೋವರದಲ್ಲಿ ಮುಳುಗಿ ಹೋಗುತ್ತದೆ ಎಂಬುದು ಗೂಢಾರ್ಥವಾಗಿದೆ. (ಉ-ಪುಟ ೨೧೯)

ಯಂತ್ರಾರಾಧನೆ (ಶ್ಲೋಕ ೭೬)



ಯಂತ್ರರಚನೆ : ಚಿನ್ನದಲ್ಲಿ ಯಂತ್ರ ಬರೆಯಬೇಕು. ಒಂದು ವೃತ್ತದೊಳಗೆ ಅಷ್ಟದಳ ಪದ್ಮವನ್ನು ಕರ್ಣಿಕಾ ಸಮೇತ ಬರಿಯಬೇಕು. ಮಧ್ಯದಲ್ಲಿ ಕ್ಲೀಂ ಬೀಜಾಕ್ಷರ ಬರೆಯಬೇಕು.

ಪೂಜೆ : ಈಶಾನ್ಯಾಭಿಮುಖವಾಗಿ ಕುಳಿತು ಲಲಿತಾ ತ್ರಿಶತೀ ಕುಂಕುಮಾರ್ಚನೆ ಮಾಡಬೇಕು.

ನೈವೇದ್ಯ : ತೆಂಗಿನಕಾಯಿ, ಬಾಳೆಹಣ್ಣು, ಮೊಸರನ್ನ, ಜೇನುತುಪ್ಪ

ಜಪ : ಎಂಟುದಿನಗಳ ಕಾಲವೂ ೧೨೦೦೦ ಬಾರಿ ಈ ಶ್ಲೋಕವನ್ನು ಜಪಿಸಬೇಕು. ಅನಂತರ ಯಂತ್ರ ಧರಿಸಬೇಕು.

ಫಲ : **ಸಕಲಜನವಶ್ಯತೆ**

ಶ್ಲೋಕ ೭೭

ಪುನಃ ದೇವಿಯ ರೋಮಾವಳಿಯ ವರ್ಣನೆ

ಯದೇತತ್ಕಾಲಿಂದೀತನುತರತರಂಗಾಕೃತಿ ಶಿವೇ
ಕೃಶೇ ಮಧ್ಯೇ ಕಿಂಚಿಜ್ಜನನಿ [೧]ತವ ಯದ್ಭಾತಿ ಸುಧಿಯಾಮ್।
ವಿಮರ್ದಾದನ್ಯೋನ್ಯಂ ಕುಚಕಲಶಯೋರಂತರಗತಂ
ತನೂಭೂತಂ ವ್ಯೋಮ ಪ್ರವಿಶದಿವ ನಾಭಿಂ ಕುಹರಿಣೀಮ್ ॥ ೭೭ ॥

ಪಾಠಾಂತರ

೧. ತವ ಯದ್ಭಾತಿ ಸುಧಿಯಾಮ್ = ತವದ್ದೇವಿ ಗಿರೀಶೇ (ತು)

ಪದವಿಭಾಗ

(ಯದೇತತ್ಕಾಲಿಂದೀತನುತರತರಂಗಾಕೃತಿ) = ಯತ್ + ಏತತ್+ ಕಾಲಿಂದೀತನು ತರತರಂಗ + ಆಕೃತಿ, ಶಿವೇ, ಕೃಶೇ, ಮಧ್ಯೇ, (ಕಿಂಚಿಜ್ಜನನಿ) = ಕಿಂಚಿತ್ + ಜನನಿ, ತವ, (ಯದ್ಭಾತಿ) = ಯತ್ + ಭಾತಿ, ಸುಧಿಯಾಮ್, (ವಿಮರ್ದಾದನ್ಯೋನ್ಯಂ) = ವಿಮರ್ದಾತ್ + ಅನ್ಯೋನ್ಯಂ, (ಕುಚಕಲಶಯೋರಂತರಗತಂ) = ಕುಚಕಲಶಯೋಃ + ಅಂತರಗತಂ, ತನೂಭೂತಂ, ವ್ಯೋಮ, (ಪ್ರವಿಶದಿವ) = ಪ್ರವಿಶತ್ + ಇವ, ನಾಭಿಂ, ಕುಹರಿಣೀಮ್.

ಅನ್ವಯಾರ್ಥ

(ಹೇ) ಶಿವೇ	(ಎಲೈ) ಮಂಗಳಕರಳಾದ ದೇವಿಯೇ
ಜನನಿ	ಹೇ ಲೋಕಮಾತೆ
ತವ ಕೃಶೇ ಮಧ್ಯೇ	ನಿನ್ನ ನಡುವಿನಲ್ಲಿ ಕೃಶವಾದ (ಅತ್ಯಂತ ಸಣ್ಣದಾದ)
ಯದೇತತ್ ಕಾಳಿಂದೀ	ಯಾವ ಈ ಯಮುನಾ ನದಿಯ ಬಹಳ
ತನುತರ ತರಂಗಾಕೃತಿಃ	ಸೂಕ್ಷ್ಮವಾದ – ಅಲೆಯ – ಆಕಾರದಂತೆ ಆಕಾರವುಳ್ಳ
ಕಿಂಚಿತ್	ರೋಮಾವಳೀ ರೂಪವಾದ ವಸ್ತು
(ತತ್)	ಅದು
ಸುಧಿಯಾಂ	ವಿದ್ವಾಂಸರುಗಳಿಗೆ

ಭಾತಿ(ಯತ್) (ತತ್)	ಕಾಣುತ್ತದೆ (ಎನ್ನುವುದು ಯಾವುದುಂಟೋ)
ಕುಚಕಲಶಯೋಃ	ಕಲಶದಂತಿರುವ ಸ್ತನಗಳ
ಅಂತರಗತಂ	ಮಧ್ಯಗತವಾದ (ಮಧ್ಯದಲ್ಲಿರುವ)
ತನೂಭೂತಂ	ಬಹಳ ಸೂಕ್ಷ್ಮವಾದ (ಅತ್ಯಂತ ಸಣ್ಣದಾದ)
ವ್ಯೋಮ	ಆಕಾಶವು
ತಯೋಃ ಅನ್ಯೋನ್ಯಂ	ಅವು ಒಂದಕ್ಕೊಂದು
ವಿಮರ್ದಾತ್ ಏವ	ಒತ್ತುವುದರಿಂದಲೇ
ಕುಹರಿಣೀಂ	ಆಳವಾದ
ನಾಭಿಂ	ನಾಭಿಯನ್ನು
ಪ್ರವಿಶದಿವ	ಪ್ರವೇಶಿಸುತ್ತಿದೆಯೋ ಎನ್ನುವ ಹಾಗೆ
ಭಾತಿ	ಪ್ರಕಾಶಿಸುತ್ತದೆ

ತಾತ್ಪರ್ಯ

ದೇವಿಯ ಸೂಕ್ಷ್ಮವಾದ ರೋಮಾವಳಿಗಳನ್ನು ಈ ಪದ್ಯದಲ್ಲಿ ವರ್ಣಿಸಿದೆ. "ಎಲೈ ಮಂಗಳಕರಳಾದ ದೇವಿಯೇ, ಯಮುನಾ ನದಿಯ ಬಹಳ ಸಣ್ಣ ಅಲೆಯಂತಿರುವ ಬಡವಾದ ನಡುವಿನಲ್ಲಿ ಕಾಣುತ್ತಿರುವ ಅತ್ಯಂತ ಸೂಕ್ಷ್ಮವಾದ ರೋಮಾವಳಿಯನ್ನು ನೋಡಿದರೆ, ಸ್ತನಗಳ ಮಧ್ಯದ ಅವಕಾಶ ರೂಪವಾದ ಆಕಾಶವು ಕ್ಷಣಕ್ಷಣಕ್ಕೂ ವೃದ್ಧಿ ಹೊಂದುತ್ತಿರುವ ಸ್ತನಗಳ ಸಂಘರ್ಷಣೆಯಿಂದ ಈಚೆಗೆ ಹೊರಟು, ಆಳವಾದ ನಾಭಿಯನ್ನು (ಹೊಕ್ಕಳನ್ನು) ಪ್ರವೇಶಿಸುತ್ತಿದೆಯೋ ಎನ್ನುವ ಹಾಗೆ ರೋಮಾವಳಿ ತೋರುತ್ತಿದೆ, ಆಕಾಶವು ಕಪ್ಪಾಗಿರುವುದೆಂದೂ ರೂಪವದ್ವಸ್ತುವೆಂದೂ ಇರುವ ಲೋಕವಾಡಿಕೆಯನ್ನು ಅನುಸರಿಸಿ ಹೇಳಿರುವ ವರ್ಣನೆಯು ಇಲ್ಲಿನ ಮೇಲಿನಿಂದ ಕೆಳಕ್ಕೆ ಬಂದ ಹಾಗಿರುವ ರೋಮಾವಳಿಯ ವರ್ಣನೆಯಾಗಿದೆ.

(K).

ಪದ್ಯಾನುವಾದ

ಹೇ ಶಿವೇ ! ನಿನ್ನ ಬಡನಡುವಿನಲಿ ಕಾಲಿಂದಿ
ತೊರೆಯ ಬಲು ತೆಳ್ಳನೆಯ ತೆರನಾಕೃತಿಯ ತಾನು
ತಳೆದಿರುವವೊಲು ತೋರುಹುದಾವುದದು ಸುಬುದ್ಧಿಗಳಿಗಾರೋಮರಾಜಿ
ಕುಚಕಲಶಗಳ ನಡುವೆ ಸಿಲುಕಿಯವುಗಳ ಪರ-
ಸ್ಪರವಿಮರ್ದನದ ದೆಸೆಯಿಂದ ತೆಳುತೆಳುವಾಗಿ
ಆಗಸವು ಹೊಕ್ಕುಳಕುಳಿಯ ಹೊಕ್ಕವೊಲು ತೋರುತೊಪ್ಪುತಿಹುದಲ್ತೆ ತಾಯೇ
॥ ೭೭ ॥

ಟಿಪ್ಪಣಿಗಳು

೧. ಈ ಪದ್ಯದಲ್ಲಿ ರೋಮಾವಳಿಯನ್ನು ಸಣ್ಣ ಗಗನ ಪಂಕ್ತಿ ಎಂಬುದಾಗಿ ಉತ್ಪ್ರೇಕ್ಷೆ ಮಾಡಿರುವುದರಿಂದ **ಉತ್ಪ್ರೇಕ್ಷಾಲಂಕಾರವಾಗಿದೆ.** ಪದ್ಯದ ಮೊದಲನೆಯ ಪಾದದಲ್ಲಿ **ಯದೇತತ್ ಕಾಲಿಂದೀತನುತರತರಂಗಾಕೃತಿ** ಎಂಬಲ್ಲಿ **ನಿದರ್ಶನಾಲಂಕಾರ**ವಾಗಿದೆ. ಏಕೆಂದರೆ ತರಂಗದ ಆಕೃತಿಯಂತೆ ಆಕೃತಿ ಎಂಬುದಾಗಿ ಬಿಂಬ ಪ್ರತಿಬಿಂಬ ಭಾವವು ತೋರುತ್ತದೆ.

೨. ನೀಲವರ್ಣವುಳ್ಳದ್ದೂ ಮೂರ್ತವಾದುದೂ ಆದ ಆಕಾಶವು ಕುಚಕಲಶಗಳ ಪರಸ್ಪರ ಒತ್ತುವಿಕೆಯ ಕಾರಣದಿಂದ ಕೆಳಗಿನ ಪ್ರದೇಶದ ಕಡೆಗೆ ಹರಿದುಹೋಗಿ ನಾಭಿಯವರೆಗೂ ಸಣ್ಣ ಅರಗಿನ ಎಳೆಯಂತೆ ಇರುತ್ತದೆ. ಅದನ್ನು ರೋಮಾವಳಿ ಎಂದು ಕರೆಯಲಾಗಿದೆ.

(ಶೇ–ಪುಟ ೨೩೨)

೩. ನಾಭಿಯ ಹತ್ತಿರವಿರುವ ಮಣಿಪೂರಕ ಚಕ್ರದಿಂದ 'ಕುರುಕುಳ್ಳಾದೇವಿ' ಎನ್ನುವ ದೇವತೆ ಕಪ್ಪುಚ್ಛಾಯೆಯಿಂದ ಕೂಡಿ ಬಲಿತ ಶರೀರದಿಂದ ಯೌವನಮದದಿಂದ, ರತ್ನಗಳು ಜೋಡಿಸಿದ ನಾಡಿಯಲ್ಲಿ ರತ್ನಗಳು ಹುದುಗಿಸಿದ ಹುಟ್ಟಿನಿಂದ ನಾವೆಯನ್ನು ನಡೆಸುತ್ತಾ ಅನಾಹತಚಕ್ರವಾದ ಹೃದಯಸ್ಥಾನದಲ್ಲಿ ವಾಯುಚಕ್ರದವರೆಗೂ ಮತ್ತೆ ಮಣಿಪೂರಕ ಚಕ್ರದವರೆಗೂ ಮೇಲೆ ಕೆಳಗೆ ತಿರುಗುತ್ತಾ ಇರುತ್ತಾಳೆ. ಈ ರೀತಿಯಾಗಿ ಕಶ್ಯಪ ಶಿಲ್ಪಶಾಸ್ತ್ರದಲ್ಲಿ ವರ್ಣಿತವಾಗಿದೆ.

(ಪ–ಪುಟ ೧೩೪)

೪. ಹೃದಯದಿಂದ ನಾಭಿವರೆಗೆ ಹಬ್ಬಿದ ರೋಮರಾಜಿಯನ್ನು ಯಮುನಾನದಿ ತರಂಗಕ್ಕೆ ಹೋಲಿಸಿದೆ. ಹೃದಯ ಸೂರ್ಯಮಂಡಲ ಸೂರ್ಯದ ಪುತ್ರಿ ಯಮುನಾ ನದಿ, ಆಕಾಶತತ್ತ್ವ ಸೂರ್ಯಮಂಡಲದಿಂದ ಕೆಳಕ್ಕೆ ಜಾರುವುದರಿಂದ ಯಮುನೆಗೆ ಹೋಲಿಸಿರುವುದು ಉಚಿತವಾಗಿದೆ. ಇಡೀ ಪಿಂಗಳಾ, ಸುಷುಮ್ನಾ ನಾಡಿಗಳನ್ನು ಗಂಗಾ ಯಮುನಾ ಸರಸ್ವತೀ ನದಿಗಳಿಗೆ ಹೋಲಿಸಲಾಗಿದೆ. ಈ ಪೈಕಿ ಪಿಂಗಳಾನಾಡಿಯನ್ನು ಯಮುನಾ ನದಿಗೆ ಹೋಲಿಸಿದೆ.


(ಪೋ–ಪುಟ ೩೭೬)

೫. ಈ ಶ್ಲೋಕದಲ್ಲಿ ಕಾಳಿಂದೀನದಿಯ (ಯಮುನಾ ನದಿಯ) ನೀರಿನ ಪಂಚಲನಾ ಕ್ರಮವನ್ನು ಹೇಳಲಾಗಿದೆ. ಆಕಾಶದಲ್ಲಿ ಆವಿಯ ರೀತಿಯಲ್ಲಿದ್ದ ನೀರು ಬೆಟ್ಟಗಳ ಮಧ್ಯೆ ಮಳೆಯಾಗಿ ಸುರಿದು ಅಲ್ಲಿ ನಿಲ್ಲಲಾಗದೇ ಸಮುದ್ರದ ಕಡೆ ಹರಿದು ಸೇರಿ ಮತ್ತೆ ಆವಿಯರೂಪ

ತಳೆದು ಆಕಾಶಕ್ಕೆ ಹರಿಯುವುದು. ಅದನ್ನೇ ಇಲ್ಲಿ ಶಂಕರರು ಸಾಂಕೇತಿಕವಾಗಿ ಕುಚಕಲಶಗಳೆಂಬ ಪರ್ವತಗಳಿಂದ ಕಾಳಿಂದೀ ನದಿಯ ನೀರು ಹರಿದು ಆಕಾಶದ ಮೂಲಕ ಹರಿದು ಹೋಗಿ ನಾಭಿ ಎಂಬ ಸಮುದ್ರಕ್ಕೆ ಸೇರುತ್ತದೆ. ನಾಭಿ ಎಂಬ ಸಮುದ್ರದಿಂದ ಮತ್ತೆ (ದಹಿಸುತ್ತಿದ್ದ ಮನ್ಮಥನ ದೇಹದ ಹೊಗೆಯಂತೆ) ಆವಿಯಾಗಿ ಹೋಗುತ್ತದೆ.

(ಅ–ಪುಟ ೧೧೨)

ಯಂತ್ರಾರಾಧನೆ (ಶ್ಲೋಕ ೭೭)



ಯಂತ್ರರಚನೆ : ಕೆಂಪು ತಾವರೆದಳಗಳನ್ನು ಸುಟ್ಟು ಆ ಕರಕನ್ನು ಕಪಿಲಾ ಗೋವಿನತುಪ್ಪದಲ್ಲಿ ಕಲಸಿ ಆ ಲೇಪದ ಮೇಲೆ ಈ ಯಂತ್ರ ಮತ್ತು ಶ್ಲೋಕವನ್ನು ಬರೆಯಬೇಕು. ಮೂರು ತ್ರಿಶೂಲಗಳ ಸಹಿತವಾಗಿ ಅಧೋಮುಖವಾದ ಸಮಭುಜ ತ್ರಿಕೋಣವನ್ನು ಬರೆಯಬೇಕು. ಮಧ್ಯದಲ್ಲಿ ಕ್ಲೀಂ ಎಂಬ ಬೀಜಾಕ್ಷರ ಬರೆಯಬೇಕು.

ಪೂಜೆ : ಪೂರ್ವಾಭಿಮುಖವಾಗಿ ಕುಳಿತು ಕೆಂಪು ಹೂಗಳಿಂದ ಲಲಿತಾ ಅಷ್ಟೋತ್ತರ ಅರ್ಚನೆಯನ್ನು ಮಾಡಬೇಕು.

ನೈವೇದ್ಯ : ಬಾಳೆಹಣ್ಣು ಮತ್ತು ಜೇನುತುಪ್ಪ.

ಜಪ : ಹತ್ತು ದಿನಗಳ ಕಾಲ ಪ್ರತಿನಿತ್ಯವೂ ೨೦೦೦ ಬಾರಿ ಜಪಿಸಬೇಕು.

ಫಲ : ಹೀಗೆ ಮಂತ್ರಿಸಿದ ಲೇಪವನ್ನು ಹಣೆಯಲ್ಲಿ ತಿಲಕವಾಗಿ ಧರಿಸಬೇಕು. ಆಗ ರಾಜವಶ್ಯತೆ ಆಗುತ್ತದೆ.

ಶ್ಲೋಕ ೭೮

ದೇವಿಯ ನಾಭಿಯ ವರ್ಣನೆ

ಸ್ಥಿರೋ ಗಂಗಾವರ್ತಃ ಸ್ತನಮುಕುಲರೋಮಾವಲಿಲತಾ
[೧]ಕಲಾವಾಲಂ ಕುಂಡಂ ಕುಸುಮಶರತೇಜೋಹುತಭುಜಃ ।
ರತೇರ್ಲೀಲಾಗಾರಂ ಕಿಮಪಿ ತವ [೨]ನಾಭಿರ್ಗಿರಿಸುತೇ
ಬಿಲದ್ವಾರಂ ಸಿದ್ಧೇರ್ಗಿರಿಶನಯನಾನಾಂ ವಿಜಯತೇ ॥ ೭೮ ॥

ಪಾಠಾಂತರ

೧. (ಕಲಾವಾಲಂ) = ನಿಜಾನಾಲಂ (ಸು) ಕುಲಾವಾಲಂ (ಓ)
೨. (ನಾಭಿರ್ಗಿರಿಸುತೇ)= ನಾ ಭೀತಿ ಗಿರಿಜೇ (ಸು)

ಪದವಿಭಾಗ

(ಸ್ಥಿರೋ) = ಸ್ಥಿರಃ, (ಗಂಗಾವರ್ತಃ) = ಗಂಗಾಃ+ಆವರ್ತಃ, ಸ್ತನಮುಕುಲರೋಮಾವಲಿ ಲತಾ, (ಕಲಾವಾಲಂ) = ಕಲಾ + ಆವಾಲಂ ಕುಂಡಂ, (ಕುಸುಮಶರತೇಜೋ) = ಕುಸುಮ ಶರತೇಜಃ, ಹುತಭುಜಃ, (ರತೇರ್ಲೀಲಾಗಾರಂ) = ರತೇಃ + ಲೀಲಾ+ಆಗಾರಂ, (ಕಿಮಪಿ) = ಕಿಮ್+ಅಪಿ, ತವ (ನಾಭಿರ್ಗಿರಿಸುತೇ) = ನಾಭಿಃ + ಗಿರಿಸುತೇ, ಬಿಲದ್ವಾರಂ, (ಸಿದ್ಧೇರ್ಗಿರಿಶನಯನಾನಾಂ) = ಸಿದ್ಧೇಃ+ಗಿರಿಶನಯನಾನಾಂ, ವಿಜಯತೇ

ಅನ್ವಯಾರ್ಥ

(ಹೇ) ಗಿರಿಸುತೇ	(ಎಲೈ) ಪರ್ವತರಾಜನ ಮಗಳೇ
ತವ ನಾಭಿಃ	ನಿನ್ನ ಹೊಕ್ಕಳು
ಸ್ಥಿರಃ ಗಂಗಾವರ್ತಃ	ಸ್ಥಿರವಾದ ಗಂಗಾನದಿಯ ಸುಳಿಯಾಗಿರಲಿ
ಸ್ತನ ಮುಕುಲ	ಸ್ತನವೆಂಬ ಮೊಗ್ಗುಗಳುಳ್ಳ
ರೋಮಾವಲಿಲತಾ	ರೋಮಾವಳಿಯೆಂಬ ಲತೆಗೆ
ಕಲಾವಾಲಂ	ಪಾತಿಯಾಗಿಯೂ
ಕುಸುಮಶರ	(ಹೂಗಳೇ ಬಾಣವಾಗುಳ್ಳವನ) ಮನ್ಮಥನ
ತೇಜೋಹುತಭುಜಃ	ಪರಾಕ್ರಮವೆಂಬ ಅಗ್ನಿಗೆ

ಕುಂಡಂ	ಹೋಮಕುಂಡವಾಗಿಯೂ
ರತೇರ್ಲೀಲಾಗಾರಂ	(ರತೇಃ+ಲೀಲಾಗಾರಂ)= ರತೀದೇವಿಯ-ವಿಲಾಸಗೃಹವಾಗಿಯೂ
ಗಿರಿಶನಯನಾನಾಂ	ಈಶ್ವರನ ಕಣ್ಣುಗಳ
ಸಿದ್ಧೇಃ ಬಿಲದ್ವಾರಂ	ತಪಸ್ಸಿದ್ಧಿಗೆ – ಗುಹಾದ್ವಾರವಾಗಿಯೂ
ಕಿಮಪಿ	ಅನಿರ್ವಚನೀಯವಾಗಿ
ವಿಜಯತೇ	ಸರ್ವೋತ್ಕೃಷ್ಟವಾಗಿರುತ್ತದೆ.

ತಾತ್ಪರ್ಯ

ಕವಿಯು ದೇವಿಯ ನಾಭಿಯನ್ನು ವರ್ಣಿಸುತ್ತಾನೆ. "ಎಲೈ ದೇವಿಯೇ, ನಿನ್ನ ಆಳವಾದ ನಾಭಿಯು ಗಂಗಾನದಿಯ ಸ್ಥಿರವಾದ ಸುಳಿಯಾಗಿಯೂ, ಸ್ತನವೆಂಬ ಕಮಲದ ರೋಮಾವಳಿಯೆಂಬ ಲತೆಗೆ ಪಾತಿಯಾಗಿಯೂ, ಮನ್ಮಥನು ಹೋಮ ಮಾಡುವುದಕ್ಕಾಗಿರುವ ಹೋಮ ಕುಂಡವಾಗಿಯೂ ರತಿದೇವಿಯ ವಿನೋದಾರ್ಥವಾಗಿರುವ ಮನೆಯಾಗಿಯೂ ಈಶ್ವರನ ಹತ್ತು ಕಣ್ಣುಗಳ ತಪಸ್ಸಿದ್ಧಿಗೆ ಬೇಕಾದ ಗುಹೆಯಾಗಿಯೂ ಸರ್ವೋತ್ಕೃಷ್ಟವಾಗಿರುವುದು."

ಲೋಕದಲ್ಲಿ ಗಂಗೆಯ ಸುಳಿಯು ಚಂಚಲವಾಗಿರುವುದು. ಆದುದರಿಂದಲೇ ಸ್ಥಿರವಾದ ಎಂಬ ವಿಶೇಷಣವನ್ನು ಕವಿಯು ಕೊಟ್ಟಿರುತ್ತಾನೆ. ಗಂಗೆಯ ಸುಳಿಯಂತೆ ನಾಭಿಯು ಬಹಳ ಆಳವಾಗಿರುವುದೆಂದು ಅಭಿಪ್ರಾಯ.

(K).

ಪದ್ಯಾನುವಾದ

ಹೇ ಗಿರಿಸುತೇ! ನಿನ್ನ ನಾಭಿ ಗಂಗಾನದಿಯ
ನೀರೊಳಲುಗದಿಹ ಸುಳಿ, ಮೊಲೆಮೊಗ್ಗುಗಳ ಬಿಟ್ಟ
ರೋಮಾವಲೀಲತೆಯ ಪಾತಿ, ಮನ್ಮಥನ ತೇಜೋಽಗ್ನಿ ಬೆಳಗುವ ಕುಂಡವು;
ರತಿಯಲೀಲಾಗಾರ, ರಜತಗಿರಿಗೊಡೆಯನಹ
ಸರ್ವೇಶ್ವರನ ನಯನಗಳ ತಪಸ್ಸಿದ್ಧಿ ಸ-
ರ್ವಸ್ವವೂ ಹೊಗುವ ಗುಹೆಯದ್ವಾರ- ಇಂತೆಂದದರ ಗೆಲುವ ಹೊಗಳಲೆಂತು
॥ ೭೮ ॥

ಟಿಪ್ಪಣಿಗಳು

೧. ಒಂದೇ ನಾಭಿಯನ್ನು ಅನೇಕ ರೂಪದಿಂದ ಉಲ್ಲೇಖ ಮಾಡಿರುವುದರಿಂದ **ಉಲ್ಲೇಖಾಲಂಕಾರವಾಗಿದೆ.**

(ಶೇ–ಪುಟ ೨೩೩)

ಸಮಾಸವ್ಯಾಸ ಪದ್ಧತಿ

೨. ಶ್ಲೋಕ ೭೬, ೭೭, ೭೮ಗಳಲ್ಲಿ ನಾಭಿಯನ್ನು ಸಮಾಸವ್ಯಾಸ ಪದ್ಧತಿಯಲ್ಲಿ ವರ್ಣಿಸಿದ್ದಾರೆ. ಒಂದೇ ವಿಷಯವನ್ನು ಒಂದೇ ವಿಧವಾಗಿ ವರ್ಣಿಸುತ್ತಾ, ಕೇಳುವವರು ಓದುವವರಿಗೆ ಚೆನ್ನಾಗಿ ಅರ್ಥವಾಗುವಂತೆ ವಿವರಿಸುವ ಪದ್ಧತಿಯೇ ಸಮಾಸ ಪದ್ಧತಿ. ವೇದಾಂತ ಬೋಧೆಯಲ್ಲಿ ಮಹಾತ್ಮರು ಕೆಲವು ವಿಷಯಗಳನ್ನು ಪದೇ ಪದೇ ಹೇಳುವುದುಂಟು. ಇಲ್ಲಿ ನಾಭಿ – ಒಂದು ಎಚ್ಚರಿಕೆ. ನಾಭಿ – ಸಾಧನಾ ಸರೋವರ ನಾಭಿ – ಕೋರಿಕೆಗಳು ಎನ್ನುವ ಅಗ್ನಿಯನ್ನು ಆರಿಸುವ ಅಮೃತಸರಸ್ಸು. ಅಷ್ಟೇ ಅಲ್ಲದೆ ಕೋರಿಕೆಗಳ ಸುಳಿಗಳನ್ನೂ ಅಗ್ನಿಕುಂಡಗಳನ್ನು ಮಾಡುವ ಹೋಮಕುಂಡ ಸಹಾ ಇಷ್ಟು ಭಾವನೆಗಳನ್ನು ನಾಭಿಯ ವರ್ಣನೆಯಲ್ಲಿ ಸಮಾಸ ವ್ಯಾಸ ಪದ್ಧತಿಯಲ್ಲಿ ಶಂಕರರು ವಿವರಿಸಿದ್ದಾರೆ.


೩. **ನಾಭ್ಯಾಲವಾಲರೋಮಾಲಿಲತಾಫಲಕುಚದ್ವಯೀ**

ನಾಭಿ ಎಂಬ ಮಡಿ (ಪಾತಿ) ಯಿಂದ ಮೇಲಕ್ಕೆ ಹಬ್ಬಿರುವ ರೋಮರಾಜಿ ಎಂಬ ಬಳ್ಳಿಯಲ್ಲಿ ಬಿಟ್ಟಿರುವ ಹಣ್ಣುಗಳೋ ಎಂಬಂತಿರುವ ಕುಚದ್ವಯಗಳನ್ನು ಹೊಂದಿರುವವಳು ಎಂದು ಲಲಿತಾಸಹಸ್ರ ನಾಮದಲ್ಲಿ (ಶ್ಲೋಕ ೧೫ ನಾಮ ೩೫) ಹೇಳಿದೆ.

ಇಲ್ಲಿ ನಾಭ್ಯಾಲವಾಲವನ್ನು ಇಂದ್ರಿಯ ನಿಗ್ರಹಕ್ಕೂ ರೋಮಾಲಿಲತೆಯನ್ನು ಸಾತ್ತ್ವಿಕ ಭಕ್ತಿಗೂ, ಕುಚದ್ವಯಗಳನ್ನೂ ವಾತ್ಸಲ್ಯಕ್ಕೂ ಸಂಕೇತಿಸಲಾಗಿದೆ. ಭಕ್ತನಾದವನು ಇಂದ್ರಿಯನಿಗ್ರಹಮಾಡಿ ಸಾತ್ತ್ವಿಕಭಕ್ತಿಯನ್ನೂ ವೃದ್ಧಿಗೊಳಿಸಿಕೊಂಡರೆ ಶ್ರೀದೇವಿಯ ವಾತ್ಸಲ್ಯಕ್ಕೆ ಪಾತ್ರನಾಗುತ್ತಾನೆ.

(ಲ–ಕೂ–ಪುಟ ೮೯)

ಯಂತ್ರಾರಾಧನೆ (ಶ್ಲೋಕ ೭೮)



ಯಂತ್ರರಚನೆ : ರಕ್ತಚಂದನವನ್ನು ಗುಲಾಬಿ ಹೂಗಳ ರಸದಿಂದ ಪನ್ನೀರಿನಿಂದ ತೇಗೆದು ಗುಲಾಬಿ ದಳ ರಸ ಸೇರಿಸಿ ಅದಕ್ಕೆ ಕಸ್ತೂರಿಯನ್ನು ಸೇರಿಸಿ ಮಾಡಿದ ಗಂಧವನ್ನು ಬೆಳ್ಳಿಯ ತಟ್ಟೆಯಲ್ಲಿ ದಟ್ಟವಾಗಿ ಲೇಪಿಸಿ ಅದರ ಮೇಲೆ ಯಂತ್ರವನ್ನು ಬರೆಯಬೇಕು. ಮೂರು ತ್ರಿಶೂಲಗಳಿಂದ ಅಧೋಮುಖವಾದ ಸಮಭುಜ ತ್ರಿಕೋಣವನ್ನು ಬರೆದು ಅದರ ನಡುವೆ ಹ್ರೀಂ ಬೀಜಾಕ್ಷರವನ್ನು ಬರೆಯಬೇಕು.

ಪೂಜೆ : ಪೂರ್ವಾಭಿಮುಖವಾಗಿ ಕುಳಿತು ಕಮಲದಳಗಳಿಂದ ಲಕ್ಷ್ಮೀ ಅಷ್ಟೋತ್ತರ ಅರ್ಚನೆಯನ್ನು ಮಾಡಬೇಕು.

ನೈವೇದ್ಯ : ಉದ್ದಿನ ವಡೆ ಮತ್ತು ಜೇನುತುಪ್ಪ

ಜಪ : ೪೫ ದಿನಗಳ ಕಾಲ ದಿನಕ್ಕೆ ೧೦೮ ಬಾರಿ ಜಪಿಸಬೇಕು. ಕಸ್ತೂರಿಲೇಪನವನ್ನು ಹಣೆಗೆ ತಿಲಕವಾಗಿ ಧರಿಸಬೇಕು.

ಫಲ : **ಸಕಲರಾಜವಶ್ಯತೆ.**

ಶ್ಲೋಕ ೭೯

ದೇವಿಯ ನಡುವಿನ ವರ್ಣನೆ

ನಿಸರ್ಗಕ್ಷೀಣಸ್ಯ ಸ್ತನತಟಭರೇಣ ಕ್ಲಮಜುಷೋ
[1]ನಮನ್ಮೂರ್ತೇರ್ನಾರೀತಿಲಕ ಶನಕೈಸ್ತ್ರುಟ್ಯತ ಇವ ।
ಚಿರಂ ತೇ ಮಧ್ಯಸ್ಯ ತ್ರುಟಿತತಟಿನೀತೀರತರುಣಾ
ಸಮಾವಸ್ಥಾಸ್ಥೇಮ್ನೋ ಭವತು ಕುಶಲಂ ಶೈಲತನಯೇ ॥ ೭೯ ॥

ಪಾಠಾಂತರ

೧. ನಮನ್ಮೂರ್ತೇರ್ನಾರೀ = ನಮನ್ಮೂರ್ತೇರ್ನಾಭೌ; (ಸು)

ನಮನ್ಮೂರ್ತೇರ್ನಾಭಾವಳಿಷು (ಪೋ)

ಪದವಿಭಾಗ

ನಿಸರ್ಗಕ್ಷೀಣಸ್ಯ, ಸ್ತನತಟಭರೇಣ, (ಕ್ಲಮಜುಷೋನ ಮನ್ಮೂರ್ತೇರ್ನಾರೀತಿಲಕ) = ಕ್ಲಮಜುಷಃ + ನಮತ್+ಮೂರ್ತೇಃ + ನಾರೀತಿಲಕ, (ಶನಕೈಸ್ತ್ರುಟ್ಯತ) = ಶನಕೈಃ + ತ್ರುಟ್ಯತಃ, ಇವ, ಚಿರಂ, ತೇ, ಮಧ್ಯಸ್ಥ, ತ್ರುಟಿತತಟಿನೀತೀರತರುಣಾ, (ಸಮಾವಸ್ಥಾಸ್ಥೇಮ್ನೋ) = ಸಮ + ಅವಸ್ಥಾಸ್ಥೇಮ್ನಃ, ಭವತು, ಕುಶಲಂ, ಶೈಲತನಯೇ,

ಅನ್ವಯಾರ್ಥ

(ಹೇ) ಶೈಲತನಯೇ	(ಎಲೈ), ಪರ್ವತರಾಜನ ಮಗಳೇ
ನಿಸರ್ಗ ಕ್ಷೀಣಸ್ಯ	ಸ್ವಭಾವದಿಂದ ಅತಿಕೃಶನಾದ
ಸ್ತನತಟಭರೇಣ	ಸ್ತನಗಳ ಭಾರದಿಂದ
ಕ್ಲಮಜುಷಃ	ಆಯಾಸವನ್ನು ಹೊಂದಿರುವ
ನಮನ್ಮೂರ್ತೇಃ	(ನಮತ್+ಮೂರ್ತೇ) ಬಗ್ಗುತ್ತಿರುವ – ಆಕಾರವುಳ್ಳ
ಶನಕೈಃ	ಕ್ರಮಕ್ರಮದಿಂದ (ಮೆಲ್ಲಮೆಲ್ಲನೆ)
ತ್ರುಟ್ಯತಃ ಇವ	ಮುರಿದು ಬೀಳುತ್ತಿದೆಯೋ ಎನ್ನುವ ಹಾಗೆಯಿರುವ

ತ್ರುಟಿತ ತಟಿನೀ ತೀರ ತರುಣಾ	ಕುಸಿದು ಬಿದ್ದ-ನದೀ ದಡದಲ್ಲಿರುವ-ವೃಕ್ಷದೊಡನೆ
ಸಮಾವಸ್ಥಾ ಸ್ಥೇಮ್ನಃ	ಸದೃಶವಾದ - ಅವಸ್ಥೆಯಲ್ಲಿ-ಸ್ಥೈರ್ಯವುಳ್ಳ
ತೇ	ನಿನ್ನ
ಮಧ್ಯಸ್ಯ	ನಡುವಿನ
ಕುಶಲಂ	(ಮುರಿಯದೆ ಇರುವಂಥ) ಕ್ಷೇಮವು
ಚಿರಂ	ಬಹುಕಾಲದವರೆಗೂ
ಭವತು	ಆಗಲಿ

ತಾತ್ಪರ್ಯ

ಕವಿಯು ದೇವಿಯ ನಡುವನ್ನು ವರ್ಣಿಸುತ್ತಾನೆ: ಸ್ತ್ರೀಯರಿಗೆ ತಿಲಕಪ್ರಾಯಳಾದ ಎಲ್ಲೈ ಪಾರ್ವತಿಯೇ, ಸ್ವಭಾವದಿಂದ ಕೃಶವಾಗಿ ಸ್ತನಗಳ ಭಾರಕ್ಕೆ ಆಯಾಸ ಹೊಂದಿ ಬಗ್ಗಿ ಹೋದ, ಕಾಲಾನುಕಾಲಕ್ಕೆ ಬಿದ್ದು ಹೋಗುವ ಸ್ಥಿತಿಯಲ್ಲಿ ಇರುವುದೋ ಎಂಬ ಶಂಕೆಗೆ ಆಸ್ಪದವಾದ ಕಾರಣವೇ ಕುಸಿದು ಬೀಳುತ್ತಿರುವ ನದಿಯ ದಡದ ವೃಕ್ಷದ ಸ್ಥಿತಿಯನ್ನು ಹೊಂದಿರುವ ನಿನ್ನ ನಡುವಿಗೆ ದೇವರು ಕ್ಷೇಮವನ್ನುಂಟುಮಾಡಲಿಯೆಂದು ಪ್ರಾರ್ಥಿಸುತ್ತೇನೆ.

ನದಿಯ ದಡದಲ್ಲಿರುವ ವೃಕ್ಷಗಳಿಗೆ ಅಪಾಯವಾಗುವುದು ಹೇಗೆ ನಿಶ್ಚಿತವೋ ಹಾಗೆ ನಾಭೀ ಸರೋವರದ ದಡದಲ್ಲಿರುವ ನಡುವಿಗೆ ಅಪಾಯವಾಗುವುದು ಸಿದ್ಧವೆಂದು ಕವಿಯು ವರ್ಣಿಸಿದ್ದಾನೆ.

(K).

ಪದ್ಯಾನುವಾದ

ಹೇ ಗಿರಿಜೆ, ಪೆಣ್ಮಣಿಯೆ! ಸಹಜವಾಗಿಯೆ ನಿನ್ನ
ನಡು ಬಡವು, ಮೊಲೆಹೊರೆಯ ಹೊತ್ತು ಬಳಲಿದೆ ಮತ್ತೆ,
ಬಾಗಿ ಬಳುಕುವರೂಹಿನಿಂದಿನಿತರಲ್ಲಿಯೇ ಮುರಿದು ಬೀಳ್ವಂತಿರುವುದು;
ಒಡೆದ ಹೊಳೆದಡದಲಿಹ ಮರಕೆ ಸರಿದೊರೆಯೆನಿಸಿ
ಬೀಳ್ವ ಭಯಹುಟ್ಟಿಸುವ ಬೀಳದೆಯೆ ನಿಂತಿರುವ
ಆ ನಿನ್ನ ಬಡನಡುವೆಗೆಂದೆಂದಿಗೂ ಕುಶಲವುಂಟಾಗುತಿರಲಿ ತಾಯೇ

ಟಿಪ್ಪಣಿಗಳು

೧. ಈ ಶ್ಲೋಕದಲ್ಲಿ **ತ್ರುಟಿತ ತಟನೀತೀರತರುಣಾ ಇವ** (ಪ್ರವಾಹದಿಂದ ಕೊರೆಯಲ್ಪಟ್ಟ ದಡದ ಮೇಲಿನ ಮರದ ಹಾಗೆ) ಎಂಬುದಾಗಿ ನಡುವಿಗೆ ಕುಸಿದು ಬಿದ್ದು ನದೀ ತೀರದಲ್ಲಿ ಇರುವ ವೃಕ್ಷದೊಡನೆ ಸಾಮ್ಯವನ್ನು ವರ್ಣಿಸಿರುವುದರಿಂದ ಇಲ್ಲಿ **ಉಪಮಾಲಂಕಾರವಿದೆ.**

೨. ಲಲಿತಾ ಸಹಸ್ರನಾಮದಲ್ಲಿ (ಶ್ಲೋಕ ೧೫ ನಾಮ ೩೫) ಲಕ್ಷ ರೋಮಲತಾಧಾರತಾ ಸಮುನ್ನೇಯ ಮಧ್ಯಮಾ (ಕಾಣಬರುತ್ತಿರುವ ರೋಮರಾಜಿಯೆಂಬ ಬಳ್ಳಿಗೆ ಆಧಾರವಾಗಿರುವಿಕೆಯಿಂದ ಊಹಿಸಬಹುದಾದ ಸೊಂಟವುಳ್ಳವಳು) ಎಂದು ಹೇಳಿದೆ.

(ಲ–ಆ ಪುಟ ೫೫)

೩. ದೇವಿಯು ತಲೋದರಿ ಎಂದರೆ ಕೃಶವಾದ ಕಟಿಯುಳ್ಳವಳು. ಈ ವಿಶ್ವದಲ್ಲಿ ಭೂಲೋಕವು ಸೇರಿದಂತೆ ಮೇಲಿನ ಏಳೂ ಊರ್ಧ್ವ ಲೋಕಗಳೆಂದೂ, ಕೆಳಗಿನ ಭಾಗಗಳು ತಳಗಳೆಂದೂ (ಅಧೋಲೋಕಗಳು) ಕರೆಯುತ್ತಾರೆ. ಪರಮೇಶ್ವರಿಯು ವಿರಾಟ ಸ್ವರೂಪದಲ್ಲಿ ಅಧೋಲೋಕಗಳಲ್ಲಿನ ಅತಳ ಲೋಕವನ್ನು ಪರಮೇಶ್ವರಿಯ ನಡುವೆಂದು ಹೇಳುತ್ತಾರೆ. (ತಲೋದರಿ ಪದಕ್ಕೆ 'ಅ' ಸೇರಿದರೆ ಅತಲೋದರಿ ಆಗುತ್ತದೆ.)

(ಶ್ರೀ–ಪುಟ ೨೯೪)

೪. ಈ ಪದ್ಯದಲ್ಲಿ ಭಗವತ್ಪಾದರು ತಮ್ಮ ಕಾಲದಲ್ಲಿ ಸಮಯ ಮತ ಪ್ರಚಾರಕ್ಕೆ ಒದಗಿರಬಹುದಾದ ಯಾವುದೋ ಅಡ್ಡಿ ಆತಂಕವನ್ನು ಸಾಂಕೇತಿಕವಾಗಿ ಸೂಚಿಸಿ 'ನಿನ್ನ ಉಪಾಸನೆಯು ರಭಸವಾಗಿ ಹರಿಯುವ ನದೀ ದಡದ ಮರದಂತಾಗದೆ ಎಂದೆಂದಿಗೂ ದೃಢವಾಗಿರಲಿ' ಎಂದು ಹಾರೈಸಿದ್ದಾರೆ.

(ಪು–ಪುಟ ೧೧೫)

೫. ಈ ಶ್ಲೋಕದಲ್ಲಿ ತತ್ತ್ವಾರ್ಥವೂ ಅಡಗಿದೆ. ಸೊಂಟವು ದೈಹಿಕ ಬಲದ ಸಂಕೇತ. ಮಾನಸಿಕ ಇಚ್ಛೆಯ ಸಂಕೇತ ಜ್ಞಾನಶಕ್ತಿ, ಇಚ್ಛಾಶಕ್ತಿ, ಕ್ರಿಯಾಶಕ್ತಿಗಳಲ್ಲಿ ನಡುಭಾಗವೇ ಇಚ್ಛಾಶಕ್ತಿ. ಯಾವುದೇ ಕಾರ್ಯ ಕೈಗೊಳ್ಳಲು ದೃಢನಿರ್ಧಾರ ಕೈಗೊಳ್ಳುವುದೇ ಇಚ್ಛಾಶಕ್ತಿ. ಶರೀರ ಬಲದ ಮಹತ್ವವನ್ನು ಸೊಂಟ ಕಟ್ಟಿ ನಿಲ್ಲುವುದು. ಬದ್ಧಕಂಕಣರಾಗುವುದು ಎಂಬೆಲ್ಲ ಮಾತುಗಳು


ಸಾರುತ್ತವೆ. ದೇವೀ ನೀನು ಈ ಬಲವೂ ಆಗಿರುವೆ. ಆ ನಿನ್ನ ಬಲವೂ ನಮ್ಮನ್ನು ರಕ್ಷಿಸಲಿ ಎಂಬುದು ಕವಿಯ ಪ್ರಾರ್ಥನೆ.

(ರ–ಪುಟ ೮೮)

೬. ಹಸ್ತ ಸಾಮುದ್ರಿಕಾ ಶಾಸ್ತ್ರದ ಪ್ರಕಾರ ಸಣ್ಣನಡು ಉತ್ತಮ ಸ್ತ್ರೀ (ಪದ್ಮಿನೀ) ಜಾತಿ ಹೆಣ್ಣಿನ ಲಕ್ಷಣವಾಗಿದೆ.

(ಉ–ಪುಟ ೨೨೬)

ಯಂತ್ರಾರಾಧನೆ (ಶ್ಲೋಕ ೭೯)



ಯಂತ್ರರಚನೆ : ಯಂತ್ರವನ್ನು ಚಿನ್ನದ ತಗಡಿನಲ್ಲಿ ಸಿದ್ಧಪಡಿಸಬೇಕು ೨೨. ಅನುಸ್ವಾರ ಬಿಂದುಗಳು ಸೇರಿಕೊಂಡು ಸರ್ಪಾಕಾರವಾಗಿ ಎಡ ಪಾರ್ಶ್ವದಲ್ಲಿ ಫಣಾಕಾರ (ಹೆಡೆಯಕಾರ)ವಿರುವಂತೆ ಯಂತ್ರವನ್ನು ಬರೆಯಬೇಕು. ಅದರ ಒಳಗೆ ಮೇಲ್ಗಡೆ ಕ್ಲೀಂ ಎಂದೂ ಅದರ ಕೆಳಗಡೆ ಸರ್ವೇಜನಮೋಹನಂ ಎಂಬ ಬೀಜಾಕ್ಷರ ಬೀಜ ಪದಗಳನ್ನು ಬರೆಯಬೇಕು.

ಪೂಜೆ : ಲಲಿತಾ ಸಹಸ್ರನಾಮ ಕುಂಕುಮಾರ್ಚನೆಯನ್ನು ಮಾಡಬೇಕು.

ನೈವೇದ್ಯ : ಹಾಲುಕೀರು, ಜೇನುತುಪ್ಪ

ಜಪ : ಈಶಾನ್ಯ ದಿಕ್ಕಿಗೆ ಅಭಿಮುಖವಾಗಿ ಕುಳಿತು ೪೫ ದಿನಗಳ ಕಾಲ ಪ್ರತಿದಿನವೂ ೧೦೦೦ ಬಾರಿ ಶ್ಲೋಕವನ್ನು ಜಪಿಸಬೇಕು.

ಫಲ : ಇಂದ್ರಜಾಲವಿದ್ಯಾನೈಪುಣ್ಯ ಲಾಭ

ಶ್ಲೋಕ ೮೦

ದೇವಿಯ ವಲಿತ್ರಯ ವರ್ಣನೆ

[೧]ಕುಚೌ ಸದ್ಯಃ ಸ್ವಿದ್ಯತ್ತಟಘಟಿತಕೂರ್ಪಾಸಭಿದುರೌ
ಕಷಂತೌ ದೋರ್ಮೂಲೇ ಕನಕಕಲಶಾಭೌ ಕಲಯತಾ ।
ತವ ತ್ರಾತುಂ [೨]ಭಂಗಾದಲಮಿತಿ ವಲಗ್ನಂ ತನುಭುವಾ
ತ್ರಿಧಾ ನದ್ಧಂ ದೇವಿ ತ್ರಿವಲಿ ಲವಲೀವಲ್ಲಿಭಿರಿವ ॥ ೮೦ ॥

ಪಾಠಾಂತರ

೧. (ಕುಚೌ ಸದ್ಯಃ) = ಸ್ತನಘಟಿತ (ಶೇ)
೨. (ಭಂಗಾದಲಮಿತಿ ವಲಗ್ನಂ) = ಭಂಗಾದುದರಮವಲಗ್ನಂ (ಸು)

ಪದವಿಭಾಗ

ಕಚೌ, ಸದ್ಯಃ, (ಸ್ವಿದ್ಯತ್ತಟಘಟಿತ ಕೂರ್ಪಾಸಭಿದುರೌ)= ಸ್ವಿದ್ಯತ್ + ತಟಘಟಿತ ಕೂರ್ಪಾಸಭಿತ್ + ಉರೌ, ಕಷನ್ತೌ, (ದೋರ್ಮೂಲೇ) = ದೋಃ + ಮೂಲೇ, (ಕನಕಕಲಶಾಭೌ) = ಕನಕಕಲಶ+ಆಭೌ ಕಲಯತಾ, ತವ, ತ್ರಾತುಂ, (ಭಂಗಾದಲಮಿತಿ) = ಭಂಗಾತ್ + ಅಲಂ+ಇತಿ, ವಲಗ್ನಂ, ತನುಭುವಾ, ತ್ರಿಧಾ, ನದ್ಧಂ, ದೇವಿ, ತ್ರಿವಲಿ, (ಲವಲೀವಲ್ಲಿಭಿರಿವ) = ಲವಲೀವಲ್ಲಿಭಿಃ + ಇವ

ಅನ್ವಯಾರ್ಥ

(ಹೇ) ದೇವಿ	(ಎಲೈ) ದೇವಿಯೆ
ಸದ್ಯಃ	ಆಗತಾನೇ
ಸ್ವಿದ್ಯತ್ತಟಘಟಿತ ಕೂರ್ಪಾಸಭಿದುರೌ	ಬೆವರುತ್ತಿರುವ – ಪಾರ್ಶ್ವಗಳಲ್ಲಿ – ಸಂಬಂಧಿಸಿಕೊಂಡ (ಅಂಟಿಕೊಂಡಿರುವ) ರವಿಕೆಯನ್ನು ಹರಿದು ಹೋಗುವಂತೆ
ಕಷಂತೌ	ಮಾಡುತ್ತಿರುವ
ದೋರ್ಮೂಲೇ	ಎರಡು ಬಾಹು ಮೂಲಗಳನ್ನು (ಕಂಕಳಲ್ಲಿ) ಒತ್ತುತ್ತಿರುವ (ವ್ಯಾಪಿಸಿಕೊಂಡಿರುವ)

ಕನಕಕಲಶಾಭೌ	(ಕನಕ ಕಲಶ+ಆಭೌ) = ಚಿನ್ನದ ಕಲಶಗಳ – ಕಾಂತಿಯುಳ್ಳ
ಕುಚೌ	ಸ್ತನಗಳನ್ನು
ಕಲಯತಾ	ನಿರ್ಮಾಣ ಮಾಡಿದ
ತನುಭುವಾ	(ಶರೀರದಲ್ಲೇ ಹುಟ್ಟಿದವನಿಂದ) ಮನ್ಮಥನಿಂದ
ಭಂಗಾದಲಮಿತಿ	(ಭಂಗಾತ್+ಅಲಂ+ಇತಿ) = ಮುರಿದು ಹೋಗುವುದು ಸಾಕು – ಹೀಗೆಂಬುದಾಗಿ
ವಲಗ್ನಂ	ನಡು ಪ್ರದೇಶವನ್ನು
ತ್ರಾತುಂ	ಕಾಪಾಡುವುದಕ್ಕೋಸ್ಕರ
ತವ ವಲಗ್ನಂ	ನಿನ್ನ ನಡುವನ್ನು
ತ್ರಿವಲಿ	ಮೂರು ಮಡಿಕೆಗಳಲ್ಲಿ
ಲವಲೀ ವಲ್ಲಿಭಿಃ	ಲವಂಗದ – ಬಿಳುಪಾದ ಬಳ್ಳಿಗಳಿಂದ
ತ್ರಿಧಾ	ಮೂರು ಪ್ರಕಾರವಾಗಿ
ನದ್ಧಂ ಇವ	ಕಟ್ಟಲ್ಪಟ್ಟಿದೆಯೋ ಎನ್ನುವ ಹಾಗೆ
ಭಾತಿ	ಪ್ರಕಾಶಿಸುತ್ತದೆ.

ತಾತ್ಪರ್ಯ

ಎಲೈ ದೇವಿಯೆ, ಬೆವರಿಗೆ ಅಂಟಿಕೊಂಡ ರವಿಕೆಯನ್ನು ಪಟ್ಟನೆ ಹರಿದು ಹೋಗುವಂತೆ ಮಾಡುವ, ಎರಡು ಕಂಕಳುಗಳವರೆಗೆ ಬೆಳೆದು ಬೆಳೆದು ಒತ್ತರಿಸಿಕೊಂಡು ಹೋಗುತ್ತಿರುವ ಚಿನ್ನದ ಕಲಶಗಳಂತಿರುವ ನಿನ್ನ ಸ್ತನಗಳನ್ನು ಸೃಷ್ಟಿಸಿದ ಮನ್ಮಥನು, ಕೃಶವಾದ ನಡುವು ಮುರಿದು ಬೀಳದೇ ಇರಲಿ ಎಂಬ ತಾತ್ಪರ್ಯದಿಂದ ಲವಂಗದ ಮೂರು ಬಳ್ಳಿಗಳಿಂದ ನಡುವನ್ನು ಬಿಗಿದಿರುತ್ತಾನೆಯೋ ಎನ್ನುವ ಹಾಗೆ ತ್ರಿವಳಿಯು ಪ್ರಕಾಶಿಸುತ್ತಿರುವುದು. (K).

ಪದ್ಯಾನುವಾದ

ಅದೆ ತಾನೆ ಬುಡದಲ್ಲಿ ಬೆವರಿಟ್ಟು ಬಿಗಿಕಟ್ಟು–
ವಡೆದ ಕುಪ್ಪಸಪೊಟ್ಟನೊಡೆದು ಹರಿವಂತಿರಲು
ತೋಳತಳಕುಜ್ಜುತಿಹ ಚಿನ್ನ ಕಳಸದ ತೆರನ ಚೆನ್ನಮೊಲೆಜೋಡಿಯನ್ನ
ನಿನ್ನ ನಡು ಮುರಿದು ಬೀಳದೆ ಧರಿಸಲಾರ್ಪಂತೆ

ಮನ್ಮಥನು ಯೇಲಕಿಯ ಬಳ್ಳಿಯಿಂದದನು ಮೂ-
ವಳಸಾಗಿ ಬಳಸಿ ಬಲುಬಿಗಿಯಾಗಿ ಬಂಧಿಸಿಹ-
ನೆನುವಂತೆ, ಎಲೆದೇವಿ, ನಿನ್ನ ನಡುವಿನ ಬಳಿಯ ತಿವಳಿಯದು
ಶೋಭಿಸಿಹುದು* ॥ ೮೦ ॥

* ಮೂಲದ ಭಾವವೆಲ್ಲವೂ ಆರು ಸಾಲುಗಳಲ್ಲಿ ಮೂಡಲಶಕ್ಯವೆನಿಸಿ ಷಟ್ಪದಿಯಾಗಿರಬೇಕಾದದ್ದು ಸಪ್ತಪದಿಯಾಗಿ ಪರಿಣಮಿಸಿದೆ. – ಎಂ.ವಿ.ಸೀ.

ಟಿಪ್ಪಣಿಗಳು

೧. **ಲವಲೀವಲ್ಲಿಭಿರಿವ** : ಲವಲೀ ವಲ್ಲಿಭಿಃ ಇವ (ಲವಂಗ ಬಳ್ಳಿಗಳಿಂದಲೋ ಎಂಬಂತೆ) ನದೀ ತೀರದಲ್ಲಿ ಇರುವ ಬಿಳಿಯ ಬಣ್ಣದ ಬಳ್ಳಿಯೇ ಲವಲಿ. ಅದರ ಹೂಗಳು ಬಿಳಿಯ ಬಣ್ಣದವು ಆಗಿರುತ್ತವೆ. ಆ ಬಳ್ಳಿಯನ್ನು ಕಾಡು ಹುರುಳಿ ಬಳ್ಳಿ ಎಂದೂ ಅಕಾರಾದಿ ನಿಘಂಟಿನಲ್ಲಿ ಹೇಳಿದೆ. (ಶೇ ಪುಟ ೨೩೫)

೨. ತ್ರಿವಲಿಗಳನ್ನು ಲವಲೀ ಬಳ್ಳಿಗಳೆಂದು ಉತ್ಪ್ರೇಕ್ಷೆ ಮಾಡಲಾಗಿದೆ. ಸರ್ವೇಶ್ವರಿಯ ಸ್ತನಭಾರದಿಂದ ನಡುವು ಮುರಿದೀತೋ ಎಂದು ಮನ್ಮಥನಿಂದ ಮೂರು ಸುತ್ತಾಗಿ (ತ್ರಿವಲಿಯನ್ನು) ಕಟ್ಟಿದ ಯಾಲಕ್ಕಿ ಬಳ್ಳಿಯೋ ಎಂದು ಉತ್ಪ್ರೇಕ್ಷಿಸಿದುದರಿಂದ **ಉತ್ಪ್ರೇಕ್ಷಾಲಂಕಾರ.**

(ಜ–ಪುಟ ೯೪)

೩. ತ್ರಿವಲಿಗಳು ಅಂದರೆ ಸುಂದರ ಸ್ತ್ರೀಯರ ಹೊಟ್ಟೆಯ ಮೇಲೆ ಕಾಣಬರುವ ಮೂರು ಮಡಿಕೆಗಳು. ಇವು ಪದ್ಮಿನೀಜಾತಿಗೆ ಸೇರಿದ ಸ್ತ್ರೀಯರಲ್ಲಿ ಕಂಡುಬರುತ್ತದೆ. ತ್ರಿಪುರಸುಂದರಿಯೆಂದು ಪ್ರಸಿದ್ಧಿಗೊಂಡ ದೇವಿಯಲ್ಲಿ ತ್ರಿವಲಿಗಳು ಆಕೆಯ ಸೌಂದರ್ಯವನ್ನು ಇಮ್ಮಡಿಗೊಳಿಸಿದೆ.


(ಬು–ಪುಟ ೨೦೭)

೪. ಲಲಿತಾ ಸಹಸ್ರನಾಮದಲ್ಲಿ (**ಶ್ಲೋಕ ೧೫ ನಾಮ ೩೬**) "ಸ್ತನಭಾರದಳನ್ಮಧ್ಯ ಪಟ್ಟಬಂಧ ವಳಿತ್ರಯಾ". ಸ್ತನ ಭಾರದಿಂದ ಬಾಗಿದ ಸೊಂಟವು ಮುರಿದು ಬೀಳದಿರಲಿ ಎಂದು ಬ್ರಹ್ಮನು ಹಾಕಿರುವ ಮೂರು (ಕನಕಪಟ್ಟಿ) ಕಟ್ಟುಗಳೋ ಎಂಬಂತಿರುವ ವಲಿತ್ರಯಗಳನ್ನುಳ್ಳವಳಿಗೆ ಎಂದು ಹೇಳಿದೆ. (ಲ–ಕೂ ಪುಟ ೯೦)

೫. ಮನ್ಮಥನಿಂದ ನಿರ್ಮಿತವಾದ ಸ್ತನಗಳು ಎಂದರೆ ಮನ್ಮಥ ಆಕೆಯ ಸ್ತನಗಳನ್ನು ನಿರ್ಮಿಸಿದ ಎಂದರ್ಥವಲ್ಲ. ಮನ್ಮಥ ಆಕೆಯ ಸ್ತನವೈಭವದಲ್ಲಿ

ಸೌಂದರ್ಯವನ್ನು ತುಂಬುತ್ತಾನೆ. ಬ್ರಹ್ಮ ಮಾಡಿದ ಬೊಂಬೆ ಸ್ತ್ರೀ. ಆದರೆ ಸೃಷ್ಟಿಗೆ ಮೂಲವಾದ ಸೌಂದರ್ಯವನ್ನು ಮನ್ಮಥ ತುಂಬುತ್ತಾನೆ. ಸ್ಥಿತಿಗೆ ಅಗತ್ಯವಾದ ಕ್ಷೀರವನ್ನು ಜಗನ್ಮಾತೆ ತುಂಬುತ್ತಾಳೆ. (ಪ-ಪುಟ ೨೪೧)

ಯಂತ್ರಾರಾಧನೆ (ಶ್ಲೋಕ ೮೦)



ಯಂತ್ರರಚನೆ : ಚಿನ್ನದ ತಗಡಿನಲ್ಲಿ ಬರೆಯಿಸಬೇಕು. ಚಿತ್ರದಲ್ಲಿರುವಂತೆ ನಾಲ್ಕು ರೇಖೆಗಳ ಮಧ್ಯದಲ್ಲಿ ಸಮಭುಜ ಚತುರಶ್ರವಾಗಬೇಕು. ಈ ಚಚ್ಚೌಕದಲ್ಲಿ ಮತ್ತೊಂದು ಚಚ್ಚೌಕ ಸೇರಿ ಅಷ್ಟಕೋಣ ರಚನೆ ಆಗಬೇಕು. ಮೇಲ್ಭಾಗದಲ್ಲಿ ಶಂ ಲಂ ರಂ ಶ್ರೀ ಬೀಜಾಕ್ಷರಗಳನ್ನು ಕೆಳಭಾಗದಲ್ಲಿ ತಳೆಕೆಳಗಾಗಿ ಕ್ಲೀಂ ಯಂ ಐಂ ಸೌಃ ಬೀಜಾಕ್ಷರಗಳನ್ನು ಮಧ್ಯದಲ್ಲಿ ಹ್ರೀಂ ಬೀಜಾಕ್ಷರವನ್ನೂ ಬರೆಯಬೇಕು.

ಪೂಜೆ : ಕೆಂಪು ಹೂಗಳಿಂದ ಲಲಿತಾತ್ರಿಶತೀಯೊಂದಿಗೆ ಅರ್ಚನೆಯನ್ನು ಮಾಡಬೇಕು ಯಂತ್ರವನು ಕೈಲಿಟ್ಟುಕೊಂಡು ತಿಲಕವನ್ನು ಧರಿಸಬೇಕು.

ನೈವೇದ್ಯ : ಜೇನುತುಪ್ಪ

ಜಪ : ಈ ಯಂತ್ರವನ್ನು ಮೊದಲನೇ ಋತುವಾದ ಹೆಂಗಸಿನ ಗುಹ್ಯಸ್ಥಾನದಲ್ಲಿಟ್ಟು ೫ ದಿನಗಳು ಪೂಜಿಸಿ ಪ್ರತಿನಿತ್ಯ ಈ ಶ್ಲೋಕವನ್ನು ೧೦೦೦ ಬಾರಿ ದಿನಕ್ಕೆ ಜಪಿಸಬೇಕು.

ಫಲ : ಇಂದ್ರಜಾಲ ಪ್ರದರ್ಶನಸಾಮರ್ಥ್ಯ ಲಾಭ.

ಶ್ಲೋಕ–೮೧

ದೇವಿಯ ನಿತಂಬ ವರ್ಣನೆ

ಗುರುತ್ವಂ ವಿಸ್ತಾರಂ ಕ್ಷಿತಿಧರಪತಿಃ ಪಾರ್ವತಿ ನಿಜಾ–
ನ್ನಿತಂಬಾದಾಚ್ಛಿದ್ಯ ತ್ವಯಿ [1]ಹರಣರೂಪೇಣ ನಿದಧೇ ।
ಅತಸ್ತೇ ವಿಸ್ತೀರ್ಣೋ ಗುರುರಯಮಶೇಷಾಂ ವಸುಮತೀಂ
ನಿತಂಬಪ್ರಾಗ್ಭಾರಸ್ಸ್ಥಗಯತಿ ಲಘುತ್ವಂ ನಯತಿ ಚ ॥ ೮೧ ॥

ಪಾಠಾಂತರ

೧. ಹರಣ ರೂಪೇಣ = ಭರಣರೂಪೇನ (ತು)

ಪದವಿಭಾಗ

ಗುರುತ್ವಂ, ವಿಸ್ತಾರಂ, ಕ್ಷಿತಿಧರಪತಿಃ, ಪಾರ್ವತಿ, (ನಿಜಾನ್ನಿತಂಬಾದಾಚ್ಛಿದ್ಯ) = ನಿಜಾತ್ + ನಿತಂಬಾತ್ + ಆಚ್ಛಿದ್ಯ, ತ್ವಯಿ, ಹರಣರೂಪೇಣ, ನಿದಧೇ, (ಅತಸ್ತೇ) = ಅತಃ + ತೇ, (ವಿಸ್ತೀರ್ಣೋ) = ವಿಸ್ತೀರ್ಣಃ, (ಗುರುರಯಮಶೇಷಾಂ) = ಗುರುಃ + ಅಯಂ + ಅಶೇಷಾಂ, ವಸುಮತೀಂ, (ನಿತಂಬಪ್ರಾಗ್ಭಾರ ಸ್ಸ್ಥಗಯತಿ) = ನಿತಂಬಪ್ರಾಕ್ + ಭಾರಃ + ಸ್ಥಗಯತಿ ಲಘುತ್ವಂ, ನಯತಿ, ಚ.

ಅನ್ವಯಾರ್ಥ

ಪಾರ್ವತಿ	(ಎಲೈ) ಪರ್ವತರಾಜನ ಮಗಳೇ
ಕ್ಷಿತಿಧರಪತಿಃ	ಪರ್ವತಗಳಿಗೆ ದೊರೆಯಾದ ಹಿಮವಂತನು
ಗುರುತ್ವಂ	ಗೌರವ ಮತ್ತು ಭಾರವನ್ನು
ವಿಸ್ತಾರಂ	ವಿಶಾಲತ್ವವನ್ನು
ನಿಜಾತ್	ತನ್ನದಾದ
ನಿತಂಬಾದಾಚ್ಛಿದ್ಯ	(ನಿತಂಬಾತ್ + ಆಚ್ಛಿದ್ಯ) = ತಪ್ಪಲಿನ
ತ್ವಯಿ	ಪ್ರದೇಶದಿಂದ ಹೊರತೆಗೆದು ನಿನ್ನಲ್ಲಿ
ಹರಣರೂಪೇಣ	ಬಳುವಳಿಯಾಗಿ ಕೊಟ್ಟ–ವಸ್ತುವಿನ ರೂಪ ದಲ್ಲಿ

ನಿದಧೇ	ಇಟ್ಟನು (ಕೊಟ್ಟನು)
ಅತಃ	ಈ ಕಾರಣದಿಂದಲೇ
ತೇ	ನಿನ್ನ
ಅಯಂ	ಈ
ನಿತಂಬಪ್ರಾಗ್ಭಾರಃ	ನಡುವಿನ ಹಿಂಭಾಗದ-ಅತಿಶಯವು
ಗುರುಃ	ಗುರುವಾಗಿಯೂ (ಗೌರವವುಳ್ಳದ್ದಾಗಿಯೂ) - ಭಾರವಾಗಿಯೂ
ವಿಸ್ತೀರ್ಣಃಸನ್	ವಿಸ್ತಾರವಾಗಿಯೂ ಇರುತ್ತಾ
ಅಶೇಷಾಂ	ಸಮಸ್ತವಾದ
ವಸುಮತೀಂ	ಭೂಮಂಡಲವನ್ನು
ಸ್ಥಗಯತಿ	ಮುಚ್ಚುತ್ತದೆ
ಚ	ಮತ್ತು
ಲಘುತ್ವಂ	ಹಗುರವನ್ನಾಗಿಯೂ (ಭಾರವಿಲ್ಲದ್ದನ್ನಾಗಿಯೂ ಅಲ್ಪತ್ವವನ್ನೂ)
ನಿಯತಿ	ಹೊಂದಿಸುತ್ತದೆ.

ತಾತ್ಪರ್ಯ

ನಿತಂಬವನ್ನು ಎಂದರೆ ನಡುವಿನ ಹಿಂಭಾಗವನ್ನು (ಬೆನ್ನಿನ ಕಡೆ ನಡುವಿನ ಕೆಳಭಾಗವನ್ನು) ಕವಿ ವರ್ಣಿಸುತ್ತಾನೆ.

ಎಲೈ ದೇವಿಯಾದ ಪಾರ್ವತಿಯೆ, ನಿನ್ನ ತಂದೆಯಾದ ಹಿಮವಂತನು ತನ್ನದಾದ ನಿತಂಬದಿಂದ ವಿಶಾಲತ್ವವನ್ನೂ ಗುರುತ್ವವನ್ನೂ ಬಳುವಳಿಯಾಗಿ ನಿನಗೆ ಕೊಟ್ಟು, ನಿನ್ನ ನಿತಂಬದಲ್ಲಿ ಅವೆರಡನ್ನೂ ಇಟ್ಟನೆಂದು ತೋರುತ್ತದೆ. ಆದುದರಿಂದಲೇ ನಿನ್ನ ಕಟಿ ಪಶ್ಚಾದ್ಭಾಗವು (ದೊಡ್ಡ ನಿತಂಬವು) ವಿಶಾಲವಾಗಿಯೂ ಗುರುವಾಗಿಯೂ (ಅತ್ಯಂತ ಭಾರವಾಗಿಯೂ) ಇದ್ದುಕೊಂಡು ಸಮಸ್ತ ಭೂಮಂಡಲವನ್ನು ಆಕ್ರಮಿಸಿ ಭೂಮಂಡಲಕ್ಕೆ ಲಾಘವವನ್ನು ಉಂಟುಮಾಡುತ್ತಾ ಇದೆ. ಭೂಮಿಯಲ್ಲಿ ವಿಶಾಲತ್ವವೂ ಭಾರವೂ ಎರಡೂ ಇರುವುದು. ಅದನ್ನು ತಿರಸ್ಕರಿಸಬೇಕಾದರೆ ಅವೆರಡೂ ಅವಶ್ಯಕವೆಂದು ಯೋಚಿಸಿ ಹಿಮವಂತನು ತನ್ನಲ್ಲಿರುವ ವಿಶಾಲತ್ವವನ್ನು ಗುರುತ್ವವನ್ನೂ ಕೊಟ್ಟನೆಂದು ತಾತ್ಪರ್ಯವು. (K).

ಪದ್ಯಾನುವಾದ

ಪಾರ್ವತೀ, ಹಿಮವಂತನಂದು ಬಳಿವಳಿಕೊಡುವ
ಕಾಲದಲಿ ತನ್ನ ವಿಸ್ತಾರಗೌರವಗಳನು
ತನ್ನಯ ನಿತಂಬದಿಂದಲೆ ಪಡೆದು ನಿನಗೆ ಬಳಿವಳಿಯಾಗಿ ಕೊಟ್ಟನಲ್ರೆ;
ಅದರಿಂದಲೊದಗಿರುವ ನಿನ್ನಯ ನಿತಂಬಗಳ
ವಿಸ್ತಾರಗೌರವಗಳೀ ಭಾರಬಂಧುರತೆ
ವಸುಮತಿಯದೆಲ್ಲವನು ಮುಚ್ಚಿಮರೆ ಮಾಡುತ್ತ ಲಘುವಾಗಿ ಮಾಡಿರುವುದು
॥ ೮ ॥

ಟಿಪ್ಪಣಿಗಳು

೧. ನಿತಂಬವೆಂದರೆ ಬೆಟ್ಟದಲ್ಲಿರುವ ವಿಸ್ತಾರವಾದ ಮೈದಾನಕ್ಕೂ ಸ್ತ್ರೀಯರ ಭಾಗಕ್ಕೂ ಪೃಷ್ಠ ಅನ್ವಯವಾಗುತ್ತದೆ.

(ಕ–ಪುಟ ೧೬೨)

೨. ದೇವಿಯ ನಿತಂಬವು ಹಿಮವತ್ಪರ್ವತನು ತನ್ನಲ್ಲಿ ಇದ್ದ ಗುರುವಿಸ್ತಾರವನ್ನು ಮದುವೆಯ ಸಂದರ್ಭದಲ್ಲಿ ಮಗಳಿಗೆ ಬಳುವಳಿಯ ರೂಪದಲ್ಲಿ ಇಟ್ಟನೆಂದು ಸರ್ವೇಶ್ವರಿಯ ನಿತಂಬ ಭಾರದ ಅಧಿಕವಾದ ವಿಸ್ತಾರವನ್ನು ಹೇಳಿದ್ದರಿಂದ **ಅತಿಶಯೋಕ್ತಿ ಅಲಂಕಾರ.**

(ಜ–ಪುಟ ೯೫)

೩. ನಿತಂಬಗಳು, ತೊಡೆಗಳು ಮುಂತಾದ ಸ್ತ್ರೀಯ ರಹಸ್ಯ ಶರೀರ ಭಾಗಗಳನ್ನು ವರ್ಣಿಸಬಲ್ಲ ಸಾಹಸ, ಚಾಕಚಕ್ಯತೆ, ನಿಷ್ಕಪಟತ್ವ, ಯೋಗ, ಐದು ಬಗೆ ಜನರಿಗೆ ಮಾತ್ರವಿದೆ.

೧. ಶಿಶು–ಸಣ್ಣ ಮಗು.

೨. ಜಿತೇಂದ್ರಿಯನಾದ ಮಹಾಯೋಗೀಶ್ವರನಾದ ಭಕ್ತ.

೩. ಶಿಲ್ಪಶಾಸ್ತ್ರ, ಶಿಲ್ಪಕಲೆಯನ್ನು ಒಂದು ತಪಸ್ಸಾಗಿ ತಿಳಿದು ಶಿಲ್ಪದಲ್ಲಿ ಸರ್ವ ಸೃಷ್ಟಿ ಸ್ಥಿತಿಲಯಗಳನ್ನು ದರ್ಶಿಸಬಲ್ಲ ಮಹಾತಾತ್ತ್ವಿಕನಾದ ಶಿಲ್ಪಿ.

೪. ವೈದ್ಯ ವೃತ್ತಿಯನ್ನೇ ಪರಮಾವಧಿಯಾಗಿ, ದೈವವಾಗಿ ಭಾವಿಸಿ ಸ್ತ್ರೀ ಪುರುಷ ಭಾವಗಳಿಗೆ ಅತೀತನಾಗಿ ಚಿಕಿತ್ಸೆ, ಶಸ್ತ್ರಚಿಕಿತ್ಸೆ ಮಾಡುವ ಭಿಷಗ್ವರ್ಯ.

೫. ತನ್ನ ಅರ್ಧ ಶರೀರದಲ್ಲಿ ಅರ್ಧಾಂಗಿಯನ್ನು ನಿಲ್ಲಿಸಿ ಸ್ತ್ರೀಸ್ವರೂಪ ಸೌಂದರ್ಯಕ್ಕೆ, ಸೃಷ್ಟಿ ಶಕ್ತಿಗೆ, ಒಂದು ಮಹೋನ್ನತ್ಯ, ಅರ್ಥ, ಪರಮಾರ್ಥಗಳನ್ನು ದಾಂಪತ್ಯ ಜೀವನಕ್ಕೆ ಅನ್ಯೋನ್ಯ ರಾಗಗಳಿಗೆ ಹಿರಿಮೆಯನ್ನು ಸರ್ವಲೋಕಗಳಿಗೂ ತೋರಿಸಿದ ಮಹಾ

ಯೋಗೀಶ್ವರನಾದ ಈಶ್ವರನೊಂದಿಗೆ–ಆ ಈಶ್ವರನ ಸಮಾನವಾದ ಪತಿಗೆ. ಹೀಗೆ ಈ ೫ ಜನರುಗಳಿಗೆ ಸ್ತ್ರೀರಹಸ್ಯ ಭಾಗಗಳ ವರ್ಣನೆಗೆ ಅರ್ಹತೆಯಿದೆ.

(ಪ–ಪುಟ ೧೪೭)

೪. ಲಲಿತಾ ಸಹಸ್ರನಾಮದಲ್ಲಿ (ಶ್ಲೋಕ ೧೬ ನಾಮ ३೭)
ಅರುಣಾರುಣ ಕೌಸುಂಭ ವಸ್ತ್ರಭಾಸ್ವತ್ ಕಟೀತಟೀ
(ಅರುಣವರ್ಣದಂತೆ ನಸುಗೆಂಪು ಬಣ್ಣದ ಉಡುಪನ್ನು ಧರಿಸಿರುವ ಕಟಿ ಪ್ರದೇಶವುಳ್ಳವಳು) ಎಂದು ಹೇಳಿದೆ.

(ಲ–ಕೂ ಪುಟ ೯೦)

೫. **ಯೌತುಕ** ಮದುವೆಯಲ್ಲಿ ಕೊಡುವ ಬಳುವಳಿಯಾಗಿ ಹಿಮವಂತನು ತನ್ನ ದೇಹದ ದೃಢತೆ ವಿಸ್ತಾರತೆಗಳನ್ನು ಮಗಳಿಗೆ ಕೊಡುತ್ತಾನೆ. ಇದರಿಂದ ಪೃಥ್ವಿಯ ಬೆಟ್ಟ ಬಯಲು ನದನದೀಗಳಿಂದ ವಾಸಯೋಗ್ಯವಾಗಿ ಮಾರ್ಪಟ್ಟು ಸಂಸ್ಕೃತಿ ಬೆಳೆಯಲು ಮಾನವನಿಗೆ ಸಹಾಯಕವಾಗಿ ಭೂಮಿಯು ಸ್ವರ್ಗದ ಪ್ರತಿರೂಪವೇ ಆಯಿತು.

(ಪು–ಪುಟ ೧೧೬)

೬. ವಿವಾಹಾದೌ ದೇಯಂ ಕನ್ಯಾಯೈ ಹರಣಮಿತ್ಯುಚ್ಯತೇ **ಯೌತಕಾದಿಷು ಯದ್ದೇಯಂ ಸ್ವದಾಯೌ ಹರಣಂ ಚ ತತ್** ಮಹಿಷಾಸುರ ಮರ್ದನಕ್ಕಾಗಿ ದೇವಿಗೆ ಸಕಲ ದೇವತಾ ತೇಜೋರಾಶಿಯನ್ನು ನೀಡಿದರು. ವಿವಿಧ ರೀತಿಯ ಆಯುಧಗಳನ್ನು ನೀಡಿದರು. ಆಗ ಹಿಮವಂತನು ಸಿಂಹವನ್ನು ದೇವಿಗೆ ವಾಹನವನ್ನಾಗಿ ನೀಡಿದನು, ನಾನಾ ಬಗೆ ರತ್ನಗಳನ್ನು ನೀಡಿದನು, ಜತೆಗೆ ಗುರುತ್ವವನ್ನು ವಿಸ್ತಾರವನ್ನು ನೀಡಿದನು.

(ಪು–ಪುಟ ೪೧೪)

೭ ನಿತಂಬವೆಂದರೆ ಪರ್ವತ ಪ್ರದೇಶದ ತಪ್ಪಲು, ಸ್ತ್ರೀವರ್ಗಕ್ಕೆ ಕಟಿಯ ಹಿಂಬದಿಯ ಪ್ರದೇಶ. ಪರ್ವತರಾಜನ ನಿತಂಬ ಪ್ರದೇಶ (ತಪ್ಪಲು ಪ್ರದೇಶವೇ) ಪಾರ್ವತಿಯ ನಿತಂಬವಾಗಿ ಪರಿಣಮಿಸಿತು. ತನ್ನ ಭಾರವಾದ ಪ್ರದೇಶವನ್ನು ಮಗಳಿಗೆ ಬಳುವಳಿಯಾಗಿ ಕೊಟ್ಟಿದ್ದರಿಂದ ಹಿಮವಂತನು ತನ್ನ ಭಾರವನ್ನು ಕಡಿಮೆ ಮಾಡಿಕೊಂಡನು.

(ಶ್ರೀ–ಪುಟ ೨೯೭)


೮. ಸ್ತ್ರೀಯರ ಒಂದೊಂದು ಅಂಗದ ಸೌಂದರ್ಯಾತಿಶಯದಿಂದಲೇ ಸುಂದರಿ ಎಂದು ಪರಿಗಣಿಸುವ ಪರಿಪಾಟವುಂಟು. ಕೋಮಲಹಸ್ತೆ, ಚಂದ್ರವದನೆ, ಚಂಪಕನಾಸಿಕೆ ಸುದತಿ ಇತ್ಯಾದಿ. ನಿತಂಬ ಸೌಂದರ್ಯದಿಂದ ಪ್ರಕಟವಾದವಳು ನಿತಂಬನೀ. ಹೀಗೆ ಸ್ತ್ರೀ ದೇಹಾಂಗಗಳೇ ಸ್ತ್ರೀ ಸೌಂದರ್ಯ ಸೂಚಕಗಳಾಗಿವೆ.

(ಪೋ–ಪುಟ ३೯३)

ಟಿಪ್ಪಣಿ-೯ : ಅಧ್ಯಗ್ರ್ಯಾಧಾವಾಹನಿಕಂ ಹರಣಂ ಸ್ತ್ರೀಧನಂ ಸ್ಮೃತಂ ಎಂಬ ಸ್ಮೃತಿ ವಾಕ್ಯದಂತೆ ಅಗ್ನಿಸಾಕ್ಷಿಯಾಗಿ ಕನ್ಯೆಯನ್ನು ವರನಿಗೆ ಧಾರೆಯೆರೆಯುವುವಂದು ಧನಕನಕ ವಸ್ತು ವಾಹನಾದಿಗಳೇ ಮೊದಲಾದ ಬಹು ಬೆಲೆಬಾಳುವ ವಸ್ತುಗಳನ್ನು ತಂದೆಯು ತನ್ನ ಮಗಳಿಗೆ ಬಳುವಳಿಯಾಗಿ ಸ್ತ್ರೀಧನವೆಂದು ಒಪ್ಪಿಸಿಕೊಡುವುದಕ್ಕೆ ಹರಣವೆಂಬ ಹೆಸರು. 'ಯೌತಕಾದಿ ತಂ ಯದ್ದೇಯಂ ಸುದಾಯೋ ಹರಣಂ ಚ ತತಃ' ಎಂಬ ಕೋಶವಚನದಂತೆ ವಿವಾಹ ಕಾಲದಲ್ಲಿ ಮಾತಾಪಿತೃಗಳು ತಮ್ಮ ಮಗಳು ಅಳಿಯ ಇವರಿಗೆ ಬಳುವಳಿಯಾಗಿ ಕೊಡುವ ವಿವಿಧ ಬೆಲೆಯುಳ್ಳ ವಸ್ತುಗಳಿಗೆ ಹರಣವೆಂಬ ಹೆಸರು.

(ಋ-ಪುಟ ೨೧೦)

ಯಂತ್ರಾರಾಧನೆ (ಶ್ಲೋಕ ೮೧)



ಯಂತ್ರ ರಚನೆ : ಚಿತ್ರದಲ್ಲಿರುವಂತೆ ಸ್ವಲ್ಪಮಟ್ಟಿಗೆ ದ್ರವಿಡಾಕ್ಷರ ಹೋಲುವ ರೀತಿಯ ವೃತ್ತ ಅರೆವೃತ್ತ ಗೆರೆಗಳ ನಕ್ಷೆಯನ್ನು ಚಿನ್ನದ ತಗಡಿನಲ್ಲಿ ಬರೆದು ಅದರಲ್ಲಿ ಹ್ರೀಂ ಬೀಜಾಕ್ಷರವನ್ನು ಬರೆಯಬೇಕು.

ಪೂಜೆ : ಲಲಿತಾ ಅಷ್ಟೋತ್ತರ ಕುಂಕುಮಾರ್ಚನೆಯನ್ನು ಮಾಡಬೇಕು.

ನೈವೇದ್ಯ : ಬೆಲ್ಲದ ಪಾಯಸ, ಜೇನುತುಪ್ಪ, ಉದ್ದಿನವಡೆ.

ಜಪ : ಆಗ್ನೇಯ ದಿಕ್ಕಿಗೆ ಅಭಿಮುಖವಾಗಿ ಕೂತು ೧೬ ದಿನಗಳ ಕಾಲ ಪ್ರತಿನಿತ್ಯ ೧೦೦೦ ಬಾರಿ ಈ ಶ್ಲೋಕವನ್ನು ಪಠಿಸಬೇಕು.

ಫಲ : ಅಗ್ನಿಸ್ತಂಭನ ಸಿದ್ಧಿ.

ಶ್ಲೋಕ–೮೨

ದೇವಿಯ ತೊಡೆಗಳ ವರ್ಣನೆ

ಕರೀಂದ್ರಾಣಾಂ [1]ಶುಂಡಾನ್ ಕನಕಕದಲೀಕಾಂಡಪಟಲೀಮ್
ಉಭಾಭ್ಯಾಮೂರುಭ್ಯಾಮುಭಯಮಪಿ ನಿರ್ಜಿತ್ಯ [2]ಭವತಿ
ಸುವೃತ್ತಾಭ್ಯಾಂ ಪತ್ಯುಃ ಪ್ರಣತಿಕಠಿನಾಭ್ಯಾಂ ಗಿರಿಸುತೇ
[3]ವಿಧಿಜ್ಞೇ ಜಾನುಭ್ಯಾಂ ವಿಬುಧಕರಿಕುಂಭ[4]ದ್ವಯಮಸಿ ॥ ೮೨ ॥

ಪಾಠಾಂತರ

೧. (ಶುಂಡಾನ್) = ಶುಂಡಾಃ (ಸು) ೨. (ಭವತೀ) = ಭವತಿ (ಸು)
೩. (ವಿಧಿಜ್ಞೇ) = ವಿಜಿಗ್ಯೇ = ವಿಜಿಜ್ಞೇ (ಸು) ೪. (ದ್ವಯಮಪಿ) = ದ್ವಯಮಸಿ (ಸು)

ಪದವಿಭಾಗ

(ಕರೀಂದ್ರಾಣಾಂ) = ಕರಿ + ಇಂದ್ರಾಣಾಂ, ಶುಂಡಾನ್, ಕನಕದಲೀಕಾಂಡ ಪಟಲೀಂ (ಉಭಾಭ್ಯಾಮೂರುಭ್ಯಾಮುಭಯಮಪಿ) = ಉಭಾಭ್ಯಾಮ್+ಊರುಭ್ಯಾಂ + ಉಭಯಮ್ + ಅಪಿ, ನಿರ್ಜಿತ್ಯ, ಭವತಿ, ಸುವೃತ್ತಾಭ್ಯಾಂ, ಪತ್ಯುಃ, ಪ್ರಣತಿ ಕನಾಭ್ಯಾಂ, ಗಿರಿಸುತೇ, ವಿಧಿಜ್ಞೇ, ಜಾನುಭ್ಯಾಂ, (ವಿಬುಧಕರಿಕುಂಭದ್ವಯುಮಸಿ) = ವಿಬುಧಕರಿಕುಂಭದ್ವಯಂ + ಅಸಿ.

ಅನ್ವಯಾರ್ಥ

ವಿಧಿಜ್ಞೇ	(ಎಲೈ ಸಕಲ ಪ್ರಾಣಿಗಳ) ಅದೃಷ್ಟವನ್ನು ತಿಳಿದಿರುವವಳೇ (ವೇದಾರ್ಥವಾದ ವಿಧಿಯನ್ನು ತಿಳಿದಿರುವವಳೇ)
ಗಿರಿಸುತೇ	ಎಲೈ ಪಾರ್ವತಿಯೇ
ಭವತಿ	ನೀನು
ಉಭಾಭ್ಯಾಂ	ಈ ಎರಡು
ಊರೂಭ್ಯಾಂ	ತೊಡೆಗಳಿಂದ
ಕರೀಂದ್ರಾಣಾಂ	ಆನೆಗಳ

ಶುಂಡಾನ್	ಸೊಂಡಿಲುಗಳನ್ನೂ
ಕನಕಕದಲೀ	ಚಿನ್ನದ (ಬಣ್ಣದ) ಬಾಳೇ
ಕಾಂಡ ಪಟಲೀ	ಕಂಬಗಳ ಸಮೂಹವನ್ನೂ
ಉಭಯಮಪಿ	ಈ ಎರಡನ್ನೂ
ನಿರ್ಜಿತ್ಯ	ಜಯಿಸಿ
ಸುವೃತ್ತಾಭ್ಯಾಂ	ಬಹಳ ದುಂಡಗಿರುವ (ಮಂಡಿ)
ಪತ್ಯುಃ	ಗಂಡನ
ಪ್ರಣತಿಕಠಿನಾಭ್ಯಾಂ	ನಮಸ್ಕಾರದಿಂದ–ಒರಟಾದ
ಜಾನುಭ್ಯಾಂ	ಎರಡು ಮುಡಿಗಳಿಂದಲೂ
ವಿಬುಧಕರಿಕುಂಭದ್ವಯಂ	ದೇವತೆಗಳ ಆನೆಯ (ಐರಾವತದ) ನೆತ್ತಿಯಲ್ಲಿರುವ ಎರಡು ಕುಂಭ ಸ್ಥಳಗಳನ್ನು
ನಿರ್ಜಿತ್ಯ	ಜಯಿಸಿ
ಅಸಿ	ಪ್ರಕಾಶಿಸುತ್ತಾ ಇದ್ದೀಯೆ

ತಾತ್ಪರ್ಯ

ಕವಿ ಈ ಶ್ಲೋಕದಲ್ಲಿ ದೇವಿಯ ತೊಡೆಗಳನ್ನು ಮತ್ತು ಮಂಡಿಗಳನ್ನು ವರ್ಣಿಸುತ್ತಾನೆ:

ಪತಿಚರಣ ಸೇವೆಯನ್ನು ಪ್ರತಿದಿನವೂ ಮಾಡಬೇಕೆಂದು ಇರುವ ವಿಧಿಯನ್ನು ತಿಳಿದಿರುವ ಎಲೈ ಪಾರ್ವತಿಯೇ, ನೀನು ನಿನ್ನ ತೊಡೆಗಳಿಂದ ಮದ್ದಾನೆಗಳ ಸೊಂಡಿಲಗಳನ್ನೂ ಚಿನ್ನದ ಬಣ್ಣದ ಬಾಳೇ ಕಂಬಗಳನ್ನೂ ಜಯಿಸಿರುವೆ ಮತ್ತು ನಿತ್ಯದಲ್ಲೂ ಪರಮೇಶ್ವರನನ್ನು ಕುರಿತು ನೆಲದ ಮೇಲೆ ಬಹಳ ದುಂಡಾಗಿರುವ ಮಂಡಿಯೂರಿ ನಮಸ್ಕಾರ ಮಾಡುವುದರಿಂದ ಬಹಳ ಗಟ್ಟಿಯಾದ ಎರಡು ಮಂಡಿಗಳಿಂದ ಐರಾವತದ ಕುಂಭಸ್ಥಲಗಳನ್ನು ಜಯಿಸಿದವಳಾಗಿದ್ದೀಯೆ. ಹೀಗೆ ಸುಂದರವಾದ ಅಂಗಾಂಗಗಳಿಂದ ಸುಂದರಿ ಎನಿಸಿರುವೆ. (K).

ಪದ್ಯಾನುವಾದ

ಹೇ ಗಿರಿಸುತೇ! ವೇದವಿಧಿಗಳನು ಬಲ್ಲವಳೆ!
ಉತ್ತಮೋತ್ತಮವಾದ ಆನೆಗಳ ಸೊಂಡಿಲನು
ಬಂಗಾರದಿಂದಾದ ಬಾಳೆಕಂಬವನು ನಿನ್ನೆರಡು ತೊಡೆಯಿಂದ ಗೆಲುತ,
ಮಂಡಿಯೂರುತ ಮಂಡೆಯನು ಬಾಗಿಸುತ ಪತಿಗೆ
ನಿತ್ಯ ನಮಿಸುತ್ತ ಬಲು ಕಠಿನತೆಯನಾಂತಿರುವ
ಗುಂಡುಮಂಡಿಗಳಿಂದ ದಿಗ್ಗಜದ ಕುಂಭದ್ವಯವ ಗೆಲ್ಲುತಿದ್ದೆ ॥ ೮೨ ॥

ಟಿಪ್ಪಣಿಗಳು

೧. **ವಿಧಿಜ್ಞೇ**

(ವೇದಾರ್ಥವಾದ ವಿಧಿಯನ್ನು ತಿಳಿದಿರುವವಳೇ): ಸರ್ವಜ್ಞಳು ಅಥವಾ ವೇದಾರ್ಥವನ್ನು ಅನುಷ್ಠಾನ ಮಾಡುವವಳು ಎಂದು ಈ ಪದದ ಅರ್ಥ. ಆದ್ದರಿಂದ ಪ್ರತಿದಿನವೂ ಪತಿಗೆ ನಮಸ್ಕಾರ ಮಾಡುವುದು ವಿಧಿವಿಹಿತವಾಗಿದೆಯೆಂದು ಆಚರಿಸಲ್ಪಟ್ಟಿದೆಯೇ ಹೊರತು ಪತಿಯಾದ ಪರಮೇಶ್ವರನ ಹೆಚ್ಚುಗಾರಿಕೆಯನ್ನು ಅನುಸರಿಸಿ ಅಲ್ಲವೆಂಬುದಾಗಿದೆ.

(ಶೇ–ಪುಟ ೨೩೯)

೨. ಲಲಿತಾ ಸಹಸ್ರನಾಮದಲ್ಲಿ ದೇವಿಯ ಊರು (ತೊಡೆ) ವರ್ಣನೆ ಹೀಗಿದೆ (ಶ್ಲೋಕ ೧೭ ನಾಮ ೩೯) **ಕಾಮೇಶಜ್ಞಾತ ಸೌಭಾಗ್ಯ ಮಾರ್ದವೋರುದ್ವಯಾನ್ವಿತಾ (ತನ್ನ ಪತಿಯಾದ ಕಾಮೇಶನಿಗೆ ಮಾತ್ರ ಮಾರ್ದವ ಸುಖದ ಸೌಭಾಗ್ಯವನ್ನು ಉಣಿಸಿದ ತೊಡೆಗಳುಳ್ಳವಳು)** ದಾರುಕಾಸುರನೆಂಬ ರಾಕ್ಷಸನನ್ನು ಕೊಂದ ಕಾಳಿಕಾ ಸ್ವರೂಪದ ಶ್ರೀ ದೇವಿಯು ಶಿಶುರೂಪದ ಕಾಮೇಶನನ್ನು (ಶಿವನನ್ನು) ತೊಡೆಗಳ ಮೇಲೆ ಮಲಗಿಸಿಕೊಂಡು ಹಾಲುಣಿಸಿದಳು ಆಗ ಅವನಿಗೆ ದೇವಿಯ ಮೃದುವಾದ ತೊಡೆಗಳ ಸೌಭಾಗ್ಯದ ಅನುಭವವುಂಟಾಯಿತು.)

(ಲ–ಕೂ ಪುಟ ೯೦)


೩. ತೊಡೆಯ ಹಿರಿಮೆ ದೊಡ್ಡದು. ಸೌಂದರ್ಯದ ಖನಿ ಉರ್ವಶಿ ಹುಟ್ಟಿದ್ದು ನಾರಾಯಣನ ತೊಡೆಯಿಂದ. ಆದ್ದರಿಂದಲೇ ಅವಳನ್ನು ಊರ್ವಶಿ ಎಂದು ಕರೆದರು. ತಮ್ಮ ತೊಡೆಗಳಿಂದ ನರನಾರಾಯಣರು ಊರ್ವಶಿಯನ್ನಷ್ಟೆ ಅಲ್ಲದೆ ಇತರ ಅಪ್ಸರೆಯರನ್ನು ಸೃಷ್ಟಿಸಿದರು. ರಂಭೆ, ಮೇನಕೆ ತಿಲೋತ್ತಮೆ ಪುಷ್ಪಗಂಧಿ, ಸುಕೇಳಜ, ಮಹಾಶ್ವೇತಾ, ಮನೋರಮಾ, ಪ್ರಮದ್ವರಾ, ಚಾರುಹಾಸಿನೀ, ಸಂಗೀತಜ್ಞ ಘೃತಾಚೀ, ಚಂದ್ರಪ್ರಭ ಕೋಕಿಲ ಭಾಷಣೀ, ಅಂಬುಜಾಕ್ಷೀ, ವಿದ್ಯುನ್ಮಾಲಾ, ಕಾಂಚನಮಾಲಿನೀ ಮೊದಲಾದ ಅಪ್ಸರೆಯರೆಲ್ಲರ ಊರು ಸೌಂದರ್ಯ ಮಹತ್ವ ಅತಿಶಯವಾದುದು.

(ಪ–ಪುಟ ೧೩೪)

೪.   ಸರ್ವೇಶ್ವರಿಯ ಊರು ಜಾನುಗಳನ್ನು ಆನೆಯ ಸೊಂಡಿಲು ಬಾಳೆಯ ಕಂಬದ ಹಾಗೆ ಎಂದು ವರ್ಣಿಸಿರುವುದರಿಂದ ಉಪಮಾಲಂಕಾರವಿದೆ.

(ಜ-ಪು ೯೬)

ಯಂತ್ರಾರಾಧನೆ (ಶ್ಲೋಕ ೮೨)



ಯಂತ್ರ ರಚನೆ : ಈ ಯಂತ್ರವನ್ನು ಭೂರ್ಜಪತ್ರೆಯಲ್ಲಿ ಬರೆಯಬೇಕು. ಎರಡು ಸಮಭುಜ ತ್ರಿಕೋಣಗಳು ಸೇರಿ ಷಟ್ಕೋಣಗಳಾಗುವಂತೆ ಅದರ ತುದಿಗಳಲ್ಲಿ ತ್ರಿಶೂಲಗಳಿರುವಂತೆ ಬರೆಯಬೇಕು. ಮೇಲಿನ

೩

ತ್ರಿಕೋಣಗಳಲ್ಲಿ ಹಂ ದುಂ ಲಂ ಬೀಜಾಕ್ಷರಗಳನ್ನೂ ಕೆಳಗಿನ ೩ ತ್ರಿಕೋಣಗಳಲ್ಲಿ ಸಂ ಯಂ ಮಂ ಎಂಬ ಬೀಜಾಕ್ಷರಗಳನ್ನು ಮಧ್ಯಭಾಗದಲ್ಲಿ ಓಂ ಹ್ರೀಂ ಬೀಜಾಕ್ಷರಗಳನ್ನು ಒಂದರ ಕೆಳಗೆ ಒಂದನ್ನು ಬರೆಯಬೇಕು.

ಪೂಜೆ : ಹೀಗೆ ಬರೆದ ಯಂತ್ರವನ್ನು ಪಾದರಕ್ಷೆಯಲ್ಲಿಟ್ಟು ಪೂಜಿಸಬೇಕು ಲಲಿತಾ ತ್ರಿಶತೀಯೊಂದಿಗೆ ಕುಂಕುಮಾರ್ಚನೆ ಮಾಡಬೇಕು.

ನೈವೇದ್ಯ : ತೆಂಗಿನಕಾಯಿ, ಬಾಳೆಹಣ್ಣು, ಜೇನುತುಪ್ಪ.

ಜಪ : ೪೦ ದಿನಗಳ ಕಾಲ ಪ್ರತಿದಿನ ೧೦೦೦ ಬಾರಿ ಜಪಿಸಬೇಕು. ಅನಂತರ ಪಾದರಕ್ಷೆಯನ್ನು ಧರಿಸಬೇಕು.

ಫಲ : ಜಲಸ್ತಂಭನ ವಿದ್ಯಾ ಸಿದ್ಧಿ

ಶ್ಲೋಕ-೮೩

ದೇವಿಯ ಮೊಣಕಾಲುಗಳ ವರ್ಣನೆ

[೧]ಪರಾಜೇತುಂ ರುದ್ರಂ ದ್ವಿಗುಣಶರಗರ್ಭೌ ಗಿರಿಸುತೇ
ನಿಷಂಗೌ ಜಂಘೇ ತೇ ವಿಷಮವಿಶಿಖೋ ಬಾಢಮಕೃತ ।
ಯದಗ್ರೇ ದೃಶ್ಯಂತೇ ದಶಶರಫಲಾಃ ಪಾದಯುಗಲೀ–
ನಖಾಗ್ರಚ್ಛದ್ಮಾನಸ್ಸುರಮಕುಟ[೨]ಶಾಣ್ಯೈಕನಿಶಿತಾಃ ॥ ೮೩ ॥

ಪಾಠಾಂತರ

೧. ಪರಾಜೇತುಂ = ಪುರಾಜೇತುಂ (ತು)
೨. (ಶಾಣ್ಯೈಕನಿಶಿತಾಃ) = ಶಾಣೌಘನಿಶಿತಾಃ (ಸು)

ಪದವಿಭಾಗ

ಪರಾಜೇತುಂ, ರುದ್ರಂ, ದ್ವಿಗುಣಶರಗರ್ಭೌ, ಗಿರಿಸುತೇ, ನಿಷಂಗೌ, ಜಂಘೇ, ತೇ, (ವಿಷಮವಿಶಿಖೋ) = ವಿಷಮವಿಶಿಖಃ, (ಬಾಢಮಕೃತ) = ಬಾಢಮ್ + ಅಕೃತ, (ಯದಗ್ರೇ) = ಯತ್ + ಅಗ್ರೇ, ದೃಶ್ಯಂತೇ, ದಶಶರ ಫಲಾಃ, ಪಾದಯುಗಲೀ, (ನಖಾಗ್ರಚ್ಛದ್ಮಾನಃ) ನಖ + ಅಗ್ರಃ + ಛದ್ಮಾನಃ, (ಸುರಮಕುಟಶಾಣ್ಯೈಕನಿಶಿತಾಃ) = ಸುರಮಕುಟಶಾಣಿ + ಏಕನಿಶಿತಾಃ

ಅನ್ವಯಾರ್ಥ

(ಹೇ) ಗಿರಿಸುತೇ	(ಎಲೈ) ಹಿಮವಂತನ ಮಗಳೇ
ವಿಷಮ ವಿಶಿಖಃ	(ಬೆಸಸಂಖ್ಯೆಯ ಬಾಣಗಳುಳ್ಳವನು.) (ಮನ್ಮಥನು)
ರುದ್ರಂ	ಈಶ್ವರನನ್ನು
ಪರಾಜೇತುಂ	ಜಯಿಸುವುದಕ್ಕೋಸ್ಕರ (ಸೋಲಿಸು)
ದ್ವಿಗುಣ ಶರಗರ್ಭೌ	ಇಮ್ಮಡಿಯಾದ (ಹತ್ತು) ಬಾಣಗಳೇ ಒಳಗೆ ಉಳ್ಳ
ನಿಷಂಗೌ	ಬತ್ತಳಿಕೆಗಳನ್ನಾಗಿ (೨ ಬಾಣದ ಚೀಲಗಳನ್ನಾಗಿ)

ತೇ	ನಿನ್ನ
ಜಂಘೇ	ಮೊಣಕಾಲುಗಳನ್ನು
ಅಕೃತ	ಮಾಡಿದನು
ಬಾಢಂ	ನಿಶ್ಚಯ !
ಯದಗ್ರೇ	ಯಾವ ಬತ್ತಳಿಕೆಗಳ ತುದಿಯಲ್ಲಿ
ಪಾದಯುಗಲೀ	ಎರಡು ಪಾದಗಳ
ನಖಾಗ್ರಚ್ಛದ್ಮಾನಃ	ಉಗುರುಗಳ ಕೊನೆಗಳು ಎಂಬ-ನೆವವುಳ್ಳ
ಸುರಮಕುಟ	ಇಂದ್ರಾದಿದೇವತೆಗಳ-ಕಿರೀಟಗಳೆಂಬ
ಶಾಣೈಕನಿಶಿತಾಃ	ಸಾಣೇಕಲ್ಲುಗಳಲ್ಲಿ ಮುಖ ಹರಿತಗಳಾದ
ದಶಶರಫಲಾಃ	ಹತ್ತಾದ ಬಾಣಗಳ ತುದಿಗಳು
ದೃಶ್ಯಂತೇ	ಕಾಣಲ್ಪಡುತ್ತಿವೆ (ಗೋಚರವಾಗುತ್ತವೆ)

ತಾತ್ಪರ್ಯ

ಎಲೈ ಪಾರ್ವತಿಯೇ ಐದೇ ಐದು ಬಾಣಗಳುಳ್ಳ ಮನ್ಮಥನು ಈಶ್ವರನನ್ನು ಜಯಿಸುವುದಕ್ಕಾಗಿ ನಿನ್ನ ಮೊಣಕಾಲುಗಳೆರಡನ್ನೂ ಒಂದಕ್ಕೆರಡಾದ ಅಂದರೆ ಹತ್ತು ಬಾಣಗಳುಳ್ಳ ಬತ್ತಳಿಕೆಗಳನ್ನಾಗಿ ಮಾಡಿಕೊಂಡನೆಂದು ತಿಳಿಯುತ್ತದೆ. ಇದು ನಿಜವು. ಯಾವ ಮೊಣಕಾಲುಗಳ ಅಗ್ರಭಾಗಗಳಲ್ಲಿ ನಮಸ್ಕಾರ ಮಾಡುತ್ತಿರುವ ದೇವತೆಗಳ ಕಿರೀಟಗಳ ಸ್ಪರ್ಶದಿಂದ ಸಾಣೆಗೆ ಕೊಟ್ಟಂತೆ ಹರಿತವಾದ ಉಗುರುಗಳ ನೆವದಿಂದಿರುವ ಹತ್ತು ಬಾಣಗಳು ಕಾಣಲ್ಪಡುತ್ತಿವೆ. ಅಂದರೆ ಇವು ಉಗುರುಗಳಂತೆ ಹರಿತವಾದ ಮನ್ಮಥನ ಬಾಣಗಳೆಂದು ತಾತ್ಪರ್ಯ

ಲೋಕದಲ್ಲಿ ಸಾಧನಗಳು ಕಡಿಮೆಯಾಗಿದ್ದಾಗ ಅಪಜಯವನ್ನು ಹೊಂದಿದವನು ಆ ಶತ್ರುವನ್ನು ಜಯಿಸುವುದಕ್ಕಾಗಿ ಹೇಗೆ ಸಾಧನಗಳನ್ನು ಹೆಚ್ಚಿಸಿಕೊಳ್ಳುವನೋ, ಅದೇ ರೀತಿಯಲ್ಲಿ ಹಿಂದೆ ಈಶ್ವರನಿಂದ ಪರಾಜಯವನ್ನು ಹೊಂದಿದ ಮನ್ಮಥನು, ಹೆಚ್ಚು ಬಾಣಗಳನ್ನು ಸಿದ್ಧಪಡಿಸಿಕೊಂಡು ಈಶ್ವರನ ಮೇಲೆ ಕೈಗೂಡಲು ಬದ್ಧನಾದನೆಂದು ತಾತ್ಪರ್ಯ. (K).

ಪದ್ಯಾನುವಾದ

ಗಿರಿಸುತೇ! ರುದ್ರನು ಗೆಲಲೆಂದು ಪಂಚಶರ-
ನಿಮ್ಮಡಿಯ ಬಾಣಗಳನೊಳಗೊಂಡ ಬತ್ತಳಿಕೆ
ಯೆರಡನತಿಶಯವೆನಿಸೆ ನಿನ್ನ ಜಂಘೆಗಳಿಂದ ನಿರ್ಮಾಣ ಮಾಡಿರುವನು;

ಆ ಜಂಘೆವತಳಿಕೆಯಗ್ರದಲಿ ಕಾಣುತಿವೆ
ಉಗುರುಕೊನೆರೂಹಾಗಿ, ನಮಿತದೇವೇಂದ್ರಾದಿ
ಸುರಮಕುಟಶಾಣೆಯಲಿ ಮಸೆದ ಹತ್ತಂಬುಗಳ ಹೊಳೆಹೊಳೆವ
ಕೂರ್ಮೊನೆಗಳು ॥ ೮೩ ॥

ಟಿಪ್ಪಣಿಗಳು

೧. ಸರ್ವೇಶ್ವರಿಯ ಪಾದಗಳ ಉಗುರುಗಳು ಪಂಚಬಾಣಗಳ ಎರಡು ಮಡಿಯಾದ ಹತ್ತು ಅಂಬುಗಳ ಅಲಗುಗಳು ಎಂಬುದರಿಂದ ಅಪಹ್ನವಾಲಂಕಾರ ಪ್ರಧಾನವಾಗಿದೆ. (ಜ–ಪುಟ ೯೬)

೨. ವಿಷಮ ವಿಶಿಖೋ ಬಾಢಮಕೃತ–ಎಂಬಲ್ಲಿ ಅತಿಶಯೋಕ್ತಿ ಅಲಂಕಾರವಿದೆ. ಏಕೆಂದರೆ ಸಾಮಾನ್ಯವಾದ ಬ್ರಹ್ಮಸೃಷ್ಟಿಗಿಂತಲೂ ವ್ಯತಿರಿಕ್ತವಾದ ಸ್ವರೂಪದಿಂದ ಪ್ರತೀತಿಯು ಉಂಟಾಗುತ್ತದೆ.

(ಶೇ–ಪುಟ ೨೪೩)

೩. ಜಂಘೆಗಳನ್ನು ಈ ಶ್ಲೋಕದಲ್ಲಿ ಬತ್ತಳಿಕೆಗಳ ರೂಪವಾಗಿ ಉತ್ಪ್ರೇಕ್ಷೆ ಮಾಡಲಾಗಿದೆ ಆದಕಾರಣ ಉತ್ಪ್ರೇಕ್ಷಾಲಂಕಾರ ಇಲ್ಲಿದೆ.

(ಶೇ–ಪುಟ ೨೪೨)


೪. ದೇವಿಯ ಜಂಘೆ–ಕಣಕಾಲು–ಪಾದ ಮತ್ತು ಮಂಡಿ ಚಿಪ್ಪಿನ ನಡುವಿನ ಭಾಗ ಕಾಮದೇವನ ಬತ್ತಳಿಕೆ ಬಾಣಗಳ ಕೋಶ ಎಂದು ವರ್ಣಿಸಿದೆ. ಅವನ ವಿಜಯೋತ್ಸವದ ಜೋಕಾಲಿ ತೂಗುಮಣಿ ಎಂದೂ ಅದರಡಿಯ ಚರಣಗಳು ಪದಾನತರಾದ ದೇವತೆಗಳ ಮಣಿಮಯ ಕಿರೀಟಗಳಲ್ಲಿ ಸಾಣೆ ಹಿಡಿದ ಉಗುರುಗಳೆಂಬ ಮೊನಚಾದ ಅಲಗುಗಳೆಂದೂ ವರ್ಣಿಸಿದೆ. ರೂಪಕಾಲಂಕಾರದ ಸುಂದರ ನಿದರ್ಶನ ಈ ಶ್ಲೋಕವಾಗಿದೆ. (ಪು–ಪುಟ ೧೧೭)

೫. ಲಲಿತಾ ಸಹಸ್ರನಾಮದಲ್ಲಿ (ಶ್ಲೋಕ ೧೮ ನಾಮ ೪೧) **ಇಂದ್ರಗೋಪ ಪರಿಕ್ಷಿಪ್ತ ಸ್ಮರತೂಣಾಭ ಜಂಘಿಕಾ** ಎಂದು ಹೇಳಿದೆ. ಇಂದ್ರಗೋಪ (ಅತ್ಯಂತ ಕೆಂಪು ಬಣ್ಣವುಳ್ಳ ಒಂದು ಬಗೆಯ ಹುಳು) ಗಳಿಂದ ಮಾಡಲ್ಪಟ್ಟ ಮನ್ಮಥನ ಬತ್ತಳಿಕೆಯಂತಿರುವ ಜಂಘೆ (ಮೊಣಕಾಲುಗಳುಳ್ಳವಳು (ಮೀನಖಂಡಗಳುಳ್ಳವಳು) (ಲ–ಕೂ ಪುಟ ೯೧)

೬. ಈ ಶ್ಲೋಕದಲ್ಲಿ ಮನ್ಮಥನ ಪಂಚಬಾಣಗಳನ್ನು ಎರಡು ಕೋನಗಳಿಂದ ವಿವರಿಸಲಾಗಿದೆ. ಮನ್ಮಥನು ದೇವಿಯ ಚರಣದಾಸ. ಹರನನ್ನು

ಜಯಿಸಲು ದೇವಿಯಿಂದ ಅನುಗ್ರಹೀತವಾದ ಅರವಿಂದ (ರೂಪ) ಅಶೋಕ (ಸ್ಪರ್ಶ) ಚೂತ (ರಸ) ನವಮಲ್ಲಿಕಾ (ಗಂಧ) ನೀಲೋತ್ಪಲ (ಶಬ್ದ) ಎಂಬ ಮೃದುವಾದ ಪುಷ್ಪಬಾಣಗಳು ಹಾಗೂ ಅದನ್ನಿಡಲು ಒಂದು ಬತ್ತಳಿಕೆ ಮತ್ತೊಂದು ಬತ್ತಳಿಕೆಯಲ್ಲಿ ದೇವತೆಗಳ (ಇಂದ್ರಿಯಗಳ) ಕಿರೀಟದಿಂದಲೇ (ದೇವಿಯ ಚರಣಕ್ಕೆ ನಮಿಸಿದ) ಹರಿತವಾದ ಉಗುರುಗಳು (ಹರಿತವಾದ ಆಯುಧಗಳಂತೆ) ದುಷ್ಟರ ಶಿಕ್ಷೆಗಾಗಿ ಇವೆ. (ರ–ಪುಟ ೯೨)

ಯಂತ್ರಾರಾಧನೆ (ಶ್ಲೋಕ ೮೩)



ಯಂತ್ರ ರಚನೆ : ಚಿನ್ನದ ಯಂತ್ರದಲ್ಲಿ ಸಮಚತುರಶ್ರವನ್ನು (ಚಚ್ಚೌಕ) ಬರೆದು ನಾಲ್ಕು ಮೂಲೆಗಳಲ್ಲಿ ನಾಲ್ಕು ದುಂಡುಗಳನ್ನು ಬರೆಯಬೇಕು. ಚೌಕದ ಒಳಗೆ ಓಂ ಸುಂ ಓಂ ಬೀಜಾಕ್ಷರಗಳನ್ನು ಒಂದರ ಕೆಳಗೆ ಒಂದರಂತೆ ಬರೆಯಬೇಕು.

ಪೂಜೆ : ದಾಸವಾಳದ ಹೂಗಳಿಂದ ಲಲಿತಾ ಸಹಸ್ರನಾಮ ಅರ್ಚನೆ ಮಾಡಬೇಕು.

ನೈವೇದ್ಯ : ಬೆಲ್ಲದ ಪಾಯಸ, ಜೇನುತುಪ್ಪ.

ಜಪ : ೧೨ ದಿನಗಳ ಕಾಲ ಪ್ರತಿದಿನ ೧೦೦೦ ಬಾರಿ ಈ ಶ್ಲೋಕವನ್ನು ಜಪಿಸಬೇಕು.

ಫಲ : **ಗಜತುರಗಸೈನ್ಯ ಸ್ತಂಭನಸಾಮರ್ಥ್ಯ ಸಿದ್ಧಿ.**

ಶ್ಲೋಕ–೮೪

ದೇವಿಯ ಚರಣನುಗ್ರಹ ಪ್ರಾರ್ಥನೆ

ಶ್ರುತೀನಾಂ ಮೂರ್ಧಾನೋ ದಧತಿ ತವ ಯೌ ಶೇಖರತಯಾ
ಮಮಾಪ್ಯೇತೌ ಮಾತಶ್ಶಿರಸಿ ದಯಯಾ ದೇಹಿ ಚರಣೌ ।
ಯಯೋಃ ಪಾದ್ಯಂ ಪಾಥಃ ಪಶುಪತಿಜಟಾಜೂಟತಟಿನೀ
ಯಯೋರ್ಲಾಕ್ಷಾಲಕ್ಷ್ಮೀರರುಣಹರಿಚೂಡಾಮಣಿರುಚಿಃ ॥ ೮೪ ॥

ಪದವಿಭಾಗ

ಶ್ರುತೀನಾಂ, (ಮೂರ್ಧಾನೋ) = ಮೂರ್ಧಾನಃ, ದಧತಿ, ತವ, ಯೌ, ಶೇಖರತಯಾ, (ಮಮಾಪ್ಯೇತೌ) = ಮಮ + ಅಪಿ + ಏತೌ, (ಮಾತಶ್ಶಿರಸಿ) ಮಾತಃ + ಶಿರಸಿ ದಯಯಾ, ದೇಹಿ, ಚರಣೌ, ಯಯೋಃ, ಪಾದ್ಯಂ, ಪಾಥಃ ಪಶುಪತಿಜಟಾಜೂಟತಟನೀ, (ಯಯೋರ್ಲಾಕ್ಷಾಲಕ್ಷ್ಮೀ ರರುಣಹರಿಚೂಡಾಮಣಿರುಚಿಃ) = ಯಯೋಃ + ಲಾಕ್ಷಾಲಕ್ಷ್ಮೀಃ + ಅರುಣಹರಿಚೂಡಾಮಣಿರುಚಿಃ

ಅನ್ವಯಾರ್ಥ

(ಹೇ) ಮಾತಃ	(ಎಲೈ) ತಾಯಿಯೇ,
ತವ	ನಿನ್ನ
ಯೌ	ಯಾವ
ಚರಣೌ	ಎರಡು ಪಾದಗಳನ್ನು
ಶ್ರುತೀನಾಂ ಮೂರ್ಧಾನಃ	ವೇದಗಳ ಶಿರಸ್ಸುಗಳು (ಉಪನಿಷತ್ತೆಂಬ ಸ್ತ್ರೀಯರು)
ಶೇಖರತಯಾ	ಆಭರಣ ರೂಪದಿಂದ
ದಧತಿ	ತಲೆಯಲ್ಲಿ ಇಟ್ಟುಕೊಂಡಿದ್ದಾರೆಯೋ
ಏತೌ ಚರಣೌ	ಈ ಎರಡು ಪಾದಗಳನ್ನು
ಮಮ	ನನ್ನ
ಶಿರಸ್ಯಪಿ	ತಲೆಯ ಮೇಲೆ ಕೂಡ
ದಯಯಾ	ಕೃಪೆಯಿಂದ
ದೇಹಿ	ಇಡು

ಯಯೋಃ	ಯಾವ ಪಾದಗಳಿಗೆ
ಪಾದ್ಯಂ ಪಾಥಃ	ಪಾದಗಳನ್ನು ತೊಳೆಯುವ ನೀರು
ಪಶುಪತಿಃ	ಈಶ್ವರನ
ಜಟಾಜೂಟ ತಟಿನೀ	ಜಡೆಮುಡಿಯಲ್ಲಿರುವ ಗಂಗಾನದಿಯು
	ಆಗಿದೆಯೋ
ಯಯೋಃ	ಯಾವ ಪಾದಗಳಿಗೆ
ಲಾಕ್ಷಾಲಕ್ಷ್ಮೀಃ	ಅರಗಿನರಸದ ಕಾಂತಿಯು
ಅರುಣ	ಕೆಂಪಾದ
ಹರಿಚೂಡಾಮಣಿಯ ರುಚಿಃ	ವಿಷ್ಣುವಿನ ಕಿರೀಟದ ಕಾಂತಿಯು
ಭವತಿ	ಆಗಿರುತ್ತದೆ.

ತಾತ್ಪರ್ಯ

ದೇವಿಯ ಪಾದಗಳ ವರ್ಣನೆ :

ಎಲೈ ದೇವಿಯೇ, ಉಪನಿಷತ್ತುಗಳೆಂಬ ಸ್ತ್ರೀಯರು ಯಾವ ನಿನ್ನ ಪಾದಗಳನ್ನು ಶಿರೋಭೂಷಣವಾಗಿ ಧರಿಸುತ್ತಾರೋ, ಎಲೈ ತಾಯೇ ಅದೇ ನಿನ್ನ ಪಾದಗಳನ್ನು ಕೃಪೆಯಿಂದ ನನ್ನ ತಲೆಯ ಮೇಲೂ ಇರಿಸುವವಳಾಗು.

ಯಾವ ಕಾಲು ತೊಳೆದ ನೀರು ಈಶ್ವರನ ತಲೆಯ ಮೇಲಿರುವ ಗಂಗೆಯಾಗಿಯೂ ಮತ್ತು ಯಾವ ಪಾದಗಳ ಲಾಕ್ಷಾರಸವು ವಿಷ್ಣುವಿಗೆ ಕಿರೀಟದ ಕಾಂತಿಯಾಗಿಯೂ ಪರಿಣಮಿಸಿರುತ್ತದೆಯೇ ಅಂಥಾ ಪಾದಗಳನ್ನು ನನ್ನ ತಲೆಯ ಮೇಲಿಟ್ಟು ನನ್ನನ್ನು ಹರಸು. (ಕ–ಪುಟ ೧೬೮)

ಪದ್ಯಾನುವಾದ

ಎಲೆ ತಾಯೆ, ನಿನ್ನಾವ ಚರಣಯುಗ ವೇದ–
ಶಿರಕಾಗಿಹುದೊ ಭೂಷಣವು, ನಿನ್ನಾವ ಪಾದಗಳ
ತೊಳೆದ ಪಾವನ ಜಲವು ಶಿವನ ಜಡೆಮುಡಿಯಲಿಹ ಗಂಗೆ ತಾನಾಗಿರುವುದೋ
ನಿನ್ನ ಯಾವಲತಿಗೆಯ ಬಣ್ಣಸಿರಿ ಹರಿಯ ಚೂ–
ಡಾಮಣಿಯ ಕಾಂತಿಯನು ಕೆಂಪಾಗಿ ಮಾಡಿಹುದೊ
ಆ ಪಾದಪದ್ಮಯುಗಲವನೆನ್ನ ಶಿರದ ಮೇಲಿರಿಸಮ್ಮ ಕರುಣೆಯಿಂದ ॥ ೮೪ ॥

ಟಿಪ್ಪಣಿಗಳು

೧. ಈ ಶ್ಲೋಕದ ಅಂತರಾರ್ಥ ಹೀಗಿದೆ.

ಪ್ರಪಂಚವನ್ನು ಸೃಷ್ಟಿ ಮಾಡುವವಳಾದ ಸಾದಾಖ್ಯ ಭಗವತಿಯ ಪಾದ ಕಮಲಗಳನ್ನು ಪ್ರಪಂಚದೊಳಗೆ ಸೇರಿದವರಾದ ವಿಷ್ಣು, ಬ್ರಹ್ಮ, ಪಶುಪತಿ, ವೇದಾಂತಗಳು, ಶಿರಸ್ಸಿನಲ್ಲಿ ಧರಿಸುತ್ತಾರೆ. ಭಗವತಿಯ ಪಾದಾಭಿಷೇಕ ಜಲದಿಂದ ಪವಿತ್ರೀಕೃತವಾದ ದೇಹವುಳ್ಳವರಾಗಿ ಆ ಭಗವತಿಯ ಮಹಿಮೆಯಿಂದಲೇ ಆಯಾ ಅಧಿಕಾರ ಸ್ಥಾನಗಳನ್ನು ಪಡೆಯುತ್ತಾರೆ. (ಶೇ-ಪುಟ ೨೪೫)

೨. ಪ್ರಣಯ ಕೋಪವನ್ನು ಶಮನಗೊಳಿಸುವುದಕ್ಕಾಗಿ ಬಾಗಿ ನಮಸ್ಕಾರ ಮಾಡಿದ ಪಶುಪತಿಯ ಜಟಾಜೂಟದಲ್ಲಿರುವ ಗಂಗೆಯು ಪಾದಾಗ್ರದಲ್ಲಿ ಇರುವವಳಾದ್ದರಿಂದ ಎಂಬುದರಿಂದ ಗಂಗೆಯನ್ನು ಪಾದ್ಯಜಲವನ್ನಾಗಿ ಹೇಳಲಾಗಿದೆ.


ಪ್ರತಿ ದಿನವೂ ಪ್ರಾತಃಕಾಲ ಮತ್ತು ಸಂಧ್ಯಾ ಕಾಲಗಳಲ್ಲಿ ಸೇವೆಗಾಗಿ ನಮಸ್ಕಾರ ಮಾಡುವ ವಿಷ್ಣುವಿನ ಕಿರೀಟದಲ್ಲಿ ತೋರಲ್ಪಟ್ಟಿರುವ ಕೌಸ್ತುಭ ಮಣಿಯ ಬಿಳಿಯ ಬಣ್ಣವು ಲಾಕ್ಷಾರಸದ ಮಹಿಮೆಯಿಂದ ಕೆಂಪಗಿದೆ ಎಂದು ತಿಳಿಯಬೇಕು.

(ಶೇ-ಪುಟ ೨೪೪)

೩. ಲಲಿತಾ ಸಹಸ್ರನಾಮದಲ್ಲಿ (ಶ್ಲೋಕ ೬೮ ನಾಮ ೨೮೯) ಶ್ರುತಿ ಸೀಮಂತ ಸಿಂದೂರೀಕೃತ ಪಾದಾಬ್ಜಂ ಧೂಲಿಕಾ ಎಂದು ಹೇಳಿದೆ. ಶ್ರುತಿ ಸೀಮಂತಿನಿಯರೆಂದರೆ ವೇದಾಭಿಮಾನಿ ದೇವತೆಯರು ಶ್ರೀದೇವಿಯ ಪಾದದ ಧೂಳಿಯನ್ನು ಸೀಮಂತ ಪ್ರದೇಶದಲ್ಲಿ ಅಂದರೆ ಬೈತಲೆಯಲ್ಲಿ ಸಿಂಧೂರ (ಚಂದ್ರದ) ತಿಲಕದಂತೆ ಶೃಂಗಾರ ಮಾಡಿಕೊಳ್ಳುತ್ತಾರೆ. ಶ್ರೀದೇವಿಯ ಪಾದಧೂಳು ಅಂತಹ ಮಹಿಮಾತಿಶಯವುಳ್ಳದ್ದು.

(ಲಲಿತಾ ಯಡತೊರೆ ಪುಟ ೧೩೦)

ಯಂತ್ರಾರಾಧನೆ (ಶ್ಲೋಕ ೮೪)



ಯಂತ್ರ ರಚನೆ : ಚಿತ್ರದಲ್ಲಿರುವಂತೆ ೬ ದಳಗಳ ಮಧ್ಯೇ ಸಮಭುಜವಾದ ಎರಡು ತ್ರಿಕೋಣಗಳು ಸೇರಿ ಷಟ್ಕೋಣವಾಗುವಂತೆ ಯಂತ್ರವನ್ನು ಚಿನ್ನದ ರೇಖಿನಲ್ಲಿ ಲಿಖಿಸಬೇಕು ಕೊನೆಯಲ್ಲಿ ವೃತ್ತಾಕಾರ ಬರುವಂತೆ ಬರೆಯಬೇಕು. ಹೊರಾವರಣದಲ್ಲಿ ಸುತ್ತಲೂ ಸಂ ಜೀ ವ ನಿ ಹುಂ ಫಟ್ ಎಂಬ ಬೀಜಾಕ್ಷರಗಳನ್ನು ಒಳಭಾಗದ ೫ ತ್ರಿಕೋಣಗಳಲ್ಲಿ ವೃತ್ತ (ಸೊನ್ನೆ)ಗಳನ್ನು ಬರೆಯಬೇಕು. ಮಧ್ಯಭಾಗದಲ್ಲಿ ಅಂ ಹ್ರೀಂ ಕ್ರೋಂ ಬೀಜಾಕ್ಷರಗಳನ್ನು ಒಂದರ ಕೆಳಗೆ ಒಂದನ್ನು ಬರೆಯಬೇಕು.

ಪೂಜೆ : ಲಲಿತಾ ಸಹಸ್ರನಾಮ ಕುಂಕುಮಾರ್ಚನೆಯನ್ನು ಮಾಡಬೇಕು.

ನೈವೇದ್ಯ : ಕ್ಷೀರ ಪಾಯಸ, ಚಿತ್ರಾನ್ನ, ಜೇನುತುಪ್ಪ.

ಜಪ : ಪೂರ್ವಾಭಿಮುಖವಾಗಿ ಕುಳಿತು ೧ ವರ್ಷ ಪೂರ್ತಿ ಪ್ರತಿದಿನ ೧೦೦೦ ಸಾರಿ ಶ್ಲೋಕವನ್ನು ಜಪಿಸಬೇಕು.

ಫಲ : **ಪರಕಾಯಪ್ರವೇಶ ಶಕ್ತಿ ಲಾಭ.**

ಶ್ಲೋಕ–೮೫

ದೇವಿಯ ಚರಣಗಳಿಗೆ ನಮಸ್ಕಾರ

ನಮೋವಾಕಂ ಬ್ರೂಮೋ ನಯನರಮಣೀಯಾಯ ಪದಯೋಃ
ತವಾಸ್ಮೈ ದ್ವಂದ್ವಾಯ ಸ್ಫುಟರುಚಿರಸಾಲಕ್ತಕವತೇ ।
ಅಸೂಯತ್ಯತ್ಯಂತಂ ಯದಭಿಹನನಾಯ ಸ್ಪೃಹಯತೇ
ಪಶೂನಾಮೀಶಾನಃ ಪ್ರಮದವನಕಂಕೇಲಿತರವೇ ॥ ೮೫ ॥

ಪಾಠಾಂತರ

೧. (ಅಸೂಯತ್ಯತ್ಯಂತಂ) = ಅಸೂಯತ್ಯತ್ಯರ್ಥೈ (ಸು)

ಪದವಿಭಾಗ

(ನಮೋವಾಕಂ) = ನಮಃ + ವಾಕಂ, (ಬ್ರೂಮೋ) = ಬ್ರೂಮಃ ನಯನ ರಮಣೀಯಾಯ, ಪದಯೋಃ, (ತವಾಸ್ಮೈ) = ತವ + ಅಸ್ಮೈ, ದ್ವಂದ್ವಾಯ, (ಸ್ಫುಟರುಚಿರ ಸಾಲಕ್ತಕವತೇ) = ಸ್ಫುಟಿರುಚಿರಸ + ಆಲಕ್ತಕವತೇ (ಅಸೂಯತ್ಯತ್ಯಂತಂ) = ಅಸೂಯತಿ + ಅತ್ಯಂತಂ, (ಯದಭಿಹನನಾಯ) = ಯತ್ + ಅಭಿಹನನಾಯ, ಸ್ಪೃಹಯತೇ, (ಪಶೂನಾಮೀಶಾನಃ) = ಪಶೂನಾಂ + ಈಶಾನಃ, ಪ್ರಮದವನ ಕಂಕೇಲಿತರವೇ,

ಅನ್ವಯಾರ್ಥ

(ಹೇ ಭಗವತೀ)	ಎಲೈ ಪೂಜ್ಯಳಾದ ದೇವಿಯೇ,
ನಯನ ರಮಣೀಯಾಯ	ಕಣ್ಣುಗಳಿಗೆ – ಸೊಗಸಾಗಿರುವ
ಸ್ಫುಟ ರುಚಿರಸಾಲಕ್ತಕವತೇ	(ಸ್ಪುಟ + ರುಚಿಕರಸ + ಅಲಕ್ತಕವರ್ತೆ)= ಸ್ಪಷ್ಟವಾದ – ಕಾಂತಿಯುಳ್ಳ ಅರಗಿನರಸವುಳ್ಳ
(ತವ) ಅಸ್ಮೈ ಪದಯೋಃ	(ನಿನ್ನ) ಈ ಪಾದಗಳ
ದ್ವಂದ್ವಾಯ	ಯುಗ್ಮಕ್ಕೋಸ್ಕರ
ನಮೋವಾಕಂ	ನಮಸ್ಕಾರವೆಂಬ ಶಬ್ದವನ್ನು
ಬ್ರೂಮಃ	ಹೇಳುತ್ತೇವೆ.

ಪಶೂನಾಂ ಈಶಾನಃ	(ಬ್ರಹ್ಮಾದಿಗಳಿಗೂ) ಪಶುಗಳಿಗೆ ಒಡೆಯನಾದ ಪರಮೇಶ್ವರನು
ಯದಭಿಹನನಾಯ	ಯಾವ ಪಾದತಾಡನಕ್ಕೋಸ್ಕರ
ಸ್ಪೃಹಯತೇ	ಆಸೆ ಪಡುತ್ತಾನೋ
ಪ್ರಮದವನ ಕಂಕೇಲಿತರವೇ	ಸ್ತ್ರೀಯರ ವಿಹಾರಾರ್ಥವಾದ ಉದ್ಯಾನ ದಲ್ಲಿರುವ–ಅಶೋಕವೃಕ್ಷಕ್ಕೋಸ್ಕರ
ಅತ್ಯಂತಂ	ಬಹಳವಾಗಿ
ಅಸೂಯತಿ	ಹೊಟ್ಟೆಕಿಚ್ಚುಪಡುತ್ತಾನೆ.

ತಾತ್ಪರ್ಯ

ಪಾದಗಳ ವರ್ಣನೆ :

ಎಲೈ ದೇವಿಯೇ, ನೋಡುವುದಕ್ಕೆ ಬಹಳ ಮನೋಹರವಾಗಿರುವ ಮತ್ತು ಅರಗಿನರಸದಿಂದ ಲೇಪಿತವಾದ ನಿನ್ನ ಪಾದಗಳಿಗೆ ನಮಸ್ಕಾರ ಮಾಡುತ್ತೇನೆ. ಈ ಪಾದಗಳು ಎಂಥಾದ್ದು ಎಂದರೆ :

ಯಾವ ನಿನ್ನ ಪಾದತಾಡನವನ್ನು ಅಪೇಕ್ಷಿಸುವ ಉದ್ಯಾನವನದ ಅಶೋಕ ವೃಕ್ಷವನ್ನು ಕುರಿತು ಈಶ್ವರನು ಅಸೂಯೆ ಪಡುತ್ತಾನೋ ಮತ್ತು ಆ ಪಾದತಾಡನವನ್ನು ಈಶ್ವರನು ಅಪೇಕ್ಷಿಸುತ್ತಾನೋ ಅಂಥಾ ಪಾದಗಳನ್ನು ನನ್ನ ತಲೆಯ ಮೇಲಿರಿಸು. ದೇವಿಯು ಅಚೇತನವಾದ ವೃಕ್ಷಕ್ಕೂ ತನ್ನ ಪಾದಸ್ಪರ್ಶ ಒಪ್ಪಲಿಲ್ಲವೆಂದು ಹೇಳಿದುದರಿಂದ ದೇವಿಯು ಮಹಾಪತಿವ್ರತೆಯೆಂದು ಹೇಳಿದಂತಾಯಿತು.

(ಕ–ಪುಟ ೧೭೦)

ಪದ್ಯಾನುವಾದ

ಕಣ್ಸವಿಯ ಕಮನೀಯ ಕಾಂತಿಯಿಂದೊಪ್ಪುವಲ್ಲ–
ತಿಗೆಯ ಲೇಪದ ನಿನ್ನ ಚಾರುಚರಣಯುಗಕ್ಕೆ
'ನಮಿಸುವೆವು ನಮಿಸುವೆವು ಹೇ ದೇವಿ' ಎಂದು ನುಡಿಯುತ ನಾವು
ನಲಿಯುತಿಹೆವು;

ಆ ನಿನ್ನ ಮೃದುಪಾದ ತಾಡನದ ಸೌಖ್ಯವನು
ಅನುಭವಿಸಲೆಳಸುವ ವಿಹಾರವನದ ಅಶೋಕ
ವೃಕ್ಷವನು ಕಂಡು ಪಶುಪತಿ ಮತ್ಸರಗ್ರಸ್ತನಾಗುವನು ಬಹಳವಾಗಿ ॥ ೮೫ ॥

ಟಿಪ್ಪಣಿಗಳು

೧. ಸರ್ವೇಶ್ವರಿಯು ಅಶೋಕವೃಕ್ಷಕ್ಕೆ ದೋಹದದರ್ಥವಾಗಿ ಪಾದತಾಡನವನ್ನು ಮಾಡುವಾಗ, ಪ್ರಣಯಕಲಹದ ಸಮಯದಲ್ಲಿ ಶ್ರೀದೇವಿಯ ಪಾದತಾಡನದ ಸೌಖ್ಯವನ್ನು ಅನುಭವಿಸಿದ ಪರಮೇಶ್ವರನು ಅಚೇತನವಾದ ಈ ವೃಕ್ಷಕ್ಕೂ ಶ್ರೀದೇವಿಯ ಪಾದತಾಡನ ಸೌಖ್ಯವುಂಟಾಯಿತಲ್ಲಾ ಎಂದು ಅಸೂಯೆಪಟ್ಟನು. ಇಲ್ಲಿ ಅತಿಶಯೋಕ್ತಿ ಅಲಂಕಾರವಿದೆ.

(ಜ–ಪುಟ ೯೮)

೨. 'ಅಶೋಕಶ್ಚರಣಾಹತವ್ಯಕ್ತಿಪುಷ್ಪಃ' ಎಂಬ ಉಕ್ತಿಯ ಅಶೋಕವೃಕ್ಷವು ಸುಂದರಸ್ತ್ರೀಯರ ಪಾದತಾಡನದಿಂದ ಸಂತೋಷಗೊಂಡು ಹೂ ಬಿಡುವುದು ಎಂದು ಕವಿಸಮಯದಿಂದ ತಿಳಿಯುತ್ತದೆ. ಇದಕ್ಕೆ 'ದೋಹದ ಕ್ರಿಯೆ' ಎನ್ನುತ್ತಾರೆ. ಹೀಗೆ ಬೇರೆಬೇರೆ ವೃಕ್ಷಗಳೂ ಕೂಡ ಸ್ತ್ರೀಯರ ಬೇರೆಬೇರೆ ಕ್ರಿಯೆಗಳಿಂದ ತಮ್ಮ ಸಂತಸವನ್ನು ಸೂಚಿಸುವುವು.

(ಗ–ಪುಟ ೯೩)

೩. ಕಂಕೇಲಿವೃಕ್ಷ (ಅಶೋಕ ವೃಕ್ಷವು) ಒಣಗಿದಾಗ ಪದ್ಮಿನೀ ಜಾತಿಯ ಸ್ತ್ರೀ ಒದ್ದರೆ 'ಹೂ ಬಿಡುತ್ತದೆ' ಚಿಗುರುತ್ತದೆ ಎಂಬುದು ಪ್ರತೀತಿ. ದೇವಿಯ ಪಾದತಾಡನಸುಖ ಆ ಮರಕ್ಕೆ ಸಿಕ್ಕಿ ನನಗೆ ಸಿಗಲಿಲ್ಲವಲ್ಲಾ ಎಂದು ಶಿವ ಅಸೂಯೆಗೊಂಡ ಎಂಬ ಮಾತಿನಲ್ಲಿ ಶಿವ ಶಿವೆಯರ ಮಧುರದಾಂಪತ್ಯದ ಸಂರಚನೆ ಇದೆ. (ಕ–೧೭೧)

೪. **ಪಶೂನಾಂ ಈಶಾನಃ** (ಪಶುಪತಿ)

ಶೋಕವಿಲ್ಲದವನು ಅಶೋಕ ಎಂದರೆ ಶಿವನು, ವೀತಶೋಕನು ಪಾಶಮುಕ್ತನು ಎಂದರ್ಥ. ಪಾಶಬದ್ಧಸ್ತಥಾ ಜೀವಃ ಪಾಶಮುಕ್ತಃ ಸದಾಶಿವಃ ಪಾಶಬದ್ಧಂ ಪಶುಃ ಪ್ರೋಕ್ತಂ ಪಾಶಮುಕ್ತಃ ಪಶುಪತಿಃ ಎಂದು ಪಶುಪತಿಯ ಲಕ್ಷಣವನ್ನು ಶಾಸ್ತ್ರ ಗ್ರಂಥದಲ್ಲಿ ಹೇಳಿದೆ

(ತು–ಪುಟ ೪೨೯)

೫. **ನಮೋವಾಕಂ ಬ್ರೂಮಃ**

(ನಮಸ್ಕಾರವೆಂದು ಹೇಳುತ್ತೇನೆ) ನಮಸ್ಕಾರಗಳು ಹಲವು ಬಗೆ–ಶಾರೀರಿಕ, ಮಾನಸಿಕ, ವಾಚಿಕ, ಸಾಷ್ಟಾಂಗ, ಪಂಚಾಂಗ ನಮಸ್ಕಾರಗಳು. ದೈಹಿಕವಾಗಿ ನಮಿಸುವುದು ಶಾರೀರಕ ನಮಸ್ಕಾರ,

ಮನಸ್ಸಿನಲ್ಲೇ ಧ್ಯಾನದಲ್ಲಿ ವಂದಿಸುವುದು ಮಾನಸಿಕ ನಮಸ್ಕಾರ. ಮಾತಿನಲ್ಲಿ ನಮಸ್ಕಾರ ಹೇಳುವುದು ವಾಚಿಕ ನಮಸ್ಕಾರ, ಸಭೆಗಳಲ್ಲಿ ಭಾಷಣಕಾರರು, ಪೂಜ್ಯರು ಬಂದಿದ್ದಾಗ ಪರಮಪೂಜ್ಯ ಸ್ವಾಮೀಜಿ ಅವರ ಪಾದಾರವಿಂದಗಳಿಗೆ ನಮಿಸುತ್ತಾ ಎಂದು ಬಾಯಲ್ಲಿ ಹೇಳಿ ಭಾಷಣ ಮಾಡುತ್ತಾರೆ. ಇದು ವಾಚಕ ನಮಸ್ಕಾರ

(ನಮ್ಮ ಆಚಾರಗಳು–ಪುಟ ೮)

ಯಂತ್ರಾರಾಧನೆ (ಶ್ಲೋಕ–೮೫)

ರಂ	ರಂ
ರಂ	ರಂ
ರಂ	ರಂ

ಯಂತ್ರರಚನೆ : ಚಿನ್ನದ ರೇಖಿನಲ್ಲಿ ಯಂತ್ರ ಬರೆಸಬೇಕು. ಸಮಚತುರಶ್ರ (ಚಚ್ಚೌಕ) ಬರೆದು. ಅದರಮಧ್ಯೆ ಮೇಲಿಂದಕೆಳಕ್ಕೆ ೨ ಸಾಲಿನಲ್ಲಿ ರಂ ರಂ ರಂ ರಂ ರಂ ರಂ ಎಂದು ಬೀಜಾಕ್ಷರವನ್ನು ೬ ಸಲ ಬರೆಯಬೇಕು.

ಪೂಜೆ : ದುರ್ಗಾ ಅಷ್ಟೋತ್ತರ ಮತ್ತು ಲಲಿತಾ ಅಷ್ಟೋತ್ತರ ಕುಂಕುಮಾರ್ಚನೆಗಳನ್ನು ಮಾಡಬೇಕು.

ನೈವೇದ್ಯ : ಹಾಲುಕೀರು ಬೆಲ್ಲದ ಪಾನಕ ಬಾಳೆಹಣ್ಣು

ಜಪ : ಕೆಂಪು ಹೂಗಳಿಂದ ಯಂತ್ರವನ್ನು ಪೂಜಿಸಿ ೧೨ ದಿನಗಳ ಕಾಲ ದಿನಕ್ಕೆ ಸಾವಿರಬಾರಿ ಈ ಶ್ಲೋಕವನ್ನು ಪಠಿಸಬೇಕು.

ಫಲ : **ಭೂತಬಾಧಾ ನಿವೃತ್ತಿ**

ಶ್ಲೋಕ-೮೬

ದೇವಿಯ ಕಾಲಂದುಗೆಗಳ ವರ್ಣನೆ

ಮೃಷಾ ಕೃತ್ವಾ ಗೋತ್ರಸ್ಖಲನಮಥ ವೈಲಕ್ಷ್ಯನಮಿತಂ
ಲಲಾಟೇ ಭರ್ತಾರಂ ಚರಣಕಮಲೇ ತಾಡಯತಿ ತೇ ।
ಚಿರಾದಂತಶ್ಶಲ್ಯಂ [2]ದಹನಕೃತಮು[1]ನ್ಮೂಲಿತವತಾ
ತುಲಾಕೋಟಿಕ್ವಾಣೈಃ ಕಿಲಿಕಿಲಿತಮೀಶಾನರಿಪುಣಾ ॥ ೮೬ ॥

ಪಾಠಾಂತರ

೧. (ಉನ್ಮೂಲಿತವತಾ) = ಉತ್ಕೀಲಿತವತಾ (ಗ)

೨. (ದಹನಕೃತಮುನ್ಮೀಲಿತವತಾ) = ದಹನಕೃತ ಮುನ್ಮೀಲಿತವತಾ (ಗ)

ಪದವಿಭಾಗ

ಮೃಷಾ, ಕೃತ್ವಾ, (ಗೋತ್ರಸ್ಖಲನಮಥ) = ಗೋತ್ರಸ್ಖಲನಂ + ಅಥ, ವೈಲಕ್ಷ್ಯನಮಿತಂ, ಲಲಾಟೇ, ಭರ್ತಾರಂ, ಚರಣಕಮಲೇ, ತಾಡಯತಿ, ತ್ಯೇ (ಚಿರಾದಂತಶ್ಶಲ್ಯಂ) ಚಿರಾತ್+ಅಂತಃಶಲ್ಯಂ, (ದಹನಕೃತಮುನ್ಮೀಲತವತಾ) = ದಹನಕೃತಮ್+ಉನ್ಮೀಲಿತವತಾ, ತುಲಾಕೋಟಿಕ್ವಾಣೈಃ, (ಕಿಲಿಕಿಲಿತಮೀಶಾನರಿಪುಣಾ) = ಕಿಲಿಕಿಲಿತಂ + ಈಶಾನರಿಪುಣಾ

ಅನ್ವಯಾರ್ಥ

(ಹೇ ಭಗವತೀ)	ಎಲ್ಲೈ ಪೂಜ್ಯಳಾದ ದೇವಿಯೇ,
ಮೃಷಾ	ಸುಳ್ಳಸುಳ್ಳಾಗಿ
ಗೋತ್ರಸ್ಖಲನಂ	ಮತ್ತೊಬ್ಬನಾಯಕಿಯ ಹೆಸರನ್ನು
ಕೃತ್ವಾ	ಉಚ್ಚಾರಣೆ ಮಾಡಿ
ಅಥ	ಆಮೇಲೆ
ವೈಲಕ್ಷ್ಯ ನಮಿತಂ	ನಾಚಿಕೆಯಿಂದ-ತಲೆಯನ್ನು ಬಗ್ಗಿಸಿಕೊಂಡಿರುವ
ಭರ್ತಾರಂ	ಗಂಡನನ್ನು
ತೇ	ನಿನ್ನ

ಚರಣಕಮಲೇ	ಪಾದಕಮಲಗಳು
ಲಲಾಟೇ	ಹಣೆಯಲ್ಲಿ
ತಾಡಯತಿ (ಸತಿ)	ಹೊಡೆಯಲಾಗಿ (ಒದೆಯುತ್ತಿರಲಾಗಿ)
ಈಶಾನರಿಪುಣಾ	(ಮನ್ಮಥನಿಂದ) ಶಿವನ ಶತ್ರುವಿನಿಂದ
ಚಿರಾತ್	ಬಹಳಕಾಲಕ್ಕೆ
ದಹನಕೃತಂ	(ಶಿವನ ಕೋಪಾಗ್ನಿಯಿಂದ) ಸುಡಿಸಿಕೊಂಡಿದ್ದರಿಂದಾದ
ಅಂತಶ್ಶಲ್ಯಂ	ಮನಸ್ಸಿನ ಸಂತಾಪವನ್ನು
ಉನ್ಮೂಲಿತವತಾ	ಪರಿಹಾರ ಮಾಡಿಕೊಂಡವನಾಗಿ
ತುಲಾಕೋಟಿ ಕ್ವಾಣೈಃ	ನಿನ್ನ ಕಾಲುಗಡಗದ ತುದಿಗಳಲ್ಲಿರುವ ಸಣ್ಣಸಣ್ಣಗೆಜ್ಜೆಗಳ ಶಬ್ದಗಳಿಂದ
ಕಿಲಿಕಿಲಿತಂ	ಕಿಲಿಕಿಲಿಯೆಂದು ನಕ್ಕಂತೆ ಭಾಸವಾಯಿತು (ಮನ್ಮಥನು ನಕ್ಕನು)

ತಾತ್ಪರ್ಯ

ಎಲೈ ದೇವಿಯೇ, ನಿನ್ನ ಗಂಡನಾದ ಪರಮೇಶ್ವರನು ಮರೆತು ಮತ್ತೊಬ್ಬ ನಾಯಿಕೆಯ ಹೆಸರನ್ನು ಹಿಡಿದು ಕರೆದಕೂಡಲೇ, ಗಾಬರಿಯಿಂದ ತಲೆಯನ್ನು ಬಗ್ಗಿಸಿಕೊಂಡು ಸುಮ್ಮನೆ ಕುಳಿತುಕೊಂಡನು. ಆಗ ನೀನು ಅವನ ಹಣೆಗೆ ಒದೆಯಲು ಮನ್ಮಥನು–ಈಶ್ವರನ ನೇತ್ರಾಗ್ನಿಜ್ವಾಲೆಯಿಂದ ತನಗೆ ತಾಪವಾದ ದಿನದಿಂದ ಇಂದಿನವರೆಗೂ ಹಗೆತನವನ್ನು ಸಾಧಿಸುತ್ತಿದ್ದು, ಈಗ ದೇವಿಯ ಪಾದದ ಒದೆಯು ಈಶ್ವರನ ಹಣೆಯಮೇಲೆ ಬಿದ್ದುದನ್ನು ನೋಡಿ ಈಶ್ವರನಿಗೆ ತಕ್ಕ ಶಿಕ್ಷೆಯಾಯಿತೆಂದು ಕಿಲಕಿಲ ಎಂದು ನಕ್ಕನು. ತಿಳಿಯದವರು ಕಾಲುಗಡಗದ ಗೆಜ್ಜೆಯ ದನಿಯೆಂದು ಹೇಳಿಕೊಳ್ಳುತ್ತಾರೆ (K).

ಪದ್ಯಾನುವಾದ

ನಿನ್ನೊಡನೆ ನಲಿವಂದು ಹೆಸರುತಪ್ಪುತ ಕರೆದು
ತನ್ನ ತಪ್ಪನ್ನರಿತು ದಿಕ್ಕುಗಾಣದೆ ತಲೆಯ
ತಗ್ಗಿಸಿದ ಪತಿಯ ಹಣೆಯನ್ನು ನಿನ್ನ ಚರಣಕಮಲವು, ದೇವಿ, ತಾಡಿಸುತಿರೆ
ದಹನಗೊಂಡಂದಿನಿಂದೊಳಗೆ ಕುದಿಯುತ್ತಿದ್ದ
ಹರವೈರಿಯಿಂದ ಹೊರಹೊಮ್ಮಿತೋ ಗೆಲವುದನಿ
ಯೆನುವಂತೆ ನಿನ್ನನೂಪುರವಲುಗಿ ಘಲಿರುಘಲ್ ಘಲಿರೆನುತ ದನಿಗೈದುವು
॥ ೮೬ ॥

ಟಿಪ್ಪಣಿಗಳು

೧. ತಪ್ಪು ಹೆಸರಿನಲ್ಲಿ ಕರೆದು ಅಪರಾಧವೆಂದು ನಮಸ್ಕಾರ ಮಾಡಿದ ಗಂಡನ ಹಣೆಯನ್ನು ಸರ್ವೇಶ್ವರಿ ಒದೆಯಲಾಗಿ ಆ ಕಾಲಗಡಗದ ಧ್ವನಿಯನ್ನು ಮನ್ಮಥನ ವೀರಧ್ವನಿ ಎಂದು ಹೇಳಿದ್ದರಿಂದ **ಅತಿಶಯೋಕ್ತಿ ಅಲಂಕಾರ**

(ಜ–ಪುಟ ೯೧)

೨. **ಗೋತ್ರಸ್ಖಲನಂ**

(ಹೆಸರು ತಪ್ಪುವಿಕೆ): ನಾಯಿಕೆಯಲ್ಲಿ ಅನುರಾಗವನ್ನು ತೋರಿಸುತ್ತಿರುವ ನಾಯಕನು ಆ ನಾಯಿಕೆಯ ಎದುರಿನಲ್ಲೇ ಪ್ರಮಾದದಿಂದ ಬೇರೆ ನಾಯಿಕೆ (ಪ್ರೇಯಸಿ)ಯಲ್ಲಿ ನೆಟ್ಟ ಮನಸ್ಸುಳ್ಳವನಾಗಿ ಆ ಬೇರೆ ನಾಯಿಕೆಯ ಹೆಸರನ್ನು ಉಚ್ಚರಿಸಿ ಹೇಳುವುದು.

(ಶೇ–ಪುಟ ೨೪೭)

೩. **ತುಲಾಕೋಟಿಕ್ವಾಣೈಃ**

ಕಾಲುಗೆಜ್ಜೆಯ ತುದಿಗಳ ಧ್ವನಿಗಳು ತುಲಾ ಅಂದರೆ ಕಾಲುಗಜ್ಜೆ ಅದರ ಕೋಟಿಗಳು ಎಂದರೆ ಅಗ್ರಭಾಗಗಳ ಅಗ್ರಭಾಗಗಳು ಅಂದರೆ ಅವುಗಳಲ್ಲಿ ಸೇರಿರುವ ಸಣ್ಣಘಂಟೆಗಳು ರತ್ನಗಳು ಮುಂತಾದವು ಎಂದು ತಿಳಿಯಬೇಕು.

೪. **ಕಿಲಿಕಿಲಿತಮ್**

ಕಿಲಿಕಿಲಿ ಎಂದು ಹಾಸ್ಯ ಧ್ವನಿಯುಂಟಾಯಿತು. ಗೆದ್ದವನು ಸೋತವನು ಎದುರಿಗೆ ಕಿಲಿಕಿಲಿ ಎಂದು ಅನುಕರಿಸಿ ಹಾಸ್ಯ ಮಾಡುವುದು ಸಾಮಾನ್ಯ. ಮನ್ಮಥನು ಈಶ್ವರನನ್ನು ನೋಡಿ ಗೇಲಿಮಾಡಿದನು.

(ಶೇ–ಪುಟ ೨೪೮)

೫. **ಉನ್ಮೀಲಿತವತಾ ಪಾಠವಿಚಾರ**

ಈ ಶ್ಲೋಕದಲ್ಲಿ 'ಉನ್ಮೀಲಿತವತಾ' ಎಂಬ ಪಾಠಕ್ಕೆ ಬದಲಾಗಿ ಇತರ ಪ್ರತಿಗಳಲ್ಲಿ 'ಉತ್ಕೀಲಿತವತಾ' ಎಂಬ ಪಾಠಭೇದ ಕಂಡು ಬರುತ್ತವೆ. ಲಕ್ಷ್ಮೀಧರ, ಆನಂದಗಿರಿ ಪದಾರ್ಥಚಂದ್ರಿಕೆ, ಡಿಂಡಿಮ, ಆನಂದಲಹರೀ

ಮೊದಲಾದ ವ್ಯಾಖ್ಯಾನಗಳಲ್ಲಿ ವ್ಯಾಖ್ಯಾನಕಾರರು **ಉನ್ಮೂಲಿತವತಾ** ಎಂಬ ಪಾಠವನ್ನೇ ಅಂಗೀಕರಿಸಿದ್ದಾರೆ. ಇಲ್ಲಿ ಈ ಪಾಠವನ್ನೇ ಇಟ್ಟುಕೊಳ್ಳಲಾಗಿದೆ.

(ಗ–ಪುಟ ೧೧೭)

೬. **ಶಿಂಜಾನಮಣಿ ಮಂಜೀರಮಂಡಿತ ಶ್ರೀ ಪದಾಂಬುಜಾ** (ಶ್ಲೋಕ ೨೦ ನಾಮ ೪೬) ಎಂದು ಲಲಿತಾ ಸಹಸ್ರನಾಮದಲ್ಲಿ ದೇವಿಯ ಕಾಲ್ಗೆಜ್ಜೆಗಳನ್ನು ವರ್ಣಿಸಿದೆ. ಝಣಝಣತ್ಕರಿಸುತ್ತಿರುವ ಮಣಿಮಂಜೀರಗಳಿಂದ (ಮಣಿಗಳಿಂದ ಮಾಡಿದ ಕಾಲಂದಿಗೆಗಳಿಂದ) ಭೂಷಿತವಾದ ಸಿರಿಯಡಿದಾವರೆಗಳುಳ್ಳವಳು).

(ಲ–ಆ–ಪುಟ ೫೬)

ಯಂತ್ರಾರಾಧನೆ (ಶ್ಲೋಕ–೮೬)

ಯಂ
ಯಂ
ಯಂ

ಯಂತ್ರರಚನೆ : ಚಿನ್ನದ ಯಂತ್ರದಲ್ಲಿ ದೀರ್ಘಚತುರಶ್ರವನ್ನು (ಆಯಾಕಾರ) ರಚಿಸಿ, ಅದರಲ್ಲಿ ಮಧ್ಯೆ ಯಂ ಎಂಬ ಬೀಜಾಕ್ಷರವನ್ನು ೩ ಸಲ ಒಂದರಕೆಳಗೆ ಒಂದರಂತೆ ಬರೆಯಬೇಕು

ಪೂಜೆ : ದುರ್ಗಾ ಅಷ್ಟೋತ್ತರ ಮತ್ತು ಲಲಿತಾ ಅಷ್ಟೋತ್ತರಗಳೊಂದಿಗೆ ಕುಂಕುಮಾರ್ಚನೆಯನ್ನು ಮಾಡಬೇಕು.

ನೈವೇದ್ಯ : ಕ್ಷೀರಪಾಯಸ, ತೆಂಗಿನಕಾಯಿ, ಬಾಳೆಹಣ್ಣು, ಜೇನುತುಪ್ಪ

ಜಪ : ಪೂರ್ವಾಭಿಮುಖವಾಗಿ ೨೧ ದಿನಗಳಕಾಲ ದಿನಕ್ಕೆ ೧೦೦೦ ಬಾರಿ ಈ ಶ್ಲೋಕವನ್ನು ಜಪಿಸಬೇಕು. ನೀರು ತುಂಬಿದ ಕಲಶವನ್ನು ಮಂತ್ರಿಸಿ ಅಭಿಷೇಕ ಮಾಡಿಸಿಕೊಳ್ಳಬೇಕು.

ಫಲ : **ಸಮಸ್ತಪಿಶಾಚಬಾಧಾನಿವೃತ್ತಿ**

ಶ್ಲೋಕ ೮೭

ದೇವಿಯ ಪದಕಮಲ ವರ್ಣನೆ

ಹಿಮಾನೀ ಹಂತವ್ಯಂ ಹಿಮಗಿರಿ[೧]ನಿವಾಸೈಕಚತುರೌ
ನಿಶಾಯಾಂ ನಿದ್ರಾಣಂ [೨]ನಿಶಿ ಚರಮಭಾಗೇ ಚ ವಿಶದೌ
[೩]ವರಂ ಲಕ್ಷ್ಮೀಪಾತ್ರಂ [೪]ಶ್ರಿಯಮತಿಸೃಜಂತೌ ಸಮಯಿನಾಂ
ಸರೋಜಂ ತ್ವತ್ಪಾದೌ ಜನನಿ ಜಯತಶ್ಚಿತ್ರಮಿಹ ಕಿಮ್ ॥ ೮೭ ॥

ಪಾಠಾಂತರ

೧. (ನಿವಾಸೈಕ ಚತುರೌ) = ತಟಾಕ್ರಾಂತಿ ಚತುರೌ (ಸು)
೨. (ನಿಶಿ ಚರಮಭಾಗೇ ಚ) = ನಿಶಿ ಚ ಪರಭಾಗೇ ಚ (ಸು)
೩. (ವರಂ) = ಪರಂ (ಸು)
೪. (ಶ್ರಿಯಮತಿ ಸೃಜಂತೌ) = ಶ್ರಿಯಮಪಿ ಸೃಜಂತೌ (ಸು)

ಪದವಿಭಾಗ

ಹಿಮಾನೀ, ಹಂತವ್ಯಂ, (ಹಿಮಗಿರಿನಿವಾಸೈಕಚತುರೌ) = ಹಿಮಗಿರಿನಿವಾಸ + ಏಕಚತುರೌ, ನಿಶಾಯಾಂ, ನಿದ್ರಾಣಂ, ನಿಶಿ, ಚರಮಭಾಗೇ, ಚ, ವಿಶದೌ, ವರಂ, ಲಕ್ಷ್ಮೀಪಾತ್ರಂ, (ಶ್ರಿಯಮತಿಸೃಜಂತೌ) = ಶ್ರಿಯಮ್+ಅತಿಸೃಜಂತೌ, ಸಮಯಿನಾಂ, ಸರೋಜಂ, (ತ್ವತ್ಪಾದೌ) = ತ್ವತ್ + ಪಾದೌ, ಜನನಿ, (ಜಯತಶ್ಚಿತ್ರಮಿಹ) = ಜಯತಃ+ಚಿತ್ರಂ+ಇಹ, ಕಿಮ್.

ಅನ್ವಯಾರ್ಥ

(ಹೇ) ಜನನೀ	(ಎಲೈ) ತಾಯಿಯೇ,
ಹಿಮಗಿರಿನಿವಾಸೈಕ ಚತುರೌ	(ಹಿಮಗಿರಿ+ನಿವಾಸ+ಏಕ+ಚತುರೌ) ಹಿಮಾಲಯದಲ್ಲಿ–ವಾಸ ಮಾಡುವುದರಲ್ಲಿ– ಮುಖ್ಯ–ಜಾಣತನವನ್ನು ಹೊಂದಿರುವ
ನಿಶಿ ಚರಮಭಾಗೇ ಚ	ರಾತ್ರೆಯಲ್ಲೂ – ಬೆಳಗಿನ ಜಾವದಲ್ಲೂ
ವಿಶದೌ	ಪ್ರಸನ್ನವಾಗಿರುವ

ಸಮಯಿನಾಂ	ಸಮಯ ಭಕ್ತರಿಗೆ (ಉಪಾಸಕರಿಗೆ)
ಶ್ರಿಯಮತಿಸೃಜಂತೌ	(ಶ್ರಿಯಂ+ಅತಿ ಸೃಜಂತೌ)=ಐಶ್ವರ್ಯವನ್ನು–ಬಹಳವಾಗಿ ಕೊಡುತ್ತಿರುವ
ತ್ವತ್ಪಾದೌ	ನಿನ್ನ ಪಾದಗಳು
ಹಿಮಾನೀ ಹಂತವ್ಯಂ	ಮಂಜಿನ ಸಮೂಹದಿಂದ – ನಾಶ ಹೊಂದುವುದಕ್ಕೆ ಯೋಗ್ಯವಾದ
ನಿಶಾಯಾಂ	ರಾತ್ರೆಯಲ್ಲಿ
ನಿದ್ರಾಣಂ	ಮೊಗ್ಗಾಗಿರುವ
ವರಂ ಲಕ್ಷ್ಮೀಂ ಪಾತ್ರಂ	ಶ್ರೇಷ್ಠವಾಗಿರುವ ಲಕ್ಷ್ಮೀದೇವಿಗೆ – ವಾಸಸ್ಥಾನವಾದ
ಸರೋಜಂ	ಕಮಲವನ್ನು
ಜಯತಃ	ಜಯಿಸುತ್ತಾ ಇವೆ
ಇಹ ಕಿಂ ಚಿತ್ರಂ	ಈ ವಿಷಯದಲ್ಲಿ ಆಶ್ಚರ್ಯವೇನು?

ತಾತ್ಪರ್ಯ

ಎಲೈ ದೇವಿಯೇ, ನಿರಂತರವಾಗಿ ಹಿಮಾಲಯದಲ್ಲೇ ಇದ್ದುಕೊಂಡು ಹಗಲು, ರಾತ್ರಿ, ಬೆಳಗಿನ ಜಾವಗಳಲ್ಲಿ ಪ್ರಸನ್ನವಾಗಿ, ತನ್ನ ಭಕ್ತರಾದ ಸಮಯೋಪಾಸಕರಿಗೆ ಸಂಪತ್ತನ್ನು ಅಧಿಕವಾಗಿ ಕೊಡುತ್ತಿರುವ ನಿನ್ನ ಪಾದಗಳು ರಾತ್ರಿಯೆಲ್ಲಾ ನಿದ್ರೆ ಹೋಗುವ ಅಂದರೆ ಮೊಗ್ಗಾಗಿ ಬಿಡುವ, ಹಗಲು ಸ್ವಲ್ಪ ಹೊತ್ತು ಮಾತ್ರ ಲಕ್ಷ್ಮಿಗೆ ಪಾತ್ರವಾಗಿರುವ (ಅರಳುವ) ಕಮಲವನ್ನು ಜಯಿಸಿದವು ಎನ್ನುವುದರಲ್ಲಿ ಆಶ್ಚರ್ಯವಿಲ್ಲ. ಜಯಕ್ಕೆ ಬೇಕಾದ ಸಾಮಗ್ರಿಯುಳ್ಳ ಚರಣಗಳು, ಜಯಕ್ಕೆ ಬೇಕಾದ ಸಾಮಗ್ರಿಗಳೊಂದೂ ಇಲ್ಲದ ಕಮಲವನ್ನು ತಿರಸ್ಕರಿಸುವುದು ಅತಿಶಯವಲ್ಲ.

(ಕ–ಪುಟ ೧೭೪)

ಪದ್ಯಾನುವಾದ

ಎಲೆ ತಾಯೆ, ಮಂಜುವೆಟ್ಟವ ಕೊರೆತಕಂಜದೆಯ
ಚರಿಪಚತುರತೆಯುಳ್ಳ, ಹಗಲಿರುಳಲೊಂದೆ ಬಗೆ–
ಯೊಪ್ಪಿರುವ, ಭಕ್ತರಿಗೆ ಹಿರಿಯಸಿರಿಯನು ಕೊಡುವ ನಿನ್ನಡಿಯ ತಾವರೆಗಳು–
ಮಂಜಿಗಂಜುತಸೊರಗಿ ಇರುಳಿನಲಿ ಮರೆದೊರಗಿ
ಬರಿಯ ನೆಲೆವೀಡನಿತೆ ಮಾಲಗುಮಿಗೆನಿಸಿರುವ
ಸರಸಿಯ ಸರೋಜವನು ತಾವು ಗೆಲ್ಲುತ್ತಿಹವು ಸೋಜಿಗವದೇನದರೊಳು
॥ ೮೭ ॥

ಟಿಪ್ಪಣಿಗಳು

೧. **ತ್ವತ್ಪಾದೌ**

(ನಿನ್ನ ಪಾದಕಮಲಗಳು)

ದೇವಿಯ ಪಾದಕಮಲಗಳು ರಾತ್ರೆಯಲ್ಲೂ ಅರಳಿರುತ್ತವೆ ಮತ್ತು ಹಿಮದಲ್ಲೂ ವಾಸಮಾಡುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಭಕ್ತರಿಗೆ ಶ್ರೀಯನ್ನು (ಸಂಪತ್ತನ್ನು) ರಾತ್ರೆಯಲ್ಲಿಯೂ ಕೊಡುತ್ತಾಳೆ. ಪುಷ್ಪಕಮಲವಾದರೋ ರಾತ್ರೆಯಲ್ಲಿ ಮುಚ್ಚಿಕೊಂಡು ಬಿಡುತ್ತವೆ, ಮತ್ತು ಹಿಮದಲ್ಲಿ ನಾಶಹೊಂದುತ್ತವೆ, ಹಾಗೂ ರಾತ್ರಿಯಲ್ಲಿ ತನಗಿದ್ದ ಕಾಂತಿಯನ್ನು (ಶ್ರೀಯನ್ನು) ಕಳೆದುಕೊಳ್ಳುತ್ತವೆ.

(ಕ–ಪುಟ ೧೭೫)

೨. ಸರ್ವೇಶ್ವರಿಯ ಪಾದಕಮಲವು ಮಂಜಿನಲ್ಲಿ ಕೆಡುವುದಿಲ್ಲ. ಇರುಳು ವಿಕಾಸವಾಗಿರುತ್ತದೆ. ಭಕ್ತರಿಗೆ ಲಕ್ಷ್ಮಿಯನ್ನು ಕೊಡುತ್ತದೆ. ಇಂಥ ಪಾದಕಮಲವು ಮಂಜಿನಲ್ಲಿ ಕೆಡುವ, ರಾತ್ರಿ ಮುಕುಳವಾಗುವ (ಮೊಗ್ಗಾಗುವ) ಲಕ್ಷ್ಮಿಗೆ ಸ್ಥಾನಮಾತ್ರವಾದ ಸ್ವಭಾವದ ಕಮಲವನ್ನು ಗೆಲ್ಲುವುದು ಆಶ್ಚರ್ಯವಲ್ಲವೆಂದು ಹೇಳಿದ್ದರಿಂದ **ವ್ಯತಿರೇಕಾಲಂಕಾರ** ಇಲ್ಲಿದೆ.

(ಜ–ಪುಟ ೧೦೦)


೩. ಶ್ರೀಮಾತೆಯ ಪಾದಪದ್ಮಗಳನ್ನು ಸಮಯಾಚಾರಪರಾಯಣರಾದ ಭಕ್ತರು ತಮ್ಮ ಭ್ರೂಮಧ್ಯೆ ಊಹಿಸಿಕೊಳ್ಳುತ್ತಾ ಸಾಧನೆ ಮಾಡುತ್ತಿರುತ್ತಾರೆ. ಬೆಳಗಿನ ಝಾವದಲ್ಲಿ ಬ್ರಾಹ್ಮೀಮುಹೂರ್ತದಲ್ಲಿ ಅವರವರ ಇಷ್ಟದೇವತಾ ಚರಣಗಳನ್ನೋ, ಅವರ ಸದ್ಗುರುವಿನ ಚರಣಗಳನ್ನೋ ಅವರವರ ಊಹೆ ಭಾವನೆಗಳಲ್ಲಿರುವ ದೈವದ ಶ್ರೀ ಚರಣಗಳನ್ನೋ ಹೃದಯ ಸ್ಥಾನದಲ್ಲಿ ಅನಾಹತ ಚಕ್ರದಲ್ಲಿ, ಹಣೆಯ ಭಾಗದಲ್ಲಿರುವ ಅಜ್ಞಾಚಕ್ರ ದಲ್ಲಿಯೂ ಪ್ರತಿಷ್ಠಾಪಿಸಿಕೊಂಡು ಧ್ಯಾನಸ್ಥಿತಿಯಲ್ಲಿ ಯೋಗಸಾಧನೆ ಮಾಡುತ್ತಾರೆ. ಶ್ರೀಮಾತೆಯ ಪಾದಗಳಲ್ಲಿನ ನೂಪುರದನಿ, ಚಿತ್ಕಲೆಗಳು ಸಾಕ್ಷಾತ್ಕರಿಸುತ್ತವೆ.

(ಪ–ಪುಟ ೧೪೯)

೪. ಲಲಿತಾ ಸಹಸ್ರನಾಮದಲ್ಲಿ (ಶ್ಲೋಕ ೧೭ ನಾಮ ೪೫) **"ಪದದ್ವಯ ಪ್ರಭಾಜಾಲ ಪರಾಕೃತ ಸರೋರುಹಾ"** ಎಂದು ಹೇಳಿದೆ. (ತನ್ನ ಪಾದದ್ವಯದ [ಅಂಗಾಲುಗಳ] ಪ್ರಭಾಸಮೂಹದಿಂದ ಕಮಲದ ಕಾಂತಿಯನ್ನು ತಿರಸ್ಕರಿಸುವವಳು.)

(ಲ–ಆ ಪುಟ ೫೬)

ಯಂತ್ರಾರಾಧನೆ (ಶ್ಲೋಕ ೮೭)



ಯಂತ್ರರಚನೆ : ಈ ಯಂತ್ರವನ್ನು ಸ್ಮಶಾನ ಭಸ್ಮದಲ್ಲಿ ಬರೆದು ಪೂಜಿಸಬೇಕು. ಅಧೋಮುಖವಾದ ಸಮಭುಜ ತ್ರಿಕೋಣಕ್ಕೆ ತ್ರಿಕೋಣ ತುದಿಗಳಲ್ಲಿ ೩ ತ್ರಿಶೂಲಗಳನ್ನು ಬರೆಯಬೇಕು. ತ್ರಿಕೋಣದ ನಡುವೆ ಹ್ರೀಂ, ಸರ್ಪ ಸರ್ಪ, ಮಂ ಎಂಬ ಬೀಜಾಕ್ಷರಗಳನ್ನು ಬರೆಯಬೇಕು.

ಪೂಜೆ : ಕಮಲದಳಗಳಿಂದ ಲಲಿತಾ ತ್ರಿಶತೀಯೊಂದಿಗೆ ಅರ್ಚನೆ ಮಾಡಬೇಕು.

ನೈವೇದ್ಯ : ಹಾಲುಕೀರು, ತೆಂಗಿನಕಾಯಿ, ಬಾಳೆಹಣ್ಣು, ಜೇನುತುಪ್ಪ.

ಜಪ : ೧೦ ದಿನಗಳ ಕಾಲ ಪೂಜಿಸಿ ಪ್ರತಿದಿನ ಈ ಶ್ಲೋಕವನ್ನು ೧೦೦೦ ಬಾರಿ ಜಪಿಸಬೇಕು.

ಫಲ : **ಸರ್ಪಾನಯನ ಸಾಮರ್ಥ್ಯ ಲಾಭ.**

ಶ್ಲೋಕ ೮೮

ದೇವಿಯ ಪಾದಾಗ್ರ ವರ್ಣನೆ

ಪದಂ ತೇ [೧]ಕೀರ್ತೀನಾಂ ಪ್ರಪದಮಪದಂ ದೇವಿ ವಿಪದಾಂ
ಕಥಂ ನೀತಂ ಸದ್ಭಿಃ ಕಠಿನಕಮಠೀಕರ್ಪರತುಲಾಮ್ ।
[೨]ಕಥಂ ವಾ [೩]ಬಾಹುಭ್ಯಾಮುಪಯಮನಕಾಲೇ ಪುರಭಿದಾ
ಯದಾದಾಯ ನ್ಯಸ್ತಂ ದೃಷದಿ ದಯಮಾನೇನ ಮನಸಾ ॥ ೮೮ ॥

ಪಾಠಾಂತರ

೧. (ಕೀರ್ತೀನಾಂ) = ಕಾಂತೀನಾಂ (ಸು)
೨. (ಕಥಂ ವಾ) = ಕಥಂಚಿತ್ (ಸು)
೩. (ಬಾಹುಭ್ಯಾಂ) = ಪಾಣಿಭ್ಯಾಂ (ಶೇ)

ಪದವಿಭಾಗ

ಪದಂ, ತೇ, ಕೀರ್ತೀನಾಂ (ಪ್ರಪದಮಪದಂ)= ಪ್ರಮದಂ+ಅಪದಂ, ದೇವಿ, ವಿಪದಾಂ, ಕಥಂ, ನೀತಂ, ಸದ್ಭಿಃ, ಕಠಿನಕಮಠೀಕರ್ಪರ ತುಲಾಮ್, ಕಥಂ, ವಾ, (ಬಾಹುಭ್ಯಾಮುಪಯಮನಕಾಲೇ) = ಬಾಹುಭ್ಯಾಂ + ಉಪಯಮನಕಾಲೇ, ಪುರಭಿದಾ, (ಯದಾದಾಯ) = ಯತ್+ಆದಾಯ, ನ್ಯಸ್ತಂ, ದೃಷದಿ, ದಯಮಾನೇನ, ಮನಸಾ.

ಅನ್ವಯಾರ್ಥ

(ಹೇ) ದೇವಿ	(ಎಲೈ) ತಾಯಿಯೇ
ಕೀರ್ತೀನಾಂ	ಯಶಸ್ಸುಗಳಿಗೆ
ಪದಂ	ಸ್ಥಾನವಾದ
ವಿಪದಾಂ+ಅಪದಂ	ಕಷ್ಟಗಳಿಗೆ (ಗುರಿಯಾಗದೆಯಿರುವ) ಸ್ಥಾನವಲ್ಲದ
ತೇ	ನಿನ್ನ
ಪ್ರಪದಂ	(ಮೇಗಾಲು) ಪಾದಾಗ್ರವು
ಸದ್ಭಿಃ	(ಕವಿಗಳಿಂದ) ಸಜ್ಜನರಿಂದ

ಕಠಿನಕಮಠೀಕರ್ಪರತುಲಾಂ	(ಕಠಿಣ+ಕಮಠೀ+ಕರ್ಪರತುಲಾಂ) = ಒರಟಾದ–ಹೆಣ್ಣು ಆಮೆಯ ಬೆನ್ನು ಮೂಳೆಯ ಸಾಮ್ಯವನ್ನು
ಕಥಂ	ಹೇಗೆ ತಾನೇ
ನೀತಂ	ಹೊಂದಿಸಲ್ಪಟ್ಟಿತು (ಕಂಡೀತು)
ದಯಮಾನೇನ	ದಯೆಯಿಂದ ಕೂಡಿದ
ಮನಸಾ	ಮನಸ್ಸಿನಿಂದ
ಪುರಭಿದಾ	(ಈಶ್ವರನಿಂದ) ಪುರಗಳನ್ನು ನಾಶ ಮಾಡಿದವನಿಂದ
ಉಪಯಮನ ಕಾಲೇ	ವಿವಾಹದ ಕಾಲದಲ್ಲಿ
ಬಾಹುಭ್ಯಾಂ	ಎರಡು ಬಾಹುಗಳಿಂದಲೂ
ಯದಾದಾಯ	ಯಾವ ಪಾದಾಗ್ರವನ್ನು ಹಿಡಿದುಕೊಂಡು
ಕಥಂ ವಾ	ಹೇಗೆ ತಾನೇ (ಮೃದುವಾದ ಅಂಗಾಲಿಗೆ ನೋವನ್ನುಂಟುಮಾಡುವ)
ದೃಷದಿ	ಕಲ್ಲಿನ ಮೇಲೆ
ನ್ಯಸ್ತಂ	ಇಡಲ್ಪಟ್ಟಿತು

ತಾತ್ಪರ್ಯ

ಎಲೈ ದೇವಿಯೇ, ಕೀರ್ತಿಗಳಿಗೆ ಸ್ಥಾನವಾಗಿಯೂ, ವಿಪತ್ತುಗಳನ್ನು ಪರಿಹಾರ ಮಾಡುತ್ತಿರುವುದಾಗಿಯೂ ಇರುವ ನಿನ್ನ ಪಾದಾಗ್ರವನ್ನು ಕವಿಗಳು ಆಮೆಯ ಕಠಿಣವಾದ ಬೆನ್ನಿನ (ಚಿಪ್ಪಿಗೆ) ಓಟೆಗೆ ಹೇಗೆ ಹೋಲಿಸಿದರೋ ನಾನು ಕಾಣೆ. ಮತ್ತು ಪರಮೇಶ್ವರನು ವಿವಾಹ ಕಾಲದಲ್ಲಿ ದೇವಿಯ ಪಾದಾಗ್ರವನ್ನು ತನ್ನ ಎರಡು ಕೈಗಳಿಂದಲೂ ಹಿಡಿದುಕೊಂಡು ಗಂಧದಕಲ್ಲಿನ ಮೇಲೆ ನಿರ್ದಯವಾಗಿ ಹೇಗೆ ಇಟ್ಟನೋ ನಾನು ಕಾಣೆ. (ಈ ಎರಡು ಕೆಲಸಗಳು ಬಹಳ ಅನುಚಿತವಾದವು ವಿವಾಹದಲ್ಲಿ ಲಾಜಾಹೋಮದ ಮಧ್ಯದಲ್ಲಿ ಅಗ್ನಿಕುಂಡದ ವಾಯುವ್ಯ ದಿಕ್ಕಿನಲ್ಲಿ ಇರಿಸಲ್ಪಟ್ಟಿರುವ ಕನ್ಯೆಯ ಬಲದ ತುದಿಗಾಲನ್ನು ವರನು ಎರಡು ಕೈಗಳಿಂದಲೂ ಹಿಡಿದು ಮಂತ್ರ ಹೇಳಿ ಇಡಿಸಬೇಕು ಎಂಬ ಶಾಸ್ತ್ರವಿರುವುದು.)

(ಕ–ಪುಟ ೧೭೬)

ಪದ್ಯಾನುವಾದ

ಹೇ ದೇವಿ, ಕೀರುತಿಗೆ ನೆಲೆವೀಡು ತಾಣವ-
ಲ್ಲಾಪದಕೆ, ಇಂತಪ್ಪ ಆ ನಿನ್ನ ಮುನ್ನಡಿಯ-
ನೆಂತು ಜಾಣರು ಕವಿಗಳಾಮೆಬೆನ್ನಿನ ಗಟ್ಟಿಚಿಪ್ಪಿಗೆಣೆಯೆಂದಿರುವರು;
ಎಂತು ಆ ಮೆಲ್ಲಡಿಯನೆತ್ತಿ ಸಾಣೆಕಲ್ಲ-
ಮೇಲಂದು ನಿನ್ನ ಮದುವೆಯವೇಳೆ ತನ್ನೆರಡು
ಕೈಗಳಿಂದ ಪುರಾರಿ ತುಂಬುದಯೆಮನದವನು ತಾನಿರಿಸೆ ಮನದಂದನು
॥ ೮೮ ॥

ಟಿಪ್ಪಣಿಗಳು

೧. ಸರ್ವೇಶ್ವರಿಯ ಅತಿ ಕೋಮಲವಾದ ಪಾದಕ್ಕೆ ಕಠಿಣವಾದ ಆಮೆಯ ಬೆನ್ನಿನ ಸಾಮ್ಯವು, ಶಿವನ ಕೈಯಿಂದ ವಿವಾಹ ಸಮಯದಲ್ಲಿ ಅಸಿಕಲ್ಲಿನಲ್ಲಿ ಇಟ್ಟಿದ್ದು ಕೂಡದೆಂಬುದರಿಂದ ಅನನ್ವಯಾಲಂಕಾರವೆನಿಸಿಕೊಳ್ಳುತ್ತದೆ.
(ಜ-ಪುಟ ೧೦೦)

೨. ವಿವಾಹ ಸಮಯದಲ್ಲಿ 'ಅಶ್ಮಾರೋಹಣ' ಎಂಬುದೊಂದು ಧಾರ್ಮಿಕ ಕರ್ಮಾಚರಣೆಯು ಇರುವುದು. ಈ ಆಚರಣೆಯಲ್ಲಿ ವರನು ತನ್ನ ಕೈಯಿಂದ ವಧುವಿನ ಕಾಲನ್ನು ಕಲ್ಲಿನ ಮೇಲೆ ಇರಿಸುವನು.
ಪ್ರಧಾನ ಹೋಮವಾದ ಮೇಲೆ ವಧುವನ್ನು ಅಗ್ನಿಗೆ ಉತ್ತರಭಾಗದಲ್ಲಿ 'ಅತಿಷ್ಠೇಮಮ್ ಅಶ್ಮಾನಂ ಅಶ್ಮೇವತ್ತ ಸ್ಥಿರಾಭವ' ಎಂಬ ಮಂತ್ರದಿಂದ ಬಲಗಾಲನ್ನು ಮೊದಲು ಇಡುವಂತೆ ಒಂದು ಕಲ್ಲಿನ ಮೇಲೆ ನಿಲ್ಲಿಸಬೇಕು. ಇದಕ್ಕೆ ಅಶ್ಮಾರೋಹಣವೆಂದು ಹೆಸರು. ಒಂದು ಶುದ್ಧವಾದ ದೊಡ್ಡ ಕಲ್ಲನ್ನು (ವಧುವು ಸುಲಭವಾಗಿ ನಿಲ್ಲುವಷ್ಟು) ಮೊದಲಿಡಿಸಿ, ಅದರ ಮೇಲೆ ನಿಲ್ಲಿಸಬೇಕು.
ಈ ಕಲ್ಲಿನಂತೆ ಸ್ಥಿರವಾಗಿ ನಮ್ಮ ಮನೆಯಲ್ಲಿ ಬಾಳುವಂತಾಗಲಿ ಎಂಬ ಪ್ರಾರ್ಥನೆಗೆ ಸಾಂಕೇತಿಕವಾಗಿ ಕಲ್ಲಿನ ಮೇಲೆ ನಿಲ್ಲಿಸುವುದು ಶಾಸ್ತ್ರ.
(ಸರಳ ವಿವಾಹ: ಪುಟ ೫೪-೫೫)
ಲೇ: ಶ್ರೀಕಂಠಕುಮಾರಸ್ವಾಮಿ

೩. ದೇವಿಯ ಪಾದಾಗ್ರವನ್ನು ಒರಟಾದ ಆಮೆಯ ಬೆನ್ನಿಗೆ ಸದೃಶವಾದುದು ಎಂಬುದಾಗಿ ಹೇಗೆ ವರ್ಣಿಸುತ್ತಾರೆ? ದೇವಿಯ ಪಾದಾಗ್ರವನ್ನು ಒರಟಾದ ಆಮೆಯ ಬೆನ್ನಿನೊಡನೆ ಹೋಲಿಸುವುದು ಮತ್ತು ಶಿವನು ದೇವಿಯ

ಮೃದು ಪಾದಾಗ್ರವನ್ನು ಒರಟಾದ ಕಲ್ಲಿನ ಮೇಲೆ ಸ್ಥಾಪಿಸುವುದು ಯುಕ್ತವಲ್ಲ ಎಂಬುದು ಕೆಲವರ ಅಭಿಪ್ರಾಯವಾಗಿದೆ.

(ಶೇ–ಪುಟ ೨೫೧)

೪. **ದೃಷದಿ**

(ಗುಂಡುಕಲ್ಲಿಗೆ ಆಧಾರವಾದ ಕಠಿಣ ಶಿಲೆಯಲ್ಲಿ ಒರಳುಕಲ್ಲಿನ ಮೇಲೆ) ವಿವಾಹ ಸಮಯದಲ್ಲಿ ಬಹಳ ಕಡೆ ಒರಳು ಕಲ್ಲು ತುಳಿಯುವುದು ಎಂಬ ಆಚಾರದ ಸಂಪ್ರದಾಯವಿದೆ. ಒರಳುಕಲ್ಲು ಮರದಿಂದ ಮಾಡಿರುವುದೂ ಉಂಟು, ಹಿಂದಿನವರು ಚಟ್ನಿಮಾಡಲು, ಅರಿಶಿನ ಮೊದಲಾದುವನ್ನು ಕುಟ್ಟಲು, ರುಬ್ಬಿಕೊಳ್ಳಲು ಒರಳುಕಲ್ಲನ್ನು ಬಳಸುತ್ತಿದ್ದರು. (ಈಗ ಮಿಕ್ಸಿ, ಗ್ರೈಂಡರ್‌ಗಳು ಬಂದು ಒರಳುಕಲ್ಲುಗಳು ಬೀದಿಗೆ ಬಿದ್ದಿವೆ) ವಿವಾಹ ಸಮಯದಲ್ಲಿ ವಧುವಿನ ಪಾದವನ್ನು ವರ ಹಿಡಿದುಕೊಂಡು, ಆಕೆಯ ಕಾಲಿನ ಹೆಬ್ಬೆಟ್ಟನ್ನು ಒರಳುಕಲ್ಲಿನ ಮೇಲಿರಿಸುತ್ತಾ "ಈ ಕಲ್ಲಿನ ದೃಢತ್ವ ನಿನ್ನ ಪಾದಗಳಿಗೆ ಬರಲಿ, ನಿನ್ನ ಪಾದಗಳು ಸದೃಢವಾಗಿ ನನ್ನೊಡನೆ ಜೀವಿತದಲ್ಲಿ ಕಷ್ಟಸುಖಗಳಲ್ಲಿ ಜತೆಯಲ್ಲಿ ನಡೆಯಲಿ" ಎಂದು (ಪುರೋಹಿತರು ಮಂತ್ರಗಳನ್ನು ಹೇಳುತ್ತಿದ್ದರೆ) ಭಾವಿಸುತ್ತಾನೆ.

(ಪ–ಪುಟ ೧೭೨–೧೭೩)

೫. ಲಲಿತಾ ಸಹಸ್ರನಾಮದಲ್ಲಿ (ಶ್ಲೋಕ ೧೮ ನಾಮ ೪೧) "ಕೂರ್ಮಪೃಷ್ಠ ಜಯಿಷ್ಣು ಪ್ರಪದಾನ್ವಿತಾ" (ಆಮೆಯಲ್ಲಿ ಬೆನ್ನಿನ ಆಕೃತಿಯಂತೆ ತುಸು ಉಬ್ಬಿದ ಅತ್ಯಂತ ಸುಂದರವಾದ ಮೇಗಾಲು (ಪಾದದ ಮೇಲ್ಭಾಗ ಉಳ್ಳವಳು) ಸರ್ವೇಶ್ವರಿಯ ಪಾದಗಳು ಅತಿಕೋಮಲವಾದುದು. ಆದರೂ ಪಾದಗಳ ಮೇಲ್ಭಾಗವನ್ನು ಆಮೆಯ ಚಿಪ್ಪಿಗೆ ಹೋಲಿಸುವುದು ಸರಿಯಲ್ಲ ಎಂದು ಈ ಶ್ಲೋಕದಲ್ಲಿ ಹೇಳಲಾಗಿದೆ.

(ಶ್ರೀ–ಪುಟ ૩೦೯)

೬. ಕೆಲವರು ಅಶ್ಮಾರೋಹಣ ಮಂತ್ರವನ್ನು ಹೇಳುವಾಗ ಒರಳುಕಲ್ಲನ್ನು ಬಳಸಿದರೆ ಮತ್ತೆ ಕೆಲವರು ಚಟ್ನಿ ಅರೆಯುವ ಕಲ್ಲನ್ನು ಬಳಸುತ್ತಾರೆ. ರುಬ್ಬುವ ಗುಂಡು, ಅರೆಯುವ ಕಲ್ಲು ಎಂದು ಬೇರೆ ಬೇರೆ ವಧುವಿನ ಕಾಲಿರಿಸುವುದು ಅರೆಯುವ ಕಲ್ಲು ಅಥವಾ ಒರಳು ಕಲ್ಲಿನ ಬಳಕೆ ದೇಶಾಚಾರ ಪದ್ಧತಿಯಂತೆ ಬಳಸುತ್ತಾರೆ.


೭. ಬ್ರಹ್ಮೋಪದೇಶದ ಕಾಲವನ್ನು 'ಉಪನಯನ'ವೆಂದು ಕರೆದರೆ ಇಲ್ಲಿ ವಿವಾಹ ಕಾಲವನ್ನು 'ಉಪಯಮನಕಾಲ'ವೆಂದು ಕರೆಯಲಾಗಿದೆ.

ಅಶ್ಮಾರೋಹಣ ವಿಧಿ ಮದುವೆಯ ಸಂಪ್ರದಾಯವಾಗಿ ಬಹಳ ಹಿಂದಿನಿಂದ ನಡೆದು ಬಂದಿದೆ ಎಂಬುದಕ್ಕೆ ಈ ಶ್ಲೋಕ ಸಾಕ್ಷಿಯಾಗಿದೆ.

೮. ಕೆಲವರು ದೇವಿಯ ಚರಣಗಳನ್ನು ಕಮಲಕ್ಕೆ ಹೋಲಿಸುವುದು ಉಚಿತವಲ್ಲವೆಂದು ೮೭ರಲ್ಲಿ ಪ್ರತಿಪಾದಿಸಿದ್ದಾರೆ. ಇಲ್ಲಿ ಶ್ಲೋಕ ೮೮ರಲ್ಲಿ ದೇವಿಯ ಪಾದಾಗ್ರವನ್ನು ಆಮೆಯ ಬೆನ್ನ ಚಿಪ್ಪಿಗೆ ಹೋಲಿಸುವುದು ಹೀನೋಪಮೆಯ ಪರಾಕಾಷ್ಠೆಯೆಂದಿದ್ದಾರೆ.

(ಪು–ಪುಟ ೧೨೦)

ಯಂತ್ರಾರಾಧನೆ (ಶ್ಲೋಕ ೮೮)



ಯಂತ್ರರಚನೆ: ಚಿನ್ನದಲ್ಲಿ ಅಥವಾ ಬೆಳ್ಳಿ ತಗಡಿನಲ್ಲಿ ಅಧೋಮುಖವಾದ ಸಮಭುಜ ತ್ರಿಕೋಣವನ್ನು ಬರೆದು ತಯಾರಿಸಬೇಕು. ೩ ತ್ರಿಶೂಲಗಳನ್ನು ಸೇರಿಸಬೇಕು. ನಡುವೆ ಹ್ರೀಂ ಬೀಜಾಕ್ಷರವನ್ನು ೩ ಸಲ ಬರೆಯಬೇಕು.

ಪೂಜೆ: ಬತ್ತದ ಹರಳಿನಿಂದ (ಲಾಜಾ) ಲಲಿತಾ ಸಹಸ್ರನಾಮ ಅರ್ಚನೆಯನ್ನು ಮಾಡಬೇಕು.

ನೈವೇದ್ಯ: ಪಾಯಸ, ತೆಂಗಿನಕಾಯಿ, ಬಾಳೆಹಣ್ಣು.

ಜಪ: ೧೫ ದಿನಗಳ ಕಾಲ ಪ್ರತಿದಿನ ೧೦೦೦ ಬಾರಿಯಂತೆ ಈ ಶ್ಲೋಕವನ್ನು ಜಪಿಸಬೇಕು.

ಫಲ: ಮೃಗಾನಯನ ಸಾಮರ್ಥ್ಯ ಲಾಭ (ಮೃಗಗಳನ್ನು ವಶಪಡಿಸಿಕೊಳ್ಳುವ ಸಾಮರ್ಥ್ಯ ಸಿದ್ಧಿ.)

ಶ್ಲೋಕ–೮೯

ದೇವಿಯ ಪದಮಹಿಮಾ ವರ್ಣನೆ

ನಖೈರ್ನಾಕಸ್ತ್ರೀಣಾಂ ಕರಕಮಲಸಂಕೋಚಶಶಿಭಿಃ
ತರೂಣಾಂ ದಿವ್ಯಾನಾಂ ಹಸತ ಇವ ತೇ ಚಂಡಿ ಚರಣೌ ।
ಫಲಾನಿ ಸ್ವಸ್ಸ್ಥೇಭ್ಯಃ ಕಿಸಲಯಕರಾಗ್ರೇಣ ದದತಾಂ
ದರಿದ್ರೇಭ್ಯೋ ಭದ್ರಾಂ ಶ್ರಿಯಮನಿಶಮಹ್ನಾಯ ದದತೌ ॥ ೮೯ ॥

ಪದವಿಭಾಗ

(ನಖೈರ್ನಾಕಸ್ತ್ರೀಣಾಂ) = ನಖೈಃ+ನಾಕಸ್ತ್ರೀಣಾಂ, ಕರಕಮಲ ಸಂಕೋಚಶಶಿಭಿಃ, ತರೂಣಾಂ, ದಿವ್ಯಾನಾಂ, (ಹಸತ) = ಹಸತಃ, ಇವ, ತೇ, ಚಂಡಿ, ಚರಣೌ, ಫಲಾನಿ, (ಸ್ವಸ್ಥೇಭ್ಯಃ) = ಸ್ವಃ+ಸ್ಥೇಭ್ಯಃ, ಕಿಸಲಯಕರಾಗ್ರೇಣ, ದದತಾಂ, (ದರಿದ್ರೇಭ್ಯೋ) = ದರಿದ್ರೇಭ್ಯಃ, ಭದ್ರಾಂ, (ಶ್ರೀಯಮನಿಶಮಹ್ನಾಯ) = ಶ್ರೀಯಂ+ಅನಿಶಂ+ ಅಹ್ನಾಯ, ದದತೌ.

ಅನ್ವಯಾರ್ಥ

(ಹೇ) ಚಂಡಿ	(ಚಂಡಾಸುರನನ್ನು ಸಂಹಾರ ಮಾಡಿದ) ಚಂಡಿಯೇ
ಕಿಸಲಯ ಕರಾಗ್ರೇಣ	ಚಿಗುರಿನಂತಹ–ಕೈಯತುದಿಯಿಂದ
ಸ್ವಸ್ಸ್ಥೇಭ್ಯಃ (ಏವ)	ಸ್ವಃ + ಸ್ಥೇಭ್ಯಃ (ಏವ) ಸ್ವರ್ಗದಲ್ಲಿ ಇರತಕ್ಕವರಿಗೆ ಮಾತ್ರ (ಸ್ವ=ಸ್ವರ್ಗ, ಸ್ಥಾ=ಇರತಕ್ಕವರು)
ಫಲಾನಿ	ಇಷ್ಟಾರ್ಥಗಳನ್ನು
ದದತಾಂ	ಕೊಡುತ್ತಿರುವ
ದಿವ್ಯಾನಾಂ	ಸ್ವರ್ಗದಲ್ಲಿರುವ
ತರೂಣಾಂ	ಕಲ್ಪವೃಕ್ಷಗಳನ್ನು
ದರಿದ್ರೇಭ್ಯಃ	ದರಿದ್ರರಾದವರಿಗೆ (ದೀನರಾದವರಿಗೆ)
ಭದ್ರಾಂ ಶ್ರೀಯಂ	ಶಾಶ್ವತವಾದ ಸಂಪತ್ತನ್ನೂ
ಅನಿಶಂ ಅಹ್ನಾಯ	ನಿರಂತರದಲ್ಲೂ–ಜಾಗ್ರತೆಯಾಗಿ

ದದತೌ	ಕೊಡುತ್ತಿರುವ
ತೇ ಚರಣೌ	ನಿನ್ನ ಪಾದಗಳೆರಡು
ನಾಕಸ್ತ್ರೀಣಾಂ	ದೇವತಾಸ್ತ್ರೀಯರ
ಕರಕಮಲಸಂಕೋಚಶಶಿಭಿಃ	ಕೈಗಳೆಂಬ ಕಮಲಕ್ಕೆ-ಮುಚ್ಚಿಕೊಳ್ಳುವ ಭಾವವನ್ನುಂಟುಮಾಡುವವರಲ್ಲಿ ಚಂದ್ರಪ್ರಾಯಿಗಳಾದ
ನಖೈಃ	(ಪಾದದ) ಉಗುರುಗಳಿಂದ
ಹಸತಃ ಇವ	ಹಾಸ್ಯಮಾಡುತ್ತಿವೆಯೇ ಎನ್ನುವ ಹಾಗೇ ಇದೆ

ತಾತ್ಪರ್ಯ

ಎಲೈ ಚಂಡಿಯೇ, ಚಿಗುರುಗಳೆಂಬ ಕೈಗಳಿಂದ ಸ್ವರ್ಗವಾಸಿಗಳಾದ ದೇವತೆಗಳಿಗೆ ಕೇಳಿಕೊಂಡಿದ್ದನ್ನು ಕೊಡುವ ಕಲ್ಪವೃಕ್ಷಗಳನ್ನು ಕುರಿತು ದೇವತಾಸ್ತ್ರೀಯರು ಕೈಗಳನ್ನು ಮುಗಿಯುವಂತೆ, ದರಿದ್ರರಿಗೂ ದೇವತೆಗಳಿಗೂ ಯಥೇಚ್ಛವಾಗಿ ಜಾಗ್ರತೆಯಾಗಿ ನಿರಂತರವಾಗಿ ಐಶ್ವರ್ಯವನ್ನು ಕೊಡುವ ನಿನ್ನ ಪಾದಗಳು, ಉಗುರುಗಳ ನೆಪದಿಂದ ಹಾಸ್ಯಮಾಡುತ್ತಿವೆಯೋ ಎನ್ನುವ ಹಾಗಿದೆ.

ಉಗುರುಗಳಿಗೆ ಅರ್ಧಚಂದ್ರನನ್ನು ಕವಿಗಳು ಹೋಲಿಸುವುದುಂಟು. ಅಂದರೆ ಉಗುರುಗಳು ಬೆಳ್ಳಗಿರುವುದನ್ನು ನೋಡಿ ಪಾದಗಳು ನಗುತ್ತವೆಯೆಂದು ವರ್ಣನೆಯು (K).

ಪದ್ಯಾನುವಾದ

ಹೇ ಚಂಡಿ! ದೇವಲೋಕದ ದಿವ್ಯವೃಕ್ಷಗಳು
ತಳಿರ್ಗೈಗಳಿಂದ ದೇವತೆಗಳಿಗೆ ಫಲಗಳನು
ಕೊಡುತಿಹುವು, ಅದರೊಳೇನತಿಶಯವದಲೆ ದೇವಿ, ಆ ವೃಕ್ಷಗಳನು-
ನಾಕಿಗಳಿಗೆಂತಂತೆಯೇದರಿದ್ರರಿಗೆಯೂ
ಸತತ ಸಿರಿಯನು ಕೊಡುವ ನಾಕನಾರಿಯರ ಕರ-
ಕಮಲಗಳ ಮುಗುಳಿಸುವ ನಖಶಶಿಗಳಿಂ ನಿನ್ನ ಚರಣಗಳು ನಗುತಿರುವುವು
॥ ೮೯ ॥

ಟಿಪ್ಪಣಿಗಳು

೧. **ಕರಕಮಲಸಂಕೋಚಶಶಿಭಿಃ**

ಕೈಗಳೆಂಬ ಕಮಲಗಳನ್ನು ಮೊಗ್ಗುಗಳನ್ನಾಗಿ ಮಾಡುವ ಕಾರ್ಯದಲ್ಲಿ ಚಂದ್ರಗಳರೂಪವಾಗಿರುವ (ನಿನ್ನ ಉಗುರುಗಳಿಂದ) ಅಂದರೆ ದೇವಾಂಗನೆಯರು. ಭಗವತಿಯ ಪಾದವಂದನೆಯನ್ನು ಮಾಡುವ ಸಮಯದಲ್ಲಿ ಭಗವತಿಯ ನಖಕಾಂತಿಗಳು ಚಂದ್ರಕಿರಣಗಳಂತಾಗಿ ದೇವಾಂಗನೆಯರ ಕರಕಮಲಗಳನ್ನು ಮುಕುಳಿತಗೊಳಿಸುತ್ತವೆ. ಅಂದರೆ ಅಂಜಲಿಯನ್ನು ಜೋಡಿಸುವಂತೆ ಮಾಡುತ್ತವೆ ಎಂಬುದಾಗಿ ಅಭಿಪ್ರಾಯ.

(ಶೇ–ಪುಟ ೨೫೨)

೨. ತಾವರೆಗಳು ಸೂರ್ಯ ಬಂದಾಗ ಅರಳುತ್ತವೆ. ಚಂದ್ರ ಮೂಡಿದಾಗ ಮುದುಡುತ್ತವೆ, ಎಂಬುದು ಲೋಕಪ್ರಸಿದ್ಧಿ

(ಗ–ಪುಟ ೯೮)

೩. ದೇವಿಯ ಪಾದಗಳು ಕೊಡುವ ಮೋಕ್ಷಸಾಮ್ರಾಜ್ಯವೆಂಬ ಸಂಪತ್ತಿನ ಎದುರಿನಲ್ಲಿ ಕಲ್ಪವೃಕ್ಷಗಳು ಕೊಡುವ ಫಲಗಳು ತೀರಾ ನಿಕೃಷ್ಟ ಮತ್ತು ನಶ್ವರವೆನಿಸುವುದರಿಂದ ಕಲ್ಪವೃಕ್ಷಗಳು ದೇವಿಯ ಪಾದಮಹಿಮೆಗೆ ಎಂದೂ ಸರಿದೂಗಲಾರವು ಎಂದು ಅಭಿಪ್ರಾಯ.

(ಗ–ಪುಟ ೯೫)

೪. **ನಖದೀಧಿತಿಸಂಛನ್ನನಮಜ್ಜನತಮೋಗುಣಾ**


(ಶ್ಲೋಕ ೧೯ನಾಮ ೪೪) ನಮಿಸಿದವರ ಅಜ್ಞಾನವನ್ನು ನಾಶಮಾಡುವ ನಖಕಿರಣಗಳಿಂದ (ಉಗುರುಕಾಂತಿಗಳಿಂದ) ಕೂಡಿರುವಳು ಎಂದು ಲಲಿತಾಸಹಸ್ರ ನಾಮದಲ್ಲಿ ಹೇಳಿದೆ.

(ಲ–ಆ ಪುಟ–)

೫. ಸ್ವರ್ಗದಲ್ಲಿ ಇರುವ ದೇವತೆಗಳಿಗೆ ಮಾತ್ರ ಫಲವನ್ನು ಕೊಡುವ ಪಲ್ಲವವೆಂಬ ಕೈಯುಂಟಾದ ಕಲ್ಪವೃಕ್ಷಗಳನ್ನು ಕಂಡು ದರಿದ್ರರಿಗೆ ಸದ್ಯದಲ್ಲಿ ಫಲವಕೊಡುವ ಸರ್ವೇಶ್ವರಿಯ ಪಾದಗಳಾಗುತ್ತವೆ ಎನ್ನುವುದರಿಂದ ವ್ಯತಿರೇಕಾಲಂಕಾರ ವ್ಯಕ್ತವಾಗಿದೆ.

(ಜ–ಪುಟ ೧೦೧)

ಯಂತ್ರಾರಾಧನೆ (ಶ್ಲೋಕ-೮೯)



ಯಂತ್ರರಚನೆ: ಚಿನ್ನದ ತಗಡಿನಲ್ಲಿ ಯಂತ್ರ ತಯಾರಿಸಬೇಕು. ಅಧೋಮುಖವಾದ ಸಮಭುಜದ ತ್ರಿಕೋಣವನ್ನು ಬರೆದು ಮಧ್ಯದಲ್ಲಿ ಹ್ರೀಂ ಬೀಜಾಕ್ಷರ ಬರೆಯಬೇಕು.

ಪೂಜೆ: ಕೆಂಪು ಹೂಗಳಿಂದ ಲಲಿತಾ ಅಷ್ಟೋತ್ತರ ಅರ್ಚನೆ ಮಾಡಬೇಕು.

ನೈವೇದ್ಯ: ಪಾಯಸ ಮತ್ತು ಜೇನುತುಪ್ಪ

ಜಪ: ಪೂರ್ವಕ್ಕೆ ಮುಖಮಾಡಿ ೩೦ ದಿನಗಳು ಪ್ರತಿದಿನ ೧೦೦೦ ಬಾರಿ ಜಪಿಸಬೇಕು.

ಫಲ : **ಸರ್ವರೋಗ ಶಮನ**

ಶ್ಲೋಕ–೯೦

ದೇವಿಯ ಚರಣ ಭಕ್ತಿ ಪ್ರಾರ್ಥನೆ

ದದಾನೇ ದೀನೇಭ್ಯಶ್ರ್ಶಿಯಮನಿಶ[೧]ಮಾಶಾನುಸದೃಶೀಮ್
ಅಮಂದಂ ಸೌಂದರ್ಯ[೨]ಪ್ರಕರಮಕರಂದಂ ವಿಕಿರತಿ ।
ತವಾಸ್ಮಿನ್ ಮಂದಾರಸ್ತಬಕಸುಭಗೇ ಯಾತು ಚರಣೇ
ನಿಮಜ್ಜನ್ಮಜ್ಜೀವಃ [೩]ಕರಣಚರಣಷ್ಷಟ್ಚರಣತಾಮ್ ॥ ೯೦ ॥

ಪಾಠಾಂತರ

೧. (ಮಾಶಾನುಸದೃಶೀ) = ಮಾತ್ಮಾನುಸದೃಶೀಂ (ಸು)
೨. (ಪ್ರಕರ ಮಕರಂದಂ) = ಸ್ತಬಕಮಕರಂದಂ (ಸು)
೩. (ಕರಣಚರಣಃ) = ಕರಣ ಚರಣೈಃ (ಸು)

ಪದವಿಭಾಗ

ದದಾನೇ, (ದೀನೇಭ್ಯ, ಶ್ರ್ಶಿಯಮನಿಶಮಾಶಾನು ಸದೃಶೀಮ್) = ದೀನೇಭ್ಯಃ + ಶ್ರೀಯಮ್, ಅನಿಶಮ್, ಆಶಾ ನುಸದೃಶೀಮ್, ಅಮಂದಂ, ಸೌಂದರ್ಯ ಪ್ರಕರಮಕರಂದಂ, ವಿಕಿರತಿ, (ತವಾಸ್ಮಿನ್) = ತವ+ಅಸ್ಮಿನ್, ಮಂದಾರಸ್ತಬಕಸುಭಗೇ, ಯಾತು, ಚರಣೇ, (ನಿಮಜ್ಜನ್ಮಜ್ಜೀವಃ) = ನಿಮಜ್ಜನ್+ಮತ್+ಜೀವಃ (ಕರಣಚರಣಷ್ಷಟ್ಚರಣತಾಮ್) = ಕರಣಚರಣಃ + ಷಟ್‌ಚರಣತಾಮ್.

ಅನ್ವಯಾರ್ಥ

(ಹೇ ಭಗವತಿ)	ಎಲೈ ಪೂಜ್ಯಳಾದವಳೇ,
ದೀನೇಭ್ಯಃ	ದರಿದ್ರರಿಗೆ
ಆಶಾನುಸದೃಶೀಂ	ಇಚ್ಛೆಗೆ–ಸರಿಯಾದ (ಅನುಸಾರವಾದ)
ಶ್ರಿಯಂ	ಸಂಪತ್ತನ್ನು
ಅನಿಶಂ ದದಾನೇ	ಯಾವಾಗಲೂ ಕೊಡುತ್ತಿರುವ
ಅಮಂದಂ	(ಅಧಿಕವಾಗಿ) ಕಡಿಮೆಯಿಲ್ಲದೆ
ಸೌಂದರ್ಯಪ್ರಕರಮಕರಂದಂ	ಸೌಂದರ್ಯ (ಲಾವಣ್ಯರಾಶಿ)–ಸಮೂಹ ವೆಂಬ – ಪುಷ್ಪರಸವನ್ನು

ವಿಕಿರತಿ	(ಸುರಿಸುತ್ತಿರುವ) ಎರಚುತ್ತಿರುವ
ಅಸ್ಮಿನ್ ತವ	ಈ ನಿನ್ನ
ಚರಣೇ	ಪಾದ(ವೆಂಬ ಪುಷ್ಪ)ದಲ್ಲಿ
ಕರಣ ಚರಣಃ	ಇಂದ್ರಿಯಗಳೆಂಬ – ಕಾಲುಗಳುಳ್ಳ
ಮಜ್ಜೀವಃ	ನನ್ನ ಜೀವಾತ್ಮನು
ನಿಮಜ್ಜನ್	ಪ್ರವೇಶಿಸಿದಂಥದ್ದಾಗಿ (ಮುಳುಗುತ್ತಾ)
ಷಟ್ ಚರಣತಾಂ	ಭ್ರಮರತ್ವವನ್ನು (ಆರುಕಾಲಿನ ದುಂಬಿ)
ಯಾತು	ಹೊಂದಲಿ.

ತಾತ್ಪರ್ಯ

ಎಲೈ ದೇವಿಯೇ, ಭಕ್ತರಾದ ದರಿದ್ರರಿಗೆ ಇಚ್ಛಾನುಸಾರವಾಗಿ ಐಶ್ವರ್ಯವನ್ನು ನಿರಂತರದಲ್ಲಿ ಕೊಡುತ್ತಾ ಸೌಂದರ್ಯವೆಂಬ ಮಕರಂದವನ್ನು (ಪುಷ್ಪರಸವನ್ನು) ಅಧಿಕವಾಗಿ ಬೀರುತ್ತಿರುವ ಮತ್ತು ಮಂದಾರ ಪುಷ್ಪಗಳ ಗೊಂಚಲಿನಂತೆ ಸುಕುಮಾರವಾಗಿರುವ ನಿನ್ನ ಈ ಪಾದಕಮಲದಲ್ಲಿ ನನ್ನ ಆತ್ಮ ಸೇರಿಕೊಂಡು (ಮುಳುಗಿಕೊಂಡು) ಮನಸ್ಸು, ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ಚರ್ಮವೆಂಬ ಆರುಕಾಲುಗಳಿಂದ ಯುಕ್ತವಾಗಿ (ಆರುಕಾಲುಗಳ) ಭ್ರಮರತ್ವವನ್ನು ಹೊಂದಲಿ. ಅಂದರೆ ಭ್ರಮರವು ಕಮಲದಲ್ಲೇ ಅತ್ಯಂತಾಸಕ್ತವಾಗಿ ಹೇಗಿರುವುದೋ ಹಾಗೆ ನನ್ನ ಅಂತರಾತ್ಮನು ನಿನ್ನ ಪಾದ ಕಮಲದಲ್ಲೇ ನಿರಂತರದಲ್ಲಿ ಆಸಕ್ತನಾಗಿರಲಿ ಎಂಬ ಭಾವವು.

(K).

ಪದ್ಯಾನುವಾದ

ಹೇ ದೇವಿ! ಅವರವರ ಬಯಕೆಗನುಗುಣವಾಗಿ
ದೀನರಿಗೆ ಸಿರಿಯನನವರತವೂ ಕೊಡುತಿರುವ,
ಚೆಲುವನೊಟ್ಟೈಸಿದಂತಿರುವ ಮಕರಂದವನು ಬಹುವಾಗಿ ಹೊರಸೂಸುವ
ಮಂದಾರಪುಷ್ಪಗುಚ್ಛದ ಸೊಬಗಿನಿಂದೊಪ್ಪು-
ತಿಹ ನಿನ್ನವೀಯಡಿಗಳಲಿ ಮುಳುಗಿ ಸತತವೂ
ಆರಡಿತನವ ಪಡೆಯಲೆನ್ನಾರು ಕರಣಚರಣಗಳಿಂದ ಜೀವವೆನ್ನಾ ॥೯೦॥

ಟಿಪ್ಪಣಿಗಳು

೧. ಶಿವಾನಂದಲಹರಿಯಲ್ಲಿ (ಶ್ಲೋಕ ೯) ಸದಾಶಿವನಪಾದಪದ್ಮದಲ್ಲೇ ವಿಹರಿಸಬೇಕೆಂದು ಹೀಗೆ ಕೇಳಿಕೊಂಡಿದ್ದಾರೆ.

ನರತ್ವಂ ದೇವತ್ವಂ ನಗವನಮೃಗತ್ವಂ ಮಶಕತಾ
ಪಶುತ್ವಂ ಕೀಟತ್ವಂ ಭವತು ವಿಹಗತ್ವಾದಿ ಜನನಂ
ಸದಾ ತ್ವತ್ಪಾದಾಬ್ಜಸ್ಮರಣ ಪರಮಾನಂದ ಲಹರೀ
ವಿಹಾರಾಸಕ್ತಂ ಚೇದ್ಧೃದಯಮಿಹ ಕಿಂ ತೇನವಪುಷಾ

(ಮಾನವನಾಗೋ, ದೇವತೆಯಾಗೋ, ಪರ್ವತನಾಗೋ ವನಮೃಗವಾಗೋ, ಗಿಡವಾಗೋ, ನೊಣವಾಗೋ ಪಶುವಾಗೋ ಹುಳುವಾಗೋ, ಪಕ್ಷಿಗಳಾಗೋ ನನ್ನ ಹುಟ್ಟು ಏನಾದರೂ ಆಗಲಿ ನಿನ್ನ ಪಾದಪದ್ಮಗಳ ಸ್ಮರಣವೆನ್ನುವ ಪರಮಾನಂದ ಪ್ರವಾಹದಲ್ಲಿ ವಿಹರಿಸಲು ಆಸಕ್ತಿ ಹೊಂದಿದ ಮನಸ್ಸಿದ್ದರೇ ಮಾತ್ರ ಸಾಕು.)

(ಪ–ಪುಟ ೧೭೮)

೨. ಲಲಿತಾಸಹಸ್ರನಾಮದಲ್ಲಿ (ಶ್ಲೋಕ ೩೫ ನಾಮ ೮೭) ಹೀಗೆ ಹೇಳಿದೆ:

ಶಕ್ತಿ ಕೂಟೈಕತಾಪನ್ನ ಕಟ್ಯಧೋಭಾಗ ಧಾರಿಣೀ

(ಶಕ್ತಿ ಕೂಟದ ಬೀಜಾಕ್ಷರಗಳ (ಸಕಲ, ಹ್ರೀಂ) ಶಕ್ತಿಯನ್ನೇ ಸೊಂಟದ ಕೆಳಭಾಗವಾಗಿ (ಕಾಲುಗಳು ಉಳ್ಳವಳು) ಹೊಂದಿರುವವಳು).

ಶ್ರೀ ಮಾತೆಗೆ ಅತ್ಯಂತ ಪ್ರೀತಿಪಾತ್ರವೂ ಶ್ರೀ ವಿದ್ಯಾ ಮಂತ್ರ ಸ್ವರೂಪವೂ ಆದ ಪಂಚದಶೀ ಮಂತ್ರವನ್ನು ಮೂರು ಕೂಟಗಳಾಗಿ ವಿಭಜಿಸಿದ್ದಾರೆ. ವಾಗ್ಭವಕೂಟ–ಮಧ್ಯಕೂಟ–ಕಾಮರಾಜ ಕೂಟ ಎಂಬುದಾಗಿ. ಶಕ್ತಿಕೂಟ ನಾಲ್ಕನೆಯದು. ಸ, ಕ, ಲ, ಹ್ರೀಂ ನಾಲ್ಕು ಅಕ್ಷರಗಳ ಮಂತ್ರಸ್ವರೂಪ. ಪಂಚದಶೀ ಮಂತ್ರ ಜಪದೊಂದಿಗೆ ಜಗನ್ಮಾತೆಯ ಈ ರೂಪವನ್ನು ಅವಗಾಹನೆ ಮಾಡಿಕೊಳ್ಳುತ್ತಾ ಸಾಧಕರಾದ ಭಕ್ತರು ಈ ನಾಲ್ಕು ನಾಮಗಳನ್ನು ನಿರಂತರವಾಗಿ ಮನನಮಾಡಿಕೊಂಡರೆ ಸಾಕು.

(ಲ–ಪ–ಪುಟ ೧೦೪)

೩. ಸರ್ವೇಶ್ವರಿಯ ಶ್ರೀಪಾದವೆಂಬ ಮಕರಂದರಸವ ಚೆಲ್ಲುವ ಪಾರಿಜಾತ ಹೂವಿನ ಗೊಂಚಲಲ್ಲಿ ಪಂಚೇಂದ್ರಿಯಗಳು ಜೊತೆಗೆ ಮನಸ್ಸು ಕೂಡಿ ಆರುಕಾಲು ಉಂಟಾದ ನನ್ನ ಜೀವವೆಂಬ ತುಂಬಿಯು ಇರಲಿ ಎಂದು ಅಭಿಪ್ರಾಯ ಇಲ್ಲಿದೆ. ಅತಿಶಯ ಪರಿಣಾಮಾಲಂಕಾರವಿದೆ.

(ಜ–ಪುಟ ೧೦೩)

೪. ಈ ಶ್ಲೋಕದಲ್ಲಿ ಕರಣ ಚರಣಃ ಎಂಬಲ್ಲಿ ಮನಸ್ಸು ಮತ್ತು ಪಂಚೇಂದ್ರಿಯಗಳನ್ನು ಕಾಲುಗಳ ರೂಪವಾಗಿ ರೂಪಣ ಮಾಡಿರುವುದರಿಂದ ರೂಪಕಾಲಂಕಾರವಾಗಿದೆ.

(ಶೇ-ಪುಟ ೨೫೪)

ಯಂತ್ರಾರಾಧನೆ (ಶ್ಲೋಕ-೯೦)

ಕ್ಷಾಂ	ಕ್ಷಾಂ
ಕ್ಷೀಯ	ಕ್ಷೀಯ
ಹ್ರೀಂ	

ಯಂತ್ರರಚನೆ : ಚಿನ್ನದ ತಗಡಿನ ಯಂತ್ರದಲ್ಲಿ ದೀರ್ಘಚತುರಶ್ರದಲ್ಲಿ (ಆಯಾಕಾರದ)ದಲ್ಲಿ, ಕ್ಷಾಂ ಕ್ಷಾಂ ಬೀಜಾಕ್ಷರಗಳು ಒಂದೇ ಸಾಲಿನಲ್ಲಿಯೂ ಕ್ಷೀಯ, ಕ್ಷೀಯ ಬೀಜಾಕ್ಷರಗಳನ್ನು ೨ನೇ ಸಾಲಿನಲ್ಲಿಯೂ ಹ್ರೀಂ ಬೀಜಾಕ್ಷರವನ್ನು ೩ನೇಸಾಲಿನಲ್ಲೂ ಬರೆಯಬೇಕು.

ಪೂಜೆ : ಕೆಂಪು ಹೂಗಳಿಂದ ದುರ್ಗಾ ಅಷ್ಟೋತ್ತರ ಅರ್ಚನೆಯನ್ನು ಮಾಡಬೇಕು.

ನೈವೇದ್ಯ : ಹಾಲುಕೀರು ಮತ್ತು ಜೇನುತುಪ್ಪ

ಜಪ : ಈ ಶ್ಲೋಕವನ್ನು ೧೫ ದಿನಗಳ ಕಾಲ ಪ್ರತಿದಿನ ೧೦೦೦ ಸಾರಿ ಜಪಿಸಬೇಕು.

ಫಲ : ಕ್ಷುದ್ರಬಾಧಾನಿವೃತ್ತಿ

ಶ್ಲೋಕ–೯೧

ದೇವಿಯ ಕಾಲ್ದಂಡೆಗಳ ವರ್ಣನೆ

ಪದನ್ಯಾಸಕ್ರೀಡಾಪರಿಚಯಮಿವಾರಬ್ಧುಮನಸಃ
ಸ್ಖಲಂತಸ್ತೇ ಖೇಲಂ ಭವನಕಲಹಂಸಾ ನ ಜಹತಿ ।
[೧]ಅತಸ್ತೇಷಾಂ ಶಿಕ್ಷಾಂ ಸುಭಗಮಣಿಮಂಜೀರರಣಿತ–
ಚ್ಛಲಾದಾಚಕ್ಷಾಣಂ ಚರಣಕಮಲಂ ಚಾರುಚರಿತೇ ॥ ೯೧ ॥

ಪಾಠಾಂತರ

೧. (ಅತಸ್ತೇಷಾಂ) = ಸ್ವವಿಕ್ಷೇಪೇ (ಸು)

ಪದವಿಭಾಗ

(ಪದನ್ಯಾಸಕ್ರೀಡಾಪರಿಚಯಮಿವಾರಬ್ಧುಮನಸಃ) = ಪದನ್ಯಾಸ ಕ್ರೀಡಾಪರಿಚಯಮ್ + ಇವ + ಆರಬ್ಧುಮನಸಃ, (ಸ್ಖಲಂತಸ್ತೇ) = ಸ್ಖಲಂತಃ+ತೇ, ಖೇಲಂ, (ಭವನಕಲಹಂಸಾ) = ಭವನಕಲಹಂಸಾಃ, ನ, ಜಹತಿ, (ಅತಸ್ತೇಷಾಂ) = ಅತಃ+ತೇಷಾಂ, ಶಿಕ್ಷಾಂ, (ಸುಭಗಮಣಿಮಂಜೀರರಣಿತಚ್ಛಲಾದಚಕ್ಷಾಣಂ) = ಸುಭಗಮಣಿ ಮಂಜೀರರಣಿತಚ್ಛಲಾತ್+ಆಚಕ್ಷಾಣಂ, ಚರಣಕಮಲಂ, ಚಾರುಚರಿತೇ.

ಅನ್ವಯಾರ್ಥ

ಚಾರು ಚರಿತೇ,	ಎಲೈ ಮನೋಹರವಾದ ನಡಿಗೆಯುಳ್ಳ ದೇವಿಯೆ
ಪದನ್ಯಾಸಕ್ರೀಡಾಪರಿಚಯಂ	(ಪದನ್ಯಾಸ + ಕ್ರೀಡಾ + ಪರಿಚಯಂ) ಹೆಜ್ಜೆಗಳನ್ನು ಇಡುವುದರಲ್ಲಿ ಉಂಟಾದ ಲೀಲೆಯ–ಅಭ್ಯಾಸವನ್ನು
ಆರಬ್ಧುಮನಸಃ	ಮಾಡಬೇಕೆಂಬ ಮನಸ್ಸುಳ್ಳ
ಭವನಕಲಹಂಸಾಃ	(ಭವನ+ಕಲಹಂಸಾಃ) ಮನೆಯಲ್ಲಿ–ಸಾಕಿದ ಹಂಸಗಳು
ಸ್ಖಲಂತಃ ಸಂತಃ	ತಡೆದು ತಡೆದು ಕಾಲುಗಳನ್ನು ಇಡುತ್ತಾ
ತೇ ಖೇಲಂ	ನಿನ್ನ ಸಂಚಾರವನ್ನು (ನಡಿಗೆಯನ್ನು)
ನ ಜಹತಿ	ಬಿಡದಂತೆ ಅನುಸರಿಸುತ್ತಾ ಇವೆ
ಆತಃ	ಈ ಕಾರಣದಿಂದ

ಚರಣಕಮಲಂ	ನಿನ್ನ ಪಾದಕಮಲವು
ಸುಭಗಮಣಿಮಂಜೀರ	(ಸುಭಗ + ಮಣಿ ಮಂಜೀರ) ಮನೋಹರವಾದ-ರತ್ನಖಚಿತವಾದ ಕಾಲು ಕಡಗಗಳ
ರಣಿತಚ್ಛಲಾತ್	ಧ್ವನಿಯ-ನೆವದಿಂದ
ತೇಷಾಂ	ಆ ಹಂಸಪಕ್ಷಿಗಳಿಗೆ
ಶಿಕ್ಷಾಂ	ನಡಿಗೆಯ ಕ್ರಮವನ್ನು
ಆಚಕ್ಷಾಣಂ ಇವ	ಹೇಳಿಕೊಡುತ್ತಾ ಇವೆಯೋ ಎನ್ನುವ ಹಾಗೆ
ಭಾತಿ	ಪ್ರಕಾಶಿಸುತ್ತಾ ಇದೆ.

ತಾತ್ಪರ್ಯ

ದೇವಿಯ ಮಂದಗಮನದ ನಡಿಗೆಯನ್ನು ಕವಿಯು ಹೀಗೆ ವರ್ಣಿಸುತ್ತಾನೆ:-

ಎಲೈ ದೇವಿಯೇ, ನೀನು ನಡೆಯುವಾಗ ನೆಲದಮೇಲೆ ಹೇಗೆ ಹೇಗೆ ಸೊಗಸಾಗಿ ಕಾಲುಗಳನ್ನು ಇಡುತ್ತೀಯೋ, ಅದರಂತೆ ಮನೆಯಲ್ಲಿ ಸಾಕಿದ ಹಂಸಪಕ್ಷಿಗಳು ಎಡವುತ್ತಾ ಬೀಳುತ್ತಾ ನಿನ್ನ ನಡಿಗೆಯನ್ನೇ ಅನುಸರಿಸುತ್ತಾ ಇವೆ. ಆದುದರಿಂದ ನಿನ್ನ ಚರಣವು ಈ ಹಂಸಪಕ್ಷಿಗಳಿಗೆ ಈ ರೀತಿಯಾಗಿ ಕಾಲುಗಳನ್ನು ಇಡಬೇಕೆಂದು ಕಲಿಸುತ್ತಿದೆಯೋ ಎನ್ನುವ ಹಾಗೆ ಕಾಲುಕಡಗದ ಧ್ವನಿಯಿಂದ ತೋರುತ್ತದೆ.

(ದೇವಿಯ ನಡಿಗೆಯನ್ನು ನೋಡಿ ಮನೆಯಲ್ಲಿ ಸಾಕಿದ ಹಂಸಪಕ್ಷಿಗಳು ನಡಿಗೆಯನ್ನು ಅಭ್ಯಾಸ ಮಾಡುತ್ತಿದ್ದವು ಎಂಬುದು ಮುಖ್ಯ ತಾತ್ಪರ್ಯ).

(K).

ಪದ್ಯಾನುವಾದ

ಚಾರುಚರಿತೇ! ನಿನ್ನ ಅಡಿಯಿಂದ ಲೀಲಾವಿ-
ಲಾಸವನು ಕಲಿಯಬೇಕೆನುವ ಮನವುಳ್ಳ ಮನೆ-
ಯಂಚೆಗಳು ತಪ್ಪುಹೆಜ್ಜೆಯನಿಡುವ ತಮ್ಮ ನಡಿಗೆಯ ಬಗೆಯ ಬಿಡಲೊಲ್ಲವು;
ಅದುವೆ ಕಾರಣ ನಿನ್ನ ಚರಣಕಮಲವು ತನ್ನ
ಚೆಲುವಾದ ಮಣಿಖಚಿತ ನೂಪುರಧ್ವನಿಗಳಾ
ನೆವದಿಂದಲಾ ಅಂಚೆಗಳಿಗೆ ಚೆಲುನಡೆಯ ಕಲಿಕೆಯನು ಕಲಿಪಂತಿರುವುದು
॥ ೯೧ ॥

ಟಿಪ್ಪಣಿಗಳು

ಅಲಂಕಾರ

೧. ಸರ್ವೇಶ್ವರಿಯು ನಡೆಯುವಾಗ ಶ್ರೀ ಪಾದಗಳನ್ನಿಡುವುದರಿಂದ ಉಂಟಾದ ನೂಪುರ ಧ್ವನಿಯನ್ನು ಹಂಸಗಳಿಗೆ ನಡೆಯ ಕಲಿಸುವ ಶಿಕ್ಷಾಧ್ವನಿಯೆಂದು ಉತ್ಪ್ರೇಕ್ಷಿಸಿರುವುದರಿಂದ ಉತ್ಪ್ರೇಕ್ಷಾಲಂಕಾರ ಇಲ್ಲಿ ಪ್ರಧಾನವಾಗಿದೆ.

(ಜ–ಪುಟ ೧೦೪)

೨. ಗೃಹದಲ್ಲಿ ಸಾಕಿ ಬೆಳಸಿದ ಕಲಹಂಸಗಳಿಗೆ ತಮ್ಮನ್ನು ಪೋಷಣೆಮಾಡುವ ಜನರನ್ನು ಅನುಸರಿಸುವುದು ಸ್ವಾಭಾವಿಕವಾದರೂ ಅಂತಹ ಅನುಸರಣೆಯನ್ನು ಪದನ್ಯಾಸ ಕ್ರೀಡಾಪರಿಚಯಕ್ಕಾಗಿ ಎಂದು ಹೇಳಿರುವುದರಿಂದ ಸಂಬಂಧ ವಿಲ್ಲದಿದ್ದರೂ ಸಂಬಂಧ ಕಲ್ಪನಾಯುಕ್ತವಾದ ಅತಿಶಯೋಕ್ತಿ ಅಲಂಕಾರ ವಾಗಿದೆ.

(ಶೇ–ಪುಟ ೨೫೬)

೩. **ಸುಭಗ ಮಣಿಮಂಜೀರ ರಣಿತಚ್ಛಲಾತ್**

ಮಣಿಮಂಜೀರವೆಂದರೆ ರತ್ನಗಳನ್ನೇ ಪ್ರಧಾನವಾಗಿ ಕೋದಿರುವ ಕಾಲುಗೆಜ್ಜೆ (ಅತ್ಯಂತ ರಮಣೀಯವಾದ ಕಾಲುಗೆಜ್ಜೆ) ಎಂದರ್ಥ. ಅಥವಾ ಅತ್ಯಂತ ಸುಂದರವಾದ ಪದ್ಮರಾಗ ಮೊದಲಾದ ಮಣಿಗಳಿಂದ ಕೂಡಿರುವ ಕಾಲುಗೆಜ್ಜೆ ಎಂಬುದಾಗಿಯೂ ಹೇಳುವರು.

(ಶೇ–ಪುಟ ೨೫೫)

೪. ಲಲಿತಾ ಸಹಸ್ರನಾಮದಲ್ಲಿ (ಶ್ಲೋಕ ೨೦ ನಾಮ ೪೬) **ಶಿಂಜಾನ ಮಣಿಮಂಜೀರ ಮಂಡಿತ ಶ್ರೀ ಪಾದಾಂಬುಜಾ** (ಝುಣಝುಣತ್ಕರಿಸುತ್ತಿರುವ ಮಣಿಯಿಂದ ಮಾಡಿದ ಕಾಲಂದಿಗೆಗಳಿಂದ ಭೂಷಿತವಾದ ಸಿರಿ ಅಡಿದಾವರೆಗಳುಳ್ಳವಳು) ಎಂದು ಹೇಳಿದೆ.

(ಲ–ಆ ಪುಟ ೫೬)

೫. ಲಲಿತಾ ಸಹಸ್ರನಾಮದಲ್ಲಿ (ಶ್ಲೋಕ ೨೦ ನಾಮ ೪೭) **ಮರಾಲೀಮಂದಗಮನಾ** (ಹೆಣ್ಣು ಹಂಸಪಕ್ಷಿಯಂತೆ ಮಂದ ಮತ್ತು ಗಂಭೀರವಾದ ನಡಿಗೆಯುಳ್ಳವಳು) ಎಂದಿದೆ.

(ಲ–ಯ ಪುಟ ೯)

೬. **ಮರಾಲೀ ಮಂದಗಮನಾ** ಲಲಿತಾ ಸಹಸ್ರನಾಮ, (ಶ್ಲೋಕ ೨೦ ನಾಮ ೪೭) ಹಂಸದಂತೆ ಮೆಲುನಡಿಗೆಯವಳು ಎಂಬ ಮಾತು ಪದ್ಮಿನೀಜಾತಿಯ ಸ್ತ್ರೀ ಲಕ್ಷಣವನ್ನು ಸೂಚಿಸುತ್ತದೆ. ಉತ್ತಮ ಸ್ತ್ರೀಯರ ನಡಿಗೆ ಮಂದಗಮನವೂ ಮನೋಹರವೂ ಆಗಿರುತ್ತದೆ ಎನ್ನುತ್ತದೆ ಹಸ್ತಸಾಮುದ್ರಿಕಾ ಶಾಸ್ತ್ರ. ಇಲ್ಲಿ ಹಂಸನಡಿಗೆ ಎಂಬ ಮಾತು ಶ್ರೀ ಚಕ್ರರೂಪಿಯಾದ ದೇವಿಯ ಭಕ್ತರಾದ ಪರಮಹಂಸರ ಆರಾಧನಾ ವಿಧಾನವನ್ನು ಕುರಿತು ಹೇಳುತ್ತದೆ ಎಂದು ಕೆಲವರು ವ್ಯಾಖ್ಯಾನಿಸಿದ್ದಾರೆ.

(ಭ–ಪುಟ ೯೮)

೭. ದೇವಿ ಹೆಜ್ಜೆ ಇಟ್ಟಂತೆಲ್ಲ ಹೊಮ್ಮುವ ಘಲ್ ಘಲ್ ಎಂಬ ನಾದದ ಮೂಲಕವೇ ನಿನ್ನ ಒಂದೊಂದು ಹೆಜ್ಜೆಯನ್ನು ಇಡುವಾಗಲೂ ವಿವೇಕಯುತವಾಗಿ ಮುಂದಡಿಯಿಡು ಎಂಬ ರೀತಿಯಲ್ಲಿ ದೇವಿಯು ಶಿಕ್ಷಣ ಕೊಡುತ್ತಿದ್ದಾಳೇನೋ ಎಂದು ಅರಿವಾಗುವಂತಿದೆ. ದೇವಿಯ ಚರಣ ಕಮಲಗಳು, ದಿವ್ಯ ನಡತೆಯನ್ನೇ ಹೊಂದಿರುವ, ದೇವಿಯು (ಚಾರುಚರಿತೆ) ಧರಿಸಿರುವ ರತ್ನಖಚಿತವಾದ ಮಣಿಯ ಕಾಲಂದುಗೆ (ಕಾಲ್ಕಡಗ) ಎನ್ನುವರು ಮಹಾಕವಿ ಶಂಕರರು

(ರ–ಪುಟ ೧೦೦)

೮. ಶ್ರೀದೇವಿಯನ್ನು 'ಹಂಸಗಾಮಿನೀ' ಎಂದು ಕರೆಯುತ್ತಾರೆ (ಹಂಸದಂತೆ ನಡಿಗೆಯುಳ್ಳವಳು). ಆದರೆ ಇಲ್ಲಿ ಶರಣರು ಹಂಸಕ್ಕೇ ನಡಿಗೆ ಕಲಿಸುವವಳು ಎಂದಿದ್ದಾರೆ. ಹಂಸಗಾಮಿನಿ ಲಕ್ಷಣವನ್ನು ಹೀಗೆ ಹೇಳಿದೆ :

ಗಜೇಂದ್ರಗಮನಾ ತನ್ವೀ, ಕೋಕಿಲಾಲಾಪ ಸಂಯುತಾ

ನಿತಂಬೇ ಗುರ್ವಿಣೀ ಯೊ ಸ್ಯಾತ್ ಸಾ ಸ್ಮೃತಾ ಹಂಸಗಾಮಿನೀ

[ಮದಗಜದಂತೆ ನಡಿಗೆ, ಕೋಕಿಲೆಯಂತೆ ಕಂಠಧ್ವನಿ, ಗುರುತರವಾದ ಕಟಿಪ್ರದೇಶ (ನಿತಂಬ) ಇವುಗಳಿಂದ ಕೂಡಿದ ನಡಿಗೆಯುಳ್ಳವಳು ಹಂಸಗಾಮಿನೀ]


(ಪೋ–ಪುಟ ೪೪೩)

೯. ಹಂಸಗಳು ದೇವಿಯ ನಡಿಗೆಯನ್ನು ಅನುಕರಿಸಿದವು ಎಂಬ ಮಾತಿಗೆ ರಹಸ್ಯಾರ್ಥವೊಂದಿದೆ. "ಇಲ್ಲಿ ಹಂಸಗಳು ಎಂದರೆ ಸಾಧಕರು, ಪರಮಹಂಸರು. ಇವರು ಜಗನ್ಮಾತೆಯ ದರ್ಶನಕ್ಕೆ ಇಡಾ–ಪಿಂಗಳ ನಾಡಿಗಳಲ್ಲಿನ (ಶ್ವಾಸದನಡೆ) ಬ್ರಹ್ಮಗ್ರಂಥಿ. ವಿಷ್ಣುಗ್ರಂಥಿ, ರುದ್ರಗ್ರಂಥಿಗಳನ್ನು ಭೇದಿಸಿದ ನಂತರ

ಸುಷುಮ್ನಾದೊಳಕ್ಕೆ ಪ್ರವೇಶಿಸಿ ಆಜ್ಞಾಚಕ್ರವನ್ನು ಸೇರಬೇಕು. ಅಲ್ಲಿ ಹಂಸ ಎನ್ನುವ ಎರಡಕ್ಷರಗಳು ಕೂಡಿದ ಎರಡುದಳಗಳುಳ್ಳ ಪದ್ಮವಿದೆ. ಶ್ವಾಸವನ್ನು ಕ್ರಮಬದ್ಧಗೊಳಿಸಬಲ್ಲ ಸಾಧಕರು "ಸೋಽಹಂ" (ಹಂಸಃ) ಎಂಬ ಭಾವನೆಯಿಂದ ಆಜ್ಞಾಚಕ್ರದಲ್ಲಿ ಶಿವನ ದರ್ಶನಮಾಡಿ (ಆತ್ಮದರ್ಶನ) ಸಹಸ್ರಾರಚಕ್ರದೊಳಗೆ ಸೇರಿ, ಕಾಮೇಶ್ವರ-ಕಾಮೇಶ್ವರಿಯೊಡನೆ ಐಕ್ಯವಾಗುತ್ತಾರೆ.

(ಪ-ಪುಟ ೧೮೧)

ಯಂತ್ರಾರಾಧನೆ (ಶ್ಲೋಕ-೯೧)



ಯಂತ್ರರಚನೆ : ಚಿನ್ನದ ತಗಡಿನ ಮೇಲೆ ಯಂತ್ರದ ಮೇಲೆ ಅಧೋಮುಖವಾದ ಸಮಭುಜ ತ್ರಿಕೋಣವನ್ನು ಬರೆಯಬೇಕು. ಅದರಲ್ಲಿ ಓಂ ಹ್ರೀಂ ಮೊದಲ ಸಾಲಿನಲ್ಲಿ ಹ್ರೀಂ ಹ್ರೀಂ ಎರಡನೇ ಸಾಲಿನಲ್ಲಿ ಬರೆಯಬೇಕು.

ಪೂಜೆ : ಲಲಿತಾ ಸಹಸ್ರನಾಮ ಕುಂಕುಮಾರ್ಚನೆಯನ್ನು ಮಾಡಬೇಕು

ನೈವೇದ್ಯ : ಕ್ಷೀರಪಾಯಸ

ಜಪ : ೨೫ ದಿನಗಳ ಕಾಲ ಪ್ರತಿನಿತ್ಯವೂ ಈ ಶ್ಲೋಕವನ್ನು ೧೦೦೦ ಸಲ ಜಪಿಸಬೇಕು.

ಫಲ : **ಭೂಲಾಭ ಮತ್ತು ಧನಲಾಭ.**

ಶ್ಲೋಕ-೯೨

ದೇವಿಯ ಸೌಂದರ್ಯವರ್ಣನೆ

ಗತಾಸ್ತೇ ಮಂಚತ್ವಂ ದ್ರುಹಿಣಹರಿರುದ್ರೇಶ್ವರಭೃತಃ
ಶಿವ ಸ್ಸ್ವಚ್ಛಚ್ಛಾಯಾಘಟಿತಕಪಟಪ್ರಚ್ಛದಪಟಃ ।
ತ್ವದೀಯಾನಾಂ ಭಾಸಾಂ ಪ್ರತಿಫಲನರಾಗಾರುಣತಯಾ
ಶರೀರೀ ಶೃಂಗಾರೋ ರಸ ಇವ ದೃಶಾಂ ದೋಗ್ಧಿ ಕುತುಕಮ್ ॥೯೨॥

ಪದವಿಭಾಗ

(ಗತಾಸ್ತೇ)=ಗತಾಃ+ತೇ, ಮಂಚತ್ವಂ, (ದ್ರುಹಿಣಹರಿರುದ್ರೇಶ್ವರ ಭೃತಃ) = ದ್ರುಹಿಣ ಹರಿರುದ್ರ + ಈಶ್ವರಭೃತಃ, ಶಿವಃ, ಸ್ವಚ್ಛಚ್ಛಾಯಾ ಘಟಿತಕಪಟಪ್ರಚ್ಛಾದಪಟಃ, ತ್ವದೀಯಾನಾಂ, ಭಾಸಾಂ, (ಪ್ರತಿಫಲನರಾಗಾರುಣತಯಾ) = ಪ್ರತಿಫಲನರಾಗ + ಅರುಣತಯಾ, ಶರೀರೀ, (ಶೃಂಗಾರೋ) = ಶೃಂಗಾರಃ, (ರಸ) ರಸಃ, ಇವ, ದೃಶಾಂ, ದೋಗ್ಧಿ, ಕುತುಕಮ್.

ಅನ್ವಯಾರ್ಥ

(ಹೇ ಭಗವತೀ,)	(ಹೇ ಭಗವತಿಯೇ,)
ತೇ	ನಿನ್ನ
ಮಂಚತ್ವಂ	(ನಾಲ್ಕುಕಾಲುಗಳುಳ್ಳ) ಮಂಚದ ರೂಪವನ್ನು
ದ್ರುಹಿಣಹರಿರುದ್ರೇಶ್ವರ ಭೃತಃ	(ದ್ರುಹಿಣ+ಹರಿ+ರುದ್ರ+ಈಶ್ವರ ಭೃತಃ) =ಬ್ರಹ್ಮ-ವಿಷ್ಣು-ರುದ್ರ-ಪರಮೇಶ್ವರ ಎಂಬ ಸೇವಕರು
ಗತಾಃ	ಹೊಂದಿದರು
ಶಿವಃ	ಪರಶಿವನು
ಸ್ವಚ್ಛಚ್ಛಾಯಾ	ಶುಭ್ರವಾದ-ಕಾಂತಿಯೆಂಬ
ಘಟಿತಕಪಟ	ಹಾಸಿಗೆಗೆ ಸೇರಿಕೊಂಡಿರುವ-ನೆವದಿಂದ
ಪ್ರಚ್ಛದಪಟಃ(ಸನ್)	ಮೇಲು ಹಾಸಿಗೆ (ಹೊದಿಕೆಯ ಬಟ್ಟೆ) ಯಾಗಿ

ತ್ವದೀಯಾನಾಂ	ನಿನ್ನ
ಭಾಸಾಂ	ಅರುಣಕಾಂತಿಗಳ
ಪ್ರತಿಫಲನ ರಾಗಾರುಣತಯಾ	(ಪ್ರತಿಫಲನ+ರಾಗ+ಅರುಣತಯಾ) ಪ್ರತಿ ಬಿಂಬದಿಂದ ಉಂಟಾದ–ಕೆಂಪು ಬಣ್ಣದಿಂದ ಕೆಂಪಾಗಿರುವುದರಿಂದ
ಶರೀರೀ	ದೇಹವನ್ನು ತಾಳಿದ
ಶೃಂಗಾರಃ	ಶೃಂಗಾರವೆಂಬ
ರಸ ಇವ	ರಸವೋ ಎನ್ನುವ ಹಾಗೆ
ದೃಶಾಂ	ಕಣ್ಣುಗಳಿಗೆ
ಕುತುಕಂ	ಕುತೂಹಲವನ್ನು (ಆನಂದವನ್ನು)
ದೋಗ್ಧಿ	(ಉಂಟುಮಾಡುತ್ತಾನೆ.) ಸುರಿಸುತ್ತಾನೆ

ತಾತ್ಪರ್ಯ

ಮಂಚದ ಮೇಲೆ ಕುಳಿತಿರುವ ಕಾಮೇಶ್ವರಿಯನ್ನು ಕವಿ ವರ್ಣಿಸುತ್ತಾನೆ:–

ಎಲೈ ದೇವಿಯೇ, ಬ್ರಹ್ಮ, ವಿಷ್ಣು, ರುದ್ರ, ಈಶ್ವರ ಇವರು ನಾಲ್ಕು ಮಂದಿ ನಿನ್ನ ಸಾಮಿಪ್ಯ ಸೇವೆಯನ್ನು ಅಪೇಕ್ಷಿಸಿ ಮಂಚದ ಕಾಲುಗಳ ರೂಪವನ್ನು ತಾಳಿಕೊಂಡಿರುತ್ತಾರೆ. ಸದಾಶಿವನು ತನ್ನ (ಸ್ಫಟಿಕದಂತೆ) ಶುಭ್ರವಾದ ಕಾಂತಿಯಿಂದ ಮೇಲು ಹಾಸಿಗೆಯ ರೂಪವನ್ನು ತಾಳಿದವನಾಗಿ ನಿನ್ನ ಹೆಚ್ಚಾದ ಅರುಣಕಾಂತಿಯ ವ್ಯಾಪನೆಯಿಂದ ಬಹಳ ಕೆಂಪಾದ ಶರೀರವನ್ನು ಹೊಂದಿರುವ ಶೃಂಗಾರರಸವೋ ಎನ್ನುವ ಹಾಗೆ ಜನಗಳಿಗೆ ಆಶ್ಚರ್ಯವನ್ನುಂಟುಮಾಡುತ್ತಾ ಇದ್ದಾನೆ. (ಶೃಂಗಾರರಸವು ಕೆಂಪು ಬಣ್ಣವುಳ್ಳದೆಂದು ಕವಿ ಸಮಯವು)

ಬ್ರಹ್ಮ, ವಿಷ್ಣು, ರುದ್ರ, ಮತ್ತು ಈಶ್ವರ ಈ ನಾಲ್ಕು ಮಂದಿ ಅಧಿಕಾರ ಪುರುಷರು, ಮತ್ತು ಮಹೇಶ್ವರ ತತ್ತ್ವದಲ್ಲಿ ಅಂತರ್ಭೂತರಾಗಿರುತ್ತಾರೆ.

(K).

ಪದ್ಯಾನುವಾದ

ಎಲೆ ದೇವಿ, ಹರಿಹರ ಬ್ರಹ್ಮರುದ್ರರುಗಳಾ
ನಿನ್ನ ಪವಡಿಪ ಮಂಚರೂಪವನೆ ಹೊಂದಿದರು,
ಶಿವನು ತಾನಚ್ಚಬಿಳಿಯವನಾಗಿ ಮೇಲುಹಾಸಿನ ತೋರ್ಕೆಯವನಾದನು;

ನಿನ್ನ ಮೈವೆಳಗಿನಾ ಮಾರ್ಪೊಳಪಿನಿಂದಾದ
ರಾಗ ರಂಜಿತರಕ್ತ ವರ್ಣತ್ವಕಾರಣದೆ
ಶೃಂಗಾರರಸದೆ ಮೈವೆತ್ತುದೆನೆ ಕಂಗಳಿಗೆ ಕೌತುಕವ ಕರೆಯುತಿಹನು ॥೯೨॥

ಟಿಪ್ಪಣಿಗಳು

೧. ಶಿವ ಎಂದರೆ ತತ್ತ್ವವೂ ಹೌದು, ಅಧಿಕಾರಿಯೂ ಹೌದು, ಇಲ್ಲಿ ಶಿವನೆಂದರೆ ಸದಾಶಿವತತ್ತ್ವವು.

೨. ಇಲ್ಲಿ **ಉತ್ಪ್ರೇಕ್ಷಾಲಂಕಾರವಿದೆ.** ಅತಿಧವಳವರ್ಣನಾದ ಸದಾಶಿವನು ದೇವಿಯ ಅರುಣಕಾಂತಿಯ ಪ್ರತಿಫಲದಿಂದ ಕೆಂಪಾಗಲು ಕೆಂಪುವರ್ಣದ ಶೃಂಗಾರ ರಸವನ್ನು ದೇಹವು ಧರಿಸಿದೆ ಎಂಬಂತಿದೆ ಎಂದು ಹೇಳಿರುವುದರಿಂದ ಉತ್ಪ್ರೇಕ್ಷಾಲಂಕಾರವಿದೆ.

(ಜಿ–ಪುಟ ೧೦೭)

೩. ಲಲಿತಾ ಸಹಸ್ರನಾಮದಲ್ಲಿ (ಶ್ಲೋಕ ೨೨ ನಾಮ ೫೮) ಪಂಚಬ್ರಹ್ಮಾಸನಸ್ಥಿತಾ (ಪಂಚಬ್ರಹ್ಮರನ್ನೇ ಪೀಠವಾಗಿ ಮಾಡಿಕೊಂಡು ಕುಳಿತಿರುವವಳು) ಎಂದು ಹೇಳಿದೆ. ದೇವಿಯ ಚಿಂತಾಮಣಿಗೃಹದಲ್ಲಿ ಮಹಾಮಂಚ ಶಿವನು; ತಲೆದಿಂಬು ಮಹೇಶನ ಚಾಪೆ, ಮಂಚದ ನಾಲ್ಕು ಕಾಲುಗಳು ಬ್ರಹ್ಮ–ಹರಿ–ರುದ್ರ, ಈಶ್ವರರು; ಪೀಕದಾನಿ ಮಹೇಂದ್ರನು, ಹಾಸಿಗೆಮೇಲೆ ವಿರಾಜಿತೆ ಮಹಾ ತ್ರಿಪುರಸುಂದರಿ, ಎಂದು ಭೈರವಯಾಮಳ ತಂತ್ರದಲ್ಲಿ ಹೇಳಿದೆ.

(ಲ–ಆ. ಪುಟ ೫೮)

೪. ಈ ಜಗತ್ತನ್ನು ಪರಬ್ರಹ್ಮನು ಸೃಷ್ಟಿಸಿದಾಗ ತಾನೇ ಪಂಚಬ್ರಹ್ಮರೂಪನಾಗಿ (ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವ) ಕ್ರಮವಾಗಿ ಸೃಷ್ಟಿ, ಸ್ಥಿತಿ, ಲಯ, ತಿರೋಧಾನ, ಅನುಗ್ರಹ ಎಂಬ ರೂಪಗಳಲ್ಲಿ ಸೃಜಿಸಿದನು. ಶ್ರೀದೇವಿಯೇ ಪರಬ್ರಹ್ಮಸ್ವರೂಪಿಣಿಯಾಗಿರುವುದರಿಂದ ಪಂಚಬ್ರಹ್ಮರ ಸೃಷ್ಟಿ ಶ್ರೀ ದೇವಿಯದೇ ಆಗಿದೆ. ಹೀಗೆ ಮಾಯಾವಿಲಾಸದಿಂದ ನೂರಾರು ರೂಪ ಧರಿಸಿ ಪಂಚಕೃತ್ಯ ನಿರ್ವಹಿಸುವವಳು ಆದ್ದರಿಂದ ದೇವಿಯನ್ನು **ಪಂಚಕೃತ್ಯ ಪರಾಯಣೇ** ಎನ್ನುತ್ತಾರೆ.

(ಶ್ಲೋಕ ೬೪ ನಾಮ ೨೭೪)

(ಲ–ಕೂ. ಪುಟ ೦೩)

೫. ಬ್ರಹ್ಮ, ವಿಷ್ಣು, ರುದ್ರ ಈಶ್ವರರೆಂಬ ನಾಲ್ಕು ಮಂಚದ ಕಾಲುಗಳಿಂದ ಸದಾಶಿವ (ಪರಬ್ರಹ್ಮನೆಂಬ) ಮಂಚದ ಹಲಗೆಯುಳ್ಳ ಆಸನದಲ್ಲಿ ನೆಲಸಿದವಳು. ಆದ್ದರಿಂದ ದೇವಿಯನ್ನು ಪಂಚಬ್ರಹ್ಮಾಸನಸ್ಥಿತಾ ಎಂದು ಕರೆದಿದ್ದಾರೆ.

(ಲ–ಕೂ ಪುಟ ೮೯)

೬. ಲಲಿತಾ ಸಹಸ್ರನಾಮದಲ್ಲಿ ಹೇಳಿದಂತೆ (ನಾಮ ೫೮ ಶ್ಲೋ ೨೨) "ಪಂಚಬ್ರಹ್ಮಾಸನಸ್ಥಿತಾ" ಎಂದರೆ ಪಂಚಬ್ರಹ್ಮರೇ ಆಸನವಾಗಿಯುಳ್ಳವಳು ದೇವಿ ಎಂದರ್ಥ. ಭೂಪುರತ್ರಯ, ನಾಲ್ಕು ದ್ವಾರಗಳು ಒಳಗೊಂಡ ಶ್ರೀ ಚಕ್ರರಚನೆಯಲ್ಲಿ ೯ನೇ ಚಕ್ರವಾಗಿ ಈ ಮಂಚವನ್ನು ಊಹಿಸಿಕೊಳ್ಳಬೇಕು. ನಾಲ್ಕು ವೇದಗಳು ಆ ಕಾಲುಗಳು ಬಿಂದು ತ್ರಿಕೋಣರೂಪಿಯಾದ ದೇವಿಯ ವಿಲೀನಕ್ಕೆ ಆಲಂಬನವಾದ ಸದಾಶಿವ ಹೊದಿಕೆಯಾಗುವುದು.

(ಪ–ಪುಟ ೧೮೫)

೭. ಸದ್ಯೋಜಾತ, ವಾಮದೇವ, ಅಘೋರ–ತತ್ಪುರುಷ ಈಶಾನ ಈ ಐದನ್ನು ಶಿವಾಕಾರ ಮಂಚವೆಂದು ಹೇಳುವರು. ಪಂಚಾಸನಸ್ಥಿತೆ ಎಂದರೆ ಬ್ರಹ್ಮಗ್ರಂಥಿ, ವಿಷ್ಣುಗ್ರಂಥಿ, ರುದ್ರಗ್ರಂಥಿ, ಈಶ್ವರಸ್ಥಾನ ಈ ನಾಲ್ಕು, ದೇವಿಯ ಮಂಚದ ಕಾಲುಗಳಿದ್ದಂತೆ ಜತೆಗೆ ಸಹಸ್ರಾರದಲ್ಲಿರುವ ಸದಾಶಿವ ಮಂಚವಾಗಿದ್ದಾನೆ ಎಂದು ತಿಳಿಯಬೇಕು.

(ಪಂ–ಪುಟ ೪೧೫)


೮. ಲಲಿತಾ ಸಹಸ್ರನಾಮದಲ್ಲಿ ಪಂಚಪ್ರೇತಾಸನಾಸ್ಥಿತಾ (ಶ್ಲೋಕ ೬೧ ನಾಮ ೨೪೯) ಎಂದರೆ ತ್ರಿಮೂರ್ತಿಗಳು, ಈಶಾನ, ಸದಾಶಿವ ಎಂಬ ಐವರು ಪ್ರೇತರೂಪದಲ್ಲಿ ದೇವಿಯನ್ನು ಆರಾಧಿಸುವರು ಎಂದು ರುದ್ರಯಾಮಳದಲ್ಲಿ ಹೇಳಿದೆ.

(ಪೋ –ಪುಟ ೪೪೮)

೯. ಭೂಪುರವೆಂಬ ಹೆಸರುಳ್ಳ ಶ್ರೀ ಚಕ್ರದ ನಾಲ್ಕು ದ್ವಾರಗಳಲ್ಲಿ ಆದಿತತ್ವಗಳೆನಿಸಿದ, ಮಾಯಾ, ಶುದ್ಧವಿದ್ಯಾ, ಮಹೇಶ್ವರ, ಸದಾಶಿವಗಳೆಂಬ ತತ್ತ್ವ ಚತುಷ್ಟಯವೇ ದೇವಿಯು ಪವಡಿಸುವ ಮಂಚದ ನಾಲ್ಕು ಕಾಲುಗಳಿವೆ.

(ಜ–ಪುಟ ೧೦೬)

ಯಂತ್ರಾರಾಧನೆ (ಶ್ಲೋಕ-೯೨)



ಯಂತ್ರರಚನೆ : ಚಿನ್ನದ ತಗಡಿನಲ್ಲಿ ಯಂತ್ರ ರಚಿಸಿ ಅದರಲ್ಲಿ ಅಧೋಮುಖವಾದ ಸಮಭುಜ ತ್ರಿಕೋಣವನ್ನು ಬರೆದು, ಅದರ ೩ ತುದಿಗಳಲ್ಲಿ ತ್ರಿಶೂಲಗಳನ್ನು ಸೇರಿಸಬೇಕು ತ್ರಿಕೋಣದ ಬಳಗೆ ಓಂ ಹ್ರೀಂ ಒಂದನೇ ಸಾಲಿನಲ್ಲಿಯೂ ಹ್ರೀಂ ಬೀಜಾಕ್ಷರನನ್ನು ೨ನೇ ಸಾಲಿನಲ್ಲಿಯೂ ಹ್ರೀಂ ಅನ್ನು ೩ನೇ ಸಾಲಿನಲ್ಲಿಯೂ ಬರೆಯಬೇಕು.

ಪೂಜೆ : ಲಲಿತಾ ತ್ರಿಶತೀ ಕುಂಕುಮಾರ್ಚನೆಯನ್ನು ಮಾಡಬೇಕು.

ನೈವೇದ್ಯ : ಚಿತ್ರಾನ್ನ, ಹಾಲು, ಪಾಯಸ, ತಾಂಬೂಲ.

ಜಪ : ೨೫ ದಿನಗಳಕಾಲ ಪ್ರತಿದಿನ ೧೦೦೦ ಬಾರಿ ಈ ಶ್ಲೋಕವನ್ನು ಪಠಿಸಬೇಕು.

ಫಲ : ರಾಜ್ಯಲಾಭ.

ಶ್ಲೋಕ-೯೩

ದೇವೀ ಸೌಂದರ್ಯ ವರ್ಣನೆ

ಅರಾಲಾ ಕೇಶೇಷು ಪ್ರಕೃತಿಸರಲಾ ಮಂದಹಸಿತೇ
ಶಿರೀಷಾಭಾ [1]ಚಿತ್ತೇ ದೃಷದುಪಲಶೋಭಾ ಕುಚತಟೇ ।
ಭೃಶಂ ತನ್ವೀ ಮಧ್ಯೇ [2]ಪೃಥುರುರಸಿಜಾರೋಹವಿಷಯೇ
ಜಗತ್ತ್ರಾತುಂ ಶಂಭೋರ್ಜಯತಿ ಕರುಣಾ ಕಾಚಿದರುಣಾ ॥ ೯೩ ॥

ಪಾಠಾಂತರ

೧. (ಚಿತ್ತೇ ದೃಷದುಪಲಶೋಭಾ) =ಗಾತ್ರೇ ದೃಷದಿವಕಠೋರಾ (ಓ)
೨. (ಪೃಥುರುರಸಿಜಾರೋಹ)=ಪೃಥುರಪಿವರಾರೋಹ (ಸು)

ಪದವಿಭಾಗ

ಅರಾಲಾ, ಕೇಶೇಷು, ಪ್ರಕೃತಿಸರಲಾ, ಮಂದಹಸಿತೇ, (ಶಿರೀಷಾಭಾ) = ಶಿರೀಷ + ಆಭಾ, ಚಿತ್ತೇ (ದೃಷದುಪಲಶೋಭಾ) = ದೃಷತ್ + ಉಪಲಶೋಭಾ, ಕುಚತಟೇ, ಭೃಶಂ, ತನ್ವೀ, ಮಧ್ಯೇ (ಪೃಥುರುರಸಿಜಾರೋಹವಿಷಯೇ) = ಪೃಥುಃ + ಉರಸಿಜ+ಆರೋಹವಿಷಯೇ, (ಜಗತ್ತ್ರಾತುಂ)+ಜಗತ್+ತ್ರಾತುಮ್, (ಶಂಭೋರ್ಜಯತಿ) = ಶಂಭೋಃ+ಜಯತಿ, ಕರುಣಾ, (ಕಾಚಿದರುಣಾ)= ಕಾಚಿತ್+ ಅರುಣಾ

ಅನ್ವಯಾರ್ಥ

(ಕಾಚಿತ್) ಕೇಶೇಷು	(ಅನಿರ್ವಚನೀಯವಾದ) ಕೂದಲುಗಳಲ್ಲಿ
ಅರಾಲಾ ಮಂದಹಸಿತೇ	ವಕ್ರವಾಗಿಯೂ,
	ಮುಗುಳುನಗೆಯಲ್ಲಿ
ಪ್ರಕೃತಿಸರಲಾ	ಸ್ವಭಾವದಿಂದ ಸರಳವಾಗಿಯೂ
ಚಿತ್ತೇ	ಮನಸ್ಸಿನಲ್ಲಿ
ಶಿರೀಷಾಭಾ	ಬಾಗೇಹೂವಿನಂತೆ-ಕಾಂತಿಯುಳ್ಳದ್ದಾಗಿ (ಮೃದುವಾಗಿ)
ಕುಚತಟೇ	ಸ್ತನಪ್ರಾಂತದಲ್ಲಿ

ದೃಷದುಪಲಶೋಭಾ	(ದೃಷತ್+ಉಪಲ+ಶೋಭಾ) = ಒರಳುಕಲ್ಲು ಮತ್ತು ಗುಂಡುಕಲ್ಲಿನ ಹಾಗೆ ಕಠಿಣವಾದ
ಮಧ್ಯೇ	ನಡುವಿನಲ್ಲಿ
ತನ್ವೀ	ಕೃಶವಾಗಿರುವ (ತೆಳ್ಳಗಾಗಿರುವ)
ಉರಸಿಜಾರೋಹವಿಷಯೇ	(ಉರಸಿಜ+ಆರೋಹ+ವಿಷಯೇ) ಸ್ತನ ಮತ್ತು ನಿತಂಬಗಳ ವಿಷಯದಲ್ಲಿ
ಪೃಥುಃ	ವಿಸ್ತಾರವಾಗಿರುವ
ಅರುಣಾ	(ಅರುಣಾಂಬೆಯ) ಅರುಣ ಬಣ್ಣದ
ಶಂಭೋಃ ಕರುಣಾ	(ಕರುಣಾ ದೇವಿಯಾ) ಶಿವನ ಕರುಣೆಯೆಂಬ ಶಕ್ತಿಯ
ಜಗತ್	ಪ್ರಪಂಚವನ್ನು
ತ್ರಾತುಂ	ಕಾಪಾಡುವುದಕ್ಕೋಸ್ಕರ
ಜಯತಿ	ಸರ್ವೋತ್ಕೃಷ್ಟಳಾಗಿದ್ದಾಳೆ

ತಾತ್ಪರ್ಯ

ದೇವಿಯ ಅಖಂಡಸ್ವರೂಪವನ್ನು ಕವಿಯು ವರ್ಣಿಸುತ್ತಾನೆ. ವಕ್ರವಾದ ಕೇಶಗಳುಳ್ಳವಳಾಗಿಯೂ, ಸ್ವಾಭಾವಿಕವಾಗಿ ಸರಳವಾದ ಮುಗುಳುನಗೆಯುಳ್ಳವಳಾಗಿಯೂ, ಬಾಗೇಹೂವಿನಂತೆ ಕೋಮಲವಾದ ಮನಸ್ಸುಳ್ಳವಳಾಗಿಯೂ, ಕಲ್ಲಿನಂತೆ ಬಹಳ ಕಠಿಣವಾದ ಮತ್ತು ದಪ್ಪನಾದ ಸ್ತನಗಳುಳ್ಳವಳಾಗಿಯೂ, ಬಹಳ ಕೃಶವಾದ ನಡುವುಳ್ಳವಳಾಗಿಯೂ, ವಿಸ್ತಾರವಾದ ನಿತಂಬವುಳ್ಳವಳಾಗಿಯೂ ಈಶ್ವರನ ಕರುಣಾರೂಪಳಾದ, ಅನಿರ್ವಚನೀಯಳಾದ ಅರುಣಾಂಬೆಯು (ಕಾಮೇಶ್ವರಿಯು) ಪ್ರಪಂಚವನ್ನು ಕಾಪಾಡುವುದಕ್ಕೆ ಸರ್ವೋತ್ಕೃಷ್ಟಳಾಗಿ ಪ್ರಕಾಶಿಸುತ್ತಿರುತ್ತಾಳೆ.

(K).

ಪದ್ಯಾನುವಾದ

ಉಂಗುರುಂಗುರಗುರುಳು ನಿಜದೆ ಮೆಲುನಗೆಯರಳು
ಮೆಯ್‌ಶಿರೀಷದ ಮೆಲುಪು ಕುಚತಟವು ಕಲ್ನುಣುಪು
ನಡುವು ಬಲುಬಡವು ದೊಡ್ಡವು ಕುಚನಿತಂಬಗಳು
ಇಂತಪ್ಪ ಶಿವನಕರುಣಾರುಣಾರೂಪೆ ಶಿವೆ ಪೊರೆಗೆ ಜಗವ ॥ ೯೩ ॥

ಟಿಪ್ಪಣಿ : ೯೩ನೇ ಪದ್ಯ ಚೌಪದಿ ಆಗಿದೆ. ಮೂಲಶ್ಲೋಕವನ್ನು ಷಟ್ಪದಿಯನ್ನಾಗಿ ಅನುವಾದಿಸಿಲ್ಲ. ಏಕೋ ತಿಳಿಯದು. (ಸಂ)

ಟಿಪ್ಪಣಿಗಳು

೧. **ದೃಷದುಪಲಶೋಭಾಃ**

(ದೃಷತ್ ಎಂದರೆ ಅರೆಯಲು ಹಾಸಿರುವ ಕಲ್ಲು) (ಹಾಸುಗಲ್ಲು) ಉಪಲ ಎಂದರೆ ಅರೆಯುವ ಕಲ್ಲು ಎಂದರ್ಥ. ಇನ್ನೊಂದು ಅರ್ಥ ಒರಳುಕಲ್ಲು ಮತ್ತು ಗುಂಡುಕಲ್ಲು.

(ಶೇ-ಪುಟ ೨೫೯)

೨. ಕರುಣರಸ ಕೆಂಪುವರ್ಣದ್ದು ಎಂಬುದು ಕವಿಸಮಯಗಳಲ್ಲಿ ಒಂದು. ತ್ರಿಪುರ ಸುಂದರೀ ದೇವಿಯ ವರ್ಣ ಕೆಂಪು ಎಂಬುದು ಶಾಸ್ತ್ರ ಸಿದ್ಧವಾಗಿದೆ. ಈ ಶ್ಲೋಕದಲ್ಲಿ ಸರ್ವೇಶ್ವರಿಯು ಶಿವನ ಕರುಣರಸದ ಕೆಂಪಿನರೂಪವೆಂದು ಹೇಳಿರುವುದರಿಂದ ಅತಿಶಯೋಕ್ತಿ ಅಲಂಕಾರವಾಗಿದೆ.

(ಜ-ಪುಟ ೧೦೪)

೩. **ಮಹಾಲಾವಣ್ಯ ಶೇವಧೀ** (ಶ್ಲೋಕ೨೦ ನಾಮ೪೮) (ಮಹಾರೂಪಾತಿಶಯದ ನಿಧಿ ಆಗಿರುವವಳು)

೪. **ಅರುಣಾರುಣ ಕೌಸುಂಭ ವಸ್ತ್ರಭಾಸ್ವತ್ ಕಟೀತಟೀ** (ಶ್ಲೋಕ ೧೬ ನಾಮ ೩೭) ಅರುಣವರ್ಣದಂತೆ ನಸುಗೆಂಪು ಬಣ್ಣದ (ಕೇಸರಿವರ್ಣ) ವಸ್ತ್ರವನ್ನು ಧರಿಸಿ ಶೋಭಿಸುತ್ತಿರುವ ಕಟಿ ಪ್ರದೇಶವುಳ್ಳವಳು.

(ಲ-ಆ ಪುಟ ೫೫)

೫. **ಸರ್ವಾರುಣಾ** ಸಂಪೂರ್ಣ ನಸುಗೆಂಪು ಬಣ್ಣದ ಕಾಂತಿಯುಳ್ಳವಳು (ಶ್ಲೋಕ ೨೧ ನಾಮ೨೯)

(ಲ-ಕೂ ಪುಟ ೯೨)


೬. **ಕರುಣಾಕಾಚಿದರುಣಾ** ಶಿವನ ಅಭಿವ್ಯಕ್ತಿಯಿಂದ ಕರುಣೆಯ ಸ್ವರೂಪವೇ ಜಗದಂಬೆಯ ಅರುಣವರ್ಣ

(ಶ್ಲೋಕ ೧೮೧ ನಾಮ ೯೯೨)

ಹೀಗೆ ಲಲಿತಾ ಸಹಸ್ರನಾಮದಲ್ಲಿ ದೇವಿಯ ಅರುಣವರ್ಣವನ್ನು ಬಗೆಬಗೆಯಾಗಿ ವರ್ಣಿಸಲಾಗಿದೆ

(ನಾಮ ೪೮ ೩೭ ೪೯೦)

ಯಂತ್ರಾರಾಧನೆ (ಶ್ಲೋಕ-೯೩)



ಯಂತ್ರರಚನೆ : ಚಿನ್ನದಲ್ಲಿ ಯಂತ್ರವನ್ನು ಬರೆಸಬೇಕು. ಅಧೋಮುಖವಾದ ತ್ರಿಕೋಣದ ಮೂರು ತುದಿಗಳಲ್ಲಿ ತ್ರಿಶೂಲಗಳನ್ನು ಸೇರಿಸಬೇಕು. ತ್ರಿಕೋಣದ ಒಳಗೆ ಒಂದನೇ ಸಾಲಿನಲ್ಲಿ ಓಂ ಹ್ರೀಂ ಬೀಜಾಕ್ಷರಗಳನ್ನು ಎರಡನೇ ಸಾಲಿನಲ್ಲಿ ಹ್ರೀಂ ಮೂರನೆ ಸಾಲಿನಲ್ಲಿ ಹ್ರೀಂ ಎಂದು ಬರೆಸಬೇಕು.

ಜಪ : ೨೫ ದಿನಗಳ ಕಾಲ ಪ್ರತಿನಿತ್ಯವೂ ೧೦೦೦ ಸಲ ಜಪಿಸಿ ಯಂತ್ರವನ್ನು ಧರಿಸಬೇಕು.

ಪೂಜೆ : ಕಮಲದ ದಳಗಳಿಂದ ಲಲಿತಾ ಅಷ್ಟೋತ್ತರ ಮತ್ತು ಲಕ್ಷ್ಮೀ ಅಷ್ಟೋತ್ತರ ಅರ್ಚನೆ ಮಾಡಬೇಕು.

ನೈವೇದ್ಯ : ಜೇನುತುಪ್ಪ

ಫಲ : **ಸಕಲಾಭಿಷ್ಟಸಿದ್ಧಿ.**

ಶ್ಲೋಕ-೯೪

ಚಂದ್ರಮಂಡಲವೇ ದೇವಿಯ ಕರ್ಪೂರ ಕರಂಡ

ಕಲಂಕಃ ಕಸ್ತೂರೀ ರಜನಿಕರಬಿಂಬಂ ಜಲಮಯಂ
ಕಲಾಭಿಃ ಕರ್ಪೂರೈರ್ಮರಕತಕರಂಡಂ ನಿಬಿಡಿತಮ್ ।
[1]ಅತಸ್ತ್ವದ್ಭೋಗೇನ ಪ್ರತಿದಿನಮಿದಂ ರಿಕ್ತಕುಹರಂ
ವಿಧಿರ್ಭೂಯೋ ಭೂಯೋ ನಿಬಿಡಯತಿ ನೂನಂ ತವ ಕೃತೇ
॥ ೯೪ ॥

ಪಾಠಾಂತರ

೧. (ಅತಸ್ತ್ವದ್ಭೋಗೇನ) = ಪುನಸ್ತ್ವದ್ಭೋಗೇನ (ಸು)

ಪದವಿಭಾಗ

ಕಲಂಕಃ, ಕಸ್ತೂರೀ, ರಜನಿಕರಬಿಂಬಂ, ಜಲಮಯಂ, ಕಲಾಭಿಃ, (ಕರ್ಪೂರೈರ್ಮರಕತಕರಂಡಂ) = ಕರ್ಪೂರೈಃ + ಮರಕತಕರಂಡಂ, ನಿಬಿಡಿತಮ್, (ಅತಸ್ತ್ವದ್ಭೋಗೇನ) = ಅತಃ+ತ್ವತ್+ಭೋಗೇನ, (ಪ್ರತಿದಿನಮಿದಂ) = ಪ್ರತಿದಿನಂ+ಇದಂ, ರಿಕ್ತಕುಹರಂ, (ವಿಧಿರ್ಭೂಯೋ) = ವಿಧಿಃ+ಭೂಯಃ, (ಭೂಯೋ)=ಭೂಯಃ, ನಿಬಿಡಯತಿ, ನೂನಂ, ತವ, ಕೃತೇ.

ಅನ್ವಯಾರ್ಥ

(ಹೇ ಭಗವತಿ,)	ಎಲೈ ಪೂಜ್ಯಳಾದ ದೇವಿಯೇ,
ಕಲಂಕಃ	(ಚಂದ್ರನಲ್ಲಿ ಕಾಣುವ) ಕಲಂಕವೇ
ಕಸ್ತೂರೀ	ಕಸ್ತೂರಿಯು ಆಗಿರುವುದು.
ರಜನಿಕರಬಿಂಬಂ	(ರಾತ್ರಿಯಲ್ಲಿ ಬೆಳಗುವ ಕಿರಣಗಳ) ಚಂದ್ರನ ಮಂಡಲವು
ಜಲಮಯಂ	ನೀರು (ಪನ್ನೀರು) ಆಗಿರುವುದು
ಕಲಾಭಿಃ	ಹದಿನಾರು ಚಂದ್ರಕಲೆಗಳೆಂಬ
ಕರ್ಪೂರೈಃ	ಕರ್ಪೂರದ ಹುಡಿಗಳಿಂದ
ನಿಬಿಡತಂ	ತುಂಬಲ್ಪಟ್ಟ (ಚಂದ್ರಮಂಡಲವು)

ಮರಕತಕರಂಡಂ	ಮರಕತ (ಪಚ್ಚೆಯ)–ಭರಣಿಯಾಗಿರುವುದು
ಅತಃ	ಈ ಕಾರಣದಿಂದ
ಪ್ರತಿದಿನಂ	ಪ್ರತಿದಿನದಲ್ಲೂ (ತ್ವತ್ + ಭೋಗೇನ
ತ್ವದ್ಭೋಗೇನ	ನೀನು ಉಪಭೋಗಿಸುತ್ತಿರುವ (ಎಂದರೆ ಕಸ್ತೂರಿ, ಪನ್ನೀರು, ಪಚ್ಚಕರ್ಪೂರಂಗಳ ಸುಖದಿಂದ)
ರಿಕ್ತಕುಹರಂ	ಬರಿದಾದ–ಒಳಭಾಗವುಳ್ಳ ಚಂದ್ರಮಂಡಲವನ್ನು
ವಿಧಿಃ	ಬ್ರಹ್ಮನು
ತವ ಕೃತೇ	ನಿನಗೋಸ್ಕರ ಮಾಡಿ
ಭೂಯೋ ಭೂಯೋ	ಆಗಾಗ (ಮತ್ತೆ ಮತ್ತೆ)
ನಿಬಿಡಯತಿ	ತುಂಬುತ್ತಾನೆ ಎಂಬುದು
ನೂನಂ	ನಿಶ್ಚಯ

ತಾತ್ಪರ್ಯ

ಎಲೈ ದೇವಿಯೇ ಕಳಂಕವೆಂಬ ಕಸ್ತೂರಿಯಿಂದಲೂ ನೀರೆಂಬ ಪನ್ನೀರಿನಿಂದಲೂ, ಕಲೆಗಳೆಂಬ ಪಚ್ಚಕರ್ಪೂರಗಳಿಂದಲೂ ತುಂಬಿದ ಚಂದ್ರಮಂಡಲವು ನಿನ್ನ ಉಪಯೋಗಕ್ಕಾಗಿ ಮಾಡಿದ ಪಚ್ಚೆಭರಣಿ ಆಗಿದೆ. ನೀನು ಅದರಲ್ಲಿರುವ ಕಸ್ತೂರಿ. ಪಚ್ಚಕರ್ಪೂರ, ಪನ್ನೀರು, ಇವುಗಳನ್ನು ಪ್ರತಿದಿನದಲ್ಲೂ ಉಪಯೋಗಿಸುವುದರಿಂದಲೇ ಚಂದ್ರಮಂಡಲವೆಂಬ ಭರಣಿಯು ಬರಿದಾಗುವುದು. ಅದನ್ನು ಬ್ರಹ್ಮನು ನಿನಗೋಸ್ಕರ ಪ್ರತಿದಿನದಲ್ಲೂ ಆಯಾಯಾ ಪದಾರ್ಥಗಳಿಂದ ತುಂಬುತ್ತಾನೆ ಎಂದು ತೋರುತ್ತದೆ. ಇದು ನಿಜವು.

ಲೋಕದಲ್ಲಿ ಒಂದು ಸಣ್ಣ ಪೆಟ್ಟಿಗೆಯಲ್ಲಿ ಬಾಚಣಿಗೆ, ಶಿಕ್ಕಟ್ಟಿಗೆ, ಸಾದು, ಕಾಡಿಗೆ, ಕನ್ನಡಿ, ಕಲಸಿದ ಕುಂಕುಮ, ಜಡೆಗೆ ನಾರು ಇವುಗಳನ್ನೆಲ್ಲಾ ಇಟ್ಟುಕೊಂಡು ಅಲಂಕಾರ ಮಾಡಿಕೊಳ್ಳುವ ಕಾಲದಲ್ಲಿ ಆಯಾಯಾ ಪದಾರ್ಥಗಳನ್ನು ಉಪಯೋಗಿಸಿ ಕೊಳ್ಳುವುದುಂಟು.

(K).

ಪದ್ಯಾನುವಾದ

ಕಪ್ಪುಕಲೆಯಲ್ಲವದು ಕಸ್ತೂರಿ, ಇಂದು ಬಿಂ–
ಬವದಲ್ಲ ಶುದ್ಧಜಲ, ಹದಿನಾರು ಕಲೆಯಲ್ಲ
ಪರಿಮಳದ ಕರ್ಪೂರವಿವು ತುಂಬಿರುವ ಪಚ್ಚೆಗಲ್ಲಿನ ಕರಂಡವದನು

ಪ್ರತಿದಿವಸವೂ ನೀನು ಭೋಗಿಸಲು ಬಳಸುತಿರೆ
ಬಂದಾಗಲದನು ವಿಧಿ ನಿನ್ನ ಭೋಗಕ್ಕೆಂದೆ,
ಎಲೆದೇವಿ, ಆ ಪರಿಮಳ ದ್ರವ್ಯದಿಂದ ತುಂಬುವನಲ್ತೆ ಮರಳಿ ಮರಳಿ
॥ ೯೪ ॥

ಟಿಪ್ಪಣಿಗಳು

ಪಚ್ಚೆಕರಡಿಗೆ

೧. ಕೃಷ್ಣಪಕ್ಷದಲ್ಲಿ ಚಂದ್ರನು ಕ್ಷೀಣಿಸುತ್ತಾನೆ. ಎಂದರೆ ದೇವಿಯ ಸೌಂದರ್ಯ ಸಾಧನಗಳು ವ್ಯಯವಾಗುವುದು. ಶುಕ್ಲಪಕ್ಷದಲ್ಲಿ ಚಂದ್ರನು ವೃದ್ಧಿಸುತ್ತಾನೆ, ಎಂದರೆ ಬ್ರಹ್ಮನು ಸೌಂದರ್ಯ ಸಾಧನಗಳನ್ನು ಚಂದ್ರಮಂಡಲವೆಂಬ ಭರಣಿಯಲ್ಲಿ ತುಂಬುತ್ತಾನೆ ಎಂಬ ಕಲ್ಪನೆಯನ್ನು ಇಲ್ಲಿ ವರ್ಣಿಸಿದೆ.

(ಗ–ಪುಟ ೧೦೩)

೨. ಈ ಶ್ಲೋಕದಲ್ಲಿ ಚಂದ್ರಮಂಡಲವೆಂದರೆ ಪಚ್ಚೆಕರಡಿಗೆ; ಅಲ್ಲಿ ಕಲಂಕವಿದೆ ಎಂದರೆ ಕಸ್ತೂರಿ; ಚಂದ್ರನೆಂದರೆ ಪನ್ನೀರು, ಚಂದ್ರನ ಷೋಡಶಕಲೆಗಳೇ ಕರ್ಪೂರದಹುಡಿ, ಈ ರೀತಿ ದೇವಿಯು ಪರಿಮಳಭರಣಿ (ಸುಗಂಧ ಕರಂಡ)ಯನ್ನು ಬಳಸಿದಾಗ ವೃದ್ಧಿಕ್ಷಯಗಳಿಂದ ಬ್ರಹ್ಮನು ಆಭರಣಿಯನ್ನು ತಿರುಗಿ ತುಂಬುತ್ತಾನೆ ಎಂದು ಹೇಳಿರುವುದರಿಂದ ಇಲ್ಲಿ ಅಪಹ್ನವ ಅಲಂಕಾರವಿದೆ.

(ಜ–ಪುಟ ೧೦೭)

೩. ಚಂದ್ರನ ವೃದ್ಧಿ ಕ್ಷಯಗಳನ್ನು ದ್ರವ್ಯಗಳ ಭರಣಿಯನ್ನು ತುಂಬುವುದು ಖಾಲಿಯಾಗುವುದು ಎಂಬುದಕ್ಕೆ ಉತ್ಪ್ರೇಕ್ಷೆ ಮಾಡಿರುವುದರಿಂದ ಉತ್ಪ್ರೇಕ್ಷಾಲಂಕಾರ ಇಲ್ಲಿದೆ.

(ಶೇ–ಪುಟ ೬೨)

೪. ಚಂದ್ರಕಲೆಗಳನ್ನು ದೇವತೆಗಳು ಕಬಳಿಸುವರು ಎಂದು 'ಸೋಮೋತ್ಪತ್ತಿ' ಎಂಬ ಗ್ರಂಥದಲ್ಲಿ ಹೇಳಿದೆ. ಆದರೆ ದೇವಿ ಚಂದ್ರಕಲೆಗಳನ್ನು (ಕಸ್ತೂರಿ, ಪನ್ನೀರು, ಕರ್ಪೂರ ಮೊದಲಾದುವನ್ನು) ಅನುಭವಿಸುತ್ತಾಳೆ. ಏಕೆಂದರೆ ಚಂದ್ರನಲ್ಲಿರುವ ಚಂದ್ರಿಕೆ, ಸೂರ್ಯನಲ್ಲಿರುವ ಕಾಂತಿ, ಪುರುಷನಲ್ಲಿರುವ ಚೈತನ್ಯ, ವಾಯುವಿನಲ್ಲಿರುವ ಬಲ, ಅಗ್ನಿಯಲ್ಲಿರುವ ಉಷ್ಣತ್ವ, ಮೊದಲಾದವು.

ದೇವಿಯು ಇಲ್ಲದಿದ್ದಲ್ಲಿ ಈ ವಸ್ತುಗಳೆಲ್ಲ ನಿಸ್ಸಾರವೆನಿಸುತ್ತವೆ ಎಂದು ಅಂಬಾಸ್ತವದಲ್ಲಿ ಹೇಳಿದೆ.

(ಪೋ–ಪುಟ ೪೦೨)

೫. ಈ ಶ್ಲೋಕದಲ್ಲಿ ದೇವಿಯು ತಲೆಯಲ್ಲಿ ಧರಿಸಿದ ಚಂದ್ರಮಂಡಲವನ್ನು ಸೌಂದರ್ಯ ಸಾಧನಗಳಿಂದ ತುಂಬಿದ ಒಂದು ಭರಣಿಯೆಂದು ವರ್ಣಿಸಿದ್ದಾನೆ. ಚಂದ್ರಮಂಡಲದಲ್ಲಿರುವುದು ಕಲಂಕವಲ್ಲ ಅದು ಕಸ್ತೂರಿ. ಅವನು ಚಂದ್ರನಲ್ಲ–ಜಲರೂಪಿ ಪನ್ನೀರು, ಹೊರಹೊಮ್ಮುವ ಷೋಡಶದಳ ಶಿಲೆಗಳ ಚಂದ್ರಿಕೆಯೇ ಪಚ್ಚಕರ್ಪೂರದಹುಡಿ. ಹೀಗೆ ದೇವಿಯು ಧರಿಸಿದ ಚಂದ್ರಮಂಡಲ ಒಂದು ಪರಿಮಳ ದ್ರವ್ಯದ ಭರಣಿ ಎಂದು ಉತ್ಪ್ರೇಕ್ಷೆ ಮಾಡಲಾಗಿದೆ.

(ಬು–ಪುಟ ೨೩೨)

೬. ಚಂದ್ರಮಂಡಲವನ್ನು ದೇವಿಯು ನಿತ್ಯೋಪ ಭೋಗಗಳಿಗೆ ಬಳಸುವ ಕರ್ಪೂರ, ಕಸ್ತೂರಿಗಳಿಂದ ತುಂಬಿದ ಮಾಣಿಕ್ಯದ ಭರಣಿಯೆಂದು ವರ್ಣಿಸಿದೆ. ಈ ಭರಣಿಯಲ್ಲಿರುವ ಸುಗಂಧ ವಸ್ತುಗಳನ್ನು ಬಳಸಿಕೊಂಡಾಗ ಖಾಲಿಯಾಗುವುದನ್ನು ಕೃಷ್ಣ ಪಕ್ಷಕ್ಕೂ, ಬ್ರಹ್ಮನು ಅದನ್ನು ತುಂಬಿದಾಗ ಭರ್ತಿಯಾಗುವುದನ್ನು ಶುಕ್ಲಪಕ್ಷಕ್ಕೂ ಹೋಲಿಸಲಾಗಿದೆ.

ಕೃಷ್ಣಪಕ್ಷದಲ್ಲಿ ಕ್ರಮವಾಗಿ ಕಲಾಹೀನವಾಗುವ ಕಿರಣದೇವತೆಗಳನ್ನು ಹೀಗೆ ಹೇಳಲಾಗಿದೆ. ೧ ಕಾಮೇಶ್ವರಿ ೨ ಭಗಮಾಲಿನಿ ೩ ನಿತ್ಯಕ್ಲಿನ್ನ ೪ ಭೇರುಂಡಾ ೫ ವಹ್ನಿವಾಸಿನಿ ೬ ವಜ್ರೇಶ್ವರಿ ೭ ಶಿವದೂತೀ ೮ ತ್ವರಿತಾ ೯ ಕುಲಸುಂದರಿ ೧೦ ನಿತ್ಯಾ ೧೧ ನೀಲಪತಾಕಾ ೧೨ ನಿಜಯಾ ೧೩ ಸರ್ವಮಂಗಳಾ ೧೪ ಜ್ವಾಲಾಮಾಲಿನಿ ೧೫ ಚಿತ್ರಾ


ಈ ಕಲಾದೇವತೆಗಳ ಹೆಸರುಗಳನ್ನು ಕೊನೆಯಿಂದ ಮೊದಲಿಗೆ ಕ್ರಮಾನುಗತವಾಗಿ ಬೆಳಗಿದಾಗ ಶುಕ್ಲಪಕ್ಷದ ಪೂರ್ಣಿಮೆ ಆಗುತ್ತದೆ.

(ಭ–ಪುಟ ೧೦೧)

೭. ಷೋಡಶಕಲೆಗಳನ್ನು ಹೀಗೆ ಹೇಳಿದೆ : ೧ ಅಮೃತಾ ೨ ಮಾನದಾ ೩ ಪೂಷಾ ೪ ಪುಷ್ಟಿ ೫ ತುಷ್ಟಿ ೬ ರತಿ ೭ ಧೃತಿ ೮ ಶಶಿನೀ ೯ ಚಂದ್ರಿಕಾ ೧೦ ಕಾಂತಿ ೧೧ ಜ್ಯೋತ್ಸ್ನಾ ೧೨ ಶ್ರೀ ೧೩ ಪ್ರೀತಿ ೧೪ ಅಂಗದಾ ೧೫ ಪೂರ್ಣಾ ೧೬ ಪೂರ್ಣಾಮೃತ ಎಂಬುದು ಚಂದ್ರನ ೧೬ ಕಲೆಗಳು

(ಶಂ–ಪುಟ ೮೨)

ಯಂತ್ರಾರಾಧನೆ (ಶ್ಲೋಕ ೯೪)



ಯಂತ್ರರಚನೆ : ಚಿನ್ನದ ರೇಖಿನಲ್ಲಿ ಯಂತ್ರವನ್ನು ಬರೆಸಬೇಕು. ಅಧೋಮುಖವಾದ ಸಮಭುಜ ತ್ರಿಕೋಣವನ್ನು ಬರೆದು ಮೂರು ತ್ರಿಶೂಲಗಳನ್ನು ತ್ರಿಕೋಣಗಳ ತುದಿಗಳನ್ನು ಸೇರಿಸಬೇಕು. ತ್ರಿಕೋಣದ ನಡುವೆ ಓಂ ಹ್ರೀಂ ಮೊದಲನೇ ಸಾಲು ಎರಡನೇ ಸಾಲು ಹ್ರೀಂ ಮೂರನೆಯ ಹ್ರೀಂ ಬರೆಸಬೇಕು.

ಪೂಜೆ : ಕೆಂಪು ಹೂಗಳಿಂದ ಲಲಿತಾ ಸಹಸ್ರನಾಮ ಅರ್ಚನೆ ಮಾಡಬೇಕು.

ನೈವೇದ್ಯ : ಮುದ್ರಾನ್ನ, ನಾರಿಕೇಳಫಲ, ಕದಳೀಫಲ

ಜಪ : ೨೫ ದಿನಗಳ ಕಾಲ ೧೦೦೦ ಬಾರಿ ಈ ಶ್ಲೋಕವನ್ನು ಜಪಿಸಬೇಕು.

ಫಲ : ಇಷ್ಟಾರ್ಥ ಸಿದ್ಧಿ.

ಶ್ಲೋಕ–೯೫

ಚಂಚಲಚಿತ್ತರಿಗೆ ದೇವೀಪೂಜಾ ದೌರ್ಲಭ್ಯ

ಪುರಾರಾತೇರಂತಃಪುರಮಸಿ ತತಸ್ತ್ವಚ್ಚರಣಯೋಃ
ಸಪರ್ಯಾಮರ್ಯಾದಾ ತರಲಕರಣಾನಾಮಸುಲಭಾ ।
ತಥಾ ಹ್ಯೇತೇ ನೀತಾಶ್ಶತಮಖಮುಖಾಸ್ಸಿದ್ಧಿಮತುಲಾಂ
ತವ ದ್ವಾರೋಪಾಂತಸ್ಥಿತಿಭಿರಣಿಮಾಧ್ಯಾಭಿರಮರಾಃ ॥ ೯೫ ॥

ಪದವಿಭಾಗ

(ಪುರಾರಾತೇರಂತಃಪುರಮಸಿ) = ಪುರ + ಆರಾತೇಃ + ಅಂತಃಪುರಂ + ಅಸಿ, (ತತಸ್ತ್ವಚ್ಚರಣಯೋಃ) = ತತಃ + ತ್ವತ್ + ಚರಣಯೋಃ, ಸಪರ್ಯಾಮರ್ಯಾದಾ, (ತರಲಕರಣಾನಾಮಸುಲಭಾ) = ತರಲಕರಣಾನಾಮ್ +ಅಸುಲಭಾ, (ತಥಾಹ್ಯೇತೇ) = ತಥಾ+ಹಿ+ಏತೇ, (ನೀತಾಶ್ಶತಮಖಮುಖಾ) ನೀತಾಃ + ಶತಮಖಮುಖಾಃ, (ಸಿದ್ಧಿಮತುಲಾಂ) = ಸಿದ್ಧಿಂ + ಅತುಲಾಂ, ತವ, (ದ್ವಾರೋಪಾಂತ ಸ್ಥಿತಿಭಿರಣಿಮಾದ್ಯಾಭಿರಮರಾಃ) = ದ್ವಾರ+ಉಪಾಂತಸ್ಥಿತಿಭಿಃ + ಅಣಿಮಾ+ಆದ್ಯಾಭಿಃ+ಅಮರಾಃ

ಅನ್ವಯಾರ್ಥ

(ಹೇ ಭಗವತಿ) ತ್ವಂ	(ಎಲೈ ಪೂಜ್ಯಳಾದ ದೇವಿಯೇ) ನೀನು
ಪುರಾರಾತೇಃ	(ತ್ರಿಪುರಾಂತಕನಿಗೆ ಶತ್ರುವಾದ) ಈಶ್ವರನಿಗೆ
ಅಂತಃಪುರಂ (ಅಸಿ)	ಪಟ್ಟದ ರಾಣಿಯು–ಆಗಿದ್ದೀಯೆ
ತತಃ	ಆ ಕಾರಣದಿಂದ
ತ್ವಚ್ಚರಣಯೋಃ	ನಿನ್ನ ಪಾದಗಳ
ಸಪರ್ಯಾಮರ್ಯಾದಾ	ಪೂಜಾಕ್ರಮವು
ತರಲಕರಣಾನಾಮಸುಲಭಾ	(ತರಲ+ಕರಣಾನಾಂ+ಅಸುಲಭಾ) =ಚಂಚಲವಾದ–ಇಂದ್ರಿಯಗಳುಳ್ಳವರಿಗೆ (ಮನಸ್ಸುಳ್ಳವರಿಗೆ)–ದುರ್ಲಭವಾಗಿರುವುದು
ತಥಾ ಹಿ	ಹಾಗೆಯೇ ಸರಿ
ಏತೇ	ಈ

ಶತಮಖಮುಖಾಃ	(ನೂರು ಯಜ್ಞಮಾಡಿದ) ಇಂದ್ರನೇ ಮೊದಲಾದ
ಅಮರಾಃ	ದೇವತೆಗಳು
ತವ	ನಿನ್ನ
ದ್ವಾರೋಪಾಂತಸ್ಥಿತಿಭಿಃ	(ದ್ವಾರ+ಉಪಾಂತ+ಸ್ಥಿತಿಭಿಃ) = ಮನೆಯ ಬಾಗಿಲಿನ–ಸಮೀಪದಲ್ಲಿ–ಇರೋಣವುಳ್ಳ
ಅಣಿಮಾದ್ಯಾಭಿಸ್ಸಹ	ಅಣಿಮಾದಿ ಅಷ್ಟಸಿದ್ಧಿಗಳೊಡನೆ ಮಾತ್ರ
ಅತುಲಾಂ	ಅಸದೃಶವಾದ
ಸಿದ್ಧಿಂ	ಮನೋಪಥವನ್ನು
ನೀತಾಃ	ಹೊಂದಿಸಲ್ಪಟ್ಟಿತು.

ತಾತ್ಪರ್ಯ

ಎಲೈ ದೇವಿಯೇ, ನೀನು ಪರಮೇಶ್ವರನ ಅಂತಃಪುರದಲ್ಲಿ ವಾಸಮಾಡುವ ಪಟ್ಟದರಾಣಿ ಆಗಿರುವೆ. ಆದುದರಿಂದ ಚಂಚಲಚಿತ್ತರಾದ ಇಂದ್ರಾದಿಗಳಿಗೆ ನಿನ್ನ ಪಾದಸೇವೆಯು ದುರ್ಲಭವಾಗಿರುವುದು. ಹೀಗಿದ್ದರೂ ನಿನ್ನ ಸೇವೆಗೆ ಬಂದ ಇಂದ್ರಾದಿಗಳು ನಿನ್ನ ಅಂತಃಪುರದ ಬಾಗಿಲಿನಲ್ಲಿರುವ ಅಣಿಮಾದ್ಯಷ್ಟಸಿದ್ಧಿಗಳಿಂದಲೇ ಬೇಕಾದ ವರಗಳನ್ನು ಪಡೆದುಕೊಳ್ಳುತ್ತಿದ್ದರು.

ಇಂದ್ರಾದಿದೇವತೆಗಳಿಗೆ ಬೇಕಾದಸಿದ್ಧಿಯನ್ನುಂಟುಮಾಡುವ ಶಕ್ತಿಯು ದ್ವಾರಪಾಲಕರಿಗೆ ಇರುವುದೆಂದು ಹೇಳಿರುವುದರಿಂದ ದೇವೀಮಹಾತ್ಮ್ಯೆಯು ಅತಿಶಯವಾಗಿರುವುದು ಎಂದು ಹೇಳಿದಂತಾಯಿತು.

ರಾಜನೀತಿಯು ಹೇಳುವಂತೆ, ಚಪಲಚಿತ್ತರಾದ ಯಾವ ಗಂಡಸರನ್ನೂ ಅಂತಃಪುರದ ಒಳಕ್ಕೆ ಸೇರಿಸಕೂಡದೆಂದು ನಿಯಮ ಇರುವುದು. ಇಂದ್ರಾದಿಗಳು ಚಪಲಚಿತ್ತರೆಂಬುದು ಅಹಲ್ಯಾಹರಣ ಮುಂತಾದವುಗಳಿಂದ ವ್ಯಕ್ತವಾಗಿಯೇ ಇದೆ (K).

ಪದ್ಯಾನುವಾದ

ಹೇ ದೇವಿ, ತ್ರಿಪುರಾಂತಕನ ಪಟ್ಟದರಸಿ ನೀ
ನಾಗಿಯವನಂತಃಪುರದ ವೊಡತಿಯಾಗಿರುವೆ,
ಅದರಿಂದದಲಲ್ತೆ ಪೂಜೆಯ ವೋಜೆ ಚಂಚಲಮನಸ್ಕರಿಗೆ ಸುಲಭವಲ್ಲ;
ಅಂತಿರಲು ದೇವೇಂದ್ರ ಮುಂತಪ್ಪ ದೇವತೆಗ–
ಳೆಲ್ಲರೀ ನಿನ್ನ ಭವನದ ಬಾಗಿಲಾಚೆಯೇ
ನೆಲಸಿದಣಿಮಾದ್ಯಷ್ಟಸಿದ್ಧಿಗಳ ಕೂಡಿರುತ ಸಕಲಸಿದ್ಧಿಯ ಪಡೆವರು ॥೯೫॥

ಟಿಪ್ಪಣಿಗಳು

೧. **ತರಲಕರಣಾನಾಂ ಅಸುಲಭಾ**

(ಚಂಚಲಚಿತ್ತರಾದವರಿಗೆ ಅಂತಃಪುರ ಪ್ರವೇಶ ಸುಲಭವಲ್ಲ) ಚಂಚಲಚಿತ್ತರಾದವರಿಗೆ ಅಂತಃಪುರದಲ್ಲಿ ಪ್ರವೇಶವಿರುವುದಿಲ್ಲ, ಸೌವಿದಲ್ಲರಿಗೆ ಮಾತ್ರ ಎಂದರೆ ಕಂಚಕೀ ಮೊದಲಾದ ಅಂತಃಪುರದ ಸೇವಕರಿಗೆ ಮಾತ್ರಾ ಪ್ರವೇಶ ಎಂದು ನೀತಿವಾಕ್ಯಾಮೃತ ಗ್ರಂಥದಲ್ಲಿ ಹೇಳಿದೆ. ಇದರರ್ಥ ನಿರ್ಮಲಚಿತ್ತರಾದ ಎಂದರೆ ಕಂಚುಕೀ ಮೊದಲಾದ ಅಂತಃಪುರದ ಸೇವಕರಿಗೆ ಮಾತ್ರ ಪ್ರವೇಶ. ಸಮಯಿಗಳಿಂದ ಮಾತ್ರ ಸುಧಾಸಾಗರದ ಮಧ್ಯೆ ಇರುವ ಭಗವತಿಯ ಪಾದ ಸೇವೆಯು ತಿಳಿಯುತ್ತದೆಯೇ ಹೊರತು ಉಳಿದವರಿಗಲ್ಲ.

(ಶೇ–ಪುಟ ೨೬೨)

೨. **ಅಣಿಮಾದ್ಯಷ್ಟಸಿದ್ಧಿಗಳು :** ೧ ಅಣಿಮಾ ೨ ಮಹಿಮಾ ೩ ಲಘಿಮಾ ೪ ಗರಿಮಾ ೫ ಪ್ರಾಪ್ತಿ ೬ ಪ್ರಾಕಾಮ್ಯ ೭ ಈಶತ್ವ ೮ ವಶಿತ್ವ

(ರ–ಪುಟ ೧೦೨)

೩. **ಅಂತರ್ಮುಖ ಸಮಾರಾಧ್ಯಾ ಬಹಿರ್ಮುಖ ಸುದುರ್ಲಭಾ**

(ಲಲಿತಾ ಸಹಸ್ರನಾಮದಲ್ಲಿ ಶ್ಲೋಕ ೧೬, ನಾಮ ೮೭೦) ಅಂತರ್ಮುಖ ಸಮಾರಾಧ್ಯಾ ಎಂದರೆ ಅಂತರ್ಮುಖಿಗಳಾಗಿ ಲೌಕಿಕ ಪ್ರಲೋಭಗಳಿಗೆ ಸಿದ್ಧಿಗಳಿಗೆ ಒಳಗಾಗದೆ ಅವನ್ನು ಕುರಿತು ಯೋಚನೆ ಮಾಡದ ಸಮಯಾಚಾರಿಗಳು ಮತ್ತು ಮಹಾ ನಿರ್ಮೋಹ ಭಕ್ತರಿಗೆ ಮಾತ್ರ ದೇವಿಯ ಪಾದಸೇವೆ ಲಭ್ಯ; **ಬಹಿರ್ಮುಖ ಸುದುರ್ಲಭಾ** ಎಂದರೆ ಇಂದ್ರಾದಿ ದೇವತೆಗಳಂತೆ ನಿರಂತರ ಭೋಗಾಪೇಕ್ಷೆ, ಧನಾಪೇಕ್ಷೆ ಪ್ರಲೋಭನೆಗಳಿಂದ ಕೂಡಿದ ಮನಸ್ಸು ಉಳ್ಳವರಿಗೆ ಬಹಳದೂರ ದೂರವಾಗಿರುತ್ತಾಳೆ ದೇವಿ.

(ಪ–ಪುಟ ೧೯೧)

೪. ಚಂಚಲಚಿತ್ತರಾದ ಇಂದ್ರಾದಿ ದೇವತೆಗಳು ದೇವಿಯ ಅಂತಃಪುರಪ್ರವೇಶ ಪಡೆಯಲಾಗದೆ ಹೊರಬಾಗಿಲಲ್ಲಿದ್ದ ಅಷ್ಟಸಿದ್ಧಿಗಳಿಂದ ಸಿದ್ಧಿ ಪಡೆದರೆಂಬುದು ಅತಿಶಯೋಕ್ತಿ ಅಲಂಕಾರ


(ಜ–ಪುಟ ೧೦೫)

೫. **ಹರಿಬ್ರಹ್ಮೇಂದ್ರ ಸೇವಿತಾ** (ಶ್ಲೋಕ ೬೯ ನಾಮ ೨೯೭) ಎಂದು ಲಲಿತಾ ಸಹಸ್ರನಾಮದಲ್ಲಿ ಹೇಳಿದೆ.

ಶ್ರೀ ಚಕ್ರದ ೧೭ ಮತ್ತು ೧೮ನೇ ಪ್ರಕಾರಗಳ ಮಧ್ಯದಲ್ಲಿ ವಿಷ್ಣುವಿನ ನಿವಾಸ ೧೬ ಮತ್ತು ೧೭ನೇ ಪ್ರಕಾರಗಳ ಮಧ್ಯದಲ್ಲಿ ಬ್ರಹ್ಮನ ನಿವಾಸ ೧೪ ಮತ್ತು ೧೫ನೇ ಪ್ರಕಾರಗಳ ಮಧ್ಯದಲ್ಲಿ ಇಂದ್ರಾದಿ ಲೋಕಪಾಲಕರಸ್ಥಾನ. ಈ ದೇವತೆಗಳೆಲ್ಲರೂ ದೇವಿಯ ಸೇವೆಗಾಗಿ ತಂತಮ್ಮ ಸ್ಥಾನಗಳಲ್ಲಿ ಇರುತ್ತಾರೆ.

(೮–ಆ ಪುಟ ೯೭)

ಯಂತ್ರಾರಾಧನೆ (ಶ್ಲೋಕ–೯೫)



ಯಂತ್ರರಚನೆ : ಚಿನ್ನದ ಪಟ್ಟಿಯಲ್ಲಿ ಬರೆಸಬೇಕು. ಕೆಳಮುಖವಾದ ತ್ರಿಕೋಣದಲ್ಲಿ ಓಂ, ಹ್ರೀಂ ಬೀಜಾಕ್ಷರಗಳನ್ನು ಬರೆಸಬೇಕು.

ಪೂಜೆ : ಬಿಲ್ವಪತ್ರೆಗಳಿಂದ ಶಿವಾಷ್ಟೋತ್ತರ ಅರ್ಚನೆಯನ್ನು ಯಂತ್ರದ ಮೇಲ್ಭಾಗದಲ್ಲೂ ಲಲಿತಾ ಅಷ್ಟೋತ್ತರವನ್ನು ಯಂತ್ರದ ಕೆಳಗಿನ ಭಾಗದಲ್ಲಿ ಅರ್ಚನೆ ಮಾಡಬೇಕು.

ನೈವೇದ್ಯ : ಎಳ್ಳೆಣ್ಣೆ ಮತ್ತು ಬೆಲ್ಲ.

ಜಪ : ಯಂತ್ರವನ್ನು ಎಳ್ಳೆಣ್ಣೆಯಲ್ಲಿಟ್ಟು ಮೂರು ದಿನಗಳು ಪೂಜಿಸಿ ಈ ಶ್ಲೋಕವನ್ನು ಪ್ರತಿನಿತ್ಯವೂ ೧೦೮ ಬಾರಿ ಜಪಿಸಬೇಕು.

ಫಲ : ಆ ಎಳ್ಳೆಣ್ಣೆಯನ್ನು ವ್ರಣಕ್ಕೆ (ಗಾಯಕ್ಕೆ) ಹಚ್ಚಿದರೆ ಆ ಗಾಯ ವಾಸಿಯಾಗುವುದು **ವ್ರಣನಿವಾರಣೆ**

ಶ್ಲೋಕ ೯೬

ದೇವಿಯ ಪಾತಿವ್ರತ್ಯ ವರ್ಣನೆ

ಕಲತ್ರಂ ವೈಧಾತ್ರಂ ಕತಿಕತಿ ಭಜಂತೇ ನ ಕವಯಃ
ಶ್ರಿಯೋ ದೇವ್ಯಾಃ ಕೋ ವಾ ನ ಭವತಿ ಪತಿಃ ಕೈರಪಿ ಧನೈಃ ।
ಮಹಾದೇವಂ ಹಿತ್ವಾ ತವ ಸತಿ ಸತೀನಾಮಚರಮೇ
ಕುಚಾಭ್ಯಾಮಾಸಂಗಃ ಕುರವಕತರೋರಪ್ಯಸುಲಭಃ ॥ ೯೬ ॥

ಪದವಿಭಾಗ

ಕಲತ್ರಂ, ವೈಧಾತ್ರಂ, ಕತಿಕತಿ, ಭಜಂತೇ, ನ, ಕವಯಃ, (ಶ್ರಿಯೋ) = ಶ್ರೀಯಃ, ದೇವ್ಯಾಃ, (ಕೋ) ಕಃ, ವಾ, ನ, ಭವತಿ, ಪತಿಃ, (ಕೈರಪಿ) = ಕೈಃ +ಅಪಿ, ಧನೈಃ, ಮಹಾದೇವಂ, ಹಿತ್ವಾ, ತವ, ಸತಿ (ಸತೀನಾಮಚರಮೇ) ಸತೀನಾಂ+ಅಚರಮೇ, (ಕುಚಾಭ್ಯಾಮಾಸಂಗಃ)= ಕುಚಾಭ್ಯಾಂ + ಆಸಂಗಃ (ಕುರವಕತರೋರಪ್ಯಸುಲಭಃ) = ಕುರವಕತರೋಃ + ಅಪಿ + ಅಸುಲಭಃ.

ಅನ್ವಯಾರ್ಥ

(ಹೇ) ಸತಿ	(ಎಲೈ) ಪತಿವ್ರತೆಯೇ
ವೈಧಾತ್ರಂ	ಬ್ರಹ್ಮನ
ಕಲತ್ರಂ	ಹೆಂಡತಿಯಾದ ಸರಸ್ವತಿಯನ್ನು
ಕತಿಕತಿ	ಎಷ್ಟೇಷ್ಟೋ ಮಂದಿ
ಕವಯಃ	ಕವಿಗಳು
ನ ಭಜಂತೇ	ಪಡೆಯಲಿಲ್ಲವೇ? (ಭಜಿಸುವರಲ್ಲವೇ?)
ಕೈರಪಿ ಧನೈಃ	(ಕೈಃ+ಅಪಿ+ಧನೈಃ) ಯಾವನಾದರೂ ಒಂದು ವಿಧವಾದ ದ್ರವ್ಯಗಳಿಂದ
ಕೋ ವಾ	ಯಾವನಾದರೂ ಒಬ್ಬನು
ಶ್ರಿಯಃ ದೇವ್ಯಾಃ	ಲಕ್ಷ್ಮೀದೇವಿಗೆ
ಪತಿಃ	ಗಂಡನಾಗಿ

ನ ಭವತಿ	ಆಗಲಿಲ್ಲವೇನು? (ಆಗಿದ್ದಾನೆ)
ಸತೀನಾಮಚರಮೇ	(ಸತೀನಾಂ+ಅಚರಮೇ) ಪತಿವ್ರತೆಯರ ಒಳಗೆ – ಅಗ್ರಗಣ್ಯಳಾದ ದೇವಿಯೇ
ಮಹಾದೇವಂ	ಪರಮೇಶ್ವರನನ್ನು
ಹಿತ್ವಾ	ಬಿಟ್ಟು
ತವ	ನಿನ್ನ
ಕುಚಾಭ್ಯಾಂ ಆಸಂಗಃ	ಕುಚಗಳ ಸಂಗವು (ದೇಹಸಂಬಂಧವು)
ಕುರವಕತರೋರಪ್ಯಸುಲಭಃ	(ಕುರವಕತರೋಃ + ಅಪಿ + ಅಸುಲಭಃ) = ಗೋರಂಟೀ ಮರಕ್ಕೂ ದುರ್ಲಭವು

ತಾತ್ಪರ್ಯ

ಮಹಾಪತಿವ್ರತೆಯಾದ ಎಲೈ ಸತೀದೇವಿಯೇ, ಬ್ರಹ್ಮನ ಹೆಂಡತಿಯಾದ ಸರಸ್ವತಿಯನ್ನು ವಿದ್ವಾಂಸರೆಲ್ಲಾ ಸ್ವಾಧೀನಪಡಿಸಿಕೊಂಡೇ ಇರುತ್ತಾರೆ. ವಿಷ್ಣುವಿನ ಸತಿಯಾದ ಲಕ್ಷ್ಮೀದೇವಿಯನ್ನು ಅನೇಕ ಧನಿಕರು ಸ್ವಾಧೀನಪಡಿಸಿಕೊಂಡಿರುತ್ತಾರೆ. (ಇವರಿಬ್ಬರೂ ತಂತಮ್ಮ ಗಂಡಂದಿರನ್ನು ಬಿಟ್ಟು ಅನೇಕ ಗಂಡಂದಿರನ್ನು ಹೊಂದಿರುತ್ತಾರೆ ಎಂದು ಭಾವವು) ದೇವಿಯಾದರೋ ಪರಮೇಶ್ವರನನ್ನು ಹೊರತುಪಡಿಸಿ ಬೇರೆಯವರಿಗೆ ಸ್ವಾಧೀನಳಲ್ಲ. ಕೊನೆಗೆ ಅಚೇತನವಾದ ಗೋರಂಟೀ ಮರಕ್ಕೂ ಆಲಿಂಗನಸೌಖ್ಯವನ್ನು ಒಪ್ಪಲಿಲ್ಲ. ಲಕ್ಷ್ಮೀ ಸರಸ್ವತಿಯರ ನಿಂದೆಯಿಂದ ದೇವಿಯ ಪಾತಿವ್ರತ್ಯವನ್ನು ಅತಿಶಯವಾಗಿ ಹೊಗಳಿದಂತಾಯಿತು.

ಯಾರೇ ಆಗಲಿ ಸರಸ್ವತಿ ಒಲಿದ ಹೊರತು ವಿದ್ಯಾವಂತರಾಗುವುದಿಲ್ಲ. ಲಕ್ಷ್ಮೀ ಒಲಿದ ಹೊರತು ಧನಿಕರಾಗುವುದಿಲ್ಲ. ಈ ತಾತ್ಪರ್ಯವನ್ನಿಟ್ಟುಕೊಂಡು ಕವಿ ಈ ರೀತಿಯಾಗಿ ವರ್ಣಿಸಿದ್ದಾನೆ (K).

ಪದ್ಯಾನುವಾದ

ಹೇ ಸತಿ! ವಿಧಾತ್ರನ ಕಳತ್ರವನ್ನೆನಿತೆನಿತು
ಕವಿಜನರು ತಾವ್ ಭಜಿಸದಿಹರು? ಯಾವುದೊ ಧನವ
ಪಡೆದು ಧನಪತಿಯೆನಿಸಿದಾತಾ ಲಕ್ಷ್ಮೀಪತಿಯು ತಾನಾಗದಿಹನೆ ಜಗದಿ?
ಸತಿಯೆನಿಸಿಕೊಳ್ವಳೊಳು ಸರ್ವೋತ್ತಮೇ ದೇವಿ,
ನಿನ್ನ ವಕ್ಷಸ್ಥಲಾಲಿಂಗನದ ಸೌಭಾಗ್ಯ–
ವದು ಮಹಾದೇವನನ್ನುಳಿದು ಕುರುವಕತರುವಿಗೂ ಸುಲಭವಲ್ಲದಿಹುದು
॥ ೯೬ ॥

ಟಿಪ್ಪಣಿಗಳು

೧. **ಕಲತ್ರಂ**

(ಪತ್ನಿಯನ್ನು) ಕಶ್ಮಲ ದೆಸೆಯಿಂದ ರಕ್ಷಿಸುವುದರಿಂದ ಕಲತ್ರ ಶಬ್ದ ನಿಷ್ಪನ್ನವಾಗಿದೆ. ಅದು ಕಲತ್ರಂ ಆಗಿದೆ. ಕಲತ್ರವೆಂದರೆ ಸರಸ್ವತಿ ಎಂದರ್ಥ.

.(ಶೇ–ಪುಟ ೨೬೪)

೨. **ಕುರವಕತರೋರಪ್ಯಸುಲಭಃ**

ಕುರುವಕವೃಕ್ಷಕ್ಕೂ (ದೊಡ್ಡ ಗೋರಂಟಿ ಗಿಡಕ್ಕೂ) ಅದು ಅಚೇತನವಾಗಿದ್ದರೂ ಅದಕ್ಕೆ ದೇಹದ ರೂಪದಲ್ಲಿ ನಿನ್ನ ಕುಚಾಲಿಂಗನವು ದೊರಕದು ಎಂದ ಮೇಲೆ ಇನ್ನು ಬೇರೆ ಪುರುಷರ ವಿಷಯ ಹೇಳುವುದೇನಿದೆ. ಇದರರ್ಥ, ಸದಾಶಿವನನ್ನು ಬಿಟ್ಟು ಬೇರೆಯಾರಿಗೂ ದೇವಿಯ ಕುಚಾಲಿಂಗನವು ದೊರಕುವ ಸಂಭವವೇ ಇಲ್ಲ.

(ಶೇ–ಪುಟ ೨೬೫)

೩. ಕವಿಗಳ ಅಪಾರ ಪಾಂಡಿತ್ಯದ ಕಾರಣದಿಂದ ಶಾರದಾ ಪತಿ, ವಿದ್ಯಾಪತಿ, ಸರಸ್ವತೀಪತಿ ಇತ್ಯಾದಿ ಕರೆಯುವುದುಂಟು. ಇದರಿಂದ ಬ್ರಹ್ಮನನ್ನು ಬಿಟ್ಟು ಬೇರೆಯವರ ಸತಿ ಶಾರದೆ ಎಂದು ಹೇಳಿದಂತೆ ಆಗುವುದರಿಂದ ಶಾರದೆಯ ಪಾತಿವ್ರತ್ಯಕ್ಕೆ ಭಂಗಬಂದಂತಾಯಿತು. ಅದೇ ರೀತಿಯಾಗಿ ಲಕ್ಷ್ಮೀಪತಿ ಎಂದು ಕರೆದಾಗ ನಾರಾಯಣನನ್ನು ಬಿಟ್ಟು ಲಕ್ಷ್ಮೀ ಧನಿಕರನ್ನು ಸೇರಿದಂತಾಯಿತು. ಆದರೆ ಪಾರ್ವತೀಪತಿ ಎಂದಾಗ ಪರಮೇಶ್ವರನನ್ನು ಬಿಟ್ಟು ಬೇರಾರೂ ಆಗಲು ಸಾಧ್ಯವಿಲ್ಲದಿರುವುದರಂದ ಪಾರ್ವತಿ ಪತಿವ್ರತೆಯರಲ್ಲಿ ಅಗ್ರಗಣ್ಯಳು.

(ಗ–ಪುಟ ೧೦೬)

೪. **ತಿಲಕ ಕುರವಕೌ ವೀಕ್ಷಣಾಲಿಂಗನಾಭ್ಯಾಂ** ಎಂಬ ದೋಹದಶಾಸ್ತ್ರದ ಮಾತಿನಂತೆ ತಿಲಕವೃಕ್ಷಕ್ಕೆ ವೀಕ್ಷಣಭಾಗ್ಯ ಸಿಕ್ಕಿದರೆ ಚಿಗುರುತ್ತೆ. ಕುರವಕ (ಗೋರಂಟಿ) ಗಿಡಕ್ಕೆ ಸ್ತ್ರೀಯದ ಸ್ತನಾಲಿಂಗನ ಭಾಗ್ಯ ಸಿಕ್ಕರೆ ಚಿಗುರುತ್ತದೆ. ಆದರೆ ಗಿಡ ಅಚೇತನವಾದರೂ (ಸಂಸ್ಕೃತದಲ್ಲಿ ತರು ಶಬ್ದ ಪುಲ್ಲಿಂಗ) ಪಾರ್ವತಿ ಗೋರಂಟಿ ಗಿಡಕ್ಕೂ ತನ್ನ ಸ್ಪರ್ಶಾವಕಾಶ ನೀಡುವುದಿಲ್ಲ. ಏಕೆಂದರೆ ಆಕೆ ಶುದ್ಧಾಂಗವಾಗಿ ಪತಿವ್ರತೆ.


(ಗ–ಪುಟ ೧೦೬)

೫. ಗೋರಂಟಿ ಗಿಡ ೩ ಬಗೆ ಇರುವುದು. ಕೆಂಪು ಬಿಡುವುದನ್ನು 'ಕುರುವಕ' ಎನ್ನುತ್ತಾರೆ. ಹಸಿರು ಗೋರಂಟಿಯನ್ನು 'ಕುರಂಟಕ'ವೆಂದು ಕರೆಯುತ್ತಾರೆ. ನೀಲಿ ಗೋರಂಟಿಯನ್ನು 'ಖುಂಟಿ' ಅನ್ನುತ್ತಾರೆ. ಕುರುವಕ ವೃಕ್ಷದಲ್ಲಿ

ಹೂ ಬಿಡಬೇಕಾದರೆ ಸುಂದರ ಸ್ತ್ರೀಯರ ಕುಚಾಲಿಂಗನವಾಗಬೇಕೆಂದು ಹೇಳುತ್ತಾರೆ. ಪಾರ್ವತಿಗೆ ಅಚೇತನ ವೃಕ್ಷವಾದರೂ ಪರಪುರುಷ ಇದ್ದಂತೆ. ಆದ್ದರಿಂದ ಆಕೆ ದ್ರೋಹದ ಕ್ರಿಯೆ ನಡೆಸುವುದಿಲ್ಲ. (ಸಂಸ್ಕೃತದಲ್ಲಿ ತರು ವೃಕ್ಷ ಶಬ್ದ ಪುಲ್ಲಿಂಗ ಶಬ್ದ ಎಂಬುದನ್ನು ಗಮನಿಸಬೇಕು) ಕುರುವಕ ಎಂದರೆ ಕು+ರವ+ಕ ಕುತರ್ಕವಾದ ಮಾಡುವವನು ಎಂಬರ್ಥವೂ ಇದೆ. ಕುತರ್ಕಿಯಲ್ಲಿ ಸುಜ್ಞಾನ ಮೂಡದು ದೇವಿಯ ಅನುಗ್ರಹ ಲಭಿಸದು ಎಂಬುದು ಇಲ್ಲಿಯ ಅಂತರಾರ್ಥ.

(ಉ=ಪುಟ ೨೬೭)

ಯಂತ್ರಾರಾಧನೆ (ಶ್ಲೋಕ ೯೬)



ಯಂತ್ರರಚನೆ : ಬಿಳಿ ಎಕ್ಕದ ಹಾಲಿನಿಂದ ಧರಿಸಲು ಯೋಗ್ಯವಾದ ಒಂದು ವಸ್ತುವಿನಲ್ಲಿ ಬರೆಯಬೇಕು. ಅಧೋಮುಖ ತ್ರಿಕೋಣ ರಚಿಸಿ ಅದರಲ್ಲಿ ಕ್ಲೀಂ ಎಂಬ ಬೀಜಾಕ್ಷರವನ್ನು ೩ ಬಾರಿ ಒಂದರ ಕೆಳಗೆ ಒಂದು, ಬರೆಯಬೇಕು.

ಪೂಜೆ : ಲಲಿತಾ ಸಹಸ್ರನಾಮವನ್ನು ಹೇಳಿ ಕುಂಕುಮಾರ್ಚನೆ ಮಾಡಬೇಕು.

ನೈವೇದ್ಯ : ಜೇನುತುಪ್ಪ, ಹಾಲುಕೀರು

ಜಪ : ಪೂರ್ವಕ್ಕೆ ಮುಖಮಾಡಿ ೮ ದಿನಗಳ ಕಾಲ ದಿನಕ್ಕೆ ೧೦೦೦ ಬಾರಿ ಈ ಶ್ಲೋಕವನ್ನು ಜಪಿಸಬೇಕು.

ಫಲ : ವಿದ್ಯಾಲಾಭ

ಶ್ಲೋಕ ೯೭

ದೇವಿಯ ತುರೀಯತ್ವ ವರ್ಣನೆ

ಗಿರಾಮಾಹುರ್ದೇವೀಂ ದ್ರುಹಿಣಗೃಹಿಣೀಮಾಗಮವಿದೋ
ಹರೇಃ ಪತ್ನೀಂ ಪದ್ಮಾಂ ಹರಸಹಚರೀಮದ್ರೀತನಯಾಮ್ ।
ತುರೀಯಾ ಕಾಪಿ ತ್ವಂ ದುರಧಿಗಮನಿಸ್ಸೀಮಮಹಿಮಾ
[1]ಮಹಾಮಾಯಾ ವಿಶ್ವಂ ಭ್ರಮಯಸಿ ಪರಬ್ರಹ್ಮ ಮಹಿಷಿ ॥ ೯೭ ॥

ಪಾಠಾಂತರ

೧. (ಮಹಾಮಾಯಾ) = ಮಹಾಮಾಯೇ (ಸು)

ಪದವಿಭಾಗ

(ಗಿರಾಮಾಹುರ್ದೇವೀಂ) = ಗಿರಾಮ್ + ಆಹುಃ + ದೇವೀಂ, (ದ್ರುಹಿಣಗೃಹಿಣೀಮಾಗಮವಿದೋ) = ದ್ರುಹಿಣಗೃಹಿಣೀಂ + ಆಗಮವಿದಃ, ಹರೇಃ, ಪತ್ನೀಂ, ಪದ್ಮಾಂ, (ಹರಸಹಚರೀಮ ದ್ರಿತನಯಾಮ್) = ಹರಸಹಚರೀಂ + ಅದ್ರಿತನಯಾಮ್, ತುರೀಯಾ, ಕಾಪಿ, ತ್ವಂ, (ದುರಧಿಗಮನಿಸ್ಸೀಮಮಹಿಮಾ)=ದುಃ + ಅಧಿಗಮ ನಿಸ್ಸೀಮ ಮಹಿಮಾ, ಮಹಾಮಾಯಾ, ವಿಶ್ವಂ, ಭ್ರಮಯಸಿ, ಪರಬ್ರಹ್ಮ ಮಹಿಷಿ.

ಅನ್ವಯಾರ್ಥ

(ಹೇ) ಪರಬ್ರಹ್ಮ ಮಹಿಷಿ	ಎಲೈ ಪರಮಾತ್ಮನಾದ (ಸದಾಶಿವನ) ಪಟ್ಟದರಾಣಿಯೇ (ಮಹಿಷಿ)
ಆಗಮವಿದಃ	(ವೇದ) ಶಾಸ್ತ್ರವನ್ನು ತಿಳಿದವರು
(ತ್ವಾಮೇವ)	(ತ್ವಾಂ+ಏವ) ನಿನ್ನನ್ನೇ
ದ್ರುಹಿಣ ಗೃಹಿಣೀಂ	ಬ್ರಹ್ಮನ - ಪತ್ನಿಯಾದ
ಗಿರಾಂ ದೇವೀಂ ಅಹುಃ	ವಾಕ್ಕುಗಳಿಗೆ - ಅಧಿಷ್ಠಾನಳಾದ ಸರಸ್ವತಿಯನ್ನಾಗಿಯೂ - ಹೇಳುತ್ತಾರೆ.
ತ್ವಾಮೇವ	(ನಿನ್ನನ್ನೇ)
ಹರೇಃ	ವಿಷ್ಣುವಿಗೆ
ಪತ್ನೀಂ	ಹೆಂಡತಿಯಾದ

ಪದ್ಮಾಂ (ಆಹುಃ)	ಲಕ್ಷ್ಮೀಯನ್ನಾಗಿಯೂ – (ಹೇಳುತ್ತಾರೆ)
(ತ್ವಾಮೇವ)	(ನಿನ್ನನ್ನೇ)
ಹರಸಹಚರೀಂ	ಈಶ್ವರನ – ಹೆಂಡತಿಯಾದ
ಅದ್ರಿ ತನಯಾಂ (ಆಹುಃ)	ಪರ್ವತ ಪುತ್ರಿಯನ್ನಾಗಿಯೂ (ಹೇಳುತ್ತಾರೆ.)
ತ್ವಂ	ನೀನು
ತುರೀಯಾ	(ಈ ಮೂರನ್ನೂ ಅತಿಕ್ರಮಿಸಿ) ನಾಲ್ಕನೆಯವಳಾದ
ಕಾಪಿ	ಅನಿರ್ವಚನೀಯ ಸ್ವರೂಪಳಾದ
ದುರಧಿಗಮನಿಸ್ಸೀಮಮಹಿಮಾ	ಹೊಂದುವುದಕ್ಕೆ ಅಸಾಧ್ಯವಾದ – ಕೊನೆಯೇ ಇಲ್ಲದ – ಮಾಹಾತ್ಮ್ಯೆಯುಳ್ಳ
ಮಹಾಮಾಯಾ (ಸತೀ)	ಮಹಾಮಾಯಾ ಸ್ವರೂಪಳಾಗಿ
ವಿಶ್ವಂ	ಪ್ರಪಂಚವನ್ನು
ಭ್ರಮಯಸಿ	ಭ್ರಮೆಯುಂಟಾಗುವಂತೆ ತಿರುಗಿಸುತ್ತಿದ್ದೀಯೆ. (ಪ್ರಪಂಚವನ್ನು ಪ್ರತಿಕ್ಷಣದಲ್ಲೂ ರೂಪಾಂತರಗೊಳಿಸುತ್ತಾ ಇರುವೆ.)

ತಾತ್ಪರ್ಯ

ಎಲೈ ದೇವಿಯೇ, ವೇದಶಾಸ್ತ್ರಜ್ಞರು ನಿನ್ನನ್ನೇ ಬ್ರಹ್ಮನ ಪತ್ನಿಯಾದ ಸರಸ್ವತಿಯನ್ನಾಗಿಯೂ, ವಿಷ್ಣುಪತ್ನಿಯಾದ ಲಕ್ಷ್ಮೀಯನ್ನಾಗಿಯೂ, ಈಶ್ವರನ ಪತ್ನಿಯಾದ ಪಾರ್ವತಿಯನ್ನಾಗಿಯೂ ಹೇಳುತ್ತಾರೆ. ಪರಬ್ರಹ್ಮನ ಪಟ್ಟದ ರಾಣಿಯಾದ ದೇವಿಯೇ, ನೀನು ಅನಿರ್ವಚನೀಯಳಾದ ಮತ್ತು ತಿಳಿಯಲಸಾಧ್ಯವಾದ ಪ್ರಪಂಚವನ್ನು ಭ್ರಮೆಯುಂಟಾಗುವಂತೆ ತಿರುಗಿಸುತ್ತಾ ಇರುತ್ತೀಯೆ. ಅಂದರೆ ಪ್ರಪಂಚದ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣಳಾಗಿರುತ್ತೀಯೆ (K).

ಪದ್ಯಾನುವಾದ

ಹೇ ಪರಬ್ರಹ್ಮಮಹಿಷೀ, ಚತುರ್ಮುಖನೆನಿಪ
ಬ್ರಹ್ಮನವಧೂ ವಾಣಿ, ಹರಿಯ ಹೆಂಡತಿ ಪದ್ಮೆ,
ಹರನ ಸಹಚರಿಯದ್ರಿತನಯೆ ನೀನೆನುತಾಗಮನರಿತವರು ಪೇಳ್ವರು;
ನೀ ತುರೀಯಳು ಸಕಲ ವಿಶ್ವವೂ ನೀನಹುದು
ಅರಿಯಲಸದಳವಾದಪಾರಮಹಿಮಾಸ್ಪದೆಯು
ನೀ ಮಹಾಮಾಯೆ, ತಾಯೇ, ನೀನು ಭ್ರಮೆ ಹುಟ್ಟಿಸುತ್ತಿರುವೆ ಬಹುರೂಪಿಣಿ
॥ ೯೭ ॥

ಟಿಪ್ಪಣಿಗಳು

೧. **ಪರಬ್ರಹ್ಮ ಮಹಿಷಿ**

(ಪರಬ್ರಹ್ಮನಾದ ಸದಾಶಿವನ ಪಟ್ಟದರಾಣಿ) ಪುರುಷ ಸೂಕ್ತದಲ್ಲಿ "ಹ್ರೀ ದೇವಿಯೂ ಲಕ್ಷ್ಮೀದೇವಿಯೂ ನಿನ್ನ ಪತ್ನಿಯರು" (ತೈ ಆ ೩-೧೩) ಎಂದು ಹೇಳಿದೆ. ಹ್ರೀ ಎಂದರೆ ಭುವನೇಶ್ವರಿ, ಲಕ್ಷ್ಮೀ ಎಂದರೆ ಶ್ರೀವಿದ್ಯೆ. ಇವರಿಬ್ಬರೂ ಪರಬ್ರಹ್ಮನ ಪತ್ನಿಯರು. ಇವರಲ್ಲಿ ಭುವನೇಶ್ವರಿ ಶ್ರೀವಿದ್ಯೆಯಲ್ಲಿ ಅಂತರ್ಗತಳಾಗಿದ್ದಾಳೆ. ಆದ್ದರಿಂದ ಚಂದ್ರಕಲೆಗೆ ಪ್ರಾಶಸ್ತ್ಯವು. ಚಂದ್ರಕಲೆಯೇ ಪಟ್ಟದ ರಾಣಿ. (ಶೇ-ಪುಟ ೨೬೬)

೨. ಈ ಶ್ಲೋಕದಲ್ಲಿ ಆಗಮಮತದಂತೆ ಸರಸ್ವತಿ, ಲಕ್ಷ್ಮೀ, ಪಾರ್ವತಿಯರು ನಿನ್ನ ರೂಪವೇ ಎಂದು ದೇವಿಗೆ ಹೇಳಿ ನೀನು ಈ ಮೂರಕ್ಕೆ ಅತೀತೆಯಾದ ಪರಬ್ರಹ್ಮ ಮಹಿಷಿಯಿಂದ ಕೂಡಿದ ಪರಾಶಕ್ತಿ ಮಹಾಮಾಯೆ ಎಂದು ಹೇಳಿ ಶೈವ, ಶಾಕ್ತ, ಸಮಯ ಧರ್ಮಗಳ ರಹಸ್ಯ ತತ್ತ್ವವನ್ನು ತಿಳಿಸಿದ್ದಾರೆ.

(ಪು-ಪುಟ ೧೨೫)

೩. ಶ್ಯಾಮಲಾದಂಡಕದಲ್ಲಿ (ಕಾಳಿದಾಸ ವಿರಚಿತ?) ತಾನು ಕಂಡ ದೇವಿಯನ್ನು (ಕಾಳೀಸ್ವರೂಪಿಣಿಯನ್ನು) ಹೀಗೆ ವರ್ಣಿಸಿದ್ದಾನೆ, "ಸರ್ವ ತೀರ್ಥಾತ್ಮಿಕೇ, ಸರ್ವಮಂತ್ರಾತ್ಮಿಕೇ, ಸರ್ವಯಂತ್ರಾತ್ಮಿಕೇ, ಸರ್ವಮುದ್ರಾತ್ಮಿಕೇ, ಸರ್ವಶಕ್ತ್ಯಾತ್ಮಿಕೇ, ಸರ್ವವರ್ಣಾತ್ಮಿಕೇ, ಸರ್ವರೂಪೇ, ಹೇ ಜಗನ್ಮಾತೃಕೇ ಪಾಹಿಮಾಂ! ತುಭ್ಯಂ ನಮೋ ದೇವಿ । ತುಭ್ಯಂ ನಮೋ ದೇವಿ! ತುಭ್ಯಂ ನಮೋ ದೇವಿ ಎಂದು ಸ್ತುತಿಸಲಾಗಿದೆ.

(ಪ-ಪುಟ ೧೯೫)

೪. ಮೂವರು ದೇವತೆಯರಿಗಿಂತ ಅಧಿಕವಾಗಿ ನಾಲ್ಕನೇ ದೇವತೆಯೆಂದೂ ಅಪಾರ ಮಹಿಮೆಯುಳ್ಳವಳೆಂದು ಶಂಕರರು ದೇವಿಯನ್ನು ಭಾವಿಸಿದ್ದಾರೆ. ಆದ ಕಾರಣವೇ ಓಂ ಐಂ ಹ್ರೀಂ ಶ್ರೀಂ ಎಂಬ ಬೀಜಾಕ್ಷರಗಳಿಂದ ದೇವಿಯನ್ನು, ಸ್ತುತಿಸಿದ್ದಾರೆ. ಓಂ ಎಂದರೆ ಪರಬ್ರಹ್ಮ; ಐಂ ಎಂದರೆ ಸರಸ್ವತಿ; ಶ್ರೀಂ ಎಂದರೆ ಲಕ್ಷ್ಮೀ; ಹ್ರೀಂ ಎಂದರೆ ಪಾರ್ವತಿ. ಇವೆಲ್ಲ ಸೇರಿಸಿದರೆ ಓಂ ಐಂ ಹ್ರೀಂ ಶ್ರೀಂ ದೇವಿ ಆಗುತ್ತಾಳೆ.

(ಉ-ಪುಟ ೨೭೦)

೫. **ಹರೇಃ ಪತ್ನೀಂ ಪದ್ಮಾಂ**

ಲಲಿತಾ ಸಹಸ್ರನಾಮದಲ್ಲಿ ಮಹಾಲಕ್ಷ್ಮೀ (೨೧೧) ನಾರಾಯಣೀ (೨೯೮) ಮುಕುಂದಾ (೮೩೮) ವೈಷ್ಣವೀ (೮೯೨) ಈ ನಾಮಗಳು

ಶ್ರೀದೇವಿಯನ್ನು ಲಕ್ಷ್ಮೀಸ್ವರೂಪಳೆಂದು ಹೇಳಲಾಗಿದೆ. ಆಗಮವಿದರು ಪದ್ಮ ಹರಿಯಪತ್ನಿ ಎಂದು ದೇವಿಯನ್ನು ಕರೆದಿದ್ದಾರೆ. (ಪೋ–ಪುಟ ೪೭೬)


೬. **ಹರಸಹಚರೀಮದ್ರಿತನಯಾಂ**

ಲಲಿತಾಸಹಸ್ರನಾಮದಲ್ಲಿ ದೇವಿಯನ್ನು ಶಿವಾ (೫೩) ಭವಾನೀ (೧೧೨) ಶಾಂಭವಿ (೧೨೨) ಪಾರ್ವತೀ (೨೧೬) ಶ್ರೀ ಶಿವಾ (೯೯೮) ಎಂದು ಪಾರ್ವತೀ ಸ್ವರೂಪಳೆಂದು ಕರೆದಿದ್ದಾರೆ. (ಪೋ–ಪುಟ ೪೭೭)

೭. **ದುರಧಿಗಮನಿಸ್ಸೀಮಮಹಿಮಾ**

ಲಲಿತಾ ಸಹಸ್ರನಾಮದಲ್ಲಿ (ನಾಮ ೪೨೯ ಶ್ಲೋಕ ೯೧) ನಿಸ್ಸೀಮ ಮಹಿಮಾ ಎಂದು ದೇವಿಯನ್ನು ಕರೆಯಲಾಗಿದೆ. ನಿಸ್ಸೀಮ ಮಹಿಮಾ ಎಂದರೆ ಸರಸ್ವತಿ, ಲಕ್ಷ್ಮೀ, ಪಾರ್ವತಿ ಮೊದಲಾದ ರೂಪಗಳನ್ನು ಮೀರಿದ ಅತೀತೆ ಎಂದರ್ಥ. (ಪೋ–ಪುಟ ೪೭೭)

ಯಂತ್ರಾರಾಧನೆ (ಶ್ಲೋಕ ೯೭)



ಯಂತ್ರರಚನೆ : ಚಿನ್ನದಲ್ಲಿ ಅಥವಾ ತಾಮ್ರದ ತಗಡಿನಲ್ಲಿ ಅಧೋಮುಖವಾದ ಸಮಭುಜ ತ್ರಿಕೋಣವನ್ನು ಬರೆದು, ಕೋಣಗಳ ತುದಿಯಲ್ಲಿ ತ್ರಿಶೂಲಗಳನ್ನು ಸೇರಿಸಬೇಕು.

ಪೂಜೆ : ಬಿಳಿ ಹೂಗಳಿಂದ ಸರಸ್ವತೀ ಅಷ್ಟೋತ್ತರ ಅರ್ಚನೆ ಮಾಡಬೇಕು.

ನೈವೇದ್ಯ : ಶುದ್ಧಾನ್ನ ಮತ್ತು ಜೇನುತುಪ್ಪ

ಜಪ : ೮ ದಿನಗಳಲ್ಲಿ ದಿನಕ್ಕೆ ೧೦೦೦ ಬಾರಿ ಜಪಿಸಬೇಕು.

ಫಲ : **ದೃಢಕಾಯ ಲಾಭ**

ಶ್ಲೋಕ ೯೮

ದೇವಿಯ ಪಾದತೀರ್ಥ ಪ್ರಾರ್ಥನೆ

ಕದಾ ಕಾಲೇ ಮಾತಃ ಕಥಯ ಕಲಿತಾಲಕ್ತಕರಸಂ
ಪಿಬೇಯಂ ವಿದ್ಯಾರ್ಥೀ ತವ ಚರಣನಿರ್ಣೇಜನಜಲಮ್ ।
ಪ್ರಕೃತ್ಯಾ ಮೂಕಾನಾಮಪಿ ಚ ಕವಿತಾಕಾರಣತಯಾ
ಕದಾ ಧತ್ತೇ ವಾಣೀಮುಖಕಮಲತಾಂಬೂಲಸರತಾಮ್ ॥ ೯೮ ॥

ಪದವಿಭಾಗ

ಕದಾ, ಕಾಲೇ, ಮಾತಃ, ಕಥಯ, (ಕಲಿತಾಲಕ್ತಕರಸಂ) ಕಲಿತ+ಆಲಕ್ತಕರಸಂ,ಪಿಬೇಯಂ, ವಿದ್ಯಾರ್ಥೀ, ತವ, ಚರಣನಿರ್ಣೇಜನಜಲಮ್, ಪ್ರಕೃತ್ಯಾ, (ಮೂಕನಾಮಪಿ) = ಮೂಕಾನಾಂ+ಅಪಿ, ಚ, ಕವಿತಾಕಾರಣತಯಾ, ಕದಾ, ಧತ್ತೇ, ವಾಣೀಮುಖಕಮಲ-ತಾಂಬೂಲರಸತಾಮ್.

ಅನ್ವಯಾರ್ಥ

(ಹೇ) ಮಾತಃ	(ಎಲೈ) ತಾಯಿಯೇ
ತವ ಕಲಿತಾಲಕ್ತಕರಸಂ	(ತವ+ಕಲಿತಾ+ಅಲಕ್ತಕ ರಸಂ) ನಿನ್ನ-ಅಂಟಿಕೊಂಡಿರುವ-ಅರಗಿನರಸವುಳ್ಳ
ಚರಣನಿರ್ಣೇಜನ ಜಲಂ	(ಚರಣ+ನಿರ್ಣೇಜನ+ಜಲಂ) = ಕಾಲುಗಳನ್ನು - ತೊಳೆದ - ನೀರನ್ನು
ವಿದ್ಯಾರ್ಥೀ	ವಿದ್ಯೆಗಳಲ್ಲಿ ಆಸೆಯುಳ್ಳ (ವಿದ್ಯೆಗಳನ್ನು ಬೇಡುವವನಾಗಿ)
ಅಹಂ	ನಾನು
ಕದಾ ಕಾಲೇ	ಯಾವ ಕಾಲದಲ್ಲಿ
ಪಿಬೇಯಂ	ಕುಡಿದೇನು [ಪಾನ ಮಾಡಿಯೇನು]
ಕಥಯ	ಹೇಳು
(ತಚ್ಚ)	(ಆ ಪಾದೋದಕವು)
ಪ್ರಕೃತ್ಯಾ	ಸ್ವಭಾವದಿಂದಲೇ (ಮುಟ್ಟಿದಾಗಲೇ)
ಮೂಕಾನಾಂ	ಮೂಗರಿಗೂ

ಕವಿತಾ ಕಾರಣತಯಾ	ಕವಿತ್ವಕ್ಕೆ ಕಾರಣವಾಗಿರೋಣದರಿಂದ
ವಾಣೀಮುಖಕಮಲ	(ವಾಣೀಮುಖ ಕಮಲ-ತಾಂಬೂಲ ರಸತಾಂ) =
ತಾಂಬೂಲರಸತಾಂ	ಸರಸ್ವತೀ ದೇವಿಯ - ಕಮಲದಂತಿರುವ ಮುಖದಲ್ಲಿ - ಎಲೆಯಡಿಕೆಯ ರಸ ರೂಪವನ್ನು
ಕದಾ	ಯಾವಾಗ
ಧತ್ತೇ	ಧರಿಸುತ್ತದೆ, (ನಿನ್ನ ಪಾದೋದಕವೇ ಸರಸ್ವತಿಯ ತಾಂಬೂಲ ರಸದ ಕೆಲಸವನ್ನು ಕೂಡ ಯಾವಾಗ ಮಾಡುತ್ತದೆ?)

ತಾತ್ಪರ್ಯ

ಕವಿಯು ಈ ಶ್ಲೋಕದಿಂದ ಸಾಮೀಪ್ಯ ಮುಕ್ತಿಯನ್ನು ಬೇಡಿದ್ದಾನೆ.

ಎಲೈ ತಾಯಿಯೇ, ವಿದ್ಯಾರ್ಥಿಯಾದ ನಾನು ಅರಗಿನ ರಸದಿಂದ ಕೆಂಪಾದ ನಿನ್ನ ಪಾದೋದಕವನ್ನು, ಯಾವಾಗ ಕುಡಿಯುವುದು ಹೇಳು? ಅಂದರೆ ನಿನ್ನ ಪಾದಪೂಜೆಯು ಸಾಕ್ಷಾತ್ತಾಗಿ ನನಗೆ ಲಭಿಸುವುದು ಯಾವಾಗ? ಮತ್ತು ಆ ಪಾದೋದಕವು ಮೂಗರಿಗೆ ಮಾತನಾಡುವುದಕ್ಕೆ, ಕಿವಿಯಿಂದ ಕೇಳುವುದಕ್ಕೆ ಶಕ್ತಿಯಿಲ್ಲದ ಮೂಢರಿಗೆ, ಕವಿತಾಕಾರಣವಾದ ಸರಸ್ವತಿಯ ತಾಂಬೂಲದ ಗುಳಿಗೆಯಾಗುವುದು. ಅಂದರೆ ಮೂಗರಿಗೂ ಕವಿತ್ವ ಶಕ್ತಿಯನ್ನುಂಟು ಮಾಡುವುದೆಂದು ತಾತ್ಪರ್ಯ (K).

ಪದ್ಯಾನುವಾದ

ಎಲೈ ತಾಯೆ, ಪೇಳಮ್ಮ ಅಲತಿಗೆಯ ರಸಲೇಪ-
ದಿಂದ ಸೊಬಗಾಂತ ನಿನ್ನಯ ಪಾದವನು ತೊಳೆದ
ನೀರನೀ ವಿದ್ಯಾರ್ಥಿಯಾಗಿರುವ ನಾನೆಂದು ಧನ್ಯನಾಗುವೆ ಸೇವಿಸಿ;
ಹುಟ್ಟುಮೂಗರಿಗಾದೊಡೆಯು ಕವಿತ್ವದ ಶಕ್ತಿ-
ಯನು ಕೊಡುವ ಕಾರಣದಿನಾ ತೀರ್ಥಸೇವನೆಯು
ಸರಸತಿಯ ಮೊಗದಾವರೆಯ ತಾಂಬುಲದ ರಸದ ಮಹಿಮೆಗದು
ಮಿಗಿಲೆನಿಪುದು ॥ ೯೮ ॥

ಟಿಪ್ಪಣಿಗಳು

ಕಲಿತಾಲಕ್ತಕರಸಂ

೧. ಪಾದ ಪ್ರಕ್ಷಾಲನೆಯ ಜಲದ ಲಾಕ್ಷಾರಸವನ್ನು ಸರಸ್ವತಿಯ ತಾಂಬೂಲರಸ ರೂಪವಾಗಿದೆ ಎಂದು ಉತ್ಪ್ರೇಕ್ಷೆ ಮಾಡಿರುವುದರಿಂದ ಉತ್ಪ್ರೇಕ್ಷಾಲಂಕಾರವಿದೆ.

(ಶೇ–ಪುಟ ೨೬೯)

೨. ಮೂಕಪಂಚಾಶತಿ ಕಾವ್ಯದ ಕರ್ತೃ ಮೂಕನೆಂಬ ಕವಿಯೂ ಕವಿಶ್ರೇಷ್ಠನಾದ ಕಾಳಿದಾಸನೂ ಈ ಶ್ಲೋಕದಲ್ಲಿ ಸೂಚಿತರಾಗಿದ್ದಾರೆಂದು ಹೇಳಲಾಗಿದೆ.

೩. ದೇವಿಯ ಪಾದಾಂಬುಜದ ಅಲಕ್ತಕರಸದ ಕೆಂಪು ಸರಸ್ವತಿಯು ತಾಂಬೂಲರಸವಿದ್ದಂತೆ. ಅದು ನನಗೆ ಲಭ್ಯವಾಗಲಿ ಎಂದು ಶಂಕರರು ಆಶಿಸಿದ್ದಾರೆ. ಕಾಳಿದಾಸನಿಗೆ ಸರಸ್ವತೀ ಮುಖ ಕಮಲಸ್ಥ ತಾಂಬೂಲ ದೊರೆತು ಮಹಾಕವಿಯಾದನು ಎಂದು ಪ್ರತೀತಿ. ಭಗವತೀ ಚರಣ ನಿರ್ಣೇಜನಜಲವೆಂದರೆ ಪಾದೋದಕವು ಸತ್ಕವಿತಾನುಗ್ರಹಕ್ಕೆ ಕಾರಣವಾಗಿದೆ. ಆದಕಾರಣ ಅದು ನನಗೆಂದು ಲಭ್ಯವೆಂದು ಹಾತೊರೆದಿದ್ದಾರೆ ಶಂಕರರು ಇಲ್ಲಿ.

(ತು–ಪುಟ ೪೭೭)

ಚರಣನಿರ್ಣೇಜನಜಲಂ


೪. 'ಚರಣನಿರ್ಣೇಜನ ಜಲಂ' ಎಂಬ ಮಾತು ಸಮಯ ಮತವನ್ನು ಸಾರುತ್ತದೆ. ಏಕೆಂದರೆ ಕೌಲಮತದಲ್ಲಿ ದೇವಿಯು ಸರ್ಪಾಕಾರವಾಗಿ ಮೂಲಾಧಾರದಲ್ಲಿ ಇರುತ್ತಾಳೆ.

(ಶ್ರೀ–ಪುಟ ೩೨೭)

೫. ಈ ಜಗತ್ತಿನಲ್ಲಿರುವ ಎಲ್ಲ ಜ್ಞಾನವೂ ದೇವಿಯ ಪ್ರಜ್ಞಾನವೆಂಬ ಕೆಂಪು ಅರಗಿನ ಬಣ್ಣದಿಂದ ಕೂಡಿದ ಚರಣವನ್ನು ತೊಳೆದ ಗಂಗಾಜಲವೇ ಆಗಿದೆ. ಅದು ವಾಣೀ ಮುಖತಾವರೆಯ ತಾಂಬೂಲರಸದಂತೆ ಸುಜ್ಞಾನ ಸ್ವರೂಪವೂ, ಕವಿತಾಶಕ್ತಿಯೂ ಆಗಿದೆ. ಆ ಶಕ್ತಿಯ ಅನುಗ್ರಹಬೇಕೆಂದು ಶಂಕರರು ಆಶಿಸಿದ್ದಾರೆ. ದೇವಿಯ ಪಾದೋದಕಮಹಿಮೆ ಎಂದರೆ 'ಮೂಕಂ ಕರೋತಿ ವಾಚಾಲಂ ಪಂಗುಂ ಲಂಘಯತೇ ಗಿರಿಂ' ಎಂದು ಗೀತೆಯ ಧ್ಯಾನಶ್ಲೋಕದಲ್ಲಿ ಹೇಳಿದಂಥ ಮಹಿಮೆ ಉಳ್ಳದ್ದು.

(ರ–ಪುಟ ೧೦೯)

ಯಂತ್ರಾರಾಧನೆ (ಶ್ಲೋಕ ೯೮)



ಯಂತ್ರರಚನೆ : ಚಿನ್ನದ ಪಟ್ಟಿಕೆಯಲ್ಲಿ ಚಿತ್ರದಲ್ಲಿರುವಂತೆ ಅಧೋಮುಖವಾದ ಸಮಭುಜ ತ್ರಿಕೋಣವನ್ನು ಬರೆಯಬೇಕು ಮಧ್ಯೆ ಹ್ರೀಂ ಬೀಜಾಕ್ಷರ ಬರೆಯಬೇಕು.

ಪೂಜೆ : ಕೆಂಪು ಹೂಗಳಿಂದ ಲಲಿತಾ ಸಹಸ್ರನಾಮ ಅರ್ಚನೆ ಮಾಡಬೇಕು.

ನೈವೇದ್ಯ : ಜೇನುತುಪ್ಪ

ಜಪ : ೧೬ ದಿನಗಳ ಕಾಲ ಪ್ರತಿದಿನ ೧೦೦೦ ಬಾರಿ ಈ ಶ್ಲೋಕವನ್ನು ಜಪಿಸಬೇಕು.

ಫಲ : ಸ್ತ್ರೀಯರಿಗೆ ಗರ್ಭಧಾರಣೆ; ಪುರುಷರಿಗೆ ವೀರ್ಯಾಭಿವೃದ್ಧಿ.

ಶ್ಲೋಕ ೯೯

ದೇವೀಭಕ್ತರ ಮಹಿಮೆ

ಸರಸ್ವತ್ಯಾ ಲಕ್ಷ್ಮ್ಯಾ ವಿಧಿಹರಿಸಪತ್ನೋ ವಿಹರತೇ
ರತೇಃ ಪಾತಿವ್ರತ್ಯಂ ಶಿಥಿಲಯತಿ ರಮ್ಯೇಣ ವಪುಷಾ ।
ಚಿರಂಜೀವನ್ನೇವ ಕ್ಷಪಿತಪಶುಪಾಶವ್ಯತಿಕರಃ
ಪರಾನಂದಾಭಿಖ್ಯಂ ರಸಯತಿ ರಸಂ ತ್ವದ್ಭಜನವಾನ್ ॥ ೯೯ ॥

ಪದವಿಭಾಗ

ಸರಸ್ವತ್ಯಾ, ಲಕ್ಷ್ಮ್ಯಾ, (ವಿಧಿಹರಿಸಪತ್ನೋ) = ವಿಧಿಹರಿಸಪತ್ನಃ, ವಿಹರತೇ, ರತೇಃ, ಪಾತಿವ್ರತ್ಯಂ, ಶಿಥಿಲಯತಿ, ರಮ್ಯೇಣ, ವಪುಷಾ, ಚಿರಂ, (ಜೀವನ್ನೇವ) = ಜೀವನ್+ಏವ, ಕ್ಷಪಿತಪಶುಪಾಶವ್ಯತಿಕರಃ, (ಪರಾನಂದಾಭಿಖ್ಯಂ) = ಪರ + ಆನಂದ + ಆಭಿಖ್ಯಂ, ರಸಯತಿ, ರಸಂ, (ತ್ವದ್ಭಜನವಾನ್) = ತ್ವತ್ + ಭಜನವಾನ್.

ಅನ್ವಯಾರ್ಥ

(ಹೇ ಭಗವತಿ)	(ಎಲೈ ಪೂಜ್ಯಳಾದವಳೇ,)
ತ್ವದ್ಭಜನವಾನ್	ನಿನ್ನ ಸೇವೆ ಮಾಡುವ ಭಕ್ತನು (ಉಪಾಸಕನು)
ಸರಸ್ವತ್ಯಾ ಲಕ್ಷ್ಮ್ಯಾ	ಸರಸ್ವತೀ ದೇವಿಯಿಂದಲೂ – ಲಕ್ಷ್ಮೀದೇವಿಯಿಂದಲೂ (ಸೇರಿ)
ವಿಧಿಹರಿ ಸಪತ್ನಃ (ಸನ್)	ಬ್ರಹ್ಮನಿಗೂ, ವಿಷ್ಣುವಿಗೂ ಶತ್ರುವಾಗಿ (ಅವರ ಅಸೂಯೆಗೆ ಗುರಿಯಾಗಿ)
ವಿಹರತೇ	ವಿಹರಿಸುತ್ತಾನೆ (ಸುಖವಾಗಿರುತ್ತಾನೆ) ಮತ್ತು
ರಮ್ಯೇ ಚ ವಪುಷಾ	ಮನೋಹರವಾದ ಶರೀರದಿಂದ
ರತೇಃ ಪಾತಿವ್ರತ್ಯಂ	ರತೀದೇವಿಯ ಪತಿವ್ರತಾಧರ್ಮವನ್ನು

ಶಿಥಿಲಯತಿ	ಜಾರಿಸಿಬಿಡುತ್ತಾನೆ [ರತಿಗೆ ತಾನೇ ಮನ್ಮಥನೆಂಬ ಭ್ರಾಂತಿಯನ್ನುಂಟು ಮಾಡುತ್ತಾನೆ]
ಕ್ಷಪಿತ ಪಶುಪಾಶ	ನಾಶ ಮಾಡಲ್ಪಟ್ಟ ಪಶುಪಾಶ ಬಂಧನ
ವ್ಯತಿಕರಃ	(ಸಂಸಾರಬಂಧದ ಸಂಬಂಧವನ್ನು) ಕಳೆದುಕೊಂಡವನಾಗಿ
ಚಿರಂಜೀವನ್ನೇವ	ಬಹುಕಾಲದವರೆಗೂ– ಬದುಕಿದವನಾಗಿಯೇ
ಪರಾನಂದಾಭಿಖ್ಯಂ	(ಪರ+ಆನಂದ+ಅಭಿಖ್ಯಂ) ಪರಮಾನಂದವೆಂಬ ಹೆಸರುಳ್ಳ
ರಸಂ ರಸಯತಿ	ಸುಖವನ್ನು ಅನುಭವಿಸುತ್ತಾನೆ. (ಅಂದರೆ ಜೀವನ್ಮುಕ್ತಿಯನ್ನು ಹೊಂದುತ್ತಾನೆ.)

ತಾತ್ಪರ್ಯ

ಎಲೈ ಪೂಜ್ಯಳಾದ ದೇವಿಯೇ, ನಿನ್ನ ಭಕ್ತನು ಬ್ರಹ್ಮ, ವಿಷ್ಣುಗಳಿಗೆ ಶತ್ರುವಾಗಿ ಅಂದರೆ ಅಸೂಯಾಸ್ಪದವಾಗಿ ಸರಸ್ವತಿಯೊಡನೆಯೂ ಲಕ್ಷ್ಮೀಯೊಡನೆಯೂ ವಿಹರಿಸುತ್ತಾನೆ. ಅಂದರೆ ವಿದ್ಯಾವಂತನೂ ಬಹಳ ಧನಿಕನೂ ಆಗಿರುವನೆಂದು ತಾತ್ಪರ್ಯವು ಮತ್ತು ತನ್ನ ಶರೀರದ ಸೌಂದರ್ಯದಿಂದ ರತಿದೇವಿಗೂ ಮೋಹವನ್ನುಂಟುಮಾಡುತ್ತಾನೆ. ಬದುಕಿರುವಾಗಲೇ ಸಂಸಾರಬಂಧನವನ್ನು ಕಳೆದುಕೊಂಡು ಪರಮಾನಂದವನ್ನು ಅನುಭವಿಸುತ್ತಾನೆ.

(ಕ–ಪುಟ ೧೯೮)

ಪದ್ಯಾನುವಾದ

ನಿನ್ನ ಭಜಿಪನು ಸರಸ್ವತಿ ಲಕ್ಷ್ಮಿಯವರೊಡನೆ
ವಿಹರಿಸುತ ವಿಧಿಹರಿಗಳಿಗೆ ಕರುಬುಹುಟ್ಟಿಪನು,
ರಮ್ಯದೇಹವ ಪಡೆದು ರತಿಯ ಪಾತಿವ್ರತ್ಯಭಂಗಗೈವನು, ನಿಶ್ಚಿತ;
ಇದಕಿಂತ ಮಿಗಿಲಾಗಿ, ಪಶುಪಾಶಬಂಧವನು
ಹರಿದು ಬಿಡುಗಡೆವಡೆದು ಚಿರಕಾಲ ಜೀವಿಸುವ
ಪರಲೋಕದಾನಂದ ರಸವ ಸವಿವನು, ತಾಯೆ, ನೀನು ಕೃಪೆದೋರಲಂದು
॥ ೯೯ ॥

ಟಿಪ್ಪಣಿಗಳು

ವಿಧಿಹರಿಸದತ್ತೋ


೧. ೯೨ನೇ ಶ್ಲೋಕದಿಂದ ೯೯ನೇ ಶ್ಲೋಕದವರೆಗೆ ೮ ಶ್ಲೋಕಗಳಲ್ಲಿ ದೇವಿಯ ವಿರಾಟ ಸ್ವರೂಪವನ್ನು ದರ್ಶನ ಮಾಡಿಸಲಾಗಿದೆ. **ವಿಧಿಹರಿ ಸಪತ್ನಃ** (ಬ್ರಹ್ಮ, ವಿಷ್ಣು ಇವರ ಅಸೂಯೆಗೆ ಪಾತ್ರವಾದವನು.) ನಿನ್ನ ಭಕ್ತನು, ನಿನ್ನ ಅನುಗ್ರಹದಿಂದ ವಿದ್ಯಾ ಪಾರಂಗತನೂ, ಐಶ್ವರ್ಯವಂತನೂ ಆಗುತ್ತಾನೆ. ಅಂದರೆ ವಿದ್ಯಾಪತಿ, ಲಕ್ಷ್ಮೀಪತಿ ಆಗುತ್ತಾನೆ. ಬ್ರಹ್ಮನ ಸತಿ ಸರಸ್ವತಿಗೆ ಒಡೆಯನಾಗುವುದರಿಂದ ಬ್ರಹ್ಮನ ಅಸೂಯೆಗೂ, ಐಶ್ವರ್ಯಕ್ಕೆ (ಲಕ್ಷ್ಮಿಗೆ) ಒಡೆಯನಾದ್ದರಿಂದ ವಿಷ್ಣುವಿನ ಅಸೂಯೆಗೂ ಪಾತ್ರನಾಗುತ್ತಾನೆ ಎಂದು ಉತ್ಪ್ರೇಕ್ಷಿಸಲಾಗಿದೆ.

(ಶೇ–ಪುಟ ೨೭೦)

೨. ಸೌಂದರ್ಯ ಲಹರಿಯಲ್ಲಿ ಪ್ರತಿಪಾದಿಸುವ ಸಮಯಾಚಾರದಂತೆ ಉಪಾಸನೆಯು ಎರಡು ವಿಧ: ೧) ಷಟ್‌ಚಕ್ರದಲ್ಲಿ ಕುಂಡಲಿನಿರೂಪದ ಪರಾಶಕ್ತಿಯ ಉಪಾಸನೆ–ಕುಂಡಲಿನಿ ಪ್ರತಿಬೋಧ ೨) ಧಾರಣಾರೂಪದ ಮಾನಸಿಕ ಉಪಾಸನೆ. ಮೊದಲನೆಯ ವಿಧಾನದಲ್ಲಿ, ಸಾಧಕನು ಯೋಗ್ಯತೆಗೆ ತಕ್ಕ ಪ್ರಮಾಣದಲ್ಲಿ ಪರಾನಂದ ಎಂದು ಕರೆಯಲ್ಪಡುವ ಶಿವಶಕ್ತಿ ಸಂಪುಟದಲ್ಲಿ ತಾದಾತ್ಮ್ಯದ ಪರಾ–ಶ್ರೇಷ್ಠಾ ಮುಕ್ತಿಯನ್ನು ಪಡೆಯುವನು. ಎರಡನೇ ವಿಧಾನದಲ್ಲಿ ಷಟ್‌ಚಕ್ರ ಕಮಲಗಳಲ್ಲಿ ಚಲಿಸುವ ಪ್ರಾಣವಾಯುವನ್ನು ಸ್ತಂಭಿಸಿ ನಾದ ಬಿಂದುಕಲೆಗಳು ತನ್ನ ಇಚ್ಛೆಯಂತೆ ಒಂದು ಚಕ್ರದಲ್ಲಿ ನಿಲ್ಲುವಂತೆ ಮಾಡುವುದೇ ಧಾರಣಾ ಸಿದ್ಧಿ.

(ಪು–ಪುಟ ೧೨೬–೧೨೭)

ಯಂತ್ರಾರಾಧನೆ (ಶ್ಲೋಕ ೯೯)



ಯಂತ್ರರಚನೆ : ಚಿನ್ನದ ತಗಡಿನಲ್ಲಿ ಅಧೋಮುಖ ಸಮಭುಜ ತ್ರಿಕೋಣವನ್ನು ಬರೆದು ತ್ರಿಶೂಲಗಳನ್ನು ತುದಿಗಳಿಗೆ ಸೇರಿಸಿ ಬರೆಯಬೇಕು. ತ್ರಿಕೋಣದ ಮಧ್ಯೆ ಹ್ರೀಂ ಬೀಜಾಕ್ಷರ ಬರೆಯಬೇಕು.

ಪೂಜೆ : ಲಲಿತಾ ತ್ರಿಶತೀ ಕುಂಕುಮಾರ್ಚನೆ ಮಾಡಬೇಕು.

ನೈವೇದ್ಯ : ತ್ರಿಮಧುರ, ಉದ್ದಿನ ವಡೆ, ಜೇನುತುಪ್ಪ.

ಜಪ : ೧೬ ದಿನಗಳ ಕಾಲ ಪ್ರತಿದಿನ ೧೦೦೦ ಬಾರಿಯಂತೆ ಈ ಶ್ಲೋಕವನ್ನು ಜಪಿಸಿ ಯಂತ್ರವನ್ನು ಧರಿಸಬೇಕು.

ಫಲ : ಶೌರ್ಯಲಾಭ.

ಶ್ಲೋಕ ೧೦೦

ದೇವಿಗೆ ಈ ಸ್ತೋತ್ರದ ಅರ್ಪಣೆ

ಪ್ರದೀಪಜ್ವಾಲಾಭಿರ್ದಿವಸಕರನೀರಾಜನವಿಧಿಃ
ಸುಧಾಸೂತೇಶ್ಚಂದ್ರೋಪಲಜಲಲವೈರರ್ಘ್ಯರಚನಾ ।
ಸ್ವಕೀಯೈರಂಭೋಭಿಃ ಸಲಿಲನಿಧಿಸೌಹಿತ್ಯಕರಣಂ
ತ್ವದೀಯಾಭಿರ್ವಾಗ್ಭಿಸ್ತವ ಜನನಿ ! ವಾಚಾಂ ಸ್ತುತಿರಿಯಮ್ ॥ ೧೦೦॥

ಪದವಿಭಾಗ

(ಪ್ರದೀಪಜ್ವಾಲಾಭಿರ್ದಿವಸಕರನೀರಾಜನವಿಧಿಃ)= ಪ್ರದೀಪ ಜ್ವಾಲಾಭಿಃ + ದಿವಸಕರ ನೀರಾಜನವಿಧಿಃ, (ಸುಧಾಸೂತೇಶ್ಚಂ ದ್ರೋಪಲಜಲಲವೈರರ್ಘ್ಯರಚನಾ)= ಸುಧಾಸೂತೇಃ + ಚಂದ್ರ+ಉಪಲ+ಜಲಲವೈಃ + ಅರ್ಘ್ಯರಚನಾ, (ಸ್ವಕೀಯೈರಂಭೋಭಿಃ) = ಸ್ವಕೀಯೈಃ + ಅಂಭೋಭಿಃ, ಸಲಿಲನಿಧಿ ಸೌಹಿತ್ಯಕರಣಂ, (ತ್ವದೀಯಾಭಿರ್ವಾಗ್ಭಿಸ್ತವ) = ತ್ವದೀಯಾಭಿಃ + ವಾಗ್ಭಿಃ + ತವ, ಜನನಿ, ವಾಚಾಂ, (ಸ್ತುತಿರಿಯಂ)= (ಸ್ತುತಿಃ + ಇಯಮ್).

ಅನ್ವಯಾರ್ಥ

(ಹೇ) (ವಾಚಾಂ) ಜನನಿ	(ಎಲ್ಲೈ ಶಬ್ದ) ತಾಯಿಯೇ,
ಸ್ವಕೀಯಾಭಿಃ	ತನ್ನದಾದ (ಸೂರ್ಯನ ಸಂಬಂಧಿಯಾದ)
ಪ್ರದೀಪ ಜ್ವಾಲಾಭಿಃ	ದೀವಟಿಗೆಯ – ಜ್ವಾಲೆಗಳಿಂದ
ದಿವಸಕರನೀರಾಜನವಿಧಿಃ	(ಹಗಲನ್ನು ಮಾಡುವ) ಸೂರ್ಯನಿಗೆ – ಮಂಗಳಾರತಿಯನ್ನು ಮಾಡೋಣವು
(ಯಥಾ)	(ಹೇಗೋ)
ಸ್ವಕೀಯೈಃ ಚಂದ್ರೋಪಲ ಜಲಲವೈಃ	ತನ್ನದಾದ (ಚಂದ್ರನ ಸಂಬಂಧಿಯಾದ) ಚಕ್ರದ ಕಾಂತಶಿಲೆಯ – ನೀರಿನ – ಹನಿಗಳಿಂದ
ಸುಧಾಸೂತೇಃ ಅರ್ಘ್ಯರಚನಾ	ಚಂದ್ರನಿಗೆ (ಬೆಳುದಿಂಗಳನ್ನು ಸುರಿಯುತ್ತಿರುವವನಿಗೆ) – ಅರ್ಘ್ಯವನ್ನು ಕೊಡೋಣವು

(ಯಥಾ)	(ಹೇಗೋ)
(ಭವತಿ)	(ಆಗುತ್ತದೆಯೋ)
(ಸ್ವಕೀಯೈಃ) ಅಂಭೋಭಿಃ	(ತನ್ನದಾದ) (ಸಮುದ್ರ ಸಂಬಂಧಿಯಾದ) ನೀರಿನಿಂದ
ಸಲಿಲನಿಧಿ ಸೌಹಿತ್ಯಕರಣಂ	ಸಮುದ್ರಕ್ಕೆ ತೃಪ್ತಿಯನ್ನು ಉಂಟು ಮಾಡೋಣವು
(ಯಥಾಭವತಿ)	(ಹೇಗೆ ಆಗುತ್ತದೋ)
(ತಥಾ)	(ಅದೇ ರೀತಿ)
ತ್ವದೀಯಾಭಿಃ	ನಿನ್ನ ಸಂಬಂಧಿಯಾದ (ಪಾರ್ವತಿಯ)
ವಾಗ್ಭಿಃ	ಶಬ್ದಗಳಿಂದಲೇ
ತವ	ನಿನ್ನ
ಇಯಂ (ಸ್ತುತಿಃ)	ಈ ಸ್ತೋತ್ರವು
ವಾಚಾಂ ಸ್ತುತಿಃ	ವಾಕ್‌ರೂಪದ ಸ್ತೋತ್ರವಾಗಿದೆ

ತಾತ್ಪರ್ಯ

ಎಲೈ ವಾಗ್ರೂಪಳಾದ ಮತ್ತು ತಾಯಿಯಾದ ದೇವಿಯೇ, ನಿನ್ನದಾದ ಶಬ್ದಗಳನ್ನು ಪ್ರಯೋಗಿಸಿ ಮಾಡಿದ ಈ ಸ್ತೋತ್ರವು ಸೂರ್ಯನಿಗೆ ಕೈದೀಪದಿಂದ (ನೀರಾಜನದಿಂದ) ಆರತಿಯೆತ್ತಿದಂತೆಯೂ ಚಂದ್ರನಿಗೆ ಚಂದ್ರಕಾಂತಶಿಲೆಯಲ್ಲಿ ಬೆಳದಿಂಗಳಿಂದುಂಟಾದ ನೀರಿನಿಂದ ಒಪ್ಪಿಸಿದ ಅರ್ಘ್ಯದಂತೆಯೂ ಸಮುದ್ರಕ್ಕೆ ಅದರ ನೀರಿನಿಂದಲೇ ತೃಪ್ತಿಪಡಿಸಿದಂತೆಯೂ ಆಗಿರುವುದು.

(ಎಲೈ ದೇವಿಯೇ, ಸಕಲ ಶಬ್ದರೂಪಗಳೂ ನೀನೇ ಆಗಿರುವುದರಿಂದ ನಿನ್ನ ಸ್ತೋತ್ರವು ಉಪಚಾರೋಕ್ತಿಯಾಗಿದೆಯೇ ಹೊರತು ನನ್ನ ಸಾಮರ್ಥ್ಯ ಯಾವುದೂ ಇಲ್ಲ. ಅಂದರೆ ನಿನ್ನದನ್ನು ನಿನಗೇ ಒಪ್ಪಿಸಿದ್ದೇನೆಂದು ಹೇಳಿದಂತಾಯಿತು.)

(K).

ಪದ್ಯಾನುವಾದ

ಹೇ ಜನನಿ! ಅವನ ಪ್ರದೀಪಕಿರಣಗಳಿಂದ
ದಿನಕರಗೆ ನೀರಾಜನವದೆಂತೊ ಅಮೃತಕರ–
ನಿಗೆ ಚಂದ್ರಕಾಂತಶಿಲೆಯಿಂದುಗುವ ನೀರ್ಪನಿನರ್ಘ್ಯವನು ಕೊಡುವುದೆಂತೊ

ಜಲನಿಧಿಯ ಜಲದಿಂದ ಬೊಗಸೆನೀರನುಕೊಂಡು
ಅದಕದನೆ ಸಲಿಸುತ್ತ ತೃಪ್ತಿಪಡಿಸುವುದೆಂತೊ
ಅಂತಲ್ತೆ ನಿನ್ನ ವಾಗ್‌ವರದಿಂದ ಮೂಡಿದೀ ವಚನರಚನಾ ಸ್ತೋತ್ರವು
॥ ೧೦೦ ॥

ಟಿಪ್ಪಣಿಗಳು

೧. ಜಗನ್ಮಾತೆಯ ಕರುಣೆಗೆ ಪಾತ್ರವಾಗಲು ನಾವು ಮಾಡಬೇಕಾದುದು ಶ್ರದ್ಧಾಭಕ್ತಿಗಳಿಂದ ಕೂಡಿದ ಪಾರಾಯಣ. ಯಾರಾದರೂ ಸರಿಯೇ ಪ್ರತಿದಿನ ಸೌಂದರ್ಯ ಲಹರಿಯ ೧೦೦ ಶ್ಲೋಕಗಳನ್ನೋ ಅಥವಾ ಕೆಲವು ಶ್ಲೋಕಗಳನ್ನೋ ಭಕ್ತಿ, ಶ್ರದ್ಧೆಗಳಿಂದ ಪಾರಾಯಣಮಾಡಿದರೆ ಸಾಂಗೋಪಾಂಗವಾಗಿ ಶ್ರೀಚಕ್ರಾರ್ಚನೆ ಮಾಡಿದ ಫಲ ಸಿಗುವುದು.

(ಪ–ಪುಟ ३೨೮)

೨. ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆದಂತೆ ದೇವಿಯ ಅನುಗ್ರಹದಿಂದ ಹಾಡಿದ್ದೇನೆ, ಸ್ತುತಿಸಿದ್ದೇನೆ. ನನ್ನದೇನೂ ಇಲ್ಲ ಎಂಬ ವಿನಯವನ್ನು ಅನೇಕ ಕಡೆ ಆದಿಶಂಕರ ಭಗವತ್ಪಾದರು ನಿರೂಪಿಸಿದ್ದಾರೆ. ಉದಾಹರಣೆಗೆ, ಭವಾನೀ ಭುಜಂಗಪ್ರಯಾತ ಸ್ತೋತ್ರದಲ್ಲಿ (ಶ್ಲೋಕ ೧೩) ಹೇಳಿದ ಮಾತಿದು; "ತಾಯೀ ಭವಾನೀ ಶ್ರುತಿಗಳಿಗೆ ಅತೀತಳಾದವಳು ನೀನು. ವೇದಗಳೂ ನಿನ್ನ ಪೂರ್ಣ ಸ್ವರೂಪವನ್ನೂ ಮಹಾತ್ಮೆಯನ್ನೂ ತಿಳಿಸಲಾರವು. ಅಂತಹ ನಿನ್ನನ್ನು ನೀನೇ ಪ್ರಸಾದಿಸಿದ ನನ್ನ ಅತಿಮಿತಜ್ಞಾನದಿಂದ ಸ್ತುತಿಸಲು ಸಂಕಲ್ಪಿಸಿ ಹೀಗೆ ಸ್ತೋತ್ರ ಮಾಡಿದ್ದೇನೆ. ಇದರಲ್ಲಿನ ತಪ್ಪುಗಳನ್ನೆಣಿಸದೆ ಈ ಸ್ತೋತ್ರವನ್ನು ಮಗುವಿನ ಮುದ್ದು ಮಾತುಗಳೆಂದೆಣಿಸಿ ನನ್ನನ್ನು ಕ್ಷಮಿಸಿ ಪ್ರಸನ್ನೆಯಾಗು ಮಾತೆ!"

(ಪ–ಪುಟ ३४೬)

ಸ್ತೋತ್ರ ಪೂಜೆಗಳಾದ ಮೇಲೆ ನೀರಾಜನವೆತ್ತುವುದು ಸಂಪ್ರದಾಯ. ೧೦೦ನೇ ಶ್ಲೋಕದಲ್ಲಿ ದೇವಿಗೆ ಶಂಕರರು ನೀರಾಂಜನವೆತ್ತಿದ್ದಾರೆ. ಇಲ್ಲಿ ಪ್ರಣವದಾರತಿ ದೇವಿಗೆ ಆಗಿದೆ. ಅಉಮ (ಓಂ) ಪ್ರಣವ ಮಂತ್ರ ಅಂಬಿಕಾ ಪ್ರಣವವೆಂದರೆ ಉಮ್ (ಉಮಾ) ಸ್ಥಿತಿ, ಲಯ, ಸೃಷ್ಟಿಕ್ರಮ.

ಅಂಬಿಕೆಯ ಚರಣದಲ್ಲಿ ಬ್ರಹ್ಮ, ವಿಷ್ಣು, ಇಂದ್ರರು ಕಾಂತಿಯುಕ್ತ ಕಿರೀಟಗಳಿಂದ ಬಾಗಿರುವುದು ಒಂದು ಆರತಿ, ಅಂಬಿಕೆಯಲ್ಲಿ ಸಾಯುಜ್ಯ ಪಡೆಯುವ, ಮಹಾಪ್ರಳಯದ ಕರ್ಪೂರಾರತಿ ಎರಡನೆಯದು; ನೂರು ಶ್ಲೋಕಗಳಲ್ಲಿ ಸ್ತುತಿಸಿರುವ ಸೌಂದರ್ಯ ಲಹರಿ ಗಾನವೇ ಮೂರನೇ ಆರತಿ ಎಂದು ತಿಳಿಯಲಾಗಿದೆ.

(ಪಂ–ಪುಟ ೪೨೭)


೪. ಸೌಂದರ್ಯ ಲಹರಿಯಲ್ಲಿ ೨೨ನೇ ಶ್ಲೋಕದಲ್ಲಿ 'ಮುಕುಂದ ಬ್ರಹ್ಮೇಂದ್ರ ಸ್ಫುಟ ಮಕುಟ ನೀರಾಜಿತ ಪದಂ' ಎಂದೂ ೩೦ನೇ ಶ್ಲೋಕದಲ್ಲಿ 'ವಿರಚಯತಿ ನೀರಾಜನ ವಿಧಿಂ' ಎಂದೂ ೧೦೦ನೇ ಶ್ಲೋಕದಲ್ಲಿ 'ದಿವಸಕರ ನೀರಾಜನ ವಿಧಿಂ' ಎಂದೂ ನೀರಾಜನ ಶಬ್ದವನ್ನು ಮೂರು ಬಾರಿ ಬಳಸುವುದರ ಮೂಲಕ ಆರತಿ ಎತ್ತಿದ್ದಾರೆ. ಶ್ಲೋಕ ೨೨ರಲ್ಲಿ 'ಅ'ಕಾರ ೩೦ನೇ ಶ್ಲೋಕದಲ್ಲಿ (ಮ್) ೧೦೦ನೇ ಶ್ಲೋಕದಲ್ಲಿ (ಅ) ಎನ್ನುವ ಬೀಜಾಕ್ಷರಗಳಿವೆ. ಇವು ಮೂರೂ ಸೇರಿ ಉಮ್ ಅ = ಉಮಾ ಎಂದು ಆಗುತ್ತದೆ ಎಂದರೆ ಉಮಾ ಓಂಕಾರ ಸ್ವರೂಪಿಣಿ ಆಗಿದ್ದಾಳೆ. ಓಂನಲ್ಲಿರುವುದೂ ಅ ಉಮ ಉಮಾ ಶಬ್ದದಲ್ಲಿರುವುದೂ ಉಮ್ ಅ ಎಂದು ಕಂಚಿ ಪೀಠಾಧಿಪತಿಗಳು ತಮ್ಮ ಸೌಂದರ್ಯಲಹರಿ ವ್ಯಾಖ್ಯಾನ ಮಾಲೆಯಲ್ಲಿ ಹೇಳಿದ್ದಾನೆ.

(ಪೋ–ಪುಟ ೪೯೫)

೫. "ಸೌಂದರ್ಯ ಲಹರಿಯ ಮೊದಲ ಶ್ಲೋಕದಲ್ಲಿ ಶಿವಃ ಎಂದು ಪ್ರಾರಂಭವಾಗಿದೆ. ೧೦೦ನೇ ಶ್ಲೋಕದಲ್ಲಿ **ಇಯಂ** ಕೊನೆಯ ಪದವಾಗಿದೆ. ಇವೆರಡೂ ಸೇರಿದರೆ **ಶಿವಃ ಇಯಂ** ಎಂದಾಗುವುದು. ಈ ಪದದ ಅರ್ಥ –ಈಕೆಯೇ ಶಿವನು; ಶಿವನೇ ಈಕೆ ಎಂದಾಗುವುದು. ಅಂದರೆ ಪಾರ್ವತೀ ಪರಮೇಶ್ವರರು ವಾಗರ್ಥದಿಂದ ಅವಿಭಾಜ್ಯರೆಂದು ಅವರಿಬ್ಬರನ್ನು ಸೌಂದರ್ಯಲಹರಿಯಲ್ಲಿ ಪ್ರಾರ್ಥಿಸಿದ್ದೇನೆ ಎಂದಾಗುತ್ತದೆ" ಎಂದು ಡಾ. ಮೈಲವರಪು ಶ್ರೀನಿವಾಸ ರಾವ್ ಹೇಳಿದ್ದಾರೆ.

(ಪೋ–ಪುಟ ೪೯೫)

ಯಂತ್ರಾರಾಧನೆ (ಶ್ಲೋಕ ೧೦೦)



ಯಂತ್ರರಚನೆ : ಚಿನ್ನದ ರೇಖಿನಲ್ಲಿ ಕೊರೆದ ಯಂತ್ರದಲ್ಲಿ ಅಧೋಮುಖವಾದ ತ್ರಿಕೋಣದ ತುದಿಯಲ್ಲಿ ೩ ಕಡೆ ತ್ರಿಶೂಲಗಳನ್ನು ಸೇರಿಸಿ ಮಧ್ಯೆ ಓಂ, ಹ್ರೀಂ ಬೀಜಾಕ್ಷರಗಳನ್ನು ಲಿಖಿಸಬೇಕು.

ಪೂಜೆ: ನಾನಾ ವಿಧವಾದ ಪುಷ್ಪಗಳಿಂದ ಲಲಿತಾ ಸಹಸ್ರನಾಮ ಅರ್ಚನೆ ಮಾಡಬೇಕು.

ನೈವೇದ್ಯ: ತೆಂಗಿನಕಾಯಿ, ಬಾಳೆಹಣ್ಣು

ಜಪ: ೧೬ ದಿನಗಳ ಕಾಲ ಪ್ರತಿದಿನ ೧೦೦೦ ಬಾರಿ ಈ ಶ್ಲೋಕವನ್ನು ಜಪಿಸಬೇಕು.

ಫಲ: ಸಕಲ ಕಾರ್ಯಸಿದ್ಧಿ.

ಅನುಬಂಧಗಳು

ಅನುಬಂಧ – ೧

ಅಧಿಕ ಶ್ಲೋಕಗಳು

(೧೦೧, ೧೦೨, ೧೦೩ನೇ ಶ್ಲೋಕಗಳು)

ಟಿಪ್ಪಣಿ

[ಸೌಂದರ್ಯಲಹರಿಯ ಹಲವಾರು ಪ್ರತಿಗಳಲ್ಲಿ ೩ ಅಧಿಕ ಶ್ಲೋಕಗಳು ಕಂಡುಬರುತ್ತವೆ. ಇವು ಉತ್ತರಭಾರತದ ಹಸ್ತಪ್ರತಿಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಪ್ರಖ್ಯಾತ ವ್ಯಾಖ್ಯಾನಕಾರ ಲೊಲ್ಲ ಲಕ್ಷ್ಮೀಧರ ಮೊದಲಾದ ವ್ಯಾಖ್ಯಾನಕಾರರು ಈ ೩ ಶ್ಲೋಕಗಳಿಗೆ ವ್ಯಾಖ್ಯಾನ ಬರೆದಿಲ್ಲ. ಕೆಲವು ಮಂದಿ ವ್ಯಾಖ್ಯಾನಕಾರರು ಮಾತ್ರ ೩ ಶ್ಲೋಕಗಳಿಗೆ ವ್ಯಾಖ್ಯಾನ ಬರೆದಿದ್ದಾರೆ.

ಪ್ರಕ್ಷಿಪ್ತವೆನಿಸಿದ ಈ ೩ ಪದ್ಯಗಳು ಭಕ್ತಿಭಾವಕ್ಕೆ ಪೋಷಕವಾಗಿರುವುದರಿಂದ ಮತ್ತು ಓದುಗರ ಕುತೂಹಲಕ್ಕಾಗಿ ಅನುಬಂಧವಾಗಿ ಈ ೩ ಶ್ಲೋಕಗಳನ್ನು ವಿವರಣೆ ಸಹಿತ ಇಲ್ಲಿ ನೀಡಲಾಗಿದೆ].

೧೦೧. **ಸಮಾನೀತಃ ಪದ್ಭ್ಯಾಂ**.............. ಎಂಬ ಶ್ಲೋಕವು ಅರಾಲಾಕೇಶೇಷು ಎಂಬ ೯೩ನೇ ಪದ್ಯವಾದ ಮೇಲೆ ಬಂದಿದೆ.

೧೦೨. **ಸಮುದ್ಭೂತ ಸ್ಥೂಲ**............. ಎಂಬ ಶ್ಲೋಕವು ಗಿರಾಮಾಹುರ್ದೇವೀ ಎಂಬ ೯೭ನೇ ಪದ್ಯವಾದ ಮೇಲೆ ಬಂದಿದೆ.

೧೦೩. **ನಿಧೇ ನಿತ್ಯಸ್ಮೇರೇ**.................. ಎಂಬ ಶ್ಲೋಕವು ಸರಸ್ವತ್ಯಾಲಕ್ಷ್ಮ್ಯಾ ಎಂಬ ಶ್ಲೋಕವಾದ ಮೇಲೆ ಬಂದಿದೆ.

ಶ್ಲೋಕ ೧೦೧

(ಅಧಿಕ ಶ್ಲೋಕ)

ಸಮಾನೀತಃ [೧]ಪದ್ಭ್ಯಾಂ ಮಣಿ ಮುಕುರತಾಮಂಬರಮಣಿಃ
ಭಯಾದಾಸ್ಯಸ್ಯಾಂತಃ ಸ್ತಿಮಿತಕಿರಣಶ್ರೇಣಿಮಸೃಣಃ
ದಧಾತಿ ತ್ವದ್ವಕ್ತ್ರ ಪ್ರತಿಫಲನಮಶ್ರಾಂತ ವಿಕಚಂ
ನಿರಾತಂಕಂ ಚಂದ್ರಾನ್ನಿಜ ಹೃದಯಪಂಕೇರುಹಮಿವ ॥ ೧೦೧ ॥

ಪಾಠಾಂತರ

೧. ಪದ್ಭ್ಯಾಂ = ಪದ್ಮಾಂ

ಅನ್ವಯಾರ್ಥ

ಪದ್ಭ್ಯಾಂ ಮಣಿಮುಕುರತಾಂ	ದೇವಿಯಾದ ನಿನ್ನ ಚರಣಗಳಿಗೆ ರನ್ನಗನ್ನಡಿರೂಪವನ್ನು
ಸಮಾನೀತಃ	ತಂದವನಾದ
ಅಂಬರಮಣಿಃ	(ಗಗನರತ್ನನಾದ) ಸೂರ್ಯನು
ಆಸ್ಯಾತ್ ಭಯಾತ್	ನಿನ್ನ ಮುಖದ ಭಯದಿಂದ
ಅಂತಃ ಸ್ಥಿಮಿತ ಕಿರಣಶ್ರೇಣಿಮಸೃಣಃ	(ತನ್ನ ಕಿರಣಗಳ ಸಂಪರ್ಕದಿಂದ ಜಗನ್ಮಾತೆಯ ಮುಖಕ್ಕೆ ಆಯಾಸ ಉಂಟಾದೀತೆಂಬ ಅಂಜಿಕೆಯಿಂದ) ಉಷ್ಣ ಕಿರಣಗಳನ್ನು ತನ್ನಲ್ಲೇ ಅಡಗಿಸಿಕೊಂಡು ಕೋಮಲಾಕಾರನಾದ
ಚಂದ್ರಾತ್ ನಿರಾತಂಕಂ	ಚಂದ್ರನಿಂದ ಮುದುಡಿಹೋಗುವ ಭಯವಿಲ್ಲದಿರುವ
ಅಶ್ರಾಂತ ವಿಕಚಂ	ಸದಾ ಅರಳಿರುವ
ನಿಜಹೃದಯ ಪಂಕೇರುಹಮಿವ	ತನ್ನ ಹೃದಯ ಕಮಲದಂತಿರುವ
ತ್ವದ್ವಕ್ತ್ರಪ್ರತಿಫಲನಂ ದಧಾತಿ	ನಿನ್ನ ಮುಖದ ಪ್ರತಿಬಿಂಬವನ್ನೇ ಧರಿಸಿದ್ದಾನೆ.

ತಾತ್ಪರ್ಯ

ಹೇ ಭಗವತಿ, ಗಗನರತ್ನನಾದ ಸೂರ್ಯನು ನಿನ್ನ ಪಾದಸೇವೆಗಾಗಿ ನಿನ್ನ ಪಾದಗಳಿಗೆ ಮಣಿದರ್ಪಣ (ರನ್ನಗನ್ನಡಿ) ಆಗಿದ್ದಾನೆ.

ತನ್ನ ಪ್ರಖರವಾದ ಕಿರಣಗಳಿಂದ ನಿನ್ನ ಮುಖಕ್ಕೆ ಬಳಲಿಕೆ ಉಂಟಾದೀತೆಂಬ ಭೀತಿಯಿಂದ ತನ್ನ ತೀಕ್ಷ್ಣ ಕಿರಣಗಳನ್ನು ತನ್ನಲ್ಲೇ ಅಡಗಿಸಿಕೊಂಡು ಸೌಮ್ಯರೂಪವನ್ನು ತಾಳಿದ್ದಾನೆ. ಆದಕಾರಣ ನಿನ್ನ ಮುಖ ಕಮಲವು ಚಂದ್ರನಿಂದ ಮುದುಡಿ ಹೋಗದೆ ಸದಾ ವಿಕಸಿತವಾಗಿಯೇ ಇರುವುದನ್ನೇ ಧರಿಸಿದ ಪ್ರತಿಬಿಂಬವಾಗಿದ್ದಾನೆ. (ತನ್ನ ಹೃದಯ ಕಮಲದಲ್ಲಿ ದೇವಿಯನ್ನು ಧಾರಣೆಮಾಡಿದಂತೆ ತನ್ನ ರನ್ನದ ಬಿಂಬದಲ್ಲಿ ದೇವಿಯ ಪ್ರತಿಬಿಂಬವನ್ನು ಬಿಂಬಿಸಿದ್ದಾನೆ.)

ಟಿಪ್ಪಣಿಗಳು

೧. ಅರಾಲಾ ಕೇಶೇಷು ಎಂಬ ೯೩ನೇ ಪದ್ಯದ ನಂತರ ಕೆಲವು ಪ್ರತಿಗಳಲ್ಲಿ ಈ ಪದ್ಯ ಸೇರ್ಪಡೆ ಆಗಿದೆ ।

೨. ಭಗವತಿಯ ಮುಖಕಾಂತಿಯು ಸೂರ್ಯನ ತೇಜಸ್ಸಿಗಿಂತ ಕೋಟಿಪಾಲು ಮಿಗಿಲಾದುದು. ವಿಶುದ್ಧಿ ಚಕ್ರದ ಮೇಲಿರುವ ಅನಾಹತ ಚಕ್ರವೆಂಬ ಹೃದಯ ಪದ್ಮದಲ್ಲಿರುವ ಸೂರ್ಯಮಂಡಲವು ದೇವಿಯ ಚರಣಗಳಿಗೆ ರನ್ನಗನ್ನಡಿಯಾಗಿದೆ.

(ಶೇ–ಪುಟ ಪರಿಶಿಷ್ಟ ೨)


೩. ಯಾವ ಬೆಳಕು ಸೂರ್ಯನಲ್ಲಿರುತ್ತಾ ಪ್ರಪಂಚವನ್ನೆಲ್ಲಾ ಬೆಳಗುತ್ತಿರುವುದೋ, ಯಾವ ತೇಜಸ್ಸು ಚಂದ್ರನಲ್ಲಿರುವುದೋ, ಅಗ್ನಿಯಲ್ಲಿ ಯಾವ ಬೆಳಕಿದಿಯೋ ಆ ತೇಜಸ್ಸು ನನ್ನದು ಎಂದು ತಿಳಿ ಎಂದು ಗೀತೆಯಲ್ಲಿ ಹೇಳಿದೆ.

ಗೀತೆ (೧೫–೧೨)

೪. ಶ್ರೀದೇವಿಯ ಮುಖಬಿಂಬ ಸೂರ್ಯನೆಂಬ ಕನ್ನಡಿಯಲ್ಲಿ ಚೆನ್ನಾಗಿ ಪ್ರತಿಫಲಿಸಿದೆ. ಕಠವಲ್ಲಿಯಲ್ಲಿ "ಯಥಾಽದರ್ಶೇ ತಥಾತ್ಮನೀ" ಎಂದು ಹೇಳಿದೆ.

(ತು–ಪುಟ ೪೯೬)

ಯಂತ್ರಾರಾಧನೆ (ಶ್ಲೋಕ ೧೦೧)



ಯಂತ್ರರಚನೆ: ಬಂಗಾರದ ತಗಡಿನ ಮೇಲೆ ತ್ರಿಶೂಲ ಸಹಿತ ಅಧೋಮುಖ ವಾದ ಸಮಭುಜ ತ್ರಿಕೋಣವನ್ನು ರಚಿಸಿ ತುದಿಗಳಲ್ಲಿ ತ್ರಿಶೂಲಾಕಾರವನ್ನು ಬರೆಯಬೇಕು. ತ್ರಿಭುಜದ ಮಧ್ಯ ಓಂ ಹ್ರೀಂ ಒಂದು ಸಾಲಿನಲ್ಲೂ ಹ್ರೀಂ ಹ್ರೀಂ ಎಂಬುದನ್ನು ೨ನೇ ೩ನೇ ಸಾಲುಗಳಲ್ಲಿ ಬರೆಯಬೇಕು.

ಪೂಜೆ: ಲಲಿತಾ ಸಹಸ್ರನಾಮವನ್ನು ಪಠಿಸಿ ಕುಂಕುಮಾರ್ಚನೆ ಮಾಡಬೇಕು.

ನೈವೇದ್ಯ: ತ್ರಿಮಧುರ, ಗಾರಿಗೆ, ಜೇನತುಪ್ಪ, ಬಾಳೆಹಣ್ಣು ತೊವ್ವೆ

ಜಪ: ೨೬ ದಿನಗಳ ಕಾಲ ೧೦೦೦ ಬಾರಿ ಪ್ರತಿದಿನ ಈ ಶ್ಲೋಕವನ್ನು ಪಠಿಸಬೇಕು.

ಫಲ: **ಸಕಲಾಭೀಷ್ಟ ಸಿದ್ಧಿ**

(ಭ–ಪುಟ ೧೧೧)
(ತು–ಪುಟ ೫೦೧)

ಶ್ಲೋಕ ೧೦೨

ಸಮುದ್ಭೂತಸ್ಥೂಲಸ್ತನಭರಮುರಶ್ಚಾರುಹಸಿತಂ
ಕಟಾಕ್ಷೇ ಕಂದರ್ಪಾ: ಕತಿಚನ ಕದಂಬದ್ಯುತಿ ವಪು:
ಹರಸ್ಯ ತ್ವದ್ಭ್ರಾಂತಿಂ ಮನಸಿ ಜನಯಂತಿಸ್ಮ ವಿಮಲಾ:
ಭವತ್ಯಾ ಯೇ ಭಕ್ತಾ: ಪರಿಣತಿರಮೀಷಾಮಿಯಮುಮೇ ॥ ೧೦೨ ॥

ಅನ್ವಯಾರ್ಥ

ಉಮೇ	ಹೇ ಉಮಾದೇವಿಯೆ,
ವಿಮಲಾ:	(ನಿನ್ನ ಉಪಾಸನೆ ಮಾಡಿ) ಪರಿಶುದ್ಧರಾದ
ಯೇ ಭಕ್ತಾ:	ಯಾವ ಭಕ್ತರಿರುವರೋ
ಅಮೀಷಾಂ	ಅವರಿಗೆ
ಇಯಂ ಪರಿಣತಿ:	ಈ ರೀತಿ ಪರಿಣಾಮ ಉಂಟಾಗಿದೆ (ಅದೇನೆಂದರೆ)
ಸಮುದ್ಭೂತ ಸ್ಥೂಲ	ಆವಿರ್ಭವಿಸಿದ – ಸ್ಥೂಲವಾದ
ಸ್ತನಭಾರಮುರ:	ಸ್ತನಗಳುಳ್ಳ ತುಂಬಿದೆದೆಯು ಉಂಟಾಗಿದೆ
ಚಾರು ಹಸತಂ	ಮಂದಹಾಸವು
ಕಟಾಕ್ಷೇ ಕತಿ ಚ ನ ಕಂದರ್ಪಾ:	ಕಡೆ ಕಣ್ಣೋಟದಲ್ಲಿ ಅನೇಕ ಮದನಾಕರ್ಷಣೆ ಉಂಟಾಗಿದೆ
ಕದಂಬದ್ಯುತಿ ವಪು:	ಕದಂಬ ಪುಷ್ಪಗಳಂತೆ ಪ್ರಕಾಶವುಳ್ಳ ಶರೀರವು ಉಂಟಾಗಿದೆ
ಹರಸ್ಯ ಮನಸಿ	ಪರಶಿವನ ಮನಸ್ಸಿನಲ್ಲಿ
ತ್ವದ್ಭ್ರಾಂತಿಂ ಜನಯಂತಿಸ್ಮ	ನೀನು ಎಂಬ ಭ್ರಾಂತಿಯನ್ನು (ಭಕ್ತರು) ಉಂಟುಮಾಡುತ್ತಾರೆ

ತಾತ್ಪರ್ಯ

ಅಮ್ಮ ತ್ರಿಪುರಸುಂದರಿದೇವಿ! ನಿನ್ನನ್ನು ಉಪಾಸಿಸುವ ಭಕ್ತರು ಪರಿಶುದ್ಧ ಚಿತ್ತರಾಗಿರುತ್ತಾರೆ. ನಿನ್ನನ್ನು ಉಪಾಸಿಸುವುದರಿಂದ ತುಂಬಿದೆದೆಯುವರಾಗಿ, ಮಂದಹಾಸಯುಕ್ತರಾಗಿ, ಕಡೆಗಣ್ಣೋಟದಲ್ಲೇ ಸ್ಮರಭಾವವನ್ನು ಉಂಟುಮಾಡುವವರಾಗಿ, ನಸುಕೆಂಪಾದ ಕದಂಬಪುಷ್ಪದ ಕಾಂತಿಯ ಶರೀರಗಳಾಗಿರುವರು. ಹೀಗೆ ನಿನ್ನಿಂದ

ಸಮಾನರೂಪವನ್ನು ತಾಳಿದ ಅವರನ್ನು ನೋಡಿದಾಗ ಸ್ಮರಾಂತಕನಾದ ಶಿವನಿಗೆ ಮನಸ್ಸಿನಲ್ಲಿ ನಿನ್ನನ್ನೇ ನೋಡಿದ ಭಾವನೆ ಉಂಟಾಗುವುದು. ಎಂದರೆ ನಿನ್ನ ಉಪಾಸನೆಯಿಂದ ನಿರ್ಮಲರಾದ ಭಕ್ತರು ನಿನ್ನ ಸಾರೂಪ್ಯವನ್ನು ಹೊಂದಿ ನಿನ್ನ ಬಳಿಯಲ್ಲೇ ಸಖಿಯರಂತೆ ಇರುತ್ತಾ ಶಿವನಿಗೆ ನೀನೇ ಎಂಬ ಭ್ರಾಂತಿಯನ್ನುಂಟುಮಾಡುತ್ತಾರೆ. (ದೇವಿಯ ಉಪಾಸನೆಯಿಂದ ಭಕ್ತರಿಗೆ ಸಾರೂಪ್ಯ ಮೋಕ್ಷ ದೊರಕುತ್ತದೆ ಎಂದರ್ಥ).

(ಪುಟ ೧೧೨)

ಟಿಪ್ಪಣಿಗಳು


೧. ಗಿರಾಮಾಹುರ್ದೇವೀಂ ಎಂಬ ಶ್ಲೋಕದ ನಂತರ (೯೭ನೇ ಶ್ಲೋಕದ ನಂತರ) ಈ ಶ್ಲೋಕ ಸಮುದ್ಭೂತ ಸ್ಥೂಲ ಬಂದಿದೆ.

೨. ದೇವೀ ಉಪಾಸನೆಯ ಭಾವವನ್ನು ಫಲವುಹಿವೆಂಯನ್ನಾಗಿ ಪ್ರತಿಪಾದಿಸಿರುವುದರಿಂದ ಇಲ್ಲಿ ಭ್ರಾಂತಿಮದಾಲಂಕಾರವಿದೆ.

೩. ಬ್ರಹ್ಮವಿದ್ ಬ್ರಹ್ಮೈವ ಕೇವಲಂ ಎಂಬಂತೆ ಬ್ರಹ್ಮನನ್ನು ಆರಾಧಿಸುವನು ಬ್ರಹ್ಮಸ್ವರೂಪನೇ ಆಗುತ್ತಾನೆ ಅನ್ನುವ ಹಾಗೆ, ಈ ಶ್ಲೋಕದಲ್ಲಿ ಭಗವತಿಯನ್ನು ನಿತ್ಯ ನಿರಂತರ ಆರಾಧಿಸುವವರಲ್ಲಿ ಶಕ್ತಿ ಜಾಗ್ರತವಾಗಿ ಶಕ್ತಿ ರೂಪವೇ ಆಗುತ್ತಾರೆ, ಸಾರೂಪ್ಯ ಮೋಕ್ಷ ಹೊಂದುತ್ತಾರೆ ಎಂದು ಹೇಳಲಾಗಿದೆ.

(ತು–ಪುಟ ೪೯೭)

ಯಂತ್ರಾರಾಧನೆ (ಶ್ಲೋಕ ೧೦೨)



ಯಂತ್ರರಚನೆ: ಬಂಗಾರದ ತಗಡಿನಲ್ಲಿ ಕೆಳಮುಖವಾದ ತ್ರಿಭುಜ ರಚಿಸಿ, ಅದರ ೩ ಕೋಣಗಳಲ್ಲಿ ತ್ರಿಶೂಲಾಕಾರ ರಚಿಸಬೇಕು. ಮಧ್ಯೆ ಹ್ರೀಂ ಬೀಜಾಕ್ಷರ ಬರೆಯಬೇಕು.

ಪೂಜೆ: ಲಲಿತಾ ಸಹಸ್ರನಾಮ ಪಠಿಸಿ ಕುಂಕುಮಾರ್ಚನೆ ಮಾಡಬೇಕು(?)

ನೈವೇದ್ಯ: ತ್ರಿಮಧುರ, ಜೇನುತುಪ್ಪ, ತೊವ್ವೆ. (ಉದ್ದಿನ ವಡೆ)

ಜಪ: ೧೬ ದಿನಗಳು ಈ ಶ್ಲೋಕವನ್ನು ಪ್ರತಿದಿನ ೧೦೦೦ ಬಾರಿ ಪಠಿಸಬೇಕು

ಫಲ: **ಶೂರತ್ವ ಸಿದ್ಧಿ**

(ಭ–ಪುಟ ೧೧೨), (ತು–ಪುಟ ೫೦೨)

ಶ್ಲೋಕ ೧೦೩

ನಿಧೇ ನಿತ್ಯಸ್ಮೇರೇ ನಿರವಧಿಗುಣೇ ನೀತಿನಿಪುಣೇ
ನಿರಾಘಾತಜ್ಞಾನೇ ನಿಯಮಪರ ಚಿತ್ತೈಕನಿಲಯೇ
ನಿಯತ್ಯಾ ನಿರ್ಮುಕ್ತೇ ನಿಖಿಲಾಗಮಾಂತಸ್ತುತಿಪದೇ
ನಿರಾತಂಕೇ ನಿತ್ಯೇ ನಿಗಮಯ ಮಮಾಪಿ ಸ್ತುತಿಮಿಮಾಂ ॥ ೧೦೩ ॥

ಅನ್ವಯಾರ್ಥ

ನಿಧೇ	ಜಗತ್ತಿಗೆ ಆಧಾರಭೂತಳಾದವಳೇ
ನಿತ್ಯಸ್ಮೇರೇ	ಸದಾ ಮಂದಹಾಸದಿಂದ ಕೂಡಿರುವವಳೇ
ನಿರವಧಿಗುಣೇ	ಅಸಂಖ್ಯಾತ ಶಕ್ತಿವಿಲಾಸಗಳನ್ನೇ ಗುಣಗಳನ್ನಾಗಿ ಉಳ್ಳವಳೇ
ನೀತಿ ನಿಪುಣೇ	ಸಾಧಕರ ಸಾಧನೆಗೆ ತಕ್ಕಂತೆ ಫಲನೀಡುವವಳೇ
ನಿರಾಘಾತಜ್ಞಾನೇ	ಅಪಾರವಾದ ಜ್ಞಾನಪ್ರಕಾಶ ಸ್ವರೂಪಳೇ
ನಿಯಮಪರಚಿತ್ತೈಕ ನಿಲಯೇ	ಯಾವ ಕಟ್ಟುಪಾಡಿಗೂ ಸಿಗದವಳೇ ಸಂಪೂರ್ಣ ಸ್ವತಂತ್ರಳೇ
ನಿಯತ್ಯಾ ನಿರ್ಮುಕ್ತೇ	ಜನನ ಮರಣ ರೂಪಸಂಸಾರ ಬಂಧನದಿಂದ ವಿಮುಕ್ತಿ ನೀಡುವವಳೇ
ನಿಖಿಗಮಾಂತಸ್ತುತಪದೇ	ಸಮಸ್ತ ವೇದೋಪನಿಷತ್ತುಗಳಿಂದ ಪ್ರಶಂಸಿಲ್ಪಟ್ಟ ಪಾದಗಳುಳ್ಳವಳೇ (ಪರಮ ನೆಲೆಯಾದವಳೇ)
ನಿರಾತಂಕೇ	ನಿರ್ಭಯಳೇ
ನಿತ್ಯೇ	ಶಾಶ್ವತ ರೂಪಳೇ
ಮಮ	ನನ್ನ
ಇಮಾಂ ಸ್ತುತಿಂ	ಈ ನನ್ನ ಪ್ರಾರ್ಥನೆಯನ್ನೂ
ನಿಗಮಯ	ವೇದ ಸಮಾನವಾಗಿ ಭಾವಿಸು (ವೇದದಂತೆ ಈ ಸ್ತುತಿಯನ್ನು ಪವಿತ್ರಗೊಳಿಸು)

ತಾತ್ಪರ್ಯ

ಹೇ ದೇವಿ, ನೀನು ಜಗತ್ತಿಗೆ ಆಧಾರಪ್ರಾಯಳಾಗಿರುವೆ. ಸದಾ ನಗೆಮುಖದಿಂದ ಕೂಡಿರುವೆ. ಅಸಂಖ್ಯಾತ ಶಕ್ತಿವಿಲಾಸಗಳಿಂದ ಶೋಭಿಸುತ್ತಿರುವೆ. ಸಾಧಕರಿಗೆ ಸಾಧನೆಗೆ ತಕ್ಕಂತೆ ಅನುಗ್ರಹಿಸುತ್ತಿರುವೆ. ಅಪಾರವಾದ ಜ್ಞಾನಪ್ರಕಾಶರೂಪಿಯಾಗಿರುವೆ. ಯಾವ ಕಟ್ಟುಪಾಡಿಗೂ ಒಳಗಾಗದ ಸರ್ವತಂತ್ರ ಸ್ವತಂತ್ರಳಾದ ನೀನು, ಸಮಸ್ತ ವೇದೋಪನಿಷತ್ತುಗಳಿಂದ ಹೊಗಳಿಕೆಗೆ ಪಾತ್ರಳಾಗಿರುವೆ. ನಿರ್ಭಯೆ, ನಿರಾತಂಕೆ ಆಗಿರುವ ನೀನು ನನ್ನ ಈ ಪ್ರಾರ್ಥನೆಯನ್ನು ಆಲಿಸುತ್ತಾ ವೇದದಂತೆ ಈ ಸ್ತೋತ್ರವನ್ನು ಪವಿತ್ರಗೊಳಿಸು.

(ಗ–ಪುಟ ೧೧೩)

ಟಿಪ್ಪಣಿಗಳು

೧. ನಿಧೇ ನಿತ್ಯಸ್ಮೇರೇ ಎಂಬ ಈ ಶ್ಲೋಕವು (೧೦೩) ೯೯ನೇ ಶ್ಲೋಕವಾದ ಸರಸ್ವತ್ಯಾ ಲಕ್ಷ್ಮ್ಯಾ.... ಎಂಬ ಶ್ಲೋಕವಾದ ಮೇಲೆ ಬಂದಿದೆ.

೨. ನಿಧೇ=ಜಗದಾಧಾರಭೂತವಾದ ನಿಧಿ ದೇವಿ ಎಂದು ಮಾರ್ಕಂಡೇಯ ಪುರಾಣದಲ್ಲಿ ಹೇಳಿದೆ "ಆಧಾರಭೂತಾ ಜಗತಸ್ತ್ವಮೇಕಾ" ಎಂದಿದೆ.

(ತು–ಪುಟ ೪೯೮)

ಯಂತ್ರಾರಾಧನೆ (ಶ್ಲೋಕ ೧೦೩)



ಯಂತ್ರರಚನೆ: ಬಂಗಾರದ ತಗಡಿನಲ್ಲಿ ಕೆಳಮುಖವಾಗಿ ತ್ರಿಭುಜ ರಚಿಸಿ ಮುಮ್ಮೂಲೆಗಳಲ್ಲಿ, ತ್ರಿಶೂಲಾಕಾರ ಬರೆಯಬೇಕು. ತ್ರಿಭುಜದ ಮಧ್ಯೆ ಹ್ರೀಂ ಬೀಜಾಕ್ಷರ ರಚಿಸಬೇಕು.

ಪೂಜೆ: ಲಲಿತಾ ಸಹಸ್ರನಾಮದೊಂದಿಗೆ ಕುಂಕುಮಾರ್ಚನೆಯಿಂದ ಪೂಜೆ ಮಾಡಬೇಕು.

ನೈವೇದ್ಯ: ಜೇನುತುಪ್ಪ, ಹಾಲು ಪಾಯಸ, ಎಳನೀರು.

ಜಪ: ೪೮ ದಿನಗಳ ಕಾಲ ಪ್ರತಿದಿನ ಈ ಶ್ಲೋಕವನ್ನು ೧೦೦೦ ಬಾರಿ ಜಪಿಸಿ ಯಂತ್ರವನ್ನು ಧರಿಸಬೇಕು.

ಫಲ: ಸಕಲ ಕಾರ್ಯ ಸಿದ್ಧಿ.

(ಭ–ಪುಟ ೧೧೨), (ತು–ಪುಟ ೫೦೨)

ಅನುಬಂಧ – ೨
ಸೌಂದರ್ಯಲಹರೀ ಶ್ಲೋಕಗಳ ಅಕಾರಾದಿ

ಕ್ರಮ ಸಂಖ್ಯೆ	ಮೊದಲ ಸಾಲು	ಶ್ಲೋಕ ಸಂಖ್ಯೆ
	ಅ	
೧.	ಅಮೂ ತೇ ವಕ್ಷೋಜೌ	೭೩
೨.	ಅರಾಲಂ ತೇ ಪಾಲೀಯುಗಲಂ	೫೮
೩.	ಅರಾಲಾಂ ಕೇಶೇಷು	೯೩
೪.	ಅರಾಲೈಸ್ಸ್ವಾಭಾವ್ಯಾತ್	೪೫
೫.	ಅವಿದ್ಯಾನಾಮಂತಸ್ತಿಮಿರ	೩
೬.	ಅವಿಶ್ರಾಂತಂ ಪತ್ಯುಃ	೬೪
೭.	ಅಸೌ ನಾಸಾವಂಶಃ	೬೧
೮.	ಅಹಸ್ಸೂತೇ ಸವ್ಯಂ	೪೮
	ಕ	
೯.	ಕದಾ ಕಾಲೇ ಮಾತಃ	೯೮
೧೦.	ಕರಾಗ್ರೇಣ ಸ್ಪೃಷ್ಟಂ	೬೭
೧೧.	ಕರೀಂದ್ರಾಣಾಂ ಶುಂಡಾನ್	೮೨
೧೨.	ಕಲಂಕಃ ಕಸ್ತೂರೀ	೯೪
೧೩.	ಕಲತ್ರಂ ವೈಧಾತ್ರಂ ಕತಿಕತಿ	೯೬
೧೪.	ಕವೀನಾಂ ಸಂದರ್ಭಃ	೫೦
೧೫.	ಕವೀಂದ್ರಾಣಾಂ ಚೇತಃ	೧೬
೧೬.	ಕಿರಂತೀಮಂಗೇಭ್ಯಃ	೨೦
೧೭.	ಕಿರೀಟಂ ವೈರಿಂಚಂ	೨೯
೧೮.	ಕುಚೌ ಸದ್ಯಸ್ಸ್ವಿದ್ಯತ್	೮೦
೧೯.	ಕ್ವಣತ್ಕಾಂಚೀದಾಮಾ	೭
೨೦.	ಕ್ಷಿತೌ ಷಟ್‌ಪಂಚಾಶತ್	೧೪

ಭ

ಮ

ಯ

ರ

ಲ

ವ

ಶ

ಸ

ಹ

[*ಈ ಚಿಹ್ನೆಯ ೧೦೧, ೧೦೨, ೧೦೩ ಸಂಖ್ಯೆಯ ಶ್ಲೋಕಗಳು ಅಧಿಕ ಶ್ಲೋಕಗಳಾಗಿವೆ. ಇವು ಕೆಲವು ಪ್ರತಿಗಳಲ್ಲಿ ಮಾತ್ರ ದೊರೆಯುತ್ತವೆ]

ಅನುಬಂಧ – ೩

ಸೌಂದರ್ಯಲಹರೀ ಮತ್ತು ಲಲಿತಾ ಸಹಸ್ರನಾಮಗಳ ಸಮಾನಾರ್ಥಕ ಪದ–ಭಾವಗಳ ಶ್ಲೋಕ–ನಾಮಗಳು

ಶ್ಲೋಕ ಸಂಖ್ಯೆ.–ಸೌಂದರ್ಯಲಹರೀ	ನಾಮಸಂಖ್ಯೆ.–ಲಲಿತಾಸಹಸ್ರನಾಮ
೧. ಶಿವಶ್ಶಕ್ತ್ಯಾಯುಕ್ತೋ	೯೯೯. ಶಿವಶಕ್ತ್ಯೈಕರೂಪಿಣೀ
೧. ಹರಿಹರವಿರಿಂಚಾದಿಭಿಃ	೨೯೭. ಹರಿಬ್ರಹ್ಮೇಂದ್ರ ಸೇವಿತಾ
೧. ಕಥಾನುಕೃತಪುಣ್ಯಃ ಪ್ರಭವತಿ	೫೪೩. ಪುಣ್ಯಲಭ್ಯಾ
೨. ತನೀಯಾಂಸು ಪಾಂಸುಂ	೨೬೪. ಸೃಷ್ಟಿಕರ್ತ್ರೀ
೨. ತವಚರಣ ಪಂಕೇರುಹಭವಂ	೨೬೫. ಬ್ರಹ್ಮರೂಪಾ
೨. ವಹತ್ಯೇನಂ ಶೌರೀ ಕಥಮಪಿ ಸಹಸ್ರೇಣ ಶಿರಸಾಂ	೬೪. ಗೋಪ್ತ್ರೀ ೬೪. ಗೋವಿಂದರೂಪಿಣೀ
೨. ಲೋಕಾನ್ ವಿಕಲಂ ವಿರಚಯತಿ	೯೨೭. ಸ್ತೋತ್ರಪ್ರಿಯಾ
೨. ಲೋಕಾನ್ ವಿಕಲಂ ವಿರಚಯತಿ	೨೬೦. ಸೃಷ್ಟಿಕರ್ತ್ರೀ ೨೬೧. ಬ್ರಹ್ಮರೂಪಾ
೨. ಹರಃ ಸಂಕ್ಷುದ್ಯೈನಂ ಭಜಂತಿ ಭಸಿತೋದ್ಧೂಲನವಿಧಿಂ	೨೬೮. ಸಂಹಾರಿಣೀ ೨೬೯. ರುದ್ರರೂಪಾ
೩. ಅವಿದ್ಯಾನಾಂ ಅಂತಸ್ತಿಮಿರ ಮಿಹಿರದ್ವೀಪ ನಗರೀ	೯೯೩. ಅಜ್ಞಾನಧ್ವಾಂತ ದೀಪಿಕಾ ೭೨೭. ಶಿವಜ್ಞಾನ ಪ್ರದಾಯಿನೀ
೩. ದರಿದ್ರಾಣಾಂ ಚಿಂತಾಮಣಿ ಗುಣನಿಕಾ	೯೮೯. ವಾಂಛಿತಾರ್ಥ ಪ್ರದಾಯಿನೀ
೩. ಜನ್ಮಜಲಧೌ ನಿಮಗ್ನಾನಾಂ ದಂಷ್ಟ್ರಾ ಮುರರಿಪುವರಾಹಸ್ಯ	೮೮೦. ಸಂಸಾರ ಪಂಕನಿರ್ಮಗ್ನ ಸಮುದ್ಧರಣ ಪಂಡಿತಾ
೪. ಅಭಯ ವರದಃ	೧೨೧. ಭಯಾಪಹಃ ೩೩೧. ವರದಾ ೧೮೬. ನಿರಪಾಯಾ ೧೯೮೯. ವಾಂಛಿತಾರ್ಥ ಪ್ರದಾಯಿನೀ

೪. ಭಯಾತ್ ದಾತುಂ ವಾಂಛಾ ಸಮಧಿಕಂ ಫಲಂ ಅಪಿದಾತುಂ ನಿಪುಣಾಂ :	೧೨೧. ಭಯಾಪಹಾ ಸಂಸಾರಭಯ ನಾಶಿನೀ ೩೮೧. ವರದಾ ೧೮೬. ನಿರಪಾಯಾ ೯೮೯. ವಾಂಛಿತಾರ್ಥ ಪ್ರದಾಯಿನೀ
೫. ರತಿನಯನಲೇಹ್ಯೇನವಪುಷಾ	೮೪. ಹರನೇತ್ರಾಗ್ನಿ ಸಂದಿಗ್ಧ ಕಾಮ ಸಂಜೀವೌಷಧಿಃ
೭. ಕ್ವಣತ್ ಕಾಂಚೀದಾಮಾ	೩೮. ರತ್ನಕಿಂಕಿಣಿಕಾರಮ್ಯರಶನಾದಾಮ ಭೂಷಿತಾ
೭. ಧನುರ್ಬಾಣಾನ್ ಪಾಶಂ ಸೃಣಿಮಪಿ ದಧಾನಾ ಕರತಲೈಃ	೧೦. ಮನೋರೂಪೇಕ್ಷುಕೋದಂಡಾ ೧೧. ಪಂಚತನ್ಮಾತ್ರಸಾಯಕಾ ೮. ರಾಗಸ್ವರೂಪ ಪಾಶಾಢ್ಯ ೯. ಕ್ರೋಧಾಕಾರಾಂಕುಶೋಜ್ವಲಾ
೮. ಚಿಂತಾಮಣಿಗೃಹೇ	೮೭೦. ಅಂತರ್ಮುಖ ಸಮಾರಾಧ್ಯಾ ೮೭೧. ಬಹಿರ್ಮುಖ ಸುದುರ್ಲಭಾ ೮೭೨. ಚಿಂತಾಮಣಿ ಗೃಹಾಂತಸ್ಥಾ
೮. ಚಿಂತಾಮಣಿ ಗೃಹೇ	೫೭. ಚಿಂತಾಮಣಿ ಗೃಹಾಂತಸ್ಥಾ
೮. ಭಜಂತಿ ತ್ವಾಂ ಧನ್ಯಾಃ ಕತಿಚನ ಚಿದಾನಂದ ಲಹರೀಂ	೯೦೫. ಬೈಂದವಾಸನಾ
೮. ಚಿದಾನಂದಲಹರೀಂ	೫೨. ಶಿವಕಾಮೇಶ್ವರಾಂಕ ಸ್ಥಾ ೫೫. ಸುಮೇರು ಮಧ್ಯಶೃಂಗಸ್ಥಾ ೯೦೫. ಬೈಂದವಾಸನಾ ೯೯೯. ಶಿವಶಕ್ತ್ಯೈಕರೂಪಿಣೀ
೮. ಸುಧಾ ಸಿಂಧೋರ್ಮಧ್ಯೇ	೬೧. ಸುಧಾಸಾಗರಮಧ್ಯಸ್ಥಾ ೫೮. ಪಂಚಬ್ರಹ್ಮಾಸನಸ್ಥಿತಾ
೮. ನೀಪೋಪವನವತಿ ೮. ಸುರವಿಟಪಿವಾಟೀ ಪರಿವೃತೇ	೬೦. ಕದಂಬವನವಾಸಿನೀ ೩೨೩. ಕದಂಬಕುಸುಮಪ್ರಿಯೆ ೩೩೦. ಕಾದಂಬರೀ ಪ್ರಿಯಾ
೯. ಮಹೀಂ ಮೂಲಾಧಾರೇ	೫೧೪. ಮೂಲಾಧಾರಾಂಬುಜಾರೂಢಾ ೯೯. ಮೂಲಾಧಾರೈಕ ನಿಲಯಾ

೯. ಕಮಪಿ ಮಣಿಪೂರೇ ಹುತವಹಂ	೪೯೫. ಮಣಿಪೂರಾಬ್ಜನಿಲಯಾ ೧೦೧. ಮಣಿಪೂರಾಂತರುದಿತಾ
೯. ಸ್ಥಿತಂ ಸ್ವಾಧಿಷ್ಠಾನ್	೫೦೪. ಸ್ವಾಧಿಷ್ಠಾನಾಂಬುಜಗತಾ
೯. ಹೃದಿ ಮರುತಮಾಕಾಶಮುಪರಿ	೪೭೫. ವಿಶುದ್ಧ ಚಕ್ರನಿಲಯಾ
೯. ಸಹಸ್ರಾರೇ ಪದ್ಮೇ ಸಹ ರಹಸಿ ಪತ್ಯಾ ವಿಹರಸೇ	೫೨೮. ಸಹಸ್ರದಲ ಪದ್ಮಸ್ಥ ಕುಂಡಲಿನೀ ೧೧೦. ಸಹಸ್ರಾರಾಂಬುಜಾರೂಢಾ
೯. ಕುಲಕುಂಡೇ ಸ್ವಪಿಷಿ	೯೯. ಮೂಲಾಧಾರೈಕನಿಲಯಾ
೧೦. ಸುಧಾಧಾರಾ ಸಾರೈ	೧೦೬. ಸುಧಾಸಾರಾಭಿವರ್ಷಿಣೀ ೮೭೯. ಸುಧಾಸೃತಿಃ
೧೭. ಸವಿತ್ರೀಭಿಃ	೬೯೯. ಸಾವಿತ್ರೀ
೧೬. ಕಮಲವನಬಾಲಾತಪರುಚಿಂ	೯೨೨. ತರುಣಾದಿತ್ಯ ಪಾಟಲಾ
೧೭. ವಶಿನ್ಯಾದ್ಯಾಭಿಃ ಸಹ	೮೫. ಶ್ರೀಮದ್ವಾಗ್ಭವಕೂಟೈಕಸ್ವರೂಪ ಪಂಕಜಾ ೮೬. ಕಂಠಾಧಃ ಕಟಿಪರ್ಯಂತ ಮಧ್ಯಕೂಟ ಸ್ವರೂಪಿಣೀ ೮೭. ಶಕ್ತಿಕೂಟೈಕತಾಪನ್ನಕಟ್ಯಧೋಧಾಗ ಧಾರಿಣೀ ೮೮. ಮೂಲಮಂತ್ರಾತ್ಮಿಕಾ ೮೯. ಮೂಲಕೂಟತ್ರಯ ಕಲೇವರಾ
೧೮. ತನುಚ್ಛಾಯಾಭಿಸ್ತೇ ತರುಣ ಶ್ರೀಸರಣಿಭಿಃ	೪೯೯. ರಕ್ತವರ್ಣಾ ೪೯. ಸರ್ವಾರುಣಾ ೯೨. ತರುಣಾದಿತ್ಯ ಪಾಟಲಾಂ
೧೮. ದಿವಂ ಸರ್ವಾಮುರ್ವೀ ಮರುಣಿಮನಿಮಗ್ನಾಂ ಸ್ಮರತಿ ಯಃ	೧೨. ನಿಜಾರುಣ ಪ್ರಭಾಪೂರ ಮಜ್ಜತ್ ಬ್ರಹ್ಮಾಂಡಮಂಡಲಾ
೨೨. ಭವಾನಿ ತ್ವಂ ದಾಸೇ ಮಯಿ ವಿತರ ದೃಷ್ಟಿಂ ಸಕುರಣಾಂ	೯೯೨. ಅವ್ಯಾಜ ಕರುಣಾಮೂರ್ತಿ
೨೨. ಮುಕುಂದ ಬ್ರಹ್ಮೇಂದ್ರ ಸ್ಫುಟ ಮಕುಟನೀರಾಜಿತಪದಾಂ	೨೯೭ ಹರಿಬ್ರಹ್ಮೇಂದ್ರ ಸೇವಿತಾ

೨೨. ಸಕರುಣಾಂ ದೃಷ್ಟಿಂ ವಿತರ	೯೯೨. ಅವ್ಯಾಜ ಕರುಣಾಮೂರ್ತಿ
೨೨. ನಿಜ ಸಾಯುಜ್ಯಪದವೀಂ ದಿಶಸಿ	೧೯೭. ಸಾಂದ್ರಕರುಣಾ ೫೮೧. ದಯಾಮೂರ್ತಿಃ
೨೩. ಯದೇತತ್ತ್ವದ್ರೂಪಂ ಸಕಲಮರುಣಾಭಂ ತ್ರಿನಯನಂ	೯೯೯. ಶಿವಶಕ್ತ್ಯೈಕರೂಪಿಣೀ ೯೯೮. ಶ್ರೀಶಿವಾ
೨೪. ಸರ್ವಂ + ತದಿದಂ ತಿರಯತಿ ಸದಾಪೂರ್ವಃ ಶಿವಃ ಇತ್ಯಾದಿ	೨೭೪. ಪಂಚಕೃತ್ಯ ಪರಾಯಣಾ ೨೬೪. ಸೃಷ್ಟಿಕರ್ತ್ರೀ
೨೫. ಜಗತ್ಸೂತೇ....ಭ್ರೂಲತಿಕಯೋಃ	೨೬೫. ಬ್ರಹ್ಮರೂಪಾ ೨೬೬. ಗೋಪ್ತ್ರೀ ೨೬೭. ಗೋವಿಂದ ರೂಪಿಣೀ ೨೬೮. ಸಂಹಾರಿಣೀ ೨೬೯. ರುದ್ರರೂಪಾ ೨೭೦. ತಿರೋಧಾನ ಕರೀ ೨೭೧. ಈಶ್ವರೀ ೨೭೨. ಸದಾಶಿವಾ ೨೭೩. ಅನುಗ್ರಹ ೨೭೪. ಪಂಚಕೃತ್ಯ ಪರಾಮ್ಯಯಣಾ
೨೭. ಜಪೋಜಲ್ಪಃ	೫೭೭ ಮಾತೃಕಾವರ್ಣ ರೂಪಿಣೀ
೨೮. ತನ್ಮೂಲಂ ತವ ಜನನಿ ತಾಟಂಕ ಮಹಿಮಾ	೨೨. ತಾಟಂಕಯುಗಳೀಭೂತ ತಪನೋಡುಪಮಂಡಲಾ
೨೯. ಪ್ರಣಮ್ರೇಷ್ವೇತೇಷು	೨೯೭. ಹರಿಬ್ರಹ್ಮೇಂದ್ರ ಸೇವಿತಾ
೩೦. ಸ್ವದೇಹೋದ್ಭೂತಾ.... ನೀರಾಜನವಿಧಿಂ	(ಲಲಿತಾ ಸಹಸ್ರನಾಮದ ಧ್ಯಾನಶ್ಲೋಕ) ಅರುಣಾಂ ಕರುಣಾತರಂಗಿತಾಕ್ಷೀಂ
೩೧. ಶಿವಶ್ಶಕ್ತಿಃ ಕಾಮಃ ಕ್ಷಿತಿಃ	೮೫. ಶ್ರೀ ಮದ್ವಾಗ್ಭವ ಕೂಟೈಕಸ್ವರೂಪಮುಖಪಂಕಜಾ
೩೨. ಅಥರವಿಃ ಶೀತಕಿರಣಃ ಸ್ಮರೋ ಹಂಶಶ್ಶಕ್ರಃ	೮೬. ಕಂಠಾಧಃಕಟಿಪರ್ಯಂತ ಮಧ್ಯಕೂಟಸ್ವರೂಪಿಣೀ

೩೨. ತದನು ಚ ಪರಾಮಾರ ಹರಯಃ	೮೭. ಶಕ್ತಿಕೂಟೈಕತಾಪನ್ನ ಕಟ್ಯಧೋಭಾಗಧಾರಿಣೀ
೩೨. ಅವಸಾನೇಷು ಘಟಿತಾಃ ತವ ನಾಮಾವಯತಾಂ...	೮೫. ಶ್ರೀಮದ್ವಾಗ್ಭವಕೂಟೈಕ ಸ್ವರೂಪಮುಖ ಪಂಕಜಾ ೮೬. ಕಂಠಾಧಃ ಕಟಿಪರ್ಯಂತ ಮಧ್ಯಕೂಟ ಸ್ವರೂಪಿಣೀ ೮೭. ಶಕ್ತಿಕೂಟೈಕತಾಪನ್ನ ಕಟ್ಯಧೋಭಾಗ ಧಾರಿಣೀ
೩೬. ತವಾಜ್ಞಾ ಚಕ್ರಸ್ತಂ...	೧೦೩. ಆಜ್ಞಾಚಕ್ರಾಂತರಾಲಸ್ಥಾ ೫೯. ಮಹಾಪದ್ಮಾಟವೀ ಸಂಸ್ಥಾ
೪೦. ಮಣಿಪೂರೈಕಶರಣಂ	ನಾಮ ೪೯೫ರಿಂದ ೫೦೩ರವರೆಗೆ ಮಣಿಪೂರ ಚಕ್ರದ ವಿವರಣೆ ಇದೆ. ೪೯೫. ಮಣಿಪೂರಾಬ್ಜನಿಲಯಾ ೪೯೬. ವದನತ್ರಯಸಂಯುತಾ ೪೯೭. ವಜ್ರಾದಿಕಾಯಾಧೋಪೇತಾ ೪೯೮. ಡಾಮರ್ಯಾದಿಭಿರಾವೃತಾ ೪೯೯. ರಕ್ತವರ್ಣಾ ೫೦೦. ಮಾಂಸನಿಷ್ಠಾ ೫೦೧. ಗುಡಾನ್ನಪ್ರೀತ ಮಾನಸಾ ೫೦೨. ಸಮಸ್ತಭಕ್ತಸುಖದಾ ೫೦೩. ಲಾಕಿನ್ಯಾಂಬಾಸ್ವರೂಪಿಣೀ
೪೨. ಗತೈರ್ಮಾಣಿಕ್ಯತ್ವಂ ಗಗನ ಮಣಿಭಿಃ ಸಾಂದ್ರಘಟಿತಂ ಕಿರೀಟಂ	೧೪. ಕುರುವಿಂದ ಮಣಿಶ್ರೇಣೀ ಕನತ್ಕೋಟೀರಮಂಡಿತಾ ೬. ಉದ್ಯದ್ಭಾನುಸಹಸ್ರಾಭಾ
೪೩. ತುಲಿತದಲಿತೇಂದೀವರವನಂ ಘನಸ್ನಿಗ್ಧಶ್ಲಕ್ಷ್ಣಂ ತವ ಚಿಕುರ ನಿಕುರುಂಬಂ	೧೩. ಚಂಪಕಾಶೋಕಪುನ್ನಾಗ ಸೌಗಂಧಿಕಲಸತ್ಕಚಾ

೪೫. ದರಸ್ಮೇರೇ ದಶನರುಚಿ ಕಿಂಜಲ್ಕರುಚಿರೇ	೨೫. ಶುದ್ಧವಿದ್ಯಾಂ ಕುರಾಕಾರ ದ್ವಿಜ ಪಂಕ್ತಿದ್ವಯೋಜ್ವಲಾ ೨೬. ಕರ್ಪೂರವೀಟಿಕಾಮೋದ ಸಮಾಕರ್ಷದ್ದಿಗಂತರಾ
೪೬. ಲಲಾಟಂ ಲಾವಣ್ಯದ್ಯುತಿ ವಿಮಲಮಾಭಾತಿ ತವ ಯತ್	೧೫. ಅಷ್ಟಮಿಾಚಂದ್ರವಿಭ್ರಾಜದಲಿಕ ಸ್ಥಲಶೋಭಿತಾ
೪೭. ಭ್ರುವೌ ಭುಗ್ನೇ ಕಿಂಚಿದ್ಭುವನ ಭಯ ಭಂಗವ್ಯಸನಿನಿ	೧೭. ವದನಸ್ಮರಮಾಂಗಲ್ಯ ಗೃಹತೋರಣ ಚಿಲ್ಲಿಕಾ
೪೮. ಅಹಸ್ಸೂತೇ ಸವ್ಯಂ.... ಅಂತರ ಚರೀಂ	೧೮. ವಕ್ತ್ರಲಕ್ಷ್ಮೀ ಪರೀವಾಹ ಚಲನ್ ಮೀನಾಭಲೋಚನಾ (೪೮ನೇ ಶ್ಲೋಕದಿಂದ ೫೭ನೇ ಶ್ಲೋಕದವರೆಗೆ ನೇತ್ರಗಳಿಗೆ ಸಂಬಂಧಿಸಿದ ವರ್ಣನೆಗಳಿವೆ.)
೫೩. ಭಿಭ್ರತ್ತಮ ಇತಿ ಗುಣಾನಾಂ ತ್ರಯಮಿವ	೨೮೧. ಉನ್ಮೇಷ ನಿಮಿಷೋತ್ಪನ್ನ ವಿಪನ್ನ ಭುವನಾವಲಿಃ
೫೫. ನಿಮೇಷೋನ್ಮೇಷಾಭ್ಯಾಂ ಪ್ರಳಯ ಮುದಯಂಯಾತಿ ಜಗತೀ	೨೮೧. ಉನ್ಮೇಷನಿಮಿಷೋತ್ಪನ್ನ ವಿಪನ್ನ ಭುವನಾವಲಿಃ
೫೬. ತವಾಪರ್ಣೇ ಕರ್ಣೇ ಜಪನಯನಪೈಶುನ್ಯಚಕಿತಾಃ	೭೫೪. ಅಪರ್ಣಾ....
೫೯. ಸ್ಫುರದ್ಗಂಡಾಭೋಗಪ್ರತಿಫಲಿತ ತಾಟಂಕಯುಗಲಂ	೨೨. ತಾಟಂಕಯುಗಲೀಭೂತ ತಪನೋಡುಪಮಂಡಲಾ
೬೧. ಅಸೌ ನಾಸಾವಂಶಸ್ತುಹಿನಗಿರಿ ವಂಶಧ್ವಜಪಟಿ	೧೯. ನವಚಂಪಕಪುಷ್ಪಾಭನಾಸಾದಂಡ ವಿರಾಜಿತಾ ೨೦. ತಾರಾಕಾಂತಿತಿರಸ್ಕಾರಿ ನಾಸಾಭರಣಭಾಸುರಾ
೬೨. ನ ಬಿಂಬಂ ತದ್ಬಿಂಬ ಪ್ರತಿಫಲನ ರಾಗಾದರುಣಿತಂ	೨೪. ನವ ವಿದ್ರುಮ ಬಿಂಬಶ್ರೀನ್ಯಕ್ಕಾರಿರದನಚ್ಛದಾ

೬೫. ಶಶಿವಿಶದ ಕರ್ಪೂರ ಶಕಲಾಃ ವಿಲೀಯಂತೇ ಮಾತಸ್ತವ ವದನತಾಂಬೂಲಕಬಲಾಃ	೨೬. ಕರ್ಪೂರ ವೀಟಿಕಾಮೋದ ಸಮಾಕರ್ಷದ್ದಿಗಂತರಾ ೫೫೯. ತಾಂಬೂಲಪೂರಿತಮುಖೀ
೬೬. ನಿಜಾಂ ವೀಣಾ ವಾಣೀ ನಿಚುಲಯತಿ ಚೋಲೇನ ನಿಭೃತಮ್	೨೭. ನಿಜಸಲ್ಲಾಪ ಮಾಧುರ್ಯ ವಿನಿರ್ಭರ್ತ್ಸಿತ ಕಚ್ಛಪೀ
೬೭. ಕಥಂಕಾರಂ ಬ್ರೂಮಸ್ತವ ಚುಬುಕಮೌಪಮ್ಯರಹಿತಂ	೨೯. ಅನಾಕಲಿತ ಸಾದೃಶ್ಯ ಚುಬುಕ ಶ್ರೀವಿರಾಜಿತಾ
೬೯. ವಿವಾಹವ್ಯಾನದ್ಧ ಪ್ರಗುಣಗುಣ ಸಂಖ್ಯಾ ಪ್ರತಿಭುವಃ	೩೦. ಕಾಮೇಶಬದ್ಧ ಮಾಂಗಲ್ಯಸೂತ್ರ ಶೋಭಿತ ಕಂದರಾ
೭೦. ಮೃಣಾಲೀಮೃದ್ವೀನಾಂ ತವ ಭುಜಲತಾನಾಂ ಚತಸೃಣಾಂ	೩೧. ಕನಕಾಂಗದ ಕೇಯೂರ ಕಮನೀಯ ಭುಜಾನ್ವಿತಾ ೫೭೯. ಮೃಣಾಲಮೃದುದರ್ಫಲ್ಲತಾ
೭೧. ನಖಾನಾಮುದ್ಯೋತ್ಯೈರ್ನವ ನಲಿನರಾಗಂ	೪೦. ಕರಾಂಗುಲಿನಖೋತ್ಪನ್ನ ನಾರಾಯಣ ದಶಾಕೃತಿಃ
	೪೪. ನಖದೀಧಿತಿ ಸಂಛನ್ನಮಜ್ಜನ ತಮೋಗುಣಾ
೭೧. ಯದಿಕ್ರೀಡಲ್ಲಕ್ಷ್ಮೀ ಚರಣತಲ ಲಾಕ್ಷಾರಸಚಣಮ್	೪೫. ಪದದ್ವಯಪ್ರಭಾಜಾಲ ಪರಾಕೃತ ಸರೋರುಹಾ
೭೪. ಸಮಾರಬ್ಧಾಂ ಮುಕ್ತಾಮಣಿಭಿ ರಮಲಾಂ ಹಾರಲತಿಕಾಮ್	೩೨. ರತ್ನಗ್ರೈವೇಯ ಚಿಂತಾಕ ಲೋಲಮುಕ್ತಾಫಲಾನ್ವಿತಾ
೭೬. ಜನಸ್ತಾಂ ಜಾನೀತೇ ತವ ಜನನಿ ರೋಮಾವಲಿರಿತಿ	೩೪. ನಾಭ್ಯಾಲವಾಲ ರೋಮಾಲಿ ಲತಾಫಲ ಕುಚದ್ವಯಿಾಂ
೭೮. ಸ್ತನಮುಕುಲ ರೋಮಾವಲೀ ಲತಾಕಲಾವಾಲಂ	೩೪. ನಾಭ್ಯಾಲವಾಲ ರೋಮಾಲಿ ಲತಾಫಲ ಕುಚದ್ವಯೀ
೭೮. ರತೇರ್ಲೀಲಾಗಾರಂ ಕಿಮಪಿ ತವನಾಭಿರ್ಗಿರಿಸುತೇ	೩೫. ಲಕ್ಷ್ಯರೋಮಲತಾಧಾರತಾ ಸಮುನ್ನೇಯಮಧ್ಯಮಾ

೮೦. ತ್ರಿಧಾನದ್ಧಂ ದೇವಿ ತ್ರಿವಲಿ ಲವಲೀವಲ್ಲೀಭಿರಿವ	೩೬. ಸ್ತನಭಾರದಲನ್ಮಧ್ಯ ಪಟ್ಟಬಂಧ ವಲಿತ್ರಯಾ
೮೨. ಕರೀಂದ್ರಾಣಾಂ ಶುಂಡಾನ್ ಕನಕದಲೀಕಾಂಡಪಟಲೀಮ್ ಉಭಾಭ್ಯಾಮೂರುಭ್ಯಾ ಮುಭಯಮಪಿ ನಿರ್ಜಿತ್ಯ ಭವತಿ	೩೯. ಕಾಮೇಶಜ್ಞಾತಸೌಭಾಗ್ಯ ಮಾರ್ದವೋರುದ್ವಯಾನ್ವಿತಾ
೮೩. ನಿಷಂಗೌ ಜಂಘೇ ತೇ ವಿಷಮವಿಶಿಖೋ ಬಾಢಮಕೃತ	೪೧. ಇಂದ್ರಗೋಪ ಪರಿಕ್ಷಿಪ್ತ ಸ್ಮರತೂಣಾಭಜಂಘಿಕಾ
೮೪. ಯಯೋರ್ಲಾಕ್ಷಾಲಕ್ಷ್ಮೀರರುಣ ಹರಿಚೂಡಾಮಣಿ ರುಚಿಃ	೮೫. ಶ್ರುತಿ ಸೀಮಂತ ಸಿಂದೂರೀಕೃತ ಪಾದಾಬ್ಜಧೂಲಿಕಾ
೮೫. ತುಲಾಕೋಟಿಕ್ವಾಣೈಃ ಕಿಲಿಕಿಲಿತಮೀಶಾನರಿಪುಣಾ	೪೬. ಶಿಂಜಾನಮಣಿಮಂಜೀರಮಂಡಿತ ಶ್ರೀಪದಾಂಬುಜಾ
೮೭. ಸರೋಜಂ ತ್ವತ್ಪಾದೌ ಜನನಿ ಜಯತಶ್ಚಿತ್ರಮಿಹ ಕಿಮ್	೪೫. ಪದದ್ವಯ ಪ್ರಭಾಜಾಲ ಪರಾಕೃತ ಸರೋರುಹಾ
೮೮. ಕಥಂ ನೀತಂ ಸದ್ಭಿಃ ಕಠಿಣ ಕಠಿಣಕಮಠೀ ಕರ್ಪರತುಲಮ್	೪೩. ಕೂರ್ಮಪೃಷ್ಠ ಜಯಿಷ್ಣು ಪ್ರಪದಾನ್ವಿತಾ
೮೯. ನಖೈರ್ನಾಕಸ್ತ್ರೀಣಾಂ ಕರಕಮಲಸಂಕೋಚಶಶಿಭಿಃ	೪೪. ನಖದೀಧಿತಿಸಂಛನ್ನನಮಜ್ಜನ ತಮೋಗುಣಾ
೯೦. ನಿಮಜ್ಜನ್ಮಜ್ಜೀವಃ ಕರಣಚರಣ ಷಟ್ಚರಣತಾಮ್	೮೭. ಶಕ್ತಿಕೂಟೈಕತಾಪನ್ನ ಕಟ್ಯಭಾಗಧಾರಿಣೀ
೯೧. ಸ್ಖಲಂತಸ್ತೇ ಖೇಲಂ ಭವನ ಕಲಹಂಸಾ ನ ಜಹತಿ	೪೭ ಮರಾಲೀಮಂದಗಮನಾ
೯೧. ಅತಸ್ತೇಷಾಂ ಶಿಕ್ಷಾಂ ಸುಭಗ ಮಣಿಮಂಜೀರರಣಿತ	೪೬. ಶಿಂಜಾನಮಣಿಮಂಜೀರ ಮಂಡಿತ ಶ್ರೀಪದಾಂಬುಜಾ
೯೨. ಗತಾಸ್ತೇ ಮಂಚತ್ವಂ ದ್ರುಹಿಣಿ ಹರಿರುದ್ರೇಶ್ವರಭೃತಃ	೫೮. ಪಂಚಬ್ರಹ್ಮಾಸನಸ್ಥಿತಾ ೨೭೪. ಪಂಚಕೃತ್ಯಪರಾಯಣಾ ೨೪೯. ಪಂಚಪ್ರೇತಾಸನಾಸೀನಾ

೯೩. ಜಗತ್ತ್ರಾತುಂ ಶಂಭೋರ್ಜಯತಿ ಕರುಣಾ ಕಾಚಿದರುಣಾ	೩೭. ಅರುಣಾರುಣ ಕೌಸುಂಭ ವಸ್ತ್ರಭಾಸ್ವತ್ಕಟೀತಟೀ ೪೯. ಸರ್ವಾರುಣಾ
೯೪. ಕಲಂಕಃ ಕಸ್ತೂರೀ ರಜನಿಕರ ಬಿಂಬಂ ಜಲಮಯಂ	೧೬. ಮುಖಚಂದ್ರಕಲಂಕಾಭ ಮೃಗನಾಭಿವಿಶೇಷಾ
೯೫. ಸಪರ್ಯಾಮರ್ಯಾದಾ ತರಲ ಕರಣಾ ನಾಮಸುಲಭಾ	೮೭೦. ಅಂತರ್ಮುಖ ಸಮಾರಾಧ್ಯಾ ೮೭೧. ಬಹಿರ್ಮುಖ ಸುದುರ್ಲಭಾ
೯೭. ನಿರಾಮಾಹುರ್ದೇವೀಂ ದ್ರುಹಿಣಗೃಹಿಣೀಮಾಗಮವಿದೋ	೭೦೪. ಸರಸ್ವತೀ ೬೭೫. ಬ್ರಾಹ್ಮೀ ೮೨೧. ಬ್ರಹ್ಮಾಣಿ ೬೪೦. ವಾಗಧೀಶ್ವರೀ ೫೮೪. ಮಹಾವಿದ್ಯಾ ೫೪೯. ವಿದ್ಯಾ
೯೭. ಮಹಾಮಾಯಾ ವಿಶ್ವಂ	೭೧೬. ಮಾಯಾ ೨೧೫. ಮಹಾಮಾಯಾ
೯೭. ಭ್ರಮಯಸಿ ಪರಬ್ರಹ್ಮಮಹಿಷಿ	೭೦೩. ಸರ್ವಮೋಹಿನೀ ೮೮೯. ವಿಶ್ವಭ್ರಮಣಕಾರಿಣೀ ೭೦೧. ದೇಶಕಾಲಾ ಪರಿಚ್ಛಿನ್ನಾ
೯೭. ಹರಸಹಚರೀಮದ್ರಿತನಯಾಮ್	೫೩. ಶಿವಾ ೯೯೨. ಭವಾನೀ ೯೨೨. ಶಾಂಭವೀ ೨೪೬. ಪಾರ್ವತೀ ೧೨೪. ಶರ್ವಾಣೀ
೯೭. ಹರೇಃ ಪತ್ನೀಂ ಪದ್ಮಾಂ	೨೧೦. ಮಹಾಲಕ್ಷ್ಮೀ ೨೯೮. ನಾರಾಯಣೀ ೮೩೮. ಮುಕುಂದಾ ೮೯೨. ವೈಷ್ಣವೀ

ಅನುಬಂಧ – ೪

ಸೌಂದರ್ಯಲಹರೀ (ಕನ್ನಡ ಮತ್ತು ಇತರ ಭಾಷೆಗಳಲ್ಲಿ)

(ಪಠ್ಯದ ಪ್ರಾರಂಭಕ್ಕೆ ಮುಂಚೆ ಕೊಟ್ಟಿರುವ ಗ್ರಂಥ ಸಂಕೇತ ಸೂಚಿಯಲ್ಲಿ ವಿವರಗಳಿವೆ)

ಅನುಬಂಧ – ೫

ಸಹಾಯಕ ಗ್ರಂಥಸೂಚಿ

(ಸೌಂದರ್ಯಲಹರಿಯ ಟಿಪ್ಪಣಿಗಳಿಗೆ ನೆರವಾದ ಕೆಲವು ಮುಖ್ಯಗ್ರಂಥಗಳನ್ನು ಮಾತ್ರ ಇಲ್ಲಿ ಕೊಟ್ಟಿದೆ)

೧. **ಛಂದೋಮಿತ್ರ** – ಅ.ರಾ. ಮಿತ್ರ, ಕಾಮಧೇನು ಪ್ರಕಾಶನ, ಬೆಂಗಳೂರು, ೧೯೯೫.

೨. **ಕನ್ನಡ ಕೈಪಿಡಿ** – ಛಂದಸ್ಸು : ಟಿ. ಶ್ರೀನಿವಾಸ ರಾಘವಾಚಾರ್ಯರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ೧೯೯೬.

೩. **ಛಂದೋಂಬುಧಿ** – ನಾಗವರ್ಮ, ಸಂ. ಟಿ.ವಿ. ವೆಂಕಟಾಚಲಶಾಸ್ತ್ರೀ, ೨೦೦೭, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. **ಕನ್ನಡ ಛಂದಸ್ಸಿನ ಚರಿತ್ರೆ** (ಸಂಪುಟ ೧), ಸಂ. ಸಿ.ಪಿ.ಕೆ, ಪ್ರ: ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ., ೧೯೮೦.

೫. **ಶ್ರೀ ಶಂಕರ ಚರಿತ್ರಾಮೃತಂ**, ಲೇ: ವಿದ್ವಾನ್ ಎನ್. ರಂಗನಾಥಶರ್ಮಾ, ಪ್ರ: ಅದ್ವೈತ ವಿದ್ಯಾ ಪ್ರತಿಷ್ಠಾನ, ಹೆಬ್ಬೂರು, ೨೦೦೦.

೬. **ಜೀವನ ಚರಿತ್ರೆ** – ಅನುವಾದ ಸಂಪುಟ (ಭಾಗ–೨), ಎಂವಿಸೀ ಸಮಗ್ರ ಸಾಹಿತ್ಯ, ಸಂ. ಜಿ. ಅಶ್ವತ್ಥನಾರಾಯಣ. ಪ್ರ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೩.

೭. **ಶ್ರೀವಿದ್ಯೆಯ ಸಾರ** – ಮೂಲ : ಸೂರ್ಯನಾರಾಯಣಮೂರ್ತಿ, ಅನುವಾದ : ಡಾ. ಎ.ವಿ. ನರಸಿಂಹಮೂರ್ತಿ, ಪ್ರ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು ಮತ್ತು ಭಾರತೀಯ ವಿದ್ಯಾಭವನ, ಮೈಸೂರು, ೨೦೧೦.

೮. **ಗೀತಾರ್ಥ ಚಂದ್ರಿಕೆ** – ಹೊಸಕೆರೆ ಚಿದಂಬರಯ್ಯ, ಪ್ರಕಾಶಕರು : ಎಸ್.ಎಸ್.ಎನ್. ಬುಕ್ ಡಿಪೋ, ಬೆಂಗಳೂರು, ೧೯೬೪.

೯. **ಪುರಾಣ ಭಾರತ ಕೋಶ** – ಪಂಡಿತ ಐರೋಡಿ ಯಜ್ಞನಾರಾಯಣ ಉಡುಪ, ಪ್ರ: ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೪.

೧೦. **ಶ್ರೀವಿದ್ಯಾ ಉಪಾಸನೆ** – ಎಸ್ಕೆ ರಾಮಚಂದ್ರರಾವ್, ಅನು: ಲಕ್ಷ್ಮೀಕಾಂತ ಹೆಗಡೆ, ಪ್ರ: ಆರೋನಾದ, ಬೆಂಗಳೂರು, ೨೦೧೦.

೧೧. **ಯಂತ್ರಗಳು** – ಎಸ್ಕೆ ರಾಮಚಂದ್ರರಾವ್, ಪ್ರ: ಆರೋನಾದ, ಬೆಂಗಳೂರು, ೨೦೦೩.

೧೨. **ಶ್ರೀ ಚಕ್ರ** (ಇಂಗ್ಲಿಷ್), ಎಸ್. ಶಂಕರನಾರಾಯಣನ್, ಸಮತಾ ಬುಕ್ಸ್, ಚೆನ್ನೈ, ೨೦೦೨.

೧೩. **ಏನ್ಷಿಯಂಟ್ ಸೀಕ್ರೇಟ್ಸ್ ಆಫ್ ಕುಂಡಲಿನಿ** (ಇಂಗ್ಲಿಷ್) ಗೋಪೀಕೃಷ್ಣ, ದಿ ಕುಂಡಲಿನಿ ರಿಸರ್ಚ್ ಫೌಂಡೇಷನ್ ಲಿ., ಯು.ಎಸ್.ಎ. ೧೯೯೬.

೧೪. **ತಂತ್ರದರ್ಶನ** – ಜಿ.ಬಿ. ಹರೀಶ್, ಪ್ರ: ಅಂಕಿತ ಪುಸ್ತಕ, ಬೆಂಗಳೂರು, ೨೦೧೩.

೧೫. **ಸೂಜಿಮೊನೆ** – ಜಿ.ಬಿ. ಹರೀಶ, ಪ್ರ: ಸಿವಿಜಿ ಇಂಡಿಯಾ, ಬೆಂಗಳೂರು, ೨೦೧೨ (ಇದರಲ್ಲಿ ತಂತ್ರಶಾಸ್ತ್ರದ ಬಗ್ಗೆ ಕನ್ನಡ ಲೇಖನಗಳಿವೆ).

೧೬. **ಶ್ರೀ ಲಲಿತಾ ಮಹಿಮಾ** – ಎ.ಎನ್. ಗಂಗಾಧರ ಶಾಸ್ತ್ರೀ, ಪ್ರ: ಶ್ರೀ ವಿದ್ಯಾ ಗಣಪತಿ ಪ್ರಕಾಶನ, ಬೆಂಗಳೂರು, ೧೯೯೪.

೧೭. **ಶ್ರೀ ಲಲಿತಾ ಸ್ತುತಿ** (ಕಾವ್ಯ) – ಗಾಯತ್ರೀ ದೇವಿ ಮಹಿಷಿ, ಪ್ರ: ಶ್ರೀ ಸ್ವಯಂ ಪ್ರಕಾಶ ಟ್ರಸ್ಟ್, ಹರಿಹರಪುರ, ೨೦೦೭.

೧೮. **ತಂತ್ರ–ಯಂತ್ರ–ಮಂತ್ರ** (ಲೇಖನಮಾಲೆ ತರಂಗ ಪತ್ರಿಕೆ, ೨೦೧೪), ಲೇ: ಜಯರಾಮ ಕಾರಂತ, ಪ್ರ: ತರಂಗ ವಾರಪತ್ರಿಕೆ, ೨೦೧೪.

೧೯. **ಶ್ರೀ ಲಲಿತೋಪಾಖ್ಯಾನ** (ಸಂ–ಕ), ಅನು: ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿ, ಪ್ರ: ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ, ಮೈಸೂರು, ೧೯೪೩.

೨೦. **ವಿದ್ವಾನ್ ಶೇಷಾಚಲಶರ್ಮ** (ಜೀವನ ಚರಿತ್ರೆ) ಮತ್ತು ಗರ್ಭೋಪನಿಷತ್, ಪ್ರ: ಉಲುಚುಕಮ್ಮೆ ಬ್ರಾಹ್ಮಣ ಮಹಾಸಭಾ, ೨೦೧೦, ಲೇ: ಎನ್.ವಿ. ಅನಂತರಾಮಯ್ಯ ಮತ್ತು ಎ. ರಾಮಚಂದ್ರಮೂರ್ತಿ.

ಅನುಬಂಧ – ೬

ಟೀಕಾಕಾರರ ಮತ್ತು ಪದ್ಯಾನುವಾದಕರ ಪರಿಚಯ

ಬಿ.ಎಸ್. ಕಪನೀಪತಯ್ಯ (ಟೀಕಾಕಾರರು)

ಬಿ.ಎಸ್. ಕಪನೀತಯ್ಯ ಅವರು ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಅರಮನೆಯ ಕಚೇರಿ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸಿದ ಸಂಸ್ಕೃತ ಮತ್ತು ಕನ್ನಡ ವಿದ್ವಾಂಸರು. ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರ ಪ್ರೀತಿವಿಶ್ವಾಸಗಳಿಗೆ ಪಾತ್ರರಾದವರು. ಅನೇಕ ಸಂಘಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ ಶ್ರೀ ರಾಮತತ್ತ್ವ ಪರಾಯಣ, ಗುರುಭಕ್ತಪ್ರಿಯ ಮೊದಲಾದ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಆದಿಶಂಕರರ ಸ್ತೋತ್ರಸಾಹಿತ್ಯಕ್ಕೆ ಕನ್ನಡದಲ್ಲಿ ಟೀಕೆ ಬರೆದ ಅವರು ಸೌಂದರ್ಯಲಹರೀ ಸ್ತೋತ್ರರತ್ನಕ್ಕೆ ಅಮೋಘಟೀಕೆ ಬರೆದಿದ್ದಾರೆ. ಇದುವರೆಗೆ ಅಪ್ರಕಟಿತವಾದ ಈ ಸ್ತೋತ್ರಟೀಕೆ ಈಗ ಪ್ರಕಟವಾಗುತ್ತಿದೆ. ಇದಲ್ಲದೆ ಶ್ರೀರಾಮಕರ್ಣಾಮೃತ, ಜ್ಯೋತಿಷ್ಯ–ಶ್ರಾದ್ಧ–ಮಂತ್ರ–ಅನುಷ್ಠಾನಕ್ರಮ ಮೊದಲಾದ ಹಲವಾರು ಉದ್ಗ್ರಂಥಗಳನ್ನು ರಚಿಸಿದ್ದಾರೆ.

ಎಂ.ವೀ. ಸೀತಾರಾಮಯ್ಯ (ಪದ್ಯಾನುವಾದಕರು)

ಎಂ.ವಿ. ಸೀತಾರಾಮಯ್ಯ ಅವರು ಕನ್ನಡದ ಪ್ರತಿಭಾವಂತ ನವೋದಯ ಕವಿಗಳಲ್ಲಿ ಒಬ್ಬರು. ಸಾಹಿತಿಗಳು, ವಿದ್ವಾಂಸರು ಆದ ಇವರು ಶ್ರೀ ವಿಜಯಕೃತ ಕವಿರಾಜಮಾರ್ಗ, ಉದಯಾದಿತ್ಯಾಲಂಕಾರ ಮೊದಲಾದ ಗ್ರಂಥಗಳನ್ನು ವಿದ್ವತ್ಪೂರ್ಣವಾಗಿ ಸಂಪಾದಿಸಿದ್ದಾರೆ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನವೆಂಬ ಸಂಶೋಧನ ಸಂಸ್ಥೆಯನ್ನು ಸ್ಥಾಪಿಸಿ, ಲೋಚನ ಎಂಬ ವಿದ್ವತ್‌ಪತ್ರಿಕೆ ನಡೆಸಿ, ಅಪೂರ್ವ ಹಸ್ತಪ್ರತಿಭಂಡಾರ ಸ್ಥಾಪಿಸಿ ಸಂಶೋಧನ ಕ್ಷೇತ್ರಕ್ಕೆ ಮೌಲಿಕ ಕೊಡುಗೆಗಳನ್ನು ನೀಡಿದ್ದಾರೆ. ನೂರಾರು ಗ್ರಂಥಗಳನ್ನು ರಚಿಸಿ ವಿಮರ್ಶೆ, ಕಾವ್ಯ, ಕಥೆ ಕಾದಂಬರಿ, ಗ್ರಂಥಸಂಪಾದನೆ ಇತ್ಯಾದಿ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಇವರ ಅಪ್ರಕಟಿತ ಸೌಂದರ್ಯಲಹರಿಯ ಕನ್ನಡ ಪದ್ಯಾನುವಾದ ಇದೀಗ ಪ್ರಕಟವಾಗುತ್ತಿದೆ.

ಅನುಬಂಧ – ೭

ಸಂಪಾದಕರ ಪರಿಚಯ

ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಹೆಚ್. ಗುಂಡಪ್ಪ ಮತ್ತು ಜಾನಿಕಮ್ಮ ಅವರ ಪುತ್ರರಾಗಿ ಬೆಂಗಳೂರಿನಲ್ಲಿ ೧೨ ಮೇ ೧೯೩೪ರಲ್ಲಿ ಜನಿಸಿದರು.

ಎಸ್.ಜೆ. ಪಾಲಿಟೆಕ್ನಿಕ್‌ನಲ್ಲಿ ಮೆಕ್ಯಾನಿಕಲ್ ಇಂಜಿನಿಯರಿಂಗ್ ಡಿಪ್ಲೊಮಾ, ಸಮಾಜಶಾಸ್ತ್ರ ಎಂಎ, ಕನ್ನಡ ಎಂಎ, ಶಾಸನಶಾಸ್ತ್ರ ಡಿಪ್ಲೊಮಾ, ಭಾಷಾಶಾಸ್ತ್ರ ಡಿಪ್ಲೊಮಾ ಗಳಿಸಿರುವ ಇವರು ವಿವಿಧ ಸರ್ಕಾರಿ ಪದವಿ ಕಾಲೇಜುಗಳಲ್ಲಿ ೩೦ ವರುಷ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ.

ಐ.ಎ.ಎಸ್. ಕೆ.ಎ.ಎಸ್. ವಿದ್ಯಾರ್ಥಿಗಳಿಗೆ ಕನ್ನಡ ಪಾಠ ಹೇಳಿದ್ದಾರೆ. ಸರ್ಕಾರಿ ಅಧಿಕಾರಿಗಳಿಗೆ ಆಡಳಿತ ಕನ್ನಡ ಶಿಬಿರಗಳನ್ನು ನಡೆಸಿದ್ದಾರೆ. ಹಂಪಿ ವಿಶ್ವವಿದ್ಯಾಲಯದ ೬ ಮಂದಿ ಎಂ.ಫಿಲ್ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸಿದ್ದಾರೆ. 'ಅಮೆರಿಕೆಯ ಮೇರಿಲ್ಯಾಂಡಿನಲ್ಲಿ ಕನ್ನಡಿಗರ ಮಕ್ಕಳಿಗೆ ಕನ್ನಡ ಕಲಿಸಿದ್ದಾರೆ. ಬಾಲ್ಟಿಮೋರ್ ನಲ್ಲಿ ನಡೆದ ಅಕ್ಕ ಸಮ್ಮೇಳನದಲ್ಲಿ ಸಂಪಾದಕರಾಗಿ, ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸಿದ್ದಾರೆ. ಉಪನ್ಯಾಸಗಳನ್ನು ನೀಡಿದ್ದಾರೆ.

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ದೇವುಡು ಪ್ರತಿಷ್ಠಾನ, ಕರ್ನಾಟಕ ಗಮಕ ಕಲಾಸಂಸ್ಥೆ, ಕರ್ನಾಟಕ ಗಾನಕಲಾ ಪರಿಷತ್ತು ಮೊದಲಾದ ಸಂಸ್ಥೆಗಳಲ್ಲಿ ಸ್ಥಾಪಕ ಸದಸ್ಯರಾಗಿ ಸಕ್ರಿಯವಾಗಿ ಸೇವೆ ಸಲ್ಲಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿರುವ ಇವರು ಪರಿಷತ್ತಿನ ೧೦೦ ವರ್ಷಗಳ ಇತಿಹಾಸವನ್ನು (೧೦೦೦ ಪುಟಗಳು) ರಚಿಸಿದ್ದಾರೆ. ಸಮಗ್ರ ದಾಸಸಾಹಿತ್ಯದ ೫೦ ಸಂಪುಟಗಳ ಸಹ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದಾರೆ. ಅನಕೃ ಅವರ ಕನ್ನಡ ಚಳುವಳಿಯಲ್ಲಿ ಪ್ರಾರಂಭದ ಕಾರ್ಯಕರ್ತರಲ್ಲಿ ಒಬ್ಬರಾಗಿ ದುಡಿದಿದ್ದಾರೆ.

ಕರ್ನಾಟಕದಾದ್ಯಂತ ಸಾವಿರಾರು ಉಪನ್ಯಾಸಗಳನ್ನು ನೀಡಿರುವ ಇವರು ಸಂಪಾದಕರಾಗಿ ಗ್ರಂಥಕರ್ತರಾಗಿ ೩೦ಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ್ದಾರೆ.

ಮಹಲಿಂಗ ರಂಗನ ಅನುಭವಾಮೃತ ಗ್ರಂಥದ ಸಂಪಾದನೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ೨೦೧೨ರ ಗ್ರಂಥಪ್ರಶಸ್ತಿ ಬಂದಿದೆ. ೨೦ಕ್ಕೂ ಹೆಚ್ಚು ಗ್ರಂಥಗಳಿಗೆ ಗೌರವ‌ಃಸಂಪಾದಕರಾಗಿದ್ದಾರೆ.

ರತ್ನಕರಂಡಕ ಶ್ರಾವಕಾಚಾರ, ದಶಲಕ್ಷಣ ಪರ್ವ (ಜೈನ), ವಿಜಯದಾಸರ ಕೀರ್ತನೆಗಳು, ಉಗಾಭೋಗಗಳು, ಪ್ರಸನ್ನಶ್ರೀನಿವಾಸದಾಸರ ಸಮಗ್ರ ಕೃತಿಗಳು, ಕೆಲ್ಲಂಗೆರೆ ತಿಮ್ಮಪ್ಪದಾಸರು, ಹೊಸಕೆರೆ ಚಿದಂಬರಯ್ಯನವರ ಭಕ್ತಿ ಗೀತಾವಳಿ (ಕೀರ್ತನ ಸಾಹಿತ್ಯ), ದೇವರ ದಾಸಿಮಯ್ಯನ ವಚನಗಳು, ಕುಮಾರವ್ಯಾಸನ ಭೀಷ್ಮಪರ್ವ ಟೀಕೆ, ವಿದ್ಯಾರ್ಥಿಗಳಿಗಾಗಿ ಮಂಕುತಿಮ್ಮನ ಕಗ್ಗ ಇತ್ಯಾದಿ ಗ್ರಂಥಗಳನ್ನು ರಚಿಸಿದ್ದಾರೆ ಮತ್ತು ಸಂಪಾದಿಸಿದ್ದಾರೆ.

ಇದೀಗ ಕನ್ನಡದಲ್ಲಿ ಬಿ.ಎಸ್. ಕಪನೀಪತಯ್ಯನವರ ಸೌಂದರ್ಯ ಲಹರೀ ಟೀಕೆ ಮತ್ತು ಎಂವಿ ಸೀತಾರಾಮಯ್ಯನವರ ಸೌಂದರ್ಯ ಲಹರೀ ಪದ್ಯಾನುವಾದ (ಅಪ್ರಕಟಿತ ಕೃತಿ) ವನ್ನು ಸೌಂದರ್ಯಲಹರೀ ಸ್ತೋತ್ರ ದೀಪಿಕೆ ಎಂಬ ಹೆಸರಿನಲ್ಲಿ ವಿದ್ವತ್ಪೂರ್ಣವಾಗಿ ಸಂಪಾದಿಸಿದ್ದಾರೆ. ಈ ಗ್ರಂಥಕ್ಕೆ ೨೦೧೬ನೇ ಸಾಲಿನ ಕನ್ನಡ ಸಾಹಿತ್ಯ ಪರಿಷತ್ತಿನ ಜಯಲಕ್ಷ್ಮಮ್ಮ-ಬಿ.ಎಸ್. ಸಣ್ಣಯ್ಯ ದತ್ತಿನಿಧಿ ಪ್ರಶಸ್ತಿ ದೊರಕಿದೆ.

ವಿಳಾಸ:

ಪ್ರೊ. ಜಿ. ಅಶ್ವತ್ಥನಾರಾಯಣ

ನಂ. ೯೫, ೩೪ನೇ 'ಬಿ' ಕ್ರಾಸ್,
೧೬ನೇ ಮೈನ್, ೪ನೇ 'ಟಿ' ಬ್ಲಾಕ್
ಜಯನಗರ, ಬೆಂಗಳೂರು-೫೬೦೦೪೧
ಫೋನ್ ನಂ.: ೦೮೦-೨೬೬೩೭೭೮೩

ಅನುಬಂಧ – ೮

ಸೌಂದರ್ಯಲಹರೀ ಸ್ತೋತ್ರದೀಪಿಕೆ ಗ್ರಂಥವನ್ನು ಕುರಿತು
ಕೆಲವು ಅಭಿಪ್ರಾಯಗಳು

'ಸೌಂದರ್ಯ ಲಹರಿ'ಯನ್ನು ಕುರಿತಂತೆ ಇಷ್ಟು ವಿಶಾಲವಾದ, ಇಷ್ಟು ಸಮಗ್ರವಾದ, ಇಷ್ಟು ಸುಂದರವಾದ ಗ್ರಂಥ ಕನ್ನಡದಲ್ಲಿ ಬಂದಿರುವುದು ಇದೇ ಮೊದಲು ಎಂದು ಧೈರ್ಯವಾಗಿ ಹೇಳಬಹುದು.

–ಕೆ. ಅನಂತರಾಮು
(ಖ್ಯಾತ ವಿದ್ವಾಂಸರು)

* * *

ಸರ್ವಾದರಣೀಯವಾದ ಸ್ತೋತ್ರಗ್ರಂಥದ ವ್ಯವಸ್ಥಿತ ಸಂಗ್ರಾಹ್ಯ ಆವೃತ್ತಿಯನ್ನು ಹೊರತಂದಿರುವ ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಅಭಿನಂದನಾರ್ಹರು.

–ಪ್ರೊ. ಎಸ್. ರಾಮಚಂದ್ರಶಾಸ್ತ್ರಿ
(ಸಂಸ್ಕೃತ ವಿದ್ವಾಂಸರು)

* * *

ಸೌಂದರ್ಯಲಹರಿಯ ಮಹತ್ವವನ್ನು ಹಾಗೂ ಜನಪ್ರಿಯತೆಯನ್ನು ವಿವರಿಸುವ ದೀರ್ಘ ಪ್ರಸ್ತಾವನೆ ನಿಮ್ಮ ವ್ಯಾಪಕ ಓದು, ವಿದ್ವತ್ತು ಹಾಗೂ ದೀರ್ಘಕಾಲಿಕ ಶ್ರಮ ಇವುಗಳಿಗೆ ಕನ್ನಡಿ ಹಿಡಿಯುತ್ತದೆ.

–ಡಾ. ಸಿ.ಎನ್. ರಾಮಚಂದ್ರನ್
(ಖ್ಯಾತ ವಿಮರ್ಶಕರು)

* * *

ಕೈಗೊಂಡ ಯಾವುದೇ ಕಾರ್ಯವನ್ನು ಅಚ್ಚುಕಟ್ಟಾಗಿ, ವ್ಯವಸ್ಥಿತವಾಗಿ ನಿರ್ವಹಿಸುವುದಕ್ಕೆ ಹೆಸರಾಗಿರುವ ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಸೌಂದರ್ಯಲಹರೀ ಕೃತಿಯ ಅಧ್ಯಯನಕ್ಕೆ ಅವಶ್ಯವಿರುವ ಎಲ್ಲ ಪರಿಶ್ರಮಗಳನ್ನು ಸೇರ್ಪಡೆಗೊಳಿಸಿ ಈ ಆವೃತ್ತಿಯನ್ನು ಸಮಗ್ರಗೊಳಿಸಿದ್ದಾರೆ.

–ಎಸ್.ಆರ್. ರಾಮಸ್ವಾಮಿ
(ಗೌ. ಸಂಪಾದಕರು ಉತ್ಥಾನ ಪತ್ರಿಕೆ, ಬೆಂಗಳೂರು)

* * *

ಸೌಂದರ್ಯಲಹರಿ ಪುಸ್ತಕವನ್ನು ಬರೆಯಲಿಕ್ಕೆ ಮತ್ತು ಮಾಹಿತಿ ಸಂಗ್ರಹಿಸಲಿಕ್ಕೆ ತುಂಬಾ ಪರಿಶ್ರಮ ಮಾಡಿದ್ದೀರಿ. ಇದು ಒಂದು ರೀತಿಯ ತಪಸ್ಸೇ ಸರಿ!

–ಕುಮಾರ ನಿಜಗುಣಸ್ವಾಮಿಗಳು

(ಸಾಹಿತಿಗಳು ಮತ್ತು ಛಂದಶ್ಶಾಸ್ತ್ರಜ್ಞರು)

* * *

ಆ ದೇವಿಯು ಈ ಕ್ಷಣಕ್ಕೆ ಕಳುಹಿಸಿ ವರದಾನ ಮಾಡಿದಂತೆ ತಮ್ಮ ಈ ಕೃತಿಯು ನನ್ನ ಕೈ ಸೇರಿರುವುದಕ್ಕೆ ನಿಮಗೆ ಅಭಿನಂದನೆ ಸಲ್ಲಿಸುವುದಕ್ಕಿಂತಲೂ ಮಿಗಿಲಾಗಿ ಆ ತಾಯಿಗೆ ಅಭಿನಂದನೆ.

–ಸಾಯಿಬಿಂದು

(ಧಾರ್ಮಿಕ ಲೇಖಕರು)

* * *

ನೀವು ಸಂಪಾದಿಸಿರುವ ಸೌಂದರ್ಯಲಹರೀ ಸ್ತೋತ್ರದೀಪಿಕೆ ಒಂದು ಅತ್ಯದ್ಭುತ ಗ್ರಂಥ. ನೀವು ನಿಮ್ಮ ಗ್ರಂಥದಲ್ಲಿ ಸೌಂದರ್ಯಲಹರೀ ಸ್ತೋತ್ರಕ್ಕೆ ಸಂಬಂಧಿಸಿದಂತೆ ಹಲವಾರು ವಿಷಯಗಳ ಸಂಗ್ರಹಣೆಯಿಂದ ಪ್ರಬುದ್ಧ ಕೃತಿಯಾಗುವಂತೆ ಸಂಪಾದಿಸಿದ್ದೀರಿ.

–ವೈ.ಎನ್. ಗುಂಡೂರಾವ್

(ಜನಪ್ರಿಯ ಸಾಹಿತಿ)

* * *

ಈ ಕೃತಿ ಸರ್ವಜನಮಾನ್ಯ ಆಸಕ್ತರಿಗೆ ಕೈದೀಪ. ಒಮ್ಮೆ ಓದಿದವರ ಮನಸ್ಸನ್ನು ಸೆಳೆದು ಅವರ ನೆಚ್ಚಿನ ಸಂಗ್ರಹಯೋಗ್ಯ ಕೃತಿಯಾಗುವುದರಲ್ಲಿ ಸಂದೇಹವಿಲ್ಲ.


–ಎಲ್.ಆರ್. ಪ್ರೇಮಾ

(ಕೋಲಾರ ಪತ್ರಿಕೆ, ವಿಮರ್ಶಕಿ)


ಶ್ರೀ ಶಂಕರಾಚಾರ್ಯರ ಸೌಂದರ್ಯಲಹರಿ ಅದ್ಭುತ ಸ್ತೋತ್ರಗ್ರಂಥ. ಅಂಥ ಶ್ಲೋಕರೂಪದ ಸ್ತೋತ್ರ ಗ್ರಂಥವನ್ನು ವಿವಿಧ ವ್ಯಾಖ್ಯಾನಗಳಿಂದ ಆಯ್ದು ಟಿಪ್ಪಣಿಗಳಿಂದ ನಿಮ್ಮ ಕಾರ್ಯವೂ ಒಂದು ಅದ್ಭುತವೆನಿಸಿದೆ. ನಿಮಗೆ ನನ್ನ ಹೃತ್ಪೂರ್ವಕ ವಂದನೆಗಳು.

–ಕೆ. ಚಂದ್ರಮೌಳಿ


(ಖ್ಯಾತ ಸಾಹಿತಿಗಳು)



ಎಂ. ವಿ ಸೀತಾರಾಮಯ್ಯ (ಪದ್ಯಾನುವಾದಕರು) ಅವರು ಕನ್ನಡದ ಪ್ರತಿಭಾವಂತ ನವೋದಯ ಕವಿಗಳಲ್ಲಿ ಒಬ್ಬರು, ಸಾಹಿತಿಗಳು, ವಿದ್ವಾಂಸರು ಆದ ಇವರು ಶ್ರೀ ವಿಜಯಕೃತ ಕವಿರಾಜಮಾರ್ಗ, ಉದಯಾದಿತ್ಯಾಲಂಕಾರ ಮೊದಲಾದ ಗ್ರಂಥಗಳನ್ನು ವಿದ್ವತ್ಪೂರ್ಣವಾಗಿ ಸಂಪಾದಿಸಿದ್ದಾರೆ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನವೆಂಬ ಸಂಶೋಧನ ಸಂಸ್ಥೆಯನ್ನು ಸ್ಥಾಪಿಸಿ, ಲೋಚನ ಎಂಬ ವಿದ್ವತ್‌ಪತ್ರಿಕೆ ನಡೆಸಿ, ಅಪೂರ್ವ ಹಸ್ತಪ್ರತಿಭಂಡಾರ ಸ್ಥಾಪಿಸಿ ಸಂಶೋಧನ ಕ್ಷೇತ್ರಕ್ಕೆ ಮೌಲಿಕ ಕೊಡುಗೆಗಳನ್ನು ನೀಡಿದ್ದಾರೆ. ನೂರಾರು ಗ್ರಂಥಗಳನ್ನು ರಚಿಸಿ ವಿಮರ್ಶೆ, ಕಾವ್ಯ, ಕಥೆ ಕಾದಂಬರಿ, ಗ್ರಂಥಸಂಪಾದನೆ ಇತ್ಯಾದಿ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಇವರ ಅಪ್ರಕಟಿತ ಸೌಂದರ್ಯಲಹರಿಯ ಕನ್ನಡ ಪದ್ಯಾನುವಾದ ಇದೀಗ ಪ್ರಕಟವಾಗುತ್ತಿದೆ.



ಬಿ. ಎಸ್. ಕಪನೀಪತಯ್ಯ (ಟೀಕಾಕಾರರು) ಅವರು ನಾಲ್ವಡಿಕೃಷ್ಣರಾಜ ಒಡೆಯರ ಕಾಲದಲ್ಲಿ ಅರಮನೆಯ ಕಚೇರಿ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸಿದ ಸಂಸ್ಕೃತ ಮತ್ತು ಕನ್ನಡ ವಿದ್ವಾಂಸರು. ಶ್ರೀ ಜಯಚಾಮರಾಜೇಂದ್ರ ಒಡೆಯರ ಅವರ ಪ್ರೀತಿವಿಶ್ವಾಸಗಳಿಗೆ ಪಾತ್ರರಾದವರು. ಅನೇಕ ಸಂಘಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ ಶ್ರೀ ರಾಮತತ್ತ್ವಪರಾಯಣ, ಗುರುಭಕ್ತಪ್ರಿಯ ಮೊದಲಾದ ಪ್ರಶಸ್ತಿಗಳನ್ನು ಪಡೆದು ಆದಿಶಂಕರ ಸ್ತೋತ್ರಸಾಹಿತ್ಯಕ್ಕೆ ಕನ್ನಡದಲ್ಲಿ ಟೀಕೆ ಬರೆದ ಅವರು ಸೌಂದರ್ಯಲಹರೀ ಸ್ತೋತ್ರರತ್ನಕ್ಕೆ ಅಮೋಘಟೀಕೆ ಬರೆದಿದ್ದಾರೆ. ಇದುವರೆಗೆ ಅಪ್ರಕಟಿತವಾದ ಈ ಸ್ತೋತ್ರಟೀಕೆ ಈಗ ಪ್ರಕಟವಾಗುತ್ತಿದೆ.ಇದಲ್ಲದೆ ಶ್ರೀರಾಮ ಕರ್ಣಾಟಕಮೃತ, ಜ್ಯೋತಿಷ್ಯ-ಶ್ರಾದ್ಧ-ಮಂತ್ರ-ಅನುಷ್ಠಾನಕ್ರಮ ಮೊದಲಾದ ಹಲವಾರು ಉದ್ಗ್ರಂಥಗಳನ್ನು ರಚಿಸಿದ್ದಾರೆ.



ಪ್ರೊ॥ ಜಿ. ಅಶ್ವತ್ಥನಾರಾಯಣ (ಗ್ರಂಥ ಸಂಪಾದಕರು) ಇವರು ಈಗಾಗಲೇ ವಿಜಯದಾಸರ ಕೀರ್ತನೆಗಳು ಮತ್ತು ಉಗಾಭೋಗಗಳು ಮತ್ತು ಪ್ರಸನ್ನ ಶ್ರೀನಿವಾಸರ ಸಮಗ್ರಕೃತಿಗಳು, ಮಹಲಿಂಗರಂಗನ ಅನುಭವಾಮೃತ (ಟೀಕೆ) ಎಂ.ವಿ.ಸೀ. ಅವರ ಅನುವಾದಿತ ಸಮಗ್ರ ಜೀವನ ಚರಿತ್ರೆಗಳು ಮತ್ತು ಕಾದಂಬರಿಗಳು ಇತ್ಯಾದಿ ಗ್ರಂಥಗಳನ್ನು ಸಂಪಾದಿಸಿದ್ದಾರೆ. ಇದೀಗ ಸೌಂದರ್ಯಲಹರೀ ಸ್ತೋತ್ರದ ಬಗ್ಗೆ ಕಪನೀಪತಯ್ಯನವರು ಬರೆದ ಟೀಕೆ ಮತ್ತು ಎಂ.ವಿ.ಸೀ. ಅವರು ರಚಿಸಿದ ಪದ್ಯಾನುವಾದ ಅಪ್ರಕಟಿತ ಹಸ್ತಪ್ರತಿಗಳನ್ನು ಪರಿಷ್ಕರಿಸಿ ಸಂಪಾದಿಸಿದ್ದಾರೆ. ಕಪನೀಪತಯ್ಯನವರ ಸೌಂದರ್ಯಲಹರೀ ಟೀಕೆಯನ್ನು ಮೂಲ- ಪಾಠಾಂತರ - ಪದವಿಭಾಗ - ಅನ್ವಯಾರ್ಥ - ತಾತ್ಪರ್ಯ - ಎಂ.ವಿ.ಸೀ. ಅವರ ಪದ್ಯಾನುವಾದ - ಟಿಪ್ಪಣೀ - ಯಂತ್ರಾರಾಧನೆಗಳೊಡನೆ ಪಾಂಡಿತ್ಯಪೂರ್ಣವಾಗಿ ಸಂಪಾದಿಸಿದ್ದಾರೆ. ಸೌಂದರ್ಯಲಹರೀ ಸ್ತೋತ್ರ ಕನ್ನಡದಲ್ಲಿ ಇಷ್ಟೊಂದು ವಿವರಣೆಗಳೊಡನೆ ಪ್ರಕಟವಾಗುತ್ತಿರುವುದು ಇದೇ ಮೊದಲು.

ಹೇಮಂತ ಸಾಹಿತ್ಯ
ರಾಜಾಜಿನಗರ, ಬೆಂಗಳೂರು-10